
ಕರ್ನಾಟಕದ ಹಸ್ತಪ್ರತಿ ಚಿತ್ರಕಲೆ

ಒಂದು ಅಧ್ಯಯನ

ಪಿಹೆಚ್.ಡಿ. ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ
ಸಾದರಪಡಿಸಿದ ಮಹಾಪ್ರಬಂಧ

ಸಂಶೋಧಕರು
ಎಚ್.ಎನ್.ಚಿತ್ರಗಾರ

ಮಾರ್ಗದರ್ಶಕರು
ಡಾ. ಎಸ್.ಸಿ.ಪಾಟೀಲ



ಲಲಿತಕಲಾ ನಿಕಾಯ
ಶಿಲ್ಪ ಮತ್ತು ವರ್ಣಚಿತ್ರಕಲಾ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ಬನಶಂಕರಿ, ಬಾದಾಮಿ



ಕರ್ನಾಟಕದ ಹಸ್ತಪ್ರತಿ ಚಿತ್ರಕಲೆ

ಒಂದು ಅಧ್ಯಯನ

ಕನ್ನಡ ವಿಶ್ವವಿದ್ಯಾಲಯಕ್ಕೆ ಪಿಹೆಚ್.ಡಿ. ಪದವಿಗಾಗಿ
ಸಾದರಪಡಿಸಿದ ಮಹಾಪ್ರಬಂಧ

ಸಂಶೋಧಕರು
ಎಚ್.ಎನ್. ಚಿತ್ರಗಾರ

ಮಾರ್ಗದರ್ಶಕರು
ಡಾ. ಎಸ್.ಸಿ.ಪಾಟೀಲ
ಪ್ರವಾಚಕರು ಮತ್ತು ಮುಖ್ಯಸ್ಥರು

ಲಲಿತಕಲಾ ನಿಕಾಯ
ಶಿಲ್ಪ ಮತ್ತು ವರ್ಣ ಚಿತ್ರಕಲಾ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ಬನಶಂಕರಿ - ಬಾದಾಮಿ
೨೦೦೫

ಪ್ರಮಾಣ ಪತ್ರ

ಕರ್ನಾಟಕದ ಹಸ್ತಪ್ರತಿ ಚಿತ್ರಕಲೆ - ಒಂದು ಅಧ್ಯಯನ ಎಂಬ ಶೀರ್ಷಿಕೆಯ ಮಹಾಪ್ರಬಂಧವನ್ನು ಡಾ. ಎಸ್.ಸಿ.ಪಾಟೀಲ ಇವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿ, ಕನ್ನಡ ವಿಶ್ವವಿದ್ಯಾಲಯದ ಲಲಿತಕಲಾ ನಿಕಾಯದ ಶಿಲ್ಪ ಮತ್ತು ವರ್ಣಚಿತ್ರಕಲಾ ವಿಭಾಗಕ್ಕೆ ಪಿಹೆಚ್.ಡಿ. ಪದವಿಗಾಗಿ ಈ ಮಹಾಪ್ರಬಂಧವನ್ನು ಸಲ್ಲಿಸುತ್ತಿದ್ದೆ.

ಪ್ರಸ್ತುತ ಮಹಾಪ್ರಬಂಧದ ಯಾವುದೇ ಭಾಗವನ್ನು ಯಾವುದೇ ಪದವಿ ಅಥವಾ ಇತರ ಉದ್ದೇಶಗಳಿಗೆ ಬಳಸಿಕೊಂಡಿಲ್ಲವೆಂದು ಪ್ರಮಾಣೀಕರಿಸುತ್ತೇನೆ.

(ಎಚ್.ಎನ್. ಚಿತ್ರಗಾರ)
ಶಿಲ್ಪ ಮತ್ತು ವರ್ಣಚಿತ್ರಕಲಾ ವಿಭಾಗ,
ಕನ್ನಡ ವಿಶ್ವವಿದ್ಯಾಲಯ, ಹಂಪಿ
ಬನಶಂಕರಿ, ಬಾದಾಮಿ

ದಿನಾಂಕ: ೦೭ ಫೆಬ್ರುವರಿ ೨೦೦೫
ಸ್ಥಳ : ಬನಶಂಕರಿ-ಬಾದಾಮಿ

ಪ್ರಮಾಣ ಪತ್ರ

ಎಚ್.ಎನ್.ಚಿತ್ರಗಾರ ಇವರು ಬರೆದು ಸಾದರಪಡಿಸಿದ **ಕರ್ನಾಟಕದ ಹಸ್ತಪ್ರತಿ ಚಿತ್ರಕಲೆ - ಒಂದು ಅಧ್ಯಯನ** ಎಂಬ ಶೀರ್ಷಿಕೆಯ ಮಹಾಪ್ರಬಂಧವು ಮೂಲ ಸಂಶೋಧನೆ ಕೃತಿಯಾಗಿತ್ತು. ಅವರು ನನ್ನ ಮಾರ್ಗದರ್ಶನದಲ್ಲಿ ಕನ್ನಡ ವಿಶ್ವವಿದ್ಯಾಲಯದ ಲಲಿತಕಲಾ ನಿಕಾಯದ ಶಿಲ್ಪ ಮತ್ತು ವರ್ಣಚಿತ್ರಕಲಾ ವಿಭಾಗಕ್ಕೆ ಪಿಹೆಚ್.ಡಿ. ಪದವಿಗಾಗಿ ಈ ಮಹಾಪ್ರಬಂಧವನ್ನು ಸಿದ್ದಪಡಿಸಿದ್ದಾರೆ.

ಪ್ರಸ್ತುತ ಮಹಾಪ್ರಬಂಧ ಇಡಿಯಾಗಿ, ಇಲ್ಲವೆ ಬಿಡಿಯಾಗಿ ಈ ಮೊದಲು ಎಲ್ಲಿಯೂ ಪ್ರಕಟವಾಗಿಲ್ಲವೆಂದು ಈ ಮೂಲಕ ಪ್ರಮಾಣಕರಿಸುತ್ತೇನೆ.

(ಡಾ. ಎಸ್.ಸಿ.ಪಾಟೀಲ)
ಶಿಲ್ಪ ಮತ್ತು ವರ್ಣಚಿತ್ರಕಲಾ ವಿಭಾಗ,
ಕನ್ನಡ ವಿಶ್ವವಿದ್ಯಾಲಯ, ಹಂಪಿ
ಬನಶಂಕರಿ, ಬಾದಾಮಿ

ದಿನಾಂಕ: ೦೭ ಫೆಬ್ರುವರಿ ೨೦೦೫
ಸ್ಥಳ : ಬನಶಂಕರಿ-ಬಾದಾಮಿ

ಕರ್ನಾಟಕದ ಹಸ್ತಪ್ರತಿಚಿತ್ರಕಲೆ

ಒಂದು ಅಧ್ಯಯನ

ಪರಿವಿಡಿ

*****



ಅಧ್ಯಾಯ : ಒಂದು

ಅಧ್ಯಯನದ ಉದ್ದೇಶ, ಸ್ವರೂಪ ಮತ್ತು ವೈಧಾನಿಕತೆ

ಕರ್ನಾಟಕ ಹಸ್ತಪ್ರತಿ ಚಿತ್ರಕಲೆ-ಒಂದು ಅಧ್ಯಯನ

೧

ಬಿಂದು ಮಧ್ಯಗತೋ ನಾದಃ ನಾದ ಮಧ್ಯಗತಾ ಕಲಾ ।
ಕಲಾ ಮಧ್ಯಗತಂ ಶೂನ್ಯಂ, ಶೂನ್ಯ ಮಧ್ಯಗತಃ ಶಿವಾಃ ॥
ಪರಾತ್ಪರಂ ಪರಂ ನಾಸ್ತಿ ಪರಮಿಚ್ಛಂತಿ ಕೂಡಲ ಚೆನ್ನ ಸಂಗಯ್ಯ[೧]

ಕಲೆ ಮತ್ತು ಸಾಹಿತ್ಯಗಳು ಮಾನವನ ಬದುಕಿನ ಸಾಧನೆಯ ಎರಡು ಉನ್ನತ ಶಿಖರಗಳು. ಕಲೆಯು ಜೀವ ವಿಕಾಸದಲ್ಲಿ ಮಾನವನೊಂದಿಗೆ ಇದ್ದು, ಅವನೊಂದಿಗೇ ಬೆಳೆದುಬಂದ ಪ್ರಕೃತಿ ಮೂಲವಾದುದಾದರೆ. ಕಾಲಘಟ್ಟದ ಅಂತರದಲ್ಲಿ ಬರುವ ಸಾಹಿತ್ಯವು ವಿಕಸಿತ ಮಾನವನ ಬುದ್ಧಿ ಜನ್ಯವಾದುದಾಗಿದೆ. ಕಲೆ ಮತ್ತು ಸಾಹಿತ್ಯಗಳು ಮೂಲದಲ್ಲಿ ವಿಭಿನ್ನ ಕ್ಷೇತ್ರಗಳಾಗಿ ಕಂಡರೂ ಆಂತರ್ಯದಲ್ಲಿ ಅವು ಅಭಿನ್ನವಾಗಿ ಭಾವಾಭಿವ್ಯಕ್ತಿಯ ಮಾಧ್ಯಮದ ನೆಲೆಗಳಾಗಿವೆ.

ಇತಿಹಾಸದಾಚೆಯ ಆದಿಮಾನವನ ಬದುಕು, ಹೋರಾಟ, ಉಳಿಯುವಿಕೆಯ ಸಂಕಲ್ಪಗಳ ಅಭಿವ್ಯಕ್ತಿಗೊಂದು ಮಾಧ್ಯಮವಾಗಿ ಬೆಳೆದು ಬಂದದ್ದು ಚಿತ್ರಕಲೆಯಾದರೆ, ಇತಿಹಾಸದೊಳಗಡೆಯ ಕಾಲಘಟ್ಟದಲ್ಲಿ ದೇಶಿಯ ಬದುಕಿನಲ್ಲಿ ಟಂಕಿಸಿದ ಪದಗಳ ಗಡಿಯಲ್ಲಿ ಬೆಳೆದಿರುವುದು ಸಾಹಿತ್ಯವಾಗುತ್ತದೆ. ಈ ಕಾಲಘಟ್ಟಗಳ ಅಂತರವನ್ನು ಮೀರಿ ಒಂದೆಡೆಯಲ್ಲಿ ಸಂಗಮಿಸಿರುವ ಚಿತ್ರಕಲೆ-ಸಾಹಿತ್ಯದ ಜೊತೆ ಜೊತೆಯಲ್ಲಿ ಸಹಜವಾಗಿ ಬೆಳೆದುಕೊಂಡು ಬಂದಿದೆ. ನಮ್ಮ ಪ್ರಾಚೀನ ಹಸ್ತಪ್ರತಿಗಳು ಇದಕ್ಕೆ ನಿದರ್ಶನವಾಗಿ ನಮ್ಮೆದುರಿಗೆ ಇಂದು ಅಲ್ಲಲ್ಲಿ ಕಂಡು ಬರುತ್ತವೆ. ಹೀಗೆ ಹಸ್ತಪ್ರತಿಗಳಲ್ಲಿ ಚಿತ್ರ ಮತ್ತು ಸಾಹಿತ್ಯಗಳು ಒಂದೆಡೆಗೆ ಇರುವ ಹಸ್ತಪ್ರತಿಗಳನ್ನು ನಾವು ''ಹಸ್ತಪ್ರತಿ ಚಿತ್ರಕಲೆ'' ಎಂದು ಕರೆಯುತ್ತೇವೆ.

ಇಂದಿನ ಆಧುನಿಕ ಮಾನವನ ನಾಗರಿಕ ಮತ್ತು ಸಾಂಸ್ಕೃತಿಕ ಜೀವನದಲ್ಲೂ ಕಲೆ ಮತ್ತು ಸಾಹಿತ್ಯಗಳು ಎರಡಿಲ್ಲದಂತೆ, ಒಂದರೊಳಗೆ ಮತ್ತೊಂದು ಬೆಳೆದು ಹೆಣೆದುಕೊಂಡಿರುವಂತೆ ಒಂದನ್ನು ಮತ್ತೊಂದು ಅಭಿವ್ಯಕ್ತಿಗಾಗಿ ಆಶ್ರಯಿಸಿಕೊಂಡಿವೆ. ಧ್ವನ್ಯ ಮತ್ತು ಲಿಪಿ ಮಾಧ್ಯಮಗಳ ಮುಖಾಂತರ, ಕಲ್ಪಿತ ಪದಗಳ ಮಿತಿಯಲ್ಲಿ ಸಾಹಿತ್ಯವು ಆಯಾ ದೇಶಿಯ ನೆಲೆಗಳಲ್ಲಿ ತನ್ನ ಆಶಯಗಳನ್ನು, ಭಾವಗಳನ್ನು ಬಿತ್ತರಿಸುತ್ತಿದ್ದರೆ, ಚಿತ್ರಕಲೆಯು ದೇಶಿಯ ಮತ್ತು ಅನ್ಯದೇಶಿಯ ಸೀಮಿತ ಶಬ್ದಕೋಶಗಳ ಗಡಿಯನ್ನು, ಇತಿಹಾಸದ ಕಾಲಮಾನವನ್ನೂ ದಾಟಿಕೊಂಡು ತನ್ನ ಆಶಯಗಳನ್ನು

೧. ಡಾ: ಬಿ.ವಿ. ಮಲ್ಲಾಪೂರ (ಸಂ.) ಚೆನ್ನಬಸವಣ್ಣನವರ ವಚನ ಸಂಪುಟ 3.ವಚನ ಸಂಖ್ಯೆ 759, ಪುಟ 232

ಸಮುದಾಯಕ್ಕೆ ಬಿತ್ತರಿಸಬಲ್ಲದು.

ಜಗತ್ತಿನ ಯಾವುದೇ ಒಂದು ಸಾಹಿತ್ಯದ ಕೃತಿಯೊಂದನ್ನು ಆಯಾ ದೇಶಿಯ ಭಾಷಿಕ ಪದಕೋಶಗಳ ಮುಖಾಂತರ ಅಧ್ಯಯನ ಮಾಡಬಹುದು, ಆದರೆ ಅದರಂತೆ ಪಾರಿಭಾಷಿಕ ಶಬ್ದಕೋಶಗಳ ಮಿತಿಯಲ್ಲಿ ನಾವು ಆ ದೇಶಿಯ ಕಲಾಕೃತಿಗಳನ್ನಾಗಲಿ ಅಥವಾ ಕಲಾಕೃತಿಗಳೊಳಗಿನ ರಸಾನೂಭೂತಿಯನ್ನಾಗಲಿ, ಆಂತರಿಕ ತುಡಿತವನ್ನಾಗಲಿ ಪಡೆಯಲಾರೆವು.

ಈ ರೀತಿಯ ಚಿತ್ರಕಲೆಯ ಅಭಿವ್ಯಕ್ತಿಗೆ ಇರುವ ಹಲವು ಮಿತಿಗಳು ಸಾಹಿತ್ಯಿಕ ಅಭಿವ್ಯಕ್ತಿಗೂ ಇವೆ. ಹತ್ತು ಪುಟಗಳ ಸಾಹಿತ್ಯಿಕ ವಿವರವನ್ನು ಒಂದು ಚಿತ್ರವು ವಿವರಿಸುವಂತೆ ಎರಡು ಸಾಲುಗಳ ಸಾಹಿತ್ಯಿಕ ಬೆಡಗನ್ನು ಒಂದು ಚಿತ್ರವು ವಿವರಿಸಲಾರದೆ ಉಳಿಯಲೂ ಬಲ್ಲದು. ಆದುದರಿಂದ ಮಾನವನ ಕಲಾತ್ಮಕ ಮತ್ತು ಸಾಹಿತ್ಯಿಕ ಸಂವಹನದ ಬೆಳವಣಿಗೆಯಲ್ಲಿ ಕಲೆ ಮತ್ತು ಸಾಹಿತ್ಯಗಳು ಪರಸ್ಪರ ಕೂಡುಕೊಳ್ಳುವಿಕೆಯಿಂದ, ಕೊಡುಕೊಳ್ಳುವಿಕೆಯ ವಿನಿಮಯಗಳು ಬೆಳೆದಂತೆ ಕಲೆ ಮತ್ತು ಸಾಹಿತ್ಯಗಳಿಗಿರುವ ಮಿತಿಗಳು ಕೊನೆಗೊಳ್ಳುತ್ತಿವೆ. ಮತ್ತು ಅವೆರಡರ ಅಂತರ್‌ಶಿಸ್ತೀಯ ಅನಾವರಣವೊಂದು ನೆಲೆಗೊಳ್ಳುತ್ತದೆ.

ಇಂತಹ ಕಲೆ ಮತ್ತು ಸಾಹಿತ್ಯದ ಸೇತು ಬಂಧನದ ಕಾರ್ಯವನ್ನು ನಮ್ಮ ಪ್ರಾಚೀನ ಕವಿಗಳು, ಲಿಪಿಕಾರರು, ಹಸ್ತಪ್ರತಿಗಳ ಚಿತ್ರಕಲಾವಿದರು ಕರ್ನಾಟಕದ ಹಸ್ತಪ್ರತಿಗಳಲ್ಲಿ ಕೂಡಿ ಕೆಲಸಮಾಡಿ ಸಹಬಾಳ್ವೆಯ ಬದುಕನ್ನು ಸಾಧಿಸಿ ತೋರಿಸಿದ್ದಾರೆ. ಈ ರೀತಿಯಾಗಿ ಕಲೆ ಮತ್ತು ಸಾಹಿತ್ಯಗಳು, ಕಲಾವಿದರು, ಸಾಹಿತಿಗಳು ಒಂದೆಡೆ ಸೇರಿ ಮಾಡಿರುವ ಕಾರ್ಯವೇ ಹಸ್ತಪ್ರತಿಗಳು.

ಪ್ರಾಚೀನ ಕಾಲದಲ್ಲಿ ಈ ಹಸ್ತಪ್ರತಿಗಳಿಗೆ ಬಳಸುತ್ತಿದ್ದ ವಸ್ತುಗಳನ್ನು ಗಮನಿಸಿ ಅದನ್ನು ತಾಳೆಗರಿ, ಕೋರಿಕಾಗದ ಎಂದೂ, ಕಟ್ಟು ರೂಪವನ್ನು ಗಮನಿಸಿ ಅದಕ್ಕೆ ಕಟ್ಟು, ಕವಳಿಗೆ, ಹೊತ್ತಿಗೆ, ಗ್ರಂಥ ಎಂದೂ ಕರೆಯುತ್ತಿದ್ದರು. ಇಂದು Manuscript ಪರಿಕಲ್ಪನೆಯ ಪ್ರಭಾವದಿಂದಾಗಿ ಇವೆಲ್ಲವುಗಳನ್ನು 'ಹಸ್ತಪ್ರತಿ' ಯೆಂಬ ಒಂದೇ ಹೆಸರಿನಿಂದ ಗುರುತಿಸಲಾಗುತ್ತಿದೆ ಎಂದು ಡಾ॥ ಎಂ.ಎಂ. ಕಲಬುರ್ಗಿಯವರು ಅಭಿಪ್ರಾಯ ಪಡುವದು ಸರಿಯನಿಸುತ್ತದೆ.[೨]

ಡಾ॥ ಬಿ.ಕೆ. ಹಿರೇಮಠ ಅವರು 'ಹಸ್ತಪ್ರತಿ' ಎಂಬುದಕ್ಕೆ "ಭಾರವಲ್ಲದ ಲೇಖ್ಯ ವಸ್ತುವಿನ ಮೇಲೆ ಕೈಯಿಂದ ಬರೆದ ಜೀವನಾವಶ್ಯಕ ಜ್ಞಾನಪ್ರಧಾನವಾದ ಕೃತಿ ಮತ್ತು ಅದರ ಪ್ರತಿಕೃತಿಗಳು ಹಸ್ತಪ್ರತಿಗಳು"[೩] ಎಂದಿದ್ದಾರೆ. ಡಾ॥ ಬಿ.ಕೆ. ಹಿರೇಮಠರ ವ್ಯಾಖ್ಯಾನವು ಶ್ರೀಯುತರಾದ ಎಸ್. ಎಂ. ಖತ್ರೆಯವರಿಂದ ಹಿಡಿದು ಡಾ॥ ಎಂ.ಎಂ. ಕಲಬುರ್ಗಿಯವರವರೆಗೂ ನಡೆದ ಹಸ್ತಪ್ರತಿಗಳ ಅಧ್ಯಯನಕ್ಕೆ ವಿವರಣೆಯಂತಿದೆ. ಅದು ವ್ಯಾಪಕಾರ್ಥವನ್ನು ಒಳಗಿಟ್ಟುಕೊಂಡು ಹೇಳಿದ ಸ್ಥೂಲಸ್ವರೂಪದ ವಿವರಣೆಯಾಗಿದೆ.

---

೨. ಡಾ. ಎಂ.ಎಂ.ಕಲಬುರ್ಗಿ : ಕನ್ನಡ ಹಸ್ತಪ್ರತಿ ಶಾಸ್ತ್ರ, ಪುಟ- ೫

೩. ಡಾ. ಬಿ.ಕೆ.ಹಿರೇಮಠ, ಕನ್ನಡ ಹಸ್ತಪ್ರತಿಗಳು ಒಂದು ಅಧ್ಯಯನ, ಪುಟ-೧೦

ಕರ್ನಾಟಕದ ಹಸ್ತಪ್ರತಿ ಚಿತ್ರಕಲೆ- ಒಂದು ಅಧ್ಯಯನ

ತಾಳೆಗರಿ ಹಸ್ತಪ್ರತಿಗಳಲ್ಲಿ ವರ್ಣ ಚಿತ್ರಗಳು

ಕೃತಿ :ಉಷಾಭಿಲಾಷ



Courtesy :

Sita Kant Mahapatra

Lalita Kala Akademi, New Delhi.

ಇಂತಹ ಹಸ್ತಪ್ರತಿಗಳು ಅರಸರ ಸಪ್ತ ಸಂತಾನ (ಶ್ರೀವತ್ಸ -ನಿಘಂಟು) ದ ಕರ್ತವ್ಯಗಳಲ್ಲಿ ಒಂದೆಂದೋ, ಶಾಸ್ತ್ರದಾನ, ಗ್ರಂಥ ಪ್ರತಿಷ್ಠೆಯ ಪೂರ್ಣಪ್ರತೀಕವೆಂದೋ, ಧರ್ಮ ಪೀಠಾರೋಹಣ ಪ್ರಸಂಗದ ಜ್ಞಾನದುಡುಗೊರೆಗಳೆಂದೋ, ಬದುಕಿನ ಸ್ವಸುಖದ, ಪರಸುಖದ ಕಾಮಧೇನುಗಳೆಂದೋ ಭಾವಿಸಿ ಇಂದಿನವರೆಗೂ ಕನ್ನಡಿಗರು ಅವುಗಳನ್ನು ಪೂಜ್ಯಭಾವನೆಯಿಂದ ಸಂರಕ್ಷಿಸಿಕೊಂಡು ಬಂದಿದ್ದಾರೆ[೪] ಎಂದು ಹೇಳುವ ಡಾ|| ಬಿ.ಕೆ. ಹಿರೇಮಠರ ಮಾತನ್ನು ಇಲ್ಲಿ ಗಮನಿಸಬೇಕಾಗುತ್ತದೆ.

ಇದೇ ರೀತಿ ಹಸ್ತಪ್ರತಿಗಳೊಂದಿಗೆ ಇರುವ ಚಿತ್ರಗಳನ್ನು ಗಮನಿಸಿರುವ ಡಾ|| ಎಸ್.ಸಿ. ಪಾಟೀಲ್‌ರು ಹಸ್ತಪ್ರತಿ ಚಿತ್ರಕಲೆಯೆಂದರೆ '' ಕೈಯಿಂದ ಬರವಣಿಗೆಗಾಗಿ ಸಿದ್ಧಗೊಂಡ ವಸ್ತ್ರಪಟ, ವೃಕ್ಷಪತ್ರ, (ತಾಡೋಲೆ, ಭೂರ್ಜಪತ್ರ) ಕಾಗದ, ಚರ್ಮದಂತಹ ಹಗುರವಾದ ವಸ್ತು ಅಥವಾ ಕಟ್ಟುಗಳ ರಕ್ಷಾ ಕವಚಗಳ ಮೇಲೆ ಮತ್ತು ಒಳಗಡೆ ಅಲಂಕಾರಕ್ಕಾಗಿ ಬರವಣಿಗೆಯ ವಿಷಯದ ಹಿನ್ನೆಲೆಯಲ್ಲಿ ಆಯಾ ಸಂದರ್ಭ ಸನ್ನಿವೇಶಕ್ಕೆ ತಕ್ಕಂತೆ ಚಿತ್ರಿಸಿದ ರೇಖಾ ವರ್ಣಚಿತ್ರ ವಿನ್ಯಾಸಗಳನ್ನೆಲ್ಲ ಹಸ್ತಪ್ರತಿ ಚಿತ್ರಕಲೆ ಎಂದು ವ್ಯಾಖ್ಯಾನವೊಂದನ್ನು ನೀಡಿದ್ದಾರೆ.[೫] ಅದು ಹೆಚ್ಚು ಪ್ರಸ್ತುತ ವೆನಿಸುತ್ತದೆ. ಚಿತ್ರಕಲೆ ಮತ್ತು ಸಾಹಿತ್ಯಗಳು ಮಾನವನ ಅಭಿವ್ಯಕ್ತಿ ಮಾಧ್ಯಮದ ಸಂವಹನ ಕ್ರಿಯೆಗಳು. ತನ್ನನ್ನು ತನ್ನ ಪರಿಸರವನ್ನು ಕುರಿತು ಚಿಂತಿಸುವ ದಿನದ ಬದುಕನ್ನು ದಾಖಲಿಸುವ, ಕಲ್ಪಿಸುವ, ಚಿಂತನೆಗೆ ಅಳವಡಿಸುವ ವಿಕಾಸದ ಹಾದಿಯನ್ನು ತೋರಿಸುವ ಜೀವನದ ಮೈಲುಗಲ್ಲುಗಳಂತಿವೆ.

'' ಕಲೆ ಮತ್ತು ಸಾಹಿತ್ಯಗಳ ಕೂಡುವಿಕೆಯನ್ನು ಭಿನ್ನ ಮೂಲಗಳಿಂದ ಬಂದಿರುವ ಹಾಲು-ಜೆಲ್ಲಗಳ ಸಂಗಮ ಎನ್ನಬಹುದು. ಅಥವಾ ಇದನ್ನೇ ಮತ್ತಷ್ಟು ವಿಸ್ತಾರವಾಗಿ ವಿಭಿನ್ನವಾದ ಎರಡು ಅಸಿಲಗಳು ಸಂಗಮಿಸಿ ಜನೋಪಕಾರಿ ಮತ್ತು ಜಗಕ್ಕೋಪಕಾರಿಯಾದ ನೀರಿನಂತಹ ಅಮೂಲ್ಯವಾದ ಸಂಯುಕ್ತ ವಸ್ತುವೊಂದನ್ನು ಸೃಷ್ಟಿಸುವಂತೆ ಕಲೆ ಮತ್ತು ಸಾಹಿತ್ಯಗಳು ಒಂದೆಡೆ ಸೇರಿ ಒಂದಕ್ಕೆ ಮತ್ತೊಂದು ಪೂರಕವಾಗಿರುವುದನ್ನೇ ನಾವು ಹಸ್ತಪ್ರತಿ ಚಿತ್ರಕಲೆ ಎನ್ನಬಹುದು.

ಒಂದೊಂದು ಪ್ರದೇಶದಲ್ಲಿ ಒಂದೊಂದು ಭಾಷೆಯಂತೆ ಅಲ್ಲಿ ಸಾಹಿತ್ಯ ರಚನೆಯಾಗುತ್ತದೆ. ಅಲ್ಲಿನದೇ ಆದ ವಿಶಿಷ್ಟ ಬೇರೆ ಬೇರೆ ವಿಧಾನ ಆಕಾರ ರೂಪಗಳು ಚಿತ್ರಕಲೆಯಲ್ಲಿ ಅಭಿವ್ಯಕ್ತವಾಗುತ್ತವೆ. ಇವೆಲ್ಲದರ ಮೊತ್ತ ಆ ಜನ ಸಮುದಾಯದ ವಿಶಿಷ್ಟವಾದ ಸಂಸ್ಕೃತಿ. ಕಾಲದುದ್ದಕ್ಕೂ ಒಂದು ಅಂಶ ಮಾತ್ರ ಮತ್ತೆ ಮತ್ತೆ ಸ್ಪಷ್ಟವಾಗಿದೆ ಅದು ಜನಪದದ ಹಿರಿಮೆ. ಜನಪದದ ಭದ್ರ ಬುನಾದಿಯ ಮೇಲೆ ನಿಂತಾಗಲೇ ಒಂದು ಕಲೆ, ಸಾಹಿತ್ಯ ಶ್ರೇಷ್ಠವಾಗುತ್ತದೆ. ದೀರ್ಘಾಯುವಾಗುತ್ತದೆ. ಇದು ಚ್ಯುತಿ ಇಲ್ಲದ ಸತ್ಯ.[೬] ಎಂಬ ಮಾತು ಗಮನಾರ್ಹವಾದುದಾಗಿದೆ. ಹಸತ್ರಪ್ರತಿ ಚಿತ್ರಕಲೆಯು ಈ ಮಾತಿಗೆ ಹೊರತಾಗಿಲ್ಲ.

೪. ಡಾ|| ಬಿ.ಕೆ. ಹಿರೇಮಠ : ಕನ್ನಡ ಹಸ್ತಪ್ರತಿಗಳು ಒಂದು ಅಧ್ಯಯನ, ಪುಟ -೧

೫. ಡಾ. ಎಸ್.ಸಿ.ಪಾಟೀಲ : ಸತ್ಯಾನಂದ ಪಾತ್ರೋಟ (ಸಂ) ನಿಜದ ನೆಲೆ, ಪುಟ :೩೯

೬. ನಿರಂಜನ (ಸಂ) ಜ್ಞಾನ ಗಂಗೋತ್ರಿ ಸಂಪುಟ -೫, ಪುಟ -೧೨

ಅಧ್ಯಯನದ ಉದ್ದೇಶ :

ಕರ್ನಾಟಕದ ಸಮಗ್ರ ಚರಿತ್ರೆಯಲ್ಲಿ, ಕನ್ನಡದ ಸಾಹಿತ್ಯ, ಇತಿಹಾಸ, ಜನಪದ, ರಾಜ್ಯಶಾಸ್ತ್ರಗಳಂತಹ ಅನೇಕ ಸಾಮಾಜಿಕ ವಿಜ್ಞಾನ ಶಾಸ್ತ್ರಗಳು ಸೇರಿಕೊಂಡಿವೆ. ಈ ಎಲ್ಲಾ ಶಾಸ್ತ್ರಗಳ ಶಾಸ್ತ್ರೀಯ ಅಧ್ಯಯನವು ಹಲವು ಹಂತಗಳಲ್ಲಿ ಹಲವು ಮಜಲುಗಳಲ್ಲಿ ಇಂದಿಗೂ ಮುಂದುವರೆದಿದೆ. ಇದರಂತೆ ನಮ್ಮ ನಾಡಿನ ಸಂಶೋಧನಾ ವಲಯದಲ್ಲಿ ಜನಜೀವನದ ಬದುಕಿನ ಅಂಗವಾಗಿರುವ ಕನ್ನಡ ಸಾಹಿತ್ಯವು ಹಲವು ಶಾಖೋಪ ಶಾಖೆಗಳಾಗಿ ಬೆಳೆದಂತೆ ಅಥವಾ ಬೆಳೆಯಿಸಿದಂತೆ ಜನಜೀವನದ ಸಾಂಸ್ಕೃತಿಕ ಬದುಕಿನ ಅಂಗಗಳಾಗಿರುವ ಚಿತ್ರ, ಶಿಲ್ಪ, ಸಂಗೀತಗಳನ್ನು ಕುರಿತು ವ್ಯಾಪಕ ಉಳುಮೆಯ ಕಾರ್ಯವನ್ನು ಮಾಡದ ಕಾರಣ ನಮ್ಮ ನಾಡಿನ ಅನೇಕ ಕಲಾಪ್ರಕಾರಗಳು ಗಮನಿಸಲಾರದೆಯೇ ಬಾಡಿ ಹೋಗಿವೆ. ಉಳಿದ ಕೆಲವು ಹಳೆಯ ಉಳಿಕೆಗಳು ಕೆಲವು ಜನರ ಮನೆಗೆ ಬದುಕಾಗಿ ಕುಲದ ಕಸಬುಗಳಾಗಿ ಉಳಿದುಕೊಂಡು ಬಂದಿವೆ. ಹೀಗೆ ದಾಖಲೆಯಾಗಿ ಈ ಕಲೆಗಳು ಉಳಿದುಕೊಂಡು ಬಂದಿರುವದನ್ನೂ ಅಲ್ಲಲ್ಲಿ ಮನೆ, ಮಠ, ದೇವಾಲಯಗಳಲ್ಲಿ ಮತ್ತು ಹಸ್ತಪ್ರತಿಯಂತಹ ಮಾಧ್ಯಮಗಳಲ್ಲಿ ಮಾತ್ರ ಕಾಣುತ್ತೇವೆ.

ಈ ಕಾರಣಕ್ಕಾಗಿಯೇ ಬಹುಶಃ ನಮ್ಮ ನಾಡಿನ ಸಾಹಿತ್ಯಕ್ಕೆ ದಕ್ಕಿದ ಜನಸ್ಪಂಧನೆ ಕಲಾಪ್ರಕಾರಗಳಿಗೆ ಲಭಿಸಲಿಲ್ಲ. ಇಂದಿಗೂ ಕನ್ನಡ ನಾಡಿನ ಸಮಗ್ರ ಚರಿತ್ರೆಯನ್ನು ಕುರಿತು ಅಧ್ಯಯನ ಮಾಡುತ್ತಿರುವ ಸಂಶೋಧನಾ ವಿದ್ಯಾರ್ಥಿಗಳಿಗೆ "ಕಲೆ" ಯೆಂಬುದು ಕೇವಲ ನೋಡುವ ವಸ್ತುವಾಗಿ ಉಳಿದುಕೊಂಡಂತಿದೆ. ಕಲೆಯನ್ನು ನೋಡುವ, ಅಧ್ಯಯನಕ್ಕೆ ಒಳಪಡಿಸಿಕೊಳ್ಳುವ ಅದರೊಳಗೆ ಲಯಗೊಳ್ಳುವ ಸಂಸ್ಕಾರವನ್ನಾಗಲಿ, ಮಾನಸಿಕ ತರಬೇತಿಯನ್ನಾಗಲಿ ನೀಡದ ಕಾರಣ ನಮ್ಮ ನಾಡಿನ ಕಲೆಗಳು ಕೇವಲ ರಂಜನೀಯ ಮಾಧ್ಯಮಗಳ ಮಟ್ಟದಲ್ಲಿ ಉಳಿದುಕೊಂಡಂತಿವೆ. ಈ ಕಹಿ ಸತ್ಯ ಕರ್ನಾಟಕದ ಹಸ್ತಪ್ರತಿಚಿತ್ರಗಳಿಗೂ ಅನ್ವಯಿಸುತ್ತದೆ.

ಕನ್ನಡಿಗರ ಸಮಗ್ರ ಬದುಕಿನ ಆಕರ, ಜನಜೀವನದ ಮುಕುಟವಾಗಿರುವ ಕರ್ನಾಟಕದ ಹಸ್ತಪ್ರತಿಗಳು ಸಮಗ್ರ ಅಧ್ಯಯನಕ್ಕೆ ಒಳಪಡದೆ ಕೇವಲ ಭಾಷಾ ಶಾಸ್ತ್ರದ ಇಲ್ಲವೆ ಸಾಹಿತ್ಯದ ಹಂತಕ್ಕೆ ಅಥವಾ ಧಾರ್ಮಿಕ ಗಡಿಗಳಿಗೆ ಸೀಮಿತಗೊಂಡಂತಿದೆ. ಉದಾಹರಣೆಗೆ ಹೇಳುವುದಾದರೆ ಕಾಗದ ಅಥವಾ ತಾಳೆಗರಿಯೊಳಗಿನ ಕಾವ್ಯ ಒಂದರಲ್ಲಿಯ ಪದಕುರಿತು ಚಿಂತನ, ಮಂಥನ, ದೂರಾನ್ವಯಗಳ ಕಾರ್ಯ ನಡೆದಂತೆ ಆ ಕಾವ್ಯದ ಪಕ್ಕದಲ್ಲಿ ಆ ಕಾವ್ಯವೇ ಸಾದೃಶ್ಯಗೊಂಡು ಕಾವ್ಯಕ್ಕೆ ಸಮನಾರ್ಥಗಳಲ್ಲಿ ರೂಪತಾಳಿರುವ ಚಿತ್ರಗಳು ಅದರ ಭಾವ, ರಸಗಳಾಗಲಿ, ಕನಿಷ್ಠ ರೇಖಾ ವಿನ್ಯಾಸ, ಅಲಂಕಾರಗಳಾಗಲಿ ನಮ್ಮ ಜಿಜ್ಞಾಸುಗಳ ಮನಕ್ಕೆ ತಲುಪಿರುವುದು ತುಂಬಾ ಕಡಿಮೆ ಅನಿಸುತ್ತದೆ. ಇಂತಹ ಕಾರಣಗಳಿಂದಾಗಿಯೇ ಕರ್ನಾಟಕದ ಹಸ್ತಪ್ರತಿ ಚಿತ್ರಕಲೆಯನ್ನು ಅಧ್ಯಯನಕ್ಕೆ ಆಯ್ದುಕೊಳ್ಳುವ ಉದ್ದೇಶವನ್ನು ಹೊಂದಲಾಗಿದೆ.

ಕರ್ನಾಟಕದ ಹಸ್ತಪ್ರತಿ ಚಿತ್ರಕಲೆಯು ಕನ್ನಡ ಸಾಹಿತ್ಯ, ಇತಿಹಾಸ ಮತ್ತು

ಹಸ್ತಪ್ರತಿ ಕ್ಷೇತ್ರದಲ್ಲಿ ಕೆಲಸ ಮಾಡಿದ ಪ್ರಮುಖರು




ಕರ್ನಲ್ ಮೆಕೆಂಝಿ



ಜೆ.ಎಫ್. ಫ್ಲೀಟ್



ಮೊಗ್ಲಿಂಗ್




ರೆ|| ಫರ್ಡಿನಾಂಡ ಕಿಟಲ್



ಕೆ. ಆನಂದ ಕುಮಾರ ಸ್ವಾಮಿ



ಡಾ. ಬಿ.ಕೆ. ಹಿರೇಮಠ



ಡಾ|| ಹಳಕಟ್ಟಿಯ

ಚಿತ್ರಕಲೆಗಳಿಗಿರುವ ಸಾಂಸ್ಕೃತಿಕ ಸಂಬಂಧದ ಕೊಂಡಿಯಾಗಿ ಹೇಗೆ ಬೆಳದು ಬಂದಿವೆ ಎಂಬುದರ ಕುರಿತು ಅಧ್ಯಯನಕ್ಕೆ ಒಳಪಡಿಸುವುದು ಒಂದು ಉದ್ದೇಶವಾಗಿದೆ.

ಕರ್ನಾಟಕದ ಹಸ್ತಪ್ರತಿ ಚಿತ್ರಕಲೆಗೆ ಇರುವ ಐತಿಹಾಸಿಕ ಚರಿತ್ರೆಯನ್ನು ಕಟ್ಟಿಕೊಡುವುದಲ್ಲದೆ ಕರ್ನಾಟಕದಲ್ಲಿ ಹಸ್ತಪ್ರತಿ ಚಿತ್ರಕಲೆಯ ಸಂಸ್ಕೃತ, ಪ್ರಾಕೃತ, ಮುಸ್ಲಿಂ (ಮಹ್ಮದೀಯ) ಕನ್ನಡ ಭಾಷೆಗಳಲ್ಲಿ ಬಂದಿರುವ ಹಸ್ತಪ್ರತಿಗಳನ್ನು ಅಧ್ಯಯನ ಮಾಡುವ ಉದ್ದೇಶವೂ ಇಲ್ಲಿದೆ. ಕರ್ನಾಟಕದ ಹಸ್ತಪ್ರತಿ ಚಿತ್ರಕಲೆಯ ಸಿದ್ಧತೆಯ ವಿಧಿ ವಿಧಾನಗಳನ್ನು ಸಮೀಕ್ಷಿಸಲಾಗುವುದಲ್ಲದೆ ಹಸ್ತಪ್ರತಿಯ ಪರಿಕರಗಳಾದ ಫಲಕದ ಸಿದ್ಧತೆ, ಗರಿಯ ಸಿದ್ಧತೆಯ ನಂತರ ಬರುವ ಕಲಾವಿದನ ವರ್ಣಗಾರಿಕೆಯ ವಿವಿಧ ಹಂತಗಳನ್ನು ಅಧ್ಯಯನಕ್ಕೆ ಒಳಪಡಿಸಲಾಗುವದು. ಕರ್ನಾಟಕದ ಹಸ್ತಪ್ರತಿ ಚಿತ್ರಕಲೆಯ ಕಲಾವಿದರು ಚರಿತ್ರೆ ಕಾಣದವರಾಗಿದ್ದಾರೆ. ಹಸ್ತಪ್ರತಿಗಳಲ್ಲಿ ಲಿಪಿಕಾರ ಆತನ ಕಂಠ, ಮಸಿ ಮತ್ತು ಯಾತನೆಯ ಬದುಕು ಹಸ್ತಪ್ರತಿ ಪುಷ್ಪಿಕೆಗಳಲ್ಲಿ ದಾಖಲುಗೊಂಡಂತೆ ಕಲಾವಿದರ ಕಲಾಕೌಶಲ್ಯ ಬಣ್ಣಗಾರಿಕೆ ಮತ್ತು ಬಡತನದ ಬದುಕು ನಮ್ಮ ಸಾರಸ್ವತ ಜಗತ್ತಿನಲ್ಲಿ ದಾಖಲುಗೊಂಡಿಲ್ಲ. ಕಲಾವಿದರನ್ನು ಕಲಾಶೈಲಿಗಳನ್ನು ದಾಖಲಿಸುವುದು ಸಹ ಈ ಅಧ್ಯಯನದ ಉದ್ದೇಶವಾಗಿದೆ.

ಕರ್ನಾಟಕದ ಹಸ್ತಪ್ರತಿ ಚಿತ್ರಕಲೆಯ ವಸ್ತು ವಿಷಯವನ್ನು ವರ್ಗೀಕರಿಸಿಕೊಂಡು ಅಧ್ಯಯನ ಮಾಡುವ ಮಹತ್ವದ ಉದ್ದೇಶವನ್ನು ಹೊಂದಲಾಗಿದೆ. ಜನಪದ ಶಿಷ್ಠದ ಚಿತ್ರಕಲೆಯೊಂದಿಗೆ ಭಾಷೆ, ಧರ್ಮ ಮತ್ತು ಧಾರ್ಮಿಕೇತರ ಹಿನ್ನೆಲೆಯಲ್ಲಿ ಚಿತ್ರಕಲೆಯ ವಸ್ತು ವಿಷಯಗಳೊಂದಿಗೆ ಚರ್ಚಿಸುವ ಉದ್ದೇಶವು ಇಲ್ಲಿದೆ. ಕರ್ನಾಟಕದ ಹಸ್ತಪ್ರತಿ ಚಿತ್ರಕಲೆಯ ಕುರಿತು ಕನ್ನಡ ಸಾಹಿತ್ಯವಲಯ ಗುರುತಿಸಲಾಗದ ರಸವಿಷಯಗಳ ಬಗ್ಗೆ ಚರ್ಚಿಸಲಾಗುವುದಲ್ಲದೆ. ಕರ್ನಾಟಕದ ಹಸ್ತಪ್ರತಿಗಳಲ್ಲಿಯ ಸೌಂದರ್ಯ ಸಮೀಕ್ಷಾ ಕಾರ್ಯವನ್ನು ಮಾಡುವ ಉದ್ದೇಶವನ್ನು ಹೊಂದಲಾಗಿದೆ. ಕರ್ನಾಟಕದ ಹಸ್ತಪ್ರತಿ ಚಿತ್ರಗಳಿಗೆ ಇರುವ ಆಪತ್ತುಗಳು ಅನೇಕ ಅವುಗಳಲ್ಲಿ ನಿಸರ್ಗನಿರ್ಮಿತ ಆಪತ್ತುಗಳಿರುವಂತೆ ಮಾನವ ನಿರ್ಮಿತ ಆಪತ್ತುಗಳು ಅಧಿಕವಾಗಿವೆ. ಈ ಆಪತ್ತುಗಳ ಸ್ವರೂಪದ ಅಧ್ಯಯನ ಕೈಕೊಳ್ಳುವುದು ಈ ಅಧ್ಯಯನದ ಉದ್ದೇಶವಾಗಿದೆ.

ಕರ್ನಾಟಕದ ಹಸ್ತಪ್ರತಿಗಳಿಗಿರುವ ಆಪತ್ತುಗಳನ್ನು ವೈಜ್ಞಾನಿಕವಾಗಿ ಹೇಗೆ ನಿವಾರಿಸಬಹುದು ಹಸ್ತಪ್ರತಿಗೆ ಬೇಕಾದ ಸೂಶ್ರೃಷೆ ಪರಿಪಾಲನೆಯ ಕ್ರಮಗಳೊಂದಿಗೆ ವರ್ಣನಾತ್ಮಕ ಸೂಚಿಯನ್ನು ನಿರ್ಮಿಸುವ ರೀತಿಯನ್ನು ಚರ್ಚಿಸುವ ಹಾಗೂ ಹಸ್ತಪ್ರತಿಗಳ ಕುರಿತು ಮುಂಬರಲಿರುವ ಅಧ್ಯಯನ ಶೀಲರಿಗೆ ಅನುಕೂಲವಾಗುವಂತೆ ಲಭ್ಯ ಹಸ್ತಪ್ರತಿಗಳ ಭಂಡಾರಗಳ ವಿವರವನ್ನು ಒದಗಿಸುವ ಉದ್ದೇಶ ಹೊಂದಿದೆ.

ಕರ್ನಾಟಕದ ಚರಿತ್ರೆಯಲ್ಲಿ ವಾಸ್ತುಶಿಲ್ಪ, ಶಿಲ್ಪ ಶಾಸ್ತ್ರದಂತೆ ಚಿತ್ರಕಲಾ ಶಾಸ್ತ್ರಗಳು ಅಧಿ ಕೃತವಾಗಿದ್ದು ಅದನ್ನು ದಾಖಲೀಕರಣಗೊಳಿಸುವುದು. ಮಹತ್ವದ ಉದ್ದೇಶವಾಗಿದೆ. ಹೊಯ್ಸಳರು ಶಿಲ್ಪಕಲಾ ಶಾಸ್ತ್ರಕ್ಕೆ ನೀಡಿದ ಬಹುದೊಡ್ಡ ಕಾಣಿಕೆಗಳಂತೆ ಚಿತ್ರಕಲಾ ಶಾಸ್ತ್ರಕ್ಕೂ ಅಮೂಲ್ಯವಾದ

ಕಾಣಿಕೆಯನ್ನು ನೀಡಿದ್ದಾರೆ. ಆದರೆ ಇಂದು ಹೊಯ್ಸಳರ ಶಿಲ್ಪ ಕಲೆ ಪ್ರಸಿದ್ಧವಾದಂತೆ ಅವರ ಚಿತ್ರಕಲೆಯು ಗೌಣವಾಗಿದೆ. ಇಂತಹ ಅವಜ್ಞೆಗೆ ಒಳಗಾದ ಧವಳ, ಜಯಧವಳ, ಮಹಾಧವಳಗಳಂತಹ ಹಸ್ತಪ್ರತಿ ಚಿತ್ರಗಳನ್ನು ಪರಿಚಯಿಸುವುದು ಈ ಮಹಾ ಪ್ರಬಂಧದ ಉದ್ದೇಶವಾಗಿದೆ. ಕರ್ನಾಟಕದ ಹಸ್ತಪ್ರತಿಗಳಲ್ಲಿ ಯೋಗ ಶಾಸ್ತ್ರದ ಕೊಡುಗೆಯೂ ಅಪಾರವಾಗಿದೆ. ದೇಹದೊಳಗಿನ ನಾಡಿ, ಕುಂಡಿನಿ, ಬ್ರಹ್ಮಕಮಲದಳ, ಸಹಸ್ರಕಮಲದಳಗಳನ್ನು ಗುರುತಿಸಿದ ನಮ್ಮ ಪ್ರಾಚೀನರ ಯೋಗ ಮತ್ತು ಕಲಾತ್ಮಕ ಬದುಕನ್ನು ಇಲ್ಲಿ ಪರಿಚಯಿಸುವುದು ಅಧ್ಯಯನದ ಉದ್ದೇಶವಾಗಿದೆ. ವಚನಕಾರರು ಚಿತ್ರಕಲೆಯನ್ನು ಕುರಿತು ತಮ್ಮ ವಚನಗಳಲ್ಲಿ ವಿಶಿಷ್ಟ ರೀತಿಯಲ್ಲಿ ಹೇಳಿಕೊಂಡಿದ್ದಾರೆ. ಇದರೊಂದಿಗೆ ವೀರಶೈವ ಧರ್ಮದ ಉದ್ಧರಣೆ, ಕರಣಹಸುಗೆ, ಸಕೀಲ ಮಂತ್ರಗೌಪ್ಯಗಳಂತಹ ಅನೇಕ ತಾಂತ್ರಿಕ ವಿಷಯಗಳನ್ನು ಚಿತ್ರಕಲೆಯ ಮಾಧ್ಯಮದಿಂದ ವರ್ಣರಂಜಿತವಾಗಿ ಚಿತ್ರಿಸಿರುವದು ಅಂತಹವುಗಳನ್ನು ಅಧ್ಯಯನಕ್ಕೊಳಪಡಿಸುವ ಉದ್ದೇಶ ಹೊಂದಿದೆ.

ಭಾರತೀಯರ ಸಾಹಿತ್ಯ ಮತ್ತು ಕಲಾ ಪರಂಪರೆಗಳಲ್ಲಿ ಕರ್ನಾಟಕದ ಹಸ್ತಪ್ರತಿ ಚಿತ್ರಕಲೆಗೆ ತನ್ನದೇ ಆದ ಮಹತ್ವದ ಸ್ಥಾನವಿದೆ. ಹಸ್ತಪ್ರತಿ ಚಿತ್ರಕಲೆ ಎಂದರೆ ನಮ್ಮ ಪೂರ್ವಜರ ಸಾಂಸ್ಕೃತಿಕ ಬದುಕಿನ ದಾಖಲೆಯಾಗಿದೆ. ಇಂತಹ ಹಸ್ತಪ್ರತಿ ಚಿತ್ರಗಳನ್ನು ರಚಿಸುವ ಮೂಲಕ ಕನ್ನಡಿಗರು ಕಲಾಕಾರರಾಗಿ, ಇವುಗಳನ್ನು ಬರೆಯಿಸವುದರೊಂದಿಗೆ ಕಲಾ ಪೋಷಕರಾಗಿದ್ದಾರೆ. ಹಸ್ತಪ್ರತಿ ನಿರ್ಮಿಸುವುದರೊಂದಿಗೆ ಈ ಪರಂಪರೆಯನ್ನು ಜೀವಂತವಾಗಿಸುವದರ ಜೊತೆಗೆ ನಮ್ಮ ನಾಡನ್ನು ಸಾಂಸ್ಕೃತಿಕ ಸಂಪದ್ಭರಿತ ಪ್ರದೇಶವನ್ನಾಗಿ ಮಾಡಿದ್ದಾರೆ.

ಪ್ರಸ್ತುತ ಪ್ರಕಟಿತ ಸಾಹಿತ್ಯಕ್ಕೆ ಆಕರಗಳಾಗಿದ್ದ ಈ ಹಸ್ತಪ್ರತಿಗಳು ಅವುಗಳಿಗೆ ಪೂರಕವಾಗಿ ಅಥವಾ ಪಾಠಕ್ಕೆ ಹೆಚ್ಚುವರಿ ಅರ್ಥಕೊಡಲು ರೂಪಿಸಲ್ಪಟ್ಟ ಹಸ್ತಪ್ರತಿಗಳಲ್ಲಿಯ ಈ ಚಿತ್ರಗಳು ಆಯಾ ಕಾಲ ಘಟ್ಟಗಳ ಪರಿಮಿತಿಯಲ್ಲಿ ರಚಿಸಲ್ಪಟ್ಟಿರುವ ಆಯಾ ಭಾಗದ ಜನ ಜೀವನದ ಕಲೆ, ಸಾಹಿತ್ಯ ಮತ್ತು ಸಂಸ್ಕೃತಿಯನ್ನು ಸಾರುವ ಕಾಲ ಕೋಶಗಳಂತಿವೆ. ಅವುಗಳ ಕುರಿತು ಕ್ರಮ ಬದ್ಧ ಅಧ್ಯಯನವನ್ನು ನಡೆಸಿದಲ್ಲಿ ನಮ್ಮ ಗತಜೀವನದ ವಿವರವನ್ನು ಕಟ್ಟಿಕೊಡಬಲ್ಲವುಗಳಾಗಿವೆ.

ಕರ್ನಾಟಕದ ಹಸ್ತಪ್ರತಿ ಚಿತ್ರಕಲೆಯ ಅಧ್ಯಯನವು ನಿರ್ಮಾತೃಗಳ ಇತಿಹಾಸ, ಪೋಷಕರ ಉದ್ದೇಶ ತಿಳಿಸುವುದರ ಜೊತೆಗೆ ಹಸ್ತ ಪ್ರತಿ ಚಿತ್ರಕಲೆ ರಚನೆಗೊಂಡ ರೀತಿ, ಪತ್ರದ ಸಿದ್ಧತಾ ವಿಧಾನ, ಚಿತ್ರರಚನೆ, ವರ್ಣಗಳ ತಯಾರಿಕೆ ಚಿತ್ರ ರಚನಾ ಪರಿಕರಗಳು ಮತ್ತು ಚಿತ್ರ ಸಾಹಿತ್ಯ ಕ್ಷೇತ್ರದ ಹಲವಾರು ತಾಂತ್ರಿಕ ಅಂಶಗಳನ್ನು ತಿಳಿಸುತ್ತವೆ. ಈ ಎಲ್ಲ ಅಂಶಗಳೊಂದಿಗೆ ಚಿತ್ರಕಲಾ ಕ್ಷೇತ್ರಕ್ಕೆ ಹಸ್ತಪ್ರತಿ ಚಿತ್ರಕಲೆಯ ಮಹತ್ವವನ್ನು ಮನವರಿಕೆ ಮಾಡಿಕೊಡುವುದರೊಂದಿಗೆ ಈ ಹಸ್ತಪ್ರತಿ ಚಿತ್ರಕಲೆಯನ್ನು ಒಂದು ವ್ಯವಸ್ಥಿತ ಅಧ್ಯಯನಕ್ಕೆ ಒಳಪಡಿಸಿ ಅಧ್ಯಯನ ಮಾಡುವ ಉದ್ದೇಶವನ್ನು ಹೊಂದಲಾಗಿದೆ. ಸಂಸ್ಕೃತಿಯನ್ನು ಅರಿಯಲು ಇರುವ ಆಕರಗಳಲ್ಲಿ ಚಿತ್ರಕಲೆಗೆ ಒಂದು ವಿಶಿಷ್ಟವಾದ ಸ್ಥಾನವಿದೆ. ಆ ದಿಸೆಯಲ್ಲಿ ಚಿತ್ರಕಲೆಯ ಮುಖಾಂತರ ಮಾನವ ತನ್ನ ಸಂಸ್ಕೃತಿಯನ್ನು ಹೇಗೆ ವ್ಯಕ್ತಗೊಳಿಸಿದ್ದಾನೆ ಎಂಬುದು ಅಥವಾ ಸಂಸ್ಕೃತಿಯ ಒಂದು ಭಾಗವೆ ಆಗಿರುವ ಚಿತ್ರಕಲೆ ಇತರ ಆಕರಗಳಿಗಿಂತ ಬೇರೆಯಾಗಿ ಇದು ನಮ್ಮ ಸಾಂಸ್ಕೃತಿಕ ಇತಿಹಾಸವನ್ನು ಪುನರ್

ರಚಿಸಲು ಹೇಗೆ ಸಹಾಯ ಮಾಡುತ್ತದೆ ಎಂಬುದನ್ನು ಈ ಅಧ್ಯಯನದಿಂದ ಕಂಡು ಕೊಳ್ಳಬಹುದಾಗಿದೆ. ಹಸ್ತಪ್ರತಿ ಚಿತ್ರಕಲಾ ಪರಂಪರೆಯನ್ನು ನಮ್ಮ ಪೂರ್ವಜರು ಧರ್ಮ ಪ್ರಚಾರದ ಸಾಧನವಾಗಿ, ಸಮಾಜವನ್ನು ರೂಪಿಸುವಲ್ಲಿ, ಮನೋರಂಜನೆಗಾಗಿ, ವಯಕ್ತಿಕ ಭಾವನೆಗಳ ಕಲಾತ್ಮಕ ಅಭಿವ್ಯಕ್ತಿಗಾಗಿ, ಧಾರ್ಮಿಕ ರಾಜಕೀಯ ಉದ್ದೇಶಗಳಿಗಾಗಿ ಹೇಗೆ ಬಳಸಿಕೊಂಡರು ಎಂಬುದನ್ನು ನೋಡುವದರ ಜೊತೆಗೆ ಹಸ್ತಪ್ರತಿ ಚಿತ್ರಗಳ ತಂತ್ರ, ಶೈಲಿ ಕಾಲದಿಂದ ಕಾಲಕ್ಕೆ ಬದಲಾಗಿ ಬೆಳದು ಬಂದ ಬಗೆಯನ್ನು ಹಸ್ತಪ್ರತಿ ಚಿತ್ರಗಳ ತೌಲನಿಕ ಅಧ್ಯಯನದಿಂದ ತಿಳಿದುಕೊಳ್ಳಲು ಪ್ರಸ್ತುತ ಅಧ್ಯಯನ ತುಂಬಾ ಮಹತ್ವದ್ದಾಗಿದೆ. ಈ ಹತ್ತಾರು ಉದ್ದೇಶಗಳ ಹಿನ್ನಲೆಯಲ್ಲಿ ಪ್ರಸ್ತುತ ಅಧ್ಯಯನವನ್ನು ಕೈಕೊಳ್ಳಲಾಗಿದೆ.

ಅಧ್ಯಯನದ ಸ್ವರೂಪ :

ಈ ಮಹಾಪ್ರಬಂಧದ ವಿಷಯವು ಒಟ್ಟು ಒಂಭತ್ತು ಅಧ್ಯಾಯಗಳಲ್ಲಿ ಹರಡಿಕೊಂಡಿದ್ದು, ಅವುಗಳಲ್ಲಿ ಚರ್ಚಿತಗೊಂಡ ವಿಷಯಗಳ ಸಂಕ್ಷಿಪ್ತ ಸ್ವರೂಪದ ಮಾಹಿತಿಯನ್ನು ಇಲ್ಲಿ ನೋಡಬಹುದು.

ಒಂದನೆಯ ಅಧ್ಯಾಯದಲ್ಲಿ ಅಧ್ಯಯನದ ಉದ್ದೇಶ, ಸ್ವರೂಪ ಮತ್ತು ವೈಧಾನಿಕತೆ ಇದುವರೆಗೆ ನಡೆದ ಈ ಕ್ಷೇತ್ರದ ಅಧ್ಯಯನಗಳನ್ನು ಮತ್ತು ಆಕರ ಸಾಮಗ್ರಿಗಳನ್ನು ಕುರಿತಾದ ಸಮೀಕ್ಷೆ ಇರುವದು.

ಎರಡನೆಯ ಅಧ್ಯಾಯದಲ್ಲಿ ಹಸ್ತಪ್ರತಿ ಚಿತ್ರಕಲೆಯ ಇತಿಹಾಸವನ್ನು ಕಾಲನುಕ್ರಮದಲ್ಲಿ ವಿವಿಧ ಹಸ್ತ ಪ್ರತಿ ಚಿತ್ರಗಳ ಮೂಲಕ ಕಟ್ಟಿಕೊಡುವ ಪ್ರಯತ್ನವನ್ನು ಮಾಡಲಾಗಿದೆ.

ಮೂರನೆಯ ಅಧ್ಯಾಯದಲ್ಲಿ ಹಸ್ತಪ್ರತಿ ಚಿತ್ರಕಲಾ ರಚನೆಯ ಪರಿಕರಗಳು ಮತ್ತು ಅವುಗಳ ಸಿದ್ದತಾ ವಿವಿಧ ವಿಧಿ ವಿಧಾನಗಳ ಬಗ್ಗೆ ಚರ್ಚಿಸಲಾಗಿದೆ.

ನಾಲ್ಕನೆಯ ಅಧ್ಯಾಯದಲ್ಲಿ ಕರ್ನಾಟಕದ ಹಸ್ತಪ್ರತಿಗಳಲ್ಲಿ ದೊರೆಯುವ ಚಿತ್ರಕಲೆಯ ವಸ್ತು ವಿಷಯಗಳನ್ನು ವರ್ಗೀಕರಿಸಿಕೊಂಡು ಅವುಗಳ ವಿವಿಧ ಆಯಾಮಗಳನ್ನು ಅಧ್ಯಯನಕ್ಕೊಳಪಡಿಸಿ ಸ್ಥೂಲವಾಗಿ ಸಮೀಕ್ಷಿಸಲಾಗಿದೆ.

ಐದನೆಯ ಅಧ್ಯಾಯದಲ್ಲಿ ಕರ್ನಾಟಕದ ಹಸ್ತಪ್ರತಿ ಚಿತ್ರಕಲೆಯ ಅಜ್ಞಾತ ಕಲಾವಿದರ ಕುರಿತಾದ ಅವರ ವಿಶಿಷ್ಟವಾದ ಕಲಾನೈಪುಣ್ಯತೆ ಮುಂತಾದ ಅಂಶಗಳ ಕುತಾದ ವಿವರಗಳಿವೆ.

ಆರನೆಯ ಅಧ್ಯಾಯದಲ್ಲಿ ಕರ್ನಾಟಕದ ಹಸ್ತಪ್ರತಿ ಚಿತ್ರಕಲೆಯ ಸೌಂದರ್ಯ ಸಮೀಕ್ಷೆಯನ್ನು ಚಿತ್ರ ಮತ್ತು ಸಾಹಿತ್ಯದ ಹಿನ್ನಲೆಯಲ್ಲಿ ಸ್ಥೂಲವಾಗಿ ಚರ್ಚಿಸಲಾಗಿದೆ.

ಏಳನೆಯ ಅಧ್ಯಾಯದಲ್ಲಿ ಹಸ್ತಪ್ರತಿ ಚಿತ್ರಕಲೆಯ ಆಪತ್ತುಗಳನ್ನು ವಿವಿಧ ರೀತಿಯಲ್ಲಿ ವರ್ಗೀಕರಿಸಿಕೊಂಡು ಅವುಗಳನ್ನು ಚರ್ಚಿಸಲಾಗಿದೆ.

ಎಂಟನೆಯ ಅಧ್ಯಾಯದಲ್ಲಿ ಹಸ್ತಪ್ರತಿ ಚಿತ್ರಕಲೆಯ ಸಂರಕ್ಷಣೆಯ ವೈಜ್ಞಾನಿಕ ಕ್ರಮಗಳನ್ನು ಈ ಅಧ್ಯಾಯದಲ್ಲಿ ಸ್ಥೂಲವಾಗಿ ವಿವರಿಸಲಾಗಿದೆ.

ಒಂಭತ್ತನೆಯ ಅಧ್ಯಾಯದಲ್ಲಿ ಪ್ರಸ್ತುತ ಈ ಮಹಾಪ್ರಬಂಧದ ಎಲ್ಲ ಅಧ್ಯಾಯಗಳಲ್ಲಿ ನಡೆದ ಒಟ್ಟು ಫಲಿತಗಳ ಸಮೀಕ್ಷೆಯನ್ನು ಇಲ್ಲಿ ಮಾಡಲಾಗಿದೆ.

ಚಿತ್ರಕಲಾ ಕ್ಷೇತ್ರದಲ್ಲಿ ಇಲ್ಲಿಯವರೆಗೆ ನಡೆದ ಅಧ್ಯಯನಗಳು.

ಕರ್ನಾಟಕದ ಸಂದರ್ಭದ ಚಿತ್ರಕಲಾ ಕ್ಷೇತ್ರದಲ್ಲಿ ಹೆಚ್ಚಿನ ಸಂಶೋಧನಾ ಅಧ್ಯಯನಗಳು ನಡೆದಿಲ್ಲವೆಂದೇ ಹೇಳಬಹುದಾಗಿದೆ. ಏಕೆಂದರೆ ವಿಶ್ವವಿದ್ಯಾಲಯ ಮಟ್ಟದಲ್ಲಿ ಚಿತ್ರಕಲೆಗಳ ಕುರಿತಾದ ಅಧ್ಯಯನಕ್ಕೆ ಅವಕಾಶ ದೊರಕಿದ್ದು ತೀರ ಇತ್ತೀಚೆಗಷ್ಟೆ ನಂತರದಲ್ಲಿ ಅಧ್ಯಯನಗಳು 90ರದಶಕದಲ್ಲಿ ತೀವ್ರಗೊಂಡು ಈಗ ಪ್ರೌಢಾವಸ್ಥೆಗೆ ಬಂದು ತಲುಪಿವೆ. 1980ರ ದಶಕದಿಂದ ಕರ್ನಾಟಕದಲ್ಲಿ ನಡೆದ ಚಿತ್ರಕಲಾ ಅಧ್ಯಯನಗಳ ವಿವರವನ್ನು ಈ ಕೆಳಗೆ ಕೊಡಲಾಗಿದೆ.

1980ರ ದಶಕದಿಂದ ಕರ್ನಾಟಕದ ದೃಶ್ಯಕಲಾ ಕ್ಷೇತ್ರದಲ್ಲಿ ಮೊದಲಬಾರಿಗೆ ವಿಶ್ವವಿದಾಯಲಯ ಮಟ್ಟದಲ್ಲಿ ಚಿತ್ರಕಲೆ ಕುರಿತು ಸಂಶೋಧನಾತ್ಮಕ ಅಧ್ಯಯನಗಳು ಪ್ರಾರಂಭಗೊಂಡಿರುವುದು ಕಂಡುಬರುತ್ತದೆ. ಡಾ.ಎಸ್.ಸಿ.ಪಾಟೀಲರು 1983ರಲ್ಲಿ ಕರ್ನಾಟಕ ವಿ.ವಿ.ಯ ಸ್ನಾತಕೋತ್ತರ ಶಿಕ್ಷಣ ವಿಭಾಗಕ್ಕೆ ಮಂಡಿಸಿದ ಮಾಧ್ಯಮಿಕ ಶಾಲಾ ಶಿಕ್ಷಣದಲ್ಲಿ ಚಿತ್ರಕಲಾ ಶಿಕ್ಷಣ ಒಂದು ಅಧ್ಯಯನ[೭] ಎಂಬ ಸಂಶೋಧನ ಕಿರು ಪ್ರಬಂಧ ಈ ಕ್ಷೇತ್ರದಲ್ಲಿ ವಿಶ್ವವಿದ್ಯಾಲಯ ಮಟ್ಟದಲ್ಲಿ ನಡೆದ ಪ್ರಥಮ ಸಂಶೋಧನಾ ಅಧ್ಯಯನದ ಕಾರ್ಯವೆಂದು ದಾಖಲಾಗಿದೆ. 1987ರಲ್ಲಿ ಕರ್ನಾಟಕ ವಿ.ವಿ.ಧಾರವಾಡಕ್ಕೆ ಸಲ್ಲಿಸಿದ ಡಾ. ಬಿ.ಕೆ.ಹಿರೇಮಠರವರ ಕನ್ನಡ ಹಸ್ತಪ್ರತಿಗಳು ಒಂದು ಅಧ್ಯಯನ[೮] ಎಂಬ ಪಿಹೆಚ್.ಡಿ. ಮಹಾಪ್ರಬಂಧದಲ್ಲಿ ಕನ್ನಡ ಹಸ್ತಪ್ರತಿಳನ್ನು ಸಂಶೋಧನೆಯ ಮುಖ್ಯವಿಷಯವನ್ನಾಗಿಟ್ಟುಕೊಂಡು ಹಸ್ತಪ್ರತಿ ಚಿತ್ರಕಲೆಗಾಗಿ ಒಂದೆರಡು ಅಧ್ಯಾಯಗಳನ್ನು ಮೀಸಲಿಟ್ಟಿದ್ದಾರೆ. 1991ರಲ್ಲಿ ಡಾ. ಎಸ್.ಸಿ.ಪಾಟೀಲರು ಕರ್ನಾಟಕ ವಿ.ವಿ.ಗೆ ಮಂಡಿಸಿದ ಪಿಹೆಚ್.ಡಿ. ಮಹಾಪ್ರಬಂಧ ಕರ್ನಾಟಕ ಜನಪದ ಚಿತ್ರಕಲೆ[೯] ಈ ಪ್ರಭಂದದಲ್ಲಿ ಚಿತ್ರಕಲೆಯನ್ನೇ ಪಿಹೆಚ್.ಡಿ. ಅಧ್ಯಯನದ ಮುಖ್ಯ ವಿಷಯವನ್ನಾಗಿಟ್ಟುಕೊಂಡು ಅಧ್ಯಯನಮಾಡಿದ ದೃಶ್ಯಕಲಾ ಕ್ಷೇತ್ರದ ಮೊದಲ ಅಧ್ಯಯನ ಎಂಬ ಅಗ್ಗಳಿಕೆಗೆ ಪಾತ್ರವಾಗಿದೆ. ನಂತರದ ದಿನಗಳಲ್ಲಿ 1995ರಲ್ಲಿ ಡಾ. ಅ.ಲ.ನರಸಿಂಹನ್ ಅವರು ಬೆಂಗಳೂರು ವಿ.ವಿ.ಗೆ ಮಂಡಿಸಿ ಪಿಹೆಚ್.ಡಿ. ಮಹಾಪ್ರಬಂಧ ಕರ್ನಾಟಕದ ಚಿತ್ರಕಲೆಯಲ್ಲಿ ಸಾಂಸ್ಕೃತಿಕ ಅಂಶಗಳು.[೧೦] 1997ರಲ್ಲಿ ಡಾ. ಸಂಪದಾ ಭಟ್ ಅವರ ಹಿಂದೂಸ್ಥಾನಿ ಸಂಗೀತ ಹಾಗೂ ರಾಗಮಾಲ ಚಿತ್ರಗಳು.[೧೧] ಬೆಂಗಳೂರು ವಿಶ್ವವಿದ್ಯಾಲಯಕ್ಕೆ 1997ರಲ್ಲಿ ಡಾ. ಪುಷ್ಪಾ ದ್ರಾವಿಡ ಇವರು ಮಂಡಿಸಿದ ಅನಿವಾಸಿ ಭಾರತೀಯ ಕಲಾವಿದ ದಿ. ನಿಕೋಲಸ್ ರೋರಿಕ್ ಜೀವನ ಮತ್ತು ಕಲಾಕೃತಿಗಳು[೧೨] ಕುರಿತು ಅಧ್ಯಯನ ಮಾಡಿದ್ದಾರೆ.

---

೭. ಡಾ. ಎಸ್.ಸಿ ಪಾಟೀಲ್ : ಮಾಧ್ಯಮಿಕ ಶಾಲಾ ಶಿಕ್ಷಣದಲ್ಲಿ ಚಿತ್ರಕಲಾ ಶಿಕ್ಷಣ ಒಂದು ಅಧ್ಯಯನ, ಕರ್ನಾಟಕ ವಿ.ವಿ.- ೧೯೮೩

೮. ಡಾ. ಬಿ.ಕೆ.ಹಿರೇಮಠ : ಕನ್ನಡ ಹಸಪ್ರತಿಗಳು ಒಂದು ಅಧ್ಯಯನ, ಪಿಹೆಚ್.ಡಿ. ಮಹಾ ಪ್ರಬಂಧ, ಕರ್ನಾಟಕ ವಿ.ವಿ.-೧೯೮೭

೯. ಡಾ. ಎಸ್.ಸಿ. ಪಾಟೀಲ್ : ಕರ್ನಾಟಕದ ಜನಪದ ಚಿತ್ರಕಲೆ ಪಿಹೆಚ್.ಡಿ.ಮಹಾಪ್ರಬಂಧ, ಕರ್ನಾಟಕ ವಿ.ವಿ.- ೧೯೯೧

೧೦. ಡಾ. ಅ.ಲ.ನರಸಿಂಹನ್ : ಕರ್ನಾಟಕದ ಚಿತ್ರಕಲೆಯಲ್ಲಿ ಸಾಂಸ್ಕೃತಿಕ ಅಂಶಗಳು, ಪಿಹೆಚ್.ಡಿ.ಮಹಾಪ್ರಬಂಧ ಬೆಂಗಳೂರು ವಿಶ್ವ ವಿದ್ಯಾಲಯ - ೧೯೯೮

೧೧. ಡಾ. ಸಂಪದಾ ಭಟ್: ಹಿಂದುಸ್ಥಾನಿ ಸಂಗೀತ ಹಾಗೂ ರಾಗಮಾಲಾ ಚಿತ್ರಗಳು, ಪಿಹೆಚ್.ಡಿ.ಮಹಾಪ್ರಬಂಧ, ಕನ್ನಡ ವಿ.ವಿ.- ೧೯೯೮

೧೨. ಡಾ.ಪುಷ್ಪಾ ದ್ರಾವಿಡ : ಅನಿವಾಸಿ ಭಾರತೀಯ ಕಲಾವಿದ ದಿ.ನಿಕೋಲಸ್ ರೋರಿಚ್ ಜೀವನ ಮತ್ತು ಕಲಾಕೃತಿಗಳು, ಪಿಹೆಚ್.ಡಿ. ಮಹಾಪ್ರಬಂಧ, ಬೆಂಗಳೂರು ವಿ.ವಿ.ಬೆಂಗಳೂರು- ೧೯೯೭.

2001ರಲ್ಲಿ ಡಾ. ಯಾದಪ್ಪ ಪರದೇಶಿಯವರ ಉತ್ತರ ಕರ್ನಾಟಕ ಭಿತ್ತಿ ಚಿತ್ರಕಕಲೆ, ಒಂದು ಅಧ್ಯಯನ,[೧೩] 2002ರಲ್ಲಿ ಡಾ. ಶಿವಾನಂದ ಬಂಟನೂರು ಇವರು ಕರ್ನಾಟಕ ಜನಪದ ಶಿಲ್ಪಕಲೆ, ಒಂದು ಅಧ್ಯಯನ,[೧೪] 2002ರಲ್ಲಿ ಡಾ. ಗಿರೀಶ ಅವರು ಬುಡಕಟ್ಟು ಚಿತ್ರಕಲೆ,[೧೫] 2002ರಲ್ಲಿ ಡಾ. ಲಕ್ಷ್ಮೀದೇವಿಗವಾಯಿಯವರ ಕಲಾವಿದ ಎಂ.ಎ.ಚೆಟ್ಟಿಯವರ ಜೀವನ, ಕಲಾಕೃತಿಗಳು- ಒಂದು ಅಧ್ಯಯನ,[೧೬] 2002ರಲ್ಲಿ ಶರಣಪ್ಪ ಕೋಲ್ಕಾರ ಅವರ ಕೊಪ್ಪಳ-ಹಂಪಿ ಪ್ರದೇಶದ ಪ್ರಾಗಿತಿಹಾಸಿಕ ಕಾಲದ ಕಲೆ,[೧೭] 2002ರಲ್ಲಿ ಡಾ. ಸೌಮ್ಯ ಅವರ ಯಂತ್ರಾ ದಿ ವಿಜುವಲ್ ಆಫ್ ಶಂಕರಾ ಫಿಲಾಸಫಿ ವಿತ್ ರೆಫೆರೆನ್ಸ್‌ಟು ಕಂಟೆಂಪರರಿ ತಾಂತ್ರಿಕ ಆರ್ಟಿಸ್ಟ್[೧೮] ಪ್ರಮಿಳಾ ಲೋಚನ ಮೈಂಡ್, ಮ್ಯೂಸಿಕ್ ಆ್ಯಂಡ್ ಕಲರ್ ಎಕ್ಸಪೋಜಿಸ್ ಆ್ಯಂಡ್ ಡೆವೆಲಪ್ಮೆಂಟ್ ಆಫ್ ರಾಗಮಾಲಾ ಆ್ಯಂಡ್ ಕಾಂಟೆಂಪರರಿ ಪೇಂಟಿಂಗ್[೧೯] 2003ರಲ್ಲಿ ಡಾ. ವೀಣಾ ಶೇಖರ್ ಮಂಡಿಸಿದ ಎ ಸ್ಟಡಿ ಆಫ್ ಹಿಸ್ಟರಿಕಲ್ ಪೇಂಟಿಂಗ್ ಆಫ್ ಕರ್ನಾಟಕ (1780-1820),[೨೦] 2003ರಲ್ಲಿ ಡಾ. ಸಿದ್ದಲಿಂಗಸ್ವಾಮಿ ಹಿರೇಮಠ ಅವರ ಕಲಾವಿದ ಆರ್.ಎಮ್.ಹಡಪದ, ಒಂದು ಅಧ್ಯಯನ[೨೧] ಕುರಿತು ಕನ್ನಡ ವಿ.ವಿ.ಹಂಪಿಯಿಂದ ಅಧ್ಯಯನ ಮಾಡಿದ್ದಾರೆ.

2003ರಲ್ಲಿ ಡಾ. ಎಸ್.ಸಿ.ಪಾಟೀಲರು ಕರ್ನಾಟಕ ವಿ.ವಿಗೆ ಮಂಡಿಸಿದ ಎಕ್ರಿಟಿಕಲ್ ಎನಾಲಿಸಿಸ್ ಆಫ್ ಆಟ್ ಎಜ್ಯುಕೇಶನ್ ಆಟ್ ಸ್ಕೂಲ ಲೆವೆಲ್ ಇನ್ ಕರ್ನಾಟಕ ಸ್ಟೇಟ್ ವಿತ್ ಸ್ಪೆಷಲ್ ರೆಫೆರೆನ್ಸ್ ಟು ಡ್ರಾಯಿಂಗ್ ಆ್ಯಂಡ್ ಪೇಂಟಿಂಗ್[೨೨] 2004ರಲ್ಲಿ ಡಾ.ವಿ.ಎಮ್.ಬಾಗಾಯತ್ ಅವರ

---

೧೩. ಡಾ. ಯಾದಪ್ಪ ಪರದೇಶಿ : ಉತ್ತರ ಕರ್ನಾಟಕದ ಭಿತ್ತಿ ಚಿತ್ರಕಲೆ - ಒಂದು ಅಧ್ಯಯನ, ಪಿಹೆಚ್.ಡಿ.ಮಹಾಪ್ರಬಂಧ, ಕನ್ನಡ ವಿಶ್ವವಿದ್ಯಾಲಯ, ಹಂಪಿ - ೨೦೦೦.

೧೪. ಡಾ. ಶಿವಾನಂದ ಬಂಟನೂರ: ಕರ್ನಾಟಕದ ಜನಪದ ಶಿಲ್ಪಕಲೆ - ಒಂದು ಅಧ್ಯಯನ, ಪಿಹೆಚ್.ಡಿ. ಮಹಾಪ್ರಬಂಧ, ಕನ್ನಡ ವಿಶ್ವವಿದ್ಯಾಲಯ, ಹಂಪಿ - ೨೦೦೨.

೧೫. ಡಾ. ಗಿರೀಶ : ಬುಡಕಟ್ಟು ಚಿತ್ರಕಲೆ, ಪಿಹೆಚ್.ಡಿ. ಮಹಾಪ್ರಬಂಧ, ಕನ್ನಡ ವಿಶ್ವ ವಿದ್ಯಾಲಯ, ಹಂಪಿ- ೨೦೦೨

೧೬. ಡಾ. ಲಕ್ಷ್ಮೀದೇವಿ ಗವಾಯಿ : ಕಲಾವಿದ ಎಮ್.ಎ.ಚಟ್ಟಿಯವರ ಜೀವನ, ಕಲಾಕೃತಿಗಳು- ಒಂದು ಅಧ್ಯಯನ ಪಿಹೆಚ್.ಡಿ. ಮಹಾಪ್ರಬಂಧ ಕನ್ನಡ ವಿಶ್ವ ವಿದ್ಯಾಲಯ, ಹಂಪಿ- ೨೦೦೨.

೧೭. ಡಾ. ಶರಣಪ್ಪ ಕೋಲ್ಕಾರ : ಕೊಪ್ಪಳ ಹಂಪಿ ಪ್ರದೇಶದ ಪ್ರಾಗೈತಿಹಾಸಿಕ ಕಾಲದ ಕಲೆ, ಪಿಹೆಚ್.ಡಿ. ಮಹಾಪ್ರಬಂಧ ಕನ್ನಡ ವಿಶ್ವವಿದ್ಯಾಲಯ, ಹಂಪಿ- ೨೦೦೨

೧೮. ಡಾ. ಸೌಮ್ಯ : ಯಂತ್ರಾ ದ ವಿಜ್ಯುವಲ್ ಆಫ್ ಶಂಕರ ಫಿಲಾಸಫಿ ವಿತ್ ರೆಫೆರೆನ್ಸ್ ಟು ಕಾಂಟೆಂಪ್ರರಿ ತಾಂತ್ರಿಕಾ ಆರ್ಟಿಸ್ಟ್ ಪಿಹೆಚ್.ಡಿ. ಮಹಾಪ್ರಬಂಧ, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು- ೨೦೦೨.

೧೯. ಡಾ. ಪ್ರಮಿಳಾ ಲೋಚನ : ಮೈಂಡ್ ಮ್ಯೂಸಿಕ್ ಆ್ಯಂಡ್ ಕಲರ್ ಎಕ್ಸಪೋಸಿಸ್ ಆ್ಯಂಡ್ ಡವೆಲ್ಪೆಂಟ್ ಆಫ್ ರಾಗಮಾಲಾ ಆ್ಯಂಡ್ ಕಾಂಟೆಂಪರರಿ ಪೇಂಟಗ್, ಪಿಹೆಚ್.ಡಿ. ಮಹಾಪ್ರಬಂಧ ಬೆಂಗಳೂರು ವಿ.ವಿ.ಬೆಂಗಳೂರು- ೨೦೦೨.

೨೦. ಡಾ. ವೀಣಾ ಶೇಖರ : ಎ ಸ್ಟಡಿ ಆಫ್ ಹಿಸ್ಟಾರಿಕಲ್ ಪೇಂಟಂಗ್ ಆಫ್ ಕರ್ನಾಟಕ, ಪಿಹೆಚ್.ಡಿ.ಮಹಾಪ್ರಬಂಧ, ಬೆಂಗಳೂರ ವಿಶ್ವ ವಿದ್ಯಾಲಯ, ಬೆಂಗಳೂರು - ೨೦೦೩.

೨೧. ಡಾ.ಸಿದ್ದಲಿಂಗಸ್ವಾಮಿ ಹಿರೇಮಠ : ಚಿತ್ರಕಲಾವಿದ ಆರ್.ಎಂ.ಹಡಪದ ಒಂದು ಅಧ್ಯಯನ, ಪಿಹೆಚ್.ಡಿ.ಮಹಾಪ್ರಬಂಧ ಕನ್ನಡ ವಿಶ್ವವಿದ್ಯಾಲಯ, ಹಂಪಿ - ೨೦೦೩.

೨೨. ಡಾ. ಎಸ್.ಸಿ.ಪಾಟೀಲ : ಎ ಕ್ರಿಟಿಕಲ್ ಎನಾಲಿಸಿಸ್ ಆಫ್ ಆರ್ಟ್ ಎಜ್ಯೂಕೇಶನ್ ಎಟ್ ಸ್ಕೂಲ್ ಲೆವಲ್ ಇನ್ ಕರ್ನಾಟಕ ಸ್ಟೇಟ್ ವಿತ್ ಸ್ಪೇಶಲ್ ರೆಫರೆನ್ಸ್ ಟು ಡ್ರಾಯಿಂಗ್ ಆ್ಯಂಡ್ ಪೇಂಟಂಗ್, ಕರ್ನಾಟಕ ವಿಶ್ವ ವಿದ್ಯಾಲಯ- ಧಾರವಾಡ - ೨೦೦೩.

ಕರ್ನಾಟಕದ ಮುಸ್ಲಿಂ ಅರಸರ ಕಾಲದ ಚಿತ್ರಕಲೆ, ಒಂದು ಅಧ್ಯಯನ(1400-1800),[೨೩] 2004ರಲ್ಲಿ ಡಾ. ಶಶಿಕಲಾ ಹೂಗಾರ ಅವರ ಕರ್ನಾಟಕ ತೊಗಲು ಗೊಂಬೆ ಚಿತ್ರಕಲೆ ಒಂದು ಅಧ್ಯಯನ,[೨೪] 2004ರಲ್ಲಿ ಡಾ. ಶಿವಕುಮಾರ ಎ.ಓ. ಅವರ ಕರ್ನಾಟಕದ ಸಮಕಾಲೀನ ಉತ್ಸವಗಳು ಹಾಗೂ ವಾಣಿಜ್ಯ ಮೇಳಗಳ ವಿವಿಧ ಆಯಾಮಗಳು[೨೫] 2005ರಲ್ಲಿ ಡಾ. ಶಿವಪ್ರಕಾಶ ಎಲ್. ತುಕ್ಕಣ್ಣನವರ ಅವರ ಕರ್ನಾಟಕ ರಥಶಿಲ್ಪಕಲೆ ಒಂದು ಅಧ್ಯಯನ,[೨೬] ಕುರಿತ ಪ್ರಬಂಧಗಳು ಇವೆಲ್ಲ ಪಿಹೆಚ್.ಡಿ. ಮಹಾಪ್ರಬಂಧಗಳಾದರೆ 2002ರಲ್ಲಿ ಮಲ್ಲಿಕಾರ್ಜುನ ಬಾಗೋಡಿಯವರ ಎಂ.ಫಿಲ್. ಪದವಿಗಾಗಿ ಮಂಡಿಸಿದ ಚಿತ್ರಕಲಾವಿದ ಜೆ.ಎಸ್. ಖಂಡೇರಾವ-ಒಂದು ಅಧ್ಯಯನ, [೨೭] ಮತ್ತು 2003ರಲ್ಲಿ ಎ.ಎಸ್.ವಿಶ್ವನಾಥ ಅವರ ಯಕ್ಷಗಾನ ದೃಶ್ಯಕಲೆಯ ಮುಖವರ್ಣಿಕೆ ಮತ್ತು ವೇಷಭೂಷಣ.[೨೮] ಇವು ಎಂ.ಫಿಲ್. ಪ್ರಬಂಧಗಳಾಗಿವೆ. ಇವೆಲ್ಲ ಕರ್ನಾಟಕ ದೃಶ್ಯಕಲೆ ಕುರಿತಾಗಿ ಬಂದ ಸಂಶೋಧನಾ ಅಧ್ಯಯನಗಳಾಗಿದ್ದು ಈಗ ಗುಲ್ಬರ್ಗಾ, ಬೆಂಗಳೂರು, ಕರ್ನಾಟಕ ವಿ.ವಿ. ಮತ್ತು ಕನ್ನಡ ವಿ.ವಿ.ಗಳಲ್ಲಿ ಪಿಹೆಚ್.ಡಿ. ಅಧ್ಯಯನಕ್ಕೆ ಹಲವಾರು ವಿದ್ಯಾರ್ಥಿಗಳು ಸೇರ್ಪಡೆಯಾಗಿ ಅಧ್ಯಯನ ನಿರತರಾಗಿದ್ದಾರೆ. ಇದಲ್ಲದೇ ಅನೇಕ ಬಿ.ಎಫ್.ಎ. ಪದವಿ ಹಾಗೂ ಎಮ್.ವಿ.ಎ. ಪದವಿ, ಎಮ್.ಎಫ್.ಎ. ಪದವಿ ತರಗತಿಗಳಿಗೆ ಅಧ್ಯಯನದ ಭಾಗವಾಗಿ ಕಿರು ಸಂಶೋಧನಾ ಪ್ರಬಂಧಗಳು ರಚನೆಯಾಗಿದ್ದು ಅವುಗಳ ಸಂಖ್ಯೆ ನೂರೈವತ್ತಕ್ಕೂ ಮಿಕ್ಕದೆ. ಹೀಗೆ ಈ ಕ್ಷೇತ್ರದಲ್ಲಿ ಸಂಶೋಧನೆ ತೀವ್ರವಾಗಿ ಮುನ್ನಡೆಯುತ್ತಲಿದೆ.

ಹಸ್ತಪ್ರತಿ ಚಿತ್ರಕಲೆಯ ಕ್ಷೇತ್ರದಲ್ಲಿ ಇದುವರೆಗೆ ನಡೆದ ಅಧ್ಯಯನದ ಸಮೀಕ್ಷೆ:

1951ರಲ್ಲಿ ಗದುಗಿನ ತೋಂಟದಾರ್ಯ ಮಠದಿಂದ ಪ್ರಕಟಗೊಂಡ ವಿರಕ್ತ ತೋಂಟದಾರ್ಯ ವಿರಚಿತ ಶ್ರೀ ಸಿದ್ದೇಶ್ವರ ಮಹಾಪುರಾಣವು ಎಡೆಯೂರ ಸಿದ್ಧಲಿಂಗ ಮಹಾಸ್ವಾಮಿಗಳ ಪೌರಾಣಿಕ ಚರಿತ್ರೆ

---

೨೩. ಡಾ. ವ್ಹಿ.ಎಮ್. ಬಾಗಾಯತ : ಕರ್ನಾಟಕ ಮುಸ್ಲಿಂ ಅರಸರ ಕಾಲದ ಚಿತ್ರಕಲೆ ಒಂದು ಅಧ್ಯಯನ, ಪಿಹೆಚ್.ಡಿ. ಮಹಾಪ್ರಬಂಧ, ಕನ್ನಡ ವಿಶ್ವವಿದ್ಯಾಲಯ, ಹಂಪಿ - ೨೦೦೪.

೨೪. ಡಾ. ಶಶಿಕಲಾ ಹೂಗಾರ : ಕರ್ನಾಟಕದ ತೊಗಲುಗೊಂಬೆ ಚಿತ್ರಕಲೆ, ಪಿಹೆಚ್.ಡಿ. ಮಹಾಪ್ರಬಂಧ, ಕನ್ನಡ ವಿಶ್ವ ವಿದ್ಯಾಲಯ, ಹಂಪಿ- ೨೦೦೪.

೨೫. ಡಾ. ಶಿವಕುಮಾರ ಎ.ಓ: ಕರ್ನಾಟಕದ ಸಮಕಾಲಿನ ಉತ್ಸವಗಳು ಹಾಗೂ ವಾಣಿಜ್ಯ ಮೇಳಗಳ ವಿವಿಧ ಆಯಾಮಗಳು, ಪಿಹೆಚ್.ಡಿ. ಮಹಾಪ್ರಬಂಧ, ಗುಲಬರ್ಗಾ ವಿಶ್ವ ವಿದ್ಯಾಲಯ, ಗುಲಬರ್ಗಾ- ೨೦೦೪.

೨೬. ಶಿವಪ್ರಕಾಶ ಎಲ್.ತುಕ್ಕಣ್ಣವರ : ಕರ್ನಾಟಕ ರಥಶಿಲ್ಪಕಲೆ ಒಂದು ಅಧ್ಯಯನ, ಪಿಹೆಚ್.ಡಿ. ಮಹಾಪ್ರಬಂಧ ಕನ್ನಡ ವಿಶ್ವ ವಿದ್ಯಾಲಯ, ಹಂಪಿ- ೨೦೦೪

೨೭. ಮಲ್ಲಿಕಾರ್ಜುನ ಬಾಗೋಡಿ : ಚಿತ್ರಕಲಾವಿದ ಜೆ.ಎಸ್.ಖಂಡೇರಾವ್ ಒಂದು ಅಧ್ಯಯನ, ಎಂ.ಫಿಲ್ ಸಂ.ಪ್ರಬಂಧ ಕನ್ನಡ ವಿಶ್ವ ವಿದ್ಯಾಲಯ, ಹಂಪಿ- ೨೦೦೨.

೨೮. ಎ.ಎಸ್.ವಿಶ್ವನಾಥ : ಯಕ್ಷಗಾನ ದೃಶ್ಯಕಲೆಯ ಮುಖವರ್ಣಿಕೆ ಮತ್ತು ವೇಷ ಭೂಷಣಗಳು, ಎಂ.ಫಿಲ್ ಸಂ.ಪ್ರ. ಕನ್ನಡ ವಿಶ್ವವಿದ್ಯಾಲಯ, ಹಂಪಿ- ೨೦೦೩.

ಹೇಳುವ ಈ ಗ್ರಂಥದಲ್ಲಿ ಕಾಗದದ ಪ್ರತಿಯ ಮೇಲೆ ಬರೆದ 19 ರೇಖಾ ಚಿತ್ರಗಳಿವೆ. ಇಲ್ಲಿ ಕಥೆಯ ಹಿನ್ನಲೆಯಲ್ಲಿ ಚಿತ್ರಗಳು ರಚನೆಗೊಂಡಿವೆ. ಚಿತ್ರಗಳಕುರಿತಾದ ಪ್ರಾಸಂಗಿಕ ವಿವರಗಳು ಇಲ್ಲಿದೆ. ಆದರೆ ಚಿತ್ರಗಳ ಯಾವುದೇ ವಿವರಣೆಗಳು ಇರುವದಿಲ್ಲ.[೨೯]

1957 ರಲ್ಲಿ ರಾಯಚೂರ ಜಿಲ್ಲೆಯ ಕವಿತಾಳ ಗ್ರಾಮದ ಕಲ್ಮಠದ ಮ.ನಿ.ಪ್ರ. ಸಿದ್ದಲಿಂಗಸ್ವಾಮಿಗಳು ಪ್ರಕಟಿಸಿರುವ **ಚಿದೈಶ್ವರ್ಯ ಚಿದಾಭರಣ ಶಿವಾನುಭವವು** ಎನ್ನುವುದು ಉದ್ಧರಣೆಯ ಗ್ರಂಥವಾಗಿದೆ. ಇದರಲ್ಲಿ ಉದ್ಧರಣೆಗೆ ತಕ್ಕಂತೆ ರೇಖಾ ಚಿತ್ರಗಳಿವೆ. ಈ ಗ್ರಂಥವು ಬೆಳಗಾವಿ ರುದ್ರಾಕ್ಷಿ ಮಠದ ಲಿಂಗಾಯತ ಸಂಶೋಧನಾ ಅಭಿವೃದ್ಧಿ ಕೇಂದ್ರದ ನಿರ್ದೇಶಕರಾಗಿರುವ ಡಾ॥ಎಸ್.ಆರ್. ಗುಂಜಾಳರವರ ಮೇಲ್ವಿಚಾರಣೆಯಲ್ಲಿ ಈಗ ಸಂಗ್ರಹಗೊಂಡಿದೆ.[೩೦] ಉದ್ದರಣೆಯು ವೀರಶೈವ ಧಾರ್ಮಿಕ ಹಿನ್ನಲೆಯ ತತ್ವವನ್ನು ಒಳಗೊಂಡ ವಿಶಿಷ್ಟಪ್ರಕಾರದ ಚಿತ್ರ ಗ್ರಂಥವಾಗಿದೆ. ಇವುಗಳ ಕುರಿತು ಚಿತ್ರಕಲೆ ಹಿನ್ನಲೆಯ ಅಧ್ಯಯನವಾಗಿಲ್ಲ. ಚಿತ್ರಗಳನ್ನು ಇಲ್ಲಿ ಯಥಾವತ್ತಾಗಿ ಪ್ರಕಟಿಸಿದ್ದು, ಗಮನಾರ್ಹವಾಗಿದೆ.

1962 ರಲ್ಲಿ ಅ.ನ.ಕೃಷ್ಣರಾಯರು ಸಂಪಾದಿಸಿರುವ ಭಾರತೀಯ ಸಂಸ್ಕೃತಿ ದರ್ಶನ ಗ್ರಂಥದಲ್ಲಿ ಧರ್ಮ, ಆಧ್ಯಾತ್ಮ ಮುಂತಾದ 42 ವಿಷಯಗಳ ಕುರಿತು ಮಾಹಿತಿ ಇದ್ದು, ಇಲ್ಲಿ ವೇದ, ಆಗಮ, ಶಾಸ್ತ್ರಗ್ರಂಥಗಳಲ್ಲಿಯ ಚಿತ್ರಗಳಕುರಿತು ವಿವಿಧ ಲೇಖಕರು ಪ್ರಾಸಂಗಿಕವಾಗಿ ಚರ್ಚಿಸಿದ್ದಾರೆ. ಭಾರತ ಸಂಸ್ಕೃತಿ ದರ್ಶನವೇ ಅಲ್ಲಿ ಅಡಕವಾಗಿದೆ.[೩೧] 1962ರಲ್ಲಿ ಕೆ.ವ್ಹಿ.ಪುಟ್ಟಪ್ಪನವರು ರಸೋ ವೈ ಸಃ ಎಂಬ ಕೃತಿಯಲ್ಲಿ ವೇದಕಾಲಿನ ಧಾರ್ಮಿಕ ದೇವತೆಗಳ ಹಿನ್ನಲೆಯಲ್ಲಿ ಹುಟ್ಟಿಕೊಂಡಿರುವ ಹಸ್ತಪ್ರತಿ ಚಿತ್ರಗಳ ಸೌಂದರ್ಯ ಕುರಿತು ಚರ್ಚಿಸಿದ್ದಾರೆ. ಇಲ್ಲಿ ಕಲೆಗಳಲ್ಲಿ ರಸೋತ್ಪತ್ತಿಯ ಕುರಿತು ವಿವರವಾಗಿ ಚರ್ಚೆನಡೆಸಲಾಗಿದೆ.[೩೨] 1962ರಲ್ಲಿ ನಾರಾಯಣರಾವ ಕುಲಕರ್ಣಿಯವರು ರಚಿಸಿದ ಡೆಕ್ಕನ್ ವರ್ಣ ಚಿತ್ರಗಳು ಲೇಖನವು ದಕ್ಷಿಣ ಭಾರತದಲ್ಲಿ ಕಿರರೂಪಿ ಚಿತ್ರವನ್ನು ವಿವರಿಸುತ್ತದೆ. ಇದರಲ್ಲಿ ವರ್ಣಸಂಯೋಜನೆ ರೇಖಾ ಸಾಮರ್ಥ್ಯದ ಬಗ್ಗೆ ಲೇಖಕರು ವಿವರಿಸಿದ್ದಾರೆ.[೩೩]

1964ರಲ್ಲಿ ಡಾ.ಎಚ್.ಎಲ್.ನಾಗೇಗೌಡ ಸಂಪಾದಿಸಿರುವ ಪ್ರವಾಸಿ ಕಂಡ ಇಂಡಿಯಾ (ಭಾಗ-1 ಮತ್ತು-2)ರಲ್ಲಿ ಭಾರತೀಯ ಹಸ್ತ ಪ್ರತಿಗಳ ಬರವಣಿಗೆ ವಿನ್ಯಾಸವನ್ನು ಕುರಿತು ತಾಳಪತ್ರವನ್ನು ಕುರಿತು ಸ್ಥೂಲವಾಗಿ ವಿವರಣೆ ನೀಡಿದ್ದಾರೆ.[೩೪] 1965ರಲ್ಲಿ ಪ್ರಕಟಗೊಂಡ ಡಾ. ಜಿ.ಎಸ್. ಶಿವರುದ್ರಪ್ಪನವರ ಸಂಶೋಧನಾ ಮಹಾಪ್ರಬಂಧ **ಸೌಂದರ್ಯ ಸಮೀಕ್ಷೆ** ಗ್ರಂಥವು ಹಸ್ತಪ್ರತಿ

---

೨೯. ವೀರಕ್ತ ತೋಂಟದಾರ್ಯ: ಸಿದ್ದೇಶ್ವರ ಮಹಾ ಪುರಾಣ, ಶ್ರೀಮಾನ್ ಮಹಾರಾಜ ನಿರಂಜನ ಜಗದ್ಗುರು ತೋಂಟದಾರ್ಯ ಸಂಸ್ಥಾನ ಮಠ, ಗದಗ. ೧೯೫೧

೩೦. ಶ್ರೀ ಮ.ನಿ. ಸಿದ್ದಲಿಂಗ ಸ್ವಾಮಿಗಳು:ಚಿದೈಶ್ವರ್ಯ ಚಿದಾಭರಣ ಶಿವಾನುಭವ, ಕಲ್ಮಠ ಕವಿತಾಳ.೧೯೫೭

೩೧. ಅ.ನ.ಕೃಷ್ಣರಾಯ ಸಂ : ಭಾರತೀಯ ಸಂಸ್ಕೃತಿ ದರ್ಶನ, ಸಾಹಿತ್ಯ ಮತ್ತು ಸಂಸ್ಕೃತಿ ಅಧ್ಯಯನ ಇಲಾಖೆ, ಮೈಸೂರು.೧೯೬೨

೩೨. ಕೆ.ವ್ಹಿ.ಪುಟ್ಟಪ್ಪ: ರಸೋ ವೈ ಸಃ, ಉದಯರವಿ ಪ್ರಕಾಶನ, ಬೆಂಗಳೂರು.೧೯೬೨

೩೩. ನಾರಾಯಣರಾವ ಕುಲಕರ್ಣಿ: ಡೆಕ್ಕನ್ ವರ್ಣ ಚಿತ್ರಗಳು, ಕರ್ಮವೀರ, ದೀಪಾವಳಿ ಸಂಚಿಕೆ೧೯೬೨

೩೪. ಡಾ.ಎಚ್.ಎಲ್.ನಾಗೇಗೌಡ ಸಂ : ಪ್ರವಾಸಿ ಕಂಡ ಇಂಡಿಯಾ (1 -2),ಪ್ರಸಾರಾಂಗ ಮೈಸೂರು ವಿಶ್ವವಿದ್ಯಾಲಯ, ಮೈಸೂರು.೧೯೬೪

ಚಿತ್ರಗಳಲ್ಲಿಯ ಕವಿಗಳು ಕಂಡ ಸೌಂದರ್ಯ ಪ್ರಜ್ಞೆಯ ಕುರಿತು ಅನೇಕ ಪ್ರಾಚೀನ ಗ್ರಂಥಗಳ ಮೂಲಕ ಚರ್ಚೆಯನ್ನು ಮಾಡಿದ್ದಾರೆ.[೩೫] 1966ರಲ್ಲಿ ಡಾ. ಎಸ್. ಎಲ್. ಭೈರಪ್ಪ ನವರು ಪಿಹೆಚ್.ಡಿ. ಮಹಾಪ್ರಬಂಧಕ್ಕಾಗಿ ಆಯ್ದುಕೊಂಡ ಗ್ರಂಥ ಸೌಂದರ್ಯ ಪ್ರಜ್ಞೆಯ ಸತ್ಯ ಮತ್ತು ಸೌಂದರ್ಯ ಕೃತಿಯಲ್ಲಿ ಸೌಂದರ್ಯ ಮಿಮಾಂಸೆಯನ್ನು ಕುರಿತು ಅನೇಕ ಪ್ರಾಚೀನ ಸಾಹಿತ್ಯ ಗ್ರಂಥಗಳಲ್ಲಿಯ ಚಿತ್ರಕಲಾ ಶೈಲಿ ಪ್ರಕಾರ ವಿನ್ಯಾಸಗಳ ಕುರಿತು ಚರ್ಚೆಗೆ ಒಳಪಡಿಸಿದ್ದಾರೆ. ಸಾಹಿತ್ಯ ಮತ್ತು ಚಿತ್ರಕಲೆಯ ಸಂಬಂಧದ ಕುರಿತು ಗಂಭೀರವಾಗಿ ಚರ್ಚಿಸಿರುವ ಗ್ರಂಥ ಇದಾಗಿದೆ.[೩೬]

1968 ರಲ್ಲಿ ಡಾ. ಹೆಚ್. ತಿಪ್ಪೇರುದ್ರ ಸ್ವಾಮಿಯವರು ಕರ್ನಾಟಕ ಸಂಸ್ಕೃತಿ ಸಮೀಕ್ಷೆ ಎಂಬ ಗ್ರಂಥವನ್ನು ಪ್ರಕಟಿಸಿದ್ದು ಇಲ್ಲಿ ಕರ್ನಾಟಕದ ಚಿತ್ರಕಲೆಯ ವಿವರವಾದ ಅಧ್ಯಯನವನ್ನು ನಡೆಸಲಾಗಿದೆ. ವಿಶೇಷವಾಗಿ ಮೈಸೂರ ಪ್ರದೇಶದ ಅನೇಕ ಹಸ್ತಪ್ರತಿಗಳ ಚಿತ್ರಗಳ ಕುರಿತು ವ್ಯಾಪಕವಾಗಿ ಮಾಹಿತಿಯನ್ನು ಸಂಗ್ರಹಿಸಿ ಇವುಗಳ ಅಧ್ಯಯನದ ಮಹತ್ವವನ್ನು ವಿವರಿಸಿದ್ದಾರೆ. ಇದು ಹಸ್ತಪ್ರತಿ ಚಿತ್ರಕಲೆಯ ಅಧ್ಯಯನದ ಮಹತ್ವದ ಅಧ್ಯಯನ ವೆಂದು ಹೇಳಬಹುದಾಗಿದೆ.[೩೭]

1970ರಲ್ಲಿ ಎನ್. ಅನಂತರಂಗಾಚಾರ್ ಅವರ ಸಂಪಾದಕತ್ವದಲ್ಲಿ ಪ್ರಕಟವಾದ ಬೃಹತ್ ಗ್ರಂಥ **ಸಾಹಿತ್ಯ ಭಾರತಿ** ಈ ಗ್ರಂಥದಲ್ಲಿ ಅನೇಕ ಜನ ವಿದ್ವಾಂಸರು ಭಾರತೀಯ ಎಲ್ಲ ಭಾಷೆಗಳಲ್ಲಿಯ ಸಾಹಿತ್ಯ, ಧರ್ಮ ಕಲೆಗಳ ಕುರಿತು ವ್ಯಾಪಕವಾಗಿ ಅಧ್ಯಯನಮಾಡಿದ್ದಾರೆ. ಹಸ್ತಪ್ರತಿ ಚಿತ್ರಕಲೆಯನ್ನು ಭಾರತೀಯ ಮಟ್ಟದಲ್ಲಿ ಸಾಂದರ್ಭಿಕವಾಗಿ ಇಲ್ಲಿ ಅಧ್ಯಯನಕ್ಕೊಳಪಡಿಸಲಾಗಿದೆ.[೩೮] 1970ರಲ್ಲಿ ಡಾ.ಎಂ.ವಿ.ಕೃಷ್ಣರಾವ್ ಮತ್ತು ಎಂ.ಕೇಶವಭಟ್ಟ ಅವರು ಸಂಪಾದಿಸಿದ **ಕರ್ನಾಟಕದ ಇತಿಹಾಸ ದರ್ಶನ** ಎಂಬ ಗ್ರಂಥವು ಸಂಸ್ಕೃತ, ಪ್ರಾಕೃತ, ಕನ್ನಡ ಮುಂತಾದ ಭಾಷೆಯ ಹಸ್ತಪ್ರತಿಗಳು, ಸಾಹಿತ್ಯ ಕಲೆಗಳ ಕುರಿತು ಐತಿಹಾಸಿಕ ವಿವರಗಳನ್ನು ನೀಡಿದ ಮಹತ್ವದ ಗ್ರಂಥ ಇದಾಗಿದೆ. ಇಲ್ಲಿಯೂ ಕೂಡ ಅಧ್ಯಯನಕ್ಕೆ ಪೂರಕವಾಗಿ ಸಾಹಿತ್ಯ ಮತ್ತು ಚಿತ್ರಕಲೆಯನ್ನು ಅಧ್ಯಯನ ಮಾಡಲಾಗಿದೆ.[೩೯]

1970ರಲ್ಲಿ ಅ.ನ.ಕೃಷ್ಣರಾಯರು ಬರೆದ **ಚಿತ್ರಕಲೆ** ಗ್ರಂಥದಲ್ಲಿ ಚಿತ್ರಕಲೆ ಕುರಿತಾದ ಹಲವಾರು ಲೇಖನಗಳಿದ್ದು, ಅವುಗಳಲ್ಲಿ ಸಾಹಿತ್ಯ ಮತ್ತು ಚಿತ್ರಕಲೆ, ಸೌಂದರ್ಯಶಾಸ್ತ್ರ, ರಾಗಮಾಲಾ ಚಿತ್ರಗಳು ಮುಂತಾದ ಸಾಹಿತ್ಯ ಮತ್ತು ಚಿತ್ರಕಲೆಗೆ ಇರುವ ಸಂಬಂಧವನ್ನು ಇಲ್ಲಿ ಸ್ಥೂಲವಾಗಿ ಚರ್ಚಿಸಿದ್ದಾರೆ. ಚಿತ್ರಕಲೆಯನ್ನೇ ಕುರಿತು ರಚಿಸಿದ ಗ್ರಂಥ ಪುಟ್ಟದಾದರೂ ಅಮೋಘವಾದ ಕೃತಿಯು ಇದಾಗಿದೆ.[೪೦] 1971ರಲ್ಲಿ

---

೩೫. ಡಾ. ಜಿ.ಎಸ್. ಶಿವರುದ್ರಪ್ಪ: ಸೌಂದರ್ಯ ಸಮೀಕ್ಷೆ, ತಳುಕಿನ ವೆಂಕಣ್ಣಯ್ಯ ಸ್ಮಾರಕ ಗ್ರಂಥಮಾಲೆ, ಮೈಸೂರು.೧೯೬೫

೩೬. ಡಾ. ಎಸ್. ಎಲ್. ಭೈರಪ್ಪ: ಸತ್ಯ ಮತ್ತು ಸೌಂದರ್ಯ, ಸಾಹಿತ್ಯ ಭಂಡಾರ, ಜಂಗಮ ಮೇಸ್ತ್ರಿಗಲ್ಲಿ, ಬೆಂಗಳೂರು.೧೯೬೬

೩೭. ಡಾ. ಹೆಚ್. ತಿಪ್ಪೇರುದ್ರ ಸ್ವಾಮಿ: ಕರ್ನಾಟಕ ಸಂಸ್ಕೃತಿ ಸಮೀಕ್ಷೆ, ಡಿ.ವಿ.ಕೆ. ಮೂರ್ತಿ, ಮೈಸೂರು.೧೯೬೮

೩೮. ಎನ್. ಅನಂತರಂಗಾಚಾರ್ ಸಂ: ಸಾಹಿತ್ಯ ಭಾರತಿ, ಪ್ರಸಾರಾಂಗ ಮೈಸೂರು ವಿಶ್ವವಿದ್ಯಾಲಯ, ಮೈಸೂರು.೧೯೭೦

೩೯. ಡಾ.ಎಂ.ವಿ.ಕೃಷ್ಣರಾವ್ ಮತ್ತು ಎಂ.ಕೇಶವಭಟ್ಟ ಸಂ : ಕರ್ನಾಟಕದ ಇತಿಹಾಸ ದರ್ಶನ, ಕರ್ನಾಟಕ ಸಹಕಾರಿ ಪ್ರಕಾಶನ ಮಂದಿರ, ಬೆಂಗಳೂರು.೧೯೭೦

೪೦. ಅ.ನ.ಕೃಷ್ಣರಾಯ: ಚಿತ್ರಕಲೆ, ಎಚ್. ವೆಂಕಟ ರಾಮಯ್ಯ ಅಂಡ್ ಸನ್ಸ್, ವಿದ್ಯಾನಿಧಿ ಬುಕ್ ಡಿಪೋ, ಮೈಸೂರು.೧೯೭೦.

ಡಾ. ಕೆ.ಬಿ.ರಾಮಕೃಷ್ಣರಾವ್‌ರವರು ರಚಿಸಿದ **ಸೌಂದರ್ಯ ಮತ್ತು ಕಲೆ** ಈ ಗ್ರಂಥದಲ್ಲಿ ಲೇಖಕರು ಕಲೆ ಮತ್ತು ರಸಾನುಭವ ಹಾಗೂ ಸೌಂದರ್ಯದ ಕುರಿತು ಸಾಹಿತ್ಯ ಮತ್ತು ಕಲೆಯ ಕುರಿತು ಚರ್ಚೆ ಮಾಡಿದ್ದಾರೆ.[೪೧]

1972ರಲ್ಲಿ ಡಾ.ಕೆ. ಶಿವರಾಮಕಾರಂತರು ರಚಿಸಿದ **ಕರ್ನಾಟಕದಲ್ಲಿ ಚಿತ್ರಕಲೆ** ಈ ಗ್ರಂಥದಲ್ಲಿ ಕರ್ನಾಟಕದ ಭಿತ್ತಿ ಮತ್ತು ಹಸ್ತಪ್ರತಿ ಚಿತ್ರಗಳ ವಿವರದೊಂದಿಗೆ ದವಳ, ಜಯದವಳ, ಮತ್ತು ಮಹಾದವಳಗಳ ಹಸ್ತಪ್ರತಿ ಚಿತ್ರಗಳ ಕುರಿತು ವಿವರವಾಗಿ ಈ ಗ್ರಂಥದಲ್ಲಿ ಅಧ್ಯಯನ ಮಾಡಿದ್ದಾರೆ.[೪೨] ಇಲ್ಲಿ ಜೈನ ಚಿತ್ರಕಲೆಯವಿಶಿಷ್ಟಕೊಡುಗೆಯಾದ ಕಿರುರೂಪ ಚಿತ್ರಗಳ ಕುರಿತು ವಿಶೇಷವಾಗಿ ಚರ್ಚೆಮಾಡಿದ್ದಾರೆ.

1973ರಲ್ಲಿ ಡಾ.ವಿನಾಯಕ ಕೃಷ್ಣ ಗೋಕಾಕರು **ಸೌಂದರ್ಯ ಮೀಮಾಂಸೆ** ಎಂಬ ಗ್ರಂಥವನ್ನು ಹೊರ ತಂದಿದ್ದು ಅಲ್ಲಿ ಲಲಿತಕಲೆ ಮತ್ತು ವಿಶೇಷವಾಗಿ ಸಾಹಿತ್ಯ ಮತ್ತು ಚಿತ್ರಕಲೆ ಸೌಂದರ್ಯವನ್ನು ಕುರಿತು, ಚಿತ್ರಕಾವ್ಯದ ಪ್ರಸ್ತಾಪ, ಚಿತ್ರ ಮತ್ತು ಸಾಹಿತ್ಯಕ್ಕಿರುವ ಅನನ್ಯತೆಯನ್ನು ಸಾಂದರ್ಭಿಕವಾಗಿ ವಿವರಿಸಿದ್ದಾರೆ.[೪೩] 1973ರಲ್ಲಿ ಡಾ. ಜಿ. ಶ್ರೀನಿವಾಸನ್‌ರವರ **ಸೌಂದರ್ಯ ಮೀಮಾಂಸೆ** ಕೃತಿಯಲ್ಲಿ ಭಾರತೀಯ ರಸತತ್ವ, ಸೌಂದರ್ಯಪ್ರಜ್ಞೆ ಕುರಿತಾಗಿ ಚರ್ಚಿಸುವ ಸಂದರ್ಭದಲ್ಲಿ ಲಲಿತಕಲೆಗಳಲ್ಲಿ ಪ್ರಮುಖವಾಗಿ ಇರುವ ಸಾಹಿತ್ಯ ಮತ್ತು ಚಿತ್ರಕಲೆಯನ್ನು ಅವಶ್ಯವಾಗಿ ಉದಾಹರಿಸುತ್ತಾರೆ. ಮುಖ್ಯವಾಗಿ ಸೌಂದರ್ಯ ಮೀಮಾಂಸೆಯನ್ನು ಕುರಿತಾಗಿಯೇ ಇಲ್ಲಿನ ಚರ್ಚೆ ಮೀಸಲಾಗಿದೆ.[೪೪]

1973ರಲ್ಲಿ ಎಂ.ಶ್ರೀಧರಮೂರ್ತಿಯವರು **64 ಕಲೆಗಳು** ಎಂಬ ಕಿರು ಗ್ರಂಥದಲ್ಲಿ ಭಾರತೀಯ ಪ್ರಾಚೀನ 64 ಕಲೆಗಳನ್ನು ಕುರಿತು ಪರಿಚಯಿಸಿದ್ದಾರೆ. ಅದರಲ್ಲಿ ವಾತ್ಸಾಯನನ, ಕಾಮಸೂತ್ರ, ಹಸ್ತಪ್ರತಿಯ ಚಿತ್ರ ಕಲೆಗಳ ಪ್ರಕಾರಗಳನ್ನು ವಿವರಿಸಿದ್ದಾರೆ.[೪೫] 1975ರಲ್ಲಿ ಡಾ.ಕೆ. ಶಿವರಾಮ ಕಾರಂತರು **ಕರ್ನಾಟಕದಲ್ಲಿ ಚಿತ್ರಕಲೆ** ಎಂಬ ಕಿರು ಗ್ರಂಥದಲ್ಲಿ ಕರ್ನಾಟಕ ಚಿತ್ರಕಲೆಯನ್ನು ಕುರಿತು ವಿವರಿಸುತ್ತ ಪ್ರಾಕೃತ ಹಸ್ತ ಪ್ರತಿಗಳಲ್ಲಿರುವ ಚಿತ್ರ ವಿನ್ಯಾಸದ ಕುರಿತು ವಿವರವನ್ನು ನೀಡಿದ್ದಾರೆ.[೪೬] 1975ರಲ್ಲಿ ಪ್ರೊ.ಎಸ್.ಕೆ.ರಾಮಚಂದ್ರರಾವ್ ಅವರು ಬರೆದ **ಮೂರ್ತಿ ಶಿಲ್ಪ ನೆಲೆ-ಹಿನ್ನೆಲೆ** ಕೃತಿಯಲ್ಲಿ ಪ್ರಾಸಂಗಿಕವಾಗಿ ಹಸ್ತಪ್ರತಿಗಳ ಹುಟ್ಟು ಬೆಳವಣಿಗೆ ರೇಖಾ ಚಿತ್ರಗಳ ರಚನಾ ವಿಧಿ-ವಿಧಾನದ ಕುರಿತು ಜೀವವಿಕಾಸದಲ್ಲಿ ದೇವತೆಗಳ ಪರಿಕಲ್ಪನೆ ಅವು ವಿಕಾಸಗೊಂಡ ವಿವರ ಮುಂತಾದವುಗಳನ್ನು ತಿಳಿಸಿದ್ದಾರೆ.[೪೭]

---

೪೧. ಡಾ. ಕೆ.ಬಿ.ರಾಮಕೃಷ್ಣರಾವ್: ಸೌಂದರ್ಯ ಮತ್ತು ಕಲೆ, ಪ್ರಸಾರಾಂಗ ಮೈಸೂರು ವಿಶ್ವವಿದ್ಯಾಲಯ, ಮೈಸೂರು.೧೯೭೧

೪೨. ಡಾ.ಕೆ. ಶಿವರಾಮಕಾರಂತ : ಕರ್ನಾಟಕದಲ್ಲಿ ಚಿತ್ರಕಲೆ, ಪ್ರಸಾರಾಂಗ ಮೈಸೂರು ವಿಶ್ವವಿದ್ಯಾಲಯ ಮೈಸೂರು.೧೯೭೨

೪೩. ಡಾ.ವಿನಾಯಕ ಕೃಷ್ಣ ಗೋಕಾಕ: ಸೌಂದರ್ಯ ಮೀಮಾಂಸೆ, ಕನ್ನಡ ಅಧ್ಯಯನ ಪೀಠ, ಪ್ರಸಾರಾಂಗ ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.೧೯೭೩

೪೪. ಡಾ. ಜಿ. ಶ್ರೀನಿವಾಸನ್: ಸೌಂದರ್ಯ ಮೀಮಾಂಸೆ, ಡಿ.ವಿ.ಕೆ. ಮೂರ್ತಿ ಮೈಸೂರು.೧೯೭೩

೪೫. ಎಂ.ಶ್ರೀಧರಮೂರ್ತಿ: 64 ಕಲೆಗಳು, ಪ್ರಸಾರಾಂಗ ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು.೧೯೭೪

೪೬. ಡಾ.ಕೆ. ಶಿವರಾಮ ಕಾರಂತ : ಕರ್ನಾಟಕದಲ್ಲಿ ಚಿತ್ರಕಲೆ, ಐ.ಬಿ.ಎಚ್.ಪ್ರಕಾಶನ, ಬೆಂಗಳೂರು.೧೯೭೫

೪೭. ಪ್ರೊ.ಎಸ್.ಕೆ.ರಾಮಚಂದ್ರರಾವ್ : ಮೂರ್ತಿ ಶಿಲ್ಪ ನೆಲೆ-ಹಿನ್ನೆಲೆ, ಪ್ರಸಾರಾಂಗ ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು.೧೯೭೫

1976ರಲ್ಲಿ ಕೆ.ಕುಸುಮಾಕರ ನೆಲ್ಲಿಯವರ **ಅಕ್ಬರನಾಮ ಲೇಖನವು** ಮೊಗಲ್ ಕಲೆಯ ಬಗ್ಗೆ ವಿಶೇಷ ಮಾಹಿತಿಯನ್ನು ಒದಗಸುವದಲ್ಲದೆ ಮೊಗಲ್ ಪ್ರಭಾವವು ರಜಪೂತ ಮತ್ತು ಕಾಂಗ್ರಾ ಚಿತ್ರಗಳ ಹುಟ್ಟು ಕಾರಣವಾದುದನ್ನು ಲೇಖಕರು ವಿವರಿಸಿದ್ದಾರೆ.[೪೮] 1976ರಲ್ಲಿ ಪ್ರೊ.ಬಿ.ಜಿ.ಎಲ್.ಸ್ವಾಮಿಯವರು **ಹಸಿರು ಹೊನ್ನು** ಕೃತಿಯಲ್ಲಿ ಮರಗಳ ಬಗೆಗೆ ವಿಶೇಷವಾಗಿ ತಾಳೆಮರದ ಬಗೆಗೆ ವಿವರವಾದ ವೈಜ್ಞಾನಿಕ ವಿವರಣೆಯನ್ನು ನೀಡಿ ಪ್ರಾಚೀನ ಕಾಲದಲ್ಲಿ ಬರವಣಿಗೆ ಹಾಗೂ ಚಿತ್ರ ರಚನೆಯ ಸಾಧನವಾಗಿ ಈ ತಾಳೆ ಬಳಕೆಯಾಗಿರುವದನ್ನು ಪರಿಚಯಿಸಿದ್ದಾರೆ.[೪೯] 1976ರಲ್ಲಿ ಎಂ.ವಿ.ಸೀತಾರಾಮಯ್ಯನವರು **ಕಲಾನುಭವ** ಎಂಬ ಗ್ರಂಥದಲ್ಲಿ ಕನ್ನಡ ಸಾಹಿತ್ಯದ ಪ್ರಾಚೀನ ಹಸ್ತಪ್ರಗಳಲ್ಲಿ ಚಿತ್ರಕಲೆಯಲ್ಲಿ ಪರಿಶ್ರಮ ವುಳ್ಳವರು ಹಸ್ತಪ್ರತಿಗಳಲ್ಲಿ ಚಿತ್ರಗಳನ್ನು ಬಿಡಿಸುವ ಕುರಿತು ಮತ್ತು ಚಿತ್ರದಿಂದಾಗುವ ರಸಾನುಭವ ಸೌಂದರ್ಯಪ್ರಜ್ಞ ಕಲಾನುಭವಗಳನ್ನು ಉದಾಹರಣೆಯೊಂದಿಗೆ ವಿವರಿಸಿದ್ದಾರೆ.[೫೦]

1977ರಲ್ಲಿ ಎಚ್.ದೇವೀರಪ್ಪನವರು **ಕನ್ನಡ ಹಸ್ತಪ್ರತಿಗಳ ಇತಿಹಾಸ** ಕಿರು ಗ್ರಂಥದಲ್ಲಿ ಹಸ್ತಿಪ್ರತಿಗಳ ವಿವಿಧ ಆಯಾಮಗಳನ್ನು ಕುರಿತು ಹೇಳುತ್ತಾ ಹಸ್ತಪ್ರತಿ ಕಲಾವಿನ್ಯಾಸವನ್ನು ಸ್ಥೂಲವಾಗಿ ವಿವರಿಸಿದ್ದಾರೆ.[೫೧] 1978ರಲ್ಲಿ ಡಾ.ಕೆ.ಶಿವರಾಮಕಾರಂತರು **ಸ್ಮೃತಿಪಟಲದಿಂದ ಭಾಗ-2** ಕೃತಿಯಲ್ಲಿ ಚಿತ್ರಕಲೆ, ಯಕ್ಷಗಾನ, ಚಿತ್ರ ಲಿಪಿಗಳ ಸಚಿತ್ರ ಹಸ್ತಪ್ರತಿಗಳ ಕುರಿತುಚರ್ಚೆಮಾಡಿದ್ದಾರೆ. ಬಿಜಾಪೂರದ ದಖನಿ ಚಿತ್ರಕಲೆ ಮಹ್ಮದಿಯ ಹಸ್ತ ಪ್ರತಿಗಳ ಕುರಿತು ಅಧ್ಯಯನ ಮಹತ್ವವನ್ನು ತಿಳಿಸಿದ್ದಾರೆ.[೫೨] ವಿವಿಧ ಮಾಧ್ಯಮದ ಚಿತ್ರಕಲಾವಿದರನ್ನು ಈ ಅಧ್ಯಾಯದಲ್ಲಿ ಅವರ ವಿವಿಧ ರೀತಿಯ ಕಲಾ ನೈಪುಣ್ಯತೆಯನ್ನು ಇಲ್ಲಿ ಪರಿಚಯಿಸಲಾಗಿದೆ.1978 ರಲ್ಲಿ ಡಾ.ಕೆ.ಶಿವರಾಮಕಾರಂತರು **ಕಲಾಪ್ರಪಂಚ** ಗ್ರಂಥದಲ್ಲಿ ಕಲೆಯ ಬೆಳೆವಣಿಗೆಯೊಂದಿಗೆ ಹಸ್ತಪ್ರತಿ ಚಿತ್ರಕಲೆಯ ವಿವರವನ್ನು ಅವುಗಳೊಂದಿಗೆ ಅಮೂಲ್ಯವಾದ ಛಾಯಾಚಿತ್ರಗಳನ್ನು ಸಂಗ್ರಹಿಸಿದ್ದಾರೆ.[೫೩]

1981ರಲ್ಲಿ ಪ್ರೊ.ಎಸ್.ಕೆ.ರಾಮಚಂದ್ರರಾವ್‌ರವರು **ಕರ್ನಾಟಕದ ಕಲೆಗಳು ಭೂಮಿಕೆ** ಗ್ರಂಥದಲ್ಲಿ ಕನ್ನಡ ನಾಡಿನ ಕಲೆಯೊಂದಿಗೆ ಹಸ್ತಪ್ರತಿ ಚಿತ್ರಕಲೆಗೆ ಭೂಮಿಕೆಯಾಗುವ ಕಲಾ ಪ್ರಾಕಾರಗಳ ಬಗ್ಗೆಯೂ ವಿವರಿಸಿದ್ದಾರೆ.[೫೪] 1982ರಲ್ಲಿ ಡಾ.ಕೆ.ಶಿವರಾಮಕಾರಂತರು ರಚಿಸಿರುವ **ಕಲೆಯ ದರ್ಶನ** ಕೃತಿಯಲ್ಲಿ ಕಲೆಯ ಬೆಳವಣಿಗೆಯೊಂದಿಗೆ ಹಸ್ತಪ್ರತಿ ಚಿತ್ರಗಳಲ್ಲಿಯ ದಾರ್ಶನಿಕ ವಿಷಯವನ್ನು ಕುರಿತು ಆಳವಾಗಿ ಚರ್ಚಿಸಿದ್ದಾರೆ. ಅಲ್ಲಲ್ಲಿ ಅನುಭವದ ಮಾತುಗಳನ್ನು ಕಲಾವಿದರಿಗಾಗಿ ಸೂಚಿಸಿದ್ದಾರೆ.[೫೫]

---

೪೮. ಕೆ.ಕುಸುಮಾಕರ ನೆಲ್ಲಿ: ಅಕ್ಬರನಾಮ (ಲೇಖನ), ಸುಧಾ ವಾರಪತ್ರಿಕೆ, ಮೇ-೯, ೧೯೭೬

೪೯. ಪ್ರೊ.ಬಿ.ಜಿ.ಎಲ್.ಸ್ವಾಮಿ : ಹಸಿರು ಹೊನ್ನು, ಕಾವ್ಯಾಲಯ ಪ್ರಕಾಶನ,ಮೈಸೂರು.೧೯೭೬

೫೦. ಎಂ.ವಿ.ಸೀತಾರಾಮಯ್ಯ: ಕಲಾನುಭವ, ಪ್ರಸಾರಾಂಗ ಬೆಂಗಳೂರುವಿಶ್ವವಿದ್ಯಾಲಯ, ಬೆಂಗಳೂರು.೧೯೭೬

೫೧. ಎಚ್.ದೇವೀರಪ್ಪ: ಕನ್ನಡ ಹಸ್ತಪ್ರತಿಗಳ ಇತಿಹಾಸ, ಕನ್ನಡ ಸಾಹಿತ್ಯ ಪರಿಷತ್ತು ಚಾಮರಾಜಪೇಟೆ, ಬೆಂಗಳೂರು.೧೯೭೭

೫೨. ಡಾ.ಕೆ.ಶಿವರಾಮಕಾರಂತ : ಸ್ಮೃತಿಪಟಲದಿಂದ ಭಾಗ-2, ರಾಜಲಕ್ಷ್ಮಿ ಪ್ರಕಾಶನ, ಬೆಂಗಳೂರು.೧೯೭೮

೫೩. ಡಾ.ಕೆ.ಶಿವರಾಮಕಾರಂತ: ಕಲಾಪ್ರಪಂಚ, ಪ್ರಸಾರಾಂಗ ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, ೧೯೭೮

೫೪. ಪ್ರೊ.ಎಸ್.ಕೆ.ರಾಮಚಂದ್ರರಾವ್ : ಕರ್ನಾಟಕದ ಕಲೆಗಳು ಭೂಮಿಕೆ, ಪ್ರಸಾರಾಂಗ ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು.೧೯೮೧

೫೫. ಡಾ.ಕೆ.ಶಿವರಾಮಕಾರಂತ : ಕಲೆಯ ದರ್ಶನ, ರಾಜಲಕ್ಷ್ಮಿ ಪ್ರಕಾಶನ, ಬೆಂಗಳೂರು. ೧೯೮೨

1982 ರಲ್ಲಿ ಡಾ.ಕೆ.ಶಿವರಾಮಕಾರಂತರು ರಚಿಸಿರುವ **ಅಪೂರ್ವ ಪಶ್ಚಿಮ** ಸಾಹಿತ್ಯ ಕೃತಿಯಲ್ಲಿ ಭಾರತ ಮತ್ತು ಭಾರತಿಯೇತರ ದೇಶಗಳಲ್ಲಿ ಚಿತ್ರಕಲೆಯ ಪರಿಕಲ್ಪನೆಯನ್ನು ಕುರಿತು ಆಳವಾದ ಕ್ಷೇತ್ರಕಾರ್ಯವನ್ನು ನಿರ್ವಹಿಸಿ ದೇಶ ವಿದೇಶಗಳಲ್ಲಿಯ ಹಸ್ತಪ್ರತಿ ರೇಖಾ ಚಿತ್ರಗಳ ಬಗ್ಗೆಯೂ ವ್ಯಾಪಕ ಮಾಹಿತಿಯನ್ನು ಒದಗಿಸಿದ್ದಾರೆ.[೫೬] 1982ರಲ್ಲಿ ಡಾ. ಸಿದ್ಧಯ್ಯ ಪುರಾಣಿಕ ಅವರು ಸಂಪಾದಿಸಿರುವ **ಮಣಿಹ** ಗ್ರಂಥವು ಹಸ್ತಪ್ರತಿಗಳ ಕುರಿತು ಅತ್ಯಂತ ಪ್ರಮುಖವಾದ ಗ್ರಂಥವಾಗಿದೆ. ಬೆಂಗಳೂರಿನ ಬಿ.ಎಂ.ಶ್ರೀ ಸ್ಮಾರಕ ಪ್ರತಿಷ್ಠಾನದವರು ಡಾ॥ ಫ.ಗು. ಹಳಕಟ್ಟಿಯವರ ನೆನಪಿನಲ್ಲಿ ತಂದಿರುವ ಈ ಗ್ರಂಥವು ಹಸ್ತ ಪ್ರತಿಯ ಸಮಗ್ರ ಚಾರಿತ್ರೆಗೆ ಒಂದು ಚರಿತ್ರೆಯನ್ನು ಒದಗಿಸುವದಲ್ಲದೇ ಅನೇಕ ಪ್ರಬಂಧಗಳ ಮೂಲಕ ಹಸ್ತಪ್ರತಿ ಚಿತ್ರಗಳನ್ನು ಪರಿಚಯಿಸಿದೆ.[೫೭]

1983ರಲ್ಲಿ ಡಾ.ಜಿ.ಎಸ್.ಶಿವರುದ್ರಪ್ಪನವರು ರಚಿಸಿರುವ **ಕಾವ್ಯಾರ್ಥ ಚಿಂತನ** ಈ ಗ್ರಂಥದಲ್ಲಿ ಕಾವ್ಯ ಲಕ್ಷಣದೊಂದಿಗೆ ಕಲಾ ಲಕ್ಷಣವನ್ನು ಅಲಂಕಾರ ಶಾಸ್ತ್ರವನ್ನು ಕಲಾಶಾಸ್ತ್ರದಲ್ಲಿ ರಸಶಾಸ್ತ್ರವನ್ನು ಕುರಿತು ಲೇಖಕರು ವಿವರವಾದ ಮೀಮಾಂಸೆಗೆ ಒಳಪಡಿಸಿದ್ದಾರೆ.[೫೮] 1983ರಲ್ಲಿ ತಿ.ನಂ.ಶ್ರೀಕಂಠಯ್ಯನವರು **ಭಾರತೀಯ ಕಾವ್ಯ ಮೀಮಾಂಸೆ** ಕನ್ನಡ ಸಾಹಿತ್ಯದಲ್ಲಿರುವ ಕಲಾಲಕ್ಷಣ ಅಲಂಕಾರಶಾಸ್ತ್ರ, ಸೌಂದರ್ಯ, ರಸಗಳ ಕುರಿತು ಹಲವಾರು ಸಂಸ್ಕೃತದ ಹಸ್ತಪ್ರತಿಗಳ ದಾರ್ಶನಿಕರಣದ ವಿಚಾರಗಳನ್ನು ಉದಾಹರಣೆಯೊಂದಿಗೆ ಚರ್ಚಿಸಿದ್ದಾರೆ.[೫೯] 1983ರಲ್ಲಿ ರಾಷ್ಟ್ರಕವಿ ಕುವೆಂಪು ಅವರು **ದಾರ್ಶನಿಕ ಕಾವ್ಯ ಮೀಮಾಂಸೆ** ಕೃತಿಯಲ್ಲಿ ಕಲಾತ್ಮಕ ಅನುಭೂತಿ ಮತ್ತು ರಸವಿವರದಬಗ್ಗೆ ವಿವರಿಸಿದ್ದಾರೆ[೬೦]. 1983 ಕನ್ನಡ ಕವಿ ಕುಮಾರ ವ್ಯಾಸ ರಚಿಸಿದ **ಕರ್ಣಾಟ ಭಾರತ ಕಥಾಮಂಜರಿ** ಕಥಾಮಂಜರಿ ಭಕ್ತಿ ಕಾವ್ಯದಲ್ಲಿ ಸಕಲ ವಿಷಯವನ್ನು ಬಲ್ಲ ಕವಿ ಚಿತ್ರಕಲೆಯನ್ನು ಕುರಿತುಹಲವಾರು ಪಾತ್ರಗಳ ಮುಖಾಂತರ ವಿವರಿಸಿದ್ದಾನೆ.[೬೧]

1985ರಲ್ಲಿ ಲಕ್ಷ್ಮೀಶಕವಿಯ **ಜೈಮಿನಿ ಭಾರತ** ಕಾವ್ಯವು ಸಂಸ್ಕೃತ ಭಾಷಾ ಹಿನ್ನಲೆಯಿಂದ ಬಂದಿದ್ದರೂ ಅದು ಕನ್ನಡದ ಕೃತಿಯಂತೆ ಗೋಚರಿಸುತ್ತಿದೆ. ಇದರಲ್ಲಿ ಕವಿಯು ಭಕ್ತಿ ಭಾವದೊಂದಿಗೆ ಚಿತ್ರಕಲೆಯನ್ನೂ ಸಾಂದರ್ಭಿಕವಾಗಿ ಕಲಾತ್ಮಕ ಭಾವಗಳೊಂದಿಗೆ ವಿವರಿಸಿದ್ದಾರೆ.[೬೨]

---

೫೬. ಡಾ.ಕೆ.ಶಿವರಾಮಕಾರಂತ : ಅಪೂರ್ವ ಪಶ್ಚಿಮ, ರಾಜಲಕ್ಷ್ಮಿ ಪ್ರಕಾಶನ, ಬೆಂಗಳೂರು. ೧೯೮೨

೫೭. ಡಾ. ಸಿದ್ಧಯ್ಯ ಪುರಾಣಿಕ: ಮಣಿಹ, ಬಿ. ಎಂ. ಶ್ರೀ ಸ್ಮಾರಕ ಪ್ರತಿಷ್ಠಾನ, ಎನ್. ಆರ್. ಕಾಲೋನಿ, ಬೆಂಗಳೂರು. ೧೯೮೨

೫೮. ಡಾ.ಜಿ.ಎಸ್.ಶಿವರುದ್ರಪ್ಪ:ಕಾವ್ಯಾರ್ಥ ಚಿಂತನ, ಪ್ರಿಯದರ್ಶಿನಿ ಪ್ರಕಾಶನ, ಬೆಂಗಳೂರು.೧೯೮೩

೫೯. ತಿ.ನಂ.ಶ್ರೀಕಂಠಯ್ಯ: ಭಾರತೀಯ ಕಾವ್ಯ ಮೀಮಾಂಸೆ, ವಿಶ್ವಕನ್ನಡ ಸಮ್ಮೇಳನ, ಬೆಂಗಳೂರು.೧೯೮೩

೬೦. ರಾಷ್ಟ್ರಕವಿ ಕುವೆಂಪು : ದಾರ್ಶನಿಕ ಕಾವ್ಯ ಮೀಮಾಂಸೆ, ವಿಶ್ವಕನ್ನಡ ಸಮ್ಮೇಳನ, ಬೆಂಗಳೂರು. ೧೯೮೩

೬೧. ಕುಮಾರ ವ್ಯಾಸ : ಕರ್ಣಾಟ ಭಾರತ ಕಥಾಮಂಜರಿ, ವಿಶ್ವಕನ್ನಡ ಸಾಹಿತ್ಯ ಸಮ್ಮೇಳನ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು.೧೯೮೫

೬೨. ಲಕ್ಷ್ಮೀಶ: ಜೈಮಿನಿ ಭಾರತ, ವಿಶ್ವಕನ್ನಡ ಸಾಹಿತ್ಯ ಸಮ್ಮೇಳನ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು.೧೯೮೫

1985ರಲ್ಲಿ ಡಾ.ಬಿ.ವ್ಹಿ.ಶಿರೂರ ಅವರ ಸಂಪಾದನೆಯಲ್ಲಿ ರೂಪಗೊಂಡಿರುವ **ಗೌರವ** ಈ ಗ್ರಂಥವು ಡಾ॥ಭೂಸನೂರ ಮಠ ಅವರ ಅಭಿನಂದನಾ ಗ್ರಂಥವಾಗಿದೆ ಇದರಲ್ಲಿ ವೀರಶೈವ ಧರ್ಮಾಚಾರದ ಹಲವು ವಿಷಯಗಳನ್ನು ಚರ್ಚಿಸುವುದರೊಂದಿಗೆ ಪ್ರಥಮವಾಗಿ ಡಾ॥ಜಚನಿಯವರು ವೀರಶೈವ ಉದ್ಧರಣೆ ಚಿತ್ರಗಳ ಕುರಿತು ಅಧಿಕೃತವಾದ ವಿವರಗಳನ್ನು ಒದಗಿಸಿದ್ದಾರೆ. ಇದರಲ್ಲಿ ಸಕಲ, ಕರಣ ಹಸಗೆ, ಮಂತ್ರ ಗೌಪ್ಯಗಳ ವಿವರಗಳಿವೆ.[೬೩]

1987ರಲ್ಲಿ ಕರ್ನಾಟಕ ಸರ್ಕಾರದ ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯವು ಡಾ.ವರದರಾಜ್ ಹುಯಿಲಗೋಳ ಅವರ ಸಂಪಾದಕತ್ವದಲ್ಲಿ ಪ್ರಕಟಿಸಿರುವ **ಭಾರತದ ಗೆಜಟಿಯರ್** ಈ ಗ್ರಂಥವು ಸಮಗ್ರ ಭಾರತದ ಕಲೆ ಸಾಹಿತ್ಯ, ಸಂಸ್ಕೃತಿಯೊಂದಿಗೆ ಹಸ್ತಪ್ರತಿಯ ಅಧಿಕೃತ ವಿವರವನ್ನು ನೀಡುವದಲ್ಲದೇ ನೇಪಾಳದ ಪಾನ್‌ದೊರೆಗಳ ಬಗೆಗೆ ಹಾಗೂ ಹಸ್ತಪ್ರತಿ ಚಿತ್ರ ರಚನಾ ವಿಧಾನದ ಕುರಿತು ವಿವರಿಸಲಾಗಿದೆ.[೬೪]

1987ರಲ್ಲಿ ಡಾ.ಟಿ.ವ್ಹಿ.ವೆಂಕಟಾಚಲ ಶಾಸ್ತ್ರಿಗಳು ರಚಿಸಿರುವ **ಕನ್ನಡ ಚಿತ್ರಕಾವ್ಯ** ಚಿತ್ರ ಕಾವ್ಯವು ಕನ್ನಡ ಸಾಹಿತ್ಯದಲ್ಲಿಯೇ ವಿನೂತನವಾದ ಕೃತಿಯಾಗಿದೆ. ಸಾಹಿತ್ಯ ಮತ್ತು ಕಲೆಗಳನ್ನು ಪರಿಚಯಿಸುವ ಈ ಕೃತಿಯಲ್ಲಿ ಹಸ್ತಪ್ರತಿಯ ರೇಖಾಚಿತ್ರ ಗಳನ್ನು ಸಮೃದ್ಧವಾಗಿ ಬಳಸಿಕೊಂಡು ಪದಬಂಧದಂತೆ ಕನಕದಾಸರ ಮುಂಡಿಗೆಗಳಂತೆ ಇಲ್ಲಿ ಹಸ್ತಪ್ರತಿ ರೇಖಾಚಿತ್ರ ಮತ್ತು ಕನ್ನಡ ಸಾಹಿತ್ಯಗಳ ಕುರಿತು ಚರ್ಚಿಸಲಾಗಿದೆ.[೬೫]

1989ರಲ್ಲಿ ಪ್ರೊ: ಎಂ.ಎಚ್.ಕೃಷ್ಣಯ್ಯ ಅವರಿಂದ ರೂಪಗೊಂಡ **ಕಲೆ ಮತ್ತು ರಸಸ್ವಾದನೆ** ಈ ಸಾಹಿತ್ಯ ಕೃತಿಯನ್ನು ಕರ್ನಾಟಕ ಲಲಿತಕಲಾ ಅಕಾಡೆಮಿಯವರು ಪ್ರಕಟಿಸಿದ್ದಾರೆ. ಕರ್ನಾಟಕದ ಪ್ರಾಚೀನ ಮತ್ತು ಅರ್ವಾಚೀನ ಹಸ್ತಪ್ರತಿ ಚಿತ್ರಗಳ ರಸಸ್ವಾದನೆ ಕುರಿತು ಲೇಖಕರು ಚರ್ಚಿಸಿದ್ದಾರೆ.[೬೬]

1990ರಲ್ಲಿ ನಾ. ಗೀತಾಚಾರ್ಯರು ರಚಿಸಿರುವ **ಹಸ್ತಪ್ರತಿ ಶಾಸ್ತ್ರವಿವೇಚನೆ** ಈ ಗ್ರಂಥದಲ್ಲಿ ಲೇಖಕರು ಹಸ್ತಪ್ರತಿಗಳ ಮಹತ್ವ ಅವುಗಳಿಗಿರುವ ಆಪತ್ತು ಮತ್ತು ಅವುಗಳ ನಿವಾರಣೆಗಳ ಕುರಿತು ಸಂರಕ್ಷಣಾ ಉಪಾಯಗಳನ್ನು ವಿವೇಚಿಸಿದ್ದಾರೆ. ಮತ್ತು ಪ್ರಾಚೀನ ಈ ಗ್ರಂಥಗಳನ್ನು ಉಳಿಸಿಕೊಳ್ಳುವ ವಿಧಾನವನ್ನು ವಿವರಿಸಿದ್ದಾರೆ.[೬೭]

1992ರಲ್ಲಿ ಬಿ.ಎಸ್.ಸಣ್ಣಯ್ಯನವರು ರಚಿಸಿರುವ **ಹಸ್ತಪ್ರತಿ ಶಾಸ್ತ್ರ ಪರಿಚಯ** ಗ್ರಂಥವು ಹಸ್ತಪ್ರತಿಗಳಲ್ಲಿ ವಿನೂತನವಾಗಿದ್ದು, ಹಸ್ತಪ್ರತಿ ತಜ್ಞರಾಗಿದ್ದ ಅವರು ಸಮಗ್ರವಾಗಿ ಹಸ್ತಪ್ರತಿ ಶಾಸ್ತ್ರದೊಂದಿಗೆ ಕಲಾಶಾಸ್ತ್ರಕುರಿತು ಹಸ್ತಪ್ರತಿಕಲೆ ಮತ್ತು ಸಂರಕ್ಷಣೆಯ ಕ್ರಮಗಳಬಗ್ಗೆ ವಿವರಿಸಿದ್ದಾರೆ.[೬೮]

---

೬೩. ಡಾ.ಬಿ.ವ್ಹಿ.ಶಿರೂರ ಸಂ : ಗೌರವ, ವೀರಶೈವ ಅಧ್ಯಯನ ಸಂಸ್ಥೆ,ಜ. ತೋಂಟದಾರ್ಯ ಮಠ, ಗದಗ. ೧೯೮೫

೬೪. ಡಾ.ವರದರಾಜ್ ಹುಯಿಲಗೋಳ ಸಂ : ಭಾರತದ ಗೆಜಟಿಯರ್, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು.೧೯೮೭

೬೫. ಡಾ.ಟಿ.ವ್ಹಿ.ವೆಂಕಟಾಚಲ ಶಾಸ್ತ್ರಿ: ಕನ್ನಡ ಚಿತ್ರಕಾವ್ಯ, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾಲಯ, ಮೈಸೂರು.೧೯೮೭

೬೬. ಪ್ರೊ: ಎಂ.ಎಚ್.ಕೃಷ್ಣಯ್ಯ : ಕಲೆ ಮತ್ತು ರಸಸ್ವಾದನೆ, ಕರ್ನಾಟಕ ಲಲಿತಕಲಾ ಅಕಾಡೆಮಿ ಬೆಂಗಳೂರು. ೧೯೮೯

೬೭. ನಾ. ಗೀತಾಚಾರ್ಯ : ಹಸ್ತಪ್ರತಿ ಶಾಸ್ತ್ರವಿವೇಚನೆ, ಬಿ.ಎಂ. ಶ್ರೀ ಪ್ರತಿಷ್ಠಾನ, ಎನ್.ಆರ್.ಕಾಲೋನಿ, ಬೆಂಗಳೂರು.೧೯೯೦

೬೮. ಬಿ.ಎಸ್.ಸಣ್ಣಯ್ಯ: ಹಸ್ತಪ್ರತಿ ಶಾಸ್ತ್ರಪರಿಚಯ, ಬಿ.ಎಂ. ಶ್ರೀ ಪ್ರತಿಷ್ಠಾನ, ಎನ್.ಆರ್.ಕಾಲೋನಿ, ಬೆಂಗಳೂರು.೧೯೯೨

1992ರಲ್ಲಿ ಡಾ. ಎಸ್.ಕೆ. ರಾಮಚಂದ್ರರಾವ್ ರಚಿಸಿರುವ **ಶ್ರೀ ತತ್ವನಿಧಿ** (ಸಂ. 1)ಗ್ರಂಥವು ಕರ್ನಾಟಕದ ಕಲೆ ಕಲಾವಿದರ ಬಗ್ಗೆ ಮತ್ತು ಕರ್ನಾಟಕ ಹಸ್ತಪ್ರತಿ ಚಿತ್ರಶೈಲಿಯ ಹಸ್ತಪ್ರತಿಗಳಲ್ಲಿ ಸ್ವರಚೂಡಾಮಣಿ ರಾಗಗಳಬಗೆಗೂ ಹಲವಾರು ಅತ್ಯುತ್ತಮವಾದ ಕಲಾಕೃತಿಗಳನ್ನು ಸಂಗ್ರಹಿಸಿ ಹಸ್ತಪ್ರತಿ ಚಿತ್ರಕಲೆಗೆ ಆಕರ ಗ್ರಂಥವಾಗುವಂತೆ ಈ ಕೃತಿಯನ್ನು ರಚಿಸಿದ್ದಾರೆ.[೧೯]

1992ರಲ್ಲಿ ಡಾ. ಬಿ.ಕೆ.ಹಿರೇಮಠ ಅವರು **ಕನ್ನಡ ಹಸ್ತಪ್ರತಿಗಳು ಒಂದು ಅಧ್ಯಯನ** ಎನ್ನುವ ವಿಷಯವನ್ನು ತಮ್ಮ ಮಹಾ ಪ್ರಬಂಧಕ್ಕೆ ಆಯ್ದುಕೊಂಡು ಕನ್ನಡದ ಹಸ್ತಪ್ರತಿಗಳ ಬಗ್ಗೆ ಅವುಗಳ ರಚನಾಕ್ರಮ, ಸಂರಕ್ಷಣಾ ಕ್ರಮ, ಕಲಾವಿನ್ಯಾಸ, ಆಪತ್ತುಗಳ ಕುರಿತು, ನಿವಾರಣೆಗಳ ಕುರಿತು ಕನ್ನಡದಲ್ಲಿ ಮೊದಲ ಬಾರಿಗೆ ಕನ್ನಡ ಹಸ್ತಪ್ರತಿ ಚಿತ್ರಕಲೆ ಬಗೆಗೆ ಧ್ವನಿ ಎತ್ತಿದವರಾಗಿರುತ್ತಾರೆ.[೨೦]

1993ರಲ್ಲಿ ಚಂದ್ರಕಾಂತ ಕುಸುನೂರ ಅವರು ರಚಿಸಿರುವ **ಸಾಹಿತ್ಯ ಮತ್ತು ಚಿತ್ರಕಲೆಯು** ಈ ಗ್ರಂಥವು ಸಾಹಿತ್ಯ ಮತ್ತು ಚಿತ್ರಕಲೆಗಳ ನಡುವೆ ಇರುವ ಕಂದಕವನ್ನು ನಿವಾರಿಸಿ ಸಾಹಿತ್ಯ ಮತ್ತು ಚಿತ್ರಕಲೆ ಒಂದು ಎಂಬುವದನ್ನು ಹಲವು ರೀತಿ ವಿವರಿಸಿದ್ದಾರೆ. ಮಾನವನ ಅಭಿವ್ಯಕ್ತಿ ಮಾಧ್ಯಮಗಳಾದ ಸಾಹಿತ್ಯ ಮತ್ತು ಚಿತ್ರಕಲೆಗಳು ಕರ್ನಾಟಕದ ಹಸ್ತಪ್ರತಿ ಚಿತ್ರಕಲೆಯಲ್ಲೂ ಬಿಂಬಿತವಾಗಿರುವ ವಿಷಯವನ್ನು ಹಲವು ಉದಾಹರಣೆಗಳ ಮುಖಾಂತರ ವಿವರಿಸಿದ್ದಾರೆ.[೨೧]

1993ರಲ್ಲಿ ಡಾ. ಎಂ.ಎಂ.ಕಲಬುರ್ಗಿಯವರು ರಚಿಸಿರುವ **ಕನ್ನಡ ಹಸ್ತಪ್ರತಿ ಶಾಸ್ತ್ರ** ಈ ಗ್ರಂಥವು ಕರ್ನಾಟಕದ ಹಸ್ತಪ್ರತಿ ಕಲೆಗೆ ಆಕರ ಸಾಮಗ್ರಿಗ್ರಂಥವಾಗಿದ್ದು, ಗ್ರಂಥಸ್ವರೂಪ, ಸೂಚಿಕರಣ, ಹಸ್ತಪ್ರತಿ ಕಲೆಗಳ ಸಂರಕ್ಷಣೆಗಳಂಥ ಅನೇಕ ವಿಷಯಗಳ ಮೇಲೆ ಬೆಳಕು ಚೆಲ್ಲಿದ್ದಾರೆ.[೨೨]

1993ರಲ್ಲಿ ಪಿ.ಆರ್.ತಿಪ್ಪೇಸ್ವಾಮಿಯರು ಸಂಪಾದಿಸಿರುವ **ಚಿತ್ರಕಲಾ ಪ್ರಪಂಚ** ಕೃತಿಯು ಚಿತ್ರಕಲಾ ವಿಷಯಕ್ಕೆ ಆಕರ ಗ್ರಂಥದಂತಿದೆ. ವಿವಿಧ ಲೇಖಕರಿಂದ ಕಲಾತ್ಮಕ ಸಾಹಿತ್ಯಿಕವಾದ ಅನೇಕ ಲೇಖನಗಳು ಈ ಗ್ರಂಥದಲ್ಲಿ ಇರುವದಲ್ಲದೆ ಹಸ್ತಪ್ರತಿ ಚಿತ್ರಕಲೆಯ ಕುರಿತು ಪರಿಚಯಾತ್ಮಕ ಲೇಖನವನ್ನು ಅವರು ಬರೆದಿದ್ದಾರೆ.[೨೩]

1995ರಲ್ಲಿ ಕೆ.ಎಸ್.ಶ್ರೀನಿವಾಸ ಮೂರ್ತಿ ಅವರಿಂದ ರಚಿಸಲ್ಪಟ್ಟ **ಆನಂದ ಕುಮಾರ ಸ್ವಾಮಿ** ಈ ಗ್ರಂಥದಲ್ಲಿ ಆನಂದ ಕುಮಾರ ಸ್ವಾಮಿಯವರ ಬದುಕು ಬರಹದೊಂದಿಗೆ ಹಸ್ತಪ್ರತಿ ಚಿತ್ರಕಲೆಯ ಕುರಿತು ಇರುವ ಅವರ ವಿಚಾರ ಸರಣಿಗಳನ್ನು ಚರ್ಚಿಸಲಾಗಿದೆ.[೨೪]

---

೧೯. ಡಾ. ಎಸ್.ಕೆ. ರಾಮಚಂದ್ರರಾವ್ : ಶ್ರೀ ತತ್ವನಿಧಿ, ಕನ್ನಡ ವಿಶ್ವವಿದ್ಯಾಲಯ, ಹಂಪಿ.೧೯೯೨

೨೦. ಡಾ. ಬಿ.ಕೆ.ಹಿರೇಮಠ :ಕನ್ನಡ ಹಸ್ತಪ್ರತಿಗಳು ಒಂದು ಅಧ್ಯಯನ, ವೀರಶೈವ ಅಧ್ಯಯನ ವೇದಿಕೆ, ಹಿರೇಮಠ, ಕಸಬಾ ಜಂಬಗಿ, ಜಿ. ಬಿಜಾಪುರ.೧೯೯೨

೨೧. ಚಂದ್ರಕಾಂತ ಕುಸುನೂರ : ಸಾಹಿತ್ಯ ಮತ್ತು ಚಿತ್ರಕಲೆ,ಕನ್ನಡ ಸಾಹಿತ್ಯ ಅಕಾಡೆಮಿ, ಬೆಂಗಳೂರು.೧೯೯೩

೨೨. ಡಾ. ಎಂ.ಎಂ.ಕಲಬುರ್ಗಿ: ಕನ್ನಡ ಹಸ್ತಪ್ರತಿ ಶಾಸ್ತ್ರ , ಸಮಾಜ ಪುಸ್ತಕಾಲಯ, ಧಾರವಾಡ.೧೯೯೩

೨೩. ಪಿ.ಆರ್.ತಿಪ್ಪೇಸ್ವಾಮಿ ಸಂ : ಚಿತ್ರಕಲಾ ಪ್ರಪಂಚ, ಕರ್ನಾಟಕ ಲಲಿತ ಕಲಾ ಅಕಾಡೆಮಿ, ಬೆಂಗಳೂರು.೧೯೯೩

೨೪. ಕೆ.ಎಸ್.ಶ್ರೀನಿವಾಸ ಮೂರ್ತಿ : ಆನಂದ ಕುಮಾರ ಸ್ವಾಮಿ,ಸ್ನೇಹ ಪ್ರಕಾಶನ, ಬೆಂಗಳೂರು.೧೯೯೩

1995ರಲ್ಲಿ ಪಿ.ಆರ್.ತಿಪ್ಪೇಸ್ವಾಮಿಯವರು **ಪ್ರಾಚೀನ ಭಾರತದ ಭಿತ್ತಿ ಚಿತ್ರಗಳು** ಎಂಬ ಲೇಖನದಲ್ಲಿ ಚಿತ್ರಕಲೆ ಬೆಳೆದುಬಂದ ಕ್ರಮವನ್ನು ಅದು ಭಿತ್ತಿಯಿಂದ ಹಸ್ತಪ್ರತಿಗೂ ಹಸ್ತಪ್ರತಿಯಿಂದ ಶಿಲ್ಪ ವಾಸ್ತುಶಿಲ್ಪ ಮತ್ತು ಭಿತ್ತಿಯವರೆಗೂ ಸಂಚರಿಸುವ ವಿಧಾನವನ್ನು ವಿವರಿಸಿದ್ದಾರೆ.[೭೫]

1997ರಲ್ಲಿ ಡಾ. ಕೃಷ್ಣ ಕಟ್ಟಿಯವರು ಸಂಪಾದಿಸಿರುವ **ಶ್ರೀ ಕೃಷ್ಣ ಪಾರಿಜಾತ** ಗ್ರಂಥವು ಕನ್ನಡಸಾಹಿತ್ಯದಲ್ಲಿ ಜಾನಪದ ಸಾಹಿತ್ಯ ಕೃತಿಯೊಂದಿಗೆ ಜಾನಪದ ಹಿನ್ನಲೆಯೊಂದಿಗೆ ರೇಖಾ ಚಿತ್ರಗಳನ್ನು, ವರ್ಣಚಿತ್ರಗಳನ್ನು ಒಳಗೊಂಡಿರುವ ಈ ಕೃತಿಯಾಗಿದ್ದು, ಇದರಲ್ಲಿ ಸಾಕಷ್ಟು ವರ್ಣಚಿತ್ರಗಳಿವೆ.[೭೬]

1998ರಲ್ಲಿ ಡಾ. ಎಂ.ಚಿದಾನಂದ ಮೂರ್ತಿ ಯವರಿಂದ ರಚಿಸಲ್ಪಟ್ಟಿರುವ **ವಚನ ಶೋಧ -1** ಈ ಗ್ರಂಥವು ಅನೇಕ ವೀರಶೈವ ಶರಣರ ಚಿತ್ರಗಳನ್ನು ಒಳಗೊಂಡಿವೆ. ಸಖೀಲ ಉದ್ಧರಣೆ, ಮಂತ್ರಗೌಪ್ಯಗಳ ಹಿನ್ನಲೆಯೊಂದಿಗೆ ಸಂಶೋಧಿಸಲ್ಪಟ್ಟ ಈ ಗ್ರಂಥದಲ್ಲಿ ಬಸವಣ್ಣ, ಅಲ್ಲಮಪ್ರಭು, ಅಕ್ಕಮಹಾದೇವಿಯವರ ಅನೇಕ ಶರಣರ ಸಖೀಲ ಚಿತ್ರಗಳು ಈ ಗ್ರಂಥದಲ್ಲಿವೆ.[೭೭]

1998ರಲ್ಲಿ ಡಾ. ಸದಾನಂದ ಕನವಳ್ಳಿ ಮತ್ತು ಡಾ. ವೀರಣ್ಣ ರಾಜೂರ ಇವರುಗಳ ಪರಿಶ್ರಮದಿಂದ ರೂಪಗೊಂಡಿರುವ **ಮಹಾಮಾರ್ಗ** ಗ್ರಂಥವು ಡಾ. ಎಂ.ಎಂ.ಕಲಬುರ್ಗಿಯವರ ಅಭಿನಂದನಾ ಗ್ರಂಥವಾಗಿದೆ. ಗ್ರಂಥದಲ್ಲಿ ಕಲಬುರ್ಗಿಯವರ ಬದುಕು ಬರಹವಿದ್ದರೂ ಆನುಷಂಗಿಕವಾಗಿ ಹಸ್ತಪ್ರತಿ ಚಿತ್ರಕಲೆ ಕುರಿತು ಶಂಕರ ಪಾಟೀಲ ಅವರು ಬರೆದ ಒಂದು ಲೇಖನವಿದೆ. ಅಲ್ಲಿ ಹಸ್ತಪ್ರತಿ ಚಿತ್ರಕಲೆಯ ಅಧ್ಯಯನದ ಮಹತ್ವವನ್ನು ಅವರು ವಿವರಿಸಿದ್ದಾರೆ.[೭೮]

2000ದಲ್ಲಿ ಡಾ. ಎಫ್.ಟಿ.ಹಳ್ಳಿಕೇರಿಯವರು ರಚಿಸಿರುವ **ಹಸ್ತಪ್ರತಿ ಕ್ಷೇತ್ರಕಾರ್ಯ** ಗ್ರಂಥದಲ್ಲಿ ಸಚಿತ್ರ ಹಸ್ತಪ್ರತಿಗಳ ಬಗೆಗೂ ಹಸ್ತಪ್ರತಿ ಚಿತ್ರಕಲೆ ಸಂರಕ್ಷಣಾ ಕ್ರಮಗಳ ಬಗೆಗೂ ಮಾಹಿತಿಯನ್ನು ಒದಗಿಸಿದ್ದಾರೆ.[೭೯]

2001ರಲ್ಲಿ ಡಾ. ಎಸ್.ಕೆ.ಅರುಣಿ ಅವರಿಂದ ರಚಿಸಲ್ಪಟ್ಟ **ದಖನಿ ಚಿತ್ರಕಲೆ** ಯು ಹೈದ್ರಾಬಾದ ಕರ್ನಾಟಕದಿಂದ ಮುಂಬೈಕರ್ನಾಟಕದ ಪರಿಸರದವರೆಗೂ ಬೆಳೆದುಬಂದಿರುವ ಆದಿಲ್‌ಶಾಹಿ ಮನೆತನದ ದಖನಿ ಹಸ್ತಪ್ರತಿ ಚಿತ್ರಕಲೆ ಬಗ್ಗೆ ವಿವಿರವಾದ ಮಾಹಿತಿಯನ್ನು ನೀಡಿದ್ದಾರೆ.[೮೦]

---

೭೫. ಪಿ.ಆರ್.ತಿಪ್ಪೇಸ್ವಾಮಿ : ಪ್ರಾಚೀನ ಭಾರತ ಭಿತ್ತಿ ಚಿತ್ರಗಳು, ಅಕ್ಷರ ಪ್ರಕಾಶನ, ಹೆಗ್ಗೋಡ.೧೯೯೫

೭೬. ಡಾ. ಕೃಷ್ಣ ಕಟ್ಟಿ ಸಂ: ಶ್ರೀ ಕೃಷ್ಣ ಪಾರಿಜಾತ, ಕನ್ನಡ ವಿಶ್ವವಿದ್ಯಾಲಯ, ಹಂಪಿ.೧೯೯೭

೭೭. ಡಾ. ಎಂ.ಚಿದಾನಂದ ಮೂರ್ತಿ: ವಚನ ಶೋಧ -1, ಕನ್ನಡ ಸಾಹಿತ್ಯ ಪರಿಷತ್ತು, ಚಾಮರಾಜ ಪೇಟೆ, ಬೆಂಗಳೂರು.೧೯೯೮

೭೮. ಡಾ. ಸದಾನಂದ ಕನವಳ್ಳಿ ಮತ್ತು ಡಾ. ವೀರಣ್ಣ ರಾಜೂರ : ಮಹಾಮಾರ್ಗ, ವೀರಶೈವ ಅಧ್ಯಯನ ಅಕಾಡೆಮಿ : ನಾಗನೂರು ಶ್ರೀ ರುದ್ರಾಕ್ಷಿ ಮಠ, ಬೆಳಗಾವಿ. ಮತ್ತು ವೀರಶೈವ ಅಧ್ಯಯನ ಸಂಸ್ಥೆ ಜಗದ್ಗುರು ತೋಂಟದಾರ್ಯ ಸಂಸ್ಥಾನ ಮಠ, ಗದಗ.೧೯೯೮

೭೯. ಡಾ. ಎಫ್.ಟಿ.ಹಳ್ಳಿಕೇರಿ : ಹಸ್ತಪ್ರತಿ ಕ್ಷೇತ್ರಕಾರ್ಯ, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ ಹಂಪಿ, ವಿದ್ಯಾರಣ್ಯ, ೨೦೦೦

೮೦. ಡಾ. ಎಸ್.ಕೆ.ಅರುಣಿ : ದಖನಿ ಚಿತ್ರಕಲೆ, ಕರ್ನಾಟಕ ಲಲಿತಕಲಾ ಅಕಾಡೆಮಿ, ಬೆಂಗಳೂರು.೨೦೦೧

2003ರಲ್ಲಿ ಡಾ. ಎಫ್.ಟಿ.ಹಳ್ಳಿಕೇರಿಯವರು ರಚಿಸಿರುವ ಕಂಠ ಪತ್ರಗ್ರಂಥದಲ್ಲಿ ಹಸ್ತಪ್ರತಿ ಚಿತ್ರಕಲೆಗೆ ಸಂಬಂಧಿಸಿದ ಲೇಖನಗಳಿದ್ದು, ಹಲವು ಹಸ್ತಪ್ರತಿ ಭಂಡಾರಗಳಲ್ಲಿ ಇರಬಹುದಾದ ಅನೇಕ ಹಸ್ತಪ್ರತಿ ಚಿತ್ರಗಳ ಕುರಿತು ವಿವೇಚಿಸಿದ್ದಾರೆ.[೮೧]

2003ರಲ್ಲಿ ಡಾ. ಬಿ.ಆರ್. ಹಿರೇಮಠರವರ ಪ್ರಧಾನ ಸಂಪಾದಕತ್ವದಲ್ಲಿ ಡಾ. ಎಸ್.ಸಿ.ಪಾಟೀಲ ಮತ್ತು ಸತ್ಯಾನಂದ ಪಾತ್ರೋಟ ಅವರು ಸಂಪಾದಿಸಿರುವ ನಿಜದ ನೆಲೆ ಈ ಗ್ರಂಥವು ಹಲವಾರು ವಿಷಯಗಳನ್ನೊಳಗೊಂಡ ಮಹಾನ್‌ಕೃತಿಯಾಗಿವೆ. ಈ ಗ್ರಂಥದಲ್ಲಿ 137 ವಿವಿಧ ವಿಷಯಗಳ ಮೇಲಿನ ವಿವಿಧ ಲೇಖನಗಳಿದ್ದು, ಹಸ್ತಪ್ರತಿ ಚಿತ್ರಕಲೆಗೆ ಮತ್ತು ಕರ್ನಾಟಕದ ಚಿತ್ರಕಲೆಗೆ ಬಹುದೊಡ್ಡ ಆಕರಗ್ರಂಥವಾಗಿದೆ. ಕರ್ನಾಟಕದ ಪ್ರಾಚೀನ ಗ್ರಂಥ ಅಭಿಲಶಿತಾರ್ಥದಿಂದ ಹಿಡಿದು ಆಧುನಿಕ ಚಿತ್ರಗಳ ವಿವರಗಳ ಬಗ್ಗೆಯೂ ಸಂಪಾದಕರು ವಿಷಯಗಳನ್ನು ಸಂಪಾದಿಸಿದ್ದಾರೆ. ಈ ಗ್ರಂಥವು ಹಸ್ತಪ್ರತಿ ಚಿತ್ರಕಲಾ ಕ್ಷೇತ್ರಕ್ಕೆ ದುಡಿದಿರುವ ಡಾ. ಬಿ.ಕೆ.ಹಿರೇಮಠರ ಅಭಿನಂದನಾ ಗ್ರಂಥವಾಗಿದೆ.[೮೨] ಕರ್ನಾಟಕದ ಚಿತ್ರಕಲಾ ಕ್ಷೇತ್ರದಲ್ಲಿ ಬಂದ ಈ ಗ್ರಂಥ ಒಂದು ಇತಿಹಾಸವನ್ನೇ ನಿರ್ಮಿಸಿದೆ ಎಂದರೆ ತಪ್ಪಲ್ಲ.

2003ರಲ್ಲಿ ಡಾ. ಕೃಷ್ಣ ಕಟ್ಟಿಯವರು ಬಸವರಾಜ ಸಂಕಲಿತ ಶಿವತತ್ವ ರತ್ನಾಕರ ದಲ್ಲಿರುವ ಚಿತ್ರಗಳನ್ನು ಕುರಿತು ಲೇಖನವನ್ನು ಪ್ರಕಟಿಸಿದ್ದಾರೆ. ದೊರೆ ಬಸವರಾಜನಿಗಿರುವ ಕಲಾಪ್ರಜ್ಞೆ ಯನ್ನು ಕಲೆಯ ವಿಷಯಕುರಿತು ಆಳವಾದ ತಿಳುವಳಿಕೆಯನ್ನು ಈ ಲೇಖನದಲ್ಲಿ ಲೇಖಕರು ಪ್ರಸ್ತಾಪಿಸಿದ್ದಾರೆ.[೮೩]

2003ರಲ್ಲಿ ಡಾ. ಎಸ್.ಸಿ.ಪಾಟೀಲರು ಕರ್ನಾಟಕದ ಹಸ್ತಪ್ರತಿ ಚಿತ್ರಕಲೆ ಲೇಖನದಲ್ಲಿ ಹಸ್ತಪ್ರತಿಚಿತ್ರಕಲೆಯ ಸಮಗ್ರ ವಿವರವನ್ನು ವರ್ಗೀಕರಣದೊಂದಿಗೆ ವಿವರಿಸಿದ್ದಾರೆ. ಪಿಹೆಚ್.ಡಿ. ವಿದ್ಯಾರ್ಥಿಗಳಿಗೆ ಮತ್ತು ಹಸ್ತಪ್ರತಿ ಕ್ಷೇತ್ರ ಕಾರ್ಯಮಾಡುವವರಿಗೆ ಉಪಯುಕ್ತವಾದ ಈ ಲೇಖನದಲ್ಲಿ ಹಸ್ತಪ್ರತಿಚಿತ್ರಕಲೆಯನ್ನು ಜಾನಪದ, ಶಿಷ್ಟ ಮತ್ತು ಶಿಷ್ಟ ಜಾನಪದದ ಸಮ್ಮಿಶ್ರ ಹಸ್ತಪ್ರತಿಚಿತ್ರಗಳೆಂದು ವರ್ಗೀಕರಿಸಿ ಅವುಗಳಲ್ಲಿ ಮತ್ತೆ ಉಪವಿಭಾಗಗಳನ್ನು ಮಾಡಿ ಅಧ್ಯಯನ ಮಾಡಲಾಗಿದೆ. ಹಸ್ತಪ್ರತಿ ಚಿತ್ರಕಲೆಯ ಅಧ್ಯಯನಕಾರರಿಗೆ ಇದೊಂದು ಮಾರ್ಗದರ್ಶಿ ಲೇಖನವಾಗಿದೆ.[೮೪]

2003ರಲ್ಲಿ ಡಾ. ವೈ.ಸಿ.ಭಾನುಮತಿ ಅವರು ಜೈನ ಹಸ್ತಪ್ರತಿಚಿತ್ರಕಲೆ ವಿಷಯ ಕುರಿತು

---

೮೧. ಡಾ. ಎಫ್.ಟಿ.ಹಳ್ಳಿಕೇರಿ: ಕಂಠ ಪತ್ರ, ವಿಕಾಸ ಪ್ರಕಾಶನ, ಹೊಸಪೇಟೆ. ೨೦೦೩

೮೨. ಡಾ. ಎಸ್.ಸಿ.ಪಾಟೀಲ ಮತ್ತು ಸತ್ಯಾನಂದ ಪಾತ್ರೋಟ ಸಂ: ನಿಜದ ನೆಲೆ, ವೈರಾಗ್ಯ ಮಲ್ಲಣಾರ್ಯ ಪ್ರಕಾಶನ, ಬಸವೇಶ್ವರ ವಿದ್ಯಾವರ್ಧಕ ಸಂಘ, ಬಾಗಲಕೋಟೆ,೨೦೦೩

೮೩. ಡಾ. ಎಸ್.ಸಿ.ಪಾಟೀಲ ಮತ್ತು ಸತ್ಯಾನಂದ ಪಾತ್ರೋಟ ಸಂ: ನಿಜದ ನೆಲೆ,ಪುಟ-೩೩ ವೈರಾಗ್ಯ ಮಲ್ಲಣಾರ್ಯ ಪ್ರಕಾಶನ, ಬಸವೇಶ್ವರ ವಿದ್ಯಾವರ್ಧಕ ಸಂಘ, ಬಾಗಲಕೋಟೆ,೨೦೦೩

೮೪. ಡಾ. ಎಸ್.ಸಿ.ಪಾಟೀಲ: ಕರ್ನಾಟಕದ ಹಸ್ತಪ್ರತಿ ಚಿತ್ರಕಲೆ, ವೈರಾಗ್ಯ ಮಲ್ಲಣಾರ್ಯ ಪ್ರಕಾಶನ, ಬಸವೇಶ್ವರ ವಿದ್ಯಾವರ್ಧಕ ಸಂಘ,ಬಾಗಲಕೋಟೆ, ೨೦೦೩

ಹಸ್ತಪ್ರತಿ ಚಿತ್ರಕಲೆಯ ಬಗ್ಗೆ ವಿಶೇಷವಾದ ಮಾಹಿತಿಯನ್ನು ವದಗಿಸಿದ್ದಾರೆ. ಜೈನಧರ್ಮದ ಪ್ರಾಕೃತ ಗ್ರಂಥಗಳ ಬಗೆಗೆ ಮಾಹಿತಿಯನ್ನು ನೀಡಿ ಧವಳ, ಜಯಧವಳ, ಮಹಾಧವಳದ ಬಗೆಗೂ ವಿವರಣೆ ಒದಗಿಸಿದ್ದಾರೆ.[೮೫]

2003ರಲ್ಲಿ ಡಾ. ಸ್ನೇಹಾ ಭೂಸನೂರ ಅವರು **ವೀರಶೈವ ಹಸ್ತಪ್ರತಿಗಳು - ಚಿತ್ರಕಲೆ** ವಿಷಯ ಕುರಿತು ಸಿದ್ಧಪಡಿಸಿದ ಲೇಖನವು ಶಿವಯೋಗ ಮಂದಿರದಲ್ಲಿರುವ ಹಸ್ತಪ್ರತಿಗಳಲ್ಲಿಯ ಚಿತ್ರಗಳ ಬಗೆಗೆ ಮತ್ತು ಹಸ್ತಪ್ರತಿ ಫಲಕಗಳ ಮೇಲಿರುವ ಚಿತ್ರಗಳ ಬಗೆಗೆ ವಿಶೇಷ ವಿಷಯವನ್ನು ಪ್ರಕಟಿಸಿದ್ದಾರೆ.[೮೬]

2003ರಲ್ಲಿ ಡಾ. ಕೆ.ರವಿಂದ್ರನಾಥ ಅವರು **ಉದ್ದರಣೆಗಳು - ಚಿತ್ರಕಲೆ** ಈ ಲೇಖನದಲ್ಲಿ ಉದಾಸೀನತೆಗೆ ಒಳಗಾಗಿರುವ ಉದ್ಧರಣೆ ಚಿತ್ರಗಳ ಬಗೆಗೆ ವಿಶೇಷ ಮಾಹಿತಿಯನ್ನು ಒದಗಿಸಿದ್ದಾರೆ. ಇದರಲ್ಲಿ ಮಂತ್ರಗೌಪ್ಯ, ಸಕಿಲಗಳು, ಕರಣಹಸಗೆ ಮತ್ತು ವೀರಶೈವ ಧರ್ಮದ ಅನೇಕ ಧಾರ್ಮಿಕ ವಿಷಯಗಳನ್ನು ಒದಗಿಸುವ ಚಿತ್ರಗಳ ಬಗೆಗೆ ವಿಶೇಷ ಅಧ್ಯಯನವನ್ನು ಕೈಗೊಂಡು ಈ ಲೇಖನವನ್ನು ಪ್ರಕಟಿಸಿದ್ದಾರೆ.[೮೭]

2003ರಲ್ಲಿ ಡಾ. ಅ.ಲ.ನರಸಿಂಹನ್‌ರವರು **ಮುಸ್ಲಿಂ ಹಸ್ತಪ್ರತಿಗಳು - ಚಿತ್ರಕಲೆ** ಲೇಖನದಲ್ಲಿ ಲೇಖಕರು ಆದಿಲ್‌ಶಾಹಿಯ ದಖನಿ ಚಿತ್ರಕಲೆಯಬಗ್ಗೆ ವಿವರಿಸಿದ್ದಾರೆ.[೮೮] 2003ರಲ್ಲಿ ಡಾ.ಎಫ್.ಡಿ. ಹಳ್ಳಿಕೇರಿಯವರು **ಸಚಿತ್ರ ಹಸ್ತಪ್ರತಿಗಳು -ಸ್ವರೂಪ ಮತ್ತು ಸಂಪಾದನೆ** ಲೇಖನದಲ್ಲಿ ಹಸ್ತಪ್ರತಿಗಳ ವಿವರ ಕುರಿತು ವಿವರಿಸಿದ್ದಾರೆ.[೮೯] 2003ರಲ್ಲಿ ಡಾ. ಚನ್ನಕ್ಕ ಪಾವಟೆ ಅವರು **ಜೈನ ಸಾಹಿತ್ಯ ಚಿತ್ರಕಲೆ** ಕುರಿತು ಪ್ರಸ್ತುತ ಪಡಿಸಿದ ಲೇಖನದಲ್ಲಿ ಜೈನ ಹಸ್ತ ಪ್ರತಿಗಳ ಬಗೆಗೆ ಮತ್ತು ಹಸ್ತ ಪ್ರತಿಗಳಲ್ಲಿರುವ ಚಿತ್ರಕಲೆ ಬಗೆಗೆ ಮಾಹಿತಿ ಒದಗಿಸಿದ್ದಾರೆ.[೯೦]

2003ರಲ್ಲಿ ಡಾ. ಬಿ.ವ್ಹಿ.ಮಲ್ಲಾಪೂರ ಅವರು **ವೀರಶೈವ ಸಾಹಿತ್ಯ - ಚಿತ್ರಕಲೆಯ** ಲೇಖನದಲ್ಲಿ ವೀರಶೈವ ಧರ್ಮದ ಹಿನ್ನಲೆಯಲ್ಲಿ ಶಿವ-ಶರಣರಿಗೆ ಇದ್ದ ಕಲಾಪ್ರಜ್ಞೆಯ ವಿವರವನ್ನು ವಿವರಿಸಿದ್ದಾರೆ.[೯೧] 2003ರಲ್ಲಿ ಶ್ರೀ ಪಿ.ಆರ್.ತಿಪ್ಪೇಸ್ವಾಮಿಯವರು **ಜನಪದ ಚಿತ್ರಕಲೆ** ಯ ಕುರಿತು ವಿವರವಾದ ಮಾಹಿತಿಯನ್ನು ಈ ಲೇಖನದಲ್ಲಿ ನೀಡಿದ್ದುಜನಪದ ಬದುಕು ಹಸ್ತಪ್ರತಿ ಚಿತ್ರಗಳಲ್ಲಿ

---

೮೫. ಡಾ. ಎಸ್.ಸಿ.ಪಾಟೀಲ ಮತ್ತು ಸತ್ಯಾನಂದ ಪಾತ್ರೋಟ ಸಂ: ನಿಜದ ನೆಲೆ, ಪುಟ-೩೨ ವೈರಾಗ್ಯ ಮಲ್ಲಣಾರ್ಯ ಪ್ರಕಾಶನ, ಬಸವೇಶ್ವರ ವಿದ್ಯಾವರ್ಧಕ ಸಂಘ, ಬಾಗಲಕೋಟೆ, ೨೦೦೩

೮೬. ಡಾ. ಎಸ್.ಸಿ.ಪಾಟೀಲ ಮತ್ತು ಸತ್ಯಾನಂದ ಪಾತ್ರೋಟ ಸಂ: ನಿಜದ ನೆಲೆ, ಪುಟ-೩೬ ವೈರಾಗ್ಯ ಮಲ್ಲಣಾರ್ಯ ಪ್ರಕಾಶನ, ಬಸವೇಶ್ವರ ವಿದ್ಯಾವರ್ಧಕ ಸಂಘ, ಬಾಗಲಕೋಟೆ, ೨೦೦೩

೮೭. ಡಾ. ಎಸ್.ಸಿ.ಪಾಟೀಲ ಮತ್ತು ಸತ್ಯಾನಂದ ಪಾತ್ರೋಟ ಸಂ: ನಿಜದ ನೆಲೆ, ಪುಟ-೭೧ ವೈರಾಗ್ಯ ಮಲ್ಲಣಾರ್ಯ ಪ್ರಕಾಶನ, ಬಸವೇಶ್ವರ ವಿದ್ಯಾವರ್ಧಕ ಸಂಘ, ಬಾಗಲಕೋಟೆ, ೨೦೦೩

೮೮. ಡಾ. ಎಸ್.ಸಿ.ಪಾಟೀಲ ಮತ್ತು ಸತ್ಯಾನಂದ ಪಾತ್ರೋಟ ಸಂ: ನಿಜದ ನೆಲೆ, ಪುಟ-೭೭ ವೈರಾಗ್ಯ ಮಲ್ಲಣಾರ್ಯ ಪ್ರಕಾಶನ, ಬಸವೇಶ್ವರ ವಿದ್ಯಾವರ್ಧಕ ಸಂಘ, ಬಾಗಲಕೋಟೆ, ೨೦೦೩

೮೯. ಡಾ. ಎಸ್.ಸಿ.ಪಾಟೀಲ ಮತ್ತು ಸತ್ಯಾನಂದ ಪಾತ್ರೋಟ ಸಂ: ನಿಜದ ನೆಲೆ, ಪುಟ-೯೩ ವೈರಾಗ್ಯ ಮಲ್ಲಣಾರ್ಯ ಪ್ರಕಾಶನ, ಬಸವೇಶ್ವರ ವಿದ್ಯಾವರ್ಧಕ ಸಂಘ, ಬಾಗಲಕೋಟೆ, ೨೦೦೩

೯೦. ಡಾ. ಎಸ್.ಸಿ.ಪಾಟೀಲ ಮತ್ತು ಸತ್ಯಾನಂದ ಪಾತ್ರೋಟ ಸಂ: ನಿಜದ ನೆಲೆ, ಪುಟ-೧೦೫ ವೈರಾಗ್ಯ ಮಲ್ಲಣಾರ್ಯ ಪ್ರಕಾಶನ, ಬಸವೇಶ್ವರ ವಿದ್ಯಾವರ್ಧಕ ಸಂಘ, ಬಾಗಲಕೋಟೆ, ೨೦೦೩

೯೧. ಡಾ. ಎಸ್.ಸಿ.ಪಾಟೀಲ ಮತ್ತು ಸತ್ಯಾನಂದ ಪಾತ್ರೋಟ ಸಂ: ನಿಜದ ನೆಲೆ ಪುಟ-೧೧೩ ವೈರಾಗ್ಯ ಮಲ್ಲಣಾರ್ಯ ಪ್ರಕಾಶನ, ಬಸವೇಶ್ವರ ವಿದ್ಯಾವರ್ಧಕ ಸಂಘ, ಬಾಗಲಕೋಟೆ, ೨೦೦೩

ಕಲಾತ್ಮಕವಾಗಿರುವದನ್ನು ತಿಳಿಸಿದ್ದಾರೆ.[೬೨] 2003ರಲ್ಲಿ ಡಾ. ಬಿ.ಕೆ.ಹಿರೇಮಠ ಅವರು **ಹೇಮಕೂಟದ ಮುಖಚಿತ್ರ** ಲೇಖನದಲ್ಲಿ ಸಾಂಕೇತಿಕ ಹಿನ್ನಲೆಯೊಂದಿಗೆ ಅರ್ಥವತ್ತಾದ ಚಿತ್ರವನ್ನು ರಚಿಸಿದ್ದಾರೆ.[೬೩]

2003ರಲ್ಲಿ ಡಾ. ಬಿ.ಕೆ.ಹಿರೇಮಠ ಅವರು **ಲಿಪಿ, ಲೇಖನ ಹಸ್ತಪ್ರತಿಗಳ ವಿಕಾಸ** ಲೇಖನದಲ್ಲಿ ಲೇಖಕರು ಲಿಪಿ, ಲೇಖನ ಮತ್ತು ಹಸ್ತಪ್ರತಿಗಳ ಬೆಳವಣಿಗೆಯನ್ನು ಕುರಿತು ವಿವರಿಸಿದ್ದಾರೆ.[೬೪] 2003ರಲ್ಲಿ ಡಾ. ಬಿ.ಕೆ.ಹಿರೇಮಠ ಅವರು **ಕನ್ನಡ ಓಲೆಗರಿ ಗ್ರಂಥಗಳಲ್ಲಿ ಕಲಾತ್ಮಕತೆ** ಈ ಲೇಖನದಲ್ಲಿ ಕನ್ನಡದ ಓಲೆಗರಿಗಳಲ್ಲಿ ಕಲಾತ್ಮಕತೆ ಬೆಳೆದುಬಂದುದನ್ನು ವಿವರಿಸಿದ್ದಾರೆ.[೬೫] 2003ರಲ್ಲಿ ಡಾ. ಬಿ.ಕೆ.ಹಿರೇಮಠ ಅವರು **ಬಸದಿ - ಸಾಹಿತ್ಯ ಮತ್ತು ಚಿತ್ರಸಾಹಿತ್ಯ** ಈ ಲೇಖನದಲ್ಲಿ ಜೈನ ಸಾಹಿತ್ಯದ ಹಿನ್ನಲೆಯಲ್ಲಿ ಚಿತ್ರಸಾಹಿತ್ಯ ಬೆಳೆದುಬಂದ ವಿವರವನ್ನು ಕೊಟ್ಟಿದ್ದಾರೆ.[೬೬] 2003ರಲ್ಲಿ ಡಾ. ಬಿ.ಕೆ.ಹಿರೇಮಠ ಅವರು **ಔಷಧಿ ಹಸ್ತಪ್ರತಿಗಳು** ಲೇಖನದಲ್ಲಿ ಹಸ್ತಪ್ರತಿಗಳಲ್ಲಿರುವ ಔಷಧಿಯ ವಿವರಗಳನ್ನು ಹಾಗೂ ರಸಶಾಸ್ತ್ರಗಳ ಮಾಹಿತಿಯನ್ನು ಚರ್ಚಿಸಿದ್ದಾರೆ.[೬೭] 2003ರಲ್ಲಿ ಡಾ. ಬಿ.ಕೆ.ಹಿರೇಮಠ ಅವರು **ಎಲೆಯ ಮೇಲಿನ ಚಿತ್ರಕಲೆಯ** ಲೇಖನದಲ್ಲಿ ಲೇಖಕರು ಎಲೆಯನ್ನು ಮಾಧ್ಯಮವಾಗಿಟ್ಟುಕೊಂಡು ಸಾಹಿತ್ಯ ಮತ್ತು ಚಿತ್ರಗಳು ಬೆಳೆದುದನ್ನು ವಿವರಿಸಿದ್ದಾರೆ.[೬೮]

2004ರಲ್ಲಿ ಕೆ. ಜ್ಞಾನೇಶ್ವರ ಮತ್ತು ಡಾ. ಅ.ಲ.ನರಸಿಂಹನ್ ಅವರಿಂದ ಸಂಪಾದಿಸಲ್ಪಟ್ಟಿರುವ **ಶ್ರೀ ತಿಪ್ಪಾಜಪ್ಪನವರ ರೇಖಾಚಿತ್ರಗಳು** ವಿನೂತನವಾದ ರೇಖಾ ಕಲಾಕೃತಿಗಳು ಸಂಗ್ರಹವಾಗಿದೆ. ಅಜ್ಞಾತ ಹಸ್ತಪ್ರತಿ ಕಲಾವಿದರಾಗಿದ್ದ ಶ್ರೀ ತಿಪ್ಪಾಜಿಪ್ಪ ಅವರನ್ನು ಅವರ ಕೃತಿಗಳನ್ನು ಸಂಗ್ರಹಿಸಿರುವ ಸಂಪಾದಕರು ಕಾಗದ ಪ್ರತಿಗಳ ಮೇಲೆ ಹಸ್ತಪ್ರತಿಗಳ ರೇಖಾಚಿತ್ರಗಳ ರಚನೆಯ ಮಾದರಿಗಳನ್ನು ಸಂಗ್ರಹಿಸಿಟ್ಟಿದ್ದಾರೆ.[೬೯]

ಈ ಮೇಲೆ ನಡೆದ ಅಧ್ಯಯನಗಳಲ್ಲಿ ಡಾ.ಬಿ.ಕೆ.ಹಿರೇಮಠ ಅವರು ನೇರವಾಗಿ ಹಸ್ತಪ್ರತಿ ಚಿತ್ರಕಲೆ ಕುರಿತು ತಮ್ಮ ಪಿಹೆಚ್.ಡಿ. ಮಹಾಪ್ರಬಂಧದಲ್ಲಿ ಕೆಲವು ಅಧ್ಯಾಯಗಳನ್ನು ವಿಶೇಷವಾಗಿ ಮುಡುಪಾಗಿಟ್ಟಿದ್ದಾರೆ. ಈ ಅಧ್ಯಯನಕ್ಕೆ ಬುನಾದಿಯನ್ನು ಶ್ರೀಯುತರು ಮೊದಲಬಾರಿಗೆ ಹಾಕಿಕೊಟ್ಟಿದ್ದಾರೆ. ಆದರೆ ಇವರ ಅಧ್ಯಯನವು ಕನ್ನಡ ಹಸ್ತಪ್ರತಿಗಳಿಗೆ ಮಾತ್ರ ಸೀಮಿತವಾಗಿದೆ.

---

೬೨. ಡಾ. ಎಸ್.ಸಿ.ಪಾಟೀಲ ಮತ್ತು ಸತ್ಯಾನಂದ ಪಾತ್ರೋಟ ಸಂ : ನಿಜದ ನೆಲೆ, ಪುಟ-೧೨೩ ವೈರಾಗ್ಯ ಮಲ್ಲಣಾರ್ಯ ಪ್ರಕಾಶನ, ಬಸವೇಶ್ವರ ವಿದ್ಯಾವರ್ಧಕ ಸಂಘ, ಬಾಗಲಕೋಟೆ, ೨೦೦೩

೬೩. ಡಾ. ಬಿ.ಕೆ. ಹಿರೇಮಠ: ಸೃಷ್ಟಿ, ಬಾಪುಜಿ ಗ್ರಾಮೀಣ ಅಭಿವೃದ್ಧಿ ಸಂಸ್ಥೆ, ಬಾಗಲಕೋಟ, ೨೦೦೩

೬೪. ಡಾ. ಬಿ.ಕೆ. ಹಿರೇಮಠ: ಸೃಷ್ಟಿ, ಬಾಪುಜಿ ಗ್ರಾಮೀಣ ಅಭಿವೃದ್ಧಿ ಸಂಸ್ಥೆ, ಬಾಗಲಕೋಟ, ೨೦೦೩

೬೫. ಡಾ. ಬಿ.ಕೆ. ಹಿರೇಮಠ: ಸೃಷ್ಟಿ, ಬಾಪುಜಿ ಗ್ರಾಮೀಣ ಅಭಿವೃದ್ಧಿ ಸಂಸ್ಥೆ, ಬಾಗಲಕೋಟ, ೨೦೦೩

೬೬. ಡಾ. ಬಿ.ಕೆ. ಹಿರೇಮಠ: ಸೃಷ್ಟಿ, ಬಾಪುಜಿ ಗ್ರಾಮೀಣ ಅಭಿವೃದ್ಧಿ ಸಂಸ್ಥೆ, ಬಾಗಲಕೋಟ, ೨೦೦೩

೬೭. ಡಾ. ಬಿ.ಕೆ. ಹಿರೇಮಠ: ಸೃಷ್ಟಿ, ಬಾಪುಜಿ ಗ್ರಾಮೀಣ ಅಭಿವೃದ್ಧಿ ಸಂಸ್ಥೆ, ಬಾಗಲಕೋಟ, ೨೦೦೩

೬೮. ಡಾ. ಬಿ.ಕೆ. ಹಿರೇಮಠ: ಸೃಷ್ಟಿ, ಬಾಪುಜಿ ಗ್ರಾಮೀಣ ಅಭಿವೃದ್ಧಿ ಸಂಸ್ಥೆ, ಬಾಗಲಕೋಟ, ೨೦೦೩

೬೯. ಕೆ. ಜ್ಞಾನೇಶ್ವರ ಮತ್ತು ಡಾ. ಅ.ಲ.ನರಸಿಂಹನ್ ಸಂ: ಶ್ರೀ ತಿಪ್ಪಾಜಪ್ಪನವರ ರೇಖಾಚಿತ್ರಗಳು, ಕರ್ನಾಟಕ ಶಿಲ್ಪ ಕಲಾ ಅಕಾಡೆಮಿ, ಕನ್ನಡ ಭವನ, ಬೆಂಗಳೂರು.೨೦೦೪

ಡಾ. ಎಸ್.ಸಿ.ಪಾಟೀಲರ ಕರ್ನಾಟಕ ಜಾನಪದ ಚಿತ್ರಕಲೆ ಪಿಹೆಚ್.ಡಿ. ಮಹಾಪ್ರಬಂಧದಲ್ಲಿ ಜನಪದ ಹಸ್ತಪ್ರತಿಗಳನ್ನು ಮಾತ್ರ ಅಧ್ಯಯನಕ್ಕೆ ಪೂರಕವಾಗಿ ಬಳಸಿಕೊಂಡು ಅಧ್ಯಯನ ಮಾಡಿದ್ದಾರೆ. ಈ ಮೇಲಿನ ಎರಡು ಪಿಹೆಚ್.ಡಿ.ಮಹಾಪ್ರಬಂಧಗಳು ಹಸ್ತಪ್ರತಿಚಿತ್ರಕಲೆಯ ಕುರಿತು ಸ್ಥೂಲವಾಗಿ ಅಧ್ಯಯನದ ಮಹತ್ವವನ್ನು ತಿಳಿಸಿಕೊಡುತ್ತವೆ.

ಕಲೆ, ಸಾಹಿತ್ಯ, ಸಂಸ್ಕೃತಿ ಮತ್ತು ಇತಿಹಾಸದ ಕಾಲಕೋಶಗಳಂತಿರುವ ಕರ್ನಾಟಕ ಹಸ್ತಪ್ರತಿ ಚಿತ್ರಕಲೆಯ ಅಧ್ಯಯನವು ಕರ್ನಾಟಕದಲ್ಲಿ ಪ್ರಾರಂಭವಾಗಿರುವುದು ಬಹುತಡವಾಗಿಯೇ ಎಂದು ಹೇಳಬಹುದು. ಜೈನ, ಬೌದ್ಧ, ವೀರಶೈವ ಮತ್ತು ವೈದಿಕ ಧರ್ಮಗಳ ಮೂಲಕ ಸಾಕಷ್ಟು ಉಳಿದುಕೊಂಡಿರುವ ಕರ್ನಾಟಕ ಹಸ್ತಪ್ರತಿ ಚಿತ್ರಕಲೆಯನ್ನು ನೇರವಾಗಿ ಅಭ್ಯಾಸಮಾಡದಿದ್ದರೂ ಚಿತ್ರಕಲೆಗೆ ಪೂರಕವಾಗಿ, ವ್ಯವಸ್ಥಿವಾಗಿ ಅಧ್ಯಯನವನ್ನು ಹಲವು ವಿದ್ವಾಂಸರು ಈ ಮೇಲಿನಂತೆ ಅಲ್ಲಲ್ಲಿ ಅಧ್ಯಯನಕ್ಕೆ ಅನುಗುಣವಾಗಿ ಸ್ಥೂಲವಾಗಿ ಕೈಗೊಂಡಿದ್ದಾರೆ. ಆದರೆ ಹಸ್ತಪ್ರತಿ ಚಿತ್ರಕಲೆಯ ಕುರಿತು ಸ್ವತಂತ್ರವಾಗಿ ಇಲ್ಲಿಯವರೆಗೆ ಯಾರೂ ಸಮಗ್ರವಾಗಿ ಅಧ್ಯಯನವನ್ನು ಕೈಗೊಂಡಿಲ್ಲ. ಈ ಹಿನ್ನಲೆಯಲ್ಲಿ ಪ್ರಸ್ತುತ ಅಧ್ಯಯನವನ್ನು ಕೈಕೊಳ್ಳಲಾಗಿದೆ.

ಅಧ್ಯಯನದ ಆಕರ ಸಾಮಗ್ರಿಗಳ ಸಂಗ್ರಹ ಹಾಗೂ ಬಳಕೆಯ ಕ್ರಮ.

ಮಾನವನ ಬದುಕಿನ ಸಂವೇದನಗಳಲ್ಲಿ ತೀರಾ ಹತ್ತಿರವಾದ ಕಲೆಗಳಲ್ಲಿ ಚಿತ್ರಕಲೆಯೂ ಒಂದು.ಮಾನವನು ಬರವಣಿಗೆಗಾಗಿ ಲಿಪಿಯನ್ನು ಬಳಸಿಕೊಂಡು ದಾಖಲಾತಿಯನ್ನು ಪ್ರಾರಂಭಿಸಿದನಂತರ ಕಲ್ಲು, ಮಣ್ಣು, ಚರ್ಮ ಹಾಗೂ ತಾಳೆಗರಿಗಳನ್ನು ತನ್ನ ಬದುಕಿನ ದಾಖಲಾತಿಯ ವಿಧಾನಗಳಾಗಿ ಬೆಳೆಸಿಕೊಂಡಂತೆ ಹಸ್ತಪ್ರತಿಗಳಲ್ಲಿ ತನ್ನ ಅಭಿವ್ಯಕ್ತಿಗಳನ್ನು ಚಿತ್ರಕಲೆಗಳ ಮೂಲಕವಾಗಿ ವ್ಯಕ್ತಪಡಿಸಿದ್ದಾನೆ. ರಾಜ್ಯದಾದ್ಯಂತ ಇರುವ ಹಸ್ತಪ್ರತಿ ಭಂಡಾರದಲ್ಲಿ ಸಂಗ್ರಹಿಸಿರುವ ಮಠ, ಮಂದಿರಗಳಲ್ಲಿ ಸಂಗ್ರಹಿಸಿರುವ ಮತ್ತು ವಯಕ್ತಿವಾಗಿ ಸಂಗ್ರಹಿಸಿರುವ ಕಾಗದ ಮತ್ತು ತಾಳೆಗರಿಯ ಹಸ್ತಪ್ರತಿಯನ್ನು, ಪ್ರಾಸಂಗಿಕವಾಗಿ ಸಂಗ್ರಹಿಸಿರುವ ಮಾಹಿತಿಗಳನ್ನು ಇಲ್ಲಿ ಗಮನಿಸಲಾಗಿದೆ. ಈ ಮಹಾ ಪ್ರಬಂಧದ ರಚನೆಗೆ ಎರಡು ರೀತಿಯ ಆಕರಗಳನ್ನು ಪ್ರಮುಖವಾಗಿ ಕ್ಷೇತ್ರ ಕಾರ್ಯ ಕೈಗೊಂಡು ಅಧ್ಯಯನ ಮಾಡಲಾಗಿದೆ.

I. ಮೂಲ ಆಕರಸಾಮಗ್ರಿ

II. ಆನುಷಂಗಿಕ ಆಕರಸಾಮಗ್ರಿ

ಈ ಎರಡೂ ಮೂಲಗಳಿಂದ ವಿಷಯ ಸಂಗ್ರಹ ಮಾಡಲಾಗಿದೆ.

I. ಮೂಲ ಆಕರಸಾಮಗ್ರಿ

ಮೂಲ ಆಕರಸಾಮಗ್ರಿಗಳಲ್ಲಿ ಮುಖ್ಯವಾದದ್ದು ಕ್ಷೇತ್ರಕಾರ್ಯ. ಈ ಕ್ಷೇತ್ರಕಾರ್ಯವನ್ನು ಈ ಕೆಳಗಿನಂತೆ ವರ್ಗೀಕರಣ ಮಾಡಿಕೊಳ್ಳಲಾಗಿದೆ.

1. ಹಸ್ತಪ್ರತಿ ಭಂಡಾರಗಳ ವರ್ಣನಾತ್ಮಕ ಸೂಚಿಗಳನ್ನು ಸಂಗ್ರಹಿಸುವದು.
2. ಸಂದರ್ಶನ
3. ಸಂಭಾಷಣೆ
4. ಛಾಯಾಚಿತ್ರಣ
5. ಸಂಗ್ರಹಿತ ವಿಷಯದ ಪಟ್ಟಿಗಳನ್ನು ಪಟ್ಟಿಮಾಡುವದು.

1. ಹಸ್ತಪ್ರತಿ ಭಂಡಾರಗಳ ವರ್ಣನಾತ್ಮಕ ಸೂಚಿಗಳನ್ನು ಸಂಗ್ರಹಿಸುವದು.

ಕರ್ನಾಟಕದಾದ್ಯಂತ ಇರುವಂಥ ಹಲವಾರು ವಿಶ್ವವಿದ್ಯಾಲಯಗಳ ಮಠ ಮಂದಿರಗಳ ಮತ್ತು ವಯಕ್ತಿಕ ಸಂಗ್ರಹಾಲಯಗಳಲ್ಲಿ ಇರುವ ತಾಳೆಗರಿ, ಕಾಗದ ಪ್ರತಿ, ಕಲ್ಲಚ್ಚಿನ ಪ್ರತಿಗಳಲ್ಲಿ ಹುಡುಕುವದಕ್ಕಾಗಿ ಆಯಾ ಸಂಘ ಸಂಸ್ಥೆಗಳು ಪ್ರಕಟಿಸಿರುವ ವರ್ಣನಾತ್ಮಕ ಸೂಚಿಗಳನ್ನು ಅಧ್ಯಯನ ಮಾಡುವದು. ಮತ್ತು ವಯಕ್ತಿಕವಾಗಿ ಸಂಗ್ರಹಿಸಿದ ಅನೇಕ ಹಸ್ತಪ್ರತಿ ಸಾಮಗ್ರಿಗಳನ್ನು ಸಂಗ್ರಹಕಾರರ ಮನೆಗಳಿಗೂ ಸಂಗ್ರಹಾಲಯಗಳಿಗೂ ಸಂದರ್ಶನ ಮಾಡಿ ಮಾಹಿತಿಯನ್ನು ಸಂಗ್ರಹಿಸಲಾಗಿದೆ.

2. ಸಂದರ್ಶನ

ಹಸ್ತಪ್ರತಿ ಚಿತ್ರಕಲೆ ಅತ್ಯಂತ ನಿರ್ಲಕ್ಷದ ವಿಷಯವಾಗಿದ್ದು ಈ ವಿಷಯಕುರಿತು ಅಧ್ಯಯನಕ್ಕಾಗಿ ಪ್ರಕಟಿತ ಪುಸ್ತಕದ ಬದಲಾಗಿ ಮೌಖಿಕ ಸಾಹಿತ್ಯಗಳೇ ಹೆಚ್ಚುದೊರೆಯುತ್ತವೆ. ವಿಷಯ ಸಂಗ್ರಹಣೆಗಾಗಿ ಹಲವಾರು ಹಸ್ತಪ್ರತಿ ಬಂಢಾರಗಳಿಗೆ ಭೇಟ್ಟಿನೀಡಲಾಗಿದೆ ಮತ್ತು ಹಸ್ತಪ್ರತಿ ಕ್ಷೇತ್ರಕಾರ್ಯಗಳಲ್ಲಿ ಕಾರ್ಯಮಾಡಿರುವಂತಹ ಹಿರಿಯರಾದ ಗೌ.ಮ. ಉಮಾಪತಿ ಶಾಸ್ತ್ರಿ ಡಾ.ವೈ.ಸಿ.ಭಾನುಮತಿ, ಡಾ.ವೆಂಕಟಾಚಲ ಶಾಸ್ತ್ರಿ ಎಸ್.ಶಿವಣ್ಣ ಡಾ. ಬಿ.ಕೆ.ಹಿರೇಮಠ, ಡಾ.ಬಿ.ಆರ್.ಹಿರೇಮಠ ರಂತಹ ಅನೇಕ ಹಿರಿಯರನ್ನು ಸಂದರ್ಶಿಸಿ ಹಸ್ತಪ್ರತಿಗಳ ವಿಷಯ ಕುರಿತು ಇವುಗಳಲ್ಲಿಯ ಚಿತ್ರ ಮತ್ತು ಸಾಹಿತ್ಯಗಳ ಕುರಿತು ಮಾಹಿತಿಯನ್ನು ಸಂಗ್ರಹಿಸಿ ವಿಷಯವನ್ನು ದಾಖಲುಗೊಳಿಸಿಕೊಂಡು ಪ್ರಸ್ತುತ ಅಧ್ಯಯನದಲ್ಲಿ ಬಳಸಿಕೊಳ್ಳಲಾಗಿದೆ.

3. ಸಂಭಾಷಣೆ

ಕರ್ನಾಟಕದ ಹಸ್ತಪ್ರತಿ ಚಿತ್ರಕಲೆಯಲ್ಲಿ ಕವಿಯ ಪಾಠವಿರುವಂತೆ ಪಾಠವನ್ನು ದಾಖಲುಗೊಳುಸುವ ಲಿಪಿಕಾರ, ಸಾಹಿತ್ಯವನ್ನು ಸಾದೃಶ್ಯಗೊಳಸುವ ಕಲಾಕಾರ ಅವುಗಳನ್ನು ಸಜ್ಜುಗೊಳಿಸುವ ಕಾಷ್ಠಶಿಲ್ಪಿ ಈ ರೀತಿ ಒಂದು ಹಸ್ತಪ್ರತಿ ತಯಾರಿಕೆಯಲ್ಲಿ ಕಣ್ಣಿಗೆಕಾಣದ ಹಲವಾರು ಹಸ್ತಗಳು ಕಾರ್ಯನಿರ್ವಹಿಸುತ್ತಿವೆ. ಹಸ್ತಪ್ರತಿ ಚಿತ್ರಕಲೆಯಲ್ಲಿ ಬರುವ ಚಿತ್ರಕಲಾವಿದನು ಕೇವಲ ಕಲಾವಿದನಾಗಿದ್ದು ಆತನಿಗೆ ಸಾಹಿತ್ಯ ವಲಯದ ಪರಿಚಯ ಆಗುವದಕ್ಕಿಂತ ಹೆಚ್ಚಾಗಿ ಕಲಾತ್ಮಕ ಭಾವಗಳನ್ನು ಚಿತ್ರಗಳ ಮುಖಾಂತರ ವ್ಯಕ್ತಗೊಳಿಸಬಲ್ಲವನಾಗಿರುತ್ತಾನೆ. ಇಂತಹ ವಿವರಗಳನ್ನು ಹಸ್ತಪ್ರತಿ ತಜ್ಞರಿಂದ ಸಂಗ್ರಹಿಸಿಕೊಂಡು ವಿಷಯವನ್ನು ದಾಖಲಿಸಿಕೊಳ್ಳಲಾಯಿತು.

4. ಛಾಯಾಚಿತ್ರ

ಕರ್ನಾಟಕದಾದ್ಯಂತ ಚದುರಿಕೊಂಡಿರುವ ಕರ್ನಾಟಕದ ಹಸಪ್ರತಿಗಳು [illegible] ಹಸ್ತಪ್ರತಿ ಭಂಡಾರಗಳಲ್ಲಿ ವಯುಕ್ತಿಕ ಸಂಗ್ರಹಗಳಲ್ಲಿ ಸಂಗ್ರಹಿತಗೊಂಡ [illegible] ಸಚಿತ್ರ ಹಸ್ತಪ್ರತಿಗಳನ್ನು ಮಾತ್ರ ಆಯ್ದುಕೊಂಡು ಅವುಗಳನ್ನು ಸೂಕ್ತವಾದ [illegible] ಒಳಪಡಿಸಿ ಮತ್ತು ವಿಡಿಯೊ ಚಿತ್ರಣವನ್ನು ಸಾಧ್ಯವಾದಲ್ಲಿ [illegible] [illegible]ಗಿದೆ.

[illegible]

[illegible]ದ್ಯಂತ ಚದುರಿರುವ [illegible] ಚಿತ್ರಗಳ [illegible] [illegible] ಕೊಂಡು ದೊರೆಯುವ ವಿಷಯವನ್ನು ಸೂಕ್ಷ್ಮ[illegible] ವಿವಿಧ ಬಣ್ಣ[illegible] ಪಟ್ಟಿಗ[illegible] [illegible] ಇಟ್ಟುಕೊಂಡು ಅವುಗಳನ್ನು ವ್ಯವಸ್ಥಿತ[illegible] ಅಧ್ಯಾಯಗಳ[illegible] [illegible]ಂಡು ಪ್ರಸ್ತುತ ಅಧ್ಯಯನವನ್ನು ರೂಪಿಸಲಾಗಿದೆ.

[illegible] ಆಕರಸಾಮಗ್ರಿ

ಕರ್ನಾಟಕದ ಹಸ್ತಪ್ರತಿ ಚಿತ್ರಕಲೆಯ [illegible] [illegible] [illegible]ಂದ ಸಮಗ್ರ [illegible] ಸಂಗ್ರಹಿಸಿಕೊಂಡ ನಂತರ [illegible] [illegible] ಬೇರೆ [illegible]ಗಳನ್ನು [illegible] ಅಧ್ಯಯನ [illegible] [illegible] ಗ್ರಂಥ. [illegible] ನಿಘಂಟು. [illegible] [illegible] ಕನ್ನಡೇತರ ಭಾಷೆ ಗ್ರಂಥಗಳಿಂದ ವಿಷಯವನ್ನು ಸಂಗ್ರಹಿಸಿ ಕರ್ನಾಟಕದ [illegible] [illegible] ಅಧ್ಯಯನಕ್ಕೆ [illegible]

[illegible]

ಅಧ್ಯಾಯ : ಎರಡು

ಕರ್ನಾಟಕದ ಹಸ್ತಪ್ರತಿ ಚಿತ್ರಕಲೆಯ ಐತಿಹಾಸಿಕ ನೆಲೆ - ಹಿನ್ನಲೆ

ಈ ಅಧ್ಯಾಯದಲ್ಲಿ ಹಸ್ತಪ್ರತಿ ಚಿತ್ರಕಲೆಯ ಇತಿಹಾಸವನ್ನು ಕಾಲಾನುಕ್ರಮವಾಗಿ ಕ್ರಮಬದ್ಧವಾಗಿ ಕಟ್ಟಿಕೊಡಲು ಪ್ರಯತ್ನಿಸಲಾಗಿದೆ. 1. ವೇದಕಾಲೀನ ಯುಗದ ಹಸ್ತಪ್ರತಿ ಚಿತ್ರಕಲೆ. (ಸು. ಕ್ರಿ.ಶ.ಪೂ.1500) 2. ಪ್ರಾಕೃತ ಯುಗದ ಹಸ್ತಪ್ರತಿ ಚಿತ್ರಕಲೆ.(ಸು.ಕ್ರಿ.ಶ.4ನೇ ಶತಮಾನ) 3. ಕವಿರಾಜ ಮಾರ್ಗ ಯುಗದ ಹಸ್ತಪ್ರತಿ ಚಿತ್ರಕಲೆ.(ಸು. ಕ್ರಿ.ಶ.8ನೇ ಶತಮಾನ)4. ಪಂಪಯುಗದ ಹಸ್ತಪ್ರತಿ ಚಿತ್ರಕಲೆ. (ಕ್ರಿ.ಶ. 10ನೇ ಶತಮಾನ) 5. ವಚನಯುಗದ ಹಸ್ತಪ್ರತಿ ಚಿತ್ರಕಲೆ.(ಕ್ರಿ.ಶ. 12ನೇ ಶತಮಾನ) 6. ದಾಸಯುಗದ ಹಸ್ತಪ್ರತಿ ಚಿತ್ರಕಲೆ. (ಕ್ರಿ.ಶ. 14ನೇ ಶತಮಾನ)7. ಮಹಮ್ಮದಿಯ ಯುಗದ ಹಸ್ತಪ್ರತಿ ಚಿತ್ರಕಲೆ.(ಕ್ರಿ.ಶ. 15ನೇ ಶತಮಾನ)8. ಆಧುನಿಕ ಯುಗದ ಹಸ್ತಪ್ರತಿ ಚಿತ್ರಕಲೆ. (ಕ್ರಿ.ಶ. 16ನೇ ಶತಮಾನದ ನಂತರ) ಕರ್ನಾಟಕದ ಹಸ್ತಪ್ರತಿ ಚಿತ್ರಕಲೆಯನ್ನು ಅವಲೋಕಿಸಲಾಗಿದೆ. ಹಸ್ತಪ್ರತಿಗಳ ಆಯಾ ಕಾಲಘಟ್ಟದಲ್ಲಿನ ಸಮಕಾಲೀನ ಸಾಹಿತ್ಯ ಕೃತಿಗಳನ್ನು ಮತ್ತು ಶಾಸನ, ಭಿತ್ತಿಚಿತ್ರಗಳನ್ನು ಪೂರಕವಾಗಿ, ಉಪಲಬ್ಧವಿದ್ದ ಹಸ್ತಪ್ರತಿ ಚಿತ್ರಕಲೆಯ ಗ್ರಂಥಗಳಲ್ಲಿಯ ಉಲ್ಲೇಖಗಳನ್ನು ಸಾಂದರ್ಭಿಕವಾಗಿ ಬಳಸಿಕೊಂಡು ಪ್ರಸ್ತುತ ಅಧ್ಯಯನದ ಇತಿಹಾಸವನ್ನು ಕಟ್ಟಿಕೊಡುವ ಪ್ರಯತ್ನ ಮಾಡಲಾಗಿದೆ.

ಅಧ್ಯಾಯ : ಮೂರು

ಕರ್ನಾಟಕದ ಹಸ್ತಪ್ರತಿ ಚಿತ್ರರಚನಾ ವಿಧಿ-ವಿಧಾನಗಳು

ಕನ್ನಡಿಗರು ಹಸ್ತಪ್ರತಿಗಳಿಂದ ಜ್ಞಾನರಕ್ಷಣೆಗಳಂತಹ ಪರಮ ಪ್ರಯೋಜನಗಳನ್ನು ಅವುಗಳನ್ನು ಕಲಾವಸ್ತುಗಳನ್ನಾಗಿ ರೂಪಿಸುತ್ತ ಆನಂದ ಅನುಭವಿಸುತ್ತಾ ಬಂದಿದ್ದಾರೆ. ಗ್ರಂಥ ಸಂಪಾದನೆ ಶಾಸ್ತ್ರವು ಪ್ರಚಾರವಾದಂದಿನಿಂದ ವಿಶೇಷವಾಗಿ, ಅದಕ್ಕೂ ಮೊದಲು ಕನ್ನಡ ಕೃತಿರತ್ನಗಳನ್ನು ಸಂಪಾದಿಸುವ ಕಾರ್ಯ ನಡಿದೇ ಇದೆ. ಆದರೆ ನಮ್ಮ ಪ್ರಾಚೀನರು ಹಸ್ತಪತಿಗಳನ್ನು ಕಲಾ ಪೂರ್ಣವಾಗಿ ಅಲಂಕರಿಸುತ್ತ ಬಂದಿದ್ದಾರೆ. ಕಲಾಭಿರುಚಿಯುಳ್ಳ ಹಸ್ತಪ್ರತಿ ಚಿತ್ರಕಲಾವಿದರು ತಮ್ಮ ಕಲಾಪ್ರದರ್ಶನಕ್ಕೊಂದು ಅವಕಾಶವನ್ನು ಹಸ್ತಪ್ರತಿಗಳ ಮೂಲಕ ಹೇಗೆ ಕಲ್ಪಿಸಿಕೊಟ್ಟಿದ್ದಾರೆ ಎಂಬುದರ ಕುರಿತಾಗಿ ಈ ಅಧ್ಯಯನದಲ್ಲಿ ಹಸ್ತಪ್ರತಿ ಚಿತ್ರರಚನಾ ಪೂರ್ವದ ಹಂತ ಮತ್ತು ಕಾರ್ಯನಿರ್ವಾಹಣಾ ಹಂತವೆಂದು ಪ್ರಮುಖವಾಗಿ ಎರಡು ವಿಭಾಗಗಳನ್ನು ಮಾಡಿಕೊಂಡು ಮತ್ತೆ ಅದರಲ್ಲಿ ಉಪವಿಭಾಗಗಳನ್ನು ಮಾಡಿಕೊಂಡು ಪ್ರತಿಯೊಂದನ್ನು ವಿವರವಾಗಿ ಚರ್ಚಿಸಲಾಗಿದೆ. ಹಸ್ತಪ್ರತಿ ಚಿತ್ರರಚನೆ ಪರಿಕರಗಳನ್ನು ಅವುಗಳನ್ನು ಸಂಗ್ರಹಿಸುವ, ಸಿದ್ಧಪಡಿಸಿಕೊಳ್ಳುವ ವಿಧಿ-ವಿಧಾನಗಳನ್ನು ಸಹ ಸ್ಥೂಲವಾಗಿ ಅಧ್ಯಯನ ಮಾಡಲಾಗಿದೆ.

ಹಸ್ತಪ್ರತಿ ಚಿತ್ರರಚನೆಯ ವಿವಿಧ ಹಂತಗಳನ್ನು ಶಾಸ್ತ್ರ ಗ್ರಂಥಗಳ ಮೂಲಕ ಇನ್ನಿತರ ಭಿತ್ತಿಚಿತ್ರ, ಶಾಸನ ಸಾಹಿತ್ಯದ ಮೂಲಕ ಚರ್ಚಿಸಲಾಗಿದೆ. ಫಲಕಗಳ ಮೇಲಿನ ಚಿತ್ರ ರಚನಾ

ವಿಧಾನವನ್ನು ಚರ್ಚಿಸಿದಂತೆ ಎರಡನೆಯ ಹಂತದಲ್ಲಿ ಹಸ್ತಪ್ರತಿಗಳಮೇಲೆ ಚಿತ್ರ ರಚಿಸುವಾಗಿನ ವಿವಿಧ ಹಂತಗಳನ್ನು ಚಿತ್ರಕಲಾವಿದರ ವೈವಿಧ್ಯಮಯ ಮನೋಭಾವನೆಯನ್ನು ಕುರಿತು ವಿವರಿಸಲಾಗಿದೆ.

ದೇಶಿಯವಾಗಿ ಸಿಗುವ ಬಣ್ಣ, ಕಾಡಿಗೆ, ಅರಗು, ಚಂದನಗಳನ್ನು ಶಂಖ, ಸುಣ್ಣಗಳನ್ನು ಬಳಸಿಕೊಮಡು ಚಿತ್ರರಚಿಸಿದ್ದಾರೆ. ಪ್ರಾರಂಭದಲ್ಲಿ ಕಂಠಕ್ಕೆ ಸೀಮಿತವಾಗಿದ್ದ ಹಸ್ತಪ್ರತಿಗಳು ಕುಂಚ, ವರ್ಣಗಳಿಗೂ ಸ್ಥಾನ ನೀಡಿ ಸಾಹಿತ್ಯದೊಂದಿಗೆ ಸಾಂಸ್ಕೃತಿಕವಾಗಿಯೂ ಸಮೃದ್ಧಗೊಂಡವು. ಹೀಗೆ ಹಸ್ತಪ್ರತಿ ಚಿತ್ರರಚನೆಯ ಹಲವಾರು ವಿಧಿ, ವಿಧಾನಗಳನ್ನು ಪ್ರಸ್ತುತ ಅಧ್ಯಾಯದಲ್ಲಿ ಚರ್ಚಿಸಲಾಗಿದೆ.

ಅಧ್ಯಾಯ : ನಾಲ್ಕು

ಕರ್ನಾಟಕದ ಹಸ್ತಪ್ರತಿ ಚಿತ್ರಕಲೆಯ ವಸ್ತು ವಿಷಯಗಳು.

ಹಸ್ತಪ್ರತಿ ಚಿತ್ರಕಲೆಯನ್ನು ಮುಖ್ಯವಾಗಿ ಈ ಕೆಳಗಿನ ರೀತಿಯಲ್ಲಿ ವರ್ಗೀಕರಿಸಿಕೊಂಡು ವಿವರವಾದ ಅಧ್ಯಯನವನ್ನು ಮಾಡಲಾಗಿದೆ. ಜನಪದ ಮೂಲದ ಹಸ್ತಪ್ರತಿ ಚಿತ್ರಕಲೆ, ಶಿಷ್ಟಪದ ಮೂಲದ ಹಸ್ತಪ್ರತಿಚಿತ್ರಕಲೆಗಳೆಂದು ಮತ್ತು ಶಿಷ್ಟಜನಪದ ಮೂಲದ ಹಸ್ತಪ್ರತಿ ಚಿತ್ರಕಲೆಯೆಂದು ಮುಖ್ಯವಾಗಿ ವಿಂಗಡಿಸಿಕೊಂಡು ಅಧ್ಯಯನವನ್ನು ನಡೆಸಲಾಗಿದೆ. ಜನಪದ ಮೂಲದ ಹಸ್ತಪ್ರತಿ ಚಿತ್ರಕಲೆಯಲ್ಲಿ ಜನಪದ ಹಸ್ತಪ್ರತಿಗಳನ್ನು ಆಧಾರವಾಗಿಟ್ಟುಕೊಂಡು ಅಲ್ಲಿ ರಚನೆಯಾದ ರೇಖಾಚಿತ್ರ ಮತ್ತು ವರ್ಣಚಿತ್ರ ಅಲ್ಲದೆ ರೇಖಾವರ್ಣಚಿತ್ರಗಳನ್ನು ವಿಶೇಷವಾಗಿ ವರ್ಗೀಕರಿಸಿಕೊಂಡು ಚರ್ಚೆನಡೆಸಲಾಗಿದೆ. ಶಿಷ್ಟಪದ ಮೂಲದ ಹಸ್ತಪ್ರತಿಚಿತ್ರಕಲೆಯನ್ನು ಇಲ್ಲಿ ಗಂಭೀರವಾಗಿ ಅಧ್ಯಯನ್ನಕ್ಕೆ ಒಳಪಡಿಸಲಾಗಿದ್ದು ಶಿಷ್ಟಪದ ಮೂಲದಲ್ಲಿ ಭಾಷಾ ಮೂಲದ ಹಸ್ತಪ್ರತಿಚಿತ್ರಗಳು ಧಾರ್ಮಿಕ ಮೂಲದ ಹಸ್ತಪ್ರತಿಚಿತ್ರಗಳು ಮತ್ತು ಧಾರ್ಮಿಕೇತರ ಮೂಲದ ಹಸ್ತಪ್ರತಿಚಿತ್ರಗಳೆಂದು ವರ್ಗೀಕರಣ ಮಾಡಿಕೊಳ್ಳಲಾಗಿದೆ. ಭಾಷಾ ಮೂಲದ ಹಸ್ತಪ್ರತಿಯಲ್ಲಿ ಇನ್ನು ಅಧ್ಯಯನಕ್ಕೆ ಒಳಪಡದ ಪ್ರಾಕೃತ, ಸಂಸ್ಕೃತ ಅನ್ಯ ದೇಶೀಯ ಹಸ್ತಪ್ರತಿಗಳನ್ನು ಅಧ್ಯಯನಕ್ಕೆ ಒಳಪಡಿಸಿಕೊಳ್ಳಲಾಗಿದೆ. ಧಾರ್ಮಿಕ ಮೂಲದ ಹಸ್ತಪ್ರತಿಗಳಲ್ಲಿ ಬೌದ್ಧ, ಜೈನ, ವೀರಶೈವ, ವೈದಿಕ ಮತ್ತು ಮೊಹ್ಮದೀಯ ಹಸ್ತಪ್ರತಿ ಚಿತ್ರಗಳನ್ನು ವಿಷಯಗಳೊಂದಿಗೆ ವರ್ಗೀಕರಣ ಮಾಡಿಕೊಂಡು ಅಧ್ಯಯನಕ್ಕೆ ಒಳಪಡಿಸಿಕೊಳ್ಳಲಾಗಿದೆ.

ಧಾರ್ಮಿಕೇತರ ವಿಭಾಗದಲ್ಲಿ ಆರೋಗ್ಯ ಅಲಂಕಾರ ಮನೋರಂಜನೆ, ಸಂಗೀತ ಮೂಲದ ರಾಗಮಾಲಾ ಚಿತ್ರಗಳನ್ನು ಅಧ್ಯಯನ ಮಾಡಲಾಗಿದೆ. ಉತ್ತರ ಭಾರತದ ಹಿನ್ನಲೆಯಲ್ಲಿ ಹುಟ್ಟಿಕೊಂಡ ರಾಗಮಾಲಾ ಚಿತ್ರಪರಂಪರೆಯಂತೆ ಕನ್ನಡದ ಹಸ್ತಪ್ರತಿಗಳಲ್ಲಿ ಸಹ ರಾಗಮಾಲಾ ಚಿತ್ರಪರಂಪರೆ ಹಾಗೂ ಚಿಕಣಿ ಚಿತ್ರಪರಂಪರೆ ಮುಂತಾದ ದೇಶಿ ಚಿತ್ರಕಲೆ ಪ್ರಭಾವಗಳು ಹಸ್ತಪ್ರತಿ ಚಿತ್ರಕಲೆ ಮೇಲಾಗಿರುವದನ್ನು ಗುರುತಿಸುವ ಮತ್ತು ದಾಖಲುಗೊಳಿಸುವ ಪ್ರಯತ್ನವನ್ನು ಇಲ್ಲಿ ಮಾಡಲಾಗಿದೆ.

ಅಧ್ಯಾಯ : ಐದು

ಕರ್ನಾಟಕದ ಹಸ್ತಪ್ರತಿ ಚಿತ್ರಕಲೆಯ ಚಿತ್ರಕಲಾವಿದರು,

ಕರ್ನಾಟಕದ ಹಸ್ತಪ್ರತಿ ಚಿತ್ರಕಲೆಯಲ್ಲಿ ಹಸ್ತಪ್ರತಿ ಚಿತ್ರಕಲಾವಿದರ ಪಾತ್ರ ಬಹು ಮುಖ್ಯವಾದುದು ಇವರು ಕಣ್ಣಿಗೆ ಕಾಣುವ ಕವಿಗಳಂತೆ, ಕವಿಪಾಠದ ಲಿಪಿಕಾರರಂತೆ : ಕಣ್ಣಿಗೆ ಕಾಣದೇ ದಾಖಲುಗೊಳ್ಳದೇ ಎಲೆ ಮರೆಯ ಕಾಯಿಯಂತೆ ತೆರೆಯಲ್ಲಿಯೇ ಉಳಿದವರು ಇಂತಹ ಕಲಾವಿದರ ಪಾತ್ರವೂ ತುಂಬಾ ಹಿರಿದಾದುದು. ಅದರಲ್ಲೂ ಕನ್ನಡ ನಾಡಿನ ಕರ್ನಾಟಕದ ಹಸ್ತಪ್ರತಿ ಚಿತ್ರಕಲಾವಿದರ ಚರಿತ್ರೆಯಂತೂ ಅನುಪಮವಾದುದು. ಅವರು ಕನ್ನಡ ನಾಡಿನ ಕಲೆಯನ್ನು ಕಲೆಗಾಗಿ ಕಲೆ ಎಂದು ಸೀಮಿತಗೊಳಿಸದೆ ಈ ನಾಡಿನ ಸಂಸ್ಕೃತಿಯಂತೆ ಧರ್ಮಕ್ಕಾಗಿ ಚಿತ್ರಕಲೆ, ಜೀವನಕ್ಕಾಗಿ ಚಿತ್ರಕಲೆ, ಬದುಕೇ ಒಂದು ಕಲೆ ಎಂದು ಭಾವಿಸಿಕೊಂಡಿರುವ ಈ ಮಹಾನುಭಾವರುಗಳು. ಕರ್ನಾಟಕ ಹಸ್ತಪ್ರತಿಯಲ್ಲಿ ಚಿತ್ರಗಳ ಅಡಿಯಲ್ಲಿಯ ತಮ್ಮ ಹೆಸರು, ಉಲ್ಲೇಖ, ದಿನದ ಅಂಕದಂತಹ ಯಾವ ಕುರುಹಿನ ವಿವರವನ್ನು ನೀಡದೆ. ತಮ್ಮ ಕಲಾ ಸೇವೆಯನ್ನು ದೇವರದೇ ಸೇವೆ ಎಂದು ಭಾವಿಸಿಕೊಂಡಿರುವ ಹಿರಿಮೆ ಇವರದಾಗಿದೆ.

ಪ್ರಾಚೀನ ಸಾಹಿತ್ಯ ಶಾಸನಗಳಲ್ಲಿ ಉಲ್ಲೇಖಿತರಾದ ಚಿತ್ರಕಾರರ ಕುರಿತು ಅವರ ನೈಪುಣ್ಯತೆಗಳನ್ನು ಮತ್ತು ಮಹ್ಮದೀಯ ಅರಸರ ಕಾಲದಲ್ಲಿಯ ಚಿತ್ರಕಾರರು, ವಿಜಯನಗರದ ಅರಸರ ಕಾಲದಲ್ಲಿ ಚಿತ್ರಕಲಾವಿದರು ಮೈಸೂರ ಅರಸರ ಕಾಲದಲ್ಲಿ ವಿಶೇಷವಾಗಿ ಕಂಡುಬರುವ ಚಿತ್ರಕಲಾವಿದರು ಅಲ್ಲದೇ ಇನ್ನೂ ಜನಪದ ಮತ್ತು ಶಿಷ್ಟಪದ ಹಸ್ತಪ್ರತಿ ಚಿತ್ರಕಲೆಯನ್ನು ರಚಿಸುವ ಪರಂಪರೆಯನ್ನು ಉಳಿಸಿಕೊಂಡು ಬಂದಿರುವ ತಾಳಿಕೋಟೆಯ ಜಿನಗಾರರು, ಕಲಘಟಗಿಯ ಚಿತ್ರಕಾರರು, ಗೋಕಾಕ, ಕಂಪಲಿ, ಕನಕಗಿರಿ ಮುಂತಾದ ಚಿತ್ರಕಾರರ ಕುರಿತು ಸ್ಥೂಲವಾಗಿ ಚರ್ಚಿಸಲಾಗಿದೆ.

ಈ ಕಲಾವಿದರಿಗೆ ಆಯಾ ಪ್ರದೇಶದ ವಿವಿಧ ಶೈಲಿ ಮತ್ತು ಪ್ರಭಾವ, ಪ್ರೇರಣೆಗಳು ಸಹಜವಾಗಿ ಆಗಿವೆ. ಬೇರೆ ಬೇರೆ ಧರ್ಮದ ಬೇರೆ ಬೇರೆ ಕಾಲಮಾನದಲ್ಲಿ ರಚನೆಯಾದ ಹಸ್ತಪ್ರತಿಗಳ ಚಿತ್ರಗಳಲ್ಲಿ ಇಂತಹ ವೈವಿಧ್ಯತೆ ಇದ್ದು ಅಲ್ಲೆಲ್ಲಾ ಆಯಾ ಕಾಲಮಾನದಲ್ಲಿ ಬದುಕಿದ ಕಲಾವಿದರ ವಿಶಿಷ್ಟವಾದ ಕಲಾರಚನೆ, ತಂತ್ರಗಾರಿಕೆ ಇರುವದನ್ನು ಕಾಣುತ್ತೇವೆ.

ಅಧ್ಯಾಯ : ಆರು

ಕರ್ನಾಟಕ ಹಸ್ತಪ್ರತಿ ಚಿತ್ರಕಲೆಯ ಸೌಂದರ್ಯ ಸಮೀಕ್ಷೆ

ಈವರೆಗೂ ಕರ್ನಾಟಕದ ಸಾಹಿತ್ಯಿಕ ಇತಿಹಾಸದಲ್ಲಿ ಹಸ್ತಪ್ರತಿಗಳ ಕುರಿತು, ಅವುಗಳ ಒಳಗಿರುವ ವಿಷಯದ ಕಾವ್ಯ, ಶಾಸ್ತ್ರ, ಪರಂಪರೆ, ಪ್ರಕಾರ, ಕಥಾ ವಸ್ತು ಕುರಿತು ಹಲವು ಕಮ್ಮಟಗಳಲ್ಲಿ ಹಲವು ಮಜಲುಗಳಲ್ಲಿ ಅಧ್ಯಯನಕ್ಕೆ ಒಳಪಡಿಸಲಾಗಿದೆ. ಆದರೆ ಹಸ್ತಪ್ರತಿಯೊಳಗಿನ

ಚಿತ್ರಗಳನ್ನು ಕುರಿತು ಸಾಹಿತ್ಯಿಕವಾಗಿ ನಾವು ಬಹಳ ಕಡಿಮೆ ದಾಖಲೆಯನ್ನು ನಿರ್ಮಿಸಿದ್ದೇವೆ. ಹಸ್ತಪ್ರತಿಯೊಳಗಿನ ಕಾವ್ಯ ಕುರಿತು ಅಧ್ಯಯನ ಮಾಡುವ ಸಂಶೋಧಕರು ಅಥವಾ ವಿದ್ಯಾರ್ಥಿಗಳು ಕಾವ್ಯದ ಪಠ್ಯ ಕುರಿತು ಮಾತನಾಡಿದಂತೆ ಆ ಕೃತಿಯ ಪಠ್ಯಕ್ಕೆ ಸಂಬಂಧಿಸಿರುವ ಚಿತ್ರವನ್ನು ಸಾಮಾನ್ಯವಾಗಿ ಗಮನಿಸಿರುವದಿಲ್ಲ. ಚಿತ್ರ ಎಂಬುದನ್ನು ಕೇವಲ ತೆರವು ತುಂಬುವ ಅಲಂಕಾರಿಕ ಕ್ರಿಯೇ ಎಂದು ಸಾಹಿತ್ಯವಲಯ ಭಾವಿಸಿಕೊಂಡಿರುವ ಕಾರಣ ಸಾಹಿತ್ಯವಲಯದಲ್ಲಿ ಇಂದಿಗೂ ಕಲೆಯನ್ನು ಕುರಿತು ಮಾತನಾಡುವ ಭಾಷೆಯೇ ಸೃಷ್ಠಿಯಾಗಿಲ್ಲವೆಂದೇ ಹೇಳಬೇಕು.

ಸಾಹಿತ್ಯದಲ್ಲಿ ಕಾವ್ಯ ಸೌಂದರ್ಯ, ಅಲಂಕಾರ ಸೌಂದರ್ಯ, ರಸತತ್ವಗಳ ಚರ್ಚೆಯಾದಂತೆ ಹಸ್ತಪ್ರತಿ ಚಿತ್ರಗಳ ಕುರಿತು ಸೌಂದರ್ಯ ಮೀಮಾಂಸೆಯ ಚರ್ಚೆ ಭಾರತದಲ್ಲಿ ಅಷ್ಟೊಂದು ನಡೆದಿಲ್ಲವೆಂದರೆ ಅತಿಶಯೋಕ್ತಿಯಾಗಲಾರದು. ಕರ್ನಾಟಕಕ್ಕೂ ಈ ಮಾತು ಅನ್ವಯಿಸುತ್ತದೆ. ಈ ದಿಸೆಯಲ್ಲಿ ಚಿತ್ರಕಲಾ ಕ್ಷೇತ್ರದಲ್ಲಿ ವಿಶೇಷವಾದ ಅಧ್ಯಯನದ ಅವಶ್ಯಕತೆ ಇದೆ. ಪ್ರಸ್ತುತ ಹಸ್ತಪ್ರತಿ ಚಿತ್ರಗಳನ್ನು ಇಲ್ಲಿ ಸೌಂದರ್ಯ ಸಮೀಕ್ಷೆಮಾಡುವ ಪ್ರಯತ್ನವನ್ನು ಈ ಅಧ್ಯಯನದ ಮೂಲಕ ಮಾಡಲಾಗಿದೆ. ಇದೊಂದು ಚಿತ್ರಕಲಾ ಕ್ಷೇತ್ರದ ಹೊಸ ರೀತಿಯ ಅಧ್ಯಯನದ ಉಪಕ್ರಮವೆಂದು ಹೇಳಬಹುದಾಗಿದೆ.

ಅಧ್ಯಾಯ : ಏಳು

ಕರ್ನಾಟಕ ಹಸ್ತಪ್ರತಿ ಚಿತ್ರಕಲೆಯ ಆಪತ್ತುಗಳು

ಕರ್ನಾಟಕದ ಹಸ್ತಪ್ರತಿಗಳಿಗೆ ಅನೇಕ ಆಪತ್ತುಗಳಿದ್ದು ಅವುಗಳನ್ನು ಪ್ರಕೃತಿ ನಿರ್ಮಿತ ಆಪತ್ತುಗಳು ಮತ್ತು ಮಾನವ ನಿರ್ಮಿತ ಆಪತ್ತುಗಳು ಎಂದು ವರ್ಗೀಕರಣ ಮಾಡಿಕೊಳ್ಳಲಾಗಿದೆ. ಪ್ರಾಕೃತಿಕ ಆಪತ್ತುಗಳಲ್ಲಿ ಗಾಳಿ, ಮಳೆ, ಧೂಳೂ. ಭೂಕಂಪದಂತಹ ಪ್ರಕೃತಿ ಜನ್ಯ ಘಟನೆಗಳನ್ನು ಪ್ರಕೃತಿ ನಿರ್ಮಿತ ಆಪತ್ತುಗಳೆಂದು, ಮಾನವ ನಿರ್ಮಿತ ಆಪತ್ತುಗಳನ್ನು ವಿಂಗಡಿಸಿಕೊಂಡು ಅಧ್ಯಯನಕ್ಕೆ ಒಳಪಡಿಸಲಾಗಿದೆ.

ಅಧ್ಯಾಯ : ಎಂಟು

ಕರ್ನಾಟಕದ ಹಸ್ತಪ್ರತಿ ಚಿತ್ರಕಲೆಯ ಸಂರಕ್ಷಣೆಯ ವೈಜ್ಞಾನಿಕ ಕ್ರಮಗಳು


ಕರ್ನಾಟಕದ ಹಸ್ತಪ್ರತಿ ಚಿತ್ರಕಲೆಗಳಿಗಿರುವ ಆಪತ್ತುಗಳನ್ನು ಅಧ್ಯಯನ ಮಾಡಿದ ನಂತರ ಅವುಗಳಿಗಿರುವ ಪ್ರಾಕೃತಿಕ ಮತ್ತು ಮಾನವನಿರ್ಮಿತ ಆಪತ್ತುಗಳನ್ನು ವೈಜ್ಞಾನಿಕ ವಿಧಾನದಿಂದ ಯಾವರೀತಿ ನಿವಾರಿಸಬಹುದು ಎಂಬುದನ್ನು ಈ ಅಧ್ಯಾಯದಲ್ಲಿ ಚರ್ಚಿಸಲಾಗಿದೆ. ಸಾಮಾನ್ಯವಾಗಿ ಹಸ್ತಪ್ರತಿಗಳಿಗೆ ಲೇಪಿಸುವ ತೈಲವನ್ನು ಈ ವರೆಗೂ ಆಯುರ್ವೇದ ತೈಲದಿಂದ ರಚಿಸಲಾಗಿತ್ತು. ಈ ತೈಲಕ್ಕೆ ನಿರ್ಧಿಷ್ಟವಾದ ರಾಸಾಯನಿಕ ಅಂಶ ತಿಳಿದಿರಲಿಲ್ಲ. ಮತ್ತು ತಿಳಿದ ವಿದ್ವಾಂಸರು ಅದರ ರಚನಾ ಕ್ರಮವನ್ನು ತಿಳಿಸಿರಲಿಲ್ಲ. ಈ ಕಾರಣದಿಂದಲೂ ಅಸಂಖ್ಯಾತ ಹಸ್ತಪ್ರತಿಗಳು ಹಾಳಾದ ಉದಾಹರಣೆಗಳು ನಮ್ಮಲ್ಲಿ ಇವೆ. ಇತ್ತೀಚೆಗೆ ಗಜನಿಂಬೆರಸದ ತೈಲಲೇಪನ, ಧೂಮ ಕವಾಟ, ಶಿಲಿಂದ್ರಗಳ ನಿವಾರಣೆ, ಕೀಟಗಳ ನಿಯಂತ್ರಣ ಇವೆಲ್ಲ ಕ್ರಮಗಳನ್ನು ವೈಜ್ಞಾನಿಕ ತಳಹದಿಯಿಂದ

ನಿರ್ವಹಿಸುವ ಮತ್ತು ವಿಶೇಷವಾಗಿ ಹಸ್ತಪ್ರತಿ ಚಿತ್ರಗಳನ್ನು ಅವುಗಳ ಮೂಲ, ವರ್ಣಗಳು ಹಾಳಾಗದಂತೆ ಯಥಾವತ್ತಾಗಿ ದಾಖಲಿಸುವ ವಿವಿಧ ರೀತಿಯ ಆಧುನಿಕ ಗಣಕಯಂತ್ರ ಮತ್ತು ಸಿ.ಡಿ.ಗಳ ಮೂಲಕ ಇತರ ಯಂತ್ರೋಪಕರಣಗಳನ್ನು ಬಳಸಿ ಅವುಗಳನ್ನು ಸಂರಕ್ಷಿಸುವ ವಿವಿಧ ವಿಧಿ ವಿಧಾನಗಳನ್ನು ಕುರಿತು ಇಲ್ಲಿ ಚರ್ಚಿಸಲಾಗಿದೆ.

ಅಧ್ಯಾಯ : ಒಂಭತ್ತು

ಸಮಾರೋಪ

ಈ ಅಧ್ಯಾಯದಲ್ಲಿ ಎಲ್ಲ ಅಧ್ಯಾಯಗಳಲ್ಲಿ ನಡೆದ ಸಂಶೋಧನೆಯ ಪ್ರಮುಖ ಅಧ್ಯಯನದ ಫಲಿತಗಳನ್ನು ಇಲ್ಲಿ ಸಮೀಕ್ಷಿಸಲಾಗಿದೆ.





ಅಧ್ಯಾಯ : ಎರಡು

ಹಸ್ತಪ್ರತಿ ಚಿತ್ರಕಲೆಯ ಐತಿಹಾಸಿಕ ನಲೆ ಹಿನ್ನೆಲೆ

ಸುಂದರ ಮಹೇಶ್ವರನ ರಸಮಯ ಶರೀರವಿದು
ವಿಶ್ವರೂಪದಿ ನಮಗೆ ತೋರುತ್ತಿದೆ. ಜೀವನಂ
ಕ್ಷಣ ಕ್ಷಣಕೆ ಮುಟ್ಟುತಿಹುದಾತನಂ, ಪ್ರಾಣದಲಿ
ಸ್ಪರ್ಶದಲಿ, ರುಚಿಯಲಿ, ಶ್ರೋತ್ರ ದೃಷ್ಟಿಗಳಲ್ಲಿ[೧]

ಸಾವಿರಾರು ವರ್ಷಗಳ ಸುದೀರ್ಘವಾದ ಇತಿಹಾಸ ಮತ್ತು ಉಜ್ವಲ ಸಾಂಸ್ಕೃತಿಕ ಪರಂಪರೆಯನ್ನು ಹೊಂದಿರುವ ಕರ್ನಾಟಕದ ಚರಿತ್ರೆಯಲ್ಲಿ ಕನ್ನಡ ಸಾರಸ್ವತ ಲೋಕದ ವಿಕಾಸ,ಕಲೆ, ಸಂಸ್ಕೃತಿಗಳ ಆಗರವಾಗಿರುವ ಕರ್ನಾಟಕದ ಹಸ್ತಪ್ರತಿಗಳು ಕನ್ನಡ ನಾಡಿನ ಕಾಲಕೋಶಗಳಂತೆ ಇವೆ. ಈಗಾಗಲೇ ಕರ್ನಾಟಕದ ಹಸ್ತಪ್ರತಿಗಳಿಗೆ ಐತಿಹಾಸಿಕ ಹಿನ್ನೆಲೆಯನ್ನು ಹಲವು ಅಧ್ಯಯನಗಳ ಮುಖಾಂತರ ಕೊಡಲಾಗಿರುವಂತೆ ಉಪೇಕ್ಷಿತ ಕರ್ನಾಟಕದ ಹಸ್ತಪ್ರತಿ ಚಿತ್ರಕಲೆಗೂ ಐತಿಹಾಸಿಕ ಹಿನ್ನೆಲೆಯನ್ನು ಕೊಡುವ, ಅಧ್ಯಯನಕ್ಕೆ ಒಳಪಡಿಸುವ ಪ್ರಯತ್ನವನ್ನು ಇಲ್ಲಿ ಕೈಗೊಳ್ಳಲಾಗಿದೆ.

ಈ ವರೆಗೂ ಕೇವಲ ಕನ್ನಡ ಭಾಷಾ ಶಾಸ್ತ್ರದ ಹಿನ್ನೆಲೆಯಲ್ಲಿ, ಧಾರ್ಮಿಕ ಶಾಸ್ತ್ರಗಳ ವಸ್ತು ಸ್ವರೂಪದಲ್ಲಿಯೇ ಅಧಿಕವಾದ ಅಧ್ಯಯನವು ಸಂಶೋಧನಾ ಕ್ಷೇತ್ರದಲ್ಲಿ ನಡೆದಿರುವ ಕಾರಣ ಕರ್ನಾಟಕದ ಹಸ್ತಪ್ರತಿಯ ಅಧ್ಯಯನವೆಂದರೆ ಕೇವಲ ಸಾಹಿತ್ಯ ಲೋಕದ ಕಾವ್ಯಕ್ಕೊ? ಅಥವಾ ಧಾರ್ಮಿಕ ಹಂತಕ್ಕೊ? ಮಾತ್ರ ಸೀಮಿತಗೊಂಡಂತೆ ಉಳಿದುಕೊಂಡಿದೆ. ಕನ್ನಡ ಸಾಹಿತ್ಯದ ಹಂತದಲ್ಲಿಯೇ ಕರ್ನಾಟಕದ ಹಸ್ತ ಪ್ರತಿಗಳನ್ನು ಅಭ್ಯಾಸಕ್ಕೆ ಒಳಪಡಿಸಿಕೊಂಡಿರುವ

೧. ಪ್ರೊ. ಮಲ್ಲೇಪುರಂ ಜಿ. ವೆಂಕಟೇಶ (ಸಂ) : ಕೆಳದಿ ಬಸವರಾಜ ಸಂಕಲಿಸಿದ ಶಿವತತ್ವರತ್ನಾಕರ, ಪುಟ-೧

ಕಾರಣ ಕರ್ನಾಟಕ ದ ಹಸ್ತಪ್ರತಿಗಳು ಕಲೆ, ಸಂಸ್ಕೃತಿಗಳ ಹಿನ್ನೆಲೆಯೊಂದಿಗೆ ಸಮಗ್ರವಾದ ಅಧ್ಯಯನಕ್ಕೆ ಒಳಪಡದೆ ಒಮ್ಮುಖದ ಅಧ್ಯಯನಕ್ಕೆ ಒಳಗಾಗಿವೆ.

ಈ ವರೆಗಿನ ಕನ್ನಡ ಸಾಹಿತ್ಯವಲಯದ ಸಂಶೋಧನೆಯನ್ನು ಗಮನಿಸಿದರೆ ಸಾಹಿತ್ಯವೆಂಬುದು ಈ ನಾಡಿನ ಸಮಗ್ರ ಸಂಸ್ಕೃತಿಯನ್ನು ಒಳಗೊಳ್ಳದೆ ಕೇವಲ ಭಾಷಾ ಶಾಸ್ತ್ರವೇ ಕನ್ನಡ ಸಾಹಿತ್ಯದ ಬೆಳವಣಿಗೆಯೆಂಬ ಪರಿಕಲ್ಪನೆ ಇರುವ ಕಾರಣ ಮತ್ತು ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ಕಲೆಯನ್ನು ಕಾಣುವ, ಅರಸುವಂತಹ, ಜಾಣಕುರುಡುತನವಿರುವ ಕಾರಣಕ್ಕಾಗಿಯೇ ಕರ್ನಾಟಕದ ಹಸ್ತಪ್ರತಿಗಳು ಇತಿಹಾಸ ಕಾಣದೆ, ಅಧ್ಯಯನಕ್ಕೆ ಒಳಪಡದೆ ಉಳಿದುಕೊಂಡಿದೆ.

ನೈಸರ್ಗಿಕವಾಗಿ ಮನುಷ್ಯ ಪ್ರಾರಂಭದ ದಿನಗಳಿಂದಲೂ ಅವನು ಸೌಂದರ್ಯದ ಉಪಾಸಕ. ಬಯಲು ಬಂಡೆಯಿಂದ, ವಾಸದ ಗುಹೆಯ ಗೋಡೆಗಳನ್ನು ಚಿತ್ರಗಳಿಗಾಗಿ ಬಳಸಿಕೊಳ್ಳುತ್ತಾ ಬಂದಿದ್ದಾನೆ. ಆ ಚಿತ್ರಗಳು ಅವನ ಬದುಕನ್ನು ಭಾವವನ್ನು ತಿಳಿಸುವ ಆಕರಗಳಾಗಿದೆ. ಭಾಷೆ ಹುಟ್ಟುವ ಮೊದಲೆ ಹುಟ್ಟಿದ ಚಿತ್ರಕಲೆಯು ಭಾಷಾಮಾಧ್ಯಮದಂತೆ ಇತ್ತು. ವಿದ್ವಾಂಸರು ಮನುಷ್ಯನ ಸಂಪರ್ಕ ಸಾಧನವಾಗಿ ಭಾಷೆ ಹುಟ್ಟುವ ಪೂರ್ವದಲ್ಲಿ ಚಿತ್ರಗಳು ಗುಹೆಗಳಲ್ಲಿ, ಬಂಡೆಗಳಲ್ಲಿ ಕೊರೆಯಲ್ಪಡುತ್ತಿದ್ದವೆಂದಿದ್ದಾರೆ. ವಿಶ್ವದಲ್ಲಿ ಅತೀ ಪ್ರಾಚೀನ ಚಿತ್ರಕಲೆ ಕುರುಹುಗಳು ಸ್ಪೇನಿನ ಗವಿಗಳಲ್ಲಿಯೂ, ಫ್ರಾನ್ಸಿನ ಡೋರ್‌ಡೋನ್ ಪ್ರಾಂತದ ಲಾಗ್ರೀಜ್ ಗವಿಗಳಲ್ಲಿಯೂ ದೊರೆತಿವೆ. ಸುಮಾರು ಇಪ್ಪತ್ತೇಳು ಸಾವಿರ ವರ್ಷಗಳ ಹಿಂದೆ ಅರಿನೇಷಿಯನ್ ನಾಗರಿಕತೆಯ ಕಾಲದಲ್ಲಿ ಮನುಷ್ಯನ ಪ್ರಾಚೀನ ಕಲಾಕೃತಿಗಳು ಅಲ್ಲಲ್ಲಿ ಬರೆದ ದಾಖಲಾತಿಗಳು ದೊರೆಯುತ್ತವೆ ಎಂಬ ಅಭಿಪ್ರಾಯವೂ ಇದೆ.[೨]

ಮಾನವನು ಚಿತ್ರಕಲಾ ಪ್ರೇಮವು ಹಸ್ತಪ್ರತಿಗಳಲ್ಲಷ್ಟೇ ವ್ಯಕ್ತವಾಗದೆ ಅವನ ಪ್ರಾಚೀನ ಬದುಕಿನಲ್ಲಿ ವ್ಯಕ್ತವಾಗಿದೆ. ಮಾನವನ ಮೊದಲ ಪಾಠ ಚಿತ್ರಲೆ. ಬಾಷಾಪೂರ್ವದಲ್ಲಿ ಸಂಜ್ಞೆ ಲಿಪಿ ಪೂರ್ವದಲ್ಲಿ ಚಿತ್ರಕಲೆ ಕಲೆ ಬಳಕೆಯಲ್ಲಿ ಇದ್ದಿತು. ಹರಪ್ಪ ಮೊಹೆಂಜೋದಾರೋ ಚೀನಾದ ಲಿಪಿಗಳು ಚಿತ್ರಮಯವಾಗಿರುವುದನ್ನು ಕಾಣುತ್ತೇವೆ.[೩] ಕ್ರಿ.ಶ 2ರಿಂದ 6ನೇ ಶತಮಾನದ ಅವಧಿಯಲ್ಲಿ ಹಾದಿ ಬೀದಿಗಳಲ್ಲಿ, ಮನೆ -ಮಠಗಳಲ್ಲಿ, ಸೂರ್ಯ, ಚಂದ್ರರಿಗಾಗಿ ಕಟ್ಟಿದ ಪವಿತ್ರ ದಿಬ್ಬಗಳಲ್ಲಿ, ಶ್ರೀಮಂತರ ಸೌಧಗಳಲ್ಲಿ, ಸಾಮಾಜಿಕ ಕಟ್ಟಡಗಳಲ್ಲಿ ಹೇಗೆ ಚಿತ್ರ ರಚಿಸಬೇಕು ಎಂಬ ರೇಖಾಚಿತ್ರಗಳಿರುವ ಗ್ರಂಥಗಳು ದೊರೆಯುತ್ತವೆ.[೪]

ಇದರೊಂದಿಗೆ ಈ ಕನ್ನಡದ ನೆಲವನ್ನು ಆಳಿದ ಕದಂಬ, ಚಾಲುಕ್ಯ,

---

೨. ಬಿ.ವ್ಹಿ.ಕೆ. ಶಾಸ್ತ್ರಿ ಸಂ : ಪ್ರಬುದ್ಧ ಕರ್ನಾಟಕ , ಪ್ರಾಚೀನ ಕಲೆ, ಪುಟ- ೩೫

೩. ಡಾ. ಎಸ್.ಸಿ.ಪಾಟೀಲ : ಕರ್ನಾಟಕದ ಜನಪದ ಚಿತ್ರಕಲೆ, ಪುಟ- ೨೯

೪. ಬಿ.ಪಿ. ಬಾಯರಿ : ಜಾಗತಿಕ ಚಿತ್ರಕಲೆ, ಪುಟ – ೪೮

ಹೊಯ್ಸಳ, ರಾಷ್ಟ್ರಕೂಟ, ವಿಜಯನಗರದ ಅರಸರಿಂದ ಮೈಸೂರು ಅರಸರ ಕಾಲದವರೆಗೂ ನಡೆದ

ಕರ್ನಾಟಕದ ಹಸ್ತಪ್ರತಿ ಚಿತ್ರಕಲೆಯ ಇತಿಹಾಸವನ್ನು ಹಸ್ತಪ್ರತಿಗಳ ಮತ್ತು ಆಯಾ ಕಾಲದಲ್ಲಿ ಸಿಗುವ ಶಾಸನ, ಭಿತ್ತಿಚಿತ್ರ ಮುಂತಾದ ಆಕರಗಳನ್ನು ಬಳಸಿಕೊಂಡು ಪ್ರಸ್ತುತ ಹಸ್ತಪ್ರತಿ ಚಿತ್ರಕಲೆಯ ಇತಿಹಾಸವನ್ನು ಕಾಲಾನುಕ್ರಮದಲ್ಲಿ ಕಟ್ಟಿಕೊಡುವ ಪ್ರಯತ್ನವನ್ನು ಇಲ್ಲಿ ಮಾಡಲಾಗಿದೆ.

ಅಧ್ಯಯನದ ಅನಕೂಲತೆಗಾಗಿ ಹಸ್ತಪ್ರತಿ ಚಿತ್ರಕಲೆಯ ಇತಿಹಾಸದ ಈ ಕೆಳಗಿನ ಘಟ್ಟಗಳಲ್ಲಿ ವರ್ಗೀಕರಣಮಾಡಿಕೊಂಡು ವಿವೇಚಿಸಲಾಗಿದೆ.

1. ವೇದಕಾಲೀನ ಯುಗದ ಹಸ್ತಪ್ರತಿ ಚಿತ್ರಕಲೆ. (ಸು. ಕ್ರಿ.ಶ.ಪೂ.1500)
2. ಪ್ರಾಕೃತ ಯುಗದ ಹಸ್ತಪ್ರತಿ ಚಿತ್ರಕಲೆ. (ಸು.ಕ್ರಿ.ಶ.4ನೇ ಶತಮಾನ)
3. ಕವಿರಾಜ ಮಾರ್ಗ ಯುಗದ ಹಸ್ತಪ್ರತಿ ಚಿತ್ರಕಲೆ. (ಸು. ಕ್ರಿ.ಶ.8ನೇ ಶತಮಾನ)
4. ಪಂಪಯುಗದ ಹಸ್ತಪ್ರತಿ ಚಿತ್ರಕಲೆ. (ಕ್ರಿ.ಶ. 10ನೇ ಶತಮಾನ)
5. ವಚನಯುಗದ ಹಸ್ತಪ್ರತಿ ಚಿತ್ರಕಲೆ. (ಕ್ರಿ.ಶ. 12ನೇ ಶತಮಾನ)
6. ದಾಸಯುಗದ ಹಸ್ತಪ್ರತಿ ಚಿತ್ರಕಲೆ. (ಕ್ರಿ.ಶ. 14ನೇ ಶತಮಾನ)
7. ಮಹಮ್ಮದಿಯ ಯುಗದ ಹಸ್ತಪ್ರತಿ ಚಿತ್ರಕಲೆ. (ಕ್ರಿ.ಶ. 15ನೇ ಶತಮಾನ)
8. ಆಧುನಿಕ ಯುಗದ ಹಸ್ತಪ್ರತಿ ಚಿತ್ರಕಲೆ. (ಕ್ರಿ.ಶ. 16ನೇ ಶತಮಾನದ ನಂತರ)

ಕಲಾತ್ಮಕ ಬೆಳವಣಿಗೆಯನ್ನು ಗುರುತಿಸಬೇಕಾಗಿದೆ. ಈ ದೇಶದ ಕಲೆ, ಸಾಹಿತ್ಯ, ಸಂಸ್ಕೃತಿಗೆ ಪ್ರೋತ್ಸಾಹ ಕೊಟ್ಟು ಬೆಳೆಸಿದ ಕೀರ್ತಿ ಅವರಿಗೆ ಸಲ್ಲಬೇಕಾಗಿದೆ. ಆದರಂತೆ ಕರ್ನಾಟಕದ ಬೌದ್ಧ, ಜೈನ, ವೀರಶೈವ, ವೈದಿಕ, ಮಹ್ಮದೀಯ ಹಸ್ತಪ್ರತಿಗಳಲ್ಲಿಯ ಚಿತ್ರಗಳು ಇಂದಿಗೂ ಸಂಪೂರ್ಣವಾಗಿ ಅಧ್ಯಯನಕ್ಕೆ ಒಳಪಡದೇ ದಾಖಲೆಯಾಗದೇ ಉಳಿದುಕೊಂಡಿವೆ. ಈ ಕೊರತೆಯನ್ನು ನೀಗಿಸಿ ಕೊಂಡು ಕರ್ನಾಟಕ ಹಸ್ತಪ್ರತಿ ಚಿತ್ರಕಲೆಗೆ ಐತಿಹಾಸಿಕ ಹಿನ್ನೆಲೆಯನ್ನೂ ಒದಗಿಸ ಬೇಕಾಗಿದೆ. ಅಧ್ಯಯನಕ್ಕಾಗಿ ಈ ಕೆಳಗಿನಂತೆ ವಿಷಯವನ್ನು ವರ್ಗೀಕರಿಸಿಕೊಂಡು ಅಧ್ಯಯನಕ್ಕೆ ಒಳಪಡಿಸಲಾಗಿದೆ.

1. ವೇದಕಾಲೀನ ಯುಗದ ಹಸ್ತಪ್ರತಿ ಚಿತ್ರಕಲೆ :(ಸುಮಾರು ಕ್ರಿ.ಶ.ಪೂ.1500)

ಪೀಠಿಕೆ : ಭಾರತೀಯರ ಬದುಕಿನಲ್ಲಿ ವೇದ ಪೂರ್ವ ಯುಗವು ಇಂದಿಗೂ ಅಜ್ಞಾತಯುಗವಾಗಿಯೇ ಉಳಿದು ಕೊಂಡಿದ್ದರೂ ಹಸ್ತಪ್ರತಿ ಚಿತ್ರಕಲೆಗೆ ಸಂಬಂಧಿಸಿದ ಅನೇಕ ಐತಿಹಾಸಿಕ ಅಂಶಗಳು ಅದರಲ್ಲಿ ದೊರೆಯುತ್ತವೆ. ಸುಮಾರು ಕ್ರಿ.ಪೂ.5000 ವರ್ಷಗಳ ಹಿಂದಿನ ಸಿಂಧೂ ನಾಗರಿಕತೆಯ ಕಲಾತ್ಮಕ ವಿಚಾರದಲ್ಲಿ ಬಹು ಮುಂದೆ ಇದ್ದುದು ಕಾರಣದಿಂದಲೇ ಪ್ರತಿ ಮನೆಯ ಭಿತ್ತಿಯ ಮೇಲೆ ನಿರ್ದಿಷ್ಟಪಡಿಸಿದ ಚಿತ್ರದ ಮಾದರಿಗಳು ದೊರೆಯುತ್ತವೆ.[೫] ಭಿತ್ತಿ ನಿರ್ದೇಶನಾ ಗ್ರಂಥ ಇರುವಂತೆ ಚಿತ್ರ ನಿರ್ದೇಶನಾ ಗ್ರಂಥಗಳು ಇರಬಹುದೆನಿಸುತ್ತದೆ.

ಟಿಬೇಟ್‌ನಲ್ಲಿ ಕ್ರಿ.ಶ.7ನೇ ಶತಮಾನದಲ್ಲಿ ಜೀವಿಸಿದ್ದ ತಾರಾನಥನೆಂಬ ಚರಿತ್ರೆಕಾರನು ಭಾರತದ ಬೌದ್ಧ ಚಿತ್ರಕಲೆಯ ಬಗೆಗೆ ಪ್ರಸ್ತಾಪಿಸುತ್ತಾ ಅವನಿಗೆ ದೊರೆತ ಕಲಾಕೃತಿಯ ಸಂಪುಟ ಕುರಿತು ಕ್ರಿ.ಶ.ಪೂ.480ರಲ್ಲಿಯೆ ಭಾರತೀಯಕಲೆ ಉನ್ನತಾವಸ್ಥೆ ತಲುಪಿರಬೇಕೆಂದು ಅಭಿಪ್ರಾಯಪಡುತ್ತಾನೆ[೬] ಅಲ್ಲದೆ ಭಾರತೀಯರಿಗೆ ಚಿತ್ರಕಲೆಯ ಬಗ್ಗೆ ಅರಿವು ಇತ್ತು, ಆದರೆ ಭಾರತೀಯ

೫. ಬಿ.ಪಿ.ಬಾಯರಿ : ಭಾರತೀಯ ಚಿತ್ರಕಲೆ, ಪುಟ- ೮

೬. ಪಿ.ಆರ್.ತಿಪ್ಪೇಸ್ವಾಮಿ (ಪ್ರ.ಸಂ): ಚಿತ್ರಕಲಾ ಪ್ರಪಂಚ, ಪುಟ - ೨೯

ಬದುಕಿನಲ್ಲಿ ಬರವಣಿಗೆಯ ಇತಿಹಾಸವು ಮೌಖಿಕ ಸಂಪರ್ಕದ ಇತಿಹಾಸಕ್ಕೆ ಸಮಕಾಲೀನವಾಗಿರಲಿಲ್ಲ.[೭] ಬರವಣಿಗೆಯ ಬಹುತಡವಾಗಿ ಬಳಕೆಯಲ್ಲಿ ಬಂತು. ಆದಿಮಾನವನು ಬರವಣಿಗೆಯ ಸಂಪರ್ಕದ ವಿಧಾನವನ್ನೇ ತಿಳಿದಿರಲಿಲ್ಲ. ಕುಟುಂಬದ ಹಿರಿಯರಿಂದ (Novices) ಬೇಟೆಯಾಡುವ ವಿಷಯವನ್ನು ತಿಳಿದುಕೊಳ್ಳತಿದ್ದರೂ ಅಂದಿನ ಕಾಲದಲ್ಲಿಯ ಹಿರಿಯರು ನುರಿತ ಬಿಲ್ಲುಗಾರರನ್ನು ಅಥವಾ ಬಿಲ್ಲು ವಿದ್ಯೆಬಲ್ಲ ಗುರುಗಳಿಂದ ಮಕ್ಕಳಿಗೆ ಮೌಖಿಕ ಪಾಠಗಳ ಮುಖಾಂತರ, ಪ್ರಾಯೋಗಿಕ ಪ್ರಾತ್ಯಕ್ಷಿಕೆಗಳ ಮುಖಾಂತರ ಶಿಕ್ಷಣ ಕೊಡಿಸುತ್ತಿದ್ದರು. ಈ ರೀತಿಯ ಶಿಬಿರಗಳಲ್ಲಿ, ಶಿಕ್ಷಣ ಕೇಂದ್ರಗಳಲ್ಲಿ ಉತ್ತೀರ್ಣರಾದ ವಿದ್ಯಾರ್ಥಿಗಳಿಗೆ " ಅಂಬಲಿಯ ಉಪದೇಶ ದ ಸಮಾರಂಭ " (The Gruelling Initiation Ceremony) ಏರ್ಪಡಿಸಿ ಪರೀಕ್ಷೆ ಗಳಲ್ಲಿ ಕ್ರೀಡಾಸ್ಪರ್ಧೆಗಳಲ್ಲಿ ಉತ್ತೀರ್ಣರಾದ ಇಂದಿನ ವಿದ್ಯಾರ್ಥಿಗಳಿಗೆ ಹಲವು ಪದಕ, ಪಾರಿತೋಷಕ, ಸ್ಮರಣಿಕೆಗಳನ್ನು ಕೊಟ್ಟು ಉತ್ತೇಜನ ನೀಡುವಂತೆ ಪ್ರಾಚೀನ ಕಾಲದಲ್ಲೂ ಪ್ರತಿಭಾವಂತ ಮಕ್ಕಳನ್ನು ಸನ್ಮಾನಿಸುವುದು ಸಾಮಾನ್ಯವಾಗಿತ್ತು. ಶಿಕ್ಷಣವೆಂಬುದು ಮೌಖಿಕ ವಿಧಾನವಾಗಿಯೇ ಬಹುಕಾಲ ಜಾರಿಯಲ್ಲಿತ್ತು.[೮]

ನಾಗರಿಕತೆಯೂ ಯಾವಾಗಲೂ ಕೆಲವೇ ಜನರ ವಿಚಾರ, ಪ್ರೇರಣೆಗಳಿಂದಲೇ ಮುಂದುವರಿಯುತ್ತದೆ. ಸಾಮೂಹಿಕ ಬದುಕಿನಲ್ಲಿ ಯಾರೋ ಚಿತ್ರಗಳನ್ನು ರಚಿಸಿದರು.ತಾವು ನೋಡಿದ ಗಿಡ, ಮರ, ಸ್ಥಳ,ಪ್ರಾಣಿ, ಪಕ್ಷಿಗಳ ಆಕಾರಗಳನ್ನು ಹೋಲಿಕೆಗಳಿಗೆ ಸಮೀಪವಾಗಿ ಆಕೃತಿಗಳ ರೂಪಗಳನ್ನು ರಚಿಸ ಹತ್ತಿದರು ಅಚ್ಚರಿ, ಆತುರು, ಕಾತುರಗಳೊಂದಿಗೆ ಅನೇಕ ಜನರು ಅವರನ್ನೇ ಅನುಸರಿಸುವುದರೊಂದಿಗೆ ಹಲವು ಸಾಂಕೇತಿಕ, ಪ್ರಾತಿನಿಧಿಕ ವಸ್ತುಗಳ, ಭಂಗಿಗಳ ಆಕೃತಿಗಳನ್ನು ಬರಿಯಲು ಪ್ರಾರಂಭಿಸಿದರು. ಈ ಚಿತ್ರ ಕೃತಿಗಳೇ ಪ್ರಾಥಾಮಿಕ ಕಲಿಕಾ ಪಿಕೋಪಕರಣಗಳಾದವು. ಸರಳಿಕೃತ, ನಿಗದಿತ ಆಳತೆಗೆ ಸೀಮಿತವಾದ ಇಂದು ಮಾನವನು ಬರೆಯುತ್ತಿರುವ ಅಸಂಖ್ಯಾತ ಲಿಪಿಗಳ ಹುಟ್ಟಿಗೆ ಕಾರಣಿಭೂತವಾಗಿವೆ.ಚೈನಾ - ಜಪಾನದೇಶಗಳಲ್ಲಿಯ ಚಿತ್ರಲಿಪಿಗಳನ್ನು ಸಂಕ್ಷಿಪ್ತ ಗೊಳಿಸಿರುವುದಲ್ಲದೇ ಜನಸಾಮಾನ್ಯರ ತಿಳುವಳಿಕೆಗಳಿಗೂ ಸಮೀಪವಾಗುವಂತೆ ಸರಳೀಕರಿಸಲಾಗಿದೆ.[೯]

ಈ ರೀತಿಯ ಚಿತ್ರಲಿಪಿಯ ಮಾನವನ ಮಾತಿಗೊಂದು ಸಂಕೇತವಾಗಿ ಸಂಖ್ಯಾ ಶಾಸ್ತ್ರವಾಗಿ, ಬದುಕಿಗೊಂದು ಸಂಪರ್ಕಸಾಧನವಾಗಿ ಬೆಳೆಯುತ್ತಾ. ಪ್ರಪಂಚವನ್ನೇ ವ್ಯಾಪಿಸಿಕೊಂಡಿತು ಪ್ರಪಂಚದಾದ್ಯಂತ ಇಂದು ವರ್ಣಲಿಪಿ ಬಳಕೆಯಲ್ಲಿದ್ದರೂ ಈ ವರ್ಣಲಿಪಿಯು ಬಳಕೆಗೆ ಬರುವುದಕ್ಕೆ ಮೊದಲು ಬರವಣಿಗೆಯಲ್ಲಿ ಅನೇಕ ಪ್ರಯೋಗಗಳಾಗಿವೆ. ಮಾನವ ಮೊದಲ ಬರೆದ ಚಿತ್ರಲಿಪಿಯಿಂದ ಆರಂಭವಾಗಿ, ಭಾವ ಲಿಪಿ, ಮಧ್ಯಮಲಿಪಿ, ಧ್ವನಿರೂಪಕ ಲಿಪಿ, ಅರೆ ವರ್ಣಲಿಪಿ ಹಾಗೂ ಈಗಿನ ವರ್ಣಲಿಪಿಯ ರೂಪಕ್ಕೆ ಬಂದಿವೆ. ಈ ಬದಲಾವಣೆಯ ಅವಧಿ ಸಾವಿರಾರು ವರ್ಷಗಳು.[೧೦]

---

7. B.S. Kesavan : The Book in India, Page No. 1.
8. B.S. Kesavan : The Book in India, Page No. 3.
೯. ಡಾ. ಕೆ. ಶಿವರಾಮ ಕಾರಂತ : ಕರ್ನಾಟಕ ಚಿತ್ರಕಲೆ, ಪುಟ- ೧೮
೧೦. ಡಾ. ದೇವರ ಕೊಂಡಾರೆಡ್ಡಿ : ಲಿಪಿಯ ಹುಟ್ಟು ಮತ್ತು ಬೆಳವಣಿಗೆ, ಪುಟ- ೨

ಭಾರತೀಯರ ಬದುಕಿನಲ್ಲಿ ವೇದಗಳು ಪ್ರಮುಖ ಘಟ್ಟಗಳಾಗಿವೆ. ಜ್ಞಾನದ ಕೋಶಗಳಾಗಿರುವ ವೇದಗಳು ಬದುಕಿನ ಮಾರ್ಗದರ್ಶಿಕೆ ಗಳಾಗಿರುವುದರಿಂದ ಪ್ರಾಚೀನ ಭಾರತಿಯರಿಂದ ಇಂದಿನವರೆಗೂ ವೇದವೆಂಬುದು ಅಮೂಲ್ಯವಾಗಿದೆ. ವೇದದಲ್ಲಿ ಮೊದಲನೆ ಯದಾದ ಋಗ್ವೇದದಲ್ಲಿ ಚಿತ್ರಕಲೆಯ ಪ್ರಸ್ತಾಪ ಬರುತ್ತದೆ.[೧೧] ಅಲ್ಲದೇ ವೇದಕಾಲದಲ್ಲಿ ಕ್ರಿ.ಶ.ಪೂ.1500 ವರ್ಷಗಳ ಸುಮಾರಿಗೆ ಯಜ್ಞವೇದಿಕೆಗಳಲ್ಲಿ ಬಣ್ಣಗಳಿಂದ ಚಿತ್ತಾರ ಬರೆದು ಹೇಗೆ ಅಲಂಕರಿಸಬೇಕೆಂಬ ವಿಷಯವೂ ಇದೆ. ಮಹಾಭಾರತದ ಪೂರ್ವದಲ್ಲಿ ಬದುಕಿದ್ದ ಅಪಸ್ತಂಭನೆಂಬ ಋಷಿವರ್ಯನು ತನ್ನ **ಕರ್ಮಬುದ್ಧಿಸಾರ** ಎಂಬ ಗ್ರಂಥದಲ್ಲಿ ಚಿತ್ರಕಲೆಯ ಬಗೆಗೆ ಪ್ರಸ್ತಾಪಿಸಿದ್ದಾನೆ.[೧೨]

ರಾಮಾಯಣ, ಮಹಾಭಾರತದಲ್ಲೂ ಚಿತ್ರಕಲೆಯ ಪ್ರಸ್ತಾಪ ಬರುತ್ತದೆ. ಮಂತ್ರ ಸಂಹಿತೆಗಳು ಭಾರತೀಯ ಸಾಹಿತ್ಯದ ಪ್ರಾಚೀನತೆಯ ಜ್ಞಾನದ ನಿಧಿಗಳಾಗಿವೆ. ವಿಶ್ವದ ಪ್ರತ್ಯೇಕ ಭಾಗತ ಇತಿಹಾಸಕಾರರು ಇಂದು ಪೃಥ್ವಿಯ ಸಂಪೂರ್ಣ ಮಾನವ ಸಮಾಜದಲ್ಲಿ ಜ್ಞಾನದ ಇತಿಹಾಸವು ಮಂತ್ರ ಸಂಹಿತೆಗಳ ಉದಯದಿಂದಲೇ ಪ್ರಾರಂಭವಾಯಿತು.[೧೩]

ಮಂತ್ರಾಕ್ಷರಗಳ ಮೂಲಕ ದೇವರನ್ನು ಕಾಣಬಹುದಾದ ಎತ್ತರಕ್ಕೆ ಭಾರತದ ಧಾರ್ಮಿಕರು ಏರಿದ ನಿಲುವು ಅವರು ಕಂಡುಕೊಂಡ ಸತ್ಯ, ದೇವತಾ ಪರಿಕಲ್ಪನೆಗಳ ಕುರಿತಾಗಿ ಮುಂದಿನ ಅಧ್ಯಾಯಗಳಲ್ಲಿ ವಿವರಿಸಲಾಗಿದೆ. ಖ್ಯಾತ ವಿದ್ವಾಂಸರಾಗಿದ್ದ ಪಂ.ನಂ.ಶಿವರಾಮ ಶಾಸ್ತ್ರಿಗಳು ಬ್ರಾಹ್ಮಣಗಳ ಕಾಲದಲ್ಲಿ ಬರವಣಿಗೆಯನ್ನೇ ಉಪಯೋಗಿಲಾರದ ನಮ್ಮ ಹಿಂದಿನವರ ಮೌಖಿಕ ಸಾಧನೆ ಗಳು ನಮ್ಮ ಸಂಸ್ಕೃತಿಯ ವಾಹಕಗಳಾಗಿವೆ ಎಂದಿದ್ದಾರೆ.[೧೪]

ವೈದಿಕ ಯುಗದಲ್ಲಿ ದೇವಿಯರನ್ನೇ ಪೂರ್ಣ ಪ್ರಮಾಣದ ಚಿತ್ರದೇವಿಯರನ್ನಾಗಿ ಚಿತ್ರಿಸುವ ಕ್ರಮವು ಇತ್ತು ಎಂಬುದು ಇತ್ತೀಚೆಗೆ ತಿಳಿದುಬರುತ್ತದೆ. ಸೂಕ್ತ ಮತ್ತು ಸ್ತೋತ್ರಗಳ ಆಧಾರಗಳಿಂದ ಋಷಿಗಳು ಉಷಾದೇವಿ, ರಾತ್ರಿದೇವಿಯರ ಶಕ್ತಿಯುತ ಉಜ್ವಲ ಸೌಂದರ್ಯದ ದೇವಿಯರ ಚಿತ್ರಗಳನ್ನು ಚಿತ್ರಿಸಿದ್ದಾರೆ.[೧೫]

ಬ್ರಾಹ್ಮಣಗಳ ಕಾಲದಲ್ಲಿ ಯಜ್ಞದ ಮಹಿಮೆಯು ಅದ್ಭುತವಾಗಿ ಬೆಳೆದಿದ್ದರಿಂದ ಇವುಗಳಲ್ಲಿ ಉಪಯೋಗಿಸುತ್ತಿದ್ದ ಮಂತ್ರಗಳ, ಯಜುಸ್ಸುಗಳ ಸಾಮಗಾನಗಳ ಮಹಿಮೆಯೂ ಹೆಚ್ಚಿ ವೇದಗಳು ಅಪೌರಷೇಯವೆಂಬ ಭಾವನೆ ಬೆಳೆಯುತ್ತಾ ಬಂತು ವೇದಗಳ ಅಧ್ಯಯನ, ಅವುಗಳ ರಕ್ಷಣೆ ಒಂದು ಪವಿತ್ರ ಕಾರ್ಯವಾಯಿತು. ಇದರ ಫಲವಾಗಿ ಶಿಕ್ಷಾ, ಛಂದಸ್ಸು, ವೈಧಿಕ ಪದಗಳ ನಿರುಕ್ತಿ

---

೧೧. ಎನ್.ಮರಿಶಾಮಾಚಾರ : ಸಾಹಿತ್ಯದಲ್ಲಿ ಚಿತ್ರಕಲೆ, ಪುಟ- ೫

೧೨. ಎನ್.ಮರಿಶಾಮಾಚಾರ : ಸಾಹಿತ್ಯದಲ್ಲಿ ಚಿತ್ರಕಲೆ, ಪುಟ - ೩

೧೩. ಎನ್.ಮರಿಶಾಮಾಚಾರ : ಸಾಹಿತ್ಯದಲ್ಲಿ ಚಿತ್ರಕಲೆ, ಪುಟ- ೫

೧೪. ಅ.ನ.ಕೃ ಸಂ : ಭಾರತೀಯ ಸಂಸ್ಕೃತಿ ದರ್ಶನ, ಪುಟ - ೩೪

೧೫. ಎನ್.ಮರಿಶಾಮಾಚಾರ : ಸಾಹಿತ್ಯದಲ್ಲಿ ಚಿತ್ರಕಲೆ, ಪುಟ -೩

ಮಂತ್ರಾರ್ಥ ಸಾದೃಶ್ಯದ ದೇವತೆಗಳು

ಕಲಾವಿದ : ಶ್ರೀ ಜಿ.ಎಲ್.ಎನ್.ಸಿಂಹ,ಮೈಸೂರು.



ಕೃಪೆ :

ದಿ॥ಎಂ.ಬಿ.ಸಿಂಗ್ ಸಂಸ್ಥಾಪಿತ ರಾಮಸನ್ಸ್ ಕಲಾ ಪ್ರತಿಷ್ಠಾನ
ಸಂಶೋಧನೆ, ಪ್ರಶಿಕ್ಷಣ ಮತ್ತು ಕಲಾಭಿವೃದ್ಧಿ ಕೇಂದ್ರ ಮೈಸೂರು.

ವ್ಯಾಕರಣ - ಈ ಶಾಸ್ತ್ರಗಳ ಅವಿರ್ಭಾವಾಯಿತು. ವಿಧವಿಧವಾದ ಯಜ್ಞಗಳ ಆಚರಣೆಯಲ್ಲಿ ಕಟ್ಟು ನಿಟ್ಟಾದ ಕಾಲ ನಿಯಮಗಳನ್ನು ಅನುಸರಿಸ ಬೇಕಾಗಿದ್ದರಿಂದ ಜ್ಯೋತಿಷ್ಯದ ಉದಯವಾಯಿತು. ಇವೇ ಮುಂದಿನ ಶತಮಾನಗಳಲ್ಲಿ ಬೆಳೆದು ವೇದಾಂಗಗಳೆಂದು ಕರೆಯುವ ಶಾಸ್ತ್ರಗಳಾಗಿ ಪರಿಣಯಿಸಿದವು. ಅಗ್ನಿ ವೇದಿಯ ನಿರ್ಮಾಣದಲ್ಲಿ ಅನುಸರಿಸುತ್ತಿದ್ದ ನಿಯಮಗಳ ಅಧ್ಯಯನದ ಫಲವಾಗಿ ಗಣಿತಶಾಸ್ತ್ರ ಹುಟ್ಟಿತು. '' ಪೈಥಾಗೋರಾಸ್ - ಥಿಯೊರಂ '' ಎಂದು ಪಾಶ್ಚಾತ್ಯರಲ್ಲಿ ಪ್ರಸಿದ್ದವಾಗಿರುವ ಪ್ರಮೇಯವು ಬಹಳ ಹಿಂದೆಯೇ ಒಂದು ಪ್ರಾಚೀನ ವೇದಾಂಗ ಗ್ರಂಥದಲ್ಲಿ ಉಕ್ತವಾಗಿದೆ. ವೇದಗಳನ್ನು ಸ್ವಲ್ಪವೂ ಬದಲಾಗದಂತೆ ರಕ್ಷಿಸುವುದುದಕ್ಕಾಗಿ ವಿಧ ವಿಧವಾಗಿ ಮಾಡಿ ಹೆಳುವ ರೂಢಿ ಬಂತು (ಪದಪಾಠ) ವಿಭಾಗಮಾಡಿದ ಪದಗಳನ್ನು ಅನೇಕ ವಿಧವಾಗಿ ಜೋಡಿಸಿ ಹೇಳುವ ಪದ್ಧತಿಯೂ ಬಂತು. (ಜಟಾ ಮತ್ತು ಘನ ಪಾಠಗಳು) ಈ ವಿವಿಧ ಕ್ರಮಗಳಿಂದ ''ಪ್ರಾಚೀನ ವೈದಿಕ ಸಾಹಿತ್ಯವನ್ನು ಚಾಚೂ ತಪ್ಪದಂತೆ ಬರವಣಿಗೆಯನ್ನೇ ಉಪಯೋಗಿಸದೇ ನಮ್ಮ ಹಿಂದಿನವರು ಬಾಯಿಪಾಠಮಾಡಿ ಕಾಪಾಡಿಕೊಂಡು ಬಂದರು.'' ಇದಕ್ಕೆ ನಾವು ಅವರಿಗೆಷ್ಟು ಕೃತಜ್ಞರಾಗಿದ್ದರೂ ಸಾಲದು.[೧೬]

ಇಂತಹುದೇ ವಿಚಾರವನ್ನು ಡಾ.ಎಂ.ಎಂ.ಕಲಬುರ್ಗಿಯವರು ತಲೆಮಾರಿನಿಂದ ತಲೆಮಾರಿಗೆ ಸಾಗಿ ಬಂದ ಭೌತಿಕ ಮತ್ತು ಸಾಂಸ್ಕೃತಿಕ ಜ್ಞಾನ ಸಂಪತ್ತು ಒಂದುಕಾಲಕ್ಕೆ ಶೃತಿ ಪಾತಳಿಯಿಂದ ಲಿಪಿ ಮಾಧ್ಯಮದ ಮೂಲಕ ಕೃತಿ ಪಾತಳಿಗೆ ಇಳಿದು ಬಂದಿತು.[೧೭] ವೇದಗಳು ಅಪೌರುಷೆಯ ಮತ್ತು ಅವುಗಳು ಲಿಪಿಗೆ ಒಳಪಡದೇ ಹೀಗೆ ಮುಂದುವರಿಯಿತು. ಹೊಸ ಧರ್ಮಗಳ ಉದಯ, ಬರವಣಿಗೆಗಲ್ಲಿ ಹೊಸ ಬದಲಾವಣೆಗಳು ವೇದಕಾಲದ ಕೊನೆಯ ದಿನಮಾನಗಳಲ್ಲಿ ಹೊಸಬದಲಾವಣೆಗಳು ವೇದಕಾಲದ ಕೊನೆಯ ದಿನಮಾನಗಳಲ್ಲಿ ಪ್ರಾರಂಭವಾಗಿದ್ದವು ಜಟಿಲತೆ, ಕಟ್ಟು ಬದ್ಧ ಆಚರಣೆ ಕಾರಣದಿಮದಲೂ ವೇದಸಾಹಿತ್ಯವು ಸಾಮಾನ್ಯಜನರಿಂದ ದೂರ ಸರಿಯಲಾರಂಭಿಸಿತು.

ವೇದ ವಿಕ್ರಯಿಣಶ್ಚೈವ ವೇದಾನಾಂ ಚೈವದೂಷಕ : ।
ವೇದಾನಾಂ ಲೇಖಕಶ್ಚೈವ ತೆವೈ ನಿರಯಗಾಮಿನ : ॥

- ಮಹಾಭಾರತ

ಇವು ಮಹಾಭಾರತದ ಕಾವ್ಯದಿಂದ ಆಯ್ದುಕೊಂಡ ಸಾಲುಗಳು. ಕಾವ್ಯದ ಸಾಲುಗಳು ಮಹಾಭಾರತದಿಂದ ಆಯ್ದುಕೊಂಡಿದ್ದರೂ ಅದು ಹೇಳೇವುದು ವೇದ ಸಾಹಿತ್ಯ ಕುರಿತು ಅಂದಿನ ದಿನಮಾನಗಳಲ್ಲಿ ಇದ್ದಿರಬಹುದಾದ ಪರಿಕಲ್ಪನೆಯ ಬಗೆಗೆ ವ್ಯಾಪಕವಾದ ವಿವರವನ್ನು ನೀಡುತ್ತದೆ. ವೇದಗಳನ್ನು ಮಾರಾಟಮಾಡುವವರು, ವೇದಗಳನ್ನು ತಪ್ಪಾಗಿ ಓದುವವರು ಮತ್ತು

---

೧೬. ಅ.ನ.ಕೃ ಸಂ: ಭಾರತೀಯ ಸಂಸ್ಕೃತಿ ದರ್ಶನ, ಪುಟ - ೩೫
೧೭. ಡಾ. ಎಂ.ಎಂ.ಕಲಬುರ್ಗಿ : ಕನ್ನಡ ಹಸ್ತಪ್ರತಿ ಶಾಸ್ತ್ರ, ಪುಟ - ೧೮

ಸಪ್ತಮಾತೃಕೆಯರು

ಕಲಾವಿದ : ಶ್ರೀ ಕೆ.ಎಸ್. ಶ್ರೀಹರಿ, ಮೈಸೂರು.



ಕೃಪೆ :

ದಿ|| ಎಂ. ಬಿ. ಸಿಂಗ್ ಸಂಸ್ಥಾಪಿತ ರಾಮಸನ್ಸ್ ಕಲಾ ಪ್ರತಿಷ್ಠಾನ

ಸಂಶೋಧನೆ, ಪ್ರಶಿಕ್ಷಣ ಮತ್ತು ಕಲಾಭಿವೃದ್ಧಿ ಕೇಂದ್ರ ಮೈಸೂರು.

ವೇದಗಳನ್ನು ಬರೆಯುವವರು ನರಕದ ಹಾದಿಯನ್ನು ಹಿಡಿಯುತ್ತಾರೆ.[೧೮]

ಈ ಕಾರಣಕ್ಕಾಗಿಯೇ ಶಬ್ದದ ತಿಳುವಳಿಕೆ ಸಾಹಿತ್ಯಿಕ ಪರಿಚಯವಿರುವಂತಹ ನಮ್ಮ ದೇಶದಲ್ಲಿ ಶ್ರುತಿ, ಸ್ಮೃತಿ ಮುಂದುವರೆಯಿತಲ್ಲದೇ ಬರವಣಿಗೆಯ ಸಾಧನವು ವೇದಕಾಲದಲ್ಲಿ ಮುಂದುವರೆಯಲಿಲ್ಲ ಎಂಬುದನ್ನು ಗಮನಿಸಬೇಕು. ಆದರೆ ಕಾಲನುಕ್ರಮದಲ್ಲಿ ಬಲವಾದ ಮೌಖಿಕ ಸಂಪ್ರದಾಯವು. ದೀಕ್ಷೆಪಡೆದ (Estoteric) ಪುರೋಹಿತಶಾಹಿ ಕುಟುಂಬಗಳಲ್ಲಿ ಕಡಿಮೆಯಾಗ ಹತ್ತಿತ್ತು. ಈ ಕುರಿತು ಡಾ।। ಶೂ ಹಿಕೊಸಕ (Dr.Shu Hikosa) ಮತ್ತು ಡಾ।। ಜಾನ್ ಸಾಮ್ಯುವೆಲ್ (Dr.G.John samuel) ಅವರುಗಳ ಅಭಿಪ್ರಾಯ ಗಮನಿಸೋಣ.

ನಾವು ಕಂಡುಕೊಂಡಂತೆ ವೇದಕಾಲದಲ್ಲಿ ಬರವಣಿಗೆ ಎಂಬುದೇ ಇರಲಿಲ್ಲ ಅದು ನಿಷೇಧಿಸಲ್ಪಟ್ಟಿತ್ತು. ಕಲಿಯುವಿಕೆ ಎಂಬುದು ಕೇವಲ ಕಿವಿಗಳ ಮುಖಾಂತರ ಕೇಳುವ ಶ್ರುತಿ ಯಾಗಿತ್ತು, ಅಂದು ವೇದಗಳೇ ಶ್ರುತಿಗಳೆಂದು (ಯಾವುದು ಕೇಳಿದ್ದು) ಹೆಸರುಗಳಿಸಿಕೊಂಡಿದ್ದವು. ಬರವಣಿಗೆಯು ಕ್ರಿಸ್ತಶಕಕ್ಕಿಂತ ಕೇವಲ ಐದುನೂರು ವರ್ಷಗಳೇ ಹಿಂದಿನದೆಂದು ನಂಬಲಾಗಿದೆ. ಮರದ ತೊಗಟೆಗಳ ನಂತರ ತಾಳಪತ್ರಗಳನ್ನು ಬರವಣಿಗೆಯ ವಸ್ತುಗಳನ್ನಾಗಿ ಬಳಸುತ್ತಿದ್ದರು. ಬರಿಯುವ ಸಾಧನವನ್ನಾಗಿ ಚೂಪಾದ ಕಬ್ಬಿಣದ ಸರಳನ್ನು ಬಳಸಲಾಗುತ್ತಿತ್ತು. ಇದರಿಂದ ಬರಿಯುವ ಪಾತಳಿಯ ಮೇಲೆ ಗೀರಲಾಗುತ್ತಿತ್ತು ನಂತರ ಕಾಡಿಗೆಯಿಂದ ಮಸಿಯನ್ನು ಸವರಲಾಗುತಿತ್ತು. ಮೇಲೆ ತಿಕ್ಕುವುದರಿಂದ ಗೀರುವ ರೇಖೆಗಳ ಆಳದಲ್ಲಿ ಮಾತ್ರ ಮಸಿ ಉಳಿಯುತಿತ್ತು. ಸಾಂಕೇತಿಕ ರೂಪದ, ಚಿತ್ರಸ್ವರೂಪದ ಈ ಲಿಪಿ ಕಾಲನುಕ್ರಮದಲ್ಲಿ ಹೊಸ ಬೆಳವಣಿಗೆಯನ್ನು ಕಾಣಲಾರಂಭಿಸಿತು. ಈ ಸಮಯದಲ್ಲಿ ಆಗ್ನೇಯ ಭಾರತದಲ್ಲಿ ಚಾಲನೆಯಲ್ಲಿದ್ದ ಖರೋಷ್ಠಿ ಲಿಪಿಯನ್ನು ಎರವಲಾಗಿ ಪಡೆಯಿತು. ಖರೋಷ್ಠಿ ಲಿಪಿಯನ್ನು ಬಲದಿಂದ ಎಡಕ್ಕೆ ಬರೆಯುತ್ತಾರೆಂಬುದು ಸುಮೇರಿಯನ್ ನಾಗರಿಕತೆಯಿಂದ ತಿಳಿದುಬರುತ್ತದೆ. ಬ್ರಾಹ್ಮಿ ಲಿಪಿಯು ಎಡದಿಂದ ಬಲಕ್ಕೆ ಬರುವ ಲಿಪಿಯು ದಕ್ಷಿಣ ಭಾರತವನ್ನು ಹೊರತುಪಡಿಸಿ ಇಡೀ ಭಾರತದಾದ್ಯಂತ ಚಾಲನೆಯಲ್ಲಿ ಇತ್ತು .[೧೯]

ಸಂಸ್ಕೃತ ಹಸ್ತಪ್ರತಿ ಚಿತ್ರಕಲೆ : ಹಸ್ತಪ್ರತಿಗಳಿಗಾಗಿ ತಾಡ ಪತ್ರಗಳನ್ನಾಗಲಿ, ಭೂರ್ಜ ಪತ್ರಗಳನ್ನಾಗಲಿ ಹೇಗೆ ತಯಾರಿಸುತ್ತಾರೆ. ತಯಾರಿಕಾಕ್ರಮದಲ್ಲಿ ತಾಳೆಯ ಮರದ ಗರಿಗಳಿಂದ ಹಿಡಿದು ಅವುಗಳನ್ನು ಹದಗೊಳಿಸಿ, ಹಲವು ಕ್ರಮಗಳು ಹಂತಗಳು ಜರುಗಿದ ನಂತರ ಕಂಠವನ್ನು ಬಳಸಿ ಅಕ್ಷರಗಳನ್ನು ಕೊರೆದು ಕಪ್ಪನ್ನು ಸವರಿ ಫಲಕಗಳನ್ನಿಟ್ಟು ವಸ್ತ್ರಬಿಗಿದು ಕವುಳಿಗೆಯನ್ನು , ಕಟ್ಟನ್ನು ಹೇಗೆ ತಯಾರಿಸುತ್ತಿದ್ದರೂ ಎಂಬ ವಿಷಯವು ಕನ್ನಡ ಸಾಹಿತ್ಯದ ಚರಿತ್ರೆಯಲ್ಲಿ ಸಾಕಷ್ಟು ಮಾಹಿತಿ ದೊರೆತಿದೆ. ಮತ್ತು ಅನೇಕ ಕನ್ನಡೇತರ ಕೃತಿಗಳಿಂದಲೂ ತಿಳಿದು ಬಂದಿದೆ. ಆದರೆ ಹಸ್ತ ಪ್ರತಿಗಳಲ್ಲಿಯ ಚಿತ್ರ ಅಥವಾ ಚಿತ್ರಕಲಾಕೃತಿ

---

೧೮. Wakankar : Mahabharata, The Book in India.Caltis 1984., Pg. No. 117

೧೯. Dr.Shu,Hikoshaka & Dr.G.John Samuel Edt.by : A descriptive Catalogue of palm - leaf manuscripts in Tamil Nadu, Pub : Institute of Asian Studies, Madras, Pg.No.VII

ಸಪ್ತಮಾತೃಕೆಯರು

ಕಲಾವಿದ : ಶ್ರೀ ಕೆ.ಎಸ್. ಶ್ರೀಹರಿ, ಮೈಸೂರು.







ಕೃಪೆ :

ದಿ॥ಎಂ.ಬಿ.ಸಿಂಗ್ ಸಂಸ್ಥಾಪಿತ ರಾಮಸನ್ಸ್ ಕಲಾ ಪ್ರತಿಷ್ಠಾನ

ಸಂಶೋಧನೆ, ಪ್ರಶಿಕ್ಷಣ ಮತ್ತು ಕಲಾಭಿವೃದ್ಧಿ ಕೇಂದ್ರ ಮೈಸೂರು.

ಗಳ ರಚನೆ ಕುರಿತು ಕನ್ನಡ ಸಾಹಿತ್ಯದಲ್ಲಂತೂ ಅಧಿಕೃತವಾದಂತಹ ಮಾಹಿತಿಯೇ ದಾಖಲಾಗಿರುವುದಿಲ್ಲ ಎನ್ನುವಷ್ಟು ಇದೆ. ಇದ್ದರೂ ದಾಖಲುಗೊಂಡಿಲ್ಲ ಎಂಬುದು ಖೇದದ ಸಂಗತಿಯಾಗಿದೆ. ಹಸ್ತ ಪ್ರತಿಗಳಲ್ಲಿಯ ಚಿತ್ರಗಳನ್ನು ಕುರಿತು ಮಹಾಕವಿ ಕಾಳಿದಾಸ ಈ ರೀತಿಯಾಗಿ ಹೇಳುತ್ತಾನೆ.

ಭೂರ್ಜ-ತ್ವಚ ಕುಂಜರ -ಬಿಂದು ಸೊನಃ
ವೈಜಂತಿ ವಿದ್ಯಾಧರ ಸುಂದರಿನಾಮ ಅನಂಗಃ
ಲೇಖಕ್ರಿಯಾಯೋಪಾಯ ಯೋಗಮ್

ಕುಃ ಇರ್ಸಾಂಭವ. 1:17 - ಕಾಳಿದಾಸ

ಮಹಾಕವಿ ಕಾಳಿದಾಸನು ತನ್ನ "ಕುಮಾರ ಸಂಭವ" ಕೃತಿಯ ಪ್ರಾರಂಭದಲ್ಲಿ ನೈಸರ್ಗಿಕ ಖನಿಜಾಂಶಗಳ ವರ್ಣದಿಂದ ರಚಿಸಿರುವ ಭೂರ್ಜಪತ್ರದ ಹಸ್ತಪ್ರತಿ ಚಿತ್ರಕಲೆಯನ್ನು ನೋಡಿ ತನ್ನದೆಯಾದ ಕವಿತ್ವಗುಣದಿಂದ ಈ ಮೇಲಿನಂತೆ ಕವಿತೆಯೊಂದನ್ನು ರಚಿಸಿದ್ದಾನೆ. ಕಾವ್ಯದ ಭಾವ ಇಂತಿದೆ. ಕೃತಕವಲ್ಲದ ವರ್ಣಗಳಿಂದ ರಚಿಸಿದ ಹಸ್ತಪ್ರತಿ ಚಿತ್ರವು ರಕ್ತರಂಜಿತ ಆನೆಯ ಚರ್ಮವು ಯುವ ರಾಜಕುಮಾರ ವಿದ್ಯಾಧರನು ತನ್ನ ಯುವ ಕಿಶೋರ ಸಖಿಯರಿಗೆ ಬರಿಯುವ ಪ್ರೇಮ ಪತ್ರದಂತಿದೆ ಎಂದು ವರ್ಣಿಸಿರುವ ಆತ ತನ್ನ ಮತ್ತೊಂದು ಕಾವ್ಯ ಸಂಕಲವಾಗಿರುವ 'ವಿಕ್ರಮೋರ್ವಶ್ಯ' ದಲ್ಲಿ ಈ ವರ್ಣರಂಜಿತ ಹಸ್ತಪ್ರತಿಯು

" ಭೂಜಂಗಾನಿರ್ಮೋಕಾ ಇವ ಭೂರ್ಜ ಪತ್ರರಂಗತೋ"

ಕಳಚಿಕೊಂಡಿರುವ ಕಾಳಿಂಗ ಸರ್ಪದ ಪೊರೆಯಂತಿದೆ ಎಂದು ಹೀಗೆ ಹೇಳಿಕೊಂಡಿದ್ದಾನೆ.

ಕ್ರಿ.ಶ. 932 ರ ಸುಮಾರಿಗೆ ಇದ್ದಂತಹ ಹರಿಶೇನನು ಹಸ್ತಪ್ರತಿಯ ಚಿತ್ರವು ಅರಿವೆಯ ಮೇಲೆ ರಚಿಸಿರುವುದರ ಒಂದು ಉದಾಹರಣೆಯನ್ನು ಕೊಡುತ್ತಾನೆ. ಅವನಂತೆ ಹರ್ಷಚರಿತೆಯ ಬಾಣನೂ ಅರಿವೆಯ ಮೇಲೆ ಬರೆದ ಹಸ್ತಪ್ರತಿಯ ಚಿತ್ರ ವಿವರಿಸುತ್ತಾನೆ. ತನ್ನ ಕೃತಿಯಾಗಿರುವ ಕಾದಂಬರಿಯ ಕೃತಿಯಲ್ಲಿ ಪುಂಡರೀಕನು ತನ್ನ ಪ್ರಿಯತಮೆ ಮಹಾಶ್ವೇತೆಗೆ ತಾನುಟ್ಟ ವಲ್ಕಲದಂತಹ ತೆಳು ಅರಿವೆಯ ಮೇಲೆ ಕಲಾತ್ಮಕವಾದ ಸಂದೇಶ ಕಳಿಸಿದನಂತೆ. [೧೦]

ಸಂಸ್ಕೃತ ಯುಗದ ಹಸ್ತಪ್ರತಿ ಚಿತ್ರಕಲಾಗ್ರಂಥಗಳು : ಸಂಸ್ಕೃತ ಸಾಹಿತ್ಯದಲ್ಲಿ ಹಸ್ತಪ್ರತಿ ಚಿತ್ರಕಲೆಗೆ ಸಂಬಂಧಿಸಿದ ವಿಪುಲ ಸಾಹಿತ್ಯ ವಿದೆ. ಸಂಸ್ಕೃದ ಮಹಾಕಾವ್ಯ, ಕಾವ್ಯ, ನಾಟಕ, ಕೋಶ, ಪುರಾಣಮತ್ತು ಇತರ ಸಂಸ್ಕೃತ ಸಾಹಿತ್ಯದಲ್ಲಿ ಚಿತ್ರಕಲೆಯ ಪರಂಪರೆ ಮತ್ತು ಚಿತ್ರಕಲೆಯ ಅನೇಕ ವಿಧಿ ವಿಧಾನಗಳ ಕುರಿತು ಸಮೃದ್ಧವಾದ ವಿವರವಿದೆ. ವೇದ, ಆಗಮ,ತಂತ್ರ, ಗೃಹಸೂತ್ರ, ಧರ್ಮ ಶಾಸ್ತ್ರ ಅರ್ಥಶಾಸ್ತ್ರ ಪಂಚರಾತ್ರ ಮತ್ತು ಪ್ರತಿಮಾ ವಿಜ್ಞಾನ ಮುಂತಾದ ಅನೇಕ ವಿಷಯಗಳ ಕುರಿತು ಸಾಕಷ್ಟು ಮಾಹಿತಿ ದೊರೆಯುವದು.

ಪಂಪ ಪೂರ್ವ ಯುಗದ ಕೆಲವು ಗ್ರಂಥಗಳು ಕಲೆಗಾಗಿಯೇ ಮೀಸಲಾದ ಕೆಲವು ಗ್ರಂಥಗಳಾದರೇ, ಕಲೆಯ ಕುರಿತು ಅಧ್ಯಾಯಗಳಲ್ಲಿ ವಿಷಯ ವಿವರಿಸಿದಂತಹ ಗ್ರಂಥಗಳು

೧೦. ಡಾ. ಎಸ್.ಸಿ.ಪಾಟೀಲ : ಕರ್ನಾಟಕದ ಜನಪದ ಚಿತ್ರಕಲೆ, ಪುಟ - ೫೨

ಕೆಲವು ಇವೆ. ಈ ಗ್ರಂಥಗಳಲ್ಲಿಯ ಹಸ್ತಪ್ರತಿಗಳಲ್ಲಿ ಚಿತ್ರಸ್ವರೂಪ, ಶರೀರ ಲಕ್ಷಣ, ಪಶು, ಕಾಮ, ಪಕ್ಷಿ, ಸಸ್ಯಗಳ ಬಳ್ಳಿಗಳ ಸಂಯೋಜನಾ ಕ್ರಮ ಸಾಕಷ್ಟು ಹಸ್ತಪ್ರತಿಗಳು ಸಚಿತ್ರವಾಗಿದ್ದು ಪಠ್ಯದ ವಿವರಕ್ಕಾಗಿ ಸಾಕಷ್ಟು ಚಿತ್ರಗಳನ್ನು, ಮಂಡಲಗಳನ್ನು, ಚಿತ್ತಾರಗಳನ್ನು ಗರಿಗಳ ತುಂಬೆಲ್ಲಾ ಬರೆಯಲಾಗಿದೆ. ಅವುಗಳನ್ನು ಕುರಿತು ನಾವೀಗ ಗಮನಿಸಬಹುದು.

ಪಂಚದಶಿ :ಸಂಸ್ಕೃತ ಸಾಹಿತ್ಯದಲ್ಲಿ ಚಿತ್ರಕಲೆ ಉಲ್ಲೇಖದ ಹಲವಾರು ಕೃತಿಗಳಿದ್ದು ಕೆಲವನ್ನು ಇಲ್ಲಿ ಹೆಸರಿಸಬಹುದಾಗಿದೆ. ಪಂಚದಶಿಯಲ್ಲಿ ಚಿತ್ರದೀಪವೆಂಬ ಅಧ್ಯಯಾವೇ ಇದೆ. ಅಷ್ಟಾಧ್ಯಾಯಿ ನಾಟ್ಯಶಾಸ್ತ್ರ ಮೇಘದೂತ, ರಘುವಂಶ, ಕಾಮಸೂತ್ರ, ಬೃಹತ್ ಸಂಹಿತಾ, ವಿಷ್ಣುಧರ್ಮೋತ್ತರ ಪುರಾಣ ಮತ್ಸ್ಯ ಪುರಾಣ, ಗರುಡಪುರಾಣ, ಅಗ್ನಿಪುರಾಣ, ಹರಿವಂಶಪುರಾಣ, ಸ್ಕಂದಪುರಾಣ, ಪದ್ಮ ಪುರಾಣ, ಮೇದಿನಿ ಕೋಶ, ಬಾಣಕಾದಂಬರಿ, ಹರ್ಷಚರಿತ, ದಶಕುಮಾರ ಚರಿತ, ಕುಟ್ಟನಿಮಿತ ತಿಲಕಮಂಜರಿ, ಕಥಾಸರಿತ್ಸಾಗರ, ಮಾನಸಾರ,ಕಾವ್ಯ ಪ್ರಕಾಶ, ನೈಷಧ ಚರಿತ, ಪ್ರಶ್ನೆವ್ಯಾಕರಣ ಸೂತ್ರ, ತ್ರಿಷಷ್ಠಿ ಶಲಾಕಾಪುರುಷಚರಿತ, ನಾನರ್ಥ ವರ್ಣಸಂಕ್ಷೇಪ, ಆಚಾರಾಂಗ ಸೂತ್ರ, ಮಹಾವಂಶ, ವಿನಯಪಿಟಕ, ದಮ್ಮಪದ ಮುಂತಾದ ಕೃತಿಗಳಲ್ಲಿ ಚಿತ್ರಕಲೆಯ ರಚನಾವಿಧಿ ವಿಧಾನದ ಕುರಿತು ಹಲವಾರು ಉಪಯುಕ್ತ ಮಾಹಿತಿಗಳು ಸಿಗುತ್ತವೆ. [೨೧] ಇವುಗಳ ಹೆಚ್ಚಿನ ವಿವರಣೆಯನ್ನು ಅಧ್ಯಾಯ ನಾಲ್ಕರಲ್ಲಿ ಚರ್ಚಿಸಲಾಗಿದೆ.

2. ಪ್ರಾಕೃತ ಯುಗದ ಹಸ್ತಪ್ರತಿ ಚಿತ್ರಕಲೆ. (ಸು.ಕ್ರಿ.ಶ.4ನೇ ಶತಮಾನ)

ಕರ್ನಾಟಕಕ್ಕೆ ಪರಿಚಿತವಾಗಿದ್ದ ಪ್ರಾಕೃತ ಭಾಷೆಯ ಕಾರಣದಿಂದ ಅನೇಕ ಪ್ರಾಕೃತ ಹಸ್ತಪ್ರತಿಗಳು ಕರ್ನಾಟಕದ ಹಸ್ತಪ್ರತಿ ಚಿತ್ರಕಲೆಯ ಇತಿಹಾಸವನ್ನು ಕಟ್ಟಿ ಕೊಡಲು ಸಹಾಯಕವಾಗಿವೆ. ಈ ಪ್ರಾಕೃತ ಭಾಷೆಯು ಉತ್ತರ ದಕ್ಷಿಣ ಮತ್ತು ಪೂರ್ವ ಪಶ್ಚಿಮ ಭಾರತದ ಭಾಗಗಳನ್ನು ಒಂದುಗೂಡಿಸಿದ್ದಲ್ಲದೆ ಕರ್ನಾಟಕದ ಹಸ್ತಪ್ರತಿಗಳು ವಿಭಿನ್ನವಾಗಿ ಮೂಡಿ ಬರಲು ಕಾರಣೀಭೂತವಾಗಿರುವಂತೆಯೇ ಅತ್ಯಮೋಘವಾದ ಚಿತ್ರಕಲಾ ಭಂಡಾರದ ಹಸ್ತಪ್ರತಿಗಳ ಕರ್ನಾಟಕದಲ್ಲಿ ಪ್ರವರ್ಧಮಾನಕ್ಕೆ ಬರಲು ಕಾರಣಿಭೂತವಾಗಿವೆ.

ಪ್ರಾಕೃತದ ಬೆಳವಣಿಗೆಯನ್ನು ಕುರಿತು ಕರ್ನಾಟಕದ ಇತಿಹಾಸ ದರ್ಶನದ ಸಂಪಾದಕರಾಗಿರುವ ಶ್ರೀ ಎಂ.ಎ.ಕೃಷ್ಣರಾವ್ ಮತ್ತು ಎಂ.ಕೇಶವಭಟ್ಟರು ಈ ರೀತಿ ಉಲ್ಲೇಖಿಸುತ್ತಾರೆ. ''ಇತಿಹಾಸ ಕಾಲದ ಆರಂಭ ಯುಗದಲ್ಲಿ ಸುಮಾರು ಕ್ರಿ.ಶ.1 ರಿಂದ 4ನೇಯ ಶತಮಾನದ ವರೆಗೆ (ಇಂದಿನ ಮಹಾರಾಷ್ಟ್ರ ಮತ್ತು ಉತ್ತರ ಕರ್ನಾಟಕ ಪ್ರಾಂತಗಳಿಂದ ಕೂಡಿದ) ಕುಂತಳ ದೇಶಕ್ಕೆ ಸಾತವಾಹನರು ಪ್ರಭುಗಳಾಗಿದ್ದರಷ್ಟೆ, ಅವರ ಕಾಲದಲ್ಲಿ ಪ್ರಾಕೃತವೇ ರಾಜಭಾಷೆಯಾಗಿತ್ತು. ಕ್ರಿ.ಶ. ಒಂದನೇಯ ಶತಮಾನದ ಸಾತವಾಹನ ರಾಜನಾದ ಹಾಲನು ಸುಮಾರು 700 'ಗಾಹೆ' ಕೂಡಿದ ಗೀತ

---

೨೧. ಡಾ. ಎಸ್.ಸಿ.ಪಾಟೀಲ : ಕರ್ನಾಟಕದ ಜನಪದ ಚಿತ್ರಕಲೆ, ಪುಟ - ೫೨

ಕರ್ನಾಟಕದ ಪ್ರಾಕೃತ ಹಸ್ತಪ್ರತಿ ವರ್ಣಚಿತ್ರಗಳು

ಕೃತಿ : ಧವಳ ಗ್ರಂಥ



Courtesy :

C.Shivaram Murthy
South Indian Paintings
Publication Divsion Minstry of Information
& Brod casting Govt.of India, New Delihi

ಸಂಕಲನವೊಂದನ್ನು ರಚಿಸಿದನು. ಇದರ ಹೆಸರು 'ಗಾಹಾ' ಸತ್ತಾಸಯೀ ಈ ಗೀತ ಸಂಕಲನ ಪ್ರಾಕೃತದಲ್ಲಿದೆ. ಇದರ ಸಂಸ್ಕೃತ ರೂಪ 'ಗಾಥಾ ಸಪ್ತಶತೀ' [೨೨]

ಪುರಾತನ ಪ್ರಾಕೃತ ಗ್ರಂಥಗಳು ಸಾಮಾನ್ಯವಾಗಿ ಜೈನ ಗ್ರಂಥಗಳು. 11ನೇಯ ಶತಮಾನದವರೆಗೆ ಪ್ರಾಕೃತವು ಜೈನರ ಪನಿತ್ರ ಭಾಷೆಯಾಗಿತ್ತು. ದೇಶ ಭಾಷೆಯೇ ಅವರ ಮತ ಪ್ರಚಾರ ಮಾಧ್ಯಮವಾಗಿತ್ತು. ಹೀಗೆ ಮೈಸೂರಿನಲ್ಲಿ ಕನ್ನಡದಲ್ಲೂ, ತಮಿಳು ನಾಡಿನಲ್ಲಿ ತಮಿಳಿನಲ್ಲೂ, ಆಂಧ್ರಪ್ರದೇಶದಲ್ಲಿ ತೆಲುಗಿನಲ್ಲೂ ಜೈನ ಧರ್ಮಗ್ರಂಥಗಳು ರಚಿತವಾಗತೊಡಗಿದವು. ನಮಗೆ ಕೈಯೆಡೆಯಾಗಿ ಬಂದ ಪ್ರಾಕೃತ ಗ್ರಂಥಗಳು ಹಲವಿವೆ. ತ್ರೈಲೋಕ್ಯ ಪ್ರಜ್ಞಾಪತಿ, ಸರ್ವನಂದಿ, ಅನುಪ್ರೇಕ್ಷಾ, ದರ್ಶನಸಾರ, ಜ್ಞಾನ ಚಂದ್ರಚರಿತೆ, ಪರಮಾತ್ಮ ಪ್ರಕಾಶ, ಸಮಧಮ್ಮ ದೋಹಾ, ಗ್ರಂಥಗಳು ಪ್ರಾಕೃತದಲ್ಲಿದ್ದವು. ಸಂರಕ್ಷಣೆಯ ಕೊರತೆ, ಸೂಚಿ ರಚನೆಯಕೊರತೆ ಮತ್ತು ಅನ್ಯಧರ್ಮಿಯರು ನೋಡಕೂಡದು ಎನ್ನುವ ಧಾರ್ಮಿಕ ವಿಧಿಯಕಾರಣದಿಂದಾಗಿ ಅವುಗಳನ್ನು ಸಾಮಾನ್ಯ ಓದುಗರ ಕೈಗಳಿಗೆ ಲಭ್ಯವಾಗುವದಿಲ್ಲವಾಗಿವೆ. [೨೩]

1. ಕದಂಬರ ಕಾಲ : ಕ್ರಿ.ಶ. 4ನೇ ಶತಮಾನದಲ್ಲಿ ರಾಜ್ಯ ಸ್ಥಾಪಿಸಿ ಆಳ್ವಿಕೆ ಪ್ರಾರಂಭಿಸಿದ ಕದಂಬರ ಕಾಲದ ಯಾವುದೇ ಹಸ್ತಪ್ರತಿ ಚಿತ್ರಗಳು ಇಂದು ಉಳಿದಿಲ್ಲ. ಆದರೆ ಹಸ್ತಪ್ರತಿಗಳಲ್ಲಿ ಚಿತ್ರ ರಚನೆ ನಡೆದಿರಬಹುದು ಎಂದು ನಂಬಲು ಸಾಧ್ಯತೆಗಳಿವೆ. ಏಕೆಂದರೆ ಅವರು ಕಟ್ಟಿದ ವಾಸ್ತುರಚನೆಗಳು ಅನೇಕ ಪ್ರಾಚೀನ ಸಂಸ್ಕೃತ ಹಸ್ತಪ್ರತಿಗಳಲ್ಲಿರುವ ವಾಸ್ತು ರಚನೆಗಳನ್ನು ಆಧರಿಸಿದರಿಂದ ಅವರಲ್ಲಿಯೂ ಕೂಡ ಹಸ್ತಪ್ರತಿಗಳಲ್ಲಿ ಚಿತ್ರರಚನೆಯಾಗಿರಬಹುದೆಂದು ಭಾವಿಸಲಾಗಿದೆ.

2. ಬಾದಾಮಿಯ ಚಾಲುಕ್ಯರ ಕಾಲ: ಕ್ರಿ.ಶ. 6ನೇ ಶತಮಾನ ಕನ್ನಡಗಿರ ಸ್ವಾಭಿಮಾನ ಕಲೆ ಸಾಹಿತ್ಯಗಳ ಕೇಂದ್ರಸ್ಥಾನವಾದಂಥ ರಾಜ್ಯವಾಗಿತ್ತು. ದ್ವಿತಿಯ ಪುಲಿಕೇಶಿಯು ರಣವೀರನಾದಂತೆ ಕಲೆ, ಸಾಹಿತ್ಯ, ಕೃಷಿ ಮತ್ತು ಸಂಗೀತಗಳಲ್ಲಿ ಆಸಕ್ತಿ ಉಳ್ಳ ದೊರೆಯಾಗಿದ್ದ. ಆಕಾರಣದಿಂದಲೇ ಬಾದಾಮಿ, ಪಟ್ಟದಕಲ್ಲು, ಐಹೊಳೆ ಗಳಂಥ ಅನೇಕ ಗುಹಾಂತರ ಪ್ರದೇಶಗಳಲ್ಲಿ ಅನೇಕ ದೇವಾಲಯಗಳನ್ನು ಪ್ರಾಯೋಗಿಕವಾಗಿ ನಿರ್ಮಿಸಿದ ಕೀರ್ತಿ ಈತದು. ಉತ್ತರದ ನಾಗರ ಮತ್ತು ದಕ್ಷಿಣದ ದ್ರಾವಿಡ ಮತ್ತು ಪೂರ್ವದ ವೇಸರಗಳನ್ನೆಲ್ಲ ಸಂಗ್ರಹಿಸಿಕೊಂಡು ತನ್ನದೇ ಆದ ಚಾಲುಕ್ಯ ಶಿಲ್ಪಕಲೆಯನ್ನು ಜಗತ್ತಿಗೆ ಪರಿಚಯಿಸಿದ ಕೀರ್ತಿ ಈ ದೊರೆಯದು. ಸುಮಾರು 25 ವರ್ಷದ ಹಿಂದೆಯೇ ಭಿತ್ತಿ ಚಿತ್ರದಲ್ಲಿ ಮಾಡಿದ ಹಲವು ಚಿತ್ರಗಳು ಬಾದಾಮಿ ಪರಿಸರದಲ್ಲಿ ಇದ್ದರೂ ಅವು ಪ್ರಾಚೀನ ಹಸ್ತಪ್ರತಿ ಗ್ರಂಥಗಳ ಆಧಾರಗಳಾಗಿವೆ ಎಂದು ವಿದ್ವಾಂಸರು ಅಭಿಪ್ರಾಯ ಪಡುತ್ತಾರೆ. ಇಲ್ಲಿಯೂ ಗಣ್ಯ ಸ್ತ್ರೀಯರು ಕಮಲಪುಷ್ಪ ರಚನೆಯಾಗಿವೆ. ಇವು ಕೂಡಾ ಅ ಸುಂದರ ಅವರು ಶೋಧಿಸಿದ ಚಿತ್ರಗಳ ಕಾಲಮಾನದ್ದೇ

---

೨೨. K.G. Subramanyam : Moving Focus. Lalita Kala Academy, DELHI. Pg. 100.

೨೩. ಎನ್. ಮರಿಶಾಮಾಚಾರ : ಸಾಹಿತ್ಯದಲ್ಲಿ ಚಿತ್ರಕಲೆ, ಪುಟ - ೩೬

ಇರಬಹುದೆಂದು ಡಾ. ಶಿಲಾಕಾಂತ ಪತ್ತಾರ ಅಭಿಪ್ರಾಯ ಪಡುತ್ತಾರೆ.

ಅ.ಸರ್ವಚೇತನವಾದ:(Animistic) ಸುಮಾರು 7ನೇ ಶತಮಾನದಲ್ಲಿ ಭಾರತಿಯರಲ್ಲಿ ಕಂಡುಬರುವ ಮರ, ಸಸ್ಯ, ಸಸ್ಯದ ದಳಗಳು ಪವಿತ್ರ ಸಂಕೇತಗಳಾಗಿ ಹರಪ್ಪಾ ಮಹೆಂಜೋದಾರೊ ನಾಗರಿಕತೆ (2000ಬಿಸಿ)ಗಳಲ್ಲು ಇಂತಹ ಸಾಂಕೇತಿಕ ಚಿತ್ರಗಳನ್ನು ಕಾಣುತ್ತೇವೆ ಆಲದಮರವನ್ನು ಧಾರ್ಮಿಕ ಸಂಕೇತವಾಗಿ ಭೌದ್ಧ ಧರ್ಮದಲ್ಲಿ 'ಬೋದಿ'ಯಾಗಿ ಚಿತ್ರ ರೂಪದಲ್ಲಿ ಬಳಸಿಕೊಂಡಿರುವಂತೆ ವೈದಿಕ ಧರ್ಮದಲ್ಲೂ ಆಲದ ಮರವನ್ನು ಅದರ ಎಲೆಯನ್ನು ಸಂಕೇತವಾಗಿ ಬಳಸಿ ಕೊಂಡಿರುವುದನ್ನು ಕಾಣುತ್ತೇವೆ. ವಿರಾಡ್ರೂಪದ ಶ್ರೀ ವಿಷ್ಣು ಆಲದ ಎಲೆಯ ಮೇಲೆ ಘನಿಕೃತ ಹಿಮಬಿಂದುವಿನಂತೆ ಮಲಗಿರುವ ಸಾಂಕೇತಿಕ ಚಿತ್ರವು ಶ್ರೀ ವಿಷ್ಣುವಿನ ವಿಸ್ತಾರದ ಚಿಶ್ಯಕ್ತಿಯನ್ನು ತೋರಿಸಿದಂತೆ ಘನಿಕರಿಸಿದ ಕಿರು ಆಕಾರದಲ್ಲಿ ತೋರಿಸಬಹುದೆಂಬುದನ್ನು ಇಲ್ಲಿ ಸಾಂಕೇತಿಕತೆಗೆ ಒಳಪಡಿಸಲಾಗಿದೆ. 'ಸಾಲ' ಮರ ಬುದ್ಧನ ಜನನ ಮತ್ತು ನಿರ್ವಾಣಕ್ಕೂ ಸಾಂಕೇತಿಕವಾಗಿ ಇರುವಂತೆ ಅಶೋಕಮರ, ಸ್ವರ್ಗದಿಂದ ಭೂಮಿಯವರೆಗೂ ತೂಗುತ್ತಿರುವ ಮಾವಿನ ಹಣ್ಣುಗಳು, ಚಕ್ರಕಾರದ ಅರ್ಧವಲಯದಲ್ಲಿ ಆಕಾಶದೆತ್ತರಕ್ಕೆ ಬೆಳೆದಿರುವ ಕದಂಬ ವೃಕ್ಷಗಳು, ಏಕಕಾಲದಲ್ಲಿ ಸರ್ವದೆಸೆಗಳಲ್ಲೂ ಹರಡುವ ಅದರ ಕೊಂಬೆರೆಂಬೆಗಳು ತುಂಬಿಕೊಳ್ಳುವ ವಟವೃಕ್ಷವು ಕಲ್ಪವೃಕ್ಷದ ಸಂಕೇತದಂತಿದೆ. ತ್ರಿದಳಗಳ ಬಿಲ್ವವು ತ್ರಿನೇತ್ರನಾದ ಶ್ರೀ ಶಿವನ ಸಂಕೇತದಂತಿದೆ ಕದಂಬ ಮರವು ಲೀಲಾಪುರುಷನಾದ ಗೋಪಾಲ ಕೃಷ್ಣನವಾಸವಾಗಿದೆ. ಉಪನಿಷತ್ತುಗಳು ಹೇಳುವಂತೆಯೇ ನೈಸರ್ಗಿಕ ಜೀವನವು ಸಗ್ಗದಲ್ಲಿ ಹುಟ್ಟಿ ಭೂಮಿಯವರೆಗೂ ಅದರ ಬೀಳಲುಗಳು,ಕೊಂಬೆ ರಂಬೆಗಳು ಹರಡಿಕೊಂಡಿರುವ ಈ ವೃಕ್ಷವು ಕಲಾತ್ಮಕವಾಗಿ ಭೂಮಿ-ಸ್ವರ್ಗವನ್ನು ಬೆಸೆಯುವ ಸಾದೃಶ್ಯದಂತಿದೆ.

ಭಾರತೀಯ ಹಸ್ತಪ್ರತಿ ಚಿತ್ರಕಲೆಯಲ್ಲಿ ಹಲವಾರು ಪ್ರಾಣಿಗಳು ಕೂಡ ಸಾಂಕೇತಿಕ ರೂಪಕಗಳಂತೆ ಬಳಕೆಯಾಗಿರುವುದನ್ನು ಕಾಣಬಹುದು. ಭಾರತದಾದ್ಯಂತ ಕಾಣುವ ಆವೆ ಮಣ್ಣಿನ (Terracotta) ಕುದುರೆಯ ಕಿರಿಯ ಹಿರಿಯ ಆಕೃತಿಗಳನ್ನು ಹಳ್ಳಿಯಿಂದ ದಿಲ್ಲಿಯವರೆಗಿನ ಮನೆಗಳಲ್ಲಿ ಬಾಗಿಲು ತೋರಣಗಳಲ್ಲಿ ಜೂಜಿನ ಕೂಟಗಳಲ್ಲಿ ಇಟ್ಟಿರುವುದನ್ನು ಕಾಣುತ್ತೇವೆ. ಕುದುರೆ ಒಂದು ಸ್ಫೂರ್ತಿಯ, ಚೇತನದ ಸಂಕೇತವಾದಂತೆ ಸವಾರನೊಂದಿಗಿರುವ ಅಶ್ವವು ವೀರತನದ ಸಂಕೇತದಂತಿದೆ.ಆದರೆ ಗೌತಮ ಬುದ್ಧನ ಚರಿತ್ರೆಯಲ್ಲಿ ಕುದುರೆಯನ್ನು ಇಹದ ಬದುಕಿನಿಂದ ಪರದ ಬದುಕಿಗೆ ಕರೆದೊಯ್ಯುವ ವಾಹನದಂತೆ ಪರಿಗಣಿಸಲಾಗಿದೆ. ಸಿದ್ಧಾರ್ಥನಾದ ಆತನು ರಾಜ್ಯವೈಭೋಗದಿಂದ ಅದಕ್ಕೂ ಮಿಗಿಲಾದ ಧಾರ್ಮಿಕ ವೈಭೋಗದತ್ತ ಸಾಗಿಸುವ ' ಬಿಡುಗಡೆ ' ಯ ಕೊಂಡಿಯಂತೆ ಸೂಚಿಸಲಾಗಿದೆ. ಕುದುರೆ ತಥಾಗತ ಬುದ್ಧನೊಂದಿಗೆ ಕಾಣುವಂತೆ ಹಲವಾರು ಹಿಂದೂ ದೇವತೆಗಳೊಂದಿಗೆ ಹಲವಾರು ಪ್ರಾಣಿಗಳು ಅವಿನಾ ಭಾವದೊಂದಿಗೆ ಆಯಾದೇವತೆಗಳ ವಾಹನಗಳಾಗಿ ಇರುವುದನ್ನು ಕಾಣುತ್ತೇವೆ. ವೃಷಭನಂದಿ ಶಿವನೊಂದಿಗೆ, ಗರುಡ ವಿಷ್ಣುವಿನೊಂದಿಗೆ, ಹಂಸ ಬ್ರಹ್ಮನೊಂದಿಗೆ, ನವಿಲು ತಾಯಿ ಶಾರದೆ ಮತ್ತು ಕಾರ್ತಿಕೇಯನೊಂದಿಗೆ, ಆಮೆಯ ಮಾತೆ

ಜಮುನೆಯೊಂದಿಗೆ, ಮಕರ ಗಂಗಯೊಂದಿಗೆ, ಹುಲಿ-ಸಿಂಹಗಳು ದುರ್ಗೆಯೊಂದಿಗೆ ಇರುವುದನ್ನು 4000 ವರ್ಷಗಳ ಹಿಂದಿನ ಅನಾರ್ಯ ಜನಾಂಗಗಳ ಬದುಕಿನ ಪಳಯುಳಕೆಯಲ್ಲಿ ಕಾಣುವಂತೆ ನಂತರ ಬಂದ ಆರ್ಯರ ಬದುಕಿನಲ್ಲೂ ಈ ಪ್ರಾಣಿ ಪಕ್ಷಿಗಳನ್ನು ಕಾಣುವಂತೆ ದೀರ್ಘ ಕಾಲದ ನಂತರ ಈಗಲೂ ಈ ಎಲ್ಲವುಗಳನ್ನು ಆಯಾ ದೇವತೆಗಳ ವಾಹನಗಳಾಗಿರುವುದನ್ನು ಕಾಣುತ್ತೇವೆ.

ಪ್ರಾಕೃತ ಯುಗದ ಹಸ್ತಪ್ರತಿ ಚಿತ್ರಕಲೆಯಲ್ಲಿ ಎರಡು ವಿಭಾಗಗಳನ್ನಾಗಿ ಮಾಡಿಕೊಂಡು ಅಧ್ಯಯನ ಮಾಡಬಹುದಾಗಿದೆ.

ಅ. ಬೌದ್ಧ ಯುಗದ ಹಸ್ತಪ್ರತಿ ಚಿತ್ರಗಳು ಆ. ಜೈನಯುಗದ ಹಸ್ತಪ್ರತಿ ಚಿತ್ರಗಳು.

ಅ. ಬೌದ್ಧ ಯುಗದ ಹಸ್ತಪ್ರತಿ ಚಿತ್ರಗಳು :

ವೇದಗಳು ಬುದ್ಧ ಜೈನರಿಗಿಂತ ಪ್ರಾಚೀನವಾದರು ಅಪೌರಷೇಯವಾಗಿರುವ ವೇದಗಳನ್ನು ಹಿಂದಿನಿಂದ ಬಂದ ಪರಂಪರೆಯಂತೆ ಅವುಗಳನ್ನು ಶ್ರುತಿ (ಕೇಳುವ) ಮತ್ತು ಸ್ಮೃತಿ (ನೆನಪಿನಲ್ಲಿ)ಗಳಲ್ಲೇ ಕಾಯ್ದಿಡುವುದು ಪರಂಪರೆಯಾಗಿಯೇ ಮುಂದುವರೆಯಿತು. ಬೌದ್ಧ ಧರ್ಮವು ಗೌತಮ ಬುದ್ಧನು ಕಾಲವಾದ ನಂತರ ಹೀನಾಯಾನ, ಮಹಾಯಾನಗಳಾಗಿ ಹಲವಾರು ಮಾರ್ಪಾಡುಗಳೊಂದಿಗೆ ಬುದ್ಧನ ಅವಶೇಷಗಳನ್ನು ಸ್ತೂಪಗಳಲ್ಲಿ ಕಾಯ್ದಿಡುವ ಕಾರ್ಯ ಒಂದಡೆಯಾದರೆ ಬುದ್ಧನ ಭೋದನೆಗಳನ್ನು ತಾಡೋಲೆಗಳಲ್ಲಿ ಕಾಯ್ದಿಡುವ ಕಾರ್ಯವು ಬುದ್ಧ ಅನುಯಾಯಿಗಳಿಂದ ನಡೆಯಿತು ಮತ್ತು ಜೈನರಿಂದಲೂ ವ್ಯಾಪಕವಾಗಿ ನಡೆಯುವುದನ್ನು ಕಂಡ ವೈದೀಕರು ವೇದಪಾಠಗಳು, ಶ್ರುತಿಗಳು, ಸ್ಮೃತಿಗಳ , ಬರಹರೂಪದಲ್ಲಿ ಸಂಗ್ರಹಿಸಲು ಪ್ರಾರಂಭಿಸಿದರು. ಕಾಲಾನುಕ್ರಮದಲ್ಲಿ ಮಾನವನ ನೆನಪಿನ ಶಕ್ತಿ ಕುಂದುತ್ತಾ ನಡೆದಂತೆ ಶ್ರುತಿ ಮತ್ತು ಸ್ಮೃತಿಗಳಲ್ಲಿ ಬಹಳಷ್ಟು ಪಾಠಾಂತರಗಳು ಪ್ರಾರಂಭವಾದವು ಅವುಗಳನ್ನು ತಿದ್ದುವ ಸಂಗ್ರಹಿಸುವ ಕಾರ್ಯವು ವೇದಪಾಠಕರಿಗೆ ಒಂದು ಸವಾಲಾಗಿ ನಿಂತಿತು. ಒಂದು ಕಾಲದ ವಿವೇಚನೆಯು ವಿಕಾಸಗೊಂಡ ಬದುಕಿನಲ್ಲಿ ಹಲವಾರು ಬದಲಾವಣೆಗೆ ಎಡೆಮಾಡಿಕೊಟ್ಟಿತು. ಅಪೌರುಷೇಯವೇಂದೇ ಪರಿಗಣಿಸಿದ ವೇದಗಳನ್ನು ಸಂಗ್ರಹಿಸುವ ಸಂಸ್ಕರಣೆಗೆ ಒಳಪಡಿಸಿ, ಸಂರಕ್ಷಿಸುವ ಕಾರ್ಯವು ಬೌದ್ಧ, ಜೈನರ ನಂತರ ವೈದಿಕರಿಂದ ಪರಿಷ್ಕರಣದ ಕಾರ್ಯ ಪ್ರಾರಂಭವಾಯಿತು. ಈ ಕಾರಣದಿಂದ ಅನಿವಾರ್ಯವಾಗಿ ಸನಾತನಿಗಳು ನೆನಪಿನಾಳದ ವೇದಗಳನ್ನು ಬರಹಕ್ಕೆ ತಂದಂತೇ ಅವುಗಳನ್ನು ಪರಿಷ್ಕರಿಸುವ ಕಾರ್ಯ ಪ್ರಾರಂಭಮಾಡಿದರು.[೨೪]

ಭಾರತೀಯರ ಸಾರಸ್ವತ ಮತ್ತು ಧಾರ್ಮಿಕ ಲೋಕದಲ್ಲಿ ಬೌದ್ಧಧರ್ಮವು ಅತೀ ಮುಖ್ಯವಾದ ಧರ್ಮವಾಗಿದೆ. ಸಾಮಾಜಿಕ ಬದುಕಿಗೆ ಹೊಸ ರೂಪ ಕೊಡಲು ಹುಟ್ಟಿಬಂದ ಬೌದ್ಧ ಮತ್ತು ಜೈನ ಧರ್ಮಗಳು ಜನರು ಆಡುವ ಭಾಷೆಯಲ್ಲಿಯೇ ಧರ್ಮವನ್ನು ಭೋದಿಸಿ ಧರ್ಮವನ್ನು ದೇವಾಲಯಗಳಿಮದ ವಿಕೆಂದ್ರಿಕರಣ ಗೊಳಿಸಿದವು ಅಲ್ಲದೆ ಸಾಮಾನ್ಯರ ಬದುಕಿನಲ್ಲಿ

೨೪. K.G. Subramanyam : Moving Focus, Lalita Kala Academy. DELHI, Pg. 100.

ಹೊಸತನವನ್ನು ತುಂಬಿದವು. ಚಿತ್ರ, ಕಲೆ, ಸೌಂದರ್ಯ ಕುರಿತು ಪ್ರಾರಂಭಿಕ ಕಾಲದಲ್ಲಿ ಹೆಚ್ಚಾಗಿ ಕಾಣದಿದ್ದರೂ ಕಾಲನುಕ್ರಮದಲ್ಲಿ ಬೌದ್ಧ ಧರ್ಮವೇ ಭಾರತೀಯ ಚಿತ್ರಕಲೆಗೆ ಬೆನ್ನೆಲುಬಾಗಿದೆ.

ಕ್ರಿ.ಶ.ಪೂ. ಕಾಲದಲ್ಲಿ ಪಾಲೀ ಭಾಷೆಯಲ್ಲಿ ರಚನೆಯಾದ ವಿನಯ ಪೀಠಕ ಎಂಬ ಬೌದ್ಧ ಗ್ರಂಥದಲ್ಲಿ ಪಸೇನದ ಎಂಬ ರಾಜನ ಅರಮನೆಯಲ್ಲಿ ಸಂತೋಷಾರ್ಥದ ಗ್ರಹಗಳಿಗೆ ಚಿತ್ರ ರಚಿಸುವ ವಿವರಗಳಿವೆ.[೨೫] ಚಿತ್ರಸೂತ್ರವು ಕ್ರಿ.ಶ.ಪೂ. 4ನೇ ಶತಮಾನಕ್ಕಿಂತ ಮೊದಲೇ ರಚನೆಯಾದ ಗ್ರಂಥವಾಗಿದ್ದು, ಬೂರ್ಜ ಪತ್ರದ ಕೃತಿಗಳಲ್ಲಿ ಹಸ್ತಪ್ರತಿ ಚಿತ್ರಗಳು ದೊರೆಯುತ್ತವೆ.[೨೬] ಬೌದ್ಧರ ಗ್ರಂಥಗಳು, ಜಾತಕಗಳು ಮತ್ತು ಗಾಥಾವಿಷಯದ ಅನೇಕ ಗ್ರಂಥಗಳಲ್ಲಿ ಚಿತ್ರಕಲೆಯ ಕುರಿತು ಪ್ರಸ್ತಾಪಿಸಲಾಗಿದೆ. ವಿನಯ ಪೀಠಕ ಒಂದು ಪ್ರಸಂಗದಲ್ಲಿ ಕೋಶಲ ದೇಶದ ರಾಜ ಪ್ರಸೇನಜಿತನ ಪ್ರಮೋದ ಉದ್ಯಾನದ ಒಂದು ಭಾಗದಲ್ಲಿ ರಮ್ಯವಾದ ಒಂದು ಚಿತ್ರಾಗಾರವನ್ನು ಸ್ಥಾಪಿಸಲಾಯಿತು. ಅಲ್ಲಿಯ ಚಿತ್ರಗಳನ್ನು ನೋಡಲು ನಿತ್ಯ ಜನ ನೆನೆಯುತ್ತಿದ್ದರು.[೨೭] ಧಮ್ಮ ಪದದ ಒಂದು ಪ್ರಸಂಗದಲ್ಲಿ ವಾರಣಾಸಿಯ ಒಬ್ಬ ಬ್ರಾಹ್ಮಣನು ಚಕ್ರವನ್ನು ತಿರುಗಿಸಿ ವಟವೃಕ್ಷದ ಎಲೆಗಳ ಮೇಲೆ ಆನೆ-ಕುದುರೆಯಂತಹ ಅನೇಕ ಚಿತ್ರಗಳನ್ನು ಚಿತ್ರಿಸುತ್ತಿದ್ದನು.[೨೮]

ಸೌಂದರ್ಯ ವೆಂಬುದು ನನಗೆ ಅಸಂಗತ ! ದೈಹಿಕ ಸೌಂದರ್ಯವಾಗಲಿ, ವಸ್ತ್ರಾಲಂಕೃತ ಶೋಭಗಾಗಲಿ ಭಂತೆಯಾದವನು ನಿರಾಕರಿಸಬೇಕು ಅವುಗಳಿಂದ ದೂರವಿರಬೇಕೆಂದು! ತ್ರಿಲೋಕಸಾರದಂತಹ ಪವಿತ್ರ ಗ್ರಂಥಗಳಲ್ಲಿ ಸ್ವತಃ ತಥಾಗತ ಬುದ್ಧನೆ ಸೌಂದರ್ಯವನ್ನು, ಬರವಣಿಗೆಯನ್ನು ತಿರಸ್ಕರಿಸುತ್ತಿದ್ದ. ಬುದ್ಧಮಾರ್ಗಿಯಾದವನು ಗುಹಾಂತರದ ಆಶ್ರಮದಲ್ಲಿ ದೇಹವನ್ನು ದಂಡಿಸುತ್ತಾ ನಿರ್ಲಿಪ್ತನಾಗಿರಬೇಕು ಎಂಗು ಸಾರಿದ ಬೌದ್ಧ ಮತ್ತು ಜೈನ ಮತಗಳು ಕಾಲಾನುಕ್ರಮದಲ್ಲಿ ಕಲಾನುರಾಗಿಗಳಾದುದ ಚಿತ್ರಕಲಾಶಕ್ತಿಯು ಚಿತ್ತಾಕರ್ಷಕ ಶಕ್ತಿಸ್ವರೂಪವನ್ನು ನಮಗೆ ತಿಳಿಯಪಡಿಸುತ್ತದೆ.[೨೯]

ಬುದ್ಧ ಸನ್ಯಾಸಿಯಾದವನು ಮಾನವ ರೂಪದ ಯಾವುದೇ ದೇವತೆಯನ್ನು ಆರಾಧಿಸುವುದಾಗಲೀ ಆ ಚಿತ್ರದೊಂದಿಗೆ ಸಂಭಾಷಿಸುವುದಾಗಲಿ ಪೂರ್ಣ ನಿಷೇಧವಾಗಿತ್ತು. ಸಾಧಕನ ಕೋಣೆಯಲ್ಲಿ ಕೇವಲ ಹೂಗುಚ್ಚ ಅಥವಾ ಹೂಸರದ ಬಳ್ಳಿಯ ಚಿತ್ರದ ಅಲಂಕಾರಮಾತ್ರವಿತ್ತು. ಈ ರೀತಿ ಹಬ್ಬಿದ ಬಳ್ಳಿಯಲ್ಲಿ ಹಾರಾಡುವ ಚಿಟ್ಟೆಯೊಂದಿಗೆ ಪ್ರಾಂಭವಾದ ಕಲಾಪ್ರಕ್ರಿಯೇ ಹಲವಾರು ಜಾನಪದ ಚಿತ್ರಗಳೊಂದಿಗೆ ಕಂಗೋಳಿಸ ಹತ್ತಿತು. ಆರು ಶತಮಾನಗಳ ನಂತರ ಒಂದಾಗಿ ಒಂದೇ ತತ್ವದಲ್ಲಿ ಬಾಳಿದ ಬೌದ್ಧಧರ್ಮ ಧಾರ್ಮಿಕ ವಿಷಯದಲ್ಲಿ ಹೀನಾಯಾನ, ಮತ್ತು ಮಹಾಯಾನ

---

೨೫. ಎನ್. ಮರಿಶಾಮಾಚಾರ : ಸಾಹಿತ್ಯದಲ್ಲಿ ಚಿತ್ರಕಲೆ, ಪುಟ - ೪೩

೨೬. ಎನ್. ಮರಿಶಾಮಾಚಾರ : ಸಾಹಿತ್ಯದಲ್ಲಿ ಚಿತ್ರಕಲೆ, ಪುಟ - ೪೩

೨೭. ಎನ್. ಮರಿಶಾಮಾಚಾರ : ಸಾಹಿತ್ಯದಲ್ಲಿ ಚಿತ್ರಕಲೆ, ಪುಟ - ೪೩

೨೮. ಎನ್. ಮರಿಶಾಮಾಚಾರ : ಸಾಹಿತ್ಯದಲ್ಲಿ ಚಿತ್ರಕಲೆ, ಪುಟ - ೪೩

೨೯. K.G. Subramanyam : Moving Focus. Lalita Kala Academy. DELHI. Pg. 100.

ಪಂಗಡಗಳಾಗಿ ಹೋಳಾಯಿತು. ಮಹಾಯಾನ ಬೌದ್ಧ ಪಂಥವು ಭಾರತೀಯ ಕಲಾ ಪರಂಪರೆಯಲ್ಲಿ ಯಾವ ಧಾರ್ಮಿಕ ಕಲಾ ಪರಂಪರೆಯೂ ಅದರಷ್ಟು ಕಲಾತ್ಮಕವಾಗಿ ಸರಿಗಟ್ಟಲಾರದಂತಹ ಸೌಂದರ್ಯ ಭರಿತವಾದ ಕಲಾ ಸೌಂದರ್ಯದೊಂದಿಗೆ ಹೂವಾಗಿ ಅರಳಿ ಬೆಳೆಯಿತು. ಭಾರತೀಯ ಕಲಾ ಚರಿತ್ರೆಯಲ್ಲೇ ಪಕ್ಷಿ, ಅರೇ ಶರೀರದ ಕಾಲ್ಪನೀಕ ಯಕ್ಷ,ಗಂದರ್ವರೊಂದಿಗೆ ಬುದ್ಧನ ಚರಿತ್ರೆಸಾರುವ ಜಾತಕ ಕತೆಗಳ ಸರಣಿಯೊಂದಿಗೆ ಭಾರತದಲ್ಲಿ ಜಗತ್ತಿನ ಉತ್ಕೃಷ್ಠ ಕಲಾ ಪರಂಪರೆಯಾಗಿ ಅಜಂತೆಯ ಗುಹೆಗಳಲ್ಲಿ ಬೆಳೆದು ನಿಂತಿತು. ಬುದ್ಧನನ್ನು ಕೇವಲ ಪಾದಮುದ್ರೆಗಳಿಂದ, ಜಗತ್ತಿಗೆ ನೆರಳುಕೊಡುವ ಕೊಡೆ(Umbrella)ಯ ರೂಪದಲ್ಲಿ ಯೋಗಿಯ ರೂಪದಲ್ಲಿ ಪ್ರಾರಂಭವಾದ ಕಲಾಕ್ರಿಯೆಯು ಕಾಲಾನುಕ್ರಮದಲ್ಲಿ ಪರಿಪೂರ್ಣ ಬುದ್ಧನನ್ನೇ ಅನುಕರಿಸಿದ ಚಿತ್ರ ಮತ್ತು ಶಿಲ್ಪಗಳ ರೂಪದಲ್ಲಿ ಆರು ಶತಮಾನಗಳವರೆಗೆ ರೂಪಗೊಂಡ ಅಜಂತಾ, ಎಲ್ಲೊರಗಳಲ್ಲಿ ಬುದ್ಧ ಧರ್ಮದ ಸಾರವು ಹಲವು ರೂಪ, ಚಿತ್ರ, ಸಂಯೋಜನೆ, ಕತೆ ಕಲ್ಪನೆಗಳೊಂದಿಗೆ ಜಾಗತಿಕ ಕಲೆಯಾಗಿ ರೂಪಗೊಂಡಿರುವುದನ್ನು ನಾವು ಇಂದಿಗೂ ಕಾಣಬಹುದು.ಪಳೆಯುಳಕೆಗಳಲ್ಲಿ ಕಾಣುವಂತೆ ನಂತರ ಬಂದ ಆರ್ಯರ ಬದುಕಿನಲ್ಲೂ ಈ ಪ್ರಾಣಿ ಪಕ್ಷಿಗಳನ್ನು ಕಾಣುವಂತೆ, ದೀರ್ಘಕಾಲದ ನಂತರ ಈಗಲೂ ಈ ಎಲ್ಲವುಗಳನ್ನು ಆಯಾ ದೇವತೆಗಳ ವಾಹನಗಳಾಗಿರುವುದನ್ನು ಕಾಣುತ್ತೇವೆ.[೩೨]

ಬ. ಜೈನ ಯುಗದ ಹಸ್ತಪ್ರತಿ ಚಿತ್ರಗಳು : ಭಾರತೀಯ ಧಾರ್ಮಿಕ ಬದುಕಿನಲ್ಲಿ ಅಶ್ವಿನಿ ದೇವತೆಗಳಂತೆ ಬರುವ ಸಮಕಾಲೀನ ಧರ್ಮಗಳಾದ ಜೈನ ಮತ್ತು ಬೌದ್ಧ ಧರ್ಮಗಳು ಸಾಮಾಜಿಕ ಬದುಕಿನ ಎರಡು ಕಣ್ಣುಗಳಿಂತಿವೆ. ಬುದ್ಧನಂತೆ ಮಹಾವೀರರು ಸಾಮಾಜಿಕ ಜೀವನದಲ್ಲಿ ಬಹಳಷ್ಟು ಬದಲಾವಣೆಗಳಲ್ಲಿ ರೂಪಸಿದನಲ್ಲದೇ ಸಾಮಾನ್ಯರ ಬದುಕಿಗೆ ಹೊಸತನವನ್ನು ತಂದಿದ್ದಾನೆ. ಜೈನ ಸಾಹಿತ್ಯದಲ್ಲಿ ಹಸ್ತಪ್ರತಿ ಚಿತ್ರಕಲೆಯ ಕುರಿತು ಸಾಕಷ್ಟು ವಿಷಯಗಳ ಪ್ರಸ್ತಾಪ ಬರುತ್ತದೆ. ಮಗಧ ದೇಶದ ಪ್ರಾಕೃತ ಕಥೆ ಸುರಸುಂದರಿ ತರಂಗವತಿಯರ ಕಥೆ ಚಿತ್ರಕಲಾ ಪ್ರೌಢಿಮೆಯನ್ನು ಸಾರುತ್ತದೆ.[೩೩]

''ವೃಷಭನಾಥನನ್ನು ಜೈನಧರ್ಮದ ಪ್ರಜನಕನೆಂದು ಭಾವಿಸುವ ಜೈನರು ಹಣಿತ ಮತ್ತು ಸಾಂಕೇತಿಕ ಪ್ರಜ್ಞೆಯ ಜನಕರೆಂದೇ ಭಾವಿಸುತ್ತಾರೆ ಪ್ರಾರಂಭಿಕ ಹಂತದಲ್ಲಿ ಜೈನ ಪುರುಷ ಮತ್ತು ಮಹಿಳಾ ಯತಿಗಳು ಕಲೆಯನ್ನು ಧರ್ಮದಲ್ಲಿ ಬಳಕೆ ಮಾಡುವುದನ್ನು ತೀಕ್ಷ್ಣವಾಗಿ ಖಂಡಿಸಿದವಲ್ಲದೆ ಸಾಧಕರು ಕಲಾತ್ಮಕ ಪ್ರತಿಮಾ, ಮೂಹೂರ್ತಗಳನ್ನು ಬಳಸುವುದರ ವಿರುದ್ಧ ಎಚ್ಚರಿಕೆಯನ್ನು ನೀಡಿದವು ಆದರೆ ಕಾಲಾನುಕ್ರಮದ ಮಧ್ಯಕಾಲೀನ ಸಮಯಕ್ಕೆ ಈ ಮನೋಭಾವ ದುರ್ಬಲಗೊಂಡಂತೆ ಜೈನ ಧರ್ಮಿಯ ತತ್ವಗಳು ದೋಷ ಮತ್ತು ನಿರ್ದೋಷವೆಂಬ ಒಡಂಬಡಿಕೆಯನ್ನು ಮಾಡಿಕೊಂಡವು ಈ ನಿಯಮದಂತೆ ಸಾಧಕರ ವಾಸದಲ್ಲಿ ಭೂದ್ರವ್ಯಗಳು,

---

೩೩. ಎನ್. ಮರಿಶಾಮಾಚಾರ : ಸಾಹಿತ್ಯದಲ್ಲಿ ಚಿತ್ರಕಲೆ, ಪುಟ - ೪೩

ಕರ್ನಾಟಕದ ಪ್ರಾಕೃತ ಹಸ್ತಪ್ರತಿ ವರ್ಣಚಿತ್ರಗಳು

ಕೃತಿ : ಧವಳ ಗ್ರಂಥ

ಕರ್ನಾಟಕದ ಹಸ್ತಪ್ರತಿ ಚಿತ್ರಕಲೆ- ಒಂದು ಅಧ್ಯಯನ



Courtesy :

C.Shivaram Murthy
South Indian Paintings
Publication Divsion Minstry of Information
& Brod casting Govt.of India, New Delihi

ಕಟ್ಟಡಗಳು, ಆಕಾರರಹಿತ ಅಲಂಕಾರಿಕ ಚಿತ್ರಗಳು ಮೊದಲಿನ ಮನೋಭಾವದಂತೆ ರೂಪತಾಳಿದರೂ 12 ನೇ ಶತಮಾನದ ಕಾಲಕ್ಕೆ ಆಕಾಶದಲ್ಲಿ ತೇಲುವ ಯಕ್ಷ ಗಂಧರ್ವರ ಚಿತ್ರಗಳು ಪ್ರಾರಂಭಗೊಂಡಂತೆ ಸ್ತ್ರಿದೇವತೆಗಳ, ಮಹಿಳೆಯರ ಚಿತ್ರಗಳು ಜೈನಮಂದಿರವನ್ನು ಪ್ರವೇಶಿಸಿದಂತೆ ಜೈನಧರ್ಮಗ್ರಂಥಗಳ ಹಸ್ತಪ್ರತಿಗಳನ್ನು ಪ್ರವೇಶಿಸಿತು.[೩೪] ಅದರಂತೆ ಜೈನಧರ್ಮದ ಗೂಢಾರ್ಥಗಳನ್ನು ಧಾರ್ಮಿಕ ಪರಿಕಲ್ಪನೆಗಳನ್ನು ಚಿತ್ರಗಳ ರೂಪದಲ್ಲಿ, ಭೂಮಿತಿಕ ನಕ್ಷೆಗಳೊಂದಿಗೆ ಜಾರಿಯಲ್ಲಿ ಬಂದಿತು.

ಗ್ರಂಥರೂಪದಿಂದ ಗುಹಾಂತರ, ದೇವಾಲಯಗಳವರೆಗೂ ಬೆಳೆದ ಜೈನಧರ್ಮವು ಜೈನಮಂದಿರಗಳಲ್ಲಿ ನೃತ್ಯಗಾರ್ತಿಯರನ್ನು, ಸಂಗೀತಗಾರರನ್ನು ಹೂ ಬಳ್ಳಿ, ಮರ-ಗಿಡಗಳಂತಹ ಸಸ್ಯಜನ್ಯ ಅಲಂಕಾರಗಳು ಬೆಳೆದಂತೆ ಇಂದ್ರಿಯ ಭೋಗಾಸಕ್ತಿಯನ್ನು ನಿಯಂತ್ರಿಸುವ ಮಾಧ್ಯಮವಾಗಿ ಮಿಥುನ ಶಿಲ್ಪಗಳು ರೂಪತಾಳ ಹತ್ತಿದವು. ಧರ್ಮದರ್ಶಿಗಳು ಪೂರ್ಣಪ್ರಮಾಣದಲ್ಲಿ ಜೀವಂಕತಿಕೆ ಯೊಂದಿಗೆ ಈ ಧರ್ಮ ಸೂತ್ರಗಳನ್ನು ಆಚರಿಸಿದರೂ. ಅವರು ದೇಹ ದಂಡನೆಯ ತಮ್ಮ ಸಾತ್ವಿಕ ಧರ್ಮದಲ್ಲಿ ಬಂದಿರುವ ಕಲಾತ್ಮಕ ಇಂದ್ರಿಯ ಪರಿಕಲ್ಪನೆಗಳು ಭೌದ್ಧದರ್ಮದ ಪೆಡೆಸುತನದ ಕೊಡುಗೆಗಳು ಎಂದು ದೂರಿದರಲ್ಲದೇ ಧಾರ್ಮಿಕ ಪೊಳ್ಳುತನವನ್ನು ತಿರಸ್ಕರಿಸುವ ತಾವು ಬದುಕಿನಲ್ಲಿ ಬರುವ ಜೀವನ ಸುಖಾನುಭವವನ್ನು (Joie - de vivre) ಬದುಕಿನೊಂದಿಗೆ ಅಳವಡಿಸಲಾಗುವುದೆಂದು ಕಲಾತ್ಮಾಕ ಪರಿಕಲ್ಪನೆಯನ್ನು ಸ್ವೀಕರಿಸದರು.[೩೫]

ಹಸ್ತಪ್ರತಿ ಚಿತ್ರಕಲಾ ಕ್ಷೇತ್ರದಲ್ಲಿ ಶ್ವೇತಾಂಬರೀಯ ಜೈನರದು ಬಹುದೊಡ್ಡ ಕಾಣಿಕೆ ಇದೆ. ಅವರ ಪ್ರಶ್ನಾವ್ಯಾಕರಣ ಸೂತ್ರದಲ್ಲಿ ಚಿತ್ರಗಳ ಅನೇಕ ಶ್ರೇಣಿಗಳನ್ನು ಹೇಳಲಾಗಿದೆ. ಮಾನವ, ಪಶು, ಪಕ್ಷಿಗಳ ಚಿತ್ರಗಳನ್ನು ಸಚಿತ್ತವೆಂದು ನದಿ, ನದ, ಪರ್ವತ, ಆಕಾಶವನ್ನು ಆಚಿತ್ತವೆಂದೂ ಉಳಿದುದನ್ನು ಸಂಯುಕ್ತ ಚಿತ್ತವೆಂದು ಹೇಳಲಾಗಿದೆ.[೩೬]

ಈ ರೀತಿಯಲ್ಲಿ ಭಾರತೀಯ ಚಿತ್ರಕಲೆಯೂ ಭೌದ್ಧ, ಜೈನ ಅಥವ ವೈದಿಕ ಧರ್ಮಗಳಲ್ಲಿ ಇಂದ್ರಿಯ ಜನ್ಯ ಕಾಮೋತ್ತೇಜಕ ಚಿತ್ರಗಳ ಸರಿಯಲ್ಲವೆಂಬ ಧೋರಣೆಯು ಧಾರ್ಮಿಕವಾಗಿ ಉಳಿದಿದ್ದರೂ ಕಲಾತ್ಮಕವಾಗಿ ಧಾರ್ಮಿಕ ಬದುಕಿನಲ್ಲಿ ಚಿತ್ರಕಲೆಯ ಹಾಸುಹೊಕ್ಕಾಗಿ ಬೆಳೆದು ಬಂದಿದೆ.

ಯುಗ ಪುರಷನಾಗಿರುವ ನಾಡೋಜ, ಆದಿಕವಿ ಪಂಪನ ಕಾಲದ ಪೂರ್ವ ಕಾಲವೂ ಸಾಹಿತ್ಯ ಸಮೃದ್ಧವಾದ ಕಾಲವಾಗಿತ್ತು, ಕರ್ನಾಟಕದ ಪರಿಸರದಲ್ಲಿ ಅನೇಕ ಕವಿಗಳ ಚರಿತ್ರೆ ಇದ್ದರೂ ಅವು ಸಂರಕ್ಷಣೆಯ ಮಾರ್ಗವನ್ನು ಕಾಣದೆ ಕಾಲನದಾಳಿಗೆ ತುತ್ತಾಗಿ ಕಣ್ಮರೆಯಾಗಿವೆ. ಈ

---

೩೪. ಡಾ. ಯಾದಪ್ಪ ಪರದೇಶಿ : ಕರ್ನಾಟಕ ಭಿತ್ತಿ ಚಿತ್ರ, ಪುಟ - ೪೬

೩೫. ಡಾ. ಯಾದಪ್ಪ ಪರದೇಶಿ : ಕರ್ನಾಟಕ ಭಿತ್ತಿ ಚಿತ್ರ, ಪುಟ - ೪೬

೩೬. ಎನ್. ಮರಿಶಾಮಾಚಾರ : ಸಾಹಿತ್ಯದಲ್ಲಿ ಚಿತ್ರಕಲೆ, ಪುಟ - ೩೬

ಯುಗದಲ್ಲಿ ಚಿತ್ರ, ವಾಸ್ತು ಶಿಲ್ಪ ಕುರಿತು ಅನೇಕ ಗ್ರಂಥಗಳು ಹೊರ ಬಂದಿವೆ. ಈ ಯುಗವನ್ನು ಕುರಿತು ಡಾ। ಎಂ.ಎಂ. ಕಲಬುರ್ಗಿಯವರು ಈ ರೀತಿಯಾಗಿ ಹೇಳುತ್ತಾರೆ. 'ಕನ್ನಡ ಸಾಹಿತ್ಯವನ್ನು ಅಜ್ಞಾತಯುಗ, ಜ್ಞಾತಯುಗವೆಂದು ವರ್ಗೀಕರಿಸಬಹುದಾಗಿದೆ. ಇದನ್ನು ಪಂಪಪೂರ್ವ ಯುಗ, ಪಂಪೋತ್ತರ ಯುಗವೆಂದೂ ಕರೆಯಬಹುದು. ಅಜ್ಞಾತ ಯುಗದ ಒಂದೂ ಕೃತಿ ಸಿಕ್ಕಿಲ್ಲ. ಆದರೆ ಆ ಹೊತ್ತಿಗಾಗಲೇ ಟೀಕೆ, ವ್ಯಾಖ್ಯಾನಯುಗ, ಭಾಷಾಂತರ ಯುಗಗಳೆಂಬ ಎರಡು ಘಟ್ಟಗಳು ಉರುಳಿ, ಗುಣವರ್ಮ ಮೊದಲಾದವರಿಂದ ಸೃಜನಶೀಲ,ಭಾಷಾಂತರ, ರೂಪಾಂತರ ಯುಗ ತೆರೆದುಕೊಂಡಿತ್ತು. ಟೀಕೆ, ವ್ಯಾಖ್ಯಾನಗಳಿಗೆ ಉದಾಹರಣೆಯಾಗಿ ಶ್ಯಾಮಕುಂದಾಚಾರ್ಯ, ತೊಂಬಳೂರಾಚಾರ್ಯರ ಉಭಯ ಸಿದ್ಧಾಂತ ವ್ಯಾಖ್ಯಾನ, ಅನಾಮಧೇಯನ ತತ್ವಾರ್ಥ ಸೂತ್ರ, ಸೂತ್ರ ವ್ಯಾಖ್ಯಾನಗಳೆಂಬ ಹೆಸರುಗಳು ಕೇಳಿ ಬರುತ್ತವೆಯೇ ಹೊರತು ಹಸ್ತಪ್ರತಿಗಳು ಸಿಕ್ಕಿಲ್ಲ.[೩೭]

ಈ ಯುಗದಲ್ಲಿ ಚಿತ್ರಕಲೆಯ ಹಿನ್ನೆಲೆಯೊಂದಿಗೆ ವಾಸ್ತು, ಶಿಲ್ಪ, ಮೂರ್ತಿ ಶಿಲ್ಪದಂತ ವಿಷಯಗಳ ಕುರಿತು ಅನೇಕ ವಿದ್ವಾಂಸರು, ಆಗಮಿಕ ಶಾಸ್ತ್ರಜ್ಞರು ಚಿಂತನೆಗೈದ ಕ್ರಮಕ್ಕಾಗಿಯೇ ಸಂಸ್ಕೃತ, ಪ್ರಾಕೃತ ಮತ್ತು ಕನ್ನಡದ ಗ್ರಂಥಗಳ ಬಳಕೆಯು ಕರ್ನಾಟಕದಲ್ಲಿ ಇತ್ತು. ಆ ಯುಗದ ಬಹುಮುಖ್ಯವಾದ ಗ್ರಂಥಗಳ ಹೆಸರುಗಳನ್ನು ಈ ರೀತಿ ಉಲ್ಲೇಖಿಸಬಹುದು. ಮಾನಸಾರ,ಮನುಷ್ಯಾಲಯ-ಚಂದಿಕೆ, ಅಂಕ ಬೋದಿನಿ, ಸುಪ್ರಭೇದಾಗಮ, ವಾಸ್ತು ವಿದ್ಯಾ, ಬೃಹತ್ಸಂಹಿತಾ, ಶಿಲ್ಪರತ್ನ, ಮಯಮತ, ಕಾಶ್ಯಪ ಶಿಲ್ಪ, ತಂತ್ರ ಸಮುಚ್ಚಯ, ಅಂಶು ಮಧ್ವೇದಾಗಮ, ವಾಸ್ತು ರತ್ನಾವಳಿ, ಕಾಮಿಕಾಗಮ ಪ್ರತಿಮಾ ಲಕ್ಷಣ, ಪ್ರತಿಮಾ ಮಾನ ಲಕ್ಷಣ, ರೂಪ ಮಂಡನ, ವಾಸ್ತು ಮಂಡನ, ಇತ್ಯಾದಿ ಗ್ರಂಥಗಳು ವಾಸ್ತು ಶಿಲ್ಪ ಶಾಸ್ತ್ರವನ್ನು ವಿವರಿಸುತ್ತವೆ. ಕೌಟಿಲ್ಯನ ಅರ್ಥಶಾಸ್ತ್ರವೂ ವಾಸ್ತು ಶಿಲ್ಪ ವಿಷಯನ್ನೊಳಗೊಂಡಿದೆ. ಅಂದಿನ ಕಲಾವಿದರು ಶುಷ್ಕ ನಿಯಮಾಂಧರಾಗದೆ, ಸೌಂದರ್ಯಾಭಿರುಚಿ ರಸಜ್ಞತೆಗಳಿಗೆ ಮಹತ್ವ ನೀಡಿದವರಾಗಿದ್ದರು.[೩೮]

ಹಿರಿಯ ವಿದ್ವಾಂಸರಾಗಿರುವ ಎನ್. ಅನಂತರಂಗಾಚಾರ್ ಅವರು ಕಲೆಯ ಕುರಿತು ಹಸ್ತಪ್ರತಿಯೊಳಗೆ ದಾಖಲೆಗೊಂಡ ಚಿತ್ರ, ಚಿತ್ರಕರ್ಮ, ಚಿತ್ರಸೂತ್ರಗಳನ್ನು ಹೊಂದಿರುವ ಇನ್ನೂ ಕೆಲವು ಗ್ರಂಥಗಳನ್ನು ಹೆಸರಿಸಿ ಉಪಕರಿಸಿದ್ದಾರೆ ಅವು ಹೀಗಿವೆ. ಒಂಭತ್ತು ಪುರಾಣಗಳಲ್ಲಿ ಶಿಲ್ಪ ಶಾಸ್ತ್ರವೂ ಶಾಸ್ತ್ರೀಯವಾಗಿ ಪ್ರತಿಪಾದಿತವಾಗಿದೆ. ಮತ್ಸಪುರಾಣದಲ್ಲಿ ವಾಸ್ತು ಶಿಲ್ಪ ತಕ್ಷ ವಿದ್ಯೆಗೆ ಸಂಬಂಧ ಪಟ್ಟ ಎಂಟು ಪ್ರತ್ಯೇಕ ಅಧಿಕರಣಗಳೇ ಇವೆ. ಮಹಾನಗರ ಸ್ಥಾಪನ ವರ್ಣನ, ಸುವರ್ಣಮಯ ಸಭಾಸ್ಥಾನ, ನಿರ್ಮಾಣ ವರ್ಣನ ಮತ್ತು ಸ್ಯಂದನತಯ ನಿರ್ಮಾಣ ವರ್ಣನ ಎಂಬ ಮೂರು ಪ್ರಕರಣಗಳು ಸ್ಕಾಂದ ಪುರಾಣಾಂತರ್ಗತವಾಗಿವೆ. ಗರುಡ ಪುರಾಣದಲ್ಲಿ

೩೭. ಡಾ।। ಎಂ.ಎಂ. ಕಲಬುರ್ಗಿ : ಸಮಾಧಿ -ಬಲಿದಾನ - ವೀರಮರಣ, ಸ್ಮಾರಕಗಳು , ಪುಟ -೧೦೦

೩೮. ಎಂ. ಎಂ. ಕೃಷ್ಣಾರಾವ್ ಮತ್ತು ಕೇಶವ ಭಟ್ಟ ಸಂ. : ಕರ್ನಾಟಕದ ಇತಿಹಾಸ ದರ್ಶನ, ಪುಟ -೧೦೨೦

ಕರ್ನಾಟಕದ ಹಸ್ತಪ್ರತಿ ಚಿತ್ರಕಲೆ- ಒಂದು ಅಧ್ಯಯನ

ಕರ್ನಾಟಕದ ಪ್ರಾಕೃತ ಹಸ್ತಪ್ರತಿ ವರ್ಣಚಿತ್ರಗಳು

ಕೃತಿ : ಧವಳ ಗ್ರಂಥ



Courtesy :

C.Shivaram Murthy
South Indian Paintings
Publication Divsion Minstry of Information
& Brod casting Govt.of India, New Delihi

ಪ್ರಾಸಾದಾರಾಮದುರ್ಗ ದೇವಾಲಯ ಮಠಾದಿವಾಸ್ತುಮಾನ ನಿರೂಪಣಮ್, ಪ್ರಸಾದಲಿಂಗ, ಮಂಟಪಾದಿ ಶುಭವಾಸ್ತು ಲಕ್ಷಣ ನಿರೂಪಣಮ್, ಸಾಲಾಗ್ರಾಮ ಮೂರ್ತಿ ಲಕ್ಷಣಮ್, ದೇವಾನಾಂ ಪ್ರತಿಷ್ಠಾ ವಿಧಿಃ ಎಂಬ ನಾಲ್ಕು ಪ್ರಕರಣಗಳಿವೆ. 'ಅಗ್ನಿ ಪುರಾಣ'ದಲ್ಲಂತೂ ಶಿಲ್ಪ ಶಾಸ್ತ್ರ ವಿವರಣೆಗೆ 16 ಪ್ರಕರಣಗಳು ಮೀಸಲಾಗಿವೆ. ನಗರವಿನ್ಯಾಸ ಮತ್ತು ಪ್ರಾಸಾದ ನಿರ್ಮಾಣವನ್ನು ಕುರಿತ ಎರಡು ಪ್ರಕರಣಗಳು ವಿನಾ ಉಳಿದವೆಲ್ಲ ವಿಗ್ರಹ ಶಿಲ್ಪ ವಿಷಯವಾದುದು. ನಾರದ ಪುರಾಣದಲ್ಲಿ ದೇವಾಯುತನ ವಾಪೀಕೂಪತಟಾಕಾದಿ ನಿರ್ಮಾಣ ಎಂಬ ಒಂದು ಅಧ್ಯಾಯನವಿದೆ.

3. ಕವಿರಾಜ ಮಾರ್ಗ ಯುಗದ ಹಸ್ತಪ್ರತಿ ಚಿತ್ರಕಲೆ. (ಸು. ಕ್ರಿ.ಶ.8ನೇ ಶತಮಾನ)

ರಾಷ್ಟ್ರಕೂಟರ ಕಾಲ : ಕ್ರಿ.ಶ.8 ರಿಂದ 10ನೇ ಶತಮಾನದ ಆಡಳಿತ ನಡೆಸಿದ ರಾಷ್ಟ್ರಕೂಟರ ಕಾಲದ ಅನೇಕ ಹಸ್ತಪ್ರತಿ ಚಿತ್ರಗಳು ನಮಗೆ ದೊರೆಯದಿದ್ದರೂ ಈ ಕುರಿತು ನಾವು ಮಾಡಿದ ಅಧ್ಯಯನವೂ ಕೂಡಾ ಬಹು ಚಿಕ್ಕದಾಗಿವೆ. ಆದರೆ ರಾಷ್ಟ್ರಕೂಟರ ಅವಧಿಯ ಭಿತ್ತಿಚಿತ್ರಗಳು ಯಲ್ಲೋರಾ ಶೈಲಿಗಳನ್ನೆ ಅನುಸರಿಸುತ್ತಿರುವದರಿಂದ ಅಜಂತಾ, ಯಲ್ಲೋರಾಗಳಂತೆ ರಾಷ್ಟ್ರಕೂಟರೂ ಕೂಡಾ ಅಧಿಕೃತವಾದ ಯಾವುದೋ ಒಂದು ಧಾರ್ಮಿಕ ಗ್ರಂಥವನ್ನು ಆಧರಿಸಿ ಇರಬೇಕು ಎಂದು ಶಂಕಿಸಬಹುದಾಗಿದೆ.

ಕವಿರಾಜಮಾರ್ಗ : ಕನ್ನಡದ ಮೊತ್ತ ಮೊದಲನೆಯ ಗ್ರಂಥ. ಈ ಗ್ರಂಥದ ಕಾಲಮಾನವನ್ನು ಸುಮಾರು ಕ್ರಿ.ಶ.850 ಎಂದು ವಿದ್ವಾಂಸರು ಅಭಿಪ್ರಾಯಪಟ್ಟಿದ್ದಾರೆ. ಇತ್ತೀಚಿನ ಸಂಶೋಧನೆಗಳಿಂದ ಶ್ರೀ ವಿಜಯನೇ ಅದರ ಕರ್ತೃವಿರಬಹುದೆಂದು ದೃಢಗೊಳ್ಳಹತ್ತಿದೆ. ಸಂಸ್ಕೃತ ಕವಿ 'ದಂಡಿ'ಯ ''ಕಾವ್ಯದರ್ಶನ''ದ ಮಾದರಿಯಲ್ಲಿರುವ ಇದು ಒಂದು ಲಾಕ್ಷಣಿಕ ಗ್ರಂಥ. ಈಗ್ರಂಥದಲ್ಲಿ ಕನ್ನಡ ಜನತೆಯ ಕಾವ್ಯ ಲಕ್ಷಣವನ್ನು ವಿವರಿಸುವ ಕರ್ತೃ ಚಿತ್ರಕಲೆಯ ಲಕ್ಷಣದ ಬಗೆಗೂ ತುಂಬಾ ಚರ್ಚಿಸಿ ಅದಕ್ಕೂ ಇರಬೇಕಾಗಿರುವ ಸಲಕ್ಷಣಗಳ ಕುರಿತು ವಿವರಿಸಿದ್ದಾನೆ. ರಾಷ್ಟ್ರಕೂಟರ ಅಮೋಘವರ್ಷ ನೃಪತುಂಗನ ಆಸ್ಥಾನಕವಿಯಾಗಿದ್ದ ವಿಜಯನೇ ಇರಬೇಕೆಂದು ಒಂದು ವಾದವಾದರೆ ಅವನಕ್ಕಿಂತಲೂ ಹಿಂದಿನವನಿರಬೇಕೆಂಬ ಮತ್ತೊಂದು ವಾದವೂ ಇದೆ. ಕವಿಯು ವ್ಯಾಪಕವಾದ ವಿಮರ್ಶಾಕತ್ಮಕವಾದಂತಹ ದೃಷ್ಠಿಯನ್ನು ಹೊಂದಿರುವ ಕಾರಣದಿಂದ ಆತ ಈ ಗ್ರಂಥದಲ್ಲಿ ಹಿಂದೆ ಇರಬಹುದಾಗಿದ್ದ ರಾಮಾಯಣ, ಮಹಾಭಾರತ ಪದ್ಯಗಳಲ್ಲಿರುವಂತೆ ' ಬೆದಂಡೆ' ಮತ್ತು 'ಚತ್ತಾಣ' ಎಂಬ ಗ್ರಂಥಗಳ ಕುರಿತು ಉಲ್ಲೇಖಿಸುತ್ತಾನೆ.[೪೦]

ಕವಿರಾಜಮಾರ್ಗದ ಕರ್ತೃವು ತನಗಿಂತಲೂ ಹಿಂದಣ ಕೆಲವು ಸಾಹಿತ್ಯ ಕೃತಿಗಳನ್ನು ದಾಖಲಿಸಿಕೊಂಡಿದ್ದಾನೆ. ಆತ ಕಾವ್ಯದ ಅಂತರ್ಯದಲ್ಲಿ ಅಡಗಿರುವ ಚಿತ್ರಕಲಾತ್ಮಕ ಬೆಡಗನ್ನು ಎತ್ತಿತೋರಿಸಿದ್ದಾನೆ. ಈ ವಿಷಯವನ್ನು ಕನ್ನಡದ ಹಿರಿಯ ವಿದ್ವಾಂಸರಾಗಿರುವ ಶ್ರೀ

---

೩೯. ಎನ್.ಅನಂತರಂಗಾಚಾರ ಸಂ : ಸಾಹಿತ್ಯ ಭಾರತಿ , ಪುಟ - ೧೭೯

೪೦. ಎನ್.ಅನಂತರಂಗಾಚಾರ ಸಂ : ಸಾಹಿತ್ಯ ಭಾರತಿ , ಪುಟ - ೧೮೦

ಬಿ.ವಿ.ಕೆ.ಶಾಸ್ತ್ರಿಯವರು ಹೀಗೆ ವಿವರಿಸುತ್ತಾ ಕರ್ತೃವಿನ ಕಲಾಪ್ರಜ್ಞೆ ಯನ್ನು ಪರಿಚಯಿಸಿದ್ದಾರೆ. ಮೊದಲನೆಯ ಪರಿಚ್ಛೇದದ ಕಡೆಯಲ್ಲಿ ಬರುವ ಈ ಪದ್ಯವು ಹೀಗಿದೆ.

'ಸಕಳಾಳಾಪ ಕಳಾಪ ಕಥಿತ ವ್ಯಾವೃತ್ತಿಯೋಳ್ ಕೂಡಿ ಚಿತ್ರಕ
ರಂಬೋಲ್ ಪರಭಾಗ ಭಾವ ವಿಲಸದ್ವರ್ಣ ಕ್ರಮಾವೃತ್ತಿಯಂ
ಪ್ರಕಟಂ ಮಾಡಿರೆಪೇಳ್ದ ಚಿತ್ರಕೃತಿಯಂ ವ್ಯಾವರ್ಣಿಸುತ್ತಂ ಕವಿ
ಪ್ರಕರಂ ಶ್ರೀ ವಿಜಯ ಪ್ರಭೂತಮನಿದಂ ಕೈಕೊಳ್ವುದೀ ಮಾಳೆಯಿಂ'

ಅಂದರೆ ಈ ಗ್ರಂಥ ಕರ್ತೃ ಶ್ರೀ ವಿಜಯನು 'ಸಕಳಾಳಾಪ ಕಳಾಪ ವನ್ನು ಅಂದರೆ ಮಾತಿನ ಅಥವಾ ಶಬ್ದದ ಕಲೆಯನ್ನು -ಒಬ್ಬ ಚಿತ್ರಕಾರ ಅಥವಾ ಚಿತ್ರಗಾರ, ಪರಭಾಗ, ಭಾವವಿರಾಸದ್ವರ್ಣ ಕ್ರಮಾ ವೃತ್ತಿಯಂ ಶೋಭಾಯಮಾನವಾದ ವರ್ಣಕ್ರಮದಿಂದ ಒಂದು ಚಿತ್ರದ ಅಂತರ್ಗತ ಭಾವವನ್ನು , ಸೌಂದರ್ಯವನ್ನು ಪ್ರಕಟಮಾಡಿದ ರೀತಿಯಲ್ಲಿ ಶ್ರೀ ವಿಜಯನು ಈ ಸಕಳ ಆಳಾಪ ಕಲೆಯನ್ನು ವಿವರಿಸಿದ್ದಾನೆ.' [೪೧]

ಕಲ್ಯಾಣ ಚಾಲುಕ್ಯರ ಕಾಲದ ವಡ್ಡಾರಾಧನೆ : ಸು. 9ನೇ ಶತಮಾನದ ಕನ್ನಡ ನಾಡಿನ ಬಹುದೊಡ್ಡ ಕೃತಿಯಾದ ಈ ಗ್ರಂಥವನ್ನು ಶ್ರೀ ಡಿ.ಎಲ್. ನರಸಿಂಹಾಚಾರ್ಯರು 1940ರಲ್ಲಿ ಇದನ್ನು ಬೆಳಕಿಗೆ ತಂದರು. ಇದರ ಕವಿ, ಕಾಲಗಳ ವಿಷಯವಾಗಿ ಭಿನ್ನ ಅಭಿಪ್ರಾಯಗಳಿವೆ. ಸುಮಾರು 9 ನೆಯ ಶತಮಾನದಲ್ಲಿ ಶಿವಕೋಟಿ ಯೆಂಬುವನು ಈ ಗ್ರಂಥವನ್ನು ರಚಿಸಿದನೆಂದು ಅಭಿಪ್ರಾಯ ಪಡಲಾಗಿದೆ. ಇದರಲ್ಲಿ 16 ಜನ ಜೈನಯತಿಗಳು ಮತ್ತು ಶಿಲ್ಪ, ವಾಸ್ತು, ವರ್ಣ ಚಿತ್ರಕಲೆ ಬಗೆಗೂ ಚರ್ಚಿಸುವುದಲ್ಲದೇ ಜೈನ ಧರ್ಮದಲ್ಲಿ ಬರುವ 24 ತೀರ್ಥಂಕರ ಕುರಿತಾದ ವರ್ಣ ಚಿತ್ರಗಳಿವೆ. ವರ್ಣಾವಿವರದೊಂದಿಗೆ ದೇಹದ ತಾಳಮಾನ,ದೇಹಮಾನ ಮತ್ತು ವರ್ಣಮಾನಗಳ ಕುರಿತು ಈ ಗ್ರಂಥದಲ್ಲಿ ಚರ್ಚಿಸಲಾಗಿದೆ. ಪೂರ್ವಭಾರತದ ಜೈನಕೃತಿಗಳಲ್ಲಿ ಕಾಣುವ ಕಲಾತ್ಮಕ ಹಸ್ತಪ್ರತಿಯೂ ಇದಾಗಿರುತ್ತದೆ. [೪೨]

ಈ ರೀತಿಯಾಗಿ ಅನೇಕ ಗ್ರಂಥಗಳು ಹಸ್ತಪ್ರತಿಯೊಳಗಿನ ಚಿತ್ರಗಳೊಂದಿಗೆ ಕೃತಿಯ ವಿವರಗಳ ಬಗ್ಗೆ ವಿವರಣೆ ನೀಡಿರುವಂತೆ ಹಸ್ತಪ್ರತಿಯೊಳಗಿನ ಚಿತ್ರಕಲೆಯ ಇತಿಹಾಸವನ್ನು ಕಟ್ಟಲೂ ಸಹಾಯಕವಾಗಿರುವುದನ್ನು ಗಮನಿಸಬಹುದಾಗಿದೆ.

ಕ್ರಿ.ಶ. 10ನೇ ಶತಮಾನದಲ್ಲಿ ರಚನೆಯಾದ ಸಾಹಿತ್ಯವು ಆ ಕಾಲದ ಹಸ್ತಪ್ರತಿ ಚಿತ್ರಕಲೆಯನ್ನು ತಿಳಿಸಿಕೊಡುತ್ತದೆ. ವಿದ್ವಾಂಸರ ಅಭಿಪ್ರಾಯದಂತೆ ಕ್ರಿ.ಶ. 920ರ ಸುಮಾರಿನಲ್ಲಿ ಬದುಕಿದ್ದ ಶಿವಕೊಟ್ಯಾಚಾರ್ಯ ಬರೆದಿರುವನೆಂದು ತಿಳಿಯಲಾಗಿರುವ ವಡ್ಡಾರಾಧನೆ ಗ್ರಂಥದ ಸುಕುಮಾರ ಸ್ವಾಮಿ, ಕೌಶಲಸ್ವಾಮಿ, ಸನತಕುಮಾರ ಚಕ್ರವರ್ತಿ, ಸಿರಿವಿಣ್ಣ, ಗುರುದತ್ತ ಮತ್ತು ಭಟ್ಟಾರಕರಂತಹ ಕವಿಗಳ ಕಥೆಗಳಲ್ಲಿ ಹಸ್ತಪ್ರತಿಗಚಿತ್ರಗಳ ಪ್ರಸ್ತಾಪ ಬರುತ್ತದೆ. ಕಥೆಗಳಿಗೆ ಚಿತ್ರಗಳನ್ನು ಪಟಗಳಲ್ಲಿ ಬರೆದು

---

೪೧. ಪಿ.ಆರ್.ತಿಪ್ಪೇಸ್ವಾಮಿ ಸಂ. : ಚಿತ್ರಕಲಾ ಪ್ರಪಂಚ, ಬಿ.ಬಿ.ಕೆ.ಶಾಸ್ತ್ರಿ ಪುಟ -೧೬೪

೪೨. ಎನ್.ಅನಂತರಂಗಾಚಾರ ಸಂ: ಸಾಹಿತ್ಯ ಭಾರತಿ , ಪುಟ -೧೭೬

ತೋರಿಸಿತ್ತಿದ್ದುದು ತಿಳಿದುಬಂದಿದೆ. ಅರಸನ ಚಿತ್ರ ಬರೆಸುವದು ಹಿಂದಿನ ಜನ್ಮದ ಘಟನೆಗಳನ್ನು ನೆನೆದುಕೊಂಡು ಸ್ವತಃ ಚಿತ್ರ ಬರೆಯುವದು ಸಹಸ್ರ ಕೂಟಾಕಾರದ ಮುಗಿಲನ್ನು ಕಂಡು ಬರದ ಹಲಗೆಯಮೇಲೆ ರೇಖಿಸಲು ತೊಡುಗುವದು ಪಟದ ಮೇಲೆ ಚಿತ್ರ ಬರೆಯುವದು ವಿಷಯಗಳನ್ನು ಹೇಳಲಾಗಿದೆ. [೬೩]

4. ಪಂಪಯುಗದ ಹಸ್ತಪ್ರತಿ ಚಿತ್ರಕಲೆ. (ಕ್ರಿ.ಶ. 10ನೇ ಶತಮಾನ)

ಹತ್ತನೆಯ ಶತಮಾನವು ಕನ್ನಡ ಸಾಹಿತ್ಯದ ಸಮಗ್ರ ಕನ್ನಡನಾಡಿನ ಸಾಂಸ್ಕೃತಿಕ ಸುವರ್ಣಯುಗ, ಕನ್ನಡನಾಡಿನ ಸಾಹಿತ್ಯ, ಸಂಸ್ಕೃತಿಗಳ ವೈಭವವನ್ನು ಈ ಕಾಲದಲ್ಲಿ ಕಾಣಬಹುದು. ಪ್ರತಿಭಾಶಾಲಿಗಳಾದ ಅನೇಕ ಕವಿಪುಂಗವರು ಜನಿಸಿ, ಕನ್ನಡದ ಕಾವ್ಯರತ್ನಗಳನ್ನು ನಿರ್ಮಿಸಿದ ಈ ಯುಗವನ್ನು ಕನ್ನಡನಾಡಿನ ಕಾವ್ಯಗಳ ಯುಗ, ಸರ್ವೋತ್ತಮುಖ ಏಳಿಗೆ ಸಾಧಿಸಿದ ಸುವರ್ಣಯುಗ. ಈ ಯುಗದ ಕವಿಗಳು ಸಾಹಿತ್ಯವಲಯಕ್ಕಷ್ಟೆ ಸೀಮಿತಗೊಳ್ಳದೆ ಸಾಹಿತ್ಯದ ಮೂಲಕ ನಾಡಿನ ಚಿತ್ರ, ಸಂಗೀತ ,ಶಿಲ್ಪ ಮತ್ತು ಚಾರಿತ್ರಿಕ ವಲಯಗಳನ್ನು ಚರ್ಚಿಸಿದರು. ಮಾತಿರದ ಚಿತ್ರಕಲೆಗೆ ಧ್ವನಿ ತುಂಬಿದರು, ಇತಿಹಾಸದ ಕಾಲ ಗರ್ಭದಲ್ಲಿ ಅಡಗಿ ಕುಳಿತಿದ್ದ ಅನೇಕ ಚಿತ್ರಕಲಾವಿದರನ್ನು ಪರಿಚಯಿಸಿದಂತೆ ಕರ್ನಾಟಕದ ಹಸ್ತಪ್ರತಿ ಚಿತ್ರಕಲೆಯ ಇತಿಹಾಸವನ್ನು ಗಟ್ಟಿಗೊಳಿಸಲು ದಿಟ್ಟವಾದ ಕೊಂಡಿಯಾಗಿದ್ದಾರೆ.

ಪಂಪಯುಗದಲ್ಲಿ ಬರುವ ಹಲವಾರು ಕಾವ್ಯಗಳ ಕರ್ತೃಗಳು ತಮ್ಮ ಕಾವ್ಯಗಳಲ್ಲಿ ಚಿತ್ರಕಲೆಯ ಕುರಿತು ಉಲ್ಲೇಖಿಸುವುದರೊಂದಿಗೆ ಚಿತ್ರಕಲೆಯ ಕುರಿತು ನೇರ ಚರ್ಚೆಯನ್ನು ಮಾಡಿದ್ದಾರೆ. ಆ ಎಲ್ಲ ಕವಿಪುಂಗವರು ಕಂಡಂತೆ ಕರ್ನಾಟಕದ ಹಸ್ತಪ್ರತಿ ಚಿತ್ರಕಲೆಯ ಇತಿಹಾಸವನ್ನು ಕಟ್ಟಿ ಕೊಡುವ ಯತ್ನವನ್ನು ಇಲ್ಲಿ ಮಾಡಲಾಗಿದೆ. ಈ ಯುಗದ ಯುಗಪುರಷ ಪಂಪನಿಂದಲೆ ನಾವು ಅಧ್ಯಯನವನ್ನು ಈ ರೀತಿಯಾಗಿ ಪ್ರಾರಂಭಿಸಬಹುದು.

1. ಪಂಪಮಹಾಕವಿ : 'ಕವಿರಾಜಮಾರ್ಗ'ಕಾರನ ತರುವಾಯ ಕಣ್ಣು ಕುಕ್ಕುವಂತೆ ಗೋಚರಿಸುವ ಕವಿಯೆಂದರೆ ಪಂಪಮಹಾಕವಿ. ಪಂಪನು ಹತ್ತನೆಯ ಶತಮಾನದ ಶ್ರೇಷ್ಠಕವಿ. ಸಮಗ್ರ ಸಾಹಿತ್ಯ ಶಿಖರದಲ್ಲಿ ಏಕಮೇವಾ ದ್ವಿತೀಯನಾಗಿ ಕಂಗೋಳಿಸುವ ಎರಡಿಲ್ಲದ ಕವಿ ; ಪಸರಿಪ ಕನ್ನಡಕ್ಕೋರ್ವನೆ ಸತ್ಕವಿ ಎಂಬ ಅಜರಾಮರ ಕೀರ್ತಿಯು 'ವೃಷಭ ಕವಿಯಾತ' ಪಂಪನು ಅರಿಕೇಸರಿಯ ಆಸ್ಥಾನ ಕವಿ ಮಾತ್ರವಲ್ಲ ಅವನ ಸೇನಾನಿಯೂ ಹೌದು. ಇದರೊಂದಿಗೆ ಕನ್ನಡದ ಕಾಳಿದಾಸನೂ ಹೌದು. ಮಹಾಕವಿಗೆ ಇರಬೇಕಾದ ದಾರ್ಶನಿಕತೆ, ವಿಷಯ ವಿವೇಚನೆಗಳು ಆತನಿದ್ದ ಕಾರಣದಿಂದಲೆ ಆತ ಕೇವಲ ಕನ್ನಡ ಸಾಹಿತ್ಯಕ್ಕೆ ಸ್ಪಂದಿಸದೆ ಸಮಗ್ರ ಕರ್ನಾಟಕದ ಸಂಸ್ಕೃತಿಗೆ ಸ್ಪಂದಿಸಿದ

---

೬೩. ಡಾ. ಎಸ್.ಸಿ.ಪಾಟೀಲ: ವರ್ಣ ಸಂಚಯ, ಪುಟ -೯೦

ಕವಿ[೪೪] ಚಿತ್ರಕಲೆಯನ್ನು ಕುರಿತು ಕವಿ ಪಂಪ ಈ ರೀತಿ ಉಲ್ಲೇಖಿಸಿಕೊಂಡಿದ್ದಾನೆ.

ರಸಭಾವಂಗಳಳಾದ ಚೆಲ್ವು ನುಡಿವಂತಾದ ವ್ಕಿರಿಂ ನೋಡುವಂತುಸಿರ್ದಂ
ತಿರ್ದುದು ರೇಖೆ ಕೋಮಳತೆಯಂ ತಾಳ್ದಿತ್ತು ವರ್ಣಕ್ರಮಂ
ರಸವತ್ಕುಂತಿಯ ನಾಂತು ನಿಂದುದೆಸೆವೀ ನಿಮ್ನೋನ್ನತಂಗಲ್ ವಿರಾಜಿಸಿ
ಚೆಲ್ವಿಂ ಗೆಡೆಗೊಂಡುವು ಇಂತು ಬರೆಯಲ್ ಬ್ರಹ್ಮಂಗ್ಗಮೇಂ ಬರ್ಕುಮೇ -ಆದಿ ಪುರಾಣ

ಎಂದು ಒಂದು ಚಿತ್ರ ಸುಂದರವಾಗಿರಬೇಕಾದರೆ ಅದರಲ್ಲಿ ಏನೇನು ಲಕ್ಷಣಗಳಿರಬೇಕು ಎನ್ನುವುದನ್ನು ಮಹಾಕವಿ ಪಂಪ ಮಹಾಶಯನು ತನ್ನ ಆದಿಪುರಾಣದಲ್ಲಿ ವಜ್ರ ಜಂಘನಬಾಯಯಿಂದ ಶ್ರೀಮತಿಯ ಚಿತ್ರವನ್ನು ನೋಡುತ್ತ ಕೃತಿಯನ್ನು ಮತ್ತೊಂದು ಘಟನೆಯೊಂದಿಗೆ ತೌಲನಿಕವಾಗಿ ತೂಗಿ ಕಲೆಯ ಭಾಷೆಯಲ್ಲಿಯೇ ವಿವರಿಸಿದ್ದಾನೆ. ಇಲ್ಲಿ ಸಾಹಿತ್ಯವು ಮೌನವಾಗಿದ್ದು ಮಾತೆ ಇರಲಾರದ ಆಲೇಖ್ಯಯಾದ ಚಿತ್ರಕಲೆಯನ್ನು ಮಾತನಾಡಿಸಿದ್ದಾನೆ. ಚಿತ್ರದೊಳಗಿನ ರಸ, ಭಾವಗಳಿಂದ ಕೂಡಿದ ಚೆಲುವು ರೇಖಾವಿನ್ಯಾಸದಿಂದ ಕೋಮಲವಾಗಿರುವಂತೆ, ತೂಕಬದ್ಧವಾದ ವರ್ಣ ಸಂಯೋಜನೆಯು, ರಸವಂತಿಕೆಯಿಂದ ಕಾಂತಿಯನ್ನು ತಂದಿದೆ ಎಂಬುದೇ ಚಿತ್ರದೊಳಗಿರುವ ಚಿತ್ರಿತ ವ್ಯಕ್ತಿಯ ಬಹುಶಃ ಸ್ತ್ರೀಯ ದೇಹದ ಉಬ್ಬು-ತಗ್ಗುಗಳ ವಿವರವನ್ನು ಕವಿಯು ಕಲಾವಂತಿಕೆಯ ಮಾತುಗಳ ಸೊಗಸಿನಿಂದ ಮನದ ಮೇಲೆ ಮೋಡಿ ಹಾಕುವಂತೆ. ಚಿತ್ರಕಲೆಯ ಸಮಸ್ತ ರಹಸ್ಯವನ್ನು ಪಂಪಕವಿ ಆಡಿದ್ದಾನೆ. ನಾಲ್ಕು ಮಾತುಗಳಲ್ಲಿ ವ್ಯಾಪಕವಾಗಿ ಹೇಳಿದ್ದಾನೆ. ಇಂತಹುದೆ ಮತ್ತೊಂದು ಅಪೂರ್ವವಾದ ಚಿತ್ರಕಾವ್ಯವನ್ನು ಮಹಾಕವಿ ಪಂಪ ಮಹಾಶಯನು ಈ ರೀತಿ ಉದ್ಧರಿಸುತ್ತಾನೆ.

ಸಂಗತ ನೀತಿಶಾಸ್ತ್ರ ವಿದರಪ್ಪವರ್ ಅವಂದಿರ ತಮ್ಮ ತಮ್ಮ ಕ
ಜ್ಜಂಗಳ ಮೆಯ್ಗಳೊಳ್ ಪುಸಿದು ಅದಂ ಕಡುನನ್ನಿಯೆ ಮಾಡಿ ತೋರ್ಪರು
ತ್ತುಂಗ ಸುಸೂಕ್ಷ್ಮ ಪಾರ್ಶ್ವ ಕೃಶ ಕೋಮಳ ನಿಮ್ನ ಘನೋನ್ನತ ಪ್ರದೇ
ಶಂಗಳನಾ ಸಮಾನ ತಳದಲ್ಲಿಯೆ ಚಿತ್ರಕನೆಯ್ದ ತೋರ್ಪವೊಲ್ -ವಿಕ್ರಮಾರ್ಜುನ ವಿಜಯ

ಚಿತ್ರಕಲಾವಿದನಾದವನು ಉತ್ತುಂಗ, ಸೂಕ್ಷ್ಮ, ಪಾರ್ಶ್ವ, ಕೃಶ, ಕೋಮಳ, ನಿಮ್ನ, ಘನ, ಉನ್ನತ ಪ್ರದೇಶಗಳನ್ನು ಸಮತಲವಾದ ಪಟದಲ್ಲಿ ಚಿತ್ರಿಸಿ ತೋರುವಂತೆ ರಾಜ ನೀತಿವಿದರಾದವರು ತಮ್ಮ ತಮ್ಮ ಕಾರ್ಯಗಳಲ್ಲಿ ಅದನ್ನು ನನ್ನಿಯೆಂಬಂತೆಯೇ ಮಾಡಿ ತೋರಿಸುತ್ತಾರೆ ಎನ್ನುವ ಮಾತಿನಲ್ಲಿ ರಾಜನೀತಿಯ ಕೌಟಿಲ್ಯವನ್ನೇನೋ, ಸ್ವಾರಸ್ಯವಾಗಿ ವಿವರಿಸಿದ್ದಾನೆ. ಚಿತ್ರಕಲೆಯ ಬಗೆಗೆ ಪಂಪನಿಗಿರುವ ಪ್ರೌಢಿಮೆಯನ್ನು ತೋರಿಸಲಾಗಿದೆ. ಪಂಪ ಇಲ್ಲಿ ಚಿತ್ರಕಲೆಯನ್ನು ಒಂದು ವಿಶಿಷ್ಟತೆ ಚೌಕಟ್ಟಿನಲ್ಲಿ ಗುರುತಿಸಿದ್ದಾನೆ ಎಂಬುದನ್ನು ಗಮನಿಸಬೇಕಾದ ಅಂಶವಾಗಿದೆ. ಚಿತ್ರಕಲಾವಿದ ಸಮತಲವಾದ ಪಟದ ಮೇಲೆಯೇ ನಿಮ್ನ, ಘನ ಇತ್ಯಾದಿ ಪ್ರದೇಶಗಳನ್ನು ಚಿತ್ರಿಸುತ್ತಾನೆ. ಇದೇ

೪೪. ಡಾ.ಜಿ.ಎಸ್.ಶಿವರುದ್ರಪ್ಪ : ಸೌಂದರ್ಯ ಸಮೀಕ್ಷೆ, ಪುಟ - ೨೩೪

ಅವನ ಕಲೆಯ ಒಂದು ವೈಶಿಷ್ಟ್ಯ[೪೫] ಎಂಬ ತಾಂತ್ರಿಕ ಅರಿವು ಆತನಿಗಿದೆಯೆಂಬುದನ್ನು ನಾವು ಗಮನಿಸಬೇಕಾಗಿದೆ.

ಕ್ರಿ.ಶ. 11ನೇ ಶತಮಾನದಲ್ಲಿ ಹಸ್ತಪ್ರತಿ ಚಿತ್ರಗಳ ರಚನೆಗಳನ್ನು ಹುಡುಕುವಂತ ಕಾರ್ಯ ಸಂಶೋಧಕರಿಂದ ನಡೆಯದ ಕಾರಣ ಮತ್ತು ನಮಗೆ ಐತಿಹಾಸಿಕ ದಾಖಲೆಗಳನ್ನು ಕಾಯ್ದಿಡುವ ಮನೋಭಾವನೆ ಇರಲಾರದ ಕಾರಣ ಆ ಕಾಲದ ಕೆಲವು ಸಾಹಿತ್ಯ ಕೃತಿಗಳು ಹಸ್ತಪ್ರತಿ ಚಿತ್ರಗಳೊಂದಿಗೆ ನಾಶಹೊಂದಿರಬಹುದು. ನಯಸೇನನ ಧರ್ಮಾಮೃತ ಕೃತಿಯಲ್ಲಿ ಪಟಚಿತ್ರಗಳ ಬಗ್ಗೆ ಮತ್ತು ಹಸ್ತಪ್ರತಿ ಚಿತ್ರಗಳ ಬಗೆಗೆ ಪ್ರಸ್ತಾಪ ಮಾಡುತ್ತಾನೆ. ಅದೇ ರೀತಿ ಕ್ರಿ.ಶ. 1068ರಲ್ಲಿ ಶಾಂತಿನಾಥನ ಸುಕುಮಾರಿ ಚರಿತೆ ಕೃತಿಯಲ್ಲಿಯೂ ಸೂಚ್ಯವಾಗಿ ಹಸ್ತಪ್ರತಿ ಚಿತ್ರಕಲೆಗೆ ವಿವರಗಳಿವೆ.

2. ಕವಿ ಪೊನ್ನ :(ಸು.ಕ್ರಿ.ಶ.950) ಪೊನ್ನ ಮಹಾ ಕವಿಯು ಪಂಪನ ಸಮಕಾಲೀನನಾದವನು. ರಾಷ್ಟ್ರಕೂಟ ಚಕ್ರವರ್ತಿಯಾದ ಮೂರನೆಯ ಕೃಷ್ಣನಿಂದ ಕವಿಚಕ್ರವರ್ತಿ ಎಂಬ ಬಿರುದನ್ನು ಪಡೆದ ಅದೃಷ್ಟಶಾಲಿ, ಜೈನ ಧರ್ಮದಲ್ಲಿ ವಿಶೇಷ ಪರಿಣಿತನಾದವನು. ತನ್ನ ಕಾಲದಲ್ಲಿ ಬಹು ಗೌರವಕ್ಕೆ ಪಾತ್ರನಾಗಿದ್ದರಬೇಕು. ಈತನ ಭಾವಸ್ಥಿರ , ರಾಮಾಭ್ಯುದಯ, ಶಾಂತಿ ಪುರಾಣವನ್ನೇ ದಾನಚಿಂತಾಮಣಿ ಅತ್ತಿಮಬ್ಬೆಯು ಸಾವಿರ ಪ್ರತಿ ಮಾಡಿಸಿ, ಹಂಚಿದಳೆಂಬುದು ಸರ್ವವಿಧಿತ. ಈತ ತನ್ನ ಕಾವ್ಯವಾದ ಶಾಂತಿ ಪುರಾಣದಲ್ಲಿ ಹೀಗೆ ಚಿತ್ರಕಲೆಯನ್ನು ಕುರಿತು ಹೇಳಿಕೊಂಡಿದ್ದಾನೆ.

ನಯಮಳವಟ್ಟ ಪಚ್ಚೆ ಸಹಕಾರದೊಳಿಂಗುಳಿಕಂ ತಳಿರ್ತ ಶೋ
ಕೆಯೊಳರಿದಾಳ ಮುಳ್ಳಲರ್ದ ಸೆಂಪಗೆಯೊಳ್ ಕಡುಗರ್ಪು ಭೃಂಗಕೋ
ಟಿಯೊಳೆಸಿದಿರ್ದ ನೀಲಗಿರಿ ಮಲ್ಲಿಗೆಯೊಳ್ ಸಮನಾಗೆ ಚೀರುಘ
ಟ್ಟಯೆ ಬರೆದಿಟ್ಟ ಬನಕ್ಕೆಣೆಯಾಯ್ತು ಬನಂ ವಿದೇಹದೊಳ್ - ಶಾಂತಿ ಪುರಾಣ

ಪೊನ್ನ ಕವಿ ತನ್ನ ಕಾವ್ಯದಲ್ಲಿ ಚಿತ್ರಕಲೆಯನ್ನು ಸಾಹಿತ್ಯಕ್ಕೆ ಸಮವರ್ತಿಯಾಗಿ ಬಳಸಿಕೊಂಡಿರುವಂತೆಯೇ ಇತನು ಚಿತ್ರಕಲಾ ಲೋಕಕ್ಕೆ ಮಾಡಿದ ಬಹುದೊಡ್ಡ ಉಪಕಾರವೆಂದರೆ ಅಜ್ಞಾತವಾಗಿ ಹಸ್ತಪ್ರತಿಗಳಲ್ಲೇ ಉಳಿದಿದ್ದ ಕಲಾವಿದ 'ಚೀರಘಟ್ಟ'ಯನ್ನು ಸಾರಸ್ವತಲೋಕದಿಂದ ಸಾರ್ವಜನಿಕ ಲೋಕಕ್ಕೆ ಪರಿಚಯಿಸಿದ ಕೀತಿ ಮಹಾಕವಿ ಪೊನ್ನನಿಗೆ ಸಲ್ಲುತ್ತದೆ. ಯುವತಿಯೋರ್ವಳ ದೇಹದ ಸಿರಿಯನ್ನು ಸಾಹಿತ್ಯ ಮಾಧ್ಯಮದಿಂದ ಚಿತ್ರಕಲಾಕೃತಿಯ ರೂಪಕದಲ್ಲಿ ಬಳಸಿರುವ ಕಾವ್ಯ ಸಂಯೋಜನೆ ಅಮೋಘವಾದುದಾಗಿದೆ.

ರಾಷ್ಟ್ರಕೂಟರ ಚಕ್ರವರ್ತಿ ಮೂರನೇ ಕೃಷ್ಣನ ಆಸ್ಥಾನದಲ್ಲಿದ್ದ ಪೊನ್ನ ಕವಿಯು ಕ್ರಿ.ಶ.950ರಲ್ಲಿ ಬರೆದ ಶಾಂತಿಪುರಾಣದಲ್ಲಿ ಅನೇಕ ಹಸ್ತಪ್ರತಿಗಳ ಚಿತ್ರಗಳನ್ನು ಬರೆದ ಉಲ್ಲೇಖದೊರೆತಿವೆ. ಮನೆಯೊಳಗೆ, ಚಿತ್ರಶಾಲೆಯೊಳಗೆ ಚಿತ್ರ ಬರೆದ ವಿವರಣೆ ಇದೆ. ಚೀರಘಟ್ಟಿ ವಿಶ್ವಕರ್ಮರೆಂಬ ಚಿತ್ರಕಲಾವಿದರ ಬಗೆಗೂ, ಪಂಚವಿಧವರ್ಣ ಇತ್ಯಾದಿಗಳ ಕುರಿತು ಪೊನ್ನ ಪ್ರಸ್ತಾಪಿಸುತ್ತಾನೆ. ರನ್ನಕವಿಯ ಸಮಕಾಲೀನನಾದ ಒಂದನೆಯ ನಾಗವರ್ಮನು ತನ್ನ ಕರ್ನಾಟಕ

---

೪೫. ಡಾ.ಜಿ.ಎಸ್.ಶಿವರುದ್ರಪ್ಪ : ಸೌಂದರ್ಯ ಸಮೀಕ್ಷೆ, ಪುಟ - ೨೫೨

ಕಾದಂಬರಿ ಕೃತಿಯಲ್ಲಿ ರಸಭಾವಸ ಕಂಚುಕಿತಚಿತ್ರಕರ್ಮ ಚಿತ್ರಿತ ಹಂಸಾನೀಕ, ಚಿತ್ರಶಾಲೆ, ಚಿತ್ರಕರ್ಮಚತುರೆ, ಚಿತ್ರಹೋಲಿಕೆ, ಚಿತ್ರ ವಿದ್ಯಾವಿಲಾಸೈಕ, ವಿನೋದ ಮುಂತಾದ ವಿಷಯಗಳನ್ನು ಹೇಳಿದ್ದಾನೆ. ಕ್ರಿ.ಶ. 10 ರಿಂದ 12ನೇ ಶತಮಾನದವರೆಗೂ ಆಳಿದ ಕಲ್ಯಾಣ ಚಾಲುಕ್ಯರ ಕಾಲದ ಹಸ್ತಪ್ರತಿ ಚಿತ್ರಗಳು ನಮಗೆ ದೊರೆಯದಿದ್ದರೂ ಆದಿಕವಿ ಪಂಪನ ಪರಿಸರದ ವೆಂಗಿಪಳು ಸುತ್ತಮುತ್ತಲಿನ ಪ್ರದೇಶದಲ್ಲಿ ಅನೇಕ ಹಸ್ತಪ್ರತಿ ಚಿತ್ರಕಲೆ ಗ್ರಂಥಗಳು ದೊರೆಯುತ್ತವೆ. ಚಾಲುಕ್ಯರ ಮೂರನೆ ದೊರೆ ಸೋಮೇಶ್ವರನು (ಕ್ರಿ.ಶ. 1127-39) ಮಾನಸೋಲ್ಲಾಸ ಎಂಬ ಕೃತಿ ರಚಿಸಿದ್ದು ಇದರಲ್ಲಿ ಸಾಕಷ್ಟು ವಿವರಗಳು ದೊರೆಯುತ್ತವೆ. [೪೬]

3. ನಾಗಚಂದ್ರ :(ಸು.1100) ಪ್ರಾಚೀನ ಕನ್ನಡ ಸಾಹಿತ್ಯದ ಮತ್ತು ಅದ್ವಿತೀಯ ಪಂಪಯುಗದ ಕೊನೆಯ ಕೊಂಡಿಯಂತಿರುವ ಕವಿ ನಾಗಚಂದ್ರ ಶತಮಾನಾಂತ್ಯದಲ್ಲಿದ್ದ ಇತನನ್ನು ಅಭಿನವ ಪಂಪನೆಂಬ ಅಭಿದಾನದಿಂದಲೂ ಕರೆಯಲಾಗುತ್ತಿದೆ. ಈತ ವಿಜಯ ಪುರದಾತ ವಿಜಯಪುರದಲ್ಲಿ ಒಂದು ಮಲ್ಲಿನಾಥ ಜಿನಾಲಯವನ್ನು ಕಟ್ಟಿಸಿ ಮಲ್ಲಿನಾಥ ಪುರಾಣವನ್ನು ಬರೆದುದನ್ನು ಹೇಳಿಕೊಂಡಿದ್ದಾನೆ. ಈತನ ಗುರು ಬಾಲಚಂದ್ರಮುನಿ ಈ ಕವಿಪುಂಗವನಿಗೆ ಭಾರತೀ ಕರ್ಣಪೂರ,ಕವಿತಾ ಮನೋಹರ, ಸಾಹಿತ್ಯ ವಿದ್ಯಾಧರ, ಚತುರಕವಿ ಜನಾಸ್ಥಾನ ರತ್ನ , ಪ್ರದೀಪ ಮೊದಲಾದ ಬಿರುದುಗಳಿವೆ. ಈ ಕವಿ ಮಲ್ಲಿನಾಥ ಪುರಾಣ ಬರೆದಂತೆ ರಾಮಚಂದ್ರ ಚರಿತ ಪುರಾಣ ಅಥವಾ ಪಂಪ ರಾಮಾಯಣ ಎಂಬ ಕೃತಿಯನ್ನು ರಚಿಸಿರುತ್ತಾನೆ. ನಾಗಚಂದ್ರ ತನ್ನ ಮಲ್ಲಿನಾಥ ಪುರಾಣದಲ್ಲಿ ಚಿತ್ರಕಲೆಯ ಕುರಿತು ಸಾಕಷ್ಟು ಉಲ್ಲೇಖಿಸಿದ್ದಾನೆ. ಚಿತ್ರಕಲೆ ಮತ್ತು ಚಿತ್ರಕಲಾವಿದರ ಬಗ್ಗೆ ಸಾಕಷ್ಟು ಪರಿಜ್ಞಾನವುಳ್ಳ ಕವಿ ನಾಗಚಂದ್ರನು ಅಭಿನವ ಪಂಪ ಎಂಬ ಬಿರುದು ಇತನಿಗೆ ಅನ್ವರ್ಥವಾಗಿದೆ.

ತಿರಿದು ಕೊಳಲ್ಕೆ ಬಂದೊಪುವು ಕೆಂದಳಿರಂ, ಗಿಳಿ ತಾಮ್ರ ತುಂಡದಿಂ
ದಿರೆ ದಪುದಾಮ್ರದೊಳ್ಮಿಡಿಗಳಂ, ಬಿಸಕಾಂಡಮ ನಂಚೆ ಚಂಚುವಿಂ
ಕಿರಿದಾಗಿ ಕರ್ಚಿ ಕುಡುಕಂ ಮರಿ ಗಿತ್ತಪುವೆಂಬ ಬಲ್ಮೆಕ
ಣ್ದರೆದವೊಲಿರ್ದ ಚಿತ್ರಿಕನ ಚಿತ್ರದ ಚಿತ್ರವಿಧಕ್ಕೆ ಮೆಚ್ಚಿದಂ - ಮಲ್ಲಿನಾಥ ಪುರಾಣ

ತನ್ನ ಪರಿಸರವನ್ನೇ ದಿಟ್ಟಿಸಿ ವೀಕ್ಷಿಸುವ ಜಾಗೃತ ಕವಿಯಾದ ಈತ ಪ್ರಕೃತಿಯ ಪ್ರತಿಯೊಂದನ್ನು ತನ್ನ ಕಾವ್ಯಕ್ಕೆ ಅಳವಡಿಸಿಕೊಳ್ಳುವಂತೆ ಕವಿ ಇಲ್ಲಿ ಪ್ರಕೃತಿಯಲ್ಲಿರುವ ಪಕ್ಷಲೋಕವನ್ನು ಚಿತ್ರಿಸಿದ್ದಾನೆ. ಗಿಳಿಗಳು ಕೆಂದಳಿರನ್ನು ತಿನ್ನಲು ಬರುತ್ತಿವೆ; ತಾಮ್ರ ತುಂಡದಿಂದ ಮಾವಿನ ಮಿಡಿಗಳನ್ನು ಕಚ್ಚಿ ತಿನ್ನುತ್ತವೆ. ಅಗೊ ಮತ್ತೊಂದಡೆ ಹಂಸ ಕಮಲದ ದಂಟನ್ನೂ ಕಚ್ಚಿ ಮರಿಗೆ ಗುಟುಕನ್ನು ಕೊಡುತ್ತಿದೆ. ಈ ಚಿತ್ರಕ್ಕೆ ಚಿತ್ರವಿಧಕ್ಕೆ , ಚಿತ್ರಕಲಾವಿದನ ಸಂಯೋಜನೆಗೊ ಅರಸ

೪೬. ಡಾ. ಯಾದಪ್ಪ ಪರದೇಶಿ : ಉತ್ತರ ಕರ್ನಾಟಕದ ಭಿತ್ತಿ ಚಿತ್ರಕಲೆ,(ಅಪ್ರಕಟಿತ) ಪುಟ - ೪೬

ಮೆಚ್ಚಿಕೊಂಡಿರುವುದನ್ನು ಕವಿ ಹೇಳಿಕೊಂಡಿದ್ದರೂ ಇಲ್ಲಿ ಚಿತ್ರಕಲೆಯನ್ನು ಆಸ್ವಾದಿಸುವ ಕಲಾಪ್ರಜ್ಞೆ ಕಲಾವಿದನಿಗೆ ಇರುವಂತೆ ಕವಿಗೂ ಅರಸನಿಗೂ ಇರುವುದನ್ನು ಕವಿಯ ರಸವಂತಿಕೆಯನ್ನು ಸೂಚಿಸುತ್ತಿದೆ.

4.ಚಾವುಂಡರಾಯ :(ಕ್ರಿ.ಶ.978) ಪಂಪ ಯುಗಾತೀತ ಕವಿ. ಪಂಪೋತ್ತರ ಯುಗದಲ್ಲೂ ಪಂಪನ ಪ್ರಭಾವವೂ ಸಾಹಿತ್ಯವಲಯದಲ್ಲಿ ಇನ್ನೂ ಪ್ರಕಾಶಮಾನವಾಗಿ ಬೆಳಗುತ್ತಿದೆ. ಪಂಪ, ಪೊನ್ನರ ತರವಾಯ ಪ್ರಸಿದ್ಧಿಗೆ ಬಂದು ಸಾಹಿತ್ಯ ಕ್ಷೇತ್ರದಲ್ಲಿ ವಿಶಿಷ್ಟ ಸ್ಥಾನಗಳಿಸಿದವನು ಚಾವುಂಡರಾಯ. ಪಂಪನಂತೆ ಇತನೂ ಆಡಳಿತರಂಗದ ಅನುಭವವುಳ್ಳ ಕವಿ. ಗಂಗ ಕುಲದ ರಾಜಮಲ್ಲನ (ಕ್ರಿ.ಶ.984 - 968) ಮಂತ್ರಿಯಾಗಿಯೂ ಸೇನಾನಿಯಾಗಿಯೂ ಪ್ರಸಿದ್ಧಿಗೆ ಬಂದುದಲ್ಲದೇ. ಶ್ರವಣಬೆಳ್ಗೊಳದಲ್ಲಿ ಗೊಮ್ಮಟೇಶ್ವರನ ಲೋಕೋತ್ತರ ವಿಗ್ರಹವನ್ನು ನಿರ್ಮಿಸಿದ ಕೀರ್ತಿ ಈತನಿಗೆ ಸಲ್ಲುತ್ತಿದೆ. ಇತನ ಚಾವುಂಡರಾಯ ಪುರಾಣದಲ್ಲಿ ಗೋಮ್ಮಟೇಶ್ವರನ ಪ್ರತಿಮಾಶಾಸ್ತ್ರ ಭಾವ,ಭಂಗಿ,ಧೀರೋದಾತ್ತ ನಿಲುವುಗಳು ಗೋಚರವಾಗುವಂತೆ ಕಲಾತ್ಮಕ ವಿವರಗಳು ದೊರೆಯುತ್ತವೆಯಲ್ಲದೆ ಜೈನ ಆಗಮದರ್ಶನದ ತ್ರೀಲೋಕ-ಸಾರದಲ್ಲಿ ಅಲ್ಲಲ್ಲಿ ಬರುವ ಮಾನಸ ಸ್ಥಂಭ, ಚೈತಾಲಯಗಳ ವಿವರಣೆಯೂ ಈ ಗ್ರಂಥದಲ್ಲಿ ದೊರೆಯುವುದು. ಜೈನ ಹಸ್ತಪ್ರತಿ ಗ್ರಂಥಗಳು ಕೇವಲ ಧಾರ್ಮಿಕ ಗ್ರಂಥಗಳಾಗಿರದೇ ಕಲಾ ವಂತಿಕೆಯೊಂದಿಗೆ ಸಮೃದ್ಧವಾದ, ಸಾಂಸ್ಕೃತಿಕವಾದ ಉನ್ನತ ಗ್ರಂಥಗಳಾಗಿವೆ ಎಂಬುದನ್ನು ಗಮನಿಸಬಹುದಾದ ಅಂಶವಾಗಿದೆ.

5. ಒಂದನೇ ನಾಗವರ್ಮ :(ಸು.ಕ್ರಿ.ಶ.990) ಪೊನ್ನ ಕವಿಯ ತರುವಾಯ ಬರುವ ಪ್ರಸಿದ್ಧ ಕನ್ನಡ ಕವಿಗಳಲ್ಲಿ ರನ್ನ ಪ್ರಮುಖ ಕವಿಯಾದರೂ ಕಲಾತ್ಮಕ ವಿಚಾರವನ್ನು ರನ್ನ ಕವಿಗಿಂತ ಕಲಾತ್ಮಕರಂಗದಲ್ಲಿ ಪ್ರಭಾವ ಬೀರುವವನು ನಾಗವರ್ಮ. ಈತನು ಛಂದೋಂಬುಧಿ, ಗುಣಗಾಂಕಿಯೆಂಬ ಛಂದೋಗ್ರಂಥಗಳಿದ್ದ ವಿವರ ದೊರೆತರು. ನಾಗವರ್ಮ. ಪ್ರಸಿದ್ಧನಾದನು ಬಾಣ ಸಂಸ್ಕೃತ ಕಾದಂಬರಿಯನ್ನು ' ಕರ್ನಾಟಕ ಕಾದಂಬರಿ' ಎಂಬ ಹೆಸರಿನಿಂದ ಕನ್ನಡಕ್ಕೆ ಅನುವಾದ ಗೊಳಿಸುವುದರ ಮುಖಾಂತರ. ಬಾಣ ಕಾದಂಬರಿಯು ಸಂಸ್ಕೃತ ಸಾಹಿತ್ಯದ' ರೂಪದಲ್ಲಿದ್ದರೂ ಅದು ಕಲಾತ್ಮಕ ಸಂಭ್ರಮದ ಭಾವನೆಗಳನ್ನು ಸೃಷ್ಟಿಸಬಲ್ಲ ಕೃತಿಯಾಗಿದೆ ಮನ ಓದುತ್ತಾ ಸಾಗಿದಂತೆ ಬುದ್ದಿ ಅಸಂಖ್ಯಾತ, ಅದ್ವಿತೀಯ ದೃಶಾವಳಿಗಳನ್ನು ರಚಾನಾತ್ಮಕ ಕಲಾಕೃತಿಗಳಂತೆ ಸೃಷ್ಟಿಸುತ್ತಾ ಸಾಗುತ್ತದೆ. ಅದು ಹೊಸಗನ್ನಡಕ್ಕೆ ಗಂಗಾಧರ ಮಡಿವಾಳೇಶ್ವರ ತುರಮರಿಯವರಿಂದ ಬಂದಿದ್ದರೂ ಅದು ಸ್ವತಂತ್ರ ಕೃತಿಯಂತೆ ಮನಮೋಹಕ ರೂಪತಾಳಿ ನಿಂತಿದೆ. ಅದರಲ್ಲಿಯ ಪ್ರತಿ ದೃಶ್ಯವೂ ಒಂದೊಂದು ರಸ ಘಟ್ಟದ ಚಿತ್ರಕಲಾಕೃತಿಯಂತಿದೆ.

6. ನಯಸೇನ :(ಸು.ಕ್ರಿ.ಶ.1100) ನಯ ಸೇನನ ಧರ್ಮಾಮೃತ 'ನಾಣ್ನುಡಿ ದೇಸಿವೆತ್ತ ಪೊನುಡಿ' ಯಿಂದ ಬೆರೆತ ಮಹತ್ವದ ಕೃತಿ ಕಂಡುಬರುವ ಚಿತ್ರಕಲೆಗಳ ಪ್ರಸ್ತಾಪ ಮಹತ್ವ ಪೂರ್ಣವಾದುದು ವಜ್ರ ಕುಮಾರರು ಜೈನೋಪಾಧ್ಯಾಯರ ಬಳಿಯಲ್ಲಿ 'ಅಕ್ಷರಗಣಿತ ಗಂಧರ್ವ, ಚಿತ್ರಕರ್ಮ ಪತ್ರ ಛೇದಾದಿ

ಸಪ್ತತಿಕಳೆಗಳೊಳಂ ಚತುಷಷ್ಟಿ ಕಳಾಗುಣಂಗಳೊಳ್ ಸಂದಿತನಾದುನೆಂದು ಹೇಳಿದ್ದು ನಯಸೇನ [141] ಇಲ್ಲಿ ಶ್ರೀಮತಿ ಡಾ|| ಚೆನ್ನಕ್ಕನವರು ತಿಳಿಸಿದಂತೆ ಚಿತ್ರಕರ್ಮವೆಂದರೆ ಚಿತ್ರಕಲೆ, ಇದರಲ್ಲಿ ಚಿತ್ರ ಬರೆಯುವುದು, ಚಿತ್ರಕೊರೆಯುವುದು ಮತ್ತು ಬಣ್ಣ ಕೊಡುವುದು ಎಂದರೆ ತಾಳೆಗರಿಯ ಮೇಲೆ ಆಕೃತಿಗಳ ಹೊರರೇಖೆಯನ್ನು ಕಂಠದಿಂದ ಕೊರೆದು ಬಣ್ಣ ತುಂಬುವ ಕ್ರಮವನ್ನೇ ಹಸ್ತಪ್ರತಿ ಚಿತ್ರಕಲೆ ಕರ್ಮವೆಂದೂ ಅರ್ಥಮಾಡಿಕೊಳ್ಳಬೇಕು. ಕಪ್ಪನೀಡುವದು ಎಂದರೆ ಕಂಠದಿಂದ ಗಿರಿದ ಅಕ್ಷರಗಳಿಗಷ್ಟೇ ಅಲ್ಲ, ಹಲವು ಬಣ್ಣಗಳಿಂದ ಕೂಡಿದ ಚಿತ್ರ ಕೃತಿಗಳಿಗೆ ಹೊರ ರೇಖೆ ಎಳೆಯವುದು ಕಪ್ಪು ಇಡುವ ಒಂದು ಕ್ರಮವಾಗಿತ್ತು. [೪೭]

ಈ ರೀತಿ ಪಂಪಯುಗ ಕವಿಗಳ ತಿಂಥಿಣಿಯಲ್ಲಿ ಕೆಲವರನ್ನೇ ಆಯ್ದುಕೊಂಡು ಇಲ್ಲಿ ಪ್ರಸ್ತಾಪಿಸಲಾಗಿದೆ. ರತ್ನ ತ್ರಯರಾದ ರನ್ನ, ಚಾವುಂಡರಾಯರಂತಹ ಅನೇಕ ಕವಿಗಳ ಇರುವನ್ನು ಇಲ್ಲಿ ಸ್ಮರಿಸಿಕೊಳ್ಳಲಾಗಿದೆ. ಕನ್ನಡದ ಪ್ರಾಚೀನ ಕಾವ್ಯ ಸಾಹಿತ್ಯದಲ್ಲಿ ಚಿತ್ರಕಲೆಯನ್ನು ಉಲ್ಲೇಖಿಸಿ ಅದಕ್ಕೆ ಅದರದೆಯಾದ ಪರಿಭಾಷೆಯಲ್ಲಿ ಕಲೆಯನ್ನು ಕುರಿತು ಮಾತಾನಾಡಿರುವ ಈ ಎಲ್ಲಾ ಕನ್ನಡ ಕವಿಗಳು ಅಲ್ಲಿ ಸಾಹಿತ್ಯ ಕಾವ್ಯಲೋಕಕ್ಕೆ ಸೀಮಿತರಾಗದ ಕಲೆಯ ವೀಕ್ಷಕರು, ವಿಮರ್ಶಕರು ಮತ್ತು ರಸ ಆಸ್ವಾದಿಸುವ ಕಲಾಭಿಜ್ಞರಾಗಿ ಕನ್ನಡ ಸಾಹಿತ್ಯದ ಕರ್ನಾಟಕದ ಹಸ್ತಪ್ರತಿ ಚಿತ್ರಕಲೆಯ ಇತಿಹಾಸದ ನಿರ್ಮಾಪಕರಾಗಿದ್ದಾರೆ.

5. ವಚನಯುಗದ ಹಸ್ತಪ್ರತಿ ಚಿತ್ರಕಲೆ. (ಕ್ರಿ.ಶ. 12ನೇ ಶತಮಾನ)

ಜಡಗೊಂಡಿದ್ದ ಸಾಹಿತ್ಯ, ಸಾಮಾಜಿಕ, ಧಾರ್ಮಿಕ ಬದುಕಿಗೆ ಚೇತನದ ಹೊಸತನವನ್ನು ತಂದವರು ಹನ್ನೆರಡನೇ ಶತಮಾನದ ಶಿವಶರಣರು ಈ ವಚನಕಾರರ ಯುಗ ಕರ್ನಾಟಕದಲ್ಲಿ ಪ್ರಾರಂಭವಾದರೂ. ಜಗತ್ತಿನ ಡೊಂಕುತಿದ್ದಿ ಪರಿವರ್ತನೆ ತಂದವರು ಹನ್ನೆರಡನೇ ಶತಮಾನದ ಶಿವಶರಣರು ಲಿಂಗಬೇಧ, ಜಾತಿಬೇದ ಮತ್ತು ವರ್ಗಭೇದಗಳಂತಹ ಹಲವು ಭೇದಗಳನ್ನು ನಿವಾರಿಸಿದವರು.

ಹನ್ನೆರಡನೇ ಶತಮಾನದ ಶಿವಶರಣರ ವಿಚಾರಧಾರೆ, ಬದುಕಿನ ರೀತಿ, ನೀತಿಗಳನ್ನು ಡಾ|| ಎಂ.ಎಂ. ಕಲಬುರ್ಗಿಯವರು ಕಲ್ಯಾಣದ ಶಿವಶರಣರದು ಕನ್ನಡ ನೆಲದ ಮೇಲೆ ನಡೆದ ಪ್ರಥಮ ಸಮಾಜೋಧಾರ್ಮಿಕ ಆಂದೋಲನವಾಗಿದೆ. ಹನ್ನೆರಡನೆಯ ಶತಮಾನದಲ್ಲಿ ಜರುಗಿದ ಈ ಆಂದೋಲನದ ನಾಯಕ ವ್ಯಕ್ತಿ ಬಸವಣ್ಣ. ಬಸವಣ್ಣ ಬಾಳಿದ್ದು ಕನ್ನಡ ನಾಡಿನಲ್ಲಿ, ಬರೆದಿದ್ದು, ಕನ್ನಡ ಭಾಷೆಯಲ್ಲಿ ಈ ಪರಿಮಿತಿ ಕಾರಣವಾಗಿದೆ ಇವನಿಗೆ ನ್ಯಾಯವಾಗಿ ಸಿಗಬೇಕಾದ ಜಾಗತೀಕ ಪ್ರಸಿದ್ಧಿ ಇನ್ನೂ ಸಿಕ್ಕಿಲ್ಲವಾದರೂ ಇವನನ್ನು ಕುರಿತಷ್ಟು ಸಾಹಿತ್ಯ ಕನ್ನಡದಲ್ಲಿ ಯಾರನ್ನೂ ಕುರಿತು ಹುಟ್ಟಿಲ್ಲ ಇವನಷ್ಟು ಅಖಂಡ ಪ್ರಭಾವ ಕರ್ನಾಟಕದ ಮೇಲೆ ಯಾವ ಧಾರ್ಮಿಕ ಮಹಾಪುರುಷನು

೪೭. ಡಾ. ಎಸ್.ಸಿ.ಪಾಟೀಲ, ಸತ್ಯಾನಂದ ಪಾತ್ರೋಟ ಸಂ: ನಿಜದ ನೆಲೆ, ಡಾ. ಚನ್ನಕ್ಕ ಪಾವಟೆ ಪುಟ - ೧೦೯

ಶಿವಯೋಗ ಮಂದಿರದ
ಅಲಂಕೃತ ಹಸ್ತ ಪ್ರತಿಗಳು



ಕೃಪೆ:

ಡಾ॥ಸ್ನೇಹಾ ಭೂಸನೂರ್,

ಉಪನ್ಯಾಸಕರು, ಕರ್ನಾಟಕ ವಿಶ್ವವಿದ್ಯಾಲಯ ಸ್ನಾತಕೋತ್ತರ ಕೇಂದ್ರ

ಶ್ರೀ ಬಸವೇಶ್ವರ ಮಹಾವಿದ್ಯಾಲಯ,ಬಾಗಲಕೋಟ.

ಬೀರಿಲ್ಲ ಎಂದು ವಿವರಿಸಿ ಅವರು ಮುಂದುವರಿದು ವಿವರಿಸುತ್ತಾ, ಭಾರತವು ವರ್ಗಬೇಧ, ವರ್ಣಭೇದ, ಲಿಂಭೇದ - ಹೀಗೆ ಭೇದ ಸಂಸ್ಕೃತಿಯ ರಾಷ್ಟ್ರವಾಗಿದೆ ಭೇದ ಸಂಸ್ಕೃತಿಯ ಸಮಾಜದಲ್ಲಿ ಪರಸ್ಪರ ಘರ್ಷಣೆಗಳು ಜರುಗಬಹುದೇ ಹೊರತು ಸಾಮುದಾಯಿಕ ಆಂದೋಲನ ಜರುಗಲಾರದು. ಹೀಗಾಗಿ ನಮ್ಮ ದೇಶದಲ್ಲಿ ಆತ್ಮ ಕಲ್ಯಾಣದ ಪ್ರಯೋಗಗಳು ಜರುಗಿದವೇ ಹೊರತು ಸಮಾಜ ಕಲ್ಯಾಣದ ಆಂಧೋಲನಗಳು ಸಂಭವಿಸಲಿಲ್ಲ. ಶರಣರು ಮಾತ್ರ ಈ ಎರಡೂ ಬಗೆಯ ಕಲ್ಯಾಣದ ವಿಷಯವಾಗಿ ಸಾಮಾಜಿಕ ಕಲ್ಯಾಣವನ್ನು ಸಾಧಿಸಿದರು.[೪೮]

ಹನ್ನೇರಡನೇಯ ಶತಮಾನದ ಶಿವಶರಣರು ಶೋಷಣೆಗೆ ಒಳಗಾದವರಿಗೆ ನ್ಯಾಯ ಒದಗಿಸಿದಂತೆ ಸಂಶೋಧಕರ, ವಿದ್ವಾಂಸರ ಕಲೆಯ ಕುರುಡುತನ ಉದಾಸೀನತೆ, ಅವಜ್ಞೆಗೆ ಒಳಗಾಗಿದ್ದ ಹಸ್ತಪ್ರತಿಯೊಳಗಿನ ಚಿತ್ರಕಲೆಯನ್ನು ಕುರಿತು ನೇರವಾಗಿ, ಪುರಕವಾಗಿ ತಮ್ಮ ಅನೇಕ ವಚನಗಳಲ್ಲಿ ಮಾತನಾಡಿದ್ದಾರೆ. ಶಿಲ್ಪ, ವಾಸ್ತು, ಸಂಗೀತ, ಚಿತ್ರ, ಭಿತ್ತಿ ಚಿತ್ರಕಲೆಯ ಬಗೆಗೆ ಲಿಂಗಮೆಚ್ಚಿ ಹೌದು ಹೌದು ಎನ್ನುವಂತೆಯೂ ದಾಖಲಿಸಿದ್ದಾರೆ. ಈ ಕುರಿತು ಹಿರಿಯ ವಿದ್ವಾಂಸರಾಗಿರುವ ಡಾ||ಬಿ.ವಿ.ಮಲ್ಲಾಪುರ ಅವರು ವೀರಶೈವ ಸಾಹಿತ್ಯ ಚಿತ್ರಕಲೆ ಕುರಿತು ಹೀಗೆ ಹೇಳಿಕೊಂಡಿದ್ದಾರೆ. ವಿಶ್ವಸಾಹಿತ್ಯಕ್ಕೆ ಅಮೂಲ್ಯ ಕಾಣಿಕೆಯೆಂದು ಪರಿಗಣಿತವಾಗಿರುವ ಶರಣರ ವಚನ ಸಾಹಿತ್ಯದಲ್ಲಿ ಚಿತ್ರಕಲೆಗೆ ಸಂಬಂಧಿಸಿದಂತೆ ಕೆಲವು ವಿವರಗಳು ದೊರೆಯುತ್ತವೆ. ಉದ್ದೇಶಿತ ವಿಷಯ ಪ್ರತಿಪಾದನೆಯ ಸಂದರ್ಭದಲ್ಲಿ ಅದನ್ನು ಸ್ಪಷ್ಟಪಡಿಸಲು ಇಲ್ಲವೆ ಸಮರ್ಥಿಸಲು ಕೆಲವು ಸಲ ನೇರವಾಗಿ ಕೂಡ ಚಿತ್ರಕಲೆಗೆ ಸಂಬಂಧಿಸಿದ ಅದರ ಪರಿಕರಗಳನ್ನು ಉಪಮೆಯಾಗಿಯೂ ದೃಷ್ಟಾಂತವಾಗಿಯೊ ವಚನಕಾರರು ಬಳಸಿಕೊಂಡಿದ್ದಾರೆ. ಇದರಿಂದ ಚಿತ್ರಕಲೆಯ ಬಗ್ಗೆ ಅವರಿಗೆ ಸರಿಯಾದ ತಿಳುವಳಿಕೆಯಿತ್ತೇಂಬುದು ಸ್ಪಷ್ಟವಾಗುತ್ತದೆ. ಆದರೆ ಚಿತ್ರಕಲೆಯ ಪರಿಕರಗಳ ಬಗ್ಗೆ ವಚನಕಾರರು ಹೆಚ್ಚಿನ ವಿವರಗಳನ್ನು ಕೊಟ್ಟಿಲ್ಲ. ಈಗ ವಚನ ಸಾಹಿತ್ಯದಲ್ಲಿ ಬಂದಿರುವ ಚಿತ್ರಕಲೆಯ ವಿವರ ಮತ್ತು ಉಲ್ಲೇಖಗಳನ್ನು ಗುರುತಿಸಲು ಪ್ರಯತ್ನಿಸಬಹುದು.[೪೯]

ಹನ್ನೇರಡನೆಯ ಶತಮಾನದ ಶಿವಶರಣರು ಸಾಮಾಜಿಕ ಜೀವನದ ಎಲ್ಲಾ ಮಜಲುಗಳಿಗೂ ನ್ಯಾಯ ಒದಗಿಸಿದಂತೆ ಚಿತ್ರಕಲೆಯ ಕುರಿತು ಮಾತಾನಾಡಿರುವುದು ಅವರ ಸಾಮಾಜಿಕ ಬದುಕಿಗೆ ನ್ಯಾಯ ಒದಗಿಸುವ ಕ್ರಮವಾಗಿದ್ದು ಅವರ ಅನೇಕ ವಚನಗಳಿಂದ ತಿಳಿದುಬರುತ್ತದೆ. ವಚನ ಚಳುವಳಿಯ ನೇತಾರರಾದ ಪ್ರಭು, ಅಕ್ಕಮಹಾದೇವಿ, ಚೆನ್ನಬಸವಣ್ಣನವರು, ಮೊಳಿಗೆ ಮಾರಯ್ಯ, ಜೇಡರದಾಸಿಮಯ್ಯ, ಶಂಕರದಾಸೀಮಯ್ಯ, ನೀಲಮ್ಮ, ಮುಕ್ತಾಯಕ್ಕನಂತಹ ಅನೇಕ ವಚನಕಾರರು ಅಂದಿನ ದಿನಮಾನಗಳಿಗೆ ಚಿರಪರಿಚಿತವಾಗಿದ್ದ ಚಿತ್ರಕಲೆಯ ಕುರಿತು ಸಾಕಷ್ಟು ಹೇಳಿದ್ದಾರೆ. ಚಿತ್ರಿಸಬೇಕಾದ ಕಡೆಗಳಲ್ಲಿ ಎತ್ತರಿಸಿದ ವೇದಿಕೆಯೊಂದನ್ನು ಕಟ್ಟಿ ಅದರ ಗೋಡೆಗಳ ಮೇಲೆ

---

೪೮. ಡಾ. ಎಂ.ಎಂ. ಕಲಬುರ್ಗಿ : ಬಸವಣ್ಣನವರ ವಚನ ಸಂಪುಟ-1, ಪುಟ -೧೫

೪೯. ಡಾ. ಎಸ್.ಸಿ.ಪಾಟೀಲ : ಸತ್ಯಾನಂದ ಪಾತ್ರೋಟ (ಸಂ): ನಿಜದ ನೆಲೆ, ಡಾ. ಬಿ.ವಿ.ಮಲ್ಲಾಪೂರ ಪುಟ - ೧೧೬

ಚಿತ್ರ ರಚಿಸುತ್ತಿದ್ದರು ಇದಕ್ಕೆ ತಿಟ್ಟವೆಂದು ಹೆಸರು3 ಎಂಬ ಮಾತನ್ನು ಡಾ॥ನಾರಾಯಣ ಅವರು ತಿಳಿಸಿರುವಂತೆ ವಚನಕಾರರು ಚಿತ್ರಕಲೆಯಕುರಿತು ಅಧಿಕೃತವಾಗಿ ಮಾತನಾಡಿದ್ದಾರೆ.[೫೦]

ವಿವಿಧ ವಚನಕಾರರು ರಚಿಸಿದ ವಚನಗಳ ವಿವರಗಳನ್ನು ಈ ರೀತಿ ಗಮನಿಸಬಹುದು. ಬಸವಣ್ಣ (ವಚನ 126, 398) ಮಧುವಯ್ಯ (144) ಬಂಢಾರಿ ಶಾಂತರಸ (ವಚನ - 7) ಅಂಬಿಗರ ಚೌಡಯ್ಯ (ವಚನ-59, 91) ಮೊಳಿಗೆ ಮಾರಯ್ಯ (ವಚನ -45) ಮುಂತಾದ ಅನೇಕ ವಚನಗಳಲ್ಲಿ ಶಿವಶರಣರು ಚಿತ್ರಕಲೆಯ ಕುರಿತು ಅನೇಕ ವಿವರಗಳನ್ನು ಸಾಂದರ್ಭಿಕವಾಗಿ ನೀಡಿದ್ದಾರೆ.

ಸೋಮೇಶ್ವರನ ಮಾನಸೋಲ್ಲಾಸ : (ಸು. ಕ್ರಿ.ಶ.1129) ಶ್ರೀ ಮದ್ರಾರಾಜಾಧಿರಾಜ ಸತ್ಯಾಶ್ರಯ ಕುಲತಿಲಕ ಚಾಲುಕ್ಯಾಭರಣ, ಶ್ರೀಮದ್ ಭೂಲೋಕಮಲ್ಲ ಶ್ರೀ ಸೋಮೇಶ್ವರ ದೇವರ ವಿರಚಿತ "ಅಭಿಲಷಿತಾರ್ಥ ಚಿಂತಾಮಣಿ ಯೆನಿಸಿದ" ಮಾನಸೋಲ್ಲಾಸ ಗ್ರಂಥವು ಶಾಲಿವಾಹನ ಶಕೆ 1051 ಸಂವತ್ಸರ ಚೈತ್ತಮಾಸ, ಶುಕ್ಲಪಕ್ಷ ಪ್ರತಿಪದೆಯ ಶುಕ್ರವಾರದಂದು (ಕ್ರಿ.ಶ.1129) ರಚನೆಗೊಂಡ ಮಹತ್ವದ ಗ್ರಂಥ.[೫೧]

ಈ ಕೃತಿಯಲ್ಲಿ ಐದು ವಿಂಶತಿಗಳಲ್ಲಿ ವಿಭಾಗಿಸಿ ಒಟ್ಟು 8022 ಶ್ಲೋಕಗಳಲ್ಲಿ ನಿರೂಪಿಸಲಾಗಿದೆ. ಈ ಗ್ರಂಥದಲ್ಲಿ ಅರಸನ ರಾಜ್ಯಗ್ರಹದಲ್ಲಿ ಚಿತ್ರ ಬಿಡಿಸುವ ಕ್ರಮ, ಚಿತ್ರಕಾರನ ಸ್ವರೂಪ, ಚಿತ್ರಭಿತ್ತಿ ಲೇಖನಿ,ಶುದ್ಧ ವರ್ಣದ್ರವ್ಯ, ಮಿಶ್ರವರ್ಣ, ಚಿತ್ರವರ್ಣ, ಪಕ್ಷಸೂತ್ರ ಲಕ್ಷಣ, ತಾಲಲಕ್ಷಣ, ತಿರ್ಯಕ ಮಾನ ಲಕ್ಷಣ, ಸಾಮಾನ್ಯ ಚಿತ್ರ ಪ್ರಕ್ರಿಯೆ, ಕೇಶವ ಬ್ರಹ್ಮ, ಮಹಾದೇವ, ಹರಿಹರ,ಸ್ಕಂದ, ವಿನಾಯಕ, ಕಾತ್ಯಾಯಿನಿ, ಇಂದ್ರಮೂರ್ತಿ, ಅಗ್ನಿಮೂರ್ತಿಯಂತಹ ಅನೇಕ ಮೂರ್ತಿಗಳ ರಚನಾ ಕ್ರಮವನ್ನು 131ನೇ ಶ್ಲೋಕದಿಂದ 190ರ ಶ್ಲೋಕದವರೆಗೆ ಲೇಖಕ ಸೋಮದೇವನು ವಿವರಿಸಿದ್ದಾನೆ.

ಚಿತ್ರಸೂತ್ರಕ್ಕೆ ಒಂದು ದರ್ಶಿಕೆಯಂತಿರುವ ಈ ಗ್ರಂಥದಲ್ಲಿ ಚಿತ್ರಕಾರನ ಅರ್ಹತೆ, ಚಿತ್ರಸಾಮಗ್ರಿ, ಚಿತ್ರಸೂತ್ರ, ಚಿತ್ರಪ್ರಮಾಣ, ವಜ್ರಲೇಪ, ತಿರ್ಯಕ್ ಸೂತ್ರ ವರ್ಣಗಳು, ಮಿಶ್ರವರ್ಣಗಳು, ಚಿನ್ನವರ್ಣ,ದೇವತಾ ಚಿತ್ರಗಳನ್ನು ಕುರಿತು ವಿವರವಾದ ಕ್ರಮವನ್ನು ಅನುಸಿರಿಲಾಗಿದ್ದು ಇದೊಂದು ವಿನೂತನ ಗ್ರಂಥವಾಗಿದೆ. ಚಾಲುಕ್ಯರ ಶಿಲ್ಪ ಶಾಸ್ತ್ರದಂತೆ ಚಿತ್ರ ಶಾಸ್ತ್ರ, ವರ್ಣ ಶಾಸ್ತ್ರಗಳ ಕುರಿತು ಅಧ್ಯಯನವೂ ತುರ್ತಾಗಿ ನಡೆಯಬೇಕಾಗಿದೆ.

12ನೇ ಶತಮಾನದಲ್ಲಿ ರಚನೆಯಾದ ಕೆಲವು ಸಾಹಿತ್ಯ ಕೃತಿಗಳಲ್ಲಿ ಹಸ್ತಪ್ರತಿ ಚಿತ್ರಕಲೆಯ ಬಗ್ಗೆ ಮಾಹಿತಿ ದೊರೆಯುವದು. ಹೊಯ್ಸಳ ಒಂದನೇ ಬಲ್ಲಾಳನು (ಕ್ರಿ.ಶ.

---

೫೦. ಡಾ. ಪಿ.ವಿ.ನಾರಾಯಣ : ವಚನ ಸಾಹಿತ್ಯ ಒಂದು ಸಾಂಸ್ಕೃತಿಕ ಅಧ್ಯಯನ, ಪುಟ - ೨೧೯

೫೧. ಡಾ. ಎಸ್.ಸಿ.ಪಾಟೀಲ : ಸತ್ಯಾನಂದ ಪಾತ್ರೋಟ ಸಂ :ನಿಜದ ನೆಲೆ, ಡಾ. ಕೆ.ವಿಜಯಕುಮಾರ ಪುಟ- ೨೨

1102-1108) ಆಸ್ಥಾನ ಕವಿಯಾಗಿದ್ದ ನಾಗಚಂದ್ರನು ರಚಿಸಿದ ರಾಮಚಂದ್ರ ಚರಿತ ಪುರಾಣ ಮತ್ತು ಮಲ್ಲಿನಾಥ ಪುರಾಣಗಳಲ್ಲಿ ಹಸ್ತಪ್ರತಿ ಚಿತ್ರಕಲೆಗೆ ವಿವರಣೆ ದೊರೆಯುತ್ತದೆ. ರಾಮಚಂದ್ರ ಚರಿತ ಪುರಾಣದ ಪೀಠಿಕಾ ಪ್ರಕರಣ, ಕುಮಾರೋದಯ ವರ್ಣನೆಗಳಲ್ಲಿ ಪುರವನಿತೆಯರು ಮಾಡುತ್ತಲಿದ್ದ ಚಿತ್ರರಚನೆ, ಪಠಚಿತ್ರ ನಿರ್ವಹಣೆ ಮುಂತಾದ ಹಸ್ತಪ್ರತಿ ಚಿತ್ರವಿವರಣೆ ಮಲ್ಲಿನಾಥ ಪುರಾಣದಲ್ಲಿ ದೊರೆಯುತ್ತದೆ. ಅಧ್ಯಾಯ 5 ಪದ್ಯ 27 ರಿಂದ 40ರ ವರೆಗಿನ ವಿವರಣೆಯಲ್ಲಿ ಚಿತ್ರ ರಚನೆ ಚಿತ್ರಪ್ರಕಾರ ವರ್ಣಕ್ರಮಾಧಿಗಳ ವಿವರಗಳು ಇದ್ದುದು ತಿಳಿದುಬರುತ್ತದೆ. ಎರಡನೇ ವಿರಬಲ್ಲಾಳನ ಆಸ್ಥಾನದಲ್ಲಿ (ಕ್ರಿ.ಶ.1173-1220) ಜೈನ ಕವಿಗಳಾದ ನೇಮಿಚಂದ್ರ, ಮತ್ತು ಜನ್ನರು ತಮ್ಮ ಕೃತಿಗಳಲ್ಲಿ ಹಸ್ತಪ್ರತಿಚಿತ್ರಗಳು ಪ್ರಸ್ತಾಪ ಮಾಡಿದ್ದಾರೆ. ನೇಮಿಚಂದ್ರನ ನೇಮಿನಾಥಪುರಾಣ ಜನ್ನರ ಯಶೋಧರ ಚರಿತೆ ಮತ್ತು ಅನಂತನಾಥ ಪುರಾಣಗಳು ಹಸ್ತಪ್ರತಿ ಚಿತ್ರಕಲೆಯ ಬಗ್ಗೆ ವಿವರವನ್ನು ಕೊಡುತ್ತವೆ.[31]

1. ಕವಿ ರಾಘವಾಂಕ : 14ನೇ ಶತಮಾನದ ಕವಿ ರಾಘವಾಂಕನು ವಚನಕಾರರು ಉತ್ತರಾರ್ಧದ ಕವಿಯಾಗಿದ್ದು, ತನ್ನ ಸಿದ್ದರಾಮ ಚರಿತೆಯಲ್ಲಿ ಹಸ್ತಪ್ರತಿ ಚಿತ್ರಗಳಬಗ್ಗೆ ಸಾಕಷ್ಟು ವಿವರಗಳನ್ನು ತಿಳಿಸಿದ್ದಾನೆ. ಈ ಕೃತಿಯ ಸಚಿತ್ರ ಹಸ್ತಪ್ರತಿಯು ಧಾರವಾಡ ವಿಶ್ವವಿದ್ಯಾಲಯದಲ್ಲಿ ಮತ್ತು ಮೈಸೂರ ವಿಶ್ವವಿದ್ಯಾಲಯಜಗಳಲ್ಲಿ ದೊರೆಯುತ್ತವೆ.

2. ಷಡಕ್ಷರ ದೇವ :(1635) ಷಡಕ್ಷರ ದೇವನು ಮತ್ತೊಬ್ಬ ವೀರಶೈವ ಕವಿಯಾಗಿದ್ದು, ತನ್ನ ಹಲವಾರು ಕೃತಿಗಳಲ್ಲಿ ಚಿತ್ರಕಲೆಯ ಬಗೆಗೆ ಹಸ್ತಪ್ರತಿ ಚಿತ್ರಗಳ ಬಗೆಗೆ, ಭಿತ್ತಿ ಚಿತ್ರಗಳ ಬಗೆಗೆ ಸಾಕಷ್ಟು ವಿವರಣೆಗಳನ್ನು ಕೊಡುತ್ತಾನೆ. ಷಡಕ್ಷರ ದೇವರ ರಾಜಶೇಖರ ವಿಳಾಸದಲ್ಲಿ ಚಿತ್ರಕಾರರ, ಚಿತ್ರಕಲಾ ಶೈಲಿಯ ವಿಧಗಳನ್ನು ಹೇಳುವದರೊಂದಿಗೆ ಚಿತ್ರಕಲೆಯ ಗುಣಲಕ್ಷಣಗಳನ್ನು ಕೂಡ ತನ್ನ ಕೃತಿಯಲ್ಲಿ ಚಿತ್ರಿಸಿದ್ದಾನೆ. ಸಾತ್ವಿಕ ವ್ಯಕ್ತಿಗೆ ಯಾವ ಗುಣಗಳ ಅವಶ್ಯಕತೆ ಇದೆಯೋ ಸಾತ್ವಿಕ ಚಿತ್ರಕ್ಕೂ ಅಂತಹದೇ ಹಲವಾರು ಗುಣಲಕ್ಷಣಗಳನ್ನು ಹೇಳಿಕೊಳ್ಳುತ್ತಾನೆ.

3. ಭೀಮ ಕವಿ : 17ನೇ ಶತಮಾನದಲ್ಲಿ ಬರುವ ವೀರಶೈವ ಕವಿಗಳಲ್ಲಿ ಅದ್ವಿತೀಯನಾಗಿರುವ ಈ ಕವಿಯ ಬಸವ ಪುರಾಣದಿಂದ ಈತನ ಹೆಸರು ವೀರಶೈವ ಸಾಹಿತ್ಯದಲ್ಲಿ ಚಿರನೂತನವಾಗಿದೆ. ಈತನ ಬಸವಪುರಾಣದ ಕೃತಿಯು ಕನ್ನಡ ಅಧ್ಯಯನ ಸಂಸ್ಥೆ, ಮಾನಸ ಗಂಗೋತ್ರಿ, ಮೈಸೂರ ವಿಶ್ವವಿದ್ಯಾಲಯದ ಹಸ್ತಪ್ರತಿ ಬಂಢಾರದಲ್ಲಿ ಇದ್ದು, ಅದರಲ್ಲಿ ಸುಂದರವಾದ ಅನೇಕ ಹಸ್ತಪ್ರತಿಚಿತ್ರಗಳಿವೆ. ಸಮಾಜಸುಧಾರಕ ಬಸವಣ್ಣ ಸಾಮಾಜಿಕ ಬದುಕಿನಲ್ಲಿ ಗುಡಿ ಸಂಸ್ಕೃತಿಯನ್ನು ತಿರಸ್ಕರಿಸುವಂತೆ ಕಲಾವಿದನು ಕೂಡ ತನ್ನ ಕಲಾಕೃತಿಯಲ್ಲಿ ಗುಡಿ ಸಂಸ್ಕೃತಿಗೆ ವಿರುದ್ಧವಾಗಿರುವ ಚಿತ್ರಗಳನ್ನು ರಚಿಸಿದ್ದಾನೆ. ಈ ಹಸ್ತಪ್ರತಿಯು ಒಳಗೂ, ಅಂಚುಗಳಲ್ಲಿಯೂ, ಮನಮೋಹಕವಾದ ಚಿತ್ರಗಳಿಂದ ಅಲಂಕಾರಗಳಿಂದ ಸಮೃದ್ಧವಾಗಿದೆ.

---

೩೧. ಡಾ. ಯಾದಪ್ಪಪರದೇಶಿ : ಉತ್ತರ ಕರ್ನಾಟಕದ ಭಿತ್ತಿ ಚಿತ್ರಕಲೆ, (ಅಪ್ರಕಟಿತ) ಪುಟ - ೫೨

4. ಶಿವತತ್ತ್ವರತ್ನಾಕರ : (ಸು.ಕ್ರಿ.ಶ.1715) ಶಿವತತ್ತ್ವರತ್ನಾಕರ ಗ್ರಂಥವು ಬಹು ವಿಷಯ ಒಳಗೊಂಡ ವಸ್ತು ಕೋಶವಾಗಿದೆ. ಮೂರನೇ ಸೋಮೇಶ್ವರನಿಂದ ಅಭಿಲಷಿತಾರ್ಥ ಚಿಂತಾಮಣಿ ಅರ್ಥಾತ್ ಮಾನಸೋಲ್ಲಾಸದಂತೆ ಚಾವುಂಡರಾಯನ ಲೋಕೋಪಕಾರ ಹುಟ್ಟಿಕೊಂಡಂತೆ ಕ್ರಿ.ಶ. 1668 ರಿಂದ 1715 ರ ಸುಮಾರಿಗೆ ಶಿವತತ್ತ್ವರತ್ನಾಕರ ಗ್ರಂಥವು ರೂಪತಾಳಿತ್ತು. ಈ ಗ್ರಂಥದ ಮಹತ್ವವನ್ನು ಕುರಿತು ಡಾ॥ ಎಂ. ಎಂ. ಕಲಬುರ್ಗಿಯವರು ಈ ಗ್ರಂಥದ ಮುನ್ನುಡಿಯಲ್ಲಿ ಹೀಗೆ ಹೇಳಿಕೊಂಡಿದ್ದಾರೆ.

ಭೌತಿಕವಾದದು ರಾಜ್ಯ ಜೊತೆಗೆ ಸಾಂಸ್ಕೃತಿಕವಾದದು ಸಾಮ್ರಾಜ್ಯವೆಂಬ ತಿಳುವಳಿಕೆಯಿಂದ ಆಳಿದ ನಮ್ಮ ಅರಸರು ಸಹಜವಾಗಿಯೇ ಸೈನ್ಯಕಟ್ಟುವುದರ ಜೊತೆಗೆ ಸಾಹಿತ್ಯವನ್ನೂ ಸೃಷ್ಟಿಸಿದರು. ಈ ಪರಂಪರೆಯ ಒಂದು ಮುಖ್ಯಕೃತಿ ಕೆಳದಿ ಬಸವರಾಜ ಶಿವತತ್ತ್ವ ರತ್ನಾಕರ ಹೆಸರಿನ ವಿಶ್ವಕೋಶ. ಪ್ರಾಚೀನ ಕರ್ನಾಟಕದಲ್ಲಿ ವಿಶ್ವಕೋಶ ರಚಿಸಿದ ಚಾಲುಕ್ಯ ಸೋಮೇಶ್ವರ, ನಿಜಗುಣ ಶಿವಯೋಗಿ ಕೆಳದಿ ಬಸವರಾಜ ಅರಸರೇ ಆಗಿರುವುದು ಒಂದು ವಿಶೇಷ. ಬಹುಮುಖೀ ಸಮಾಜವನ್ನು ಆಳಬೇಕಾಗಿರುವ ರಾಜರಿಗೆ ಬಹುಮುಖಿ ಜ್ಞಾನ ಅಗತ್ಯವೆನಿಸಿದ್ದಿತು. ಹೀಗೆ ಸಂಗ್ರಹಿಸಿದ ಸಮಗ್ರ ಜ್ಞಾನವನ್ನು ಕೃತಿಗೊಳಿಸಿದ ಫಲವೆನಿಸಿದೆ. ಇವರ ವಿಶ್ವಕೋಶಗಳು ಈ ಬಹುಮುಖಿ ವಿಷಯ ಸಂಪತ್ತು ಕನ್ನಡಿಗರಿಗೂ ತಿಳಿದಿರಲೆಂದು ನಿಜಗುಣ ಶಿವಯೋಗಿಗಳು ವಿವೇಕ ಚಿಂತಾಮಣಿಯನ್ನು ಕನ್ನಡದಲ್ಲಿ ಕನ್ನಡೇತರರಿಗೆ ತಿಳಿದಿರಲೆಂದು ಚಾಲುಕ್ಯ ಸೋಮೇಶ್ವರನು ಮಾನಸೋಲ್ಲಾಸವನ್ನು ಕೆಳದಿ ಬಸವರಾಜ ಶಿವತತ್ತ್ವ ರತ್ನಾಕರವನ್ನು ಸಂಸ್ಕೃತದಲ್ಲಿ ರೂಪಿಸಿದರು. ಇದರಲ್ಲಿ ಪ್ರಾಪಂಚಿಕದಿಂದ ಪಾರಮಾರ್ಥಿಕದವರೆಗಿನ ಎಲ್ಲಾ ಜ್ಞಾನ ಶಾಖೆಗಳೊನ್ನಳಗೊಂಡ ಒಂಭತ್ತು ಕಲ್ಲೋಲ, ನೂರಾಯೆಂಟು ತರಂಗ, ಸುಮಾರು 13,000 ಶ್ಲೋಕಗಳ ಗಜಗಾತ್ರದ ಈ ಕೃತಿ ಹಲವು ವಿದ್ವಾಂಸರ ಅನುವಾದದ ಸಾಮರ್ಥ್ಯದ ಫಲ. [೫೩]

ಇದೇ ಕೃತಿಯ ಸಂಪಾದಕರಾಗಿರುವ ಶ್ರೀ ಮಲ್ಲೇಪುರಂ ವೆಂಕಟೇಶ ಅವರು ಐತಿಹಾಸಿಕ ಪರಿವೀಕ್ಷಣೆಯಲ್ಲಿ ಹೇಳಿದ ಮಾತು ಗಣನೀಯವಾಗಿದ್ದು ಅವು ಹೀಗಿವೆ. .... ಭಾರತೀಯರಿಗೆ ವಿಶ್ವಕೋಶದ ಕಲ್ಪನೆ ಇರಲಿಲ್ಲವೆಂಬ ಅಪಪ್ರಥೆ ಒಂದುಂಟು. ಈವರೆಗೂ ನಾವು ಪಶ್ಚಿಮದ ಎನ್‌ಸೈಕ್ಲೋಪಿಡಿಯಾ ಗಳನ್ನೇ ನಾವು ಶಿಕ್ಷಣಕ್ರಮದಲ್ಲೂ, ಅಧ್ಯಯನದ ಕ್ರಮದಲ್ಲೂ ಇವನ್ನೇ ನಂಬಿಕೊಂಡು ಬಂದಿದ್ದೇವೆ. ಒಂದು ಮುಖ್ಯ ಸಂಗತಿಯೆಂದರೆ ಮಧ್ಯಕಾಲೀನ ಕರ್ನಾಟಕದಲ್ಲಿ ಈ ಬಗೆಯ ಎರಡು ಸಮವಸ್ತು ವಿಷಯ ಕೋಶಗಳು ಹುಟ್ಟಿಕೊಂಡವು. ಅವೆರಡು ಅವೈದಿಕರಿಂದ ರಚನೆಗೊಂಡವೆಂಬುದ ಮುಖ್ಯಸಂಗತಿ. ಏಕ ವಿಷಯಕೋಶಗಳು ಮಧ್ಯಕಾಲೀನ ಕರ್ನಾಟಕದಲ್ಲಿ ವಿಪುಲವಾಗಿವೆ. ಗಜ, ಅಶ್ವವೈದ್ಯ, ಜ್ಯೋತಿಷ್ಯ, ಸಂಗೀತ, ನಾಟ್ಯ, ಇಂತಹವು ಕನ್ನಡದಲ್ಲೂ ,

---

೫೩. ಪ್ರೊ. ಮಲ್ಲೆಪುರಂ ಜಿ. ವೆಂಕಟೇಶ (ಸಂ): ಕೆಳದಿ ಬಸವರಾಜ ಸಂಕಲಿಸಿದ ಶಿವತತ್ವರತ್ನಾಕರ, ಮುನ್ನುಡಿಯಿಂದ ಡಾ. ಎಂ.ಎಂ.ಕಲಬುರ್ಗಿಯವರು ಹೇಳಿದ್ದು.

ಸಂಸ್ಕೃತದಲ್ಲೂ ವಿಪುಲವಾಗಿ ಬಂದಿದ್ದವು. ಅದರಲ್ಲೂ ಈ ಬಗೆಯ ಏಕ ವಿಷಯ ಕೋಶಗಳು ಎಲ್ಲಾ ಕಾಲಗಳಲ್ಲೂ ರಚನೆಗೊಂಡವು. ವಿಜಯನಗರ ಪೂರ್ವ ಹಾಗೂ ವಿಜಯನಗರೋತ್ತರ ಕಾಲಘಟ್ಟದಲ್ಲಿ ಏಕ ವಿಷಯ ಕೋಶಗಳು ಬಹಳವಾಗಿವೆ. ಇದಕ್ಕೆ ಕಾರಣವನ್ನು ಚಾರಿತ್ರಿಕ ಪರಿಪ್ರೇಕ್ಷಕದಲ್ಲೇ ನೋಡಬೇಕು.[೫೪]

ಈ ಕೃತಿಯು ಎರಡು ಸಂಪುಟಗಳಲ್ಲಿ ಪ್ರಕಟಗೊಂಡಿದೆ. ಮೊದಲನೆಯ ಸಂಪುಟದಲ್ಲಿ 604 ಮುದ್ರಿತ ಪುಟಗಳಿದ್ದು ಅದರಲ್ಲಿ ಆರು ಕಲ್ಲೋಲಗಳಿವೆ. ಕಲ್ಲೋಲವೆಂಬುದು ಸಂಸ್ಕೃತ ಪದವಾಗಿದ್ದು ಕಲೋಲ ಎಂದರೆ ದೊಡ್ಡ ತರಂಗ ಎಂದು ಅರ್ಥೈಸಲಾಗದೆ.[೫೫]

ಪ್ರತಿ ಸಂಪುಟದಲ್ಲೂ ಕಲ್ಲೋಲಗಲಿದ್ದು ಉಪಘಟಕಗಳಾಗಿ ತರಂಗಗಳಿವೆ ಮೊದಲ ಸಂಪುಟದಲ್ಲಿ ಆರು ಕಲ್ಲೋಲಗಳಿದ್ದರೆ. ಒಂದೊಂದು ಹೆದ್ದೆರೆಯಲ್ಲಿ ಏಳು, ಎಂಟು, ಹನ್ನೆರಡು, ಹದಿನೈದು ಮತ್ತು ಇಪ್ಪತ್ತೇಳು ತರಂಗಗಳಿವೆ.

ಮೊದಲನೇ ಸಂಪುಟದ ಮೊದಲ ಕಲ್ಲೋಲದ ಆರನೇ ತರಂಗದಲ್ಲಿ ನಾದ ಸ್ವರೂಪ, ನಾದಸೃಷ್ಟಿ, ನಾದದ ಸರ್ವಮಯತ್ವ ಶಿವ ಮೊದಲಾದ ತತ್ತ್ವಗಳ ಕುರಿತು ವಿಚಾರ ಸರಣಿ ಇರುವಂತೆ ಏಳನೇ ತರಂಗದಲ್ಲಿ ಕಲೆ ಮೊದಲಾದ ಹನ್ನೊಂದು ತತ್ತ್ವಗಳು ಐದು ಕಲಾತತ್ತ್ವಗಳು ಮೂರು ವಿಧ ರಾಗತತ್ತ್ವಗಳ ಕುರಿತು ವಿವರಣೆ ಇರುವಂತೆ ಐದನೇ ಕಲ್ಲೋಲದ ಹತ್ತನೆ ತರಂಗದಲ್ಲಿ ಶಿಲ್ಪ ಶಾಸ್ತ್ರ, ಶಿಲಾಶಾಸ್ತ್ರ ವಾಸ್ತು ಶಾಸ್ತ್ರ ಕುರಿತು ವಿವರಣೆ ಇದೆ. ಆರನೇ ಕಲ್ಲೋಲದ ಎರಡನೇ ತರಂಗದಲ್ಲಿ ಚಿತ್ರಕಾರ ಸ್ವರೂಪ, ನಾಟಕ ಶಾಲೆಯಲ್ಲಿ ಚಿತ್ರಲೇಖನ, ಭಿತ್ತಿ ಸಮೀಕರಣ, ವರ್ಣರಂಜನಾಕ್ರಮ, ಶುದ್ಧಬಣ್ಣಗಳು, ಮಿಶ್ರಬಣ್ಣಗಳು ಚಿತ್ರಗಳಲ್ಲಿ ವರ್ಣ ವಿನ್ಯಾಸದ ರೀತಿ, ರೇಖೆಗಳಿರುವ ಚಿತ್ರಗಳು ವರ್ಣಕಲೆಯನ್ನರಿತ ಚಿತ್ರಕಾರರಿಂದ ದೇವ, ಮನುಷ್ಯ, ತಿರ್ಯಕ್ ಪ್ರಾಣಿಗಳ ಯಥಾವತ್ತಾದ ಮತ್ತು ಆಶ್ಚರ್ಯಜನಕ ಚಿತ್ರಲೇಖನಗಳಿರುವಂತೆ ಇದೇ ಕಲ್ಲೋಲದ ಮೂರನೇ ತರಂಗದಲ್ಲಿ ನಾಟ್ಯ ಶಾಸ್ತ್ರ ಕುರಿತು ನಾಲ್ಕನೇ ತರಂಗದಲ್ಲಿ ಶರೀರ ಶಾಸ್ತ್ರ, ಏಳನೇ ತರಂಗದಲ್ಲಿ ತಾಳ ಲಯ ವರ್ಣನೆ ಇದ್ದರೆ ಎಂಟನೇ ತರಂಗದಲ್ಲಿ ಸ್ವರ, ತಾಲಲಕ್ಷಣ, ರಾಗ, ರಾಗಸ್ವರೂಪಗಳ ಬಗೆಗೆ ವಿವರಿಸಲಾಗಿದೆ. ಆದರೆ ಈ ಗ್ರಂಥದಲ್ಲಿ ಚಿತ್ರಗಳನ್ನು ರಚಿಸಲಾಗಿಲ್ಲ. ಈ ಗ್ರಂಥಕ್ಕೆ ಸೌಗಂಧಿಕಾ ಪರಿಣಯದಂತಹ ಬೇರೆ ಗ್ರಂಥಗಳ ಚಿತ್ರಗಳನ್ನು ಬಳಸಿಕೊಳ್ಳಲಾಗಿದೆ.

5. ವಿರಕ್ತ ತೋಂಟದಾರ್ಯನ ಶ್ರೀ ಸಿದ್ದೇಶ್ವರ ಮಹಾಪುರಾಣವು :(ಸು.ಕ್ರಿ.ಶ.1650) ಶ್ರೀಮನ್ಮಹಾರಾಜ ನಿರಂಜನ ಜಗದ್ಗುರು ತೋಂಟದಾರ್ಯ ಮಹಾಸಂಸ್ಥಾನ ಮಠ ಗದಗ ಸಂಸ್ಥೆಯು 1951 ರಲ್ಲಿ ಪ್ರಕಟಿಸಿರುವ ಈ ಗ್ರಂಥವನ್ನು ವಿರಕ್ತ ತೋಂಟದಾರ್ಯ ರಚಿಸಿದ್ದಾರೆ. 15 ನೇ ಶತಮಾನದ ಅಲ್ಲಮ ಪ್ರಭುದೇವರೆನಿಸಿದ ತೋಂಟದ ಸಿದ್ದಲಿಂಗೇಶ್ವರನೇ ಸಿದ್ದೇಶ್ವರ ಪುರಾಣದ ಕಥಾನಾಯಕನು

---

೫೪. ಪ್ರೊ. ಮಲ್ಲೆಪುರಂ ಜಿ. ವೆಂಕಟೇಶ (ಸಂ): ಕೆಳದಿ ಬಸವರಾಜ ಸಂಕಲಿಸಿದ ಶಿವತತ್ತ್ವರತ್ನಾಕರ, ಪ್ರಸ್ತಾವನೆಯಿಂದ.

೫೫. ಗುರುನಾಥ ಜೋಶಿ : ಕನ್ನಡ - ಕನ್ನಡ ಶಬ್ದಕೋಶ, ಪುಟ- ೧೨೧

ಕರ್ನಾಟಕದ ಕಾಗದದ ಹಸ್ತ ಪ್ರತಿಗಳಲ್ಲಿ ರೇಖಾ ಚಿತ್ರಗಳು

ಕಲಾವಿದರು : ಶ್ರೀ.ಎಂ.ಎ.ಚೆಟ್ಟಿ,ಗದಗ.

ಕರ್ನಾಟಕದ ಹಸ್ತಪ್ರತಿ ಚಿತ್ರಕಲೆ- ಒಂದು ಅಧ್ಯಯನ



ಕೃಪೆ:

ಶ್ರೀ ವಿರಕ್ತಿ ತೋಂಟದಾರ್ಯ ವೀರಚಿತ ಶ್ರೀ ಸಿದ್ದೇಶ್ವರ ಮಹಾ ಪುರಾಣ

ಶ್ರೀ ಜಗದ್ಗುರು ತೋಂಟದಾರ್ಯ ಮಹಾಸಂಸ್ಥಾನ ಮಠ,ಗದಗ

ವಿರಕ್ತ ತೋಂಟದಾರ್ಯನಲ್ಲದೇ ಮಹಾಕವಿ ಗುಬ್ಬಿಯ ಮಲ್ಲಣಾರ್ಯನ ಪುತ್ರನಾದ ಶಾಂತೇಶಕವಿಯ ತೋಂಟದ ಸಿದ್ದಲಿಂಗೇಶ್ವರನನ್ನು ಕುರಿತು ಸುಮಾರು 1560 ರಲ್ಲಿ ಭಾಮಿನಿ ಷಟ್ಪದಿಯಲ್ಲಿ ''ತೋಂಟದ ಸಿದ್ದೇಶ್ವರ ಪುರಾಣ'' ವೆಂಬ ಹೆಸರಿನ ಗ್ರಂಥವನ್ನು ಬರೆದಿರುವನು. 1650 ರಲ್ಲಿ ಆಗಿಹೋದ ಸಿದ್ದನಂಜೇಶನು ತೋಂಟದ ಸಿದ್ದಲಿಂಗನ ವಿಷಯವಾಗಿ ''ಭಾವರತ್ನಾಭರಣ''ಎಂಬ ಗ್ರಂಥವನ್ನು ಬರೆದಿರುವನು. ಈ ಗ್ರಂಥದಲ್ಲಿ ಶರಣ ಸಾಹಿತ್ಯದ ಚಿತ್ರಕಲಾವಿದರೆಂದೇ ಖ್ಯಾತರಾಗಿರುವ ಶ್ರೀ ಮುರಿಗೆಪ್ಪ ಅಡಿವೆಪ್ಪ ಚಟ್ಟಿಯವರು ರಚಿಸಿರುವ ಮೋಹಕ ರೇಖಾಚಿತ್ರಗಳಿವೆ.

6. ದಾಸಯುಗದ ಹಸ್ತಪ್ರತಿ ಚಿತ್ರಕಲೆ. (ಕ್ರಿ.ಶ. 14ನೇ ಶತಮಾನ)

ಶಿವಶರಣರಂತೆ ಹರಿದಾಸರೂ ಕೂಡ ಸಾಮಾಜಿಕ ಬದುಕಿನ ಕುಂದುಕೊರತೆಗಳನ್ನು ನಿವಾರಿಸಿ ಸಮಾಜದ ಆರೋಗ್ಯವನ್ನು ಕಾಪಾಡಿಕೊಂಡು ಬಂದ ಮಧ್ಯಕಾಲೀನ ಭಕ್ತಪಂಥದ ಹರಿಕಾರರಾಗಿದ್ದಾರೆ. ಯಾವುದೇ ಧಾರ್ಮಿಕ ಆಂದೋಲನ, ಸಾಮಾಜಿಕ ಚಳುವಳಿಯಾಗಿ ಹುಟ್ಟಲು ಆ ಪರಿಸರದ ಸಂದರ್ಭ ಒಂದು ಅಗತ್ಯ ಪರಿಪ್ರೇಕ್ಷೆಯನ್ನು ಕಟ್ಟಿಕೊಡುತ್ತದೆ. ಇದಕ್ಕೆ ಭಕ್ತ ಪಂಥ್ಯದ ಹಿನ್ನಲೆಯೇ ಒಂದು ಸ್ಪಷ್ಟ ನಿದರ್ಶನವಾಗಿ ನಿಲ್ಲತ್ತದೆ. ಮಧ್ಯಕಾಲೀನ ಭಾರತದಲ್ಲಿ ರಾಜಕೀಯ ವಿಪ್ಲವ, ಧಾರ್ಮಿಕ ಮುಖಾಮುಖಿ, ಸಾಮಾಜಿಕ ಅರಾಜಕತೆಗಳ ಇಕ್ಕಟ್ಟಿನಲ್ಲಿ ಭಕ್ತಿಪಂಥ ಒಂದು ಚಳುವಳಿಯ ಸ್ವರೂಪದಲ್ಲಿ ಭಾರತದಾತ್ಯಂತ ವ್ಯಾಪಿಸಿಕೊಂಡಿತು. ಬಂಗಾಲದಿಂದ ಹುಟ್ಟಿದ ಈ ಪಂಥ ಚೈತನ್ಯದಿಂದ ಪ್ರಾರಂಭವಾಗಿ ಕಬೀರದಾಸ, ಜ್ಞಾನೇಶ್ವರ, ತುಕಾರಾಮ, ನರಸಿ ಮೆಹತಾ, ಮೀರಾಬಾಯಿ, ಸೂರದಾಸ, ಗುನಾನಕ, ತುಳಸೀದಾಸ, ಅನ್ನಮಹಾಚಾರ್ಯ, ತ್ಯಾಗರಾಜ, ಜಗನ್ನಾಥ ದಾಸ ಅನಂತ ದಾಸ ಶ್ರೇಷ್ಠರನ್ನು ಹುಟ್ಟುಹಾಕಿದ ಈ ಕಾಲಘಟ್ಟ ಕರ್ನಾಟಕದಲ್ಲಿಯೂ ಅನೇಕ ಅರಿಭಕ್ತಿ ಪಾರಮ್ಯದ ದಾಸರನ್ನು ಸೃಷ್ಠಿಸಿತು.

ಇತ್ತೀಚಿಗೆ ದಾಸ ಸಾಹಿತ್ಯದಮೇಲೆ ಕ್ಷೇತ್ರ ಕಾರ್ಯ ನಡೆದಿದ್ದು, ಸಾವಿರ ಕೀರ್ತನೆಗಳು ಸಂಪುಟದಲ್ಲಿ 33 ದಾಸರೆಂದು ಗುರುತಿಸಲಾಗಿದೆ. 1250 ನರಹರಿ ತೀರ್ಥರಿಂದ ಪ್ರಾರಂಭವಾಗುವ ಈ ಪಂಥವು 1994ರ ಗುರು ಗೋವಿಂದ ವಿಠ್ಠಲದಾಸರ ಪಂಥಿಯವರೆಗೆ ಅಧ್ಯಯನಕ್ಕೆ ಒಳಪಟ್ಟಿದೆ. ವಚನಕಾರರಂತೆ ಈ ದಾಸ ಸಾಹಿತ್ಯದಲ್ಲಿ ಕೂಡ ಚಿತ್ರಕಲೆಯನ್ನು ನೇರವಾಗಿ ಮತ್ತು ಪರೋಕ್ಷವಾಗಿ ಸಾಕಷ್ಟು ಜನ ಹರಿದಾಸರು ಬಳಸಿಕೊಂಡಿದ್ದಾರೆ. ಗೋಪಾಲದಾಸರು ಜಗನ್ನಾಥ ದಾಸರಂತಹ ಅನೇಕರು ತಮ್ಮ ಕೃತಿಗಳಲ್ಲಿ ರಂಗೋಲಿಗಳ ಬಗ್ಗೆ ಶ್ರೀಹರಿಯ ಪಾರಮ್ಯವನ್ನು ಚಿತ್ರಿಸಿದ್ದಾರೆ. ಇದರೊಂದಿಗೆ ತಮ್ಮ ಅನೇಕ ಕೃತಿಗಳಲ್ಲಿಯೂ ಕೂಡ ಚಿತ್ರಕಲೆಯ ಪ್ರಜ್ಞೆ ಯನ್ನು ಬಿತ್ತರಿಸಿದ್ದಾರೆ. [೫೬]

ವ್ಯಾಸರಾಯರು ಯನ್ನಬಿಂಬ ಮೂರುತಿಯ ಪೂಜೆಪೆ ನಾನು ಕ್ರ.ಸಂ.55 ಎಂಬ ಕೃತಿಯಲ್ಲಿ ಅಮೂರ್ತವಾದ ಹರಿಯನ್ನು ಸಾಕಾರ ಗೊಳಿಸಿದ್ದಾರೆ. ಆತನ ವಿವಿಧ ಮುಖಗಳನ್ನು ಆಧುನಿಕ

---

೫೬. ಪ್ರೊ. ಎ.ವಿ.ನಾವಡ, ಡಾ. ಗಾಯತ್ರಿ ನಾವಡ (ಸಂ): ಸಾವಿರ ಕೀರ್ತನೆಗಳು, ಅಂತರಂಗದ ಕದವ ತೆರೆದಾಗ, ಪ್ರಸ್ತಾವನೆಯಿಂದ.

ಭಾಗವತ ವರ್ಣ ಚಿತ್ರಗಳು

ಕಲಾವಿದರು : ಸಂತ ಶುಭರಾಯ







ಕೃಪೆ:

ಸಂ॥ಪಿ. ಆರ್. ತಿಪ್ಪೆಸ್ವಾಮಿ ಮತ್ತು ಅ.ಲ.ನರಸಿಂಹನ್.

ಕರ್ನಾಟಕ ಲಲಿತ ಕಲಾ ಅಕಾಡಮಿ, ಬೆಂಗಳೂರು.

ಕಲಾವಿದ ವರ್ಣ ಮಾಧ್ಯಮಗಳಿಂದ ತೋರಿಸುವಂತೆ ಹಲವಾರು ಸಾದೃಶ್ಯಗಳನ್ನು ಹೇಳಿಕೊಂಡಿದ್ದಾರೆ. ಅದೇರೀತಿ ವಾದಿರಾಜರು **ಆರೋಗಣೆ ಮಾಡೋ ಆನಂದ ಮೂರುತಿ** (ಕ್ರ.ಸಂ.100) ಮತ್ತು **ಕುದುರೆಬಂದಿದೆ ಚಲುವ ಕುದುರೆ ಬಂದಿದೆ** (ಕ್ರ.ಸಂ.121) ಇದರಲ್ಲಿಯೂ ಅನೇಕ ಬೆಡಗಿನ ರೂಪಕಗಳನ್ನು ಚಿತ್ರಿಸಬಲ್ಲ ಶ್ಲೇಷಾರ್ಥಗಳನ್ನು ತೋರಿಸಿದ್ದಾರೆ. ಹರಿದಾಸ ಪಂಥಿಯಲ್ಲಿ ಅದ್ವಿತೀಯರಾಗಿ ಕಾಣುವ ಪುರುಂದರದಾಸರ ಕೃತಿಗಳಲ್ಲಿಯೂ ಅನೇಕ ಕಲಾತ್ಮಕ ಭಾವಗಳನ್ನು ಕಾಣಬಹುದು. **ಈ ಪರಿಯ ಸೊಬಗಾವದೇವರಲಿ ಕಾಣೆ** (ಕ್ರ.ಸಂ.194), **ಏತರ ಚೆಲುವ ರಂಗಯ್ಯ** (ಕ್ರ.ಸಂ. 213) **ಒಂಭತ್ತು ಬಾಗಿಲೊಳು ಒಂದೇ ದೀವಿಗೆ ಹಚ್ಚಿ**(ಕ್ರ.ಸಂ.224) **ಕೃಷ್ಣ ಮೂರುತಿ ಕಣ್ಣ ಮುಂದೆ ನಿಂತಿದ್ದಂತಿದೆ.**(ಕ್ರ.ಸಂ.244) ಮತ್ತು **ಪಿಳ್ಳಂಗೋವಿಯ ಚೆಲ್ವ ಕೃಷ್ಣ** (ಕ್ರ.ಸಂ.323) ಕೃತಿಯಂತೂ ಉತ್ತರ ಭಾರತದ ಕಾಂಗ್ರಾ ಶೈಲಿಯ ಬಾಲಕೃಷ್ಣನ ಲೀಲೆಗಳನ್ನು ಚಿತ್ರಿಸಬಹುದಾದ ಕಲಾಕೃತಿಗೆ ಆಕರದಂತಿದೆ.

ಇದರಂತೆ ಕನಕದಾಸರು ಮುಂಡಿಗೆಗಳಲ್ಲಿ ಕೂಡ ಬೆಡಗು ಬಿನ್ನಾಣಗಳಿಂದ ಸಾಹಿತ್ಯಕ ಚತುರತೆಗಳಿಂದ ತುಂಬಿ ಅನೇಕ ಕೃತಿಗಳಲ್ಲಿ ಚಿತ್ರಗಳನ್ನು ಕುರಿತು ಪರೋಕ್ಷವಾಗಿ ಸೂಚಿಸಿದ್ದಾರೆ. **ನಮ್ಮ ಶಾರದೆ ಉಮಾ ಮಹೇಶ್ವರಿ** (ಕ್ರ.ಸಂ.507), **ನಿನ್ನ ನಾನೇನೆಂದನೊ ರಂಗಯ್ಯ** (ಕ್ರ.ಸಂ.514) ಇದರಂತೆ ಗೊಪಾಲದಾಸರ, ವಿಜಯದಾಸರ, ಜಗನ್ನಾಥ ದಾಸರ ಅನೇಕ ಕೃತಿಗಳಲ್ಲಿ ಚಿತ್ರಗಳನ್ನು ನೇರವಾಗಿ ಕೆಲವು ಸಲ ಪರೋಕ್ಷವಾಗಿ ಇನ್ನೂ ಕೆಲವುಸಲ ಸೂಕ್ತವಾಗಿ, ರೂಪಕಗಳಾಗಿ, ಉಪಮೆಗಳಾಗಿ, ಭಾವುಕತೆಯ ಸಂಕೇತಗಳಾಗಿ, ಸಮೃದ್ಧವಾಗಿ ಬಳಸಿಕೊಂಡಿದ್ದಾರೆ.

ಶಿವಶರಣ ಹಾಗೂ ಹರಿದಾಸ ಈ ಎರಡು ಜನಮುಖಿ ಆಂದೋನಗಳು ಕರ್ನಾಟಕದ ಸಂಸ್ಕೃತಿಕ ಜಗತ್ತಿನ ಉತ್ಕೃಷ್ಟ ಮಾದರಿಗಳು ಶಿವಶರಣರದು ವೈದಿಕ ಧರ್ಮದ ವಿರುದ್ಧದ ಪ್ರತಿಭಟನೆಯಾದರೆ ವೈದಿಕ -ಧರ್ಮದ ಪುನುರುತ್ಥಾನದ ಆಶಯದಲ್ಲಿ ಹರಿದಾಸ ಆಂದೋಲನ ಹುಟ್ಟಿತು. ವಚನ-ಸ್ವರಗಳ ಮೂಲಕ ಶಿವಶರಣರು ಹರೋತ್ತಮತೆಯನ್ನು ಪ್ರತಿಪಾಸಿದಿದರೆ ಹರಿದಾಸರು ಕೀರ್ತನೆ, ಸುಳಾದಿ, ಉಗಾಭೋಗಗಳಲ್ಲಿ ಹರಿಸರ್ವೋತ್ತಯನ್ನು ಮಂಡಿಸಿದರು. ಶಿವಶರಣರು ಮತ್ತು ಹರಿದಾಸರು ಬರಿಯ ಹರ-ಹರಿ ಭಕ್ತಿಯ ಪ್ರತಿಪಾದನೆಯನ್ನಷ್ಟೇ ಮಾಡಿಲ್ಲ, ತಮ್ಮ ಸುತ್ತಿನ ಬದುಕನ್ನ ಹಸನಾಗಿಸುವ ಕಾಳಜಿ ತೋರಿಸಿದರು. ಜೀವನ ಮೌಲ್ಯಗಳನ್ನು ಕಟ್ಟಿಕೊಟ್ಟರು. ಹೀಗೆ ಧರ್ಮಪ್ರಚಾರ ಮತ್ತು ಸಮಾಜ ಸುಧಾರಣೆ ಕಾಯ್ದೆಕ್ಕಾಗಿ ಇಡಿಯ ಬದುಕನ್ನು ಅರ್ಪಿಸಿಕೊಂಡರು.

ಶಿವಶರಣರ ಸಾಹಿತ್ಯ ಮತ್ತು ಹರಿದಾಸರ ಸಾಹಿತ್ಯ ಮೇಲ್ನುಖದಲ್ಲಿ ಧಾರ್ಮಿಕ ಹಿನ್ನಲೆಯಿಂದ ಹುಟ್ಟಕೊಂಡರೂ ಅವೆರಡೂ ಮಾನವನ ಬದುಕಿನ ಆಶೆಯದ ಎರಡು ಕಣ್ಣುಗಳಿಂತಿವೆ. ಇಲ್ಲಿಯವರೆಗೂ ಈ ಎರಡೂ ಪಂಥಗಳಲ್ಲಿ ಧರ್ಮ, ಅರ್ಥ, ದುರಾನ್ವಯ ಗೊಳಿಸುವದರಲ್ಲಿಯೇ ನಮ್ಮ ಸಾಹಿತ್ಯದ ಬದುಕು ಸಂಶೋಧನೆಯ ಪರಿಶ್ರಮ ನಡೆದಿವೆ. ಆದರೆ ಇದರೊಳಗಿರುವ ಕಲಾತ್ಮಕ ಸೊಗಡು, ಶೃಂಗಾರದ ಸಂಭ್ರಮ ಮತ್ತು ಕಲಾಪರಿಭಾಷೆಯನ್ನು ನಾವು ಅಭ್ಯಾಸಕ್ಕೆ

ಒಳಪಡಿಸಬೇಕಾಗಿದೆ.

7. ಮಹಮ್ಮದಿಯ ಯುಗದ ಹಸ್ತಪ್ರತಿ ಚಿತ್ರಕಲೆ. (ಕ್ರಿ.ಶ. 15ನೇ ಶತಮಾನ)

ಭಾರತೀಯ ಕಲೆ, ಸಾಹಿತ್ಯ, ಸಂಗಿತಗಳ ಚರಿತ್ರೆಯಲ್ಲಿ ಮೊಹಮ್ಮದೀಯರ ಪ್ರಭಾವವು ಅತ್ಯಧಿಕವಾದದು. ಘನವಂತರಾದ ಇಲ್ತಮಿಷ್, ರಜಿಯಾ, ತಗಲತ್, ಬಾಬರ್, ಅಕ್ಬರ್, ಷಹಜಹಾನ, ಜಹಂಗೀರರಂತಹ ಮುಸ್ಲಿಂ ದೊರೆಗಳು ಧಾರ್ಮಿಕವಾಗಿ ಇಸ್ಲಾಂ ದೊರೆಗಳಾದರೂ ಕಲಾತ್ಮ ಮತ್ತು ಸಾಹಿತ್ಯಕವಾಗಿ ಅವರು ವಿಶ್ವ ವ್ಯಾಪಕದ ಅರಸರಾಗಿದ್ದಾರೆ. ಮುಸ್ಲಿಂ ದೊರೆಗಳ ಬದುಕಿನ ಮೂಲ ಮತ್ತು ಕಲೆಯ ಮೂಲಗಳು ಪಶ್ಚಿಮ ಏಷ್ಯಾದ ಮರಭೂಮಿಗಳಾಗಿದ್ದರು. ಅದು ಪ್ರಪುಲ್ಲವಾಗಿ ಮೊಘಲ್ ಶೈಲಿಯ ವಾಸ್ತು ಶಿಲ್ಪ, ಚಿತ್ರ, ಹಸ್ತಪ್ರತಿ ಚಿತ್ರ, ಹಲವು ವಿಧಗಳಲ್ಲಿ ಹರಡಿಕೊಂಡಿರುವುದು ಫಲವತ್ತಾದ ಭಾರತದ ಭೂಮಿಯಲ್ಲಿ. ಹೀಗಾಗಿ ಸಮಗ್ರ ಮೊಗಲತನದ ಬೇರು ಪರ್ಷಿಯಾ ಆದರೂ ಅದು ದಾಂಗುಡಿ ಇಟ್ಟು ಹೂವು ಮೊಗ್ಗಾಗಿ ಅರಳಿ ಪಲ್ಲವಿಸಿದೆ. ಭಾರತದ ವಿವಿಧ ಭಾಗಗಳಲ್ಲಿ.

ಕ್ರಿ.ಶ.1526ರಿಂದ ಭಾರತದಲ್ಲಿ ಬಾಬರ್ ದೊರೆಯ ಆಗಮನದಿಂದ, ಹುಟ್ಟಿಕೊಂಡ ಮೊಗಲ್ ಸಾಮ್ರಾಜ್ಯದಲ್ಲಿ ಮೊಗಲ್ ಶೈಲಿಯ ಹಸ್ತಪ್ರತಿ ಚಿತ್ರಕಲೆಯು ಭಾರತದ ಹಸ್ತಪ್ರತಿ ಚಿತ್ರಕಲೆ ಮತ್ತು ಚಿತ್ರಕಲೆಯ ಇತಿಹಾಸದಲ್ಲಿಯೇ ಹೊಸತನವನ್ನು ಮೂಡಿಸಿದ ಹೊಸ ಶೈಲಿಯಾಗಿದೆ. ಬಾಬರ್ ನಂತರ ಅಕ್ಬರನ ಕಾಲದಲ್ಲಿ ಮೊಗಲ್ ಶೈಲಿಯು ಇನ್ನಷ್ಟು ವಿಸ್ತಾರವಾಗಿ ವ್ಯಾಪಿಸಿಕೊಂಡಂತೆ ಜಹಾಂಗೀರ ಮತ್ತು ಶಹಜಾನನ ಕಾಲದಲ್ಲಿ ಇನ್ನಷ್ಟು ವಿಸ್ತೃತ ರೂಪವನ್ನು ಪಡೆಯಿತು. ಅಕ್ಬರನ ಕಾಲದ ಫಾರೂಕ ಬೇಗ್, ದಶವಂತ ಬಸ್ವನ್ ನಂತಹ ಹದಿನಾಲ್ಕುಜನ ಕಲಾವಿದರು ಬಾಬರೀ ನಾಮಾ, ತಾರೀಖ್-ಐ-ಖಾನ್‌ದಾನ್ -ಇ-ತೈಮೂರಿಯಾ, ಅಕ್ಬರ್‌ನಾಮದಂತಹ ಪರ್ಷಿಯಾಗ್ರಂಥಗಳು ಹುಟ್ಟಿಕೊಕಂಡಂತೆ ಮುಸ್ಲಿಂ ದೊರೆಗಳ ಪ್ರೇರಣೆಯಿಂದ ರಾಮಾಯಣ, ಮಹಾಭಾರತ, ಹರಿವಂಶದಂತಹ ಅನೇಕ ಕೃತಿಗಳು ಪರ್ಷಿಯಾ ಭಾಷೆಗೆ ಅನುವಾದಗೊಂಡು ಕಲಾತ್ಮಕವಾಗಿ ರೂಪಗೊಂಡಂತ ಕೃತಿಗಳಾಗಿವೆ.

ಮೊಘಲ್ ಸಾಮ್ರಾಜ್ಯದ ಪಥನದ ನಂತರ ಪ್ರೋತ್ಸಾಹದಿಂದ ದೂರ ಉಳಿದ ಮೊಘಲ್ ಶೈಲಿಯು ಭಾರತದ ಉಳಿದ ಭಾಗಗಳಲ್ಲಿ ಮತ್ತೆ ಹುಟ್ಟಿಕೊಂಡು ಅರಳಿ ನಿಂತಿದೆ. ಅಂತಹುಗಳಲ್ಲಿ ರಜಪೂತ ಕಲೆ, ಕಾಂಗ್ರಾ, ಬೂಂದಿ, ಪಹಾಡಿ ಯಂತಹ ಅನೇಕ ಕಲಾಪ್ರಕಾರಗಳು ಹಸ್ತಪ್ರತಿ ಚಿತ್ರಕಲೆಯಲ್ಲಿ ಮೂಡಿದವು. ಇದರ ಪ್ರಭಾವವು ದಕ್ಷಿಣ ಭಾರತದ ಕರ್ನಾಟದಲ್ಲಿಯೂ ಆಗಿರುವದರಿಂದ ಆದಿಲ್‌ಶಾಹಿ ಅರಸರಿಂದ ದಖನಿ ಚಿತ್ರಕಲೆಯಾಗಿ ಹೊರಹೊಮ್ಮಿದೆ.

ನವರಸ ಸೂರ ಜುಗ ಜುಗ ಜುನೀ।
ಆನದ ಸರ್ವಗುಣೀ॥
ಯೂ ಸತ್ ಸರಸ್ವತೀ ಮಾತಾ, ಇಬ್ರಾಹಿಂ।
ಪ್ರಸಾದ ಭಈ ದೂನೀ॥ - ಇಬ್ರಾಹಿಂ.

ತಾಯೀ ಸರಸ್ವತಿಯೇ ಇಬ್ರಾಹಿಮ್‌ನ ಮೇಲಿನ ನಿನ್ನ ಅನುಗ್ರಹದಿಂದ ಈ

ಕರ್ನಾಟಕದ ಹಸ್ತಪ್ರತಿ ಚಿತ್ರಕಲೆ- ಒಂದು ಅಧ್ಯಯನ

ಮೋಹಮ್ಮದಿಯರ ಹಸ್ತಪ್ರತಿಗಳಲ್ಲಿಯ ವರ್ಣಚಿತ್ರಗಳು.





Courtesy:
B.S.Keshavan's **The Book In India**

ನವರಸ ಕಾವ್ಯವು ಜಗತ್ತಿನಲ್ಲಿ ಬಹುಕಾಲ ಬಾಳಲಿ ಎಂದು ಹಿಂದೂ ದೇವತೆ ಸರಸ್ವತಿಯನ್ನು ಸ್ತುತಿಸಿರುವ ಮುಸ್ಲಿಂ ದೊರೆ ಎರಡನೇ ಇಬ್ರಾಹಿಂ ಇದೊಂದು ವಿಶೇಷ ಪ್ರಾರ್ಥನಾ ಗೀತೆ. ತಾನೊಬ್ಬ ಅಲ್ಲಾಹನ ಅನುಯಾಯಿಯಾಗಿ ತನ್ನ ಕಾವ್ಯಗಳಲ್ಲಿ ಹಿಂದೂ ದೇವತೆಗಳಾದ ಗಣಪತಿ, ಶಿವ, ಪಾರ್ವತಿಯಂತಹ ಅನೇಕ ದೇವತೆಗಳನ್ನು ಸ್ತುತಿಸಿರುವದು ಆತನ ಮಾನಸಿಕ ಮತ್ತು ಧಾರ್ಮಿಕ ಸಹನತಿಗೆ ಮಾದರಿಯತಿವೆ. ಉತ್ತರದ ಮೊಘಲ್ ದೊರೆ ಅಕ್ಬರನು ಇಸ್ಲಾಂ ಧರ್ಮದಲ್ಲಿ ದೀನ್-ಎ-ಇಲಾಹಿ ಹೆಸರಿನಲ್ಲಿ ಹೊಸದನ್ನು ವಿಚಾರಿಸಿದಂತೆ ಬಹುಶಃ ಇಬ್ರಾಹಿಂ ದೊರೆಯು ಇಸ್ಲಾಂದಲ್ಲಿ ಹೊಸತನದ ವಿಚಾರವನ್ನು ಮಂಡಿಸಿದ್ದಾನೆ. ಇತನೊಬ್ಬ ಕವಿ, ಕಲಾವಿದ, ಸಂಗೀತಗಾರ, ಸಾಹಿತಿ ಆಗಿರುವದರಿಂದಲೇ ಧಾರ್ಮಿಕತೆಯ ಕಟ್ಟುಗಳು ಈತನನ್ನು ಬಹುಶಃ ಬಂಧಿಸಿರಲಕ್ಕಿಲ್ಲ.

ಕರ್ನಾಟಕದಲ್ಲಿ ಆದಿಲ್‌ಶಾಹಿ ಹೆಸರಿನ ಈ ಆಡಳಿತದಲ್ಲಿ ಬಹುಮುಖ್ಯವಾದ ಹಸ್ತಪ್ರತಿ ಚಿತ್ರಕಲೆಗಳನ್ನು ಇಲ್ಲಿಯೇ ವರೆಗೂ ವಿದ್ವಾಂಸರು ಈ ಕೆಳಗಿನಂತೆ ಯಾದಿಯನ್ನು ಮಾಡಿದ್ದಾರೆ. ಅವುಗಳು ಈ ರೀತಿಯಾಗಿವೆ.[೫೭]

1. ನಜುಮ್ -ಉಲ್-ಉಲೂಮ್
2. ರತನ್ ಕಲಿಯಾ
3. ನಿಮತ್ ನಾಮಾ
4. ಕಿತಾಬ್ -ಇ. ನವರಸ್
5. ಖವ್ವರ್ ನಾಮಾ
6. ದಿವಾನ್ -ಇ-ಉರ್ಫ
7. ಜವಾಹರ್-ಅಲ್-ಮುಶಿಕತ್-ಇ-ಮಹಮ್ಮದಿ
8. ಸಂಗೀತ ರತ್ನಾಕರ
9. ಮಧುಮಾಲತಿ
10. ಅಜಾ-ಇಬೂಲ್-ಮುಖಾಲಕತ್
11. ಮತನವಿ
12. ಜ್ಯೋತಿಷ್ಯ

1. ನಜುಮ್ -ಉಲ್-ಉಲೂಮ್ (1570) : ಮೊದಲನೆ ಅಲಿ ಆದಿಲ್‌ಶಾಹನ ಕಾಲದಲ್ಲಿ ಕ್ರಿ.ಶ. 1570ರಲ್ಲಿ ಈ ಕೃತಿಯನ್ನು ರಚಿಸಲಾಗಿದೆ. ಈ ಕೃತಿಯಲ್ಲಿ ನಕ್ಷತ್ರ ಶಾಸ್ತ್ರದ ಜ್ಯೋತಿಷ್ಯ ಮಾಂತ್ರಿಕತೆಯ ವಿವರವನ್ನು ನೀಡಲಾಗಿದೆ. ಈ ಕೃತಿಯಲ್ಲಿ 876 ಕಿರುರೂಪದ ಚಿತ್ರಗಳಿವೆ. ಆ ಗ್ರಂಥದ ಕಾಲಮಾನ ಮತ್ತು ಚಿತ್ರಗಳ ಶೈಲಿಯನ್ನು ಗಮನಿಸಿದ ವಿದ್ವಾಂಸರು ಇದರ ಕಾಲಮಾನವನ್ನು 1570 ಎಂದು ಗುರುತಿಸಿದ್ದಾರೆ. ಸಾಮಾನ್ಯವಾಗಿ ಎಲ್ಲ ದಖನಿ ಚಿತ್ರಗಳಲ್ಲಿ ಕಾಣುವಂತೆ ಪಾರ್ಶ್ವಮುಖ, ಭಾರತೀಯ ನಾರಿಯರು, ಭಾರತೀಯ ಉಡುಪುಗಳಲ್ಲಿ ಅಲಂಕೃತವಾಗಿರುವದನ್ನು ಕಾಣುತ್ತೇವೆ. ಸಮಕಾಲೀನ ವಿಜಯನಗರ ಮತ್ತು ಉತ್ತರದ ರಜಪೂತ ಕಾಂಗ್ರಾ ಬೂಂದಿಯ ಪ್ರಭಾವಗಳನ್ನು ಈ ಚಿತ್ರಗಳಲ್ಲಿ ನಾವು ಗಮನಿಸಬಹುದು.[೫೭]

2. ರತನ್ ಕಲಿಯಾ (1592) : ಈ ಹಸ್ತಪ್ರತಿ ಚಿತ್ರಕಲೆಯು ಎರಡನೇ ಇಬ್ರಾಹಿಂ ಆದಿಲ್‌ಶಾಹನ

೫೭. ವಜೀರ ಭಾಷಾ ಎಂ. ಭಾಗಾಯತ : ಮುಸ್ಲಿಂ ಅರಸರ ಕಾಲದ ಚಿತ್ರಕಲೆ, ಪುಟ - ೬೦

ಕಾಲದ ಹಸ್ತಪ್ರತಿ ಯಾಗಿದೆ. ಈಗಿದು ಬ್ರಿಟೀಷ್ ವಸ್ತುಸಂಗ್ರಹಾಲಯದಲ್ಲಿದೆ. ಬಿಜಾಪೂರದ ಸ್ಥಳೀಯ ಕಲಾವಿದರು ರಚಿಸಿರಬಹುದಾದ 36 ಕಿರುರೂಪದ ಚಿತ್ರಗಳು ಈ ಸಂಗ್ರಹದಲ್ಲಿ ಇವೆ ಎಂದು ಜಗದೀಶ ಮಿಥಲ್ ಅವರು ಅಭಿಪ್ರಾಯಪಡುತ್ತಾರೆ. ಇದರಲ್ಲಿ ಅಂದಿನ ಸಾಮಾಜಿಕ ಬದುಕು, ಜನ ಜೀವನ, ಜನರ ರೀತಿ ನೀತಿ ಹಬ್ಬಗಳ ಆಚರಣೆ ಮತ್ತು ಸಾಮಾನ್ಯ ಕ್ರೀಡೆಗಳ ಬಗೆಗೂ ಇದರಲ್ಲಿ ವಿವರಣೆಯನ್ನು ನೀಡಲಾಗಿದೆ.

3. **ನಿಮತ್‌ನಾಮಾ** (1595): ಆದಿಲ್‌ಶಾಹಿ ಎರಡನೇ ಇಬ್ರಾಹಿಂ ದೊರೆಯ ಕಾಲದಲ್ಲಿಯೇ ರೂಪಗೊಂಡ ಈ ಹಸ್ತಪ್ರತಿಯು ಹೈದರಾಬಾದಿನ ಸಾಲಾರಜನ್ ಸಂಗ್ರಹಾಲಯದಲ್ಲಿತ್ತು. ಈಗದು ದೆಹಲಿಯ ರಾಷ್ಟ್ರೀಯ ಸಂಗ್ರಹಾಲಯವನ್ನು ಸೇರಿಕೊಂಡಿದೆ. ಇದರಲ್ಲಿ ಅರಸರು ಮತ್ತು ಅಂಥಪುರದ ಅನೇಕ ಜನರ ಚಿತ್ರಗಳು ಇದರಲ್ಲಿದ್ದು, ಎರಡನೇ ಇಬ್ರಾಹಿಂ ದೊರೆಯ 9ವರ್ಷದ ಚಿತ್ರವೂ ಇದರಲ್ಲಿದೆ. ಈ ದೊರೆಯ ಸಮಕಾಲೀನನಾದ ಫಾರಕ್ ಹುಸೇನನು ಅಂದಿನ ಅದ್ವಿತೀಯ ಚಿತ್ರಕಲಾವಿದನಾಗಿದ್ದ. ಈತನು ಬಹುಶಃ ಅಕ್ಬರನ ಆಸ್ಥಾನದಲ್ಲಿದ್ದ. ಫಾರೂಕ್ ಬೇಗನ ವಂಶಸ್ಥನಾಗಿರಬೇಕೆಂದು ಅಭಿಪ್ರಾಯಪಡುತ್ತಾನೆ.

4. **ಕಿತಾಬ್-ಇ-ನವರಸ್** (1558): ಇಮ್ಮಡಿ ಇಬ್ರಾಹಿಂ ದೊರೆಯ ಇದೊಂದು ಸಂಗೀತ ಮತ್ತು ಧಾರ್ಮಿಕ ಸೌಹಾರ್ದತೆಯನ್ನು ಒಳಗೊಂಡ ಗ್ರಂಥವಾಗಿದೆ. ಇದರಲ್ಲಿ ರಾಗಮಾಲಾ ಚಿತ್ರಗಳು, ಅರಸರ ಚಿತ್ರಗಳು, ಜಲಜೀವನದ ಚಿತ್ರಗಳು ಇವೆ. ಆದಿಲ್‌ಶಾಹಿ ಅರಸಮನೆತನದ ಕೊಡುಗೆಯಾದ ಈ ಪುಸ್ತಕದ ಕುರಿತು ಅನೇಕ ವಿದ್ವಾಂಸರು ಈಗಾಗಲೇ ಮಹಾರಾಷ್ಟ್ರ ವಿಶ್ವವಿದ್ಯಾಲಯದಿಂದ, ಲಖನೌ ವಿಶ್ವದಂತಹ ಅನೇಕ ವಿಶ್ವವಿದ್ಯಾಲಯಗಳಿಂದ ಈ ಗ್ರಂಥವು ಅಧ್ಯಯನಕ್ಕೊಳಪಟ್ಟಿದೆ. ಇದರಲ್ಲಿ ಹಿಂದೂ ದೇವತೆಗಳ ಸ್ತುತಿ ಕಲಬುರ್ಗಿ ಬಂದೇನಮಾಜರ ಸ್ತುತಿ, ಇಬ್ರಾಹಿಂನ ತಂಬೂರಿ ಸ್ತುತಿ, ಆತನ ಹೆಂಡತಿ ಚಾಂದ್‌ಸುಲ್ತಾನಳ ಸ್ತುತಿ, ತಾಯಿ ಬಡೇಸಾಹೇಬಳ ಸ್ತುತಿ, ವಿರಹ ಶೃಂಗಾರ ಗೀತೆಗಳು, ರಾಗಮಾಲಿಕೆಗಳು ಈ ಗ್ರಂಥಗಳ ಒಳಗೊಂಡ ವಿಶೇಷಗಳಾಗಿವೆ.

5. **ಖಿವ್ವರನಾಮಾ** (ಕ್ರಿ.ಶ.1649) : ಮಹಮ್ಮದ ಆದಿಲ್ ಶಾಹಿನ ಆಡಳಿತದಲ್ಲಿ ಕವಿ ರುಸ್ತುಂ ಇಂದ ತವಾದ ಈ ಗ್ರಂಥವು ಪರ್ಷಿಯಾದ ಮಾದರಿಯ ಮೊತಿಫವ ಮತ್ತು ಹದಿನೇಳನೆ ಶತಮಾನದ ದಖನಿ ಚಿತ್ರಗಳನ್ನು ಅನುಸರಿಸಿದ ಕೃತಿಯಾಗಿದೆ. ಈ ಕೃತಿಯಲ್ಲಿ ಮೊಘಲ್ ಶೈಲಿಯ ನೀಲಿ, ಕೆಂಪು, ಹಳದಿಯಂತಹ ಉಜ್ವಲ ವರ್ಣಗಳ ಬಳಕೆಯಾಗಿದ್ದು ಕಲಾವಿದರ ಕೈಚಳಕವು ಈ ಕೃತಿಯಲ್ಲಿದೆ. ಉತ್ತಮ ರೇಖಾಚಿತ್ರ ಮತ್ತು ಸಂಯೋಜನೆಗಳಿಂದ ಚಿತ್ರ ಮನೋಹರವಾಗಿದೆ.

6. **ದಿವಾನ್-ಇ-ಉರ್ಫ** (1636) : ಈ ಹಸ್ತಪ್ರತಿಯು ಆಕೃತಿಯಲ್ಲಿ ಚಿಕ್ಕದಾಗಿದ್ದು, ಈಗ ಅದು ಅಮೇರಿಕದ ಫ್ರಾಗ್ ಆರ್ಟ್ ವಸ್ತುಸಂಗ್ರಹಾಲಯದಲ್ಲಿದೆ. ಅದರಲ್ಲಿ 6 ಚಿತ್ರಗಳಿದ್ದು, ಅದರಲ್ಲಿ 3 ಕಿರು ಚಿತ್ರಗಳಿವೆ. ಇದರಲ್ಲಿ ಮಹಮ್ಮದ ಆದಿಲ್ ಶಾಹನ ಮತ್ತು ಆತನೊಂದಿಗಿದ್ದ ಸಂತರ, ತತ್ವಜ್ಞಾನಿಗಳ ಭಾವಚಿತ್ರಗಳು ಇದರಲ್ಲಿವೆ. ಕಲಾತ್ಮಕ ದೃಷ್ಟಿಯಿಂದ ಸಾಮಾನ್ಯಕೃತಿ ಇದಾಗಿದೆ.

7. **ಜವಹೀರ್-ಅಲ್-ಮುಶಿಕತ್-ಇ-ಮಹಮ್ಮದಿ** : ಇದು ಸಂಗೀತ ಶಾಸ್ತ್ರ ಆದರಿಸಿದ ಗ್ರಂಥವಾಗಿದ್ದು, ಇದನ್ನು ಮಹಮ್ಮದ ಆದಿಲ್‌ಶಾಹನಿಗೆ ಅರ್ಪಿಸಲಾಗಿದೆ. ಈ ಗ್ರಂಥದಲ್ಲಿ 214 ಪುಟಗಳಿದ್ದು, ಅದರಲ್ಲಿ 48 ಕಿರುರೂಪ ಚಿತ್ರಗಳಿವೆ. ಸಂಪೂರ್ಣವಾಗಿ ಸಂಗೀತಕ್ಕೆ ಮೀಸಲಾದ ಈ ಗ್ರಂಥದಲ್ಲಿ ಮೂರು ಭಾಗಗಳಿದ್ದು, ಒಂದನೇ ಭಾಗದಲ್ಲಿ ಸರಸ್ವತಿಯು ವೀಣೆ ನುಡಿಸುವ ಕಿರುರೂಪದ ಚಿತ್ರದಲ್ಲಿ ಪ್ರಾರಂಭವಾಗುತ್ತದೆ. ಇದರಲ್ಲಿ ಏಳು ಸ್ವರಗಳಿವೆ. ಎರಡನೇ ಭಾಗದಲ್ಲಿ ರಾಗ ರಾಗಿಣಿಯರ 25 ಚಿತ್ರಗಳಿವೆ. ಈ ಚಿತ್ರದಲ್ಲಿ ರಾಗಕ್ಕನುಗುಣವಾಗಿ ಪುರುಷರನ್ನು, ಸ್ತ್ರೀಯರನ್ನು ಪ್ರತಿಮಾಲಕ್ಷಣ ಗಳಿಗನುಸಾರವಾಗಿ ಚಿತ್ರಿಸಲಾಗಿದೆ. ಮೂರನೇ ಭಾಗದಲ್ಲಿ 15 ಚಿತ್ರಗಳಿದ್ದು, ಇದರಲ್ಲಿ ಭರತನಾಟ್ಯ ಶಾಸ್ತ್ರ24 ಕರ್ಣಗಳು ಇದ್ದು, ಹಾವಭಾವ, ಭಂಗಿ ಚಿತ್ರಗಳು ಇವೆ.

8. **ಸಂಗೀತ ರತ್ನಾಕರ** : ಹೆಸರೇ ಸೂಚಿಸುವಂತೆ ಇದು ಸಂಗೀತ ಆಧಾರಿತ ಕೃತಿಯಾಗಿದ್ದು, ಇದು ಮರಾಠಿ ಭಾಷೆಯಲ್ಲಿದೆ. ಇದನ್ನು ಬಿಜಾಪೂರ ಅಲಿ ಆದಿಲ್ ಶಾಹನ ಕಾಲದ್ದೆಂದು ವಿದ್ವಾಂಸರು ಅಭಿಪ್ರಾಯ ಪಡುತ್ತಾರೆ. ಆಸ್ಥಾನದಲ್ಲಿಯ ನೃತ್ಯಗಾರತಿಯರು, ಆಸ್ಥಾನದ ಸಭಾ ಸದಸ್ಯರು, ಆಸ್ಥಾನದ ಸರದಾರರು, ವಿವಿಧ ವೇಷ ಪೋಷಾಕುಗಳಲ್ಲಿ ಇರುವ ಚಿತ್ರ ಇದು ಆಗಿವೆ. ಇದರಲ್ಲಿ ಸಾಮಾನ್ಯವಾಗಿ ನಜುಮ್-ಉಲ್-ಉಲೂಮದ ಕೃತಿಯನ್ನೇ ಹೋಲುವದರಿಂದ ಬಹುಶಃ ಈ ಕೃತಿಯು ಅದರ ಸಮಕಾಲೀನ ಕೃತಿಯಾಗಿರಬಹುದು ಎಂದು ವಿದ್ವಾಂಸರು ಊಹಿಸಿದ್ದಾರೆ.

9. **ಮತನವಿ** : ಇದು ಮುಶ್ರತಿ ಕವಿಬರೆದ ಕೃತಿ ರಚನೆಯಾಗಿದ್ದು, ಇದು ವರ್ಣಗಾರಿಕೆ, ಚಿತ್ರಗಾರಿಕೆಯನ್ನು ಉತ್ತಮ ಮಟ್ಟದ ಗ್ರಂಥ ಇದಾಗಿದೆ. ಚಿನ್ನ, ಕೆಂಪು, ನೀಲಿವರ್ಣಗಳಿರುವ ಕೆಲವು ಖಿರಾಣದ ಕೆಲವು ಹಸ್ತಪ್ರತಿಯ ಕೈಬರಹಗಳು ಇದರಲ್ಲಿವೆ. ಐತಿಹಾಸಿಕ ಮಾತುವುಳ್ಳ ಗದ್ಯ,ಪದ್ಯಗಳು ಶೃಂಗಾರ ಕಾವ್ಯಗಳು, ರಾಜಮುದ್ರೆ ಇರುವ ಸನದುಗಳು, ಫರ್ಮಾನಗಳು ಈ ಗ್ರಂಥದಲ್ಲಿ ಇವೆ.

10. **ಜ್ಯೋತಿಷ್ಯ ಹಸ್ತಪ್ರತಿ** : ಇದು 2ನೇ ಇಬ್ರಾಹಿಂ ದೊರೆಯ ಕಾಲದ್ದಾಗಿದ್ದು, ಇದರಲ್ಲಿ ಆದಿಲ್ ಶಾಹಿ ಅರಸರ ಭವಿಷ್ಯ ಅರಸುಮನೆತನಕ್ಕೆ ಸಂಬಂಧಿಸಿದ ನಾಡಗೌಡ ಮನೆತನದ ಜ್ಯೋತಿಷ್ಯಗಳು ಸಂಸ್ಕೃತ ಹಾಗೂ ಮರಾಠಿ ಭಾಷೆಯಲ್ಲಿ ಇವೆ. ಇದರಲ್ಲಿ 15 ಚಿತ್ರಗಳಿದ್ದು ಅವೆಲ್ಲವೂ ಜನಪದ ಶೈಲಿಯಲ್ಲಿವೆ. ಅಲ್ಲದೇ ವಿವಿಧ ಮಾದರಿಯ ಜ್ಯೋತಿಷ್ಯ ಶಾಸ್ತ್ರದ ನಕ್ಷೆಗಳು, ಸವಾರರು ಇಲ್ಲದ ಆನೆ, ಒಂಟೆ, ಕುದುರೆ, ಪಲ್ಲಕ್ಕಿಗಳು ಈ ಚಿತ್ರದಲ್ಲಿದ್ದು, ಈ ಕೃತಿಯು ಎಲ್ಲೂ ಪ್ರಕಟವಾಗಿಲ್ಲ.

11. **ಮಧು ಮಾಲತಿ** : ಈ ಗ್ರಂಥವು ಉರ್ದು ಭಾಷೆಯಲ್ಲಿದ್ದು, ಇದರಲ್ಲಿ 48 ಉತ್ತಮ ತರಗತಿಯ ದಕ್ಷಿಣ ಶೈಲಿಯ ಚಿತ್ರಗಳಿವೆ ಎಂದು ನಾರಾಯಣರಾವ ಕುಲಕರ್ಣಿಯವರು ಅಭಿಪ್ರಾಯ ಪಡುತ್ತಾರೆ. ಇದರಲ್ಲಿ ರಾಜ, ರಾಣಿಯವರ ಚಿತ್ರಗಳು ಇರುವಂತೆ ರಾಣಿ ಮತ್ತು ಸೇವಕಿಯರ ಚಿತ್ರಗಳೂ ಕೂಡ ಅಮೋಘವಾಗಿವೆ. ಅರಸನ ಕಣ್ಣುಗಳು, ಹಸ್ತಗಳು, ಉಡುಪುಗಳು, ಸ್ತ್ರೀಯರ ಆಭರಣಗಳು, ಅರಮನೆಯ ವಾಸ್ತುವಿಧಾನವು ಇದರಲ್ಲಿದ್ದು ಇವುಗಳಿಗೆ ಓನ್ನಲೆಯಾಗಿ ಹೂದೋಟ, ಹೂಗುಚ್ಛ ಇಸ್ಲಾಂ ಮಾದರಿಯ ನಕ್ಷಾಚಿತ್ರಗಳು ಹಿನ್ನೆಲೆಗಿವೆ.

12.ಅಜಾ-ಇಬೂಲ್-ಮುಖಾಲಕತ್ : ಇದೊಂದು ಆದಿಲ್‌ಶಾಹಿ ಅರಸು ಮನೆತನದ ಹಸ್ತಪ್ರತಿ ಚಿತ್ರಕಲೆಯಾಗಿದ್ದು, ಇದರಲ್ಲಿಯೂ ಕೂಡಾ ಇಸ್ಲಾಂ ಪ್ರಭಾವದ ಚಿತ್ರಗಳು, ನಿಸರ್ಗದ ದೃಶ್ಯಗಳು ಅರಮನೆಗಳು, ಅಲ್ಲಲ್ಲಿ ಅಲಂಕಾರಕ್ಕಾಗಿ ಇಟ್ಟಿರುವಂತಹ ಹೂದಾಣಿಗಳು ಮತ್ತು ಗುಲಾಬಿ ತೋಟಗಳು ಮತ್ತು ಪ್ರಶಾಂತವಾದ ಪ್ರಾರ್ಥನಾ ಮಂದಿರಗಳು ಇವೆ. ಕಲಾತ್ಮಕ ದೃಷ್ಠಿಯಿಂದ ಮತ್ತು ಸಂಯೋಜನಾ ದೃಷ್ಠಿಯಿಂದ ಇದೂ ಕೂಡಾ ಆದಿಲ್ ಶಾಹಿ ಮನೆತನದ ಘನತೆಯನ್ನು ತೋರಿಸುವ ಅಮೋಘ ಕೃತಿಯಾಗಿದೆ. ಈ ಕೃತಿಯ ಮೇಲೆ ಉತ್ತರದ ಮೊಘಲ್ ಶೈಲಿಯ ಪ್ರಭಾವವು ದಕ್ಷಿಣದ ವಿಜಯನಗರದ ಅರಸರ ಪ್ರಭಾವವೂ ದಟ್ಟವಾಗಿ ಕಾಣುವುದು ಎಂದು ವಿದ್ವಾಂಸರು ಅಭಿಪ್ರಾಯ ಪಡುತ್ತಾರೆ.

ಟಿಪ್ಪುಸುಲ್ತಾನನ ಕಾಲದ ಹಸ್ತಪ್ರತಿ ಚಿತ್ರಗಳು : ಕರ್ನಾಟಕದಲ್ಲಿ ಸ್ವಾಭಿಮಾನ ಮತ್ತು ಸ್ವಧರ್ಮದ ಕೆಚ್ಚಿನಿಂದ ಹೋರಾಡಿದ ಟಿಪ್ಪು ಸುಲ್ತಾನನ ಕಾಣಿಕೆಯು ಕರ್ನಾಟಕದ ರಾಜಕೀಯ ರಂಗದ ಮೇಲೆ ಆಗಿರುವಂತೆ ಕರ್ನಾಟಕದ ಚಿತ್ರ, ಸಾಹಿತ್ಯ ಮತ್ತು ಸಾಮಾಜಿಕ ಜೀವನದಮೇಲೆಯೂ ಆಗಿದೆ. ಮೈಸೂರ ಅರಸರ ಪ್ರಭಾವದೊಂದಿಗೆ ಮೊಘಲ್ ದೊರೆಗಳ ಪ್ರೇರಣೆಯಿಂದ ಬೆಳೆದ ಟಿಪ್ಪು ಕರ್ನಾಟಕದಲ್ಲೂ ಒಬ್ಬ ಮಾದರಿಯ ಅರಸನಾಗಿ ಬೆಳೆದಿದ್ದಾನೆ. ಆತನ ಪರ್ಷಿಯಾ, ಉರ್ದು, ಅರೆಬ್ಬಿ ಭಾಷೆಗಳ ಬೆಳವಣಿಗೆ ಕಾರಣೀಭೂತನಾಗಿರುವಂತೆ ಕನ್ನಡ ಭಾಷಾ ಶಾಸ್ತ್ರದ ಬೆಳವಣಿಗೆಗೂ ಆತ ಬಹುದೊಡ್ಡ ಕಾಣಿಕೆಯನ್ನು ನೀಡಿದ್ದಾನೆ. ಟಿಪ್ಪುವಿನ ಸಮಗ್ರ ಹಸ್ತಪ್ರತಿಗಳನ್ನು ಸಂಗ್ರಹಿಸಿದ ಮೇಜರ್ ಚಾರ್ಲಸ್ ಸ್ಟೇವರ್ಟ್ ಅವರು ರಚಿಸಿರುವ ಟಿಪ್ಪು ವರ್ಣನಾತ್ಮಕ ಸೂಚಿಯಲ್ಲಿ ಸುಮಾರು 1090 ಹಸ್ತಪ್ರತಿಗಳು ಇರುವುದಾಗಿ ಅವರು ಪ್ರಕಟಿಸಿದ್ದಾರೆ. ಅವುಗಳಲ್ಲಿ ಪ್ರಮುಖವಾದವು ಗ್ರಂಥವಾಗಿದ್ದು ಅವುಗಳಿಗೆ ಪೂರಕವಾದ ಚಿತ್ರಗಳನ್ನು ರಚಿಸಿದ ಸಚಿತ್ರಹಸ್ತಪ್ರತಿಯ ಗ್ರಂಥಗಳು ಇವಾಗಿವೆ. ಅವು ಈ ಕೆಳಗಿನಂತೆ ಇವೆ.[೬೧]

1. ರಿಸಾಲ್-ಎ-ರಂಗ್-ಒ-ಬೂ: ಇದು ಸುಗಂಧ ದ್ರವ್ಯಗಳನ್ನು ತಯಾರಿಸುವ ಕ್ರಮವನ್ನು ಹೇಳಲು ಗ್ರಂಥವಾಗಿದೆ. ಈ ಗ್ರಂಥದಲ್ಲಿ ಬಟ್ಟೆಗಳಿಗೆ ಹಾಕುವ ಬೇರೆ ಬೇರೆ ಬಣ್ಣಗಳಿಗೆ ವರ್ಣಗಾರಿಕೆಯನ್ನು ತಿಳಿಸುತ್ತದೆ. ಆತನ ಉಡುಗೆ, ತೊಡುಗೆ, ಅರಮನೆಯ ಅಲಂಕಾರ, ಪರಿಚಾರಕರ ಪೋಷಾಕಗಳು ಈ ಕೃತಿಯಲ್ಲಿ ಕಾಣುತ್ತವೆ. ಇದೊಂದು ಟಿಪ್ಪು ಇರುವ ಕಲಾತ್ಮಕ ಅಂಶವನ್ನು ತಿಳಿಸುವ ಕೃತಿಯಾಗಿವೆ.

2. ಮುಫ್ರುದಾತ್: ಇದು ವೈದ್ಯಕೀಯ ಶಾಸ್ತ್ರದ ವಿಜ್ಞಾನ ಗ್ರಂಥವಾಗಿದೆ. ಭಾರತದ ಆಯುರ್ವೇದ ಮಾದರಿಯಲ್ಲಿ ಅನೇಕ ಗಿಡ ಮೂಲಿಕೆಗಳನ್ನು ಇಲ್ಲಿ ಚರ್ಚಿಸುವದಲ್ಲದೇ, ಅನೇಕ ಗಿಡಮೂಲಿಕೆಗಳ ಚಿತ್ರಗಳನ್ನೂ ಕೂಡ ಚಿತ್ರಿಸಲಾಗಿದ. ಇದರಲ್ಲಿ ಇಂಗ್ಲೀಷ್ ಪ್ರಭಾವದ ಕೃತಿಗಳು ಇಲ್ಲವೆ.

ಟಿಪ್ಪು ಸುಲ್ತಾನ ರಚಿಸಿದಂತಹ ಹಲವಾರು ಗ್ರಂಥಗಳು ಅಲ್ಲಲ್ಲಿ ಚದುರಿ ಹೋಗಿವೆ. ಸಾಮನ್ಯವಾಗಿ ಆತನ ಹದಿನೇಳುವರ್ಷಗಳ ಆಡಳಿತದ ಅವಧಿಯಲ್ಲಿ 45ಕ್ಕಿಂತಲೂ ಅಧಿಕವಾದ ಚಿತ್ರಭರಿತ ಗ್ರಂಥಗಳನ್ನು ಆತ ರಚಿಸಲು ಕಾರಣೀಭೂತನಾಗಿದ್ದಾನೆಂದು ವಿದ್ವಾಂಸರು ಅಭಿಪ್ರಾಯ ಪಡುತ್ತಾರೆ. ಅವುಗಳಲ್ಲಿ ಮುಖ್ಯವಾದವು ಈ ರೀತಿಯಾಗಿವೆ.

8. ಆಧುನಿಕ ಯುಗದ ಹಸ್ತಪ್ರತಿ ಚಿತ್ರಕಲೆ. (ಕ್ರಿ.ಶ. 16ನೇ ಶತಮಾನದ ನಂತರ)

ಪಂಪಪೂರ್ವಯುಗ ದಿಂದ ಪ್ರಾರಂಭವಾದ ಬರವಣಿಗೆಯ ಕ್ರಮ ಮತ್ತು ಹಸ್ತಪ್ರತಿಯ ಚಿತ್ರಕಲೆಯ ಕ್ರಮವು ಯುಗದಿಂದ ಯುಗಕ್ಕೆ ತೀವ್ರವಾಗಿವಾಗಿ ರೂಪಾಂತರಗೊಳ್ಳುತ್ತಾ ಸಾಗಿರುವುದ ಹಸ್ತಪ್ರತಿ ಚಿತ್ರಕಲೆ ಅಧ್ಯಯನವು ಸ್ಪಷ್ಟಪಡಿಸುತ್ತಾಸ್ತಾಗಿದೆ. ಅಭಿವ್ಯಕ್ತಿಗಾಗಿ ಕಲ್ಲು, ಮಣ್ಣು ಇಟ್ಟಿಗೆ, ಚರ್ಮ, ಬಟ್ಟೆಯಸಾಧರಿಸಿದ ದಾಖಲಾತಿಯ ಕ್ರಮವು ಕಲ್ಲಿನಮಾಧ್ಯಮದಿಂದ ರೇಷ್ಮೆ ಬಟ್ಟೆಯ ಮಾಧ್ಯಮ ತಲುಪಲು ಸಾವಿರಾರು ವರ್ಷಗಳು ತಲುಪಿದ್ದವು. ಮುಂದೆ ಅರಿವೆಯಿಂದ, ಭೂರ್ಜ ಪತ್ರ ಅಲ್ಲಿಂದ ತಾಳೆಗರಿಯ ಮಾಧ್ಯಮಕ್ಕೆ ಹೋಗಲು ಕೆಲವು ನೂರು ವರ್ಷಗಳ ಅಂತರ ಬೇಕಾಯಿತು ಆದರೆ ತಾಳೆಗರಿಯಿಂದ ಕಾಗದದ ಪ್ರತಿಯ ಆಧುನಿಕ ಕಾಲವು ಅತ್ಯಂತ ಸಣ್ಣ ಅವಧಿಯನ್ನು ಹೊಂದಿದ್ದು ಹಿಂದಿನ ಎಲ್ಲದರ ಕೊರತೆಗಳನ್ನು ನೀಗಿಸಿಕೊಂಡು ಸಮೃದ್ಧವಾಗುತ್ತ ಸಾಗಿದೆ. ವೈಜ್ಞಾನಿಕ ಕ್ಷೇತ್ರದ ಆಧುನಿಕ ವಿಜ್ಞಾನವು ಹಿಂದಿನ ಎಲ್ಲದರ ಬೆಳವಣಿಗೆಯನ್ನು ಹಿಂದಕ್ಕೆ ಸರಿಸಿ ನಾಗಾಲೋಟದಿಂದ ಮುಂದೆ ಸಾಗಿದಂತೆ ಹಸ್ತಪ್ರತಿಗಳ ಆಧುನಿಕ ಯುಗವೂ ಹಿಂದಿನ ಎಲ್ಲದರ ಬೆಳವಣಿಗೆಯನ್ನು ಹಿಂದಕ್ಕೆ ಸರಿಸಿ ಸಾಗುತ್ತಿದೆ. ಹಸ್ತಪ್ರತಿಯು ಹಳೆಯ ವ್ಯಾಖ್ಯಾನವನ್ನೇ ಬದಲಾಯಿಸುವ ಮಟ್ಟಿಗೆ ಹಸ್ತಪ್ರತಿ ಶಾಸ್ತ್ರವೂ ದೈತ್ಯ ಬೆಳವಣಿಗೆಯಲ್ಲಿ ಸಾಗುತ್ತಿದೆ. ಈ ಯುಗದಲ್ಲಿ ಭೂರ್ಜ, ತಾಳೆಗರಿದಾಟಿಕೊಂಡು ಸುಧಾರಿಸಿದ ಕಾಗದದ ಪ್ರತಿ ಬಂದಿದೆ. ಕೇವಲ ಕಂಠಕ್ಕೆ ಸೀಮಿತವಾಗಿದ್ದ ಬರವಣಿಗೆಯ ಸಾಧನವೂ ಬದಲಾಗುತ್ತಾ ಸಾಗಿದೆ. ಆದರೂ ಹಳೆಯ ಮರದ ಹೊಸಬೇರುಗಳು ಇದ್ದಕ್ಕಿದ್ದಂತೆ ನಿಸ್ತಂತುಗಳಾಗದೆ ತನ್ನದೇ ಬೇರುಗಳ ನೆರವಿನಿಂದ ಎಲೆಯು ಅನ್ನ ಬೆಯಿಸಿಕೊಳ್ಳುವ ಪ್ರಕೃತಿಯ ನಿಯಮದಂತೆ ಇಲ್ಲಿಯೂ ಸ್ವತಂತ್ರವಾದ ಅಡುಗೆಯ ಕ್ರಮವನ್ನು ಅನುಸರಿಸಿದೇ ಪರಿಚಿತ ಇತಿಹಾಸದ ಮರದ ಬೀಳಲುಗಳಲ್ಲಿ ಹೊಸತನದ ಅವಿಷ್ಕಾರಗಳನ್ನು ಬಳಸಿಕೊಂಡು ಹಿಂದಿನ ರೂಢಿ, ಪರಂಪರೆಗಳಲ್ಲಿ ದೇಶಿಯ ಸಂಸ್ಕೃತಿಯು ನಿರಾಂತಕವಾಗಿ ಮುನ್ನಡೆಯುತ್ತಿರುವುದು ಸಂತಸದಷ್ಟೇ ಸಮಾಧಾನದ ವಿಷಯವಾಗಿದೆ.

3. ಮುಮ್ಮಡಿ ಕೃಷ್ಣರಾಜ ಒಡೆಯರ ಶ್ರೀ ತತ್ತ್ವನಿಧಿ :(ಕ್ರಿ.ಶ.1974-1868) ಕಿರೀಟ ಅಳತೆಯ 246 ಪುಟಗಳ ಈ ಗ್ರಂಥವನ್ನು ನಾಡಿನ ಹಿರಿಯ ವಿದ್ವಾಂಸರು, ಸಂಸ್ಕೃತ, ಪ್ರಾಕೃತ, ಅರ್ಧಮಾದಿ, ಕನ್ನಡ ಭಾಷಾ ಶಾಸ್ತ್ರ ವಿಶಾರದರು ಕಲಾವಿದರೂ ಆಗಿರುವ ಡಾ॥ ಸಾಲಿಗ್ರಾಮ ಕೃಷ್ಣ ರಾಮಚಂದ್ರ ರಾವ್ ಅವರು ಸಂಪಾದಿಸಿದ್ದು. ಶ್ರೀ ಚಿ. ಶ್ರೀನಿವಾಸ ರಾಜು ಅವರು ಕನ್ನಡ ವಿಶ್ವವಿದ್ಯಾಲಯ ಪ್ರಸಾರಾಂಗದ ನಿರ್ದೇಶಕರಾಗಿ, ಪ್ರಕಾಶಕರಾಗಿ 1992 ರಲ್ಲಿ ಈ ಕೃತಿಯನ್ನು ಹೊರತಂದಿದ್ದಾರೆ. ಲೇಖಖರೇ ಹೇಳಿಕೊಳ್ಳುವಂತೆ ಈ ಸಂಪುಟದಲ್ಲಿ ಮುಮ್ಮಡಿಯವರ ಬದುಕು, ವ್ಯಕ್ತಿತ್ವ, ಕಾಲ, ಪರಿಸರ, ಪ್ರಭಾವ ಇವೆಲ್ಲವನ್ನೂ ಪರಿಶೀಲಿಸುವುದರೊಂದಿಗೆ ರಾಗಮಾಲಾ ಚಿತ್ರಗಳು ರೂಪಗೊಂಡಿವೆ. ಈ ಚಿತ್ರಗಳ ಹಿನ್ನೆಲೆ, ಸ್ವರೂಪ, ತಾತ್ಪರ್ಯಗಳನ್ನು ಒದಗಿಸಿದ್ದಾರೆ. ಅರಸರು ಕಲಾದರಿಗಾಗಿಯೇ ಮಾಡಿರುವ ಗಂಜಾಮಿನಲ್ಲಿ ವಸತಿಯೋಜನೆ ಮತ್ತು ಹಲವು ಜನಪರ ಯೋಜನೆಗಳನ್ನು ಕಲಾವಿದರ ಮತ್ತು ಕೆಲವು ಪ್ರತಿಷ್ಠಿತ ಮತ್ತು ದೇವತೆಗಳ ಚಿತ್ರಗಳು ಈ ಗ್ರಂಥದಲ್ಲಿ ಮೋಹಕ ಬಣ್ಣದ ಚಿತ್ರಗಳೊಂದಿಗೆ ಈ ಕೃತಿ

ಕರ್ನಾಟಕದ ಹಸ್ತಪ್ರತಿ ಚಿತ್ರಕಲೆ- ಒಂದು ಅಧ್ಯಯನ

ಕರ್ನಾಟಕದ ಹಸ್ತ ಪ್ರತಿಗಳಲ್ಲಿ ಶ್ರೀತತ್ತ್ವನಿಧಿಯ - ಶಕ್ತಿ ನಿಧಿ ಚಿತ್ರಗಳು



ಕೃಪೆ:

ಡಾ॥ ಹೆಚ್.ಪಿ. ದೇವಕಿ, ಪ್ರಾಚ್ಯ ವಿದ್ಯಾ ಸಂಶೋಧನಾಲಯ

ಮೈಸೂರು ವಿಶ್ವವಿದ್ಯಾಲಯ, ಮೈಸೂರು.

ಕರ್ನಾಟಕದ ಹಸ್ತಪ್ರತಿ ಚಿತ್ರಕಲೆ- ಒಂದು ಅಧ್ಯಯನ

ಶ್ರೀ ತತ್ವನಿಧಿ - ವಿಷ್ಣು ನಿಧಿಯ ಚಿತ್ರಗಳು



ಕೃಪೆ:

ಡಾ॥ಕೆ.ವಿ.ರಮೇಶ್,

ಪ್ರಾಚ್ಯ ವಿದ್ಯಾ ಸಂಶೋಧನಾಲಯ,ಮೈಸೂರು ವಿಶ್ವವಿದ್ಯಾಲಯ.ಮೈಸೂರು.

ಮೂಡಿ ಬಂದಿದೆ.

ಶ್ರೀ ತತ್ತ್ವನಿಧಿ-ಶಕ್ತಿನಿಧಿ : ಈ ಕೃತಿಯೂ ಕಿರೀಟ ಅಳತೆಯದಾಗಿದ್ದು ಅನೇಕ ಮೈಸೂರು ಶೈಲಿಯ ಚಿತ್ರಗಳನ್ನು ಒಳಗೊಂಡಿದೆ. ಅಲಂಕಾರ ಶಾಸ್ತ್ರದ ವಿದೂಷಿ, ಓರಿಯಂಟಲ್ ಸಂಶೋಧನಾಲಯದ ನಿರ್ದೇಶಕರಾಗಿದ್ದ ಡಾ|| ಹೆಚ್.ಪಿ. ದೇವಕಿಯವರು ಈ ಕೃತಿಯ ಸಂಪಾದಕರಾಗಿದ್ದು ಮೈಸೂರು ವಿಶ್ವವಿದ್ಯಾಲಯದ ಪ್ರಾಚ್ಯ ವಿದ್ಯಾ ಸಂಶೋಧನಾಲಂಯದಿಂದ ಈ ಕೃತಿಯನ್ನು 1997 ರಲ್ಲಿ ಪ್ರಕಟಿಸಲಾಗಿದೆ. 1794 ರಿಂದ 1868 ರ ಅವಧಿಯಲ್ಲಿ 1799 ರಿಂದ 1868 ರ ಕಾಲಾವಧಿಯಲ್ಲಿ ಆಳ್ವಿಕೆಯನ್ನು ಮಾಡಿದ ಮೈಸೂರು ಅರಸರುಗಳಲ್ಲಿ 22 ನೆಯ ವರಾಗಿದ್ದ ಕೃಷ್ಣರಾಜ ಒಡೆಯರ್‌ರವರೇ ಈ ತತ್ತ್ವನಿಧಿಗಳ ಕರ್ತೃಗಳಾಗಿದ್ದಾರೆ. ಶಕ್ತಿನಿಧಿಯಲ್ಲಿ 106 ಚಿತ್ರಗಳಿರುವುದನ್ನು ಸಂಪಾದಕರು ಉಲ್ಲೇಖಿಸಿದ್ದಾರೆ.

ತತ್ತ್ವನಿಧಿ - ವಿಷ್ಣು ನಿಧಿ :

ಈ ಕೃತಿಯನ್ನು ಮೈಸೂರು ವಿಶ್ವವಿದ್ಯಾನಿಲಯದ ಪ್ರಾಚ್ಯ ವಿದ್ಯಾ ಸಂಶೋಧನಾಲಯದಿಂದ 2002 ರಲ್ಲಿ ಪ್ರಕಟಿಸಲಾಗಿದ್ದು , ಪ್ರಾಚ್ಯ ವಿದ್ಯಾ ಸಂಶೋಧನಾಲಯದ ಗೌರವ ನಿರ್ದೇಶಕರಾಗಿರುವ ಡಾ|| ಕೆ.ವಿ. ರಮೇಶರವರು, ಸಂಪಾದಕರಾಗಿದ್ದರೆ. ವಿಷ್ಣು ನಿಧಿಯಲ್ಲಿ 119 ಚಿತ್ರಗಳನ್ನು ಬರೆಯಲಾಗಿದೆ. 37 ಚಿತ್ರಗಳನ್ನು ಒಂದೇ ರೀತಿಯಲ್ಲಿ ಬರೆಯಲಾಗಿದೆ. ಇಲ್ಲಿ ತಿಳಿಸಲಾಗಿರುವ ದೇವತೆಗಳ 156 ಚಿತ್ರಗಳಿವೆ. ಈ ಕೃತಿಯಲ್ಲಿ ದೇವತೆಗಳ ವಿಷಯ ತೆಗೆದು ಕೊಂಡಂತೆ ಅವರು ಹಿಡಿದ ಆಯುಧ ಧರಿಸಿರುವ ಆಭರಣ, ಆಸನ ಮತ್ತು ವಾಹನಗಳ ಬಗ್ಗೆ ವಿವರವಾದ ಮಾಹಿತಿ ನೀಡಲಾಗಿದೆ.

ಮಹಾರಾಜ ಮುಮ್ಮಡಿ ಕೃಷ್ಣರಾಜ ಒಡೆಯರ ಪ್ರೋತ್ಸಾಹದಿಂದ ರೂಪಗೊಂಡಿರುವ ಶ್ರೀ ತತ್ವನಿಧಿಯಲ್ಲಿ ಒಂಭತ್ತು ನಿಧಿಗಳಿವೆ. ಅವುಗಳು ಶಕ್ತಿ-ನಿಧಿ, ವಿಷ್ಣು-ನಿಧಿ, ಶಿವ-ನಿಧಿ, ಬ್ರಹ್ಮ -ನಿಧಿ, ಗ್ರಹ-ನಿಧಿ, ವೈಷ್ಣವ - ನಿಧಿ, ಶೈವ-ನಿಧಿ, ಆಗಮ-ನಿಧಿ, ಕೌತುಕ-ನಿಧಿ ಇವುಗಳಿಗೆ ಮೈಸೂರ ಕಲಾವಿದರಿಂದ ಅನೇಕ ವರ್ಣಗಳಿಂದ ಚಿತ್ರಗಳು ಸಂಯೋಜನೆ ಗೊಂಡಿರುತ್ತವೆ. ಇವುಗಳೆಲ್ಲವೂ ಮೈಸೂರ ವಿಶ್ವವಿದ್ಯಾಲಯದ ಪ್ರಾಚ್ಯ ಸಂಶೋಧನಾಲಯದ ಹಸ್ತಪ್ರತಿ ಬಂಢಾರದಲ್ಲಿ ಸುರಕ್ಷಿತವಾಗಿವೆ.


ಭಾರತದ ಗ್ಯಾಜಿಟಿಯರ ದಾಖಲೆಯಲ್ಲಿ ಹಸ್ತಪ್ರತಿಯ ಚಿತ್ರಗಳು : ಕರ್ನಾಟಕದ ಸರಕಾರದ ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯದ ಬಾರತದ ಗ್ಯಾಸೆಟಿಯರ್ (ಸಂಪುಟ ಎರಡು)ದಲ್ಲೂ ಹದಿಮೂರನೆಯ ಶತಮಾನದ ಹಸ್ತಪ್ರತಿಯ ಚಿತ್ರಗಳ ಕುರಿತು ದಾಖಲಿಸಿದ ವಿವರ ಈ ರೀತಿ ಇದೆ. ಪುರ್ವ ಭಾರತದಲ್ಲಿ ಈ ಉಪಲಬ್ಧವಿರುವ ಪ್ರಾಚೀನ ವರ್ಣ ಚಿತ್ರಗಳು ಕ್ರಿ.ಶ.13ನೇ ಶತಮಾನದಷ್ಟು ಹಳೆಯದಾಗಿವೆ. ಅವುಗಳನ್ನು ತಾಡವೋಲೆ, ಕಾಗದದ ಹಸ್ತ ಲಿಖಿತ ಗ್ರಂಥಗಳಲ್ಲಿ ಮತ್ತು ಅವುಗಳಿಗೆ ಉಪಯೋಗಿಸಲಾದ ಕಟ್ಟಿಗೆಯ ಫಲಕಗಳ ಮೇಲೆ ಬಿಡಿಸಲಾಗಿದೆ,ಕೆಲವು ಅಪವಾದಗಳನ್ನು ಬಿಟ್ಟರೆ,

[illegible]

ಕನ್ನಡ ಚಿತ್ರ ಕಾವ್ಯದಲ್ಲಿ ರೇಖಾ ಚಿತ್ರಗಳು

ಕಲಾವಿದರು : ವಿಧ್ವಾನ್ ಎಚ್.ಶಂಕರ್ ಗಣಪತಿ ಘಾಟಕ್ ಮತ್ತು ಬಿ.ವಾಸುದೇವರಾವ್.

ಕರ್ನಾಟಕದ ಯಕ್ಷಗಾನ ಚಿತ್ರಕಲೆ- ಒಂದು ಅಧ್ಯಯನ



ಕೃಪೆ:

ಡಾ||ಟಿ.ವಿ.ವೆಂಕಟಾಚಲ ಶಾಸ್ತ್ರಿಗಳು.

ಕನ್ನಡ ಅಧ್ಯಯನ ಸಂಸ್ಥೆ,ಮೈಸೂರು ವಿಶ್ವ ವಿದ್ಯಾಲಯ,ಮೈಸೂರು.

ಟಿ.ವಿ.ವೆಂಕಟಾಚಲ ಶಾಸ್ತ್ರಿಗಳು ಬಹು ದೊಡ್ಡ ವಿದ್ವಾಂಸರು. ಸರಳ ವಿಷಯ ಆಯ್ದುಕೊಂಡು ಸುಲಭದಲ್ಲಿ ಕೃತಿಗಳನ್ನು ರಚಿಸುವುದು ಕೆಲವರ ವಿಚಾರದವಾದರೆ, ಜಟಿಲ ವಿಷಯ ಆಯ್ದುಕೊಂಡು ವಿಸ್ತಾರದ ರಾಜಮಾರ್ಗದಲ್ಲಿ ಮುನ್ನಡೆಯುವುದು. ಡಾ|| ಶಾಸ್ತ್ರಿಯವರ ಹವ್ಯಾಸವಾಗಿರುವ ಕಾರಣಕ್ಕಾಗಿಯಯೇ ಅವರು ''ಕನ್ನಡ ಚಿತ್ರಕಾವ್ಯ'' ವಂತಹ ಕೃತಿಯನ್ನು ರಚಿಸಲು ಆಯ್ದುಕೊಂಡಿದ್ದಾರೆ. ಅದರ ಜಟಿಲ ಸ್ವರೂಪ ದೂರದವರೆಗೆ ಹರಡಿಕೊಳ್ಳುವುದು. ಇತಿಹಾಸದೊಂದಿಗೆ ಕನ್ನಡ, ಸಂಸ್ಕೃತ ಭಾಷಾಬಲ್ಲಿದರ ವಿಮರ್ಶೆಯು ಈ ಕೆಳಗಿನಂತಿವೆ.

2. ಕನ್ನಡ ಚಿತ್ರಕಾವ್ಯ: 540 ಪುಟಗಳ ಈ ಕೃತಿಯನ್ನು ಮೈಸೂರು ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಸಂಸ್ಥೆಯ ಮಾನಸ ಗಂಗೋತ್ರಿಯಿಂದ ಡಾ|| ಹೆಚ್.ತಿಪ್ಪೇರುದ್ರಸ್ವಾಮಿಯವರು 1987 ರಲ್ಲಿ ಪ್ರಕಟಿಸಿ ಪ್ರಕಾಶನಗೊಳಿಸಿದ್ದಾರೆ. ಚಿತ್ರಕಾವ್ಯ ಅದೊಂದು ಚಿತ್ತಾವ್ಯದಂತಿದ್ದು ಕವಿಯ ಕಾವ್ಯಪ್ರತಿಭೆಯನ್ನು ಮತ್ತು ಕಲಾಪ್ರತಿಭೆಯನ್ನು ಬಳಸಿಕೊಂಡಿರುವ ಕೃತಿಯಾಗಿದೆ. ಪದ ಬಂಧದ ಹಾಸಿನಂತೆ ಒಂದೇ ಪದವು ಮೇಲೂ ಕೆಳಗೂ ಅರ್ಥವನ್ನು ಕೊಡುತ್ತದೆ. ಕೆಲವೊಂದು ಸಲ ಒಂದು ವಾಕ್ಯದ ಒಂದು ಪದವು ಚೌರಸ್ತೆಯ ಮಧ್ಯದಲ್ಲಿ ನಿಂತಿರುವಂತೆ ನಾಲ್ಕು ಕಡೆ ಚಲಿಸಬಲ್ಲ ಸಾಮರ್ಥ್ಯ ಹೊಂದಿರುತ್ತದೆ. ಲೇಖಕರಾದ ಡಾ|| ಶಾಸ್ತ್ರಿಗಳವರು ಚಿತ್ರಕಾವ್ಯವನ್ನು ವಚನಕಾರರ ಬೆಡಗಿನ ವಚನಗಳಿಗೆ ಹೋಲಿಸಿದಂತೆ ವೈದಿಕ ಬ್ರಹ್ಮೋದ್ಯಗಳ ಹಾಗೆ, ಪುರಾಣೇತಿಹಾಸಗಳ ಕೂಟ ಶ್ಲೋಕಗಳ ಹಾಗೆ ಆಧ್ಯಾತ್ಮಿಕ ಹಾಗೂ ಅನುಭಾವಿಕ ಗೂಢಾರ್ಥಗಳಿಂದ ಕೂಡಿಕೊಂಡಿರುವಂತೆ ಕಾಣುತ್ತದೆ. ದಾಸ ಸಾಹಿತ್ಯದ ಮುಂಡಿಗೆಗಳ ತರಹ ಕೀರ್ತನೆಗಳಲ್ಲಿಯೂ ಈ ಬಗೆಯ ಗೂಢಾರ್ಥದ ಹೊಳವು ವಿಶೇಷವಾಗಿ ಕಂಡು ಬರುತ್ತದೆ. ಮುಖ್ಯವಾಗಿ ಕನಕದಾಸರ ರಚನೆಗಳಲ್ಲಿ ಇಂತಹವು ಅಧಿಕ. [೫೯]

ಈ ಕೃತಿಯನ್ನು ಕನ್ನಡದ ಅನೇಕ ವಿದ್ವಾಂಸರು ತಮ್ಮದೇ ಆದ ಹಲವು ಅಭಿಪ್ರಾಯಗಳನ್ನು ಈ ಕೆಳಗಿನಂತೆ ನೀಡಿದ್ದಾರೆ.

ಅ. ಡಾ. ಕೆ. ಕೃಷ್ಣಮೂರ್ತಿ : ಕನ್ನಡ ಚಿತ್ರಕಾವ್ಯ ನಮ್ಮ ಹಿಂದಿನ ಕಾವ್ಯ ಕಲೆಯ ಒಂದು ಅನುಸ್ಯೂತ ಆದರೆ ಅಪಖ್ಯಾತ ದಿಗಂತವನ್ನು ವಿದ್ವತ್ ಪೂರ್ಣವಾಗಿ ವಿಶ್ಲೇಷಿಸಿ ಸೋದಾರಣವಾಗಿ ಪರಿಚಯಿಸುವ ಶ್ಲಾಘ್ಯ ಪ್ರಯತ್ನ. ಚಿತ್ರಕಾರನಿಗೆ ಬಣ್ಣ ಹೇಗೋ, ಕುಂಬಾರನಿಗೆ ಮಣ್ಣು ಹೇಗೋ ಮನೆ ಕಟ್ಟುವವನಿಗೆ ಇಟ್ಟಿಗೆ ಹೇಗೋ ಹಾಗೆ ಪೂರ್ವಿ ಕವಿಗಳಿಗೆಲ್ಲ ಅಕ್ಷರಗಳು ಪದಗಲು ಮತ್ತು ಚಂದೋ ಬಂಧಗಳು ಇವುಗಳ ವಿನ್ಯಾಸ ಲೆಕ್ಕ ಆಕೃತಿ ಯೋಜನೆ ಕಾವ್ಯಕಲೆಯಲ್ಲಿ ಆಸಕ್ತರಿಗೆಲ್ಲ ತುಂಬಾ ಮೆಚ್ಚಿನ ಹವ್ಯಾಸವಾಗಿತ್ತು. ಇವುಗಳಲ್ಲಿ ಅನೇಕ ಬಗೆಗಳ ಪ್ರಯೋಗ ಕೌಶಲ ಅವರ ಸಂಶೋಧನೆಯ ವಿಷಯ ಮಾತ್ರವಲ್ಲ, ರಸಿಕರನ್ನು ಚಕಿತಗೊಳಿಸುವ ವಿನೋದವೂ ಆಗಿದೆ. [೬೦]

ಬ. ರಂ. ಶ್ರೀ ಮುಗಳಿ : ಈ ಗ್ರಂಥದಲ್ಲಿ ಅನುಪ್ರಾಸ, ಯಮಕ, ವರ್ಣಚಿತ್ರ, ಶ್ಲೇಷ ಚಿತ್ರ,

---

೫೯. ಡಾ. ಟಿ.ವಿ.ವೆಂಕಟಾಚಲ ಶಾಸ್ತ್ರಿ : ಕನ್ನಡ ಚಿತ್ರಕಾವ್ಯ, ಪುಟ - ೧೩

೬೦. ಪ್ರಧಾನ ದತ್ತ ಸಂ : ಶ್ರೀಮುಖ ಕೆ.ಕೃಷ್ಣಮೂರ್ತಿ, ಪುಟ - ೭೫೩

ಕರ್ನಾಟಕದ ಹಸ್ತಪ್ರತಿ ಚಿತ್ರಕಲೆ- ಒಂದು ಅಧ್ಯಯನ

ಕರ್ನಾಟಕದ ಕಾಗದದ ಹಸ್ತಪ್ರತಿಗಳಲ್ಲಿ ಚಿತ್ರಕಾವ್ಯದ -ಚಿತ್ರಗಳು



ಕೃಪೆ :

ಡಾ॥ ಟಿ.ವಿ. ವೆಂಕಟಾಚಲ ಶಾಸ್ತ್ರೀಗಳು ಬ್ರಾಹ್ಮೀ ನಿಲಯ , ಮೈಸೂರು.

ಗರ್ಭಕವಿತ್ವ ಗೂಢ ಚಿತ್ರ, ಪ್ರಹೇಳಿಕೆ, ಗತಿಚಿತ್ರ, ಬಂಧಚಿತ್ರ ಈ ವಿಷಯಗಳನ್ನು ಕುರಿತು ಸಂಸ್ಕೃತ ಮತ್ತು ಕನ್ನಡ ಲಕ್ಷಣಿಕರು ಕೊಟ್ಟಿರುವ ಲಕ್ಷಣಗಳು ಇವೆ. ಸೂಕ್ತ ಲಕ್ಷಣಗಳ ಮೂಲಕ ಅವುಗಳ ವಿಷದೀಕರಣವಾಗಿದೆ.[೬೧]

ಕ.ಡಾ. ಎಂ. ಚಿದಾನಂದ ಮೂರ್ತಿ : ಚಿತ್ರಕಾವ್ಯವೆಂದರೆ ಏನು ? ಅದನ್ನು ತಿಳಿಯುವ ಬಗೆ ಹೇಗೆ ಬಂಧಗಳನ್ನು ಬಿಡಿಸುವ ರೀತಿ ಯಾವುದು ? ಈ ಕುತುಹಲಕಾರಿ ಪ್ರಶ್ನೆಗಳಿಗೆ ಉತ್ತರ ಹೇಳುವವರು ಇಂದು ಹಲವರು ಉಳಿದಿಲ್ಲ. ಆದರೆ ಡಾ|| ಶಾಸ್ತ್ರಿಯವರು ಉಳಿದವರ ಉಪೇಕ್ಷೆಗೆ ಕೆಲವೊಮ್ಮೆ ಹಾಗೂ ಆಲಸ್ಯದಿಂದಲೂ ಹುಟ್ಟಿರಬಹುದು. ಗುರಿಯಾಗಿರುವ ಯಾರೂ ಮಟ್ಟಿರದ ಮಟ್ಟಲು ಹೆದರುವ ಕ್ಷೇತ್ರವನ್ನು ಆರಿಸಿ ಕೊಂಡು ಅಲ್ಲಿ ವಿದ್ವಲ್ಲೋಕದ ಚಿರಗಾಗುವಂತ ಕೃಷಿಯನ್ನು ಮಾಡಿದ್ದಾರೆ. ಒಂದು ಉನ್ನತ ಗೌರವಕ್ಕೆ ಪಾತ್ರವಾಗುವ ಕೃತಿಯೊಂದನ್ನು ಹೊರತಂದಿದ್ದಾರೆ. ಎಲ್ಲರೂ ತುಳಿಯುವ ಹಾದಿಯನ್ನೇ ತುಳಿಯದೆ ಹೊಸ ವಿಷಯಗಳತ್ತ ಸೀಮೋಲಂಘನ ಮಾಡುವ ಸಾಹಸದ ಕೆಲಸ ಶಾಸ್ತ್ರಿಗಳು ಮಾಡಿದ್ದಾರೆ. ಎಲ್ಲರಿಗೂ ಕೊನೆಯ ಪಕ್ಷ ಶ್ರಮವನ್ನು ಪ್ರೀತಿಸುವವರಿಗಂತೂ ಸಂತೋಷವನ್ನು ತರುವಂತಹ ಸಂಗತಿ.[೬೨]

ಡ. ಎಲ್.ಎಸ್. ಶೇಷಗಿರಿ ರಾವ್ : ಚಮತ್ಕಾರ, ಬುದ್ಧಿಪ್ರದರ್ಶನ ಇವು ರಸಾನುಭವವನ್ನು ಶ್ರೇಷ್ಠ ಕಾವ್ಯ ಕೊಡುವ ಉದಾತ್ತ ಆನಂದವನ್ನು ಕೊಡಲಾರೆವು ಎಂಬುದನ್ನು ವೆಂಕಟಾಚಲ ಶಾಸ್ತ್ರಿಗಳು ಗುರುತಿಸಿದ್ದಾರೆ. ಚಿತ್ರಕಾವ್ಯಗಲ ಪ್ರಭೇಧವು ಸಹಜ ಕವಿತ್ವದ ಜಾತಿಗೆ ಸೇರಿದವೆ ಅಲ್ಲವೇ ಚರ್ಚೆ ನಮ್ಮಲ್ಲಿ ಬಹುಕಾಲದಿಂದ ಸಾಗಿ ಬಂದಿವೆ. ರಸ ಸ್ಪಂಧಿಯಾದ ಕಾವ್ಯ ರಚನೆಯನ್ನೇ ಗುರಿಯಾಗಿಟ್ಟುಕೊಂಡ ಕವಿಗೂ ಶಬ್ದಗಳ ನಾದಗಳ ಹಾಗೂ ದೃಶ್ಯಗೊಳಿಸಿದ ಆಕೃತಿಗಳ ಮೂಲಕ ಕಿವಿ, ಕಣ್ಣುಗಳನ್ನು ತಣಿಸುವುದು. ಅವನ ದೃಕ್ಪಥದಲ್ಲಿರುತ್ತವೆ. ಅಲ್ಲದೇ ರಸ ಭಾವಾಧಿಗಳ ಬಗ್ಗೆ ಒತ್ತುವರಿಯಾದಾಗ ಚಿತ್ರಕಾವ್ಯವು ಶ್ರೇಷ್ಠ ಕಾವ್ಯವಾಗದೆ ಹೋಗಬಹುದು. ಆದರೆ ಓದುಗರ ವಿಸ್ಮಯ ಆಸಕ್ತಿ ಮೆಚ್ಚುಗೆಗಳನ್ನು ಗಳಿಸಿ ಕೊಳ್ಳಬಲ್ಲದು.[೬೩]

---

೬೧. ಪ್ರಧಾನ ದತ್ತ ಸಂ : ಶ್ರೀಮುಖ ರಂ.ಶ್ರೀ.ಮುಗಳಿ, ಪುಟ -೨೫೩

೬೨. ಪ್ರಧಾನ ದತ್ತ ಸಂ : ಶ್ರೀಮುಖ ಚಿದಾನಂದ ಮೂರ್ತಿ, ಪುಟ -೨೫೩

೬೩. ಪ್ರಧಾನ ದತ್ತ ಸಂ : ಶ್ರೀಮುಖ ಎಲ್.ಎಸ್.ಶೇಷಗಿರಿರಾವ, ಪುಟ -೨೫೩



ಅಧ್ಯಾಯ : ಮೂರು

ಹಸ್ತಪ್ರತಿ ಚಿತ್ರಕಲೆಯ ಸಿದ್ಧತಾ ವಿಧಿ - ವಿಧಾನಗಳು.

ಈಗಿಲ್ಲಿ !.. ನಿಂತಿಲ್ಲಿ ನಿಂತೀಗ ನೋಡಲ್ಲಿ ;
ಹಸುರುಕ್ಕಿ ಹರಿಯುವಾ ಹುಲ್ಲೆಸಳ ಮುಡಿಯ ತುದಿ
ಮಣಿದೀಪವೆನೆ ಉರಿವ ಉಜ್ವಲ ಹಿಮದ ಬಿಂದು !
ಸೌಂದರ‍್ಯ ದೇವತಯ ಮೂಗುತಿಯ ಹನಿಮುತ್ತು
ನೇಲುತಿದೆ, ಜೋಲುತಿದೆ, ಮಿರು ಮಿರುಗುತಿದೆ ನೋಡು

ಕುವೆಂಪು - ಪಕ್ಷಿಕಾಶಿ

ಭಾರತದ ಸಾಹಿತ್ತಿಕ ಬರವಣಿಗೆಗೆ ತಾಳೆಗರಿಯು ಅತ್ಯುತ್ತಮ ಮಾಧ್ಯಮವೆಂದು ಸ್ವೀಕೃತವಾದ ಬಳಿಕ ಕರ್ನಾಟಕದ ಹಸ್ತಪ್ರತಿ ಬರವಣಿಗೆಯಲ್ಲಿ, ಕನ್ನಡ ಸಾರಸ್ವತ ಲೋಕದ ಭಾಷಾ ಸಾಹಿತ್ಯವಲಯದಲ್ಲಿ ಮಹತ್ವ ಪೂರ್ಣವಾದ ಬದಲಾವಣೆ ಆದವು ಅದರಂತೆ ಹಸ್ತಪ್ರತಿಯೊಳಗೆ ಚಿತ್ರರಚಿಸುವ ಕಾರ್ಯವೂ ಕರ್ನಾಟಕದಲ್ಲಿ ವಿಭಿನ್ನವಾಗಿ ಪ್ರಾರಂಭಗೊಂಡಿತು. ಕನ್ನಡ ಸಾಹಿತ್ಯದಲ್ಲಿ ಆದಿಕವಿ, ನಾಡೋಜ, ಕವಿಕುಲಗುರು "ಪಂಪ"ನ ಯುಗವನ್ನು ಮಹಾಕಾವ್ಯಗಳಯುಗ, ಕನ್ನಡ ಸಾಹಿತ್ಯದ ಸುವರ್ಣಯುಗವೆಂಬಂತೆ ಜೈನ ಸಾಹಿತ್ಯದ ಯುಗವೆಂದೂ ಕರೆಯಲಾಗುವುದು ಈ ಯುಗದಲ್ಲಿ ಆದಿಪುರಾಣ, ವಿಕ್ರಮಾರ್ಜುನ ವಿಜಯ, ಶಾಂತಿಪುರಾಣ, ಮಲ್ಲಿನಾಥ ಪುರಾಣಗಳಂತಹ ಅನೇಕ ಕನ್ನಡದ ಮೇರುಕೃತಿಗಳು ತಾಳೆಗರಿಯಲ್ಲಿ ರಚನೆಗೊಂಡಂತೆ,ಕನ್ನಡ ಲಿಪಿಯ ಪ್ರಾಕೃತ ಭಾಷೆಯ ಸಚಿತ್ರ ಜೈನ ಧರ್ಮದ ಮಹಾನ್ ಗ್ರಂಥಗಳಾದ ಧವಳ,ಜಯಧವಳ ಮತ್ತು ಮಹಾಧವಳಗಳು ಜಗತ್ತಿನ ಹಸ್ತಪ್ರತಿ ಜಗತ್ತಿನಲ್ಲಿ ಅದ್ವಿತೀಯವಾಗಿ ಹೊಯ್ಸಳ ಶೈಲಿಯ ಚಿತ್ರಕಲೆಯೊಂದಿಗೆ ಸಚಿತ್ರ ಹಸ್ತಪ್ರತಿಗಳಾಗಿ ಮೂಡಿಬಂದವು.

ಹಸ್ತಪ್ರತಿಗಳು ಕನ್ನಡ ಸಾಹಿತ್ಯಕ್ಕೆ ಚರಿತ್ರೆ ಒದಗಿಸಿದಂತೆ ಕರ್ನಾಟಕದ ಚಿತ್ರಕಲೆಗೂ ಅಧಿಕೃತವಾದ ಇತಿಹಾಸವನ್ನು ಒದಗಿಸಿವೆ. ತಾಳೆಯ ಗರಿಗಳನ್ನು ಮರದಿಂದ ಬಿಡಿಸಿ, ಆರೈಕೆ ಮಾಡಿ ಹದಗೊಳಿಸುವುದು ಪ್ರಾಥಮಿಕ ಹಂತವಾದರೆ ಸಿದ್ಧಗೊಂಡ ತಾಳೆಗರಿಯಲ್ಲಿ ಕೃತಿ ದಾಖಲಿಸುವ ಲಿಪಿಕಾರನಂತೆ; ಕೃತಿಯ ಪಠ್ಯಕ್ಕೆ ಸಮನಾಗಿರುವ ಪಾಠೋಪಕರಣದಂತೆ, ಕವಿಯ ಪರಿಕಲ್ಪನೆಗೆ ರೂಪನೀಡುವ ಹಸ್ತಪ್ರತಿ ಚಿತ್ರಕಲಾವಿದನ ಕಾರ್ಯವು ಮಹತ್ವಪೂರ್ಣವಾದದು ಒಂದು

೧. ಕುವೆಂಪು : ಹಿಮಮಣಿ, (ಪದ್ಯ) ಪಕ್ಷಿಕಾಶಿ, ಪುಟ -೬೪

ಕರ್ನಾಟಕದಲ್ಲಿ ತಾಳ ವೃಕ್ಷಗಳು



↑ ಅ



↑ ಆ



← ಇ

ಕೃಪೆ :

ಅ- ಬಿ.ಬಿ. ಬಡಿಗೇರ , ಸಿಂಧನೂರು. ಆ- ಡಾ॥ ಅಮರೇಶ್ ಕುಂಬಾರ, ಲಿಂಗಸೂಗೂರು.

ಇ
The Book in India,NBT,New Delhi

ಸಾಹಿತ್ಯಕೃತಿಗೆ ಸ್ಥೂಲವಾಗಿ ಕೃತಿಯನ್ನು ಸಾಂಕೇತಿಸುವ, ಕೃತಿ ಪಾರಮ್ಯವನ್ನು ಸೂಚಿಸುವ ಕಲಾಕೃತಿ ಫಲಕದಮೇಲೆ ಇದ್ದರೆ, ಕೃತಿಗೆ ವಿವರವಾದ ಚಿತ್ರಗಳನ್ನು ತಾಳೆಗರಿಯಲ್ಲಿ ರಚಿಸಲಾಗಿರುತ್ತದೆ.

ಹಸ್ತಪ್ರತಿ ಚಿತ್ರರಚನಾ ಕಾರ್ಯದಲ್ಲಿ ಕಲಾವಿದನು ಮಾಡಿಕೊಳ್ಳಬಹುದಾದ ಹಂತಗಳು ಮುಖ್ಯವಾಗಿದ್ದು, ಅವುಗಳನ್ನು ನಾವು ಈ ಕೆಳಗೆ ತೋರಿಸಿದ ಕ್ರಮದಲ್ಲಿ ಜೋಡಿಸಿಕೊಳ್ಳುವುದರ ಮುಖಾಂತರ ಸಿದ್ಧತಾ ವಿಧಿ ವಿಧಾನಗಳನ್ನು ಹಲವು ಮಜಲುಗಳಲ್ಲಿ ಈ ರೀತಿ ರೂಪಿಸಿಕೊಳ್ಳಬಹುದು.

ಹಸ್ತಪ್ರತಿ ಚಿತ್ರರಚನಾ ವಿಧಿ-ವಿಧಾನಗಳು

I ಹಸ್ತಪ್ರತಿ ಫಲಕದ ಚಿತ್ರರಚನಾ ವಿಧಿ

1. ಫಲಕದ ಮಾಧ್ಯಮ
2. ಮರದ ಫಲಕ
3. ಲೋಹದ ಫಲಕ
4. ಆನೆದಂತ ಫಲಕ
5. ಮಿಶ್ರ ಫಲಕ

II ಹಸ್ತಪ್ರತಿಗಳ ಮೇಲೆ ಚಿತ್ರರಚನಾ ವಿಧಿ-ವಿಧಾನಗಳು

I ಹಸ್ತ ಪ್ರತಿ ಫಲಕದ ಮೇಲೆ ಚಿತ್ರ ರಚನಾ ವಿಧಿ-ವಿಧಾನಗಳು

1. ಫಲಕದ ಮಾಧ್ಯಮ :

ಹಸ್ತಪ್ರತಿಗಳಿಗೆ ರಕ್ಷಾಕವಚಗಂತಿರುವ ಫಲಕಗಳು ರಾಜ್ಯ ರಕ್ಷಿಸುವ ಕೋಟೆಗೋಡೆಗಳ ಕಾರ್ಯವನ್ನು ಅವು ನಿರ್ವಹಿಸುತ್ತವೆ. ಹಸ್ತಪ್ರತಿಗಳು ತಾಳೆಗರಿ, ಭೂರ್ಜಪತ್ರ, ಕಾಗದದ ಪತ್ರ, ಪಟಚಿತ್ರಗಳು ಯಾವುದೇ ಇದ್ದರೂ ಅವುಗಳನ್ನು ಕಾಯ್ದಿಟ್ಟು ಕೊಳ್ಳುವಲ್ಲಿ ಫಲಕಗಳು ಬಹುಮುಖ್ಯ ಪಾತ್ರವನ್ನು ನಿರ್ವಹಿಸುತ್ತವೆ. ಮಾನವ ದೇಹದೊಳಗಿನ ಎಲುಬಿನ ಹಂದರದಂತೆ ಹಸ್ತಪ್ರತಿಗಳ ಹೊರಗಿದ್ದು ಈ ಫಲಕಗಳು ಕಾಯುವ ಕಾರ್ಯವನ್ನು ನಿರ್ವಹಿಸುತ್ತವೆ. ಹಸ್ತಪ್ರತಿಗಳಿಗೆ ಇರುವ ಆಪತ್ತುಗಳಿಂದ ಸಂರಕ್ಷಿಸಲು ಕೂಡಾ ಈ ಫಲಕಗಳು ರಕ್ಷಣೆ ನೀಡುತ್ತವೆ. ಗಾಳಿ, ಬೂಷ್ಟ ತೇವಾಂಶಗಳಿಂದ ರಕ್ಷಣೆ ಒದಗಿಸಿದಂತೆ, ಗೆದ್ದಲು, ಜಿರಲೆ, ಬೆಳ್ಳಿಮೀನುಗಳಂತಹ ಕೀಟಗಳಿಂದ ಇಲಿ, ಹೆಗ್ಗಣ ಮನೆಯೊಳಗೆ ಅಲ್ಲಲ್ಲಿ ಗೂಡು ಕಟ್ಟುವ ಪಕ್ಷಿಗಳಿಂದಲೂ ಈ

ಫಲಕಗಳು ಸಂರಕ್ಷಣೆಯನ್ನು ಒದಗಿಸಿ ಕೃತಿಗಳ ಆಯುರ್ಮಾನವನ್ನು ವೃದ್ಧಿಸುತ್ತವೆ.

2. ಮರದ ಫಲಕ :

ಕರ್ನಾಟಕದ ಹಸ್ತಪ್ರತಿಗಳಿಗೆ ಮರದ ಫಲಕಗಳು ಸಾಮಾನ್ಯವಾಗಿದ್ದು ಈ ಫಲಕಗಳನ್ನು ಕೀಟ ನಿರೋಧಕ ಶಕ್ತಿ ಇರುವ ಬೇವು, ಬೀಟೆ, ಗುಗ್ಗಳ, ತೇಗ, ಹೊನ್ನೆ ಜಾಲಿ ಮತ್ತು ಹುಣಸೆ ಮರಗಳ ಕೆಚ್ಚಿನಿಂದ ತಯಾರಿಸುವಂತೆ ಸಾಮಾನ್ಯ ಜಾತಿಯ ಹಲವು ಮರದ ಹಲಗೆಗಳಿಂದಲೂ ರಚಿಸುತ್ತಾರೆ. ಲಿಪಿಕಾರ ಆಯ್ದುಕೊಂಡ ಗರಿಗಳ ಅಳತೆಗೆ ಸಮವಿದ್ದರೆ ಕೆಲವು ಸಲ ಗರಿಗಳಿಗಿಂತ ಸುತ್ತಲೂ ಒಂದು ಕಿರುಬೆರಳಿನ ತುದಿಯ ದಪ್ಪದ ಅಳತೆಯಷ್ಟು ಹೆಚ್ಚು ವಿಸ್ತಾರದಲ್ಲಿ ಫಲಕವನ್ನು ನಿರ್ಮಿಸಲಾಗುವುದು. ಇದನ್ನು ಸಮಗೊಳಿಸಿ, ಉಸುಕಿನಲ್ಲಿ, ಅರಳಿನಲ್ಲಿ ತಿಕ್ಕಿ ರಂಧ್ರಕೊರೆದು, ನುಣುಪುಗೊಳಿಸಲಾಗುವುದು. ಈ ಕಾರ್ಯವನ್ನು ಬಡಿಗ ಮೊದಲಹಂತದ ಕಾರ್ಯದಲ್ಲಿ ಮಾಡಿದಂತೆ ಎರಡನೇ ಹಂತದಲ್ಲಿ ಲೋಹಶಿಲ್ಪಿ ಫಲಕದ ಮೂಲೆಗಳಿಗೆ, ಬದಿಗಳಿಗೆ ರಂಧ್ರಗಳಿಗೆ ಕಬ್ಬಿಣ, ಹಿತ್ತಾಳೆ, ಬೆಳ್ಳಿ ಲೋಹದ ಅಲಂಕೃತ ಬಿರುಡೆಗಳನ್ನು ಜೋಡಿಸಿ ದೇಶಕಾಯುವ ಸೈನಿಕನಿಗೆ ರಕ್ಷಣೆ ನೀಡುವ ಉಡುಗೆಗಳನ್ನು ನೀಡುವಂತೆ ಫಲಕ ಹಾಳಾಗಬಹುದಾದ ಆಯಕಟ್ಟಾದ ಪ್ರದೇಶಗಳಿಗೆ ಲೋಹಫಲಕಗಳನ್ನು ಜೋಡಿಸಿ ಕಾಯಕಲ್ಪ ಮಾಡುವನು.

ಮೂರನೆಯದು ಕಲಾತ್ಮಕ ಹಂತ, ವರ್ಣಗಾರ ಅಥವಾ ವರ್ಣಶಿಲ್ಪಿಯ ಹಂತ ಇದಾಗಿದೆ. ಫಲಕಬಾಳಲು ಬಡಿಗ ಮತ್ತು ಲೋಹ ಶಿಲ್ಪ ಮಾಡಿರುವ ಕಾರ್ಯದಂತೆ ಬಣ್ಣ ಬಾಳುವ, ಫಲಕ ಬಾಳುವ ಕಾರ್ಯವನ್ನು ಕಲಾವಿದ ಕಲಾತ್ಮಕವಾಗಿ ಮಾಡುತ್ತಾನೆ.

ಪ್ರಾಥಮಿಕ ಹಂತದಲ್ಲಿ ಬಣ್ಣ ಮತ್ತು ಫಲಕಗಳು ಒಂದನ್ನೊಂದು ಬಿಗಿದು ಹಿಡಿದುಕೊಳ್ಳಲು ಸುಣ್ಣದ ಕಲ್ಲನ್ನು ಬಳಪದ ಕಲ್ಲನ್ನು ತೇಯ್ದು ನಿರ್ಮಿಸಿದ ಬಣ್ಣವನ್ನು ಲೇಪಿಸುತ್ತಾರೆ. ಇದು ನಸುಬಿಳಿಯದಾಗಿದ್ದು ಇದನ್ನು 'ಸುದ್ದಾ' ಎಂದು ಕರೆಯುತ್ತಾರೆ. ಹಿಡಿತಕ್ಕೆ ಬಿಗಿ ಬರಲಿಯೆಂದು ಇದರಲ್ಲಿ ಜಾಲಿ, ಬೇವು, ಹರವಾಳದ ಮರಗಳ ಅಂಟುಗಳನ್ನು ಬಳಸಿದಂತೆ ಮೀನಿನ ಸರಿ, ಮರವಜ್ರವನ್ನು ಮಿಶ್ರಮಾಡಿ ಪ್ರಾಥಮಿಕವಾಗಿ ಈ ಮಿಶ್ರಣ ಬಳಿಯುತ್ತಾರೆ. 'ಸುದ್ದಾ' ಎಂಬ ಪದದ ಮೂಲವು ಹಸ್ತಪ್ರತಿ ಚಿತ್ರಕಲಾವಿದರು ಬೆಳೆದು ಬಂದ ಬದುಕಿನ ಮೂಲವಾಗಿದೆ. ಭಾಷೆಗೆ ದೇಸೀಯ ಗಡಿ ಇರುತ್ತದೆ. ಆದರೆ ಕಲೆಗೆ ಅದರಲ್ಲೂ ಕುಶಲ ಕಲೆಗೆ ದೇಶಾತೀತ ವಿಸ್ತಾರವಾದ ಹಿನ್ನೆಲೆಯೂ ಇರುವುದರಿಂದ ಕಲಾವಿದರು ಬಂದ ನೆಲದ ಹಿನ್ನೆಲೆ ಈ ಪದಕ್ಕಿದೆ, ಸದ್ಯಕ್ಕೆ "ಸುದ್ದಾ" ಎಂಬುದನ್ನು ಕೇವಲ ಪ್ರಾಥಮಿಕ ಲೇಪನಾ ಸಾಮಗ್ರಿ ಎಂದು ನಾವು ಈಗ ಸ್ವೀಕರಿಸಬೇಕಾಗಿದೆ.

ಎರಡನೇ ವರ್ಣಗಾರಿಕೆಯ ಹಂತವೇ ಕಲಾವಿದನ ಭಾವವನ್ನು ಬಯಲುಗೊಳಿಸುವ ರಂಗಸ್ಥಲದ ಹಂತ ಪಠ್ಯದ ನಾಯಕನಿಗೆ ನಾಯಕತ್ವ ನೀಡಿ ಸಹಾಯಕ ಪಾತ್ರಗಳನ್ನು ನಿಲ್ಲಿಸುವುದು, ಕೂಡಿಸುವುದು, ಕುಣಿಸುವುದು ಆತನಿಗಿರುವ ಕಲಾವಂತಿಕೆಯ ಸ್ವಾತಂತ್ರ್ಯವನ್ನು ಅವಲಂಬಿಸಿದೆ. ಫಲಕದ ಮೇಲಿರುವ ಚಿತ್ರಗಳು ಕರ್ನಾಟಕದ ಎಲ್ಲ ಹಸ್ತಪ್ರತಿ ಭಂಡಾರಗಳಲ್ಲಿ ವಿಪುಲವಾಗಿ ಇದ್ದರೂ, ಅದ್ವಿತೀಯವಾಗಿರುವುದು ಮೈಸೂರಿನ ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಯ ಹಸ್ತಪ್ರತಿ ಭಂಡಾರದಲ್ಲಿ ಬಸವ

ಕರ್ನಾಟಕದ ಹಸ್ತಪ್ರತಿ ಚಿತ್ರಕಲೆ- ಒಂದು ಅಧ್ಯಯನ

ಶಿವಯೋಗ ಮಂದಿರದ
ಅಲಂಕೃತ ಹಸ್ತ ಪ್ರತಿ ಫಲಕಗಳು



ಕೃಪೆ:
ಡಾ॥ಸ್ನೇಹಾ ಭೂಸನೂರ್
ಉಪನ್ಯಾಸಕರು, ಕರ್ನಾಟಕ ವಿಶ್ವವಿದ್ಯಾಲಯ ಸ್ನಾತಕೋತ್ತರ ಕೇಂದ್ರ
ಶ್ರೀ ಬಸವೇಶ್ವರ ಮಹಾವಿದ್ಯಾಲಯ, ಬಾಗಲಕೋಟ.

ಪುರಾಣದ ಕರ್ತೃ ಭೀಮ ಕವಿಯ ಪರಿಕಲ್ಪನೆಯಂತೆ ಮೇಲಿರುವ ಫಲಕದ ಮೇಲೆ ಶಿವ ಪಾರ್ವತಿಯರು ಪರಿವಾರದೊಂದಿಗೆ ಆಸನಸ್ಥರಾಗಿದ್ದರೆ ಪಕ್ಕದಲ್ಲಿ ಮಹರ್ಷಿನಾರದರು ತಂತಿಯವಾದ್ಯ ಬಾರಿಸುತ್ತಾ ಭಕ್ತಿಪೂರ್ಣ ಗಾಯನದಲ್ಲಿ ತಲ್ಲೀನರಾಗಿದ್ದಾರೆ. ಹಿಂದಿನ ಫಲಕದಲ್ಲಿರುವ ದೇವತೆಗಳು ಬಹುಶಃ ನಾರದರ ಭಕ್ತಿಗಾಯನಕ್ಕೆ ಪುಳಕಿತರಾಗಿ ಕುಣಿಯುತ್ತಿದ್ದಾರೆ. ಈ ರೀತಿ ಚಿತ್ರಕಲಾವಿದನು ಕವಿಯ ಭಾವುಕತೆಯನ್ನು, ಭಕ್ತಿ ಶ್ರದ್ಧೆಗಳನ್ನು ಸಾಕಾರಗೊಳಿಸಿದ್ದಾರೆ. ದೇವತೆಗಳ ಪಾರಮ್ಯವನ್ನು , ತಾರತಮ್ಯವನ್ನು ಸಾದೃಶ್ಯಗೊಳಿಸಿದ್ದಾನೆ.

ಫಲಕದ ಬಣ್ಣಗಾರಿಕೆಯಲ್ಲಿ ಪ್ರಾಥಮಿಕ ವರ್ಣಗಳಾದ ಕೆಂಪು, ಹಳದಿ, ನೀಲಿಯನ್ನು ಸಹಾಯಕವಾಗಿ ಬಿಳಿಯನ್ನು ಉಪಯೋಗಿಸುತ್ತಾರೆ. ಕರ್ನಾಟಕದ ವರ್ಣಲೋಕದಲ್ಲಿ ಕೆಂಪು ಬಣ್ಣವನ್ನು ಶಿವನೆಂದು ಹಳದಿಯನ್ನು ಬ್ರಹ್ಮನೆಂದು, ನೀಲಿಯನ್ನು ವಿಷ್ಣುವೆಂದು ಪರಿಗಣಿಸಲಾಗಿದೆ. ಜಗತ್ತಿಗೆ ಬ್ರಹ್ಮ ವಿಷ್ಣು ಮಹೇಶ್ವರರನ್ನು Generator, Operator ಮತ್ತು Destructor ಎಂದು ಸಾಂಕೇತಿಕವಾಗಿ GOD ಎಂದು ಕರೆಯುವಂತೆ ವರ್ಣಲೋಕದಲ್ಲಿ ಹಳದಿ, ನೀಲಿ, ಕೆಂಪು ವರ್ಣಗಳನ್ನು ಮೂಲ ಬಣ್ಣಗಳೆಂದು ಕರೆಯುತ್ತಾರೆ. ಸಮಯ, ಸಂದರ್ಭಗಳಿಗೆ ಅನುಗುಣವಾಗಿ ಮೂಲಬಣ್ಣಗಳನ್ನು ಅವುಗಳ ಸಂಕರದಿಂದ ಜನಿಸುವ ತಲೆಮಾರುಗಳ ಬಣ್ಣಗಳಿಂದಲೂ ವರ್ಣಗಾರಿಕೆಯು ತಲೆ ತಲೆಮಾರುಗಳಿಂದ ಬಣ್ಣಗಾರಿಕೆಯಾಗಿ ಬೆಳೆದು ಬಂದಿದೆ.[೧]

3. ಲೋಹದ ಫಲಕ :

ಕರ್ನಾಟಕದ ಹಸ್ತಪ್ರತಿಗಳಿಗೆ ಮರದ ಫಲಕಗಳನ್ನು ಬಳಸಿದಂತೆ ಅಲ್ಲಲ್ಲಿ ಕಬ್ಬಿಣ, ತಾಮ್ರ, ಬೆಳ್ಳಿಯ ತಗಡುಗಳ, ಮಿಶ್ರಲೋಹಗಳ ಫಲಕಗಳನ್ನು ಅಲ್ಲಲ್ಲಿ ಬಳಸಿದ್ದು ಕಂಡು ಬರುತ್ತದೆ. ವರ್ಣಗಾರಿಕೆ ಇರದೆ ವರ್ಣ ಶಿಲ್ಪಿಯ ನೆರವಿನಿಂದ ಬರೆದ ಹಲವು ಹೂ-ಬಳ್ಳಿ, ಸುಳುವು ರೇಖಾ ಚಿತ್ರಗಳನ್ನು ಲೋಹ ಶಿಲ್ಪಿ ರಚಿಸಿರುವುದನ್ನು ಕಾಣುತ್ತೇವೆ. ಮಹಮ್ಮದಿಯರ ಹಸ್ತಪ್ರತಿ ಫಲಕಗಳ ಮೇಲೆ ಬೆಳ್ಳಿ, ಬಣ್ಣದ ಹರಳು, ಬಂಗಾರದ ರೇಖಿ ಹಲವು ವಿಧದ ಬೆಸುಗೆಯ ಲೋಹದ ಫಲಕಗಳನ್ನು, ಲೋಹದ ಸಂಪುಟಗಳನ್ನು ಕಾಣುತ್ತೇವೆ. ಇದರಲ್ಲಿ ವರ್ಣಶಿಲ್ಪಿಗಿಂತ ಲೋಹಶಿಲ್ಪಿಯ ಕುಶಲತೆ ಪ್ರಥಮವಾಗಿರುತ್ತದೆ.

4. ಆನೆದಂತದ ಫಲಕಗಳು :

ಕೆಲವು ಹಸ್ತಪ್ರತಿಗಳಿಗೆ ಅದ್ವಿತೀಯವಾಗಿರುವ ನಯನಾಜೂಕಿನ ಆನೆಯ ದಂತದ ಫಲಕಗಳನ್ನು ಬಳಸಲಾಗಿರುತ್ತದೆ. ಮೇಲುಕೋಟೆಯ ಸಂಸ್ಕೃತ ಸಂಶೋಧನಾ ಅಕಾಡಮಿಯ ಕೇಂದ್ರದಲ್ಲಿ ಇಂತಹ ಆನೆದಂತದ ಹಸ್ತಪ್ರತಿಯ ಫಲಕವನ್ನು ಸಂಗ್ರಹಿಸಿ ಇಡಲಾಗಿದೆ. ಫಲಕ ಅಂದಾಜು ನಾಲ್ಕು ಸೆಂ.ಮೀ. ಅಗಲವಾಗಿದ್ದು 40 ಸೆಂ.ಮೀ. ಉದ್ದವಾಗಿದೆ. ಫಲಕದ ತುಂಬೆಲ್ಲಾ ಮನಮೋಹಕ, ಮುದಗೊಳಿಸುವ ಹೂವು, ಬಳ್ಳಿ, ಪ್ರಾಣಿ, ಪಕ್ಷಿಗಳ ಆಕೃತಿಗಳಿವೆ. ಇಂತಹ ಫಲಕಗಳಲ್ಲಿ ಕಲಾವಿದ, ದಂತಶಿಲ್ಪಿ ಮತ್ತು ಕವಿ ಪಾತ್ರ ಮೂರು ಒಂದೆಡೆಗೊಂಡು ಕಾರ್ಯನಿರ್ವಹಿಸುತ್ತವೆ.

---

೧. ಗುರುದತ್ತಗುರುಜಿ : ರಾಯಚೂರ ಸಹಜ ಸ್ಥಿತಿ ಯೋಗ ಕೇಂದ್ರದ ಉಪನ್ಯಾಸಗಳಿಂದ


5. ಮಿಶ್ರಫಲಕಗಳು :

ಕೆಲವು ಫಲಕಗಳು ಹಲವಾರು ಕುಶಲ ಕರ್ಮಿಗಳ ಸಹಾಯ, ಸಹಕಾರಗಳಿಂದ ಸಂಯುಕ್ತವಾಗಿ ರೂಪಗೊಂಡಿರುತ್ತದೆ. ಮರದ ಫಲಕಕ್ಕೆ ಲೋಹದ ಅಲಂಕಾರವಾಗಿರುವಂತೆ ಕೆಲವು ಸಲ ಮರದಫಲಕ ಆನೆಯದಂತದ ಫಲಕ ಸೇರಿಸಿ ಇನ್ಲೆ ಕಾರ್ಯವೂ ನಡೆದಿರುತ್ತದೆ. ಉದಾಹರಣೆಗಾಗಿ ಹೇಳುವುದಾದರೆ ಮೈಸೂರು ವಿಶ್ವವಿದ್ಯಾಲಯ ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಯಲ್ಲಿರುವ ಅಳಿಯ ಲಿಂಗರಾಜು ವಿರಚಿತ ''ಸೌಗಂಧಿಕಾ ಪರಿಣಯ'' ವನ್ನು ಹೆಸರಿಸಬಹುದು. ಪತ್ರದ ಮಾಧ್ಯಮಕ್ಕೆ ಬಹು ಉದ್ದದ ಅಂದಾಜು 28 ಅಂಗುಲ ಉದ್ದದ ತಾಳೆಗರಿ ಬಳಸಿದಂತೆ ಫಲಕಗಳಿಗೆ ಬೀಟೆ ಮರದ ಕಡುಕಂದು ವರ್ಣದ ಹಲಗೆಗಳನ್ನು ಬಳಸಲಾಗಿದೆ. ಅವುಗಳ ಮೇಲೆ ಮೂಲೆ ಮೂಲೆಗಳಲ್ಲಿ ದಂತದ ಬಿಳಿಯ ರೇಖೆಗಳನ್ನು ಬಳಸಲಾಗಿದೆ. ಇದೆಲ್ಲವನ್ನು ಸಂರಕ್ಷಿಸುವ ಕ್ರಮದಂತೆ ಬೀಟೆ ಮರದ ಪೆಟ್ಟಿಗೆಯೂ ಇದ್ದು ಅದರ ಮೇಲೂ ಆನೆ ದಂತಗಳನ್ನು ಬಳಸಿ ನಿರ್ಮಿಸಿರುವ ನಕ್ಷಾಚಿತ್ರಗಳಿವೆ.

ಇಂತಹ ಮಿಶ್ರಫಲಕಗಳು ಬೆಳೆಯುತ್ತಿರುವ ಕುಶಲಗಾರಿಕೆ, ಕಲಾವಂತಿಕೆ, ಹಣಕಾಸಿನ ಸ್ಥಿತಿ, ಸಾಹಿತ್ಯ ಪ್ರೋತ್ಸಾಹದ ಪ್ರತೀಕವಾಗಿರುವಂತೆ ಆಳುವ ಅರಸರ, ಸಾಮಂತರ, ಸಹಾಯಕ, ಸಾಮಾಜಿಕ ಜೀವನದ, ಕನ್ನಡಿಯಾಗಿಯೂ ರೂಪತಾಳಿ ಇತಿಹಾಸಕ್ಕೆ ಆಕರವಾಗಿ ನಿಂತಿರುತ್ತವೆ.

II ಹಸ್ತಪ್ರತಿಗಳ ಮೇಲೆ ಚಿತ್ರರಚನಾ ವಿಧಿ-ವಿಧಾನಗಳು :

ಹಸ್ತಪ್ರತಿಯೊಳಗಿನ ಚಿತ್ರಗಳ ತೈಯಾರಿಯ ವಿಧಾನಗಳಲ್ಲಿ ಮುಖ್ಯವಾಗಿ ಎರಡು



ವಿಧಾನಗಳನ್ನು ಮಾಡಬಹುದು, ಅವುಗಳ ಒಳಗಿನ ವಿಷಯಗಳನ್ನು ಅಧ್ಯಯನದ ಅನುಕೂಲಕ್ಕಾಗಿ ಈ ಕೆಳಗಿನಂತೆ ವರ್ಗೀಕರಿಸಿಕೊಂಡು ಹಂತ ಹಂತವಾಗಿ ಅಭ್ಯಾಸ ಮಾಡಬಹುದು.

I. ಪೂರ್ವಸಿದ್ಧತಾ ಹಂತ :

ಇದೊಂದು ಮೊದಲಹಂತದ ಕಾರ್ಯವಾಗಿದ್ದು ಹಸ್ತಪ್ರತಿಯೊಳಗಿನ ಸಾಹಿತ್ಯಕ್ಕೆ ಚಿತ್ರ ಮೂಡಿಸುವ ಅಥವಾ ಶಬ್ದಮಾಧ್ಯಮದ ಸಾಹಿತ್ಯ ಸ್ವರೂಪವನ್ನು ಚಿತ್ರಸಂಯೋಜನಾ ಮಾಧ್ಯಮಕ್ಕೆ ರೂಪಾಂತರಗೊಳಿಸುವ ಹಂತವಾಗಿದೆ. ಇದನ್ನು ಸಂಗೀತದ ಭಾಷೆಯಲ್ಲಿ ಹೇಳುವುದಾದರೆ ರಾಗ - ತಾಳಗಳ ಸಮಾಗಮ ಎಂದು ಹೇಳಬಹುದು ಅಥವಾ ಎರಡು ಭಿನ್ನ ಪ್ರದೇಶಗಳ ಹಾಡುಗಾರಿಕೆ ಅಥವಾ ಎರಡು ವಾದ್ಯಗಳ ಜುಗಲ್ಬಂದಿ ಎಂದೂ ಹೇಳಬಹುದು. ಹಿಂದೂಸ್ತಾನಿ ಸಂಗೀತಗಾರ ಹೇಳುವುದನ್ನೇ, ಹೇಳುವಷ್ಟೇ ವಿಷಯವನ್ನು ಕರ್ನಾಟಕ ಸಂಗೀತಗಾರ ಹೇಳುತ್ತಾನೆ ಎನ್ನಬಹುದು. ಹಿಂದುಸ್ತಾನಿ ಸಂಗೀತಗಾರ ರಾಗ ಮಾಲಕಂಸನ್ನು ಹೇಳಿದರೆ ಕರ್ನಾಟಕ ಸಂಗೀತಗಾರ ಹಿಂದೋಳವನ್ನು ಹೇಳಬಲ್ಲ ನೆಲೆ ಭಿನ್ನವಾದರೂ ಗುರಿ ಒಂದೇ ಆಗಿರುತ್ತದೆ ಎಂದು ಹೇಳುವುದೇ ಈ ವಿಷಯದ ಹಂತ.

ಇದನ್ನು ಲೇಖ್ಯ ವಸ್ತು ತಯಾರಿ ಹಂತ, ವಿಷಯಗ್ರಹಿಕೆ ಹಂತ, ಸಮಾಲೋಚನಾ ಹಂತ ಮತ್ತು ಕಡತದಲ್ಲಿ ಪ್ರಾಯೋಗಿಕ ಹಂತಗಳೆಂದು ಸಮೀಕ್ಷಾ ಹಂತಗಳನ್ನು ನಾಲ್ಕು ಭಾಗಗಳಲ್ಲಿ ವರ್ಗೀಕರಣ ಮಾಡಿಕೊಳ್ಳಬಹುದು.

1. ಲೇಖ್ಯ ವಸ್ತು ಸಿದ್ಧತಾ ಹಂತ :

ಇದು ಹಸ್ತಪ್ರತಿಯ ಪ್ರಾರಂಭಿಕ ಹಂತವಾಗಿದ್ದು ಹಸ್ತಪ್ರತಿಯ ಲಿಪಿಕಾರ ಮತ್ತು ಚಿತ್ರಗಾರ ಉಭಯತರೂ ತಯಾರಿ ಮಾಡಿಕೊಳ್ಳಬಹುದಾದ ಹಂತವಾಗಿದೆ. ಯಾವ ಪ್ರತಿಯಲ್ಲಿ ಅವರು ಕೃತಿಯನ್ನು ನಿರ್ಮಿಸುತ್ತಾರೆ ಎಂಬುದನ್ನು ನಿರ್ಣಯಿಸುವಂತಹ ಮುಖ್ಯಹಂತ ಇದಾಗಿರುತ್ತದೆ. ಪ್ರಾದೇಶಿಕ ಹಿನ್ನೆಲೆಯೊಂದಿಗೆ ಕೃತಿಯ ರಚನೆಗೆ ಭೂರ್ಜಪತ್ರ, ತಾಳೆಗರಿ ಅಥವಾ ಕಾಗದ ಯಾವುದು ಎಂಬುದು ಇಲ್ಲಿ ನಿರ್ಧಾರವಾಗುತ್ತದೆ. ಭೂರ್ಜಪತ್ರವು ಹಿಮಾಲಯದ ಪರಿಸರದಲ್ಲಿ ಬರುವುದರಿಂದ, ತಾಳೆಗರಿಯ ಹಿನ್ನೆಲೆ ಅಥವಾ ಕಾಗದದ ಪ್ರತಿಯ ಹಿನ್ನೆಲೆಯೊಂದಿಗೆ ಹಸ್ತಪ್ರತಿ ಚಿತ್ರಕಲೆಯ ವಿಧಿ ವಿಧಾನಗಳ ವಿವರಗಳನ್ನು ಒಂದೊಂದಾಗಿ ಅಭ್ಯಾಸಮಾಡುವ ತಾಳೆಗರಿಗಳ ಬರವಣಿಗೆಯ ಬಗೆಗೆ ಡಾ|| ಎಂ.ಎಂ.ಕಲಬುರ್ಗಿಯವರು ಈ ರೀತಿ ವಿವರಿಸುತ್ತಾರೆ..... ತಾಳೆಗರಿಗಳನ್ನು ಬರವಣಿಗೆಗೆ ಸಿದ್ಧಮಾಡುವ ವಿಧಾನದ ಬಗ್ಗೆ ಬಹುಶಃ ಖಚಿತವಾಗಿ ತಿಳಿದು ಬಂದಿಲ್ಲ. ''ಮರದಿಂದ ಎಲೆಯ ಮೇಲೆ ಹೊರಟು, ಇನ್ನೇನು ಎಲೆ ಬಿಟ್ಟು ಹರಡಿಕೊಳ್ಳುತ್ತದೆ ಎನ್ನುವಷ್ಟರಲ್ಲಿ ಅವುಗಳನ್ನು ಕತ್ತರಿಸಿ ತಂದು. ಒಂದು ವಾರಕಾಲ ಬಿಸಿಲಿನಲ್ಲಿ ಒಣಗಿಸುತ್ತಿದ್ದರು. ಅನಂತರ ಅವುಗಳನ್ನು ನಾಲ್ಕು ತಿಂಗಳವರೆಗಾದರೂ ನೆಲದಲ್ಲಿ ಹೂಳಿ, ಮತ್ತೆ ತೆಗೆದು ಶುದ್ಧಗೊಳಿಸಿ, ಬೇಕಾದ ಅಳತೆಗೆ ಕತ್ತರಿಸಿ ಅಡಿಗೆ ಮನೆಯ ಅಟ್ಟಗಳಲ್ಲಿ ಇಡುತ್ತಿದ್ದರು. ಅವುಗಳು ಅಡಿಗೆ ಮನೆಯ ಹೊಗೆಯಿಂದ ಹದಗೊಳ್ಳುತ್ತಿದ್ದವು. ಹೀಗೆ ಹದಗೊಂಡವನ್ನು ತಮಗೆ

ಸೃಷ್ಟಿಶೀಲವಾದ ವರ್ಣಶಿಲ್ಪಿಯ ಪ್ರತಿಭೆ ರೂಪ ರಚನೆ ಮಾಡುತ್ತದೆಯೋ ಆ ರೂಪದ ಅಥವಾ ಪ್ರತಿಮೆಯ ವಿಚಾರವಾಗಿ ನಾವು ಕೇಳುವ ಪ್ರಶ್ನೆಗಳೆಂದರೆ. ಅದು ಸಜೀವವಾಗಿದೆಯೇ ? ಸುಂದರವಾಗಿದೆಯೇ ? ಪ್ರೇಕ್ಷಕರಲ್ಲಿ ತನಗೆ ಆಧಾರವಾಗಿದ್ದ ಆ ಮೂಲಾನುಭವವನ್ನು ಪ್ರಚೋದಿಸಲು ಸಮರ್ಥವಾಗುತ್ತದೆಯೋ ಅಷ್ಟಷ್ಟು ಮಟ್ಟಿಗೆ ಅದು ಸತ್ಯವಾಗುತ್ತದೆ; ಸುಂದರವೂ ಆಗುತ್ತದೆ. ಹಾಗೆ ಸತ್ಯವಾಗಿರುವಿಕೆಯಲ್ಲಿಯೆ ಅದರ ಸುಂದವಾಗಿರುವಿಕೆಯೂ ಒಡಗೂಡಿರುತ್ತದೆ. ಆದ್ದರಿಂದಲೇ ಅಲ್ಲಿ ಸತ್ಯ ಮತ್ತು ಸೌಂದರ್ಯಗಳಿಗೆ ನಾವು ಮಾಡುವ ಕೇವಲ ಭೇದ ಕಲ್ಪನೆ ಅರ್ಥ ರಹಿತ [೧೭೬] ಈ ರೀತಿ ಕೃತಿಯೆಂಬುದು ಪರಿಪೂರ್ಣವಾಗಿರಬೇಕು.

ಭೌತದಾಚೆಯ ಕಲೆ ಅಥವಾ ತಾಂತ್ರಿಕ ಕಲೆ :

ಇದನ್ನು ಶಿಷ್ಟ, ಸಾಂಪ್ರದಾಯ ಹಂತದ ನಂತರದ ಸಾರ್ವತ್ರಿಕವಲ್ಲದ ಭೌತದಾಚೆಯ ಚಿತ್ರಕಲೆ ಎನ್ನಬಹುದು. ಇದೊಂದು ಸಂಕೇತಗಳೆನ್ನೇ ಆಧರಿಸಿ ಸಿದ್ಧಪಡಿಸುವ ತಂತ್ರವಾಗಿದೆ. ಭಾರತೀಯ ಯೋಗ ಶಾಸ್ತ್ರದ ನಂತರದ ಹಟಯೋಗದಲ್ಲಿ ಹಲವು ಧರ್ಮ ಶಾಸ್ತ್ರಗಳಲ್ಲಿ, ಸ್ತ್ರೀ ದೇವತೆಯರ ಕುಂಡನಿಯಲ್ಲಿ ಮಂಡಲಗಳಲ್ಲಿ ಕಾಣಬಹುದಲ್ಲದೆ ವೀರಶೈವ ಧರ್ಮದ ಸಕೀಲ, ಉದ್ಧರಣೆ, ಕರುಣ ಹಸಗೆ ಉದ್ಧರಣೆಗಳು ಈ ಮಾರ್ಗದಲ್ಲಿಯೇ ಬರಬಹುದು ವೈಯಕ್ತಿಕ ಅನಿಸಿಕೆ. ಇವೆಲ್ಲವೂ ಭಿನ್ನಮಾರ್ಗದ ವಾಮಾಚಾರಗಳಾಗಿಯೂ ಕೆಲವು ಬಳಕೆಯಲ್ಲಿವೆ.

ಈ ವಿಷಯಕುರಿತು ಬಿ. ಆರ್. ವಿಜಯ ಕುಮಾರ್ (ಅನು:ಎಂ.ಎಚ್. ಕೃಷ್ಣಯ್ಯ) ಅವರ ತಂತ್ರ ಸಿದ್ಧಾಂತ ವಿಚಾರ ಹೀಗಿದೆ. ''ತಂತ್ರ'' ಎನ್ನುವ ಶಬ್ದವನ್ನು ಕೇಳಿದ ಕೂಡಲೇ ಸಾಮನ್ಯವಾಗಿ ಅದುಯಾವದೋ ಒಂದು ನಿಗೂಢ, ರಹಸ್ಯ ಆಚರಣೆ ಅಥವಾ ಪದ್ಧತಿಗೆ ಸಂಬಂಧಿಸಿದ್ದು ಎಂಬ ಭಾವನೆ ಜನರಲ್ಲಿ ಮಾಡುತ್ತದೆ. ಅದು ಅನಾಗರಿಕ ಜಗತ್ತಿನ, ಭಯ ಭೀತಿ ಉಂಟುಮಾಡುವ ಯಾವುದೋ ನಿಷಿದ್ಧ ಪದ್ಧತಿ ಎನಿಸಿದರೂ ಆಶ್ಚರ್ಯವಿಲ್ಲ, ಜನ ಸಾಮಾನ್ಯರಲ್ಲಿ ಇಂತಹ ತಪ್ಪು ಗ್ರಹಿಕೆ ಪ್ರಚಲಿತವಾಗಿರುವುದು ದುರದೃಷ್ಟಕರ. ಇದರಿಂದಾಗಿ ಯೋಗದ ಅನುಭವದಂತೆಯೇ ವಿಭಿನ್ನವಾದ ಒಂದು ಅನುಭವ ಪಡೆಯುವ ಅವಕಾಶದಿಂದ ವಂಚಿತರಾದಂತೆ ಆಗಿದೆ. ಆದರೆ ವಾಸ್ತವವಾಗಿ 'ತಂತ್ರ' ಎಂದರೆ ಏನು ?

ತಾಂತ್ರಿಕರು ತಂತ್ರದ ಪರಿಕಲ್ಪನೆಯ ಮೂಲವನ್ನು ವೇದಗಳಲ್ಲಿದೆ ಎನ್ನುತ್ತಾರೆ. ಅದೊಂದು ತತ್ವ, ಸಿದ್ಧಾಂತ, ಉಪನಿಷತ್ತುಗಳಲ್ಲಿನ ಏಕದೇವೋಪಾಸನೆಯ ಸಾರ ಅದರಲ್ಲಿದೆ ಎನ್ನುತ್ತಾರೆ. ಪುರಾಣಗಳಲ್ಲಿನ ಭಕ್ತಿ ಆಚರಣೆ, ಪತಂಜಲಿ ಸೂತ್ರದ ಯೋಗ ವಿಧಾನಗಳು, ಅಥರ್ವಣ ವೇದದಲ್ಲಿ ಪ್ರತಿ ಪಾದಿತವಾಗಿರುವ ಮಂತ್ರದ ಗುಣಸತ್ವ ಇವೆಲ್ಲದರ ತಿರಳೂ, ಭಾರತದಲ್ಲಿ ಸಾವಿರಾರು ವರ್ಷಗಳಿಂದ ರೂಪಿತವಾಗಿರುವ ವಿವಿಧ ಸಿದ್ಧಾಂತ

---

೧೭೬. ರಾಷ್ಟ್ರಕವಿ ಕುವೆಂಪು : ದಾರ್ಶನಿಕ ಕಾವ್ಯ ಮೀಮಾಂಸೆ : ಪುಟ -೪೧.

೧೭೭. ಬಿ.ಆರ್. ವಿಜಯ ಕುಮಾರ್ : ತಂತ್ರ ಸಿದ್ಧಾಂತ ಮತ್ತು ಸಮಕಾಲೀನ ತಂತ್ರಕಲೆ : ನಿಜದ ನೆಲೆ ಪುಟ -೩.೭೭



ವ್ಯವಸ್ಥೆಗಳ ಸತ್ಯವೂ ಅದರಲ್ಲಿದೆ. ಎಂಬುದು ತಂತ್ರದ ಅನುಯಾಯಿಗಳ ನಂಬಿಕೆಯಾಗಿದೆ. [೧೭೭]

ಈ ತಂತ್ರದ ಉಪಾಸನೆಯಲ್ಲಿ ಸಂಕೇತಗಳು ಪ್ರಮುಖ ಪಾತ್ರ ನಿರ್ವಹಿಸುತ್ತವೆ. ಈ ಸಂಕೇತಗಳು ಕೆಲವು ಸಲ ಪರಿಕಲ್ಪನೆಯಲ್ಲಿ ಮೈತಳೆದಿರುವ ವಿವಿಧ, ವಿಚಿತ್ರ ಪ್ರಾಣಿ, ಪಕ್ಷಿ, ಉರುಗ, ಮೀನುಗಳಂತಹ ಆಕೃತಿಗಳಾಗಿರಬಹುದು ಅಥವಾ ರೇಖಾ ಗಣಿತದ ತ್ರಿಕೋನ, ಚೌಕೋನ, ಪಂಚ, ಬಹುಭುಜಾಕೃತಿಗಳೊಂದಿಗೆ ವರ್ತುಳಗಳನ್ನು ಬಳಸಿರುವ ಆಕೃತಿಗಳಾದರೂ ಆಗಿರಬಹುದು. ಹೂಗಿಡದ ತಂತ್ರವೂ ಆಗಿರಬಹುದು ಶ್ರೀಚಕ್ರ ಮೇಲ್ನೋಟದಲ್ಲಿ ಭೂಮಿತಿಯ ರೇಖಾ ಚಿತ್ರಗಳ ಸಂಕಲನವಾದರೂ ಅದು ಪುರುಷ -ಪ್ರಕೃತಿಯ ಸಂಕೇತದಂತಿದೆ. ಯಂತ್ರದಲ್ಲಿರುವ ಕೇಂದ್ರವು ಆಳವು, ಗಾತ್ರವೂ ಇಲ್ಲದ ಮೂಲಸ್ಥಳವಾಗಿದ್ದು ಅದಕ್ಕೆ ಬೀಜಕೇಂದ್ರವೆನ್ನುತ್ತಾರೆ. ಇದರೊಳಗಿನ ಒಂದು ತ್ರಿಕೋನ ಸ್ತ್ರೀ ಜನನಾಂಗವಾದರೆ ಮತ್ತೊಂದು ಪುರುಷ ಶಕ್ತಿ ಕೇಂದ್ರವಾಗುತ್ತಾನೆ ಇಂತಹ ಹಿನ್ನೆಲೆಯ ಅನೇಕ ಚಿತ್ರಗಳು ಕರ್ನಾಟಕದ ಸಾಕಷ್ಟು ಹಸ್ತಪ್ರತಿ ಭಂಡಾರಗಳ ಹಸ್ತಪ್ರತಿಗಳಲ್ಲಿದೆ.

ಭಾರತೀಯ ಮತ್ತು ಕರ್ನಾಟಕ ಸಮಕಾಲೀನ ಚಿತ್ರಕಲೆಯಲ್ಲೂ ಇಂತಹ ಪ್ರಯೋಗಗಳು ಸಾಕಷ್ಟು ನಡೆದಿವೆ. ಈ ಹಾದಿಯಲ್ಲಿ ಮುನ್ನಡೆದಿರುವ ಜಿ. ಸ್ವಾಮಿನಾಥನ್, ಬಿರೇನ್‌ಡೇ, ಜಿ.ಆರ್.ಸಂತೋಷ್, ಕೆ.ಸಿ. ಫಣಿಕ್ಕರ್, ಪಿ.ಟಿ. ರೆಡ್ಡಿ ರಂತವರನ್ನು ಹೆಸರಿಸಬಹುದು. ಇವು ನೇರ ಲಲಿತಕಲೆಗೆ ಸಂಬಂಧಿಸಿದರೆ -ಹಸ್ತಪ್ರತಿಗಳಿಗೆ ಸಂಬಂಧಿಸಿದ ಮಾಟ, ಮಂಡಲದಂತಹ ಅನೇಕ ಸಂಯೋಜನೆಗಳನ್ನು , ಬೀಜಾಕ್ಷರಗಳನ್ನು ಸಕಾಲಗಳಲ್ಲಿ ಗುರುತಿಸಬಹುದಾಗಿದೆ. ಮೈಸೂರು ಹಸ್ತಪ್ರತಿ ಭಂಡಾರದ ೧೮೮ (ಕೆ.ಬಿ. ೯೧೩)ರ ಜೋತಿಷ್ಯ ವೈದ್ಯ, ಮಂತ್ರಗಳ ಗ್ರಂಥಗಳಲ್ಲಿ ೫೫೫ (ಕೆ. ೧೦೦೦/೫) ಚೆನ್ನಬಸವಣ್ಣನವರ ಪದಮಂತ್ರ ಗೋಪ್ಯ (ಸಟಿಕ) ೨೯೦ (ಕೆ.೧೦೦೦/೧೧) ದಶವಿಧ ಪಾದೋಧಕದಲ್ಲೂ ಕಾಣಬಹುದು.

ಉದ್ಧರಣೆಗಳು ಮಂಡಲ, ತಂತ್ರಗಳ ಹೋಲಿಕೆಗೆ ಸಮೀಪ ಬರುತ್ತವೆ. ಅದಕ್ಕಾಗಿ ಪೂಜ್ಯರಾದ ಶ್ರೀ ಜ. ಚ. ನಿಯವರು ಈ ರೀತಿ ವಿವರಿಸುತ್ತಾರೆ ಉದ್ಧರಣೆ ಉಪಾಸನೆಯ ಒಂದು ತಂತ್ರ ಮನ ಭಾವಗಳನ್ನು ಕಾಯ-ಕರಣಗಳನ್ನು ಕೇಂದ್ರಿಕರಿಸುವ ಸೂಚ್ಯಸೂತ್ರ ಪ್ರವೃತ್ತಿಯ ವಾಸನೆಯನ್ನು ನಿಯಂತ್ರಿಸುವ, ವಿಕೃತಿಯಿಂದ ದೂರಿರಿಸುವ ಅಕುಟಿಲ ಯಂತ್ರ ಮನಸ್ಸನ್ನು ಮನನಕ್ಕೆ, ಮತಿಯನ್ನು ವಿಚಾರಕ್ಕೆ ಹಚ್ಚುವ ಅಕ್ಷರ ಮಂತ್ರವಾಗಿದೆ. ಇದು ವಾಙ್ಮಯವೂ ಅಹುದು, ವರ್ಣಮಯವೂ ಅಹುದು. ಇದನ್ನು ಅಂಗ-ಲಿಂಗ ಸಾಹಿತ್ಯವೆಂದೂ ಹೇಳಬೇಕು. ಇದು ಅಂಕೆ, ಅಕ್ಷರ, ವರ್ಣ ಪ್ರಧಾನವಾದ ಸಾಹಿತ್ಯ ಅಂತರಂಗವನ್ನು ಅರಿತುಕೊಳ್ಳಲು, ಅನುವನ್ನುಂಟು ಮಾಡುವ ಸಾಂಕೇತಿಕ ದೃಶ್ಯಸಾಹಿತ್ಯವಾಗಿದೆ.[೧೭೮]

ಸಂಸ್ಕೃತ ಕಾವ್ಯಗಳಲ್ಲಿ ಹಸಪ್ರತಿ ಚಿತ್ರಕಲೆಯ ಸಿದ್ಧತಾ ವಿಧಿ ವಿಧಾನಗಳು :

೧೭೮. ಡಾ|| ಶ್ರೀ ಜ.ಚ.ನಿ : ಉದ್ಧರಣ ಸಾಹಿತ್ಯ : ಗೌರವ ವೀ.ಅ.ಸಂಸ್ಥೆ, ಜಗದ್ಗುರು ತೋಂಟದಾರ್ಯ ಮಠ ಗದಗ ಪುಟ-೧೫೩.

ಹಸ್ತಪ್ರತಿಗಳಿಗಾಗಿ ತಾಡ ಪತ್ರಗಳನ್ನಾಗಲಿ, ಭೂರ್ಜ ಪತ್ರಗಳನ್ನಾಗಲಿ ಹೇಗೆ ತಯಾರಿಸುತ್ತಾರೆ. ತಯಾರಿಕಾಕ್ರಮದಲ್ಲಿ ತಾಳೆಯ ಮರದ ಗರಿಗಳಿಂದ ಹಿಡಿದು ಅವುಗಳನ್ನು ಹದಗೊಳಿಸಿ, ಹಲವು ಕ್ರಮಗಳು ಹಂತಗಳು ಜರುಗಿದ ನಂತರ ಕಂಠವನ್ನು ಬಳಸಿ ಅಕ್ಷರಗಳನ್ನು ಕೊರೆದು ಕಪ್ಪನ್ನು ಸವರಿ ಫಲಕಗಳನ್ನಿಟ್ಟು ವಸ್ತ್ರ ಬಿಗಿದು ಕವುಳಿಗೆಯನ್ನು, ಕಟ್ಟನ್ನು ಹೇಗೆ ತಯಾರಿಸುತ್ತಿದ್ದರೂ ಎಂಬ ವಿಷಯವು ಕನ್ನಡ ಸಾಹಿತ್ಯದ ಚರಿತ್ರೆಯಲ್ಲಿ ಸಾಕಷ್ಟು ಮಾಹಿತಿ ದೊರೆತಿದೆ. ಮತ್ತು ಅನೇಕ ಕನ್ನಡೇತರ ಕೃತಿಗಳಿಂದಲೂ ತಿಳಿದು ಬಂದಿದೆ. ಆದರೆ ಹಸ್ತ ಪ್ರತಿಗಳಲ್ಲಿಯ ಚಿತ್ರ ಅಥವಾ ಚಿತ್ರಕಲಾಕೃತಿಗಳ ರಚನೆ ಕುರಿತು ಕನ್ನಡ ಸಾಹಿತ್ಯದಲ್ಲಂತೂ ಅಧಿಕೃತವಾದಂತಹ ಮಾಹಿತಿಯೇ ದಾಖಲಾಗಿರುವುದಿಲ್ಲ ಎನ್ನುವಷ್ಟು ಇದೆ. ಇದ್ದರೂ ದಾಖಲುಗೊಂಡಿಲ್ಲ ಎಂಬುದು ಖೇದದ ಸಂಗತಿಯಾಗಿದೆ. ಹಸ್ತ ಪ್ರತಿಗಳಲ್ಲಿಯ ಚಿತ್ರಗಳನ್ನು ಕುರಿತು ಮಹಾಕವಿ ಕಾಳಿದಾಸ ಈ ರೀತಿಯಾಗಿ ಹೇಳುತ್ತಾನೆ.

ಭೂರ್ಜ-ತ್ವಚ ಕುಂಜರ -ಬಿಂದು ಸೊನಃ
ವೈಜಂತಿ ವಿದ್ಯಾಧರ ಸುಂದರಿನಾಮ ಅನಂಗಃ
ಲೇಖಕ್ರಿಯಾಯೋಪಾಯ ಯೋಗಮ್
ಕುಃ ಇರ್ಸಾಂಭವ. ೧:೧೭ [೧೭೯]

ಮಹಾಕವಿ ಕಾಳಿದಾಸನು ತನ್ನ "ಕುಮಾರ ಸಂಭವ" ಕೃತಿಯ ಪ್ರಾರಂಭದಲ್ಲಿ ನೈಸರ್ಗಿಕ ಖನಿಜಾಂಶಗಳ ವರ್ಣದಿಂದ ರಚಿಸಿರುವ ಭೂರ್ಜಪತ್ರದ ಹಸ್ತಪ್ರತಿ ಚಿತ್ರಕಲೆಯನ್ನು ನೋಡಿ ತನ್ನದೆಯಾದ ಕವಿತ್ವಗುಣದಿಂದ ಈ ಮೇಲಿನಂತೆ ಕವಿತೆಯೊಂದನ್ನು ರಚಿಸಿದ್ದಾನೆ. ಕಾವ್ಯದ ಭಾವ ಇಂತಿದೆ. ಕೃತಕವಲ್ಲದ ವರ್ಣಗಳಿಂದ ರಚಿಸಿದ ಹಸ್ತಪ್ರತಿ ಚಿತ್ರವು ರಕ್ತರಂಜಿತ ಆನೆಯ ಚರ್ಮವು ಯುವ ರಾಜಕುಮಾರ ವಿದ್ಯಾಧರನು ತನ್ನ ಯುವ ಕಿಶೋರ ಸಖಿಯರಿಗೆ ಬರಿಯುವ ಪ್ರೇಮ ಪತ್ರದಂತಿದೆ ಎಂದು ವರ್ಣಿಸಿರುವ ಆತ ತನ್ನ ಮತ್ತೊಂದು ಕಾವ್ಯ ಸಂಕಲವಾಗಿರುವ 'ವಿಕ್ರಮೋರ್ವಶ್ಯ' ದಲ್ಲಿ ಈ ವರ್ಣರಂಜಿತ ಹಸ್ತಪ್ರತಿಯು

" ಭೂಜಂಗಾನಿರ್ಮೋಕಾ ಇವ ಭೂರ್ಜ ಪತ್ರರಂಗತೋ"

ಕಳಚಿಕೊಂಡಿರುವ ಕಾಳಿಂಗ ಸರ್ಪದ ಪೊರೆಯಂತಿದೆ ಎಂದು ಹೀಗೆ ಹೇಳಿಕೊಂಡಿದ್ದಾನೆ. [೧೮೦]

ಕ್ರಿ.ಶ. ೯೩೨ ರ ಸುಮಾರಿಗೆ ಇದ್ದಂತಹ ಹರಿಶೇನನು ಹಸಪ್ರತಿಯ ಚಿತ್ರವು ಅರಿವೆಯ ಮೇಲೆ ರಚಿಸಿರುವುದರ ಒಂದು ಉದಾಹರಣೆಯನ್ನು ಕೊಡುತ್ತಾನೆ. ಅವನಂತೆ ಹರ್ಷಚರಿತೆಯ ಬಾಣನೂ ಅರಿವೆಯ ಮೇಲೆ ಬರೆದ ಹಸ್ತಪ್ರತಿಯ ಚಿತ್ರ ವಿವರಿಸುತ್ತಾನೆ. ತನ್ನ ಕೃತಿಯಾಗಿರುವ ಕಾದಂಬರಿಯ ಕೃತಿಯಲ್ಲಿ ಪುಂಡರೀಕನು ತನ್ನ ಪ್ರಿಯತಮೆ ಮಹಾಶ್ವೇತೆಗೆ ತಾನುಟ್ಟ ವಲ್ಕಲದಂತಹ ತೆಳು ಅರಿವೆಯ ಮೇಲೆ ಕಲಾತ್ಮಕವಾದ ಸಂದೇಶ ಕಳಿಸಿದನಂತೆ. [೧೮೧]

---

೧೭೯. ಮಹಾಕವಿ ಕಾಳಿದಾಸ : ಕುಮಾರ ಸಂಭವ : ೧-೧೧೭.

೧೮೦ ಮತ್ತು ೧೮೧. R.S. Shiva Ganesh Murthy : Introduction to Manuscriptology, Page 32, & 46 respectively

ಇಂತಹ ತತ್ತ್ವವಿರೋಧಿ ಚಿತ್ರಗಳ ನಿವಾರಣೆಗೆ ತಿದ್ದುಪಡಿಗೆ ಕಡತ ಮಾಧ್ಯಮ ಉತ್ತಮವಾಗಿದ್ದು ಕವಿ-ಕಲಾವಿದರ ವಿಚಾರ-ವಿನಿಮಯಗಳಿಗೆ ಅತ್ಯುತ್ತಮ ಕೇಂದ್ರದಂತಿದೆ ತಾಳೆಗರಿಗಳಲ್ಲಿ ಮಾಡಬಹುದಾದ ಅಂತಿಮ ಚಿತ್ರಗಳನ್ನು ಕರಡು ರೂಪದಲ್ಲಿ ಕಡತಗಳಲ್ಲಿ ರಚಿಸಿ ತಿದ್ದುಪಡಿ ಮಾಡಿಕೊಳ್ಳುತ್ತಿರಬಹುದು ಅಂತಹ ಅನೇಕ ನಿದರ್ಶನಗಳು ನಮಗೆ ಹಸ್ತಪ್ರತಿಗಳಲ್ಲಿ ಕಂಡು ಬರುತ್ತವೆ. ಬಹುಶಃ 12ನೇ ಶತಮಾನದ ಕೆಳವರ್ಗದ ಶಿವಶರಣರು ಮೊದಲು ಕಡತದಲ್ಲಿಯೇ ಬರೆದು ನಂತರ ಲಿಪಿಕಾರರು ಹಸ್ತಪ್ರತಿಗೆ ತಂದಿರಬಹುದು.

II ಕಾರ್ಯ ನಿರ್ವಾಹಣಾ ಹಂತ :

ವಿಷಯಗ್ರಹಿಕೆ, ಸಾಹಿತ್ಯಕ ರೂಪ, ಆಕಾರ, ಮೂರ್ತತೆಯ ಹಂತವನ್ನು ದಾಟಿದನಂತರ ಬರುವುದೇ ಕಾರ್ಯನಿರ್ವಾಹಣಾ ಹಂತ. ಇಲ್ಲಿ ಕಲಾವಿದನು ತನ್ನ ಮಾಧ್ಯಮದಲ್ಲಿ ಅಭಿವ್ಯಕ್ತಿಗೊಳಿಸಲು ಸಿದ್ಧನಾಗಿರುವಂತಹ ಹಂತವಾಗಿರುತ್ತದೆ. ಹಸ್ತಪ್ರತಿಯ ಭೂರ್ಜ, ತಾಳೆಗರಿ ಅಥವಾ ಕಾಗದದ ಯಾವುದೇ ಮಾಧ್ಯಮವಿದ್ದರೂ ಅದರಲ್ಲಿ ಸಂಯೋಜಿಸ ಬಹುದಾದ ಚಿತ್ರದ ಪೂರ್ವ ತಯಾರಿಕೆಯ ಹಂತವು ಇದಾಗಿರುತ್ತದೆ. ಚಿತ್ರವು ಗರಿಯ ಮಧ್ಯಭಾಗದಲ್ಲಿ ಅಥವಾ ಗರಿಯ ಎಡ, ಬಲಕ್ಕೆ ಸಮನಾದ ಅಳತೆಗೆ ಬರಬೇಕು. ಈ ಹಂತದಲ್ಲಿ ಗರಿಯ ಮೇಲ್ಮೈಯನ್ನು ಶಂಖುವಿನಂತಹ ವಸ್ತುಗಳಿಂದ ಉಜ್ಜಿ ಸಮಗೊಳಿಸುತ್ತಾರೆ. ಮತ್ತು ಕೆಲವು ಸಲ ಬಳಪದ ಕಲ್ಲನ್ನು ತೇಯ್ದು ಅದರ ಗಂಧದಿಂದ ಬರುವ ಬಿಳಿಯ ಸುದ್ದವನ್ನು ಪ್ರಾಥಮಿಕ ಲೇಪನ (Primer) ವನ್ನಾಗಿ ಲೇಪಿಸಿ ಸಿದ್ಧಗೊಳಿಸುತ್ತಿದ್ದರು.


1. ರೇಖಾ ಹಂತ : ಹಸ್ತಪ್ರತಿ ಚಿತ್ರಕಲೆಯ ಕಾರ್ಯಕ್ಕೆ ಇದು ಪ್ರಮುಖ ಮತ್ತು ಪ್ರಬುದ್ಧ ಹಂತ ಮುಂಬರಲಿರುವ ಬೆಳೆಯುವ ಸಿರಿಯನ್ನು ಗುರುತಿಸುವ ಘಟ್ಟ ಇದಾಗಿದೆ. ಚಿತ್ರದ ಒಟ್ಟು ಸಂಯೋಜನೆಯನ್ನು ರೇಖಾ ಗಡಿಗಳಲ್ಲಿ ಕಾಯ್ದಿಡುವ ಹಂತ ಇದಾಗಿದೆ.


ಹಸ್ತಪ್ರತಿಚಿತ್ರಗಳ ಈ ಹಂತವನ್ನು ಪ್ರೊ|| ಎಂ. ಎಚ್. ಕೃಷ್ಣಯ್ಯನವರು ಈ ರೀತಿ ಉಲ್ಲೇಖಿಸಿದ್ದಾರೆ. " ಮಾಯಾ ಜನರು ಹಲವು ಮಡಿಕೆಗಳಲ್ಲಿ ಮಡಚಬಹುದಾದ, ಮರದತೊಗಟೆ ಕುಟ್ಟಿ ತಯಾರಿಸಿದ ಒಂದೇ ಉದ್ದಹಾಳೆಯ ಗ್ರಂಥವನ್ನು ತಯಾರಿಸುತ್ತಿದ್ದರು. ಹಾಳೆಗೆ ಸುಣ್ಣ ಲೇಪ ಹಾಕಿ ಬಣ್ಣಗಳಿಂದ ಎರಡು ಪಕ್ಕಗಳಲ್ಲಿಯೂ ವಸ್ತುಚಿತ್ರ(ಲಿಪಿ) ಬರೆಯುತ್ತಿದ್ದರು. ದೇವತೆಗಳು, ಗೂಢಚಿತ್ರಲಿಪಿಗಳಿಂದ ಅವು ಕೂಡಿವೆ. ಈ ಗ್ರಂಥಗಳ ಪ್ರತಿ ಮತ್ತೆ ಮತ್ತೆ ತೆಗೆಯುತ್ತಿದ್ದಿರಬೇಕು. ಈ ಗ್ರಂಥಗಳನ್ನು 'ಕೋಡೆಕ್ಸ್' ಎನ್ನುತ್ತಾರೆ. ಸಿಕ್ ನಗರಗಳ ಹೆಸರುಗಳಿಂದ ಅವು ಪ್ರಸಿದ್ಧವಾಗಿವೆ. ಒಂದು ಪಕ್ಕದಲ್ಲಿ ಆಚರಣೆಯ ವಿವರ, ಇನ್ನೊಂದು ಪಕ್ಕದಲ್ಲಿ ಭವಿಷ್ಯ ಅಥವಾ ಕಾಲಜ್ಞಾನವನ್ನು ನಿರೂಪಿಸಿದೆ. ಚರ್ಮದ ಹಸ್ತ ಪ್ರತಿಗಳೂ ಸಿಕ್ಕಿವೆ. ಒಂದರಲ್ಲಿ ಬಲಾಂಬೊಂಗೊ ನಗರ ಆಳರಸನವಂಶ ಚರಿತ್ರೆ ನಿರೂಪಿತವಾಗಿವೆ.


ಈ ಕೋಡೆಕ್ಸ್‌ಗಳ ಚಿತ್ರಗಳು (ರೇಖಾ ಪ್ರಧಾನವಾದವು) ಬಾಹ್ಯ ಹಾಗೂ

ಕರ್ನಾಟಕದ ಹಸ್ತಪ್ರತಿ ಚಿತ್ರಕಲೆ- ಒಂದು ಅಧ್ಯಯನ

ಕರ್ನಾಟಕದ ಕಾಗದದ ಹಸ್ತಪ್ರತಿಗಳಲ್ಲಿ ಕಲಾವಿದರ ಕರಡು ರೇಖೆಗಳು.







ಕೃಪೆ:

ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ ಮಾನಸ ಗಂಗೋತ್ರಿ

ಮೈಸೂರು ವಿಶ್ವ ವಿದ್ಯಾಲಯ, ಮೈಸೂರು.

ಕರ್ನಾಟಕದ ಹಸ್ತಪ್ರತಿ ಚಿತ್ರಕಲೆ- ಒಂದು ಅಧ್ಯಯನ

ಕಾಗದದ ಹಸ್ತ ಪ್ರತಿಗಳಲ್ಲಿ ರೇಖಾ ಚಿತ್ರಗಳು

ಕಲಾವಿದರು : ಶ್ರೀ ಭೀಮಣ್ಣ,ತಿಪ್ಪಣ್ಣ,ಗುರುರಾಜಪ್ಪ ಚಿತ್ರಗಾರ,ಕನಕಗಿರಿ.









ಕೃಪೆ:

ಶ್ರೀ ಯಂಕಣ್ಣ ಚಿತ್ರಗಾರ,ಗಂಗಾವತಿ

ಒಳಗಿನ ರೇಖೆಗಳು ದಪ್ಪ, ಆದರೂ ಸರಳ ವಿವರಗಳ ಚಿತ್ರಣವಿದೆ. ವಸ್ತ್ರ ಆಯುಧ, ಆಭರಣಗಳು, ಮುಖ-ಮುಖವಾಡ ಅಲಂಕಾರಗಳಿಂದ ಕೂಡಿರುತ್ತವೆ. ವರ್ಣಲೇಪ ಚಪ್ಪಟೆ. ಇವುಗಳ ಓದಬೇಕಾದ ಗ್ರಂಥಗಳು ಚಿತ್ರವೇ ಪಠ್ಯವಾದ ಕಾರಣ ಓದಬೇಕಾದ ವಿಧಾನ ಸೂಚಿಸಲು ಕೆಂಪುಗೆರೆಯ ಮಾರ್ಗ ನಿರ್ದೇಶನಗಳಿರುತ್ತದೆ ಹಸ್ತಪ್ರತಿ ಚಿತ್ರಗಳು ಅರ್ಥವಾಗದಿದ್ದರೂ ಕಲಾದೃಷ್ಟಿಯಿಂದ ಅಭ್ಯಸಿಸಲು ಕುತೂಹಲಕಾರಿಯಾಗಿವೆ.[೯]

ಈ ರೀತಿಯಲ್ಲಿ ರೇಖಾಹಂತವು ಪ್ರಮುಖವಾಗಿದ್ದು ಇಲ್ಲಿ ತಾತ್ಕಲಿಕ ರೇಖಾ ಸೂಚಿಗಾಗಿ ಇದ್ದಲಿನ ತುಂಡನ್ನೋ, ಸೀಸದ ಕಡ್ಡಿಯನ್ನೋ, ಚಾರಕೋಲಿನ ತುಂಡನ್ನೋ ಚಿತ್ರದ ಗಡಿರೇಖೆಗಳಾಗಿ ಇಂದಿಗೂ ಚಿತ್ರಕಾರರು ಬಳಸುತ್ತಾ ಬಂದಿರುವುದನ್ನು ಕಾಣಬಹುದಾಗಿದೆ. ಬಹುಶಃ ಈ ಪರಂಪರೆ ಬಹಳ ಹಿಂದಿನಿಂದಲೇ ಮುಂದುವರೆದುಕೊಂಡು ಬಂದಿದೆ ಎನ್ನಬಹುದು.

2. ಬಣ್ಣ ಗಾರಿಕೆಯ ಹಂತ :

ರೇಖಾಹಂತವು ಮಾನವನ ದೇಹದ ಮೂಳೆಗಳ ಹಂತವಾದರೆ ಬಣ್ಣಗಾರಿಕೆಯ ಹಂತವು ದೇಹಕ್ಕೆ ಬಲಯುತವಾದ ಮಾಂಸ, ಖಂಡ ಮಜ್ಜೆಗಳನ್ನು ತುಂಬುವ ಹಂತವಾಗಿದೆ. ಇದು ಚಿತ್ರಗಾರಿಕೆಯಲ್ಲಿಯೇ ಪ್ರಮುಖ ಹಂತವಾಗಿದೆ. ಇಲ್ಲಿ ಕಲಾವಿದನು ಸ್ವತಂತ್ರ ಕೃತಿಯ ನಾಯಕ, ನಾಯಕಿಯರಿಗೆ ಪ್ರಥಮವರ್ಗದ ಬಣ್ಣಗಳನ್ನು ಬಳಸಿದರೆ. ಮುಂಬರುವ ಪಾತ್ರಗಳಿಗೆ ದರ್ಜೆಗಳಿಗೆ ಅನುಗುಣವಾದ ಆಯಾ ದರ್ಜೆಯ ಬಣ್ಣಗಳನ್ನು ಬಳಸುತ್ತಾನೆ. ಭಾರತೀಯ ಚಿತ್ರಕಲೆಯ ಶಿಲ್ಪಕಲೆಯ ಆಸರೆಯಲ್ಲೇ ಬೆಳೆದಿರುವ ಕಾರಣ ನಾಯಕನ ಚಿತ್ರ ದೊಡ್ಡದಿದ್ದರೆ ಪೂರಕ ಪಾತ್ರಗಳು ಚಿಕ್ಕದಾಗಿರುತ್ತವೆ. ಉದಾಹರಣೆಗೆ ಹೇಳುವುದಾದರೆ ಅಜಂತೆಯಲ್ಲಿಯ ಬುದ್ಧನ ಚಿತ್ರ ದೊಡ್ಡದಾಗಿದ್ದರೆ ಭಿಕ್ಷೆ ನೀಡುವ ಯಶೋಧರೆ ಮತ್ತು ರಾಹುಲರ ಆಕೃತಿಗಳು ಚಿಕ್ಕದಾಗಿ ಇರುತ್ತವೆ. ಬದುಕಿನ ಸೀಮಿತ ವಲಯ, ಬದುಕಿಗೆ ಭವಕ್ಕೆ ಅಂಟಿದ ಹಂತವಾಗಿರುತ್ತದೆ. ಭವವನ್ನು ದಾಟಿದ ಉದಾತ್ತತೆಯನ್ನು ತಲುಪಿದ ಹಂತದಲ್ಲಿರುವ ಮಹಾಸಾಧಕನ ಚಿತ್ರಗಳನ್ನು ಎತ್ತರದ ನಿಲುವಿನಲ್ಲ ಚಿತ್ರಿಸುತ್ತಾರೆ.

ಋಕ್ಕು (Hymns) ಗಳಲ್ಲಿ ಆಯಾ ದೇವತೆಗಳಿಗೆ ಅನುಗುಣವಾದ ಪ್ರಾರ್ಥನೆಯೊಂದಿಗೆ ಆಯಾ ದೇವತೆಯ ರೂಪ, ಆಕಾರ, ವರ್ಣ, ವಾಹನಗಳ ವಿವರ ದೊರೆಯುವುದರಿಂದ ಖಚಿತವಾದ ಆ ತತ್ತ್ವಗಳನ್ನು ಅನುಸರಿಸಿ ಅನುಭಾವಿಸಿಯೇ ಆ ಚಿತ್ರಗಳನ್ನು ರಚಿಸಬೇಕು. ದೇವತೆಗಳಲ್ಲಿ ಪ್ರಮುಖರಾಗಿರುವ ಶಿವ ಮತ್ತು ವಿಷ್ಣುಗಳವರಿಗೆ ನೀಲದೇಹವಿದ್ದರೂ ವಸ್ತ್ರ ಆಭರಣ, ವಾಹನಗಳಲ್ಲಿ ವ್ಯತ್ಯಾಸಗಳಿವೆ. ಶಿವನು ಉರಗ ಭೂಷಣನಾದರೆ ನಾರಾಯಣನು ಉರಗಶಯನನಾಗಿರುತ್ತಾನೆ. ಶಿವನು ಹೈಮಾದ್ರಿ ವಾಸಿಯಾದರೆ ವಿಷ್ಣುವು ಹಾಲ್ಗಡಲ ವಾಸಿಯಾಗಿರುತ್ತಾರೆ. ಈ ರೀತಿಯಾಗಿ ಏಕತೆಯಲ್ಲಿಯೇ ಭಿನ್ನತೆಯಾಗಿರುತ್ತದೆ. ಬಣ್ಣಗಾರಿಕೆಯನಂತರ

---

೯. ಪ್ರೊ. ಎಂ.ಎಚ್.ಕೃಷ್ಣಯ್ಯ : ರೇಖಾಚಿತ್ರ , ಪುಟ -೨೩

ಭಾಗವತ ವರ್ಣ ಚಿತ್ರಗಳು

ಕಲಾವಿದರು : ಸಂತ ಶುಭರಾಯ



ಕೃಪೆ :

ಸಂ॥ಪಿ. ಆರ್. ತಿಪ್ಪೆಸ್ವಾಮಿ ಮತ್ತು ಅ. ಲ. ನರಸಿಂಹನ್,

ಕರ್ನಾಟಕ ಲಲಿತ ಕಲಾ ಅಕಾಡಮಿ, ಬೆಂಗಳೂರು.

ಪ್ರಾದೇಶಿಕ ಶೈಲಿಯೂ ಪ್ರಮುಖ ಪಾತ್ರವನ್ನು ನಿರ್ವಹಿಸುತ್ತದೆ. ಕರ್ನಾಟಕ ಶಿಲ್ಪಗಳಲ್ಲೆ ಕದಂಬ, ಚಾಲುಕ್ಯ, ರಾಷ್ಟ್ರಕೂಟ, ಹೊಯ್ಸಳ ಮತ್ತು ವಿಜಯನಗರಗಳ ಶಿಲ್ಪ ಶೈಲಿಗಳನ್ನು ಗುರುತಿಸುವಂತೆ ಬಣ್ಣಗಾರಿಕೆಯಲ್ಲೂ ಇಂತಹ ಭಿನ್ನತೆಯನ್ನು ಕಾಣುತ್ತೇವೆ. ವಿಜಯನಗರ ಶೈಲಿಯ ಒಂದೇ ಕಾಲಮಾನದ ವರ್ಣಗಾರಿಕೆಯಲ್ಲಿಯೇ ಕಿನ್ನಾಳ ಚಿತ್ರಗಾರ ಶೈಲಿ, ಸುರಪುರದ ಗರುಡಾದ್ರಿ ಶೈಲಿ ಮತ್ತು ತಂಜಾವೂರಿನ ರೇಖಾಶೈಲಿಗಳೆಂದು ಗುರುತಿಸಬಹುದು. ಉದಾಹರಣೆ ಹೊಯ್ಸಳರ ಶೈಲಿಯನ್ನು ವಿ.ಟಿ.ಎಸ್. ರಾವ್ ಅವರು ಈ ರೀತಿ ವರ್ಣಿಸುತ್ತಾರೆ. ''ಹೊಯ್ಸಳ ಚಿತ್ರಕಾರರು ತಮ್ಮ ವಿಶಿಷ್ಟ ಶೈಲಿಯಾದ ವಿಶಾಲ ಎದೆ, ಅಗಲವಾಗಿ ಚಿತ್ರಿಸಿದ ಕಣ್ಣುಗಳು, ಎರಡೂ ಕಣ್ಣುಗಳನ್ನು ಎತ್ತಿ ತೋರಿಸುವ ವೈಶಿಷ್ಟ್ಯ, ಮುಂದೆ ಬಂದಿರುವ ತ್ರಿಕೋನಾಕಾರದ ಚೂಪು ಮೂಗು, ದೀರ್ಘವಾದ ಕಣ್ಣಿನ ಮೂಲೆಗಳು, ಬಿಲ್ಲಿನಾಕಾರದ ಹುಬ್ಬುಗಳು, ಕೋನಯುಕ್ತವಾದ ಮುಖ, ಸುಂದರ ಗಲ್ಲಗಳು, ಸಪೂರಾದ ಸೊಂಟ, ಹಿತಮಿತವಾದ ವರ್ಣ ಸಂಯೋಜನೆಯಿಂದ ತಮ್ಮ ತನವನ್ನು ಉಳಿಸಿಕೊಂಡು ಮುಂದಿನ ಚಿತ್ರಕಾರರಿಗೆ ಕಲಾಗುರುಗಳಾಗಿರುವರು. [೧೦]

ಕಿರುರೂಪ, ಹಲವು ರೂಪಗಳ ಕಲಾವಿದರುಗಳಾಗಿರುವ ಕಿನ್ನಾಳ ಕಲಾವಿದರ ಕುರಿತು ಹಸಪ್ರತಿಗಳ ಶೋಧಕರಾಗಿರುವ ಡಾ॥ ವಿರೇಶ ಬಡಿಗೇರ ಈ ರೀತಿ ಅಭಿಪ್ರಾಯ ಪಡುತ್ತಾರೆ. '' ಚಿತ್ರಗಳಲ್ಲಿ ಸಂಕೀರ್ಣತೆ ಇದ್ದರೂ ಅದು ಸರಳವಾಗಿರುವಂತೆ ಚಿತ್ರಿಸುವ ಕೌಶಲ್ಯ ಕಿನ್ನಾಳ ಕಲೆಯಲ್ಲಿದೆ. ಉದಾಹರಣೆಗೆ ರಾವಣ, ಸೀತೆಯನ್ನು ಅಶೋಕವನದಲ್ಲಿಟ್ಟ ದೃಶ್ಯವನ್ನು ತೋರಿಸಬೇಕಾದಾಗ ಇಡೀ ಅಶೋಕವನವನ್ನು ಗಿಡಗಳಿಂದ ತುಂಬಿಸಿದೆ ಕೇವಲ ಒಂದು ಅಥವಾ ಎರಡು ಗಿಡಗಳನ್ನು ಚಿತ್ರಿಸಿ ಅಶೋಕವನದ ಎಲ್ಲಾ ವೈವಿಧ್ಯ ಮತ್ತು ವೈರುಧ್ಯಗಳನ್ನು ಎರಡೇ ಗಿಡಗಳ ಮೂಲಕ ಕಾಣಿಸುವುದು ಬಾಶೋಲಿ ಶೈಲಿಯ ವಿಶಿಷ್ಟ ಲಕ್ಷಣಗಳಾದ ನೀಳವಾದ ಮೂಗು, ಬಾದಾಮಿಯಾಕಾರದ ಕಣ್ಣು ಸಪುಷ್ಟ ಅಂಗಾಂಗಗಳು, ಆಭರಣ, ಕಾಮ ತೇಜಸ್ಸುಗಳನ್ನು ಈ ಕಿನ್ನಾಳ ಶೈಲಿಯಲ್ಲಿ ಕಾಣಬಹುದು. [೧೧]

ಬಣ್ಣಗಾರಿಕೆಯ ಕುರಿತು ಚಿತ್ರಕಲಾ ಸಾಹಿತಿಗಳಾಗಿರುವ ಎನ್.ಮರಿಶಾಮಾಚಾರ್‌ರು ವರ್ಣ ಸಂಯೋಜನೆ ಬಗೆಗೆ ಗಮನಿಸಬೇಕಾದ ವಿವರಣೆ ಕೊಡುತ್ತಿದ್ದು ಅದು ಹೀಗಿದೆ. ಬಣ್ಣಗಳಲ್ಲಿ ಕೆಂಪು ಮತ್ತು ಹಳದಿ, ಹಸಿರು ಮತ್ತು ನೀಲಿಗಿಂತ ಉಷ್ಣವಾಗಿರುತ್ತವೆ. ಇದರಿಂದ ಹಲವಾರು ಮಾನಸಿಕ ಸಂಶೋಧನೆಗಳು ಕಂಡುಹಿಡಿಯಲ್ಪಟ್ಟಿವೆ. ಬಣ್ಣಗಳ ಗುಂಪಿನಲ್ಲಿ ಕೆಂಪು ಮತ್ತು ಹಳದಿಯ ಮುಂದೆ ಬಂದು ನೀಲಿಯು ಹಿಂದೆ ಹೋಗುತ್ತದೆ. ಇದು ನಮ್ಮ ಕಣ್ಣು ಉಬ್ಬಿದ ಭಾಗಗಳಲ್ಲಿ ಕೆಂಪು ಕಿರಣಗಳನ್ನು ವೀಕ್ಷಿಸುತ್ತವೆ ಮತ್ತು ತಗ್ಗಿದ ಭಾಗಗಳಲ್ಲಿ ನೀಲಿ ಕಿರಣಗಳು ಕಣ್ಣಿನ ರೆಟಿನಾ ಮೇಲೆ ಬೀಳುತ್ತವೆ; ಏಕೆಂದರೆ ಅವು ಬೇರೆ ಬೇರೆ ಕೋನಗಳಲ್ಲಿ ಬಿಂಬಿತವಾಗುತ್ತವೆ. ಹಿಂದೆ ಮುಂದೆ ಹೋಗುವ ಈ ಬಣ್ಣಗಳ ಸಂವೇದನೆ, ಬಣ್ಣಗಳಿಗೆ ಚಲನೆ ಕೊಡುತ್ತವೆ. [೧೨]

---

೧೦. ಡಾ. ಸಿದ್ದಯ್ಯ ಪುರಾಣಿಕ ಸಂ: ಮಣಿಹ, ವಿ.ಟಿ.ಎಸ್.ರಾವ್., ತಾಳೇಗ್ರಂಥಗಳಲ್ಲಿ ಚಿತ್ರವಿನ್ಯಾಸ, ಪುಟ -೪೧೬

೧೧. ಡಾ. ಎಸ್.ಸಿ.ಪಾಟೀಲ : ಸತ್ಯಾನಂದ ಪಾತ್ರೋಟ ಸಂ: ನಿಜದ ನೆಲೆ, ಡಾ. ವಿರೇಶ ಬಡಿಗೇರ, ಪುಟ -೧೪೩

೧೨. ಎನ್.ಮರಿಶಾಮಾಚಾರ : ಸಮಕಾಲೀನ ಕಲೆ, ಪುಟ -೨೨

ತಾಳೆಗರಿ ಹಸ್ತ ಪ್ರತಿಗಳಲ್ಲಿ ವರ್ಣ ಚಿತ್ರಗಳು

ಕೃತಿ :ಉಷಾ - ಅನಿರುದ್ಧರ ವಿವಾಹ



Courtesy :

Lalita Kala Akademi New Delhi.

ಈ ರೀತಿಯ ಬಣ್ಣಗಾರಿಕೆಯ ಕ್ರಮವನ್ನು ಅನುಸರಿಸಿ ಬರೆಯುವುದು ಭಾರತೀಯ ಕಲಾವಿದರಿಗೆ ಹೊಸತಾಗಿಯೇನು ಇರಲಿಲ್ಲ. ಈ ಕ್ರಮ ಭಿತ್ತಿಯಲ್ಲ ಬಳಕೆಯಾಗಿರುವಂತೆ ನಂಜುಂಡ ಕವಿಯ ವೃಷಭವಿಲಾಸ [೧೩] ದಲ್ಲಿ, ಬಯಲಾಟದ ಜಾನಪದ ಹಸ್ತಪ್ರತಿಗಳನ್ನು ಮತ್ತು ಸಿದ್ಧ ನಂಜೇಶನ ರಾಘವಾಂಕ ಚರಿತ್ರೆಯಲ್ಲೂ ಕಾಣುತ್ತೇವೆ.[೧೪] ಇಂತಹ ಹಸ್ತಪ್ರತಿ ಚಿತ್ರಗಳನ್ನು ಆಧುನಿಕವಾಗಿ ಬರೆದವರು ಭಾರತೀಯ ಪುನರುತ್ಥಾನ ಕಾಲದ ಬಂಗಾಲದ ದೇಶೀಯ ಕಲಾವಿದರುಗಳಾದ ಅಸಿತಕುಮಾರ ಹಲ್ದಾರ, ನಂದಲಾಲ್ ಬಸು, ಅಬ್ದುಲ್ ರಹಮಾನ್ ಚುಗತಾಯಿ ಕೆ. ವೆಂಕಟಪ್ಪ ಮತ್ತು ಅವರ ಮನೆತನದ ಹಿರಿಯರಾಗಿರುವ ಮೈಸೂರಿನ ಆಸ್ಥಾನದ ಕಲಾವಿದರು ಎಂದು ಸ್ಮರಿಸಿಕೊಳ್ಳಬೇಕಾಗಿದೆ.

ಕರ್ನಾಟಕದ ಹಸ್ತಪ್ರತಿಗಳಲ್ಲಿ ಪ್ರಮುಖವಾಗಿ ಬಿಳಿ, ಕಪ್ಪು, ಕೆಂಪು, ಹಳದಿ ಹಾಗೂ ಹಸಿಬಣ್ಣಗಳನ್ನೇ ಬಳಸಲಾಗಿದೆ. ಇವೆ ಪಂಚಬಣ್ಣಗಳು. ಈ ಪಂಚವರ್ಣಗಳು ಮಿಶ್ರಣದಿಂದ ಬಹುಬಣ್ಣಗಳನ್ನು ಸಿದ್ಧ ಪಡಿಸಿಕೊಳ್ಳುವಲ್ಲಿ ಕರ್ನಾಟಕದ ಹಸ್ತಪ್ರತಿಗಳ ಕಲಾವಿದರು ಸಿದ್ಧ ಹಸ್ತರು. ಹರಿತರಿ, ತಾಮ್ರ, ಕೃಷ್ಣ, ಪೀತ, ಸೀತೆ ಎಂಬ ಪಂಚವರ್ಣಗಳ ಪ್ರಸ್ತಾಪ ಪೊನ್ನನ ಶಾಂತಿ ಪುರಾಣದಲ್ಲಿರುತ್ತದೆ. ಈ ಪಂಚವರ್ಣಗಳಲ್ಲಿ ನೀಲಿ ಬಣ್ಣವನ್ನು ಪರಿಗರಿಸಿಲ್ಲವಾದರೂ ಅಭಿನವ ದಶಕುಮಾರ ಚರಿತೆಯಲ್ಲಿ ಷಡ್ವರ್ಣಗಳನ್ನು ಕುರಿತ ಉಲ್ಲೇಖವಿದ್ದು, ಸುಂದರ ಬಣ್ಣದ ಚಿತ್ರರಚನೆ ಷಡ್ವರ್ಣಗಳನ್ನು ಕುರಿತ ಉಲ್ಲೇಖವಿದ್ದು, ಸುಂದರವಾದ ಬಣ್ಣದ ಚಿತ್ರರಚನೆಗೆ ಷಡ್ವರ್ಣಗಳ ಶ್ರೇಣಿ ಪರಿಪೂರ್ಣವಾದುದು ಎಂದು ಭಾವಿಸಲಾಗಿದೆ.[೧೫]

ಪ್ರಾಚೀನ ಚಿತ್ರ ಕಲಾವಿದರು ತಮ್ಮ ಸುತ್ತಲಿನ ಪರಿಸರದಲ್ಲಿ ಲಭ್ಯವಿದ್ದ ಸಾಮಗ್ರಿಗಳನ್ನು ಬಳಸಿಕೊಂಡು ಬಣ್ಣಗಳನ್ನು ತಯಾರಿಸುತ್ತಿದ್ದರು. ಕಲಾವಿದರು ಬಳಸುತ್ತಿದ್ದರೆನ್ನಲಾದ ಬಣ್ಣಗಳ ಯಾದಿಯನ್ನು ಕೆಲವು ಕಾವ್ಯಗಳು ಹೀಗೆ ಉಲ್ಲೇಖಿಸುತ್ತವೆ. ಪದ್ಮ ಸಂಹಿತೆಯಲ್ಲಿ ಪಂಚವರ್ಣಗಳನ್ನು ಹೇಳಿದರೆ ಪೊನ್ನ ತನ್ನ ಶಾಂತಿ ಪುರಾಣದಲ್ಲಿ.....''ಅತಿಶಯ ಪಂಚರುಚಿ ಪ್ರತಿಕೃತಿ ಹರಿತಂ, ತಾಮ್ರ, ಕೃಷ್ಣ, ಪೀತ, ಸಿತ...ಎಂಬುದಾಗಿಯೂ; ವಚನಕಾರ ಮೋಳಿಗೆ ಮಾರಯ್ಯ ''ಷಡುವರ್ಣದ ಟಿಪ್ಪಣದಂತೆ... ಎಂದು ಆರುವರ್ಣಗಳ ಕಡೆಗೆ ನಮ್ಮ ಗಮನ ಹರಿಯಿಸುತ್ತಾನೆ. ಕವಿ ಚೌಂಡರಸ ತನ್ನ ಅಭಿನವ ದಶಕುಮಾರ ಚರಿತ್ರೆಯಲ್ಲಿ ....ಪಟದೊಳ್ ಸರ್ವಾಂಗ ಸೌಂದರ್ಯದೊಪ್ಪವನಾಂ ಚಿತ್ರಮೆನಲ್ಕೆ ಕೂರ್ತು ಬರೆದೆಂ ಷಡ್ವರ್ಣ ಸಂಪೂರ್ಣದಿಂ....ಎಂಬ ಹೇಳಿಕೆ ಮತ್ತು ಪಾಯಣ ವರ್ಣಕವಿ ಸಿಂಧೂದೇವಿಯ ಭವಾವಳಿಯನ್ನು ವರ್ಣಿಸುತ್ತ ಆಕೆ ಪೂರ್ವದಲ್ಲಿ ''ಹರಿತ ಪೀತಾರುಣ, ಶ್ವೇತ, ಕೃಷ್ಣಗಳೆಂಬುದು ತರ ಪಂಚವರ್ಣಗಳಿಂ'' ಎಂಬ ಉಲ್ಲೇಖಗಳಿಂದ ಬಿಳಿ, ಹಳದಿ, ಕೆಂಪು, ಎಳೆ ಹಸಿರು, ಕಪ್ಪು ಇತ್ಯಾದಿ ಬಣ್ಣಗಳನ್ನು ತೈಯಾರಿಸಿಕೊಳ್ಳುತ್ತಿದ್ದರೆಂಬುದು ತಿಳಿದುಬರುತ್ತದೆ. [೧೬]

---

೧೩. ಡಾ. ಎಚ್.ತಿಪ್ಪೇರುದ್ರ ಸ್ವಾಮಿ: ಕರ್ನಾಟಕ ಸಂಸ್ಕೃತಿ ಸಮೀಕ್ಷೆ, ಪುಟ -೨೩೨

೧೪ ಕನ್ನಡ ಅಧ್ಯಯನ ಸಂಸ್ಥೆ ಧಾರವಾಡ

೧೫. ಕನ್ನಡ ಅಧ್ಯಯನ ಸಂಸ್ಥೆ ಧಾರವಾಡ

೧೬. R.S. SHIVAGANESHA MURTHY: Introduction to Manuscriptology, Page No.: 54

ಹಸ್ತಪ್ರತಿ ಚಿತ್ರಕಲೆಗೆ, ಶಿಲಾಜಿತ ಅಲಕಾತಕ (ಹಿಂಗುರಿ) ಹರಿತಾಳಗಳನ್ನು ಬಣ್ಣಗಳಾಗಿ ಬಳಸುತ್ತಿದ್ದರು. ಬದಾಮಿ ಚಿಪ್ಪುಗಳನ್ನು ಸುಟ್ಟು ಹಸುವಿನ ಮೂತ್ರದಲ್ಲಿ ಬೆರಿಸಿ ಮಸಿಯನ್ನು ತಯಾರಿಸುತ್ತಿದ್ದರು ಎಂದು ಶ್ರೀ ಆರ್.ಸಿ. ಶಿವಗಣೇಶ ಮೂರ್ತಿಯವರು ಹಸ್ತಪ್ರತಿ ಚಿತ್ರಗಳಾಗಿ ಬಣ್ಣಗಳ ಕುರಿತು ವಿವರಣೆ ನೀಡುತ್ತಾರೆ. [೧೭]

ಈ ರೀತಿಯಾಗಿ ಹಸ್ತಪ್ರತಿಗಳಲ್ಲಿ ಬಣ್ಣಗಳನ್ನು ನಿಸರ್ಗದ ಮೂಲಗಳಿಂದ ಸಂಗ್ರಹಿಸುತ್ತಿದ್ದರಲ್ಲದೆ ತಮ್ಮದೇಯಾದ ಹಲವು ವಿಧಗಳಲ್ಲಿ ಬಣ್ಣಗಳನ್ನು ಬಳಕೆ ಮಾಡುತ್ತಿದ್ದರು. ಸಂಯೋಜನೆಯಲ್ಲಿ ಚಿತ್ರಗಳ ತೂಕವನ್ನು, ಸಮತ್ವವನ್ನು ಕಾಪಾಡಿಕೊಳ್ಳುವಂತೆ ವರ್ಣಗಳಲ್ಲೂ ತೂಕಗಳನ್ನು ಕಾಯ್ದುಕೊಳ್ಳುತ್ತಿದ್ದರು. ಶಿಷ್ಟ ಕಲಾಕೃತಿಗಳಲ್ಲಿ ವರ್ಣ, ವಿನ್ಯಾಸ, ಸಮತೆ, ಸಮತ್ವಗಳಿಗೆ ಹೆಚ್ಚು ಲಕ್ಷ್ಯವಹಿಸಲಾಗುತ್ತಿತ್ತು ಆದರೆ ಜಾನಪದೀಯ ಹಸ್ತಪ್ರತಿಗಳನ್ನು ಒಂದೇ ವರ್ಣ ಅಥವಾ ಹಲವು ವರ್ಣಗಳಲ್ಲಿ ಅವರದೇಯಾದ ದೇಶೀಯ ರೀತಿಯಲ್ಲಿ ರಚಿಸಿರುವುದನ್ನು ಕಾಣುತ್ತೇವೆ.

ಹಸ್ತಪ್ರತಿಗಳಲ್ಲಿ ಚಿತ್ರಗಳನ್ನು ರಚಿಸುವಾಗ ತೆಗೆದುಕೊಳ್ಳಬಹುದು ಲಕ್ಷಣಗಳ ಕುರಿತು ಹಿರಿಯ ಕಲಾ ಪೋಷಕರು, ವಿಮರ್ಶಕರು ಆಗಿದ್ದ ಪರ್ಸಿ ಬ್ರೌನರು, ಮಹಾಭಾರತದಲ್ಲಿಯ ಹಸ್ತಪ್ರತಿಗೆ ಪತಿವ್ರತಾ ಮಹಾತ್ಮೆ ವಿಷಯ ಆಯ್ದುಕೊಂಡು ಚಿತ್ರಿಸುವ ವಿಷಯಕುರಿತು ಹೀಗೆ ವಿವರಣೆಯನ್ನು ಕೊಡುತ್ತಾರೆ. '' ಶ್ರೀರಾಮ ಸೀತೆಯನ್ನು ಅಗ್ನಿಪರೀಕ್ಷೆಗೆ ಒಳಪಡಿಸಿದಾಗ ಕಿಚ್ಚು ಮತ್ತು ಅಗ್ನಿ ಜ್ವಾಲೆಗಳ ನಡುವೆ ಇರುವ ಸೀತೆಯ ಕಲಾಕೃತಿಯನ್ನು ಲಕ್ಷಿಸುತ್ತಾ ಈ ಕಲಾವಿದ ಬಹುಪ್ರಯಾಸ ಪಟ್ಟು ಬೆಳಕಿನ ಪ್ರಭಾವವನ್ನು ನಿರ್ವಹಿಸಿದ್ದಾನೆ. ಒಂದು ದಿನದ ಬೆಳಕು, ಎರಡನೆಯದು ಚಿತೆಯಬೆಳಕು ಎರಡು ಬೆಳಕನ್ನು ಸಮರ್ಥವಾಗಿ ಸಮ್ಮಿಶ್ರಗೊಳಿಸಿದ್ದಾನೆ. ಚಿತ್ರಕ್ಕೆ ಬೆಳ್ಳಿ'', ಬಂಗಾರದ ರೇಖಿನ ಕುಸುರಿನ ಕಾರ್ಯಮಾಡಿದರೂ ವರ್ಣಗಳ ಕ್ರಮ ಬದ್ಧತೆಯಿಂದ ಚಿತ್ರಕ್ಕೆ ಯಾವ ಊನೂ ಉಂಟಾಗುವುದಿಲ್ಲ.[೧೮] ಭಾವವಿಲ್ಲದ ಚಿತ್ರವು ನಿರ್ಭಾವದ ಶಿಲೆಯಂತೆಯೇ ಇರುತ್ತದೆ. ಭಾವ ಬಂಧನದಿಂದ ಶಿಲೆ ಶಿಲ್ಪವಾಗುವಂತೆ ಚಿತ್ರವು ಚಿತ್ರಕಲಾಕೃತಿಯಾಗುತ್ತದೆ. ನಯ ಮತ್ತು ನವಿರುಗಾರಿಕೆಯನ್ನು ಕೃತಿಯ ಒಳಗೊಳ್ಳುವುದರಿಂದ ಕೃತಿಪೂರ್ಣಗೊಳ್ಳಬಲ್ಲದು.

ಶಿವಮೊಗ್ಗದ ಮೈಸೂರ ಕಲಾವಿದರ ಕೃತಿಗಳಲ್ಲಿ , ಶಿಕಾರಿಪುರದ ತಿಪ್ಪಾಜಪ್ಪ ಅವರ ರೇಖಾ ಚಿತ್ರಗಳಲ್ಲಿ ಅನಾಮಿಕರಾಗಿಯೇ ಉಳಿದಿರುವ ಅನೇಕ ಕೃತಿಗಳನ್ನು ರಚಿಸಿರುವ ಅಸಂಖ್ಯಾತ ಕರ್ನಾಟಕದ ಕಲಾವಿದರ ಕೃತಿಗಳಲ್ಲೂ ಈ ಭಾವ ಬೆಡಗನ್ನು ಕಾಣುತ್ತೇವೆ. ಮಿಣಜಗಿಯವರ ಕಿರುರೂಪದ ರಾಗಮಾಲಾ ಚಿತ್ರಗಳಲ್ಲಿ , ವಿ.ಟಿ.ಕಾಳೆಯವರ ಅಭಿಸಾರಿಕೆಯ ಚಿತ್ರದಲ್ಲಿ ನವಿರಾದ ಭಾವ, ಬಳ್ಳಿಯಂತೆ ಬಳುಕುವ ಭಂಗಿಯನ್ನು ಕಾಣುವಂತೆ ತುಟಿಗಳಿಂದ ಮಂದಸ್ಮಿತವನ್ನು ಕಣ್ಣುಗಳಿಂದ

---

೧೭. R.S. SHIVAGANESHA MURTHY: Introduction to Manuscriptology, Page No. 54

೧೮. PERCY BRONWN : Indian paintings through the ages, Page No. 50

ಕಾಂತಿಯ ಸೊಬಗನ್ನು ಗುರುತಿಸಬಹುದು. ಹೀಗೆ ಚಿತ್ರಕ್ಕೆ ಬಣ್ಣ ದೇಹವಾದರೆ ಭಾವವು ಪ್ರಾಣವಾಗಿರುತ್ತದೆ. ಆಗ ಪರಿಪೂರ್ಣವಾದ ಕಲಾಕೃತಿಯಾಗಿ ನಿಲ್ಲಬಲ್ಲದು.

3. ಪರಿಪೂರ್ಣಹಂತ :

ಹಸ್ತಪ್ರತಿ ಚಿತ್ರಕಲೆಯಲ್ಲೇ ಇದು ತೂರ್ಯಾಸ್ಥಿತಿಯ ಹಂತವಾಗಿದೆ. ಇಲ್ಲಿ ಸಂಯೋಜನೆ, ಸಮತ್ವಗಳನ್ನು ಸರಿತೂಗಿಸಿಕೊಂಡು ಇರುವ ಚಿಕ್ಕಪುಟ್ಟ ಮಾರ್ಪಾಡುಗಳಿಂದ ಹೊರರೇಖೆಗಳಿಂದ ಕ್ರಮವನ್ನು, ತಂತ್ರವನ್ನು ಸಾಹಿತ್ಯದೊಂದಿಗೆ ಹೋಲಿಕೆಯನ್ನು ಮಾಡಿಕೊಂಡು ಸ್ವೀಕರಿಸುವ ಅಥವಾ ನಿರಾಕರಿಸುವಂತಹ ಅಂತಿಮದ ಹಂತ ಇದಾಗಿರುತ್ತದೆ. ಈ ಹಂತದಲ್ಲಿ ಕಲಾಕೃತಿಯು ಪರೀಕ್ಷೆಗೆ ಒಳಗೊಂಡಾಗ ಅದು ಪರಿಪೂರ್ಣಗೊಂಡ ಕಲಾಕೃತಿಯಾಗಬಲ್ಲದು. ಇಲ್ಲಿ ಪ್ರಾರಂಭದಿಂದ ಕೊನೆಯ ಹಂತದ ಎಲ್ಲ ಮಜಲುಗಳು ಮತ್ತೊಮ್ಮೆ ಆತ್ಮಾವಲೋಕನದ ಪರೀಕ್ಷೆಗೆ ಒಳಪಡುತ್ತವೆ.

ಚಿತ್ರಕಲೆಯೊಳಗೆ ಅಡಗಿರುವಂತಹ ಭಾವ ಕಲೆಯ ಕುರಿತು ರಸಋಷಿ ರಾಷ್ಟ್ರಕವಿ ಡಾ|| ಕೆ.ವಿ. ಪುಟ್ಟಪ್ಪನವರು ಹೀಗೆ ವಿವರಿಸುತ್ತಾರೆ. ''ಚಿತ್ರಕಾರನು ತನ್ನ ಕೃತಿಯನ್ನು ಪ್ರತಿಕೃತಿಯೆಂದು ಕರೆದಿದ್ದರೆ ಅದು ಹುಸಿಯೂ, ಮೋಸವೂ ಆಗುತ್ತಿತ್ತು, ಆದರೆ ಅವನು ತನ್ನ ಚಿತ್ರವನ್ನು ಕಣ್ಣಿಗೆ ಕಾಣುವ ಪ್ರಕೃತಿಯ ಪ್ರತಿಕೃತಿ ಎಂದು ತಿಳಿಯುವುದಿಲ್ಲ. ಅವನ ಚಿತ್ರಕೃತಿ ಯಾವೊಬ್ಬ ವ್ಯಕ್ತಿಯ ರೂಪಕ್ಕೂ ಕನ್ನಡಿ ಹಿಡಿಯುವುದಿಲ್ಲ. ಅವನದು ಬರಿಯ ರೂಪ ಕಲೆಯಲ್ಲ : ಭಾವಕಲೆ ಎಂದರೆ ಭಾವಕ್ಕೆ ರೂಪ ಕಲ್ಪನೆಯಾಗಿದೆ ಅಷ್ಟೆ . ಗಾಳಿಯನ್ನು ಅದರ ನಾನಾ ಸ್ಥಿತಿಗಳಲ್ಲಿ ಅನುಭವಿಸಿ ಅದರ ಅನೇಕಾನೇಕ ದೃಶ್ಯಗಳನ್ನು ಅವುಗಳಿಂದ ಪ್ರೇರಿತವಾದ ಬಹುಸಂಖ್ಯೆಯ ಭಾವಗಳನ್ನು ತನ್ನ ರಸಗರ್ಭದಲ್ಲಿ ಧಾರಣೆ ಮಾಡಿಕೊಂಡ ವರ್ಣಶಿಲ್ಪಿ ತನ್ನ ರಸಾನುಭೂತಿಗೆ ರೂಪದಾನ ಗೈದು, ಕಾಲ ತುಂಬಿದ ಮೇಲೆ ಅದನ್ನು ಪ್ರಕಟಿಸುತ್ತಾನೆ.[೧೯]

ಕುವೆಂಪು ಅವರ ಹೊರಗಣ್ಣಿಗೆ ಕಾಣಲಾರದ್ದು ಒಳಗಣ್ಣಿಗೆ ಕಾಣುತ್ತೆ. ಭೌತಿಕ ಪ್ರಪಂಚ ಮಿತಿಯನ್ನು ದಾಟಿ ಅಧ್ಯಾತ್ಮಿಕ ಜಗತ್ತಿನ ಪರಿಕಲ್ಪನೆಯಲ್ಲಿ ಋಷಿಮುನಿಗಳು ಕಂಡ ದೇವತೆಗಳ ರೂಪ ನಿಷ್ಪತ್ತಿಯನ್ನು ಕಲಾವಿದನು ಕಾಣುತ್ತಾನೆ ಅಥವಾ ಋಷಿಗಳೂ ಕಲಾಪರಿಚರ್ಯಯುಳ್ಳ ಅನುಭವಿಗಳು ಆಗಿದ್ದರು ಅಂತಹ ಅಭೌತಿಕ ಕೃತಿ ಕಲಾವಿದನಿಂದ ರೂಪತಾಳಿದಾಗ ಅದು ಒಂದು ಹೊಸ ಸೃಷ್ಟಿ ಅದನ್ನು ಹುಟ್ಟಿಸುವ ತಂತ್ರ ''ಅನ್ಯ'' ಪರವಲ್ಲ 'ಅನನ್ಯ' ಪರವೆಂದ ಹೀಗೆ ವಿವರಸಿದ್ದಾರೆ.......ಚಿತ್ರಕಾರನ ''ವಾಯುದೇವ '' ಒಂದು ಹೊಸ ಸೃಷ್ಟಿ, ಅದನ್ನು ಪ್ರತಿಮಾ ಎಂದು ಕರೆಯುತ್ತೇವೆಯೆ ಹೊರತು ಪ್ರತಿಕೃತಿ ಎಂದು ಕರೆಯುವುದಿಲ್ಲ. ಆ ಪ್ರತಿಮೆ ಸಟೆಯೋ ದಿಟವೋ ಎಂದು ಕೇಳುವ ಪ್ರಶ್ನೆ ವಿಫಲ. ಯಾವ ಅನುಭವದ ಪ್ರಚೋದನೆಯ ಫಲವಾಗಿ ಸೃಷ್ಟಿಶೀಲವಾದ ಈ ರೀತಿಯಾಗಿ

---

೧೯. ಕುವೆಂಪು : ದಾರ್ಶನಿಕ ಕಾವ್ಯ ಮೀಮಾಂಸೆ, ಪುಟ -೪೦

ಕರ್ನಾಟಕದ ಹಸ್ತಪ್ರತಿ ಚಿತ್ರಕಲೆ- ಒಂದು ಅಧ್ಯಯನ

ತಾಳೆಗರಿ ಹಸ್ತ ಪ್ರತಿಗಳಲ್ಲಿ ವರ್ಣ ಚಿತ್ರಗಳು



Courtesy :

Dinanath Pathy

Harman Publishing House, New Delhi.

ಬಣ್ಣಗಾರಿಕೆಯ ಹಂತವು ಹಸ್ತಪ್ರತಿ ಚಿತ್ರಕಲೆಯಲ್ಲಿ ಪ್ರಮುಖ ಘಟ್ಟವಾಗಿದ್ದು ಇದರ ನಿರ್ವಾಹಣೆಗೂ ಪ್ರಬುದ್ಧತೆ ಬೇಕು.

4. ಭಾವಾಭಿವ್ಯಕ್ತಿಯ ಹಂತ :

ವರ್ಣಗಾರಿಕೆಯ ಹಂತವು ಸ್ಥೂಲವಾಗಿದ್ದರೆ. ಭಾವಭಿವ್ಯಕ್ತಿಯ ಹಂತವು ಸೂಕ್ಷ್ಮವಾದ ಹಂತವಾಗಿದೆ. ಈ ಹಂತದಲ್ಲಿಯ ರಸವಂತಿಕೆಯನ್ನು ಡಾ. ಚೂಡಾಮಣಿ ನಂದಗೋಪಾಲ್ ಅವರು ಈ ರೀತಿಯಾಗಿ ವಿವರಿಸುತ್ತಾರೆ. 'ರಸ ' ಗಳ ವಿಷಯದಲ್ಲಿ ಮೊಟ್ಟ ಮೊದಲನೆಯ ವ್ಯಾಖ್ಯಾನವು ಭರತನ ನಾಟ್ಯಶಾಸ್ತ್ರವಾಗಿದೆ. ಸೌಂದರ್ಯಾಸ್ವಾದನೆ ಹಾಗೂ ರಸದೃಷ್ಟಿ, ರಸಾನುಭವ ತತ್ವಗಳನ್ನು ಪ್ರಪಂಚಕ್ಕೆ ಕೊಡುಗೆಯಾಗಿ ನೀಡಿರುವ ನಾಟ್ಯ ಶಾಸ್ತ್ರದ ಪ್ರತಿಯೊಂದು ಅಧ್ಯಾಯವನ್ನು ಆಧರಿಸಿ ಕಾಲಕಾಲಕ್ಕೂ ಅನೇಕ ವ್ಯಾಖ್ಯಾನಕಾರರು, ಅಲಂಕಾರ ಶಾಸ್ತ್ರ ಶಾಸ್ತ್ರಜ್ಞರು, ಜ್ಞಾನಿಗಳು ಆಯಾಕಾಲದ ಸಾಮಾಜಿಕ ಸ್ಥಿತಿಗತಿಗಳನ್ನು ಮನದಲ್ಲಿಟ್ಟುಕೊಂಡು ಅನೇಕ ಗ್ರಂಥಗಳನ್ನು ರಚಿಸುತ್ತಾ ಬಂದಿದ್ದಾರೆ. ಭರತನ ನಾಟ್ಯ ಶಾಸ್ತ್ರವು ಸುಮಾರು ಕ್ರಿ.ಶ. ಎರಡನೇ ಶತಮಾನದಷ್ಟು ಪುರಾತನವಾಗಿದ್ದರೆ. ಕರ್ನಾಟಕದಲ್ಲಿಯ ಕೆಳದಿ ಬಸ್ಸಪ್ಪ ನಾಯಕನು ರಚಿಸಿದ 'ಶಿವತತ್ವ ರತ್ನಾಕರವು' ಲಲಿತ ಕಲೆಗಳ ಬಗ್ಗೆ ರಚಿಸಿದ ಕೊನೆಯ ಆಕರ ಗ್ರಂಥವೆನಿಸಿಕೊಂಡಿದೆ. ಭಾರತೀಯ ವಾಸ್ತುಶಿಲ್ಪ, ಶಿಲ್ಪ ಚಿತ್ರ, ನೃತ್ಯ, ಸಂಗೀತ, ನಾಟ್ಯ ಈ ಕಲಾರಂಗದಲ್ಲಿ ಹೊರಬಂದಿರುವ ಗ್ರಂಥಗಳು ಪಾಶ್ಚಾತ್ಯ ಕಲಾರಂಗದ ಬೆಳವಣಿಗೆಗೆ ಹೋಲಿಸಿದರೆ ಬಹುಗಣನೀಯವೆನಿಸಿವೆ. ಈ ಎಲ್ಲ ಲಲಿತಕಲೆಗಳು ಅಭಿವ್ಯಕ್ತಗೊಳಿಸುವಲ್ಲಿ ಒಂದನ್ನೊಂದು ಅವಲಂಬಿಸಿವೆ. ಕಾವ್ಯಗಳಲ್ಲಿ ಸಾಹಿತ್ಯಕೃತಿಗಳಲ್ಲಿ ಉಕ್ತವಾಗಿರುವ ಕಲೆಯನ್ನು ಕುರಿತು ವರ್ಣನೆಗಳು ಮನರಂಜಿಸಿ, ಕಾವ್ಯಕ್ಕೆ ಒಂದು ರೀತಿಯ ಶೋಭೆಯನ್ನುಂಟು ಮಾಡುತ್ತವೆ. [೨೦]

ಬರೀ ವರ್ಣಲೇಪನದಿಂದ ಕೃತಿ ಪೂರ್ಣಗೊಳ್ಳಲಾರದು ಎನ್ನುವ ವಾತ್ಸಾಯನ ಮಾತನ್ನು ಗಮನಿಸಬೇಕು ರೂಪದಲ್ಲೂ, ಪ್ರಮಾಣದಲ್ಲೂ ಭಿನ್ನತೆ ಇರಬೇಕು ಆದರೆ ವರ್ಣಗಾರಿಕೆಯ ಬಂಧನದಲ್ಲಿ ಭಾವ, ಲಾವಣ್ಯಗಳ ಸಂಯೋಜನೆಯು ಸಮೃದ್ಧವಾಗಿರಬೇಕು. ಕಲಾಕೃತಿಯನ್ನು ಗಮನಿಸುತ್ತಲೆ ಸಾಹಿತ್ಯಕೃತಿಯೊಳಗಿನ ಭಾವ ಮಿಂಚಬೇಕು. ಈ ನವರಸಗಳಿಗೆ ತಕ್ಕದಾದ ನವವರ್ಣ ಮತ್ತು ವರ್ಣಕ್ಕೆ ಆಧರಿಸಿದ ದೇವತೆಗಳ ವಿವರವನ್ನು ವಿಶ್ವನಾಥನ ''ಸಾಹಿತ್ಯ-ದರ್ಪಣ''ವು ನೀಡುವ ಮುಖ್ಯವಾದ ವಿವರಣೆ ಹೀಗಿದೆ. ಆಯಾ ರಸದ ಹಿನ್ನೆಲೆಯೊಂದಿಗೆ ಹುಟ್ಟಿಕೊಳ್ಳುವ ವರ್ಣ. ಆ ವರ್ಣಕ್ಕೆ ಅಧಿಪತಿಯಾಗಿರುವ ದೇವರನ್ನು ಕಾಣುವಂತಹ ಕೋಷ್ಟಕ ಇದಾಗಿದೆ. ರಸಗಳಲ್ಲಿಯೇ ಜನಪ್ರಿಯ ರಸ ಶೃಂಗಾರ ರಸ ಆ ರಸದಲ್ಲಿ ಚಿಂತೆ, ರೋಗ, ಯಾತನೆಗಳಿಗೆ ಆಸ್ಪದವೇ ಇಲ್ಲ. ಎಲ್ಲಾ ನೋವು, ಭವಣೆಗಳನ್ನು ಇಟ್ಟುಕೊಂಡು ಅವುಗಳನ್ನು ಮೀರಿ ಸಾಗುವುದು ಈ ರಸದ ಮಹತ್ತಾಗಿದೆ. ಇದರ ಹಿನ್ನೆಲೆಯಲ್ಲಿ ಈ ರಸದ ಅಧಿಪತಿ ವಿಷ್ಣುವನ್ನು ಕಾಣುವ ಉದಾತ್ತಯು ಈ ರಸದ ಬೆನ್ನಿಗಿದೆ. ಭಾವ ವರ್ಣ

---

೨೦. ಡಾ. ಎಸ್.ಸಿ.ಪಾಟೀಲ, ಸತ್ಯಾನಂದ ಪಾತ್ರೋಟ ಸಂ: ನಿಜದ ನೆಲೆ, ಡಾ.ಚೂಡಾಮಣಿ ನಂದಗೋಪಾಲ, ಪುಟ -೨೫೧, ೨೫೨

ಮತ್ತು ದೇವತೆಗಳನ್ನು ಗಮನಿಸಿರಿ.

ಕ್ರ.ಸಂ.	ರಸ	ವರ್ಣ	ಅಧಿದೇವತೆ	ದೇವತೆಗಳ ಚಿತ್ರಸ್ವರೂಪ
1.	ಶೃಂಗಾರ	ಶ್ಯಾಮಲವರ್ಣ	ವಿಷ್ಣು	
2.	ಹಾಸ್ಯ	ಬಿಳುಪು	ಶಿವ	
3.	ಕರುಣ	ಬೂದುವರ್ಣ	ಯಮ	
4.	ರೌದ್ರ	ಕೆಂಪು	ರುದ್ರ	ಈ ರೀತಿಯ
5.	ವೀರ	ಹಳದಿ	ಇಂದ್ರ	ರಸ, ವರ್ಣ ಮತ್ತು ದೇವತೆ
6.	ಭಯಾನಕ	ಕಪ್ಪು	ಕಾಲ	ಗಳ ಕ್ರಮವು ಇರಬೇಕು. [೨೧]
7.	ಭೀಭತ್ಸ	ನೀಲ	ಮಹಾಕಾಲ	
8.	ಅದ್ಭುತ	ಸ್ವರ್ಣ	ಗಂಧರ್ವ	
9.	ಶಾಂತ	ಮಲ್ಲಿಗೆ, ಬಿಳುಪು	ನಾರಾಯಣ	
		ಚಂದ್ರನ ಶೀತಲ		

ಸೃಷ್ಟಿಶೀಲವಾದ ವರ್ಣಶಿಲ್ಪಿಯ ಪ್ರತಿಭೆ ರೂಪ ರಚನೆ ಮಾಡುತ್ತದೆಯೋ ಆ ರೂಪದ ಅಥವಾ ಪ್ರತಿಮೆಯ ವಿಚಾರವಾಗಿ ನಾವು ಕೇಳುವ ಪ್ರಶ್ನೆಗಳೆಂದರೆ. ಅದು ಸಜೀವವಾಗಿದೆಯೇ ? ಸುಂದರವಾಗಿದೆಯೇ ? ಪ್ರೇಕ್ಷಕರಲ್ಲಿ ತನಗೆ ಆಧಾರವಾಗಿದ್ದ ಆ ಮೂಲಾನುಭವವನ್ನು ಪ್ರಚೋದಿಸಲು ಸಮರ್ಥವಾಗುತ್ತದೆಯೋ ಅಷ್ಟಷ್ಟು ಮಟ್ಟಿಗೆ ಅದು ಸತ್ಯವಾಗುತ್ತದೆ; ಸುಂದರವೂ ಆಗುತ್ತದೆ. ಹಾಗೆ ಸತ್ಯವಾಗಿರುವಿಕೆಯಲ್ಲಿಯೆ ಅದರ ಸುಂದವಾಗಿರುವಿಕೆಯೂ ಒಡಗೂಡಿರುತ್ತದೆ. ಆದ್ದರಿಂದಲೇ ಅಲ್ಲಿ ಸತ್ಯ ಮತ್ತು ಸೌಂದರ್ಯಗಳಿಗೆ ನಾವು ಮಾಡುವ ಕೇವಲ ಭೇದ ಕಲ್ಪನೆ ಅರ್ಥ ರಹಿತ [೨೨] ಈ ರೀತಿ ಕೃತಿಯೆಂಬುದು ಪರಿಪೂರ್ಣವಾಗಿರಬೇಕು.

ಭೌತದಾಚೆಯ ಕಲೆ ಅಥವಾ ತಾಂತ್ರಿಕ ಕಲೆ :

ಇದನ್ನು ಶಿಷ್ಟ ಸಾಂಪ್ರದಾಯ ಹಂತದ ನಂತರದ ಸಾರ್ವತ್ರಿಕವಲ್ಲದ ಭೌತದಾಚೆಯ ಚಿತ್ರಕಲೆ ಎನ್ನಬಹುದು. ಇದೊಂದು ಸಂಕೇತಗಳನ್ನೇ ಆಧರಿಸಿ ಸಿದ್ಧಪಡಿಸುವ ತಂತ್ರವಾಗಿದೆ. ಭಾರತೀಯ ಯೋಗ ಶಾಸ್ತ್ರದ ನಂತರದ ಹಟಯೋಗದಲ್ಲಿ, ಹಲವು ಧರ್ಮ ಶಾಸ್ತ್ರಗಳಲ್ಲಿ, ಸ್ತ್ರೀ ದೇವತೆಯರ ಕುಂಡನಿಯಲ್ಲಿ ಮಂಡಲಗಳಲ್ಲಿ ಕಾಣಬಹುದಲ್ಲದೆ ವೀರಶೈವ ಧರ್ಮದ ಸಕೀಲ, ಉದ್ಧರಣೆ, ಕರುಣ ಹಸಗೆ ಉದ್ಧರಣೆಗಳು ಈ ಮಾರ್ಗದಲ್ಲಿಯೇ ಬರಬಹುದು ವೈಯಕ್ತಿಕ

---

೨೧. ಡಾ. ಎಸ್.ಸಿ.ಪಾಟೀಲ , ಸತ್ಯಾನಂದ ಪಾತ್ರೋಟ ಸಂ: ನಿಜದ ನೆಲೆ, ಡಾ.ಚೂಡಾಮಣಿ ನಂದಗೋಪಾಲ ಪುಟ -೨೫೩

೨೨. ಕುವೆಂಪು : ದಾರ್ಶನಿಕ ಕಾವ್ಯ ಮೀಮಾಂಸೆ, ಪುಟ -೪೧

ಶ್ರೀ ಸೂಕ್ತಾರ್ಥ ಸಾದೃಶ್ಯದ ದೇವತೆಗಳು

ಕಲಾವಿದ : ಶ್ರೀ ಜಿ.ಎಲ್.ಎನ್.ಸಿಂಹ,ಮೈಸೂರು.



ಕೃಪೆ:

ದಿ॥ಎಂ.ಬಿ.ಸಿಂಗ್ ಸಂಸ್ಥಾಪಿತ ರಾಮಸನ್ಸ್ ಕಲಾ ಪ್ರತಿಷ್ಠಾನ

ಸಂಶೋಧನೆ, ಪ್ರಶಿಕ್ಷಣ ಮತ್ತು ಕಲಾಭಿವೃದ್ಧಿ ಕೇಂದ್ರ ಮೈಸೂರು.

ಅನಿಸಿಕೆ. ಇವೆಲ್ಲವೂ ಭಿನ್ನಮಾರ್ಗದ ವಾಮಾಚಾರಗಳಾಗಿಯೂ ಕೆಲವು ಬಳಕೆಯಲ್ಲಿವೆ.

ಈ ವಿಷಯಕುರಿತು ಬಿ. ಆರ್. ವಿಜಯ ಕುಮಾರ್ (ಅನು:ಎಂ.ಎಚ್. ಕೃಷ್ಣಯ್ಯ) ಅವರ ತಂತ್ರ ಸಿದ್ಧಾಂತ ವಿಚಾರ ಹೀಗಿದೆ. ''ತಂತ್ರ'' ಎನ್ನುವ ಶಬ್ದವನ್ನು ಕೇಳಿದ ಕೂಡಲೇ ಸಾಮನ್ಯವಾಗಿ ಅದುಯಾವದೋ ಒಂದು ನಿಗೂಢ, ರಹಸ್ಯ ಆಚರಣೆ ಅಥವಾ ಪದ್ಧತಿಗೆ ಸಂಬಂಧಿಸಿದ್ದು ಎಂಬ ಭಾವನೆ ಜನರಲ್ಲಿ ಮಾಡುತ್ತದೆ. ಅದು ಅನಾಗರಿಕ ಜಗತ್ತಿನ, ಭಯ ಭೀತಿ ಉಂಟುಮಾಡುವ ಯಾವುದೋ ನಿಷಿದ್ಧ ಪದ್ಧತಿ ಎನಿಸಿದರೂ ಆಶ್ಚರ್ಯವಿಲ್ಲ. ಜನ ಸಾಮಾನ್ಯರಲ್ಲಿ ಇಂತಹ ತಪ್ಪು ಗ್ರಹಿಕೆ ಪ್ರಚಲಿತವಾಗಿರುವುದು ದುರದೃಷ್ಟಕರ. ಇದರಿಂದಾಗಿ ಯೋಗದ ಅನುಭವದಂತೆಯೇ ವಿಭಿನ್ನವಾದ ಒಂದು ಅನುಭವ ಪಡೆಯುವ ಅವಕಾಶದಿಂದ ವಂಚಿತರಾದಂತೆ ಆಗಿದೆ. ಆದರೆ ವಾಸ್ತವವಾಗಿ 'ತಂತ್ರ' ಎಂದರೆ ಏನು ?

ತಾಂತ್ರಿಕರು ತಂತ್ರದ ಪರಿಕಲ್ಪನೆಯ ಮೂಲವನ್ನು ವೇದಗಳಲ್ಲಿದೆ ಎನ್ನುತ್ತಾರೆ. ಅದೊಂದು ತತ್ವ ಸಿದ್ಧಾಂತ, ಉಪನಿಷತ್ತುಗಳಲ್ಲಿನ ಏಕದೇವೋಪಾಸನೆಯ ಸಾರ ಅದರಲ್ಲಿದೆ ಎನ್ನುತ್ತಾರೆ. ಪುರಾಣಗಳಲ್ಲಿನ ಭಕ್ತಿ ಆಚರಣೆ, ಪತಂಜಲಿ ಸೂತ್ರದ ಯೋಗ ವಿಧಾನಗಳು, ಅಥರ್ವಣ ವೇದದಲ್ಲಿ ಪ್ರತಿ ಪಾದಿತವಾಗಿರುವ ಮಂತ್ರದ ಗುಣಸತ್ವ ಇವೆಲ್ಲದರ ತಿರಳೂ, ಭಾರತದಲ್ಲಿ ಸಾವಿರಾರು ವರ್ಷಗಳಿಂದ ರೂಪಿತವಾಗಿರುವ ವಿವಿಧ ಸಿದ್ಧಾಂತ ವ್ಯವಸ್ಥೆಗಳ ಸತ್ವವೂ ಅದರಲ್ಲಿದೆ. ಎಂಬುದು ತಂತ್ರದ ಅನುಯಾಯಿಗಳ ನಂಬಿಕೆಯಾಗಿದೆ. [೨೩]

ಈ ತಂತ್ರದ ಉಪಾಸನೆಯಲ್ಲಿ ಸಂಕೇತಗಳು ಪ್ರಮುಖ ಪಾತ್ರ ನಿರ್ವಹಿಸುತ್ತವೆ. ಈ ಸಂಕೇತಗಳು ಕೆಲವು ಸಲ ಪರಿಕಲ್ಪನೆಯಲ್ಲಿ ಮೈತಳೆದಿರುವ ವಿವಿಧ, ವಿಚಿತ್ರ ಪ್ರಾಣಿ, ಪಕ್ಷಿ, ಉರಗ, ಮೀನುಗಳಂತಹ ಆಕೃತಿಗಳಾಗಿರಬಹುದು ಅಥವಾ ರೇಖಾ ಗಣಿತದ ತ್ರಿಕೋನ, ಚೌಕೋನ, ಪಂಚ, ಬಹುಭುಜಾಕೃತಿಗಳೊಂದಿಗೆ ವರ್ತುಳಗಳನ್ನು ಬಳಸಿರುವ ಆಕೃತಿಗಳಾದರೂ ಆಗಿರಬಹುದು. ಹೂಗಿಡದ ತಂತ್ರವೂ ಆಗಿರಬಹುದು ಶ್ರೀಚಕ್ರ ಮೇಲ್ನೋಟದಲ್ಲಿ ಭೂಮಿತಿಯ ರೇಖಾ ಚಿತ್ರಗಳ ಸಂಕಲನವಾದರೂ ಅದು ಪುರುಷ -ಪ್ರಕೃತಿಯ ಸಂಕೇತದಂತಿದೆ. ಯಂತ್ರದಲ್ಲಿರುವ ಕೇಂದ್ರವು ಆಳವು, ಗಾತ್ರವೂ ಇಲ್ಲದ ಮೂಲಸ್ಥಳವಾಗಿದ್ದು ಅದಕ್ಕೆ ಬೀಜಕೇಂದ್ರವೆನ್ನುತ್ತಾರೆ. ಇದರೊಳಗಿನ ಒಂದು ತ್ರಿಕೋನ ಸ್ತ್ರೀ ಜನನಾಂಗವಾದರೆ ಮತ್ತೊಂದು ಪುರುಷ ಶಕ್ತಿ ಕೇಂದ್ರವಾಗುತ್ತದೆ. ಇಂತಹ ಹಿನ್ನೆಲೆಯ ಅನೇಕ ಚಿತ್ರಗಳು ಕರ್ನಾಟಕದ ಸಾಕಷ್ಟು ಹಸ್ತಪ್ರತಿ ಭಂಡಾರಗಳ ಹಸ್ತಪ್ರತಿಗಳಲ್ಲಿವೆ.



ಭಾರತೀಯ ಮತ್ತು ಕರ್ನಾಟಕ ಸಮಕಾಲೀನ ಚಿತ್ರಕಲೆಯಲ್ಲೂ ಇಂತಹ

---

೨೩. ಡಾ. ಎಸ್.ಸಿ.ಪಾಟೀಲ, ಸತ್ಯಾನಂದ ಪಾತ್ರೋಟ ಸಂ: ನಿಜದ ನೆಲೆ, ಕೆ. ವಿಜಯಕುಮಾರ, ಪುಟ -೩೭೭

ಪ್ರಯೋಗಗಳು ಸಾಕಷ್ಟು ನಡೆದಿವೆ. ಈ ಹಾದಿಯಲ್ಲಿ ಮುನ್ನಡೆದಿರುವ ಜಿ. ಸ್ವಾಮಿನಾಥನ್, ಬಿರೇನ್‌ಡೇ, ಜಿ.ಆರ್.ಸಂತೋಷ್, ಕೆ.ಸಿ. ಫಣಿಕ್ಕರ್, ಪಿ.ಟಿ. ರೆಡ್ಡಿ ರಂತವರನ್ನು ಹೆಸರಿಸಬಹುದು. ಇವು ನೇರ ಲಲಿತಕಲೆಗೆ ಸಂಬಂಧಿಸಿದರೆ -ಹಸ್ತಪ್ರತಿಗಳಿಗೆ ಸಂಬಂಧಿಸಿದ ಮಾಟ, ಮಂಡಲದಂತಹ ಅನೇಕ ಸಂಯೋಜನೆಗಳನ್ನು , ಬೀಜಾಕ್ಷರಗಳನ್ನು ಸಕಾಲಗಳಲ್ಲಿ ಗುರುತಿಸಬಹುದಾಗಿದೆ. ಮೈಸೂರು ಹಸ್ತಪ್ರತಿ ಭಂಡಾರದ 188 (ಕೆ.ಬಿ. 913)ರ ಜೋತಿಷ್ಯ ವೈದ್ಯ, ಮಂತ್ರಗಳ ಗ್ರಂಥಗಳಲ್ಲಿ 555 (ಕೆ. 1000/5) ಚೆನ್ನಬಸವಣ್ಣನವರ ಪದಮಂತ್ಯ ಗೋಪ್ಯ (ಸಟೀಕ) 290 (ಕೆ.1000/11) ದಶವಿಧ ಪಾದೋಧಕದಲ್ಲೂ ಕಾಣಬಹುದು.

ಉದ್ಧರಣೆಗಳು ಮಂಡಲ, ತಂತ್ರಗಳ ಹೋಲಿಕೆಗೆ ಸಮೀಪ ಬರುತ್ತವೆ. ಅದಕ್ಕಾಗಿ ಪೂಜ್ಯರಾದ ಶ್ರೀ ಜ. ಚ. ನಿಯವರು ಈ ರೀತಿ ವಿವರಿಸುತ್ತಾರೆ ಉದ್ಧರಣೆ ಉಪಾಸನೆಯ ಒಂದು ತಂತ್ರ ಮನ ಭಾವಗಳನ್ನು ಕಾಯ-ಕರಣಗಳನ್ನು ಕೇಂದ್ರೀಕರಿಸುವ ಸೂಚ್ಯಸೂತ್ರ ಪ್ರವೃತ್ತಿಯ ವಾಸನೆಯನ್ನು ನಿಯಂತ್ರಿಸುವ, ವಿಕೃತಿಯಿಂದ ದೂರಿರಿಸುವ ಅಕುಟಿಲ ಯಂತ್ರ ಮನಸ್ಸನ್ನು ಮನನಕ್ಕೆ, ಮತಿಯನ್ನು ವಿಚಾರಕ್ಕೆ ಹಚ್ಚುವ ಅಕ್ಷರ ಮಂತ್ರವಾಗಿದೆ. ಇದು ವಾಂಙ್ಮಯವೂ ಅಹುದು, ವರ್ಣಮಯವೂ ಅಹುದು. ಇದನ್ನು ಅಂಗ-ಲಿಂಗ ಸಾಹಿತ್ಯವೆಂದೂ ಹೇಳಬೇಕು. ಇದು ಅಂಕೆ, ಅಕ್ಷರ, ವರ್ಣ ಪ್ರಧಾನವಾದ ಸಾಹಿತ್ಯ ಅಂತರಂಗವನ್ನು ಅರಿತುಕೊಳ್ಳಲು, ಅನುವನ್ನುಂಟು ಮಾಡುವ ಸಾಂಕೇತಿಕ ದೃಶ್ಯಸಾಹಿತ್ಯವಾಗಿದೆ.[೨೪]

ಹಸ್ತಪ್ರತಿಗಳಿಗಾಗಿ ತಾಡ ಪತ್ರಗಳನ್ನಾಗಲಿ, ಭೂರ್ಜ ಪತ್ರಗಳನ್ನಾಗಲಿ ಹೇಗೆ ತಯಾರಿಸುತ್ತಾರೆ? ತಯಾರಿಕಾಕ್ರಮದಲ್ಲಿ ತಾಳೆಯ ಮರದ ಗರಿಗಳಿಂದ ಹಿಡಿದು ಅವುಗಳನ್ನು ಹದಗೊಳಿಸಿ, ಹಲವು ಕ್ರಮಗಳು ಹಂತಗಳು ಜರುಗಿದ ನಂತರ ಕಂಠವನ್ನು ಬಳಸಿ ಅಕ್ಷರಗಳನ್ನು ಕೊರೆದು ಕಪ್ಪನ್ನು ಸವರಿ ಫಲಕಗಳನ್ನಿಟ್ಟು ವಸ್ತ್ರಬಿಗಿದು ಕವುಳಿಗೆಯನ್ನು , ಕಟ್ಟನ್ನು ಹೇಗೆ ತಯಾರಿಸುತ್ತಿದ್ದರೂ ಎಂಬ ವಿಷಯವು ಕನ್ನಡ ಸಾಹಿತ್ಯದ ಚರಿತ್ರೆಯಲ್ಲಿ ಸಾಕಷ್ಟು ಮಾಹಿತಿ ದೊರೆತಿದೆ. ಮತ್ತು ಅನೇಕ ಕನ್ನಡೇತರ ಸಂಸ್ಕೃತ ಕೃತಿಗಳಿಂದಲೂ ತಿಳಿದು ಬಂದಿದೆ. ಸಂಸ್ಕೃತ ಕಾವ್ಯಗಳಲ್ಲಿ ಹಸ್ತ ಪ್ರತಿಗಳಲ್ಲಿಯ ಚಿತ್ರಗಳನ್ನು ಕುರಿತು ಮಹಾಕವಿ ಕಾಳಿದಾಸ ಈ ರೀತಿಯಾಗಿ ಹೇಳುತ್ತಾನೆ.

ಭೂರ್ಜ-ತ್ವಚ ಕುಂಜರ -ಬಿಂದು ಸೊನಃ
ವೈಜಂತಿ ವಿದ್ಯಾಧರ ಸುಂದರಿನಾಮ ಅನಂಗಃ
ಲೇಖಕ್ರಿಯಾಯೋಪಾಯ ಯೋಗಮ್
ಕುಃ ಇರ್ಸಾಂಭವ. -ಕಾಳಿದಾಸ - ಕುಮಾರ ಸಂಭವ ೧-೧೧೭

೨೪. ಡಾ.ಬಿ.ವ್ಹಿ. ಶಿರೂರ (ಸಂ:) ಗೌರವ, ಡಾ.ಜಚನಿ, ಉದ್ದರಣೆಗಳು, ಪುಟ -೧೫೩

ಮಹಾಕವಿ ಕಾಳಿದಾಸನು ತನ್ನ "ಕುಮಾರ ಸಂಭವ" ಕೃತಿಯ ಪ್ರಾರಂಭದಲ್ಲಿ ನೈಸರ್ಗಿಕ ಖನಿಜಾಂಶಗಳ ವರ್ಣದಿಂದ ರಚಿಸಿರುವ ಭೂರ್ಜಪತ್ರದ ಹಸ್ತಪ್ರತಿ ಚಿತ್ರಕಲೆಯನ್ನು ನೋಡಿ ತನ್ನದೆಯಾದ ಕವಿತ್ವಗುಣದಿಂದ ಈ ಮೇಲಿನಂತೆ ಕವಿತೆಯೊಂದನ್ನು ರಚಿಸಿದ್ದಾನೆ. ಕಾವ್ಯದ ಭಾವ ಇಂತಿದೆ. ಕೃತಕವಲ್ಲದ ವರ್ಣಗಳಿಂದ ರಚಿಸಿದ ಹಸ್ತಪ್ರತಿ ಚಿತ್ರವು ರಕ್ತರಂಜಿತ ಆನೆಯ ಚರ್ಮವು ಯುವ ರಾಜಕುಮಾರ ವಿದ್ಯಾಧರನು ತನ್ನ ಯುವ ಕಿಶೋರ ಸಖಿಯರಿಗೆ ಬರಿಯುವ ಪ್ರೇಮ ಪತ್ರದಂತಿದೆ ಎಂದು ವರ್ಣಿಸಿರುವ ಆತ ತನ್ನ ಮತ್ತೊಂದು ಕಾವ್ಯ ಸಂಕಲವಾಗಿರುವ 'ವಿಕ್ರಮೋರ್ವಶ್ಯ' ದಲ್ಲಿ ಈ ವರ್ಣರಂಜಿತ ಹಸ್ತಪ್ರತಿಯು

" ಭೂಜಂಗಾನಿರ್ಮೋಕಾ ಇವ ಭೂರ್ಜ ಪತ್ರರಂಗತೋ"

ಕಳಚಿಕೊಂಡಿರುವ ಕಾಳಿಂಗ ಸರ್ಪದ ಪೊರೆಯಂತಿದೆ ಎಂದು ಹೀಗೆ ಹೇಳಿಕೊಂಡಿದ್ದಾನೆ. [೨೫]

ಕ್ರಿ.ಶ. 932 ರ ಸುಮಾರಿಗೆ ಇದ್ದಂತಹ ಹರಿಶೇನನು ಹಸ್ತಪ್ರತಿಯ ಚಿತ್ರವು ಅರಿವೆಯ ಮೇಲೆ ರಚಿಸಿರುವುದರ ಒಂದು ಉದಾಹರಣೆಯನ್ನು ಕೊಡುತ್ತಾನೆ. ಅವನಂತೆ ಹರ್ಷಚರಿತೆಯ ಬಾಣನೂ ಅರಿವೆಯ ಮೇಲೆ ಬರೆದ ಹಸ್ತಪ್ರತಿಯ ಚಿತ್ರ ವಿವರಿಸುತ್ತಾನೆ. ತನ್ನ ಕೃತಿಯಾಗಿರುವ ಕಾದಂಬರಿಯ ಕೃತಿಯಲ್ಲಿ ಪುಂಡರೀಕನು ತನ್ನ ಪ್ರಿಯತಮೆ ಮಹಾಶ್ವೇತೆಗೆ ತಾನುಟ್ಟ ವಲ್ಕಲದಂತಹ ತೆಳು ಅರಿವೆಯ ಮೇಲೆ ಕಲಾತ್ಮಕವಾದ ಸಂದೇಶ ಕಳಿಸಿದನಂತೆ. [೨೬]

ಪರಿಕರಗಳು

ಈ ಮೇಲಿನ ಸಮೀಕ್ಷಾಹಂತ ಮತ್ತು ಕಾರ್ಯ ನಿರ್ವಾಹಣ ಹಂತಗಳು ಕಲಾವಿದ ಮತ್ತು ಸಾಹಿತಿಯ ಭಾವ ವಿನಿಮಯದ ಭಾವ ಬಂದಿದೆ. ಮಜಲುಗಳಾಗಿದ್ದು ಸಂಪೂರ್ಣವಾಗಿ ಭೌತಿಕದಾಚೆಯ ಮನಸ್ಸಿನ ನೆಲೆಯನ್ನಾಶ್ರಯಿಸಿದ ಅಂಶಗಳಾಗಿವೆ. ಚಿತ್ರದ ಸೃಷ್ಟಿಗೆ ಮಾನಸಿಕ ಕ್ರಿಯೆಯು ದೃಢಗೊಂಡ ಬಳಿಕ ಅದಕ್ಕೆ ಪೂರಕವಾಗಿರುವ ಭೌತಿಕವಾದಂತಹ ಪರಿಕರಗಳು ಬೇಕು. ಇವುಗಳನ್ನು ಕುರಿತು ಒಂದೊಂದಾಗಿ ಅಧ್ಯಯನಕ್ಕೆ ಒಳಪಡಿಸಬಹುದು.

ಶುದ್ಧ: ಇದು ಪ್ರಾಥಮಿಕ ಬಣ್ಣ, ಇದನ್ನು ಪ್ರಾದೇಶಿಕವಾಗಿ ಬೇರೆ ಬೇರೆಯಾಗಿ ನಿರ್ಮಿಸಿಕೊಳ್ಳುತ್ತಾರೆ. ಬಳಪದಕಲ್ಲನ್ನು ಒರಟುಕಲ್ಲಿನ ಮೇಲೆ ತೇಯ್ದು ಬರುವ ಮೃದು, ನುಣುಪು ಗಂಧವನ್ನು ಒಣಗಿಸಿ ಉಂಡೆ ಕಟ್ಟಿಕೊಂಡು ಬಣ್ಣ ಯಾವುದರ ಮೇಲೆ ಮಾಡಬೇಕೋ ಅದಕ್ಕೆ ಪ್ರಾಥಮಿಕವಾಗಿ ಈ ಸುದ್ದ ಅಥವಾ ಶುದ್ಧವನ್ನು ಸೋಸಿ ಬಳಸುತ್ತಾರೆ. ಜೈನ ಹಸ್ತಪ್ರತಿಗಳು ಬಹು ವರ್ಣರಂಜಿತವಾಗಿರುವುದರಿಂದ ಇಂತಹ ಮೇಲ್ಮೈಗೆ ಬಣ್ಣಗಳನ್ನಾಗಿ ಬಳಸುತ್ತಾರೆ.

ಬಣ್ಣಗಳ ಸಾಮಗ್ರಿ : ಕರ್ನಾಟಕದ ಹಸ್ತಪ್ರತಿ ಚಿತ್ರಕಲಾವಿದರು ತಮ್ಮದೇ ಸೀಮಿತ ಬದುಕಿನಲ್ಲಿ

---

೨೫. R.S. Shiva Ganesh Murthy: Introduction to Manuscriptology, Page:32

೨೬. R.S. Shiva Ganesh Murthy: Introduction to Manuscriptology, Page:32

ಕರ್ನಾಟಕದ ಹಸ್ತಪ್ರತಿ ಚಿತ್ರಕಲೆ- ಒಂದು ಅಧ್ಯಯನ

ಹಸ್ತ ಪ್ರತಿಗಳ ರಚನೆ ಮತ್ತು ಸಂರಕ್ಷಣಾ ಸಲಕರಣೆಗಳು



ವಿವಿಧ ಮೂಲಗಳಿಂದ

ವಾಸಿಸುತ್ತಾ ಲೋಕೋತ್ತರ ಕಲೆಗಳನ್ನು ಜಗತ್ತಿಗೆ ಇಂದಿಗೂ ನೀಡುತ್ತಲೆ ಅನಾಮಿಕರಾಗಿ ಉಳಿದ ಮಹಾನುಭಾವರು. ಜಗತ್ತಿಗೆ ಬೇಕಾದ ಎಲ್ಲ ಧಾರ್ಮಿಕ, ಸಾಮಾಜಿಕ, ರಾಜಕೀಯ ಪರಿಕರಗಳನ್ನು ಮಾಡಿಯೂ ಯಾರಿಂದಲೂ ಗುರುತಿಸಿಕೊಳ್ಳಲಾರದೆ ತೆರೆಯ ಹಿಂದೆ ಉಳಿದುಕೊಂಡ ಅನಾಮಿಕರು. ಅವರ ಬದುಕನ್ನು ಅವರ ಬವಣೆಯನ್ನು ಸಾಹಿತ್ಯವಲಯದ ವಾರಸುದಾರರು ಗುರುತಿಸದ ಕಾರಣ ಅವರ ಬದುಕಿನಂತೆ ಅವರ ಬಣ್ಣಗಾರಿಕೆಯ ಕ್ರಮವೂ ಐತಿಹವಾಗಿಯೇ ಉಳಿದಿದೆ.

ಈ ವಿಷಯ ಕುರಿತು ಚಿತ್ರಕಲಾವಿದರು, ಸಾಹಿತಿಗಳು ಆಗಿರುವ ಚಂದ್ರಕಾಂತ ಕುಸನೂರು ಅವರು ಕಲಾವಿದರು ಮತ್ತು ಬಣ್ಣಗಳ ಕುರಿತು ಈ ರೀತಿಯಾಗಿ ಹೇಳುತ್ತಾರೆ. 'ಕಲಾವಿದನಲ್ಲಿರುವ ಎರಡೇ ಎರಡು ವಸ್ತುಗಳು ಒಂದು ರೇಖೆ ಇನ್ನೊಂದು ಬಣ್ಣ, ಕಲಾವಿದನು ಈ ಎರಡರಿಂದಲೇ ತನ್ನ ಕೃತಿಯನ್ನು ನಿರ್ಮಿಸಬೇಕು. ಇನ್ನೂ ಶಿಲ್ಪಕಾರ ಮೂರ್ತಿಕಾರ, ಕಾಷ್ಠ ಮೂರ್ತಿಕಾರ, ಮಣ್ಣು ಅಥವಾ ಇಂಥ ಬೇರೆ ಸಾಧನಗಳಿಂದ ಕಲಾಕೃತಿಗಳನ್ನು ತಯಾರಿಸುವ ಕಲಾವಿದ ಇವರೆಲ್ಲರಲ್ಲಿಯೂ ರೇಖೆ ಮತ್ತು ವರ್ಣ ಇವರೆಡೆ ಮುಖ್ಯವಾಗಿರುತ್ತವೆ ಎಂದು ಹೇಳಿದರೆ ವಿಚಿತ್ರವೆನಿಸಬಹುದು, ಆದರೆ ಈ ಕಲಾಮಾಧ್ಯಮಗಳಲ್ಲಿಯೂ ರೇಖೆ ಮತ್ತು ಬಣ್ಣಗಳೇ ಇರುತ್ತವೆ. ಆಕಾರ ನಿರ್ಮಿತಿಯೇ ರೇಖೆಗಳ ಬಂಧನದಿಂದವಾಗುತ್ತದೆ ಮತ್ತು ಯಾವುದೇ ವಸ್ತುವಿಗೆ ತನ್ನ ಪ್ರಾಕೃತಿಕ ಬಣ್ಣ ಇರುತ್ತವೆ. ಕಲಾವಿದನು ನಿರ್ಮಿಸಿದ ಕಲಾಕೃತಿಯ ಆಕಾರ, ವರ್ಣ, ಎತ್ತರ, ಅಗಲ, ಆಳ, ಬೇರೆ ಬೇರೆಯಾಗಿದ್ದರೂ ಎಲ್ಲದರಲ್ಲಿ ರೇಖೆ ಮತ್ತು ವರ್ಣಗಳೇ ಆಟ ಆಡುತ್ತವೆ.[೨೭]

ಹಸ್ತಪ್ರತಿ ವರ್ಣಗಾರಿಕೆಗೆ ಬೇಕಾದ ವರ್ಣ ಮತ್ತು ಇತರ ಸಾಮಗ್ರಿಗಳನ್ನು ಕುರಿತು ಸಿ.ಶಿವರಾಮ ಮೂರ್ತಿಯವರು ಈ ರೀತಿಯಾಗಿ ವಿವರಿಸುತ್ತಾರೆ. ''ಶಿಲ್ಪಗ್ರಂಥಗಳಲ್ಲಿ ಬರುವ ಅವುಗಳ ವಿವರಣೆಗಳಲ್ಲದೆ, ಸಂಸ್ಕೃತ ಸಾಹಿತ್ಯದಲ್ಲಿ ಚಿತ್ರಕಲೆಗೆ ಸಂಬಂಧ ಪಟ್ಟ ವಿಷಯ ಎಲ್ಲೆಲ್ಲಿ ಬರುತ್ತದೋ ಅಲ್ಲೆಲ್ಲಿ ಚಿತ್ರಕಾರನ ಉಪಕರಣಗಳು ಮತ್ತು ಸಾಮಗ್ರಿಗಳ ಬಗ್ಗೆ ಅನೇಕ ಉಲ್ಲೇಖಗಳಿವೆ. ಹೀಗೆ ಕಲಾವಿದನು ತನ್ನ ಸುಂದರವಾದ ಚಿತ್ರಗಳನ್ನು ಹೇಗೆ ಮತ್ತು ಯಾವುದರ ಸಹಾಯದಿಂದ ರಚಿಸುತ್ತಿದ್ದನೆಂಬುದನ್ನು ತಿಳಿದು ಕೊಳ್ಳಲು ಬೇಕಾದಷ್ಟು ಸಾಮಗ್ರಿ ದೊರಕುತ್ತವೆ. 'ವಾತ್ಸಾಯನ ಕಾಮಸೂತ್ರ' ದಲ್ಲಿ ತಿಳಿಸಿರುವಂತೆ 'ನಾಗರಕನು' ಸಮುದ್ಗಕ ಅಥವಾ ಕುಂಚಗಳಿಂದ ತುಂಬಿದ ಪೆಟ್ಟಿಗೆ ಒಂದು ಹಲಗೆ ಮತ್ತು ಚೌಕಟ್ಟು ಹೊಂದಿರುತ್ತಾನೆ ಎಂಬುದನ್ನು ಈಗಾಗಲೇ ನೋಡಿದ್ದೇವೆ. ಕಲಾವಿದನೊಬ್ಬ ಬಣ್ಣಗಳನ್ನೊಳಗೊಂಡ ಹಲವಾರು ತಟ್ಟೆಗಳಿಂದ ಸುತ್ತವರಿಯಲ್ಪಟ್ಟ ತನ್ನ ಕುಂಚಗಳನ್ನು ಕೌಶಲದಿಂದ ಬಳಸುತ್ತಿರುವ ಚಿತ್ರಗಳನ್ನು ಮೃಚ್ಛಕಟಿಕದಲ್ಲಿ ಕಾಣಬಹುದಾಗಿದೆ. ಕಲಾವಿದನ ಕಿಟಕಿಯ ಕಟ್ಟೆಯ ಮೇಲೂ ಬಣ್ಣದ ತಟ್ಟೆಗಳಿದ್ದುವೆಂದು ಪಾದತಾಡಿತಕದಲ್ಲಿ ವರ್ಣಿಸಲ್ಪಟ್ಟಿದೆ. ಕುಂಚಗಳಿಂದ ತುಂಬಿದ ಸೋರೆಬುರುಡೆಗಳು ಚಿತ್ರದ ಹಲಗೆಗಳಿಂದ ಕಟ್ಟಿರುವುದನ್ನು ಬಾಣಕವಿ ತನ್ನ ಹರ್ಷ ಚರಿತದಲ್ಲಿ

---

೨೭. ಚಂದ್ರಕಾಂತ ಕುಸನೂರ : ಕಲೆ ಅನುಭವ ಮತ್ತು ಅನುಭಾವ, ಪುಟ - ೧೪

ತಿಳಿಸಿದ್ದಾನೆ. ಕಾಳಿದಾಸ ಬಣ್ಣಗಳಿಂದ ತುಂಬಿದ ಪೆಟ್ಟಿಗೆ ವರ್ಣಿಕಾ -ಕರಂಡ, ಸಮುದ್ಗಕ ಎಂದು ಉಲ್ಲೇಖಿಸುತ್ತಾನೆ. ದಶಕುಮಾರ ಚರಿತ ಮತ್ತು ರತ್ನಾವಳಿಯಲ್ಲೂ ಕುಂಚಗಳ ಪೆಟ್ಟಿಗೆಯ ಇಂತಹುದೆ ಉಲ್ಲೇಖವಿದೆ. ಅಭಿಲಾಷಿತಾರ್ಥ ಚಿಂತಾಮಣಿ ಮತ್ತು ಉಳಿದ ಶಿಲ್ಪಗ್ರಂಥಗಳು ಕುಂಚಗಳು ಮತ್ತು ವರ್ತಿಕಗಳನ್ನು ವರ್ಣಿಸುತ್ತವೆ. ರೇಖಾಚಿತ್ರಗಳನ್ನು ರಚಿಸಲು ಬಳಸುವ ಉಜ್ಜು-ಕುಂಚಗಳು ತಿಂಡುವರ್ತಿ ಅಥವಾ ಕಿತ್ತವರ್ತಿ ಎಂದು ಆನೇಕ ಬಗೆಯಲ್ಲಿ ಕರೆಯಲ್ಪಡುವ ವರ್ತಿಕೆಗಳು 'ಕುರ್ಚಕಗಳು' 'ಲೇಖಿಣಿ' ಗಳು ಮತ್ತು 'ತೂಲಿಕಾ' ಗಳೆಂದು ಕರೆಯುವ ಕುಂಚಗಳು ವಿವರವಾಗಿ ವರ್ಣಿಸಲ್ಪಟ್ಟಿವೆ. 'ಖಿಟೋರವೆಂಬ' ಸುವಾಸನೆಯಿಂದ ಕೂಡಿದ ಬೇರನ್ನು ಅನ್ನದಲ್ಲಿ ಬೆರೆಸಿ ಚೂಪಾದ ಉಜ್ಜು ಮೋಟಿನಂತಾಗುವಂತೆ ಉರುಳಿಸಿ ' ಕಿತ್ತಲೇಖಿಣಿ' ಎಂದು ಕರೆಯಲ್ಪಟ್ಟಿರುವ ' 'ವರ್ತಿಕಾ'ವನ್ನು ರಚಿಸುತ್ತಿದ್ದರು. ಹಸುವಿನ ಒಣಗಿದ ಸೆಗಣಿಯೊಂದಿಗೆ ಬೆರಸಿದ ಇಟ್ಟಿಗೆಯ ಪುಡಿಗೆ ನೀರನ್ನು ಬೆರಸಿ ನುಣ್ಣಗೆ ಅರೆದು ಸರಿಯಂತೆ ಕಲೆಸಿ ಚಿತ್ರಬರೆಯಲು ಉಜ್ಜುಮೋಟಿನ ರೀತಿಯ ದಿಂಡುಗಳನ್ನು ಮಾಡುತ್ತಿದ್ದರು. ಮೊನಚಾದ ತಾಮ್ರದ ಕಂಠ ಮತ್ತು ಪುಕ್ಕದಿಂದ ಕೂಡಿದ ತೆಳುವಾದ ಬಿದಿರಿನ ಕಡ್ಡಿಯನ್ನು 'ತೂಲಿಕಾ' ಎಂದು ಕರೆಯುತ್ತಾರೆ. [೨೮]

ಅಭಿಲಷಿತಾರ್ಥ ಚಿಂತಾಮಣಿ ಮತ್ತು ಇತರ ಗ್ರಂಥಗಳು ಬಣ್ಣದ ರೂಪರೇಖೆಗಳು ಮತ್ತು ಲೇಪನಗಳಿಗಾಗಿ ಬಳಸುವ ಆನೇಕ ಬಗೆಯ ಈ ಉಪಕರಣಗಳ ಬಗೆಗೆ ಸ್ವಾರಸ್ಯಕರವಾದ ವಿವರಣೆಗಳನ್ನು ಕೊಡುತ್ತವೆ. 'ಲೇಪನ' ಅಥವಾ 'ಅಕ್ಷಾಲನ' ವು ದೊಡ್ಡಕುಂಚವಾದ ಕೂರ್ಚಕದಿಂದ ಮಾಡಲ್ಪಡುತ್ತಿತ್ತು. ಚಿತ್ರದ ಉನ್ಮೀಲನಕ್ಕೆ ಅಂದರೆ ಚಿತ್ರದ ಕಣ್ತೆರೆಯಲು ಕೊಡುವ ಅಂತಿಮ ಸ್ಪರ್ಶಕ್ಕೆ ಸೂಕ್ಷ್ಮ ಉಪಕರಣವಾದ 'ತೂಲಿಕಾ' ಅಥವಾ 'ಶಲಾಕ ' ವು ಉಪಯೋಗಿಸಲ್ಪಡುತ್ತದೆ. ಸಸ್ಯಜನ್ಯ ಅಥವಾ ಖನಿಜಜನ್ಯ ಬಣ್ಣಗಳೆಂದರೆ ಗೈರಿಕಾ (ಕೆಂಪು) ನೀಲಿ, ಸುದ್ಧಾ (ಬಿಳಿ) ಕಜ್ಜಲ (ಕಪ್ಪು) ಮತ್ತು ಹರಿತಾಳ(ಹಳದಿ) ವಜ್ರಲೇಪ ಮತ್ತು ನಿರ್ಯಾಸಕಲ್ಕಗಳು ಕ್ರಮವಾಗಿ ಬಣ್ಣಗಳನ್ನು ಕಲೆಸುವ ಪ್ರಾಣಿಜನ್ಯ ಮತ್ತು ಸಸ್ಯಜನ್ಯ ಅಂಟುಗಳು [೨೯]

ಒರಿಸ್ಸಾ ರಾಜ್ಯದಲ್ಲಿ ಬಣ್ಣಗಾರಿಕೆ ವಿಶೇಷವಾಗಿ ಹಸ್ತಪ್ರತಿಗಳ ಬಣ್ಣಗಾರಿಕೆ ಹೇಗಿತ್ತು ಎಂಬುದಕ್ಕೆ ಕೆ.ಕೆ. ಬಿಸೋಯಿ ಅವರು ವ್ಯಾಪಕವಾದಂತಾ ವಿವರವನ್ನು ಹೀಗೆ ನೀಡುತ್ತಾರೆ. ತಾಳಗರಿಗಳ ಮೇಲೆಯ ರೇಖೆ ಮತ್ತು ವರ್ಣಗಾರಿಕೆಯ ಕಲೆಯು ಒರಿಸ್ಸಾ ರಾಜ್ಯದಲ್ಲಿ ಸಮೃದ್ಧವಾಗಿ ಬೆಳೆಯಿತು. ಉತ್ಕಲದ ಕಲಾವಿದರಿಗೆ ಶಾಸ್ತ್ರೀಯ ಬಣ್ಣಗಾರಿಕೆಯ ವಿಧಾನವು ತುಂಬಾ ಚಿರಪರಿಚಿತವಾಗಿತ್ತು. ವಿಧವಿಧವಾದ ಬಣ್ಣಗಳನ್ನು ಹಿಂಗುಲ, ಹರಿತಾಳ, ಗೋರೋಚನ, ಹರಿದ, ಕುಂಕುಮ, ಕಾಡಿಗೆ ಮತ್ತು ಕಮದು ವರ್ಣಗಳನ್ನು ಸಚಿತ್ರ ಹಸ್ತಪ್ರತಿಗಳಲ್ಲಿ ಬಳಸುತ್ತಾರೆ. ಸಾಮನ್ಯವಾಗಿ

---

೨೮. C. Sivaramamurti : INDIAN PAINTING, Page No. 19.

೨೯. C. Sivaramamurti : INDIAN PAINTING, Page No. 19.

ತಾಳೆಗರಿಯ ಗ್ರಂಥದೊಳಗಿನ ಸಾಹಿತ್ಯಕ ವಿಷಯವು ಮಹಾಭಾರತ, ರಾಮಾಯಣ, ಭಾಗವತ ಮತ್ತು ಇತರ ಕಾವ್ಯಗಳಿಂದಾದ ನಾಲ್ಕುನೂರಕ್ಕೂ ಅಧಿಕವಾದ ವರ್ಣಮಯ ಹಸ್ತಪ್ರತಿಗಳನ್ನು ಕಾಯ್ದಿಡಲಾಗಿದೆ. ವೈದೇಹಿ ವಿಲಾಸ, ಲಾವಣ್ಯಾವತಿ, ಉಷಾಭಿಲಾಷಾ, ಚಿತ್ರಕಾವ್ಯ, ಬಂಧೋದಯ ಮತ್ತು ಕುಂಡಲಿಜ್ಞಾನ, ಕೃಷ್ಣಲೀಲಾದಂತಹ ಅನೇಕ ಸಚಿತ್ರ ಹಸ್ತಪ್ರತಿಗಳಿವೆ.[೩೦] ಕಪ್ಪು, ಕಾಡಿಗೆ, ಕಂದು, ಗಂಧಕದಂತಹ ಖನಿಜಾಂಶಗಳಿಂದ ಬಣ್ಣಗಳನ್ನು ತೈಯಾರಿಸುವಂತೆ ಬಿಳಿಯ ಬಣ್ಣವನ್ನು ನದಿಯ ತಟದಲ್ಲಿ ದೊರೆಯುವ ಕಪ್ಪೆ ಚಿಪ್ಪುಗಳನ್ನು ಸಂಗ್ರಹಿಸಿ ಹೊಸತಾದ ಗಡಿಗೆಯ ತುಂಬಾ ತುಂಬಿಸಿ ಅದರ ಮುಚ್ಚಣಿಕೆಯನ್ನು ಮುಚ್ಚಿ ಮೂರಡಿ ಉದ್ದಗಲ ಮತ್ತು ಎತ್ತರವಿರುವ ತಗ್ಗಿನಲ್ಲಿ ಕುಳ್ಳುಗಳನ್ನು ಒಟ್ಟುತ್ತಾರೆ. ಗಡಿಗೆಯ ಮುಚ್ಚಳದ ಸುತ್ತ ಹಸಿ ಸಗಣಿ ಮೆತ್ತಿ ಸುಮಾರು ಒಂದೆರಡು ದಿನ ಸುಡುತ್ತಾರೆ. ಗಡಿಗೆಯೊಳಗಿನ ಕಪ್ಪೆ-ಚಿಪ್ಪುಗಳಿಗೆ ನೇರ ಜ್ವಾಲೆ ತಗುಲದೆ. ಬೆಂಕಿಯ ಕಾವಿಗೆ ಭಸ್ಮವಾಗಿರುತ್ತವೆ. ಈ ಭಸ್ಮವನ್ನು ಕರಿಜಾಲಿ ಅಂಟು ಅಥವಾ ಮೀನಿನ ಸರಿಯಲ್ಲಿ ಮಿಶ್ರಣಗೊಳಿಸಿ ಬೇಕಾಗುವಂತೆ ನೇರವಾಗಿಯೇ ಅಥವಾ ಮಿಶ್ರಣವಾಗಿಯೇ ಈ ಭಸ್ಮದಿಂದ ಬಿಳಿ ಬಣ್ಣವನ್ನು ತಯಾರಿಸಿಕೊಳ್ಳುತ್ತಾರೆ.

ಕಿನ್ನಾಳ ಕಲಾವಿದರ '' ಚಿತ್ರರಚನೆಯ ಸಂದರ್ಭದಲ್ಲಿ ಕೆಂಪು, ಹಳದಿ, ಹಸಿರು, ಕಂದು ಬಣ್ಣಗಳಂತಹ ಸರಳ ಬಣ್ಣಗಳನ್ನು ಹೆಚ್ಚು ಉಪಯೋಗಿಸುತ್ತಾರೆ. ತಾವೇ ತಯಾರಿಸಿದ ತವರದ ಬಣ್ಣ ಈ ಎಲ್ಲ ಬಣ್ಣಗಳಲ್ಲಿ ಮಿಶ್ರಿತವಾಗುತ್ತದೆ. [೩೧] ವರ್ಣಗಾರಿಕೆಯ ವಿಷಯ ಕುರಿತು ಶ್ರೀ ವಿ.ಟಿ.ಎಸ್.ರಾವ್ ಅವರು ಕೊಡುವ ವಿವರಣೆ ಈ ರೀತಿಯದಾಗಿದೆ..... ತಾಳೆ ಗ್ರಂಥಗಳಲ್ಲಿ ವಿಷಯ ನಿರೂಪಣಾ ಚಿತ್ರ ರಚನೆಗೆ ಸಾಮಾನ್ಯವಾಗಿ ವಿಶಾಲವಾಗಿರುವ ತಾಳೆ ಗರಿಗಳನ್ನು ಆರಿಸಿ ಚಿತ್ರಗಳನ್ನು ಕೊರೆಯಲಾಗಿದೆ. ಕೂರ್ಚಿಕೆಯೆಂಬ ವಿಶೇಷ ಲೇಖನಿಗಳಿಂದ ಹಾಗೂ ತೂಲಿಕಾ ಶಲಾಖಗಳೆಂಬ ವಿಶೇಷ ಕುಂಚಗಳಿಂದ ರೇಖಾರಚನೆ ಮತ್ತು ವರ್ಣ ಸಂಯೋಜನೆಯನ್ನು ಮಾಡಲಾಗಿದೆ. ಉಪಯೋಗಿಸುವ ವರ್ಣಗಳು ಹೆಚ್ಚಿನವು ವನಸ್ಪತಿಮೂಲದಾಗಿವೆ. ಕೆಲವು ಕಡೆ ಧಾತುವರ್ಣಗಳನ್ನು ಪ್ರಖರತೆಗಾಗಿ ಬಳಸಲಾಗಿದೆ. ಆ ಕಾಲದ ಪ್ರಮುಖ ವರ್ಣಗಳೆಂದು ನಿಷ್ಕರ್ಷಿತ ವಾಗಿದ್ದ ಗೈರಿಕ (ಕೆಂಪು) ನೀಲ, ಶುದ್ಧ (ಬಿಳುಪು) ಕಜ್ಜಲ, ಹರಿತಾಳ ಇವುಗಳನ್ನು ಪ್ರಮಾಣ ಬದ್ಧವಾಗಿ ಮಿಶ್ರಣಮಾಡಿ ಭಾವಾಭಿಜ್ಞತೆಗೆ ತಕ್ಕಂತೆ ತ್ಯಾಗದ ಸಂಕೇತಕ್ಕೆ ಕೆಂಪು ಕಾವಿಯನ್ನು ಸರ್ವವ್ಯಾಪಕತೆಯ ಸಂಕೇತಕ್ಕೆ ನೀಲಿಯನ್ನು, ಸಂಪತ್ತಿನ ಸೂಚನೆಗೆ ಹಸಿರು ಬಣ್ಣವನ್ನು ಸೀಮಿತ ಮಿತಿಯಾದ ತಾಳೆಗರಿಯ ಚಿಕ್ಕ ಅಂಕಣಗಳಲ್ಲಿ ನಿರೂಪಿಸಿರುವರು. [೩೨]

ಈ ರೀತಿಯಲ್ಲಿ ಬಣ್ಣಗಾರಿಕೆ ಹಂತದಲ್ಲಿ ದೇಶೀಯ ಖನಿಜಾಂಶಗಳುಳ್ಳ ಬಣ್ಣಗಳನ್ನು ಬಂಗಾರದ, ಬೆಳ್ಳಿಯ ರೇಖೆಗಳನ್ನು ಸುಳುಹುಗಳ ರಚನೆಗಾಗಿ ಬಳಸುತ್ತಿರುವುದನ್ನು

---

೩೦. K.K. Bisoi : Palm Leaf Manuscripts in Oriya - Page No. 52.

೩೧. ಡಾ. ವಿರೇಶ. ಶೇ. ಬಡಿಗೇರ : ಕಿನ್ನಾಳ ವರ್ಣ ಚಿತ್ರಕಲೆ, ಪುಟ-೧೪೨

೩೨. ಸಿದ್ದಯ್ಯ ಪುರಾಣಿಕ (ಸಂ.) : ಮಣಿಹ : ವಿ. ಟಿ. ಎಸ್. ರಾವ್, ಪುಟ-೪೧೪

ಕಾಣುತ್ತೇವೆ. ಕಾಲುನುಕ್ರಮದಲ್ಲಿ ಭಾರತದೇಶಕ್ಕೆ ಕಂಪನಿ ಆಡಳಿತ ಬಂದನಂತರ ದೇಸಿಯ ಬಣ್ಣಗಾರಿಕೆ ಸಂಪೂರ್ಣ ಅನ್ಯದೇಶಿಯ ಬಣ್ಣಗಳನ್ನೇ ಅವಲಂಬಿಸಿದೆ. ಕಚ್ಚಾವಸ್ತುಗಳ ಕೊರತೆ, ಹೊಸತನದ ಬಯಕೆ, ಬದಲಾದ ಪರಿಸರ, ಹೊಸತಾದ ಕುಂಚಗಳಿಂದ ಕಲಾರಂಗದಲ್ಲೂ ಹೊಸತನವು ವ್ಯಾಪಿಸಹತ್ತಿದೆ.

ಕುಂಚಗಳು : ಲಿಪಿಕಾರನ ಕೈಗೆ 'ಕಂಠ' ಮಾಧ್ಯಮವಾಗಿರುವಂತೆ, ಕಲಾವಿದರ ಕರಗಳಿಗೆ ಕಂಠ ಕೈವಾರ, ಕುಂಚಗಳು, ಬಣ್ಣಗಳು ಹಸ್ತಪ್ರತಿ ಚಿತ್ರಕಲೆಯ ನಿರ್ಮಾಣಕ್ಕೆ ಮೂಲಕಾರಣೀಭೂತವಾಗಿವೆ ಕಂಠಗಳಲ್ಲಿ ವೈವಿಧ್ಯ ಮತ್ತು ಅನೇಕ ಐತಿಹಗಳು ಇರುವಂತೆ ಕಲಾವಿದನ ಪರಿಕರಗಳಿಗೂ ಅನೇಕ ಐತಿಹಗಳಿವೆ. ಇಂದಿನ ಕಾಗದದ ಕಾಲವನ್ನು ಅನುಸರಿಸಿ ಆ ಕಾಲದ ಬದಲಾದಂತೆ ಪರಿಕರಗಳನ್ನು ಬದಲಿಸುತ್ತಾ ಮೂಲ ಪರಂಪರೆಯನ್ನು ಮನ್ನಡೆಸುತ್ತಾ ಸಾಗಿದ್ದಾನೆ. ಕಂಠದ ಸ್ಥಾನವನ್ನು ಲೆಕ್ಕಣಿಕೆ ಆವರಿಸಿಕೊಂಡಂತೆ ಲೆಕ್ಕಣಿಕೆಗೆ ಬಂದಂತೆ ಕೊಂಡು ಪ್ರಾಚೀನ ಕಲಾಪರಂಪರೆಯನ್ನು ಅರ್ವಾಚೀನ ಪರಂಪರೆಯೊಂದಿಗೆ ಮುನ್ನಡಿಯಿಸಿಕೊಂಡು ಸಾಗಿವೆ.

ಕುಂಚಕ್ಕೆ ತೂಲಿಕಾ, ಬಟ್ಟಿಗೆ, ಲೆಕ್ಕಣಿಕೆ, ಕರದ ಕಡ್ಡಿ, ಕೈಕಡ್ಡಿ ಬಣ್ಣದ ಕಡ್ಡಿ ಎಂಬ ಅನೇಕ ಹೆಸರುಗಳಿಂದ ಪರಿಚಿತವಾಗಿದೆ. ಈ ಕಡ್ಡಿಗಳನ್ನು ಗ್ರಾಮೀಣ ಪ್ರದೇಶದಲ್ಲಿ ಸಿಗುವ ದೆವ್ವಬಾಳೆಯ ನಾರಿನಿಂದ, ಪುಂಡಿಯ ಸಸ್ಯದ ನಾರಿನಿಂದಲೂ ಇಂತಹ ಕುಂಚಗಳನ್ನು ತಯಾರಿಸಿಕೊಳ್ಳುತ್ತಿದ್ದರು ಕಾಲಾನುಕ್ರಮದಲ್ಲಿ ಇಣಚಿಯ ಆಡಿನ, ಬಾಲದ ಕೇಶಗಳಿಂದಲೂ ಕುಂಚಗಳನ್ನು ನಿರ್ಮಿಸಿಕೊಳ್ಳುತ್ತಿದ್ದರು ಕಿನ್ನಾಳು, ಕನಕಗಿರಿ, ಸುರಪುರದ, ಗೋಕಾಕದ ಕಾಲಾವಿದರುಗಳು ಕಿರುರೂಪದ ಚಿತ್ರಗಳಿಗೆ ಇಂತಹವೇ ಕುಂಚಗಳನ್ನು ಈಗಲೂ ಬಳಸುತ್ತಿರುವುದನ್ನು ಕಾಣಬಹುದು.

ಮಾಧ್ಯಮಗಳು : ಬಣ್ಣಗಳ ಬಹುಕಾಲದ ಬಾಳಿಕೆಗಾಗಿ, ಸುಲಭಸಾಧನಕ್ಕಾಗಿ ಜಲವರ್ಣಗಳಲ್ಲಿ ಅನೇಕ ಮಾಧ್ಯಮಗಳನ್ನು ಬಳಸುತ್ತಾರೆ. ಕರಿಜಾಲಿಯ ಅಂಟು, ಬೇವಿನ ಅಂಟುಗಳನ್ನು ನೀರಿನಲ್ಲಿ ನೆನೆಯಿಸಿ ಶೋಧಿಸಿಕೊಂಡು ಬಣ್ಣಗಳಲ್ಲಿ ಬಳಸುತ್ತಾರೆ. ಮೀನಿನ ದೇಹದಿಂದ ತೆಗೆದ ಎಣ್ಣೆಯನ್ನು ಮೀನಿನ ಸರಿ ಎಂದು ಬಳಸುತ್ತಾರೆ. ಫಲಕಗಳ ಮೇಲಿರುವ ವರ್ಣ ಚಿತ್ರಗಳ ರಕ್ಷಣೆ ಮತ್ತು ಹೊಳಪಿಗಾಗಿ ಗಿಡದ ವಜ್ರವನ್ನು ''ರಾಳ''ವನ್ನು ಬಳಸುತ್ತಾರೆ. ಈ ರೀತಿ ಮಾಧ್ಯಮಗಳಾಗಿ ಹಲವು ವಸ್ತುಗಳನ್ನು ಬಣ್ಣಗಳಲ್ಲಿ ಬಳಸುವುದನ್ನು ಕಾಣಬಹುದು.

ಈ ಅಧ್ಯಾಯದಲ್ಲಿ ಹಸ್ತಪ್ರತಿ ಚಿತ್ರರಚನಾ ಪೂರ್ವದ ಹಂತ ಮತ್ತು ಕಾರ್ಯನಿರ್ವಾಹಣಾ ಹಂತವೆಂದು ಪ್ರಮುಖವಾಗಿ ಎರಡು ವಿಭಾಗಗಳನ್ನು ಮಾಡಿಕೊಂಡು ಮತ್ತೆ ಅದರಲ್ಲಿ ಉಪವಿಭಾಗಗಳನ್ನು ಮಾಡಿಕೊಂಡು ಪ್ರತಿಯೊಂದನ್ನು ವಿವರವಾಗಿ ಚರ್ಚಿಸಲಾಗಿದೆ. ಹಸ್ತಪ್ರತಿ ಚಿತ್ರರಚನೆ ಪರಿಕರಗಳನ್ನು ಅವುಗಳನ್ನು ಸಂಗ್ರಹಿಸುವ ಸಿದ್ಧಪಡಿಸಿಕೊಳ್ಳುವ ವಿಧಿ -ವಿಧಾನಗಳನ್ನು ಸಹ ಸ್ಥೂಲವಾಗಿ ಅಧ್ಯಯನ ಮಾಡಲಾಗಿದೆ.

ಹಸ್ತಪ್ರತಿ ಚಿತ್ರರಚನೆ ವಿವಿಧ ಹಂತಗಳನ್ನು ಶಾಸ್ತ್ರಗ್ರಂಥಗಳ ಮೂಲಕ ಇನ್ನಿತರ ಸಾಹಿತ್ಯದ ಮೂಲಕ ಚರ್ಚಿಸಲಾಗಿದೆ. ಫಲಕಗಳ ಮೇಲಿನ ಚಿತ್ರ ರಚನಾ ವಿಧಾನವನ್ನು ಚರ್ಚಿಸಿದಂತೆ ಎರಡನೆಯ ಹಂತದಲ್ಲಿ ಹಸ್ತಪ್ರತಿಗಳಮೇಲೆ ಚಿತ್ರ ರಚಿಸುವಾಗಿನ ಹಂತಗಳನ್ನು ಚಿತ್ರಕಲಾವಿದರ ಮನೋಭಾವನೆಯನ್ನು ಅಧ್ಯಯನಕ್ಕೆ ಒಳಪಡಿಸಲಾಗಿದೆ.

*****



ಅಧ್ಯಾಯ : ನಾಲ್ಕು

ಹಸ್ತಪ್ರತಿ ಚಿತ್ರಕಲೆಯ ವಸ್ತು - ವಿಷಯಗಳು

ಕಲಾ ವಿದ್ಯಾಚ ರಾಗಶ್ಚ ಕಾಲೋ ನಿಯತಿರೇವ ಚ।
ಭಾವಕೋ ಭೋಧಕಶ್ಚೈವ ಈಶ್ವರಶ್ಚ ಸದಾಶಿವಃ॥
ಶಕ್ತಿಶ್ಚ ಶಿವ ಇತ್ಯಕ್ತಂ ತತ್ವಮೇಕಾದಶಂ ಸ್ಮೃತಮ್।[೧]

ಕರ್ನಾಟಕದ ಹಸ್ತಪ್ರತಿಗಳ ಹರವು ತುಂಬ ವಿಸ್ತಾರವಾದುದಾಗಿದೆ. ಹಾಗೆಯೇ ಅವುಗಳ ವಸ್ತು, ವಿಷಯವೂ ಕೂಡ ಅಷ್ಟೇ ವ್ಯಾಪಕವಾದುದಾಗಿದೆ. ಇಲ್ಲಿ ಹಸ್ತಪ್ರತಿ ಚಿತ್ರಕಲೆಯ ವಸ್ತು ವಿಷಯವನ್ನು ಅಧ್ಯಯನಕ್ಕೆ ಅನುಕೂಲವಾಗುವಂತೆ ವರ್ಗೀಕರಿಸಿಕೊಂಡು ವಿವೇಚಿಸಲಾಗುತ್ತದೆ. ಈಗಾಗಲೇ ಹಸ್ತಪ್ರತಿ ಚಿತ್ರಕಲೆಯನ್ನು ಅಧ್ಯಯನ ಮಾಡಿರುವ ಡಾ.ಎಸ್.ಸಿ.ಪಾಟೀಲವರು ಹಸ್ತಪ್ರತಿ ಚಿತ್ರಕಲೆಯನ್ನು ತಮ್ಮ ಲೇಖನದಲ್ಲಿ ಮೂರು ರೀತಿಯಲ್ಲಿ ಪ್ರಮುಖವಾಗಿ ವರ್ಗೀಕರಿಸಿಕೊಂಡು ಅಧ್ಯಯನ ಮಾಡಿದ್ದಾರೆ. ಈ ವಿಂಗಡಣೆ ಹೆಚ್ಚು ಸಮರ್ಪಕವಾದುದಾಗಿದ್ದು ಪ್ರಸ್ತುತ ನಮ್ಮ ಅಧ್ಯಯನದಲ್ಲಿ ಅವರ ವರ್ಗೀಕರಣವನ್ನು ಮಾದರಿಯಾಗಿಟ್ಟುಕೊಂಡು ಅಧ್ಯಯನವನ್ನು ನಡೆಸಲಾಗಿದೆ.

I. ಜನಪದ ಮೂಲದ ಹಸ್ತಪ್ರತಿ ಚಿತ್ರಕಲೆ


II. ಶಿಷ್ಟಪದ ಮೂಲದ ಹಸ್ತಪ್ರತಿ ಚಿತ್ರಕಲೆ

III. ಶಿಷ್ಟ ಜನಪದ ಮೂಲದ ಹಸ್ತಪ್ರತಿ ಚಿತ್ರಕಲೆ

ಇವುಗಳನ್ನು ಕುರಿತು ಒಂದೊಂದಾಗಿ ಇಲ್ಲಿ ವಿವೇಚಿಸಬಹುದಾಗಿದೆ.

೧. ಪ್ರೊ॥ ಮಲ್ಲೇಪುರಂ. ಜಿ. ವೆಂಕಟೇಶ (ಸಂ.) ಕೆಳದಿ ಬಸವರಾಜ ಸಂಕಲಿಸಿದ ಶಿವತತ್ವ ರತ್ನಾಕರ, ಪುಟ-೩

ಕರ್ನಾಟಕದ ಹಸ್ತಪ್ರತಿ ಚಿತ್ರಕಲೆಯ ವರ್ಗೀಕರಣ



I. ಜನಪದ ಮೂಲದ ಹಸ್ತಪ್ರತಿ ಚಿತ್ರಕಲೆ ⋆:

ಮಾನವ ಸಂಸ್ಕೃತಿಯ ಮೂಲನೆಲೆ ಜನಪದ. ಆದಿಮಾನವನ ನಾನಾ ಮುಖವಾದ ಜೀವನಾನುಭವಗಳು ಇಲ್ಲಿ ಮಡುಗಟ್ಟುತ್ತಾ ಬಂದ ಜಾನಪದವೆನಿಸಿಕೊಂಡಿವೆ. ಆದಿಮಾನವನ ಕಾಲದ ಅನೇಕ ಅನುಭವಗಳು ಆಶೋತ್ತರಗಳು ಆಧುನಿಕ ಕಾಲದಲ್ಲಿ ಲಭ್ಯವಾಗುವ ಜಾನಪದ ಪ್ರಕಾರಗಳಲ್ಲಿ ಗರ್ಭಿಕರಿಸಿಕೊಂಡಿವೆ. ಆದುದರಿಂದಲೇ ಜಾನಪದ ಎನ್ನುವದು ಪ್ರೊ. ರಿಚರ್ಡ ಡಾರ್ನರ್ ಹೇಳುವಂತೆ ಆಧುನಿಕವಾಗಿರುವುದು, ಪ್ರಾಚೀನದ ಪ್ರತಿಧ್ವನಿಯೂ ಹೌದು ಅನಿರ್ವಾಚೀನದ ಅದಮ್ಯ ಶಕ್ತಿಯೂ ಹೌದು. ಜಾನಪದ ಎನ್ನುವುದು ಸಾವಿಲ್ಲದ, ಸೋಲಿಲ್ಲದ ಒಂದು ಚಿರಂತತೆಯ ನಿರಂತರ ಶಕ್ತಿಯಾಗಿದೆ. ಮಾನವ ಸಂಸ್ಕೃತಿಯ ಆರಂಭದಿಂದ ತನ್ನ ಆಗಮನವನ್ನು ಕಂಡುಕೊಂಡ ಜಾನಪದ, ಮಾನವಕಾಲದ ಉಳಿಯುವಿಕೆಯ ವರೆಗೂ ಅದು ಉಳಿದುಕೊಂಡಿರುತ್ತದೆ. ಜನಸಾಮಾನ್ಯರ ಜಾನಪದವು ಕೆಲವು ರೂಪಗಳಲ್ಲಿ ಕಣ್ಮರೆಯಾದರೂ ಮತ್ತೊಂದು ನವೀನ ರೀತಿಯಲ್ಲಿ ಅದು ಉಳಿದುಕೊಂಡಿರುತ್ತದೆ. ಹೊಸಕಾಲದ ಯುಗ ಧರ್ಮದಂತೆ ಹೊಸ ಅಭಿವ್ಯಕ್ತಿಯೊಂದಿಗೆ ಹೊಸ ಜನ್ಮಧಾರಣೆಯೊಂದಿಗೆ ಹಳೆಯ ಆತ್ಮನ ಪರಂಪರೆಯನ್ನು ಉಳಿಸಿ ಬೆಳೆಸಿಕೊಳ್ಳುತ್ತಲೇ ಅದು ಸಾಗುತ್ತಿರುತ್ತದೆ. ಇದು ಅದರ ಲಕ್ಷಣವೂ ಹೌದು.

ಕಲೆಯ ಬಹುರೂಪಗಳ ಒಂದೊಂದು ದರ್ಶಿಕೆಗಳಾಗಿರುವ ಜನಪದವು ಚಿತ್ರ, ಶಿಲ್ಪ, ವೇಷ, ವಾದ್ಯ, ಸಂಗೀತ, ಕುಣಿತಗಳಲ್ಲಿ ತನ್ನ ಮೂಲವನ್ನು ಇಂದಿಗೂ ಉಳಿಸಿಕೊಂಡುಬಂದಿದೆ. ಭಾರತೀಯ ದೇಶಿಯ ಬದುಕಿನಲ್ಲಿ ಅನೇಕ ಬಗೆಯ ಜನರು ಮನೋರಂಜನೆಯನ್ನು ಅಭಿವ್ಯಕ್ತಿಗಳಿಸುವ ಕಸಬನ್ನು ತಮ್ಮ ವೃತ್ತಿಯನ್ನಾಗಿ ಸ್ವೀಕರಿಸಿದವರು ಇದ್ದಾರೆ. ಇವರಂತೆ ವೃತ್ತಿಯಲ್ಲದೆ ಹವ್ಯಾಸವನ್ನಾಗಿಟ್ಟಿರುವ ಜನಪದ ಕಲಾವಿದರು ನಮ್ಮ ದೇಶದ ದೇಶಿಯ ಬದುಕಿನಲ್ಲಿ ಸಿಗುತ್ತಾರೆ. ದೊಂಬರು, ಮೋಡಿಕಾರರು,ಗಂಗೆತ್ತಿನವರು, ಕರಡಿ, ಕೋತಿಗಳನ್ನು ಕುಣಿಸುವವರು, ಹಾವಾಡಿಗರು, ಗೊಂಬೆರಾಮರು, ವೇಷಗಾರರು, ಕೀಲುಗೊಂಬೆಯವರು, ತೊಗಲು ಗೊಂಬೆಯವರು, ಹಾದಿ ಬದಿಯ ಭವಿಷ್ಯಕಾರರು, ರಾಮಕೊಂಡಡಿ ತೆಲಗು ಮೂಲದ ತಾಳೆಗರಿ ಓದುವ, ದಾಸಯ್ಯನವರು. ಕಾಡುಸಿದ್ದರು ಅವರಂತಹ ಅನೇಕರು ತಮ್ಮ ಕಲೆಯ ಅಭಿವ್ಯಕ್ತಿಯಿಂದ ಸಾಮಾನ್ಯ ಜನರಿಗೆ ಮನರಂಜನೆ ಒದಗಿಸುತ್ತಾ ಊರು ಸುತ್ತುವ ಅಲೆಮಾರಿಗಳು ತಮ್ಮ ಕಲೆಗೆ ಜೋಳ, ಹಿಟ್ಟು, ಹಿಡಿ ಅನ್ನ ನೀಡುವ ಸಾಮಾನ್ಯರನ್ನು ಆಶ್ರಯಿಸಿ ಬದುಕುವ ಈ ಜನಾಂಗವು ಕನ್ನಡನಾಡಿನ ಸಾಂಸ್ಕೃತಿಕ ಕೀರ್ತಿಯನ್ನು ಶತ ಶತಮಾನಗಳಿಂದಲೂ ಬೆಳಗಿದಂತಹವರು. ತಮ್ಮ ಭವಿಷ್ಯ ಕಾಣದೆ ಜಗತ್ತಿಗೆ ಭವಿಷ್ಯ ಹೇಳುವ ಕೊರವಂಜಿಯವರು, ಬುಡಬುಡಕೆಯರು, ಗಿಳಿ ಶಕುನ ಶಾಸ್ತ್ರದವರಂತೆ ಈ ಪರಂಪರೆಯ ಅರೆ ಸುರಕ್ಷಿತ ಕಸಬುದಾರರಾಗಿರುವ ಕುಂಬಾರ, ಕಂಬಾರ, ಚಮ್ಮಾರ, ಬಡಗಿ, ಅಕ್ಕಸಾಲಿಗ, ಹಡಪದದವರು ಕುಶಲ ಕಸುಬುದಾರರಾಗಿರುವಂತೆ ಜಾನಪದ ಜಗತ್ತಿನ ಶ್ರೇಷ್ಟ ಕಲಾವಿದರು ಇವರಾಗಿದ್ದಾರೆ.

⋆. ನೆರವು , ಡಾ. ಎಸ್.ಸಿ.ಪಾಟೀಲ: ಕರ್ನಾಟಕದ ಜನಪದ ಚಿತ್ರಕಲೆ, ಪುಟ, ೪೧-೪೯.

ಕರ್ನಾಟಕದ ಹಸ್ತಪ್ರತಿ ಚಿತ್ರಕಲೆ- ಒಂದು ಅಧ್ಯಯನ

ತಾಳೆಗರಿ ಹಸ್ತ ಪ್ರತಿಗಳಲ್ಲಿ ಜಾನಪದ ರೇಖಾ ಚಿತ್ರಗಳು

ಕೃತಿ : ಬಿಡಗದ ಮಾಧವ ನಾಟಕ



Courtesy :


Sisu Shankar

Lalita Kala Akademi New Delhi.

ಕಸಬುದಾರರಂತೆ ನೇರ ರಂಗದಲ್ಲಿ ಕಾಣದೇ ನೇಪಥ್ಯದಲ್ಲೇ ಉಳಿದಿರುವ ತಾಯಂದಿರು ಜನಪದ ಸಾಹಿತ್ಯದ ಮಾತೃಕೆಯಾಗಿದ್ದಾರೆ. ಮನವನ್ನು ಮನೆಯನ್ನು ಹಸನುಮಾಡಿ ಹಸೆ, ರಂಗವಲ್ಲಿಗಳೊಂದಿಗೆ ಸಗಣಿ ಸಾರಿಸಿ ಗೋಡೆಯ ಮೇಲೆ ಸುಣ್ಣ ಸುರುಮಾ(ಜಾಜ) ಗಳಿಂದ ಅಲಂಕಾರಗೊಳಿಸುವುದನ್ನು ಕಾಣುತ್ತೇವೆ. ಪಶ್ಚಿಮ ಘಟ್ಟದ ನಡುವೆ ಇರುವ ವನಸಿರಿಯ ನಡುವೆ ಇರುವ ಮಿಗಾನೆ ಕಲೆಯ ಕುಡುಬಿ ಜನಾಂಗದ ನೆಲೆಯಾಗಿರುವಂತೆ ಜನಪದ ಕಲೆಯೂ ಆಗಿದೆ. ಕಾಡ ಹೀಗೆ ನಡುವಿನ ಅಸಂಖ್ಯಾತ ಜನಪದ ಚಿತ್ರಕಲಾ ಭಂಡಾರ ಇಲ್ಲಿನ ಜನರ ಎದೆಯಾಳದಲ್ಲಿ ಅಡಗಿರುವ ಜನಪದ ಸೆಲೆಯಸೃಜನಶೀಲ ಅಭಿವ್ಯಕ್ತಿಯಾಗಿದೆ.



ಸಾಮಾನ್ಯ ಗ್ರಾಮೀಣ ಜನತೆ ತಮಗೆ ಅವಶ್ಯಕವೆನಿಸಿದ ಬೇರೆ ಬೇರೆ ಮಾಧ್ಯಮಗಳಲ್ಲಿ ಸಹಜವಾಗಿ ರಚಿಸಿಕೊಂಡ ಚಿತ್ರಕಲೆ ಜನಪದ ಚಿತ್ರಕಲೆಯನಿಸಿಕೊಳ್ಳುತ್ತದೆ. ತಾಳೆಗರಿ, ಕಾಗದ, ಕಡತ, ರಟ್ಟುಗಳಂತಹ ಹಸ್ತಪ್ರತಿಗಳಲ್ಲಿ ಈ ಕಲೆ ಕಾಣಿಸಿಕೊಂಡಿದ್ದು ತನ್ನದೇ ಆದ ಜನಪದೀಯ ಅಂಶಗಳನ್ನು ಹೊಂದಿದೆ. ಜನಪದ ಚಿತ್ರಕಲೆಯೂ ನಿಸರ್ಗ ಸಹಜವಾದ ಲಕ್ಷಣಗಳನ್ನು ತನ್ನಲ್ಲಿ ಅಳವಡಿಸಿಕೊಂಡಿದೆ. ಜನಪದ ಹಸ್ತಪ್ರತಿ ಚಿತ್ರಕಲೆಯಲ್ಲಿ ರೇಖೆ ಬಣ್ಣಗಳದೇ ಒಂದು ವಿಶೇಷ ಸೊಗಸು. ಅಲಂಕಾರವೇ ಇಲ್ಲಿ ಪ್ರಮುಖ ವೈಶಿಷ್ಟ್ಯ ಯಾವುದೇ ರೀತಿಯ ಕಟ್ಟು ನಿಟ್ಟಾದ ಪ್ರಮಾಣ ಬದ್ಧತೆಗೆ ಈ ಕಲೆ ಬದ್ಧವಾಗಿರುವದಿಲ್ಲ. ಅಧ್ಯಯನದ ಯಾವ ಅರಿವೂ ಇಲ್ಲದೆ ಜನಪದರು ತಾವು ಪಡೆದ ಲೋಕಾನುಭವದ ಭಾವನೆಗಳಿಗೆ ಸಹಜವಾಗಿ ಮೂರ್ತ ರೂಪವನ್ನು ಇಲ್ಲಿ ನೀಡುತ್ತಾರೆ. ಜನಪದ ಹಸ್ತಪ್ರತಿ ಚಿತ್ರಕಲೆ ಸಾಮಾನ್ಯವಾಗಿ ವೃತ್ತಿ ಧರ್ಮ, ಸೌಂದರ್ಯ ಮೂಲದ ಹಿನ್ನಲೆಯಲ್ಲಿ ದುಡಿಯುವ ಸಮಯದಲ್ಲಿ ಸೃಷ್ಟಿಯಾಗಿದೆ. ಈ ಕಲೆಯನ್ನು ದೇಶಿ ಚಿತ್ರಕಲೆಯಂದು ಸಾಮಾನ್ಯ ಜನತೆಯ ಕಲೆಯೆಂದು ಕರೆಯಲಾಗುತ್ತಿದೆ. ಜನಪದ ಹಸ್ತಪ್ರತಿ ಚಿತ್ರಕಲೆಯಲ್ಲಿ ಬಳಕೆಯಾಗುವ ಬಣ್ಣಗಳು ನಿಸರ್ಗದಲ್ಲಿ ಅವರಿಗೆ ಸಹಜವಾಗಿ ಸಿಗುವಂತಹ ವಸ್ತುಗಳಿಂದ ಸಿದ್ಧಪಡಿಸಿಕೊಂಡಂತಹುಗಳು. ಸಂಪ್ರದಾಯ ನಂಬಿಗೆ, ಆಚರಣೆ, ಕಥೆ, ಒಗಟು, ಒಡಬು ಗಾದೆ, ಇತ್ಯಾದಿ ಜನಪದೀಯ ಅಂಶಗಳು ದಟ್ಟವಾಗಿ ಈ ಕಲೆಯನ್ನು ಆವರಿಸಿಕೊಂಡಿರುತ್ತವೆ. ಪ್ರಕೃತಿ ಮತ್ತು ನಿತ್ಯದ ಬದುಕು ಜನಪದ ಚಿತ್ರಕಲೆಗೆ ಆಶ್ರಯ ನೀಡಿದೆ. ಪ್ರೌಢ ಕಲೆಯ ಮೂಲ ಸೆಲೆ ಜನಪದವೇ ಎಂಬುದನ್ನು ಗಮನಿಸಬೇಕು. ಹೀಗೆ ಜನಪದ ಮೂಲದ ಹಸ್ತಪ್ರತಿ ಚಿತ್ರಕಲೆ ಇಂತಹ ಹಲವಾರು ಲಕ್ಷಣಗಳನ್ನುಹೊಂದಿದೆ. ಜನಪದ ಕಲೆಯ ಲಕ್ಷಣಗಳು ಸಾಮಾನ್ಯವಾಗಿ ಎಲ್ಲ ಪ್ರದೇಶಗಳಲ್ಲಿ ಒಂದೇ ರೀತಿಯ ಅನುಭವಗಳನ್ನುಹೊಂದಿರುತ್ತವೆ.



ಉದಾ: ಪಶ್ಚಿಮ ಬಂಗಾಳದ ಹಸ್ತಪ್ರತಿ ಚಿತ್ರಗಳಾದಂತಹ ಜರಾನೋ ಚಿತ್ರಪಟಗಳು ಸುರುಳಿಯಾಕಾರದ ಪಟಚಿತ್ರಗಳಾಗಿದ್ದು ಗ್ರಾಮೀಣ ಪರಿಸರದಲ್ಲಿ ಜೀವಂತ ಕಲೆಗಳು ಎನಿಸಿವೆ. ಪಶ್ಚಿಮ ಬಂಗಾಳದ ಬಂಕುರಾ, ಬೀರಹುಮಾ, ಬರಧ್ವಾನ ಮತ್ತು 24 ಪರಗಣಗಳಂತಹ ಪ್ರದೇಶದಲ್ಲಿ ಇವು ತುಂಬಾ ಪ್ರಸಿದ್ಧವಾಗಿವೆ. ರಾಮಾಯಣ, ಮಹಾಭಾರತ ಆಧರಿಸಿದ ನೀತಿಕತೆಗಳು ಇವೆ. ಸುಮಾರು 1200 ವರ್ಷಗಳ ಕಾಲ ಹಳೆಯದಾದ ವಿಷ್ಣು ಪುರಾಣ, ಅವತಾರದ ಕತೆಗಳು ಈ ಪಟ ಚಿತ್ರಗಳನ್ನು ಅಲ್ಲಿಯ ಚಿತ್ರಗಾರ ಜನಾಂಗದ ಜನರು ತಮ್ಮ ಪರಂಪರೆಯಾಗಿ ಈ ವಿವಿಧ ಶೈಲಿಯ ಚಿತ್ರಗಳನ್ನು ಕೃತಿಗಳನ್ನು ಇಂದಿಗೂ ಮುಂದುವರೆಸಿಕೊಂಡು ಬಂದಿದ್ದಾರೆ. ಇಲ್ಲಿರುವ ಜನಪದ ಲಕ್ಷಣಗಳಾದರೂ ಕರ್ನಾಟಕದಿಂದ ಭಿನ್ನವಾಗಿಲ್ಲ. ಅಲ್ಲಿಯ ನಂಬಿಕೆ, ಆಚರಣೆ, ಸಂಪ್ರದಾಯ ಮುಂತಾದ ಜಾನಪದ ಆಂಶಗಳಾಗಿವೆ. [೨]

ಕೆಲವು ಸಲ ಇಂತಹ ಜನಪದ ಹಸ್ತಪ್ರತಿ ಚಿತ್ರಕಲೆಯಲ್ಲಿ ಗ್ರಾಮೀಣ ಪರಿಸರದಲ್ಲಿ ಇರುವ ರೂಢಿ, ಸಂಪ್ರದಾಯಗಳು ಕುತೂಹಲಕರ ಅಂಶಗಳು ಬೆಳಕಿಗೆ ಬರುತ್ತವೆ. ಜಾದು-ಪಟ ಚಿತ್ರ ಅಥವಾ ದೌರಿ-ಪಟಚಿತ್ರಗಳನ್ನುಕೆಲವು ಜನರು ಜನರ ಮನೆಮನೆಗೆ ಹೋಗಿ ಚಿತ್ರಗಳೊಂದಿಗೆ. ಅವುಗಳ ಧಾರ್ಮಿಕ ಹಿನ್ನಲೆಯನ್ನು ವಿವರಿಸುತ್ತಾರೆ. ಜಾದು ಎಂದರೆ ಋಷಿಮಣಿ ಮತ್ತು ದೌರಿ ಎಂದರೆ ದಾರಿ ಕಾಯು ಎಂದು ಅರ್ಥವುಳ್ಳ ಈ ಚಿತ್ರಗಳು ಸಾಮಾನ್ಯ ಜನರ ಕಷ್ಟ ಕಾರ್ಪಣ್ಯಗಳ ನಿವಾರಣೆಗಾಗಿ ತಮ್ಮ ಯಕ್ಷಿಣಿ ಶಕ್ತಿಯಿಂದ ಅವರನ್ನು ಪಾರುಮಾಡಲು ಅವರ ಮನೆಯ ಬಾಗಿಲಿಗೆ ಬಂದಾಗ ಜನರು ಈ ಚಿತ್ರಪಟ ಹೊತ್ತವರನ್ನು ಸ್ವಾಗತಿಸಿ ಅನ್ನ ಆಹಾರ, ಪುಡಿಗಾಸು ನೀಡಿ ಗೌರವಿಸುತ್ತಾರೆ. ಹಸ್ತಪ್ರತಿ ಚಿತ್ರಕಲಾ ಪಟಗಳ ಆಚರಣೆಯೊಂದಿಗೆ ರೋಗ ಗ್ರಸ್ತನಾದ ಅಥವಾ ಮೃತನಾದ ವ್ಯಕ್ತಿ ಸಂಪೂರ್ಣ ಹೋಲಿಕೆಯ ಚಿತ್ರವನ್ನು ಈ ಹಸ್ತಪ್ರತಿ ಚಿತ್ರಪಟದಲ್ಲಿ ಬರೆದಿರುತ್ತಾರೆ. ಆದರೆ ಕಣ್ಣುಗಳ ಕಪ್ಪುಗುಡ್ಡೆಯನ್ನು ಮಾತ್ರ ಇಟ್ಟಿರುವದಿಲ್ಲ. ಜನಪದರ ಈ ಅಪೂರ್ಣವಾದ ಚಿತ್ರವನ್ನು ಆಯಾ ಮನೆಗೆ ತಲುಪಿಸಿದ ನಂತರ ಮನೆಯವರು ಸಲ್ಲಿಸಬೇಕಾದ ಹಣಕಾಸಿನ ದಕ್ಷಿಣೆಯನ್ನು ಕೊಟ್ಟ ಬಳಿಕ ಜಾದು-ಚಿತ್ರಪಟದ ಕಲಾವಿದರು ಕಪ್ಪು ಗುಡ್ಡೆಯನ್ನು ರಚಿಸುತ್ತಾರೆ. ಕಣ್ಣಿರದ ಸತ್ತವನ ಆತ್ಮವು ಪ್ರೇತವಾಗಿ ಎಲ್ಲೆಲ್ಲೂ ಸುತ್ತುತ್ತಿರುತ್ತದೆಯಂತೆ. ಆ ಪ್ರೇತಕ್ಕೆ ಕಣ್ಣುಬಂದ ಬಳಿಕ ತನ್ನ ನೆಲೆಯನ್ನು ಅರಸಿ ಸದ್ಗತಿಯನ್ನು ಪಡೆಯುವುದು ಎಂಬ ನಂಬುಗೆಯಲ್ಲಿದೆ.

ಜನಪದ ಹಸ್ತಪ್ರತಿ ಚಿತ್ರಕಲೆಯಲ್ಲಿ ಬಳಸ್ಪಡುವ ಬಣ್ಣಗಳು ಅಂಗಡಿಯಲ್ಲಿ ಖರಿದಿಸುವ ತಯಾರಿ ಬಣ್ಣಗಳಾಗಿರದೆ ಪ್ರಕೃತಿಯಲ್ಲಿ ಸಮೃದ್ಧವಾಗಿ ದೊರೆಯುವ ದೇಶಿಯ ವರ್ಣಗಳಾಗಿವೆ. ಪ್ರತಿಯೊಂದು ಚಿತ್ರದ ಹಿನ್ನಲೆಯಲ್ಲಿ ಧಾರ್ಮಿಕ ಆಚರಣೆ, ನೀತಿಕಥೆ, ಸಮಾಜಕ್ಕೆ, ಸಮಾಜದಲ್ಲಿರುವ ತನಗೆ ಒಳಿತಾಗುವನಂಬುಗೆಯೇ ಈ ಚಿತ್ರಗಳ ಹುಟ್ಟಿಗೆ ಮೂಲ ಕಾರಣವಾಗಿರುತ್ತದೆ.

ಜನಪದ ಮೂಲದ ಹಸ್ತಪ್ರತಿ ಚಿತ್ರಕಲೆಯನ್ನು ಮೂರು ರೀತಿಯಲ್ಲಿ ಡಾ.ಎಸ್.ಸಿ.ಪಾಟೀಲರು ಪ್ರಮುಖವಾಗಿ ವಿಂಗಡಿಸಿಕೊಂಡು ಅಧ್ಯಯನ ಮಾಡಿದ್ದು ಅದೇ

೨. ಡಾ. ಎಚ್.ಕೆ. ರಂಗನಾಥ : ಸಂವಹನ ಕ್ರಿಯೆಯಲ್ಲಿ ಜನಪದ ಕಲೆಗಳು, ಜನಪದ, ೧೯೯೨, ಪುಟ-೨೩

ವರ್ಗೀಕರಣವನ್ನು ಒಪ್ಪಿ ಇಲ್ಲಿ ವಿವೇಚಿಸಲಾಗಿದೆ.

1. ರೇಖಾಚಿತ್ರ ಪ್ರಧಾನ ಜನಪದ ಹಸ್ತಪ್ರತಿಗಳು
2. ವರ್ಣಚಿತ್ರ ಪ್ರಧಾನ ಜನಪದ ಹಸ್ತಪ್ರತಿಗಳು
3. ರೇಖಾ ಮತ್ತು ವರ್ಣಚಿತ್ರ ಪ್ರಧಾನ ಜನಪದ ಹಸ್ತಪ್ರತಿಗಳು.

ಇವುಗಳನ್ನು ಒಂದೊಂದಾಗಿಸ್ಥೂಲವಾಗಿ ಇಲ್ಲಿ ಉದಾಹರಣೆಗಳೊಂದಿಗೆ ವಿವರಿಸಲಾಗಿದೆ. ಕ್ಷೇತ್ರಕಾರ್ಯದ ಮೂಲಕ ಜನಪದ ಮೂಲದ ಹಸ್ತಪ್ರತಿಗಳನ್ನು ಸಂಗ್ರಹಿಸಬೇಕಾಗಿದೆ. ಈಗಿನ ಬಹುಪಾಲು ಹಸ್ತಪ್ರತಿ ಸಂಗ್ರಹಗಳು ಶಿಷ್ಟಪದ ಸಂಪ್ರದಾಯದ ಹಸ್ತಪ್ರತಿಗಳೇ ಆಗಿವೆ. ಜನಪದ ಹಸ್ತಪ್ರತಿ ಸಂಗ್ರಹವನ್ನು ಸಂಗ್ರಹಕಾರರು ಅಷ್ಟೊಂದು ಗಂಭೀರವಾಗಿ ಪರಿಗಣಿಸಿದಂತಿಲ್ಲ. ಇಲ್ಲಿ ನಮ್ಮ ಅಧ್ಯಯನವು ಶಿಷ್ಟಪದ ಹಸ್ತಪ್ರತಿಯ ಚಿತ್ರಕಲೆಯನ್ನು ವಿಶೇಷವಾಗಿ ಅಧ್ಯಯನಕ್ಕೆ ಒಳಪಡಿಸಿಕೊಂಡು ಮಾಡುವ ಉದ್ದೇಶವನ್ನು ಹೊಂದಿದೆ. ಪ್ರಾಸಂಗಿಕವಾಗಿ ಜನಪದ ಮೂಲದ ಹಸ್ತಪ್ರತಿಯನ್ನು ಇಲ್ಲಿ ಸ್ಥೂಲವಾಗಿ ಗಮನಿಸಲಾಗಿದೆ.

1. ರೇಖಾಚಿತ್ರ ಪ್ರಧಾನ ಜನಪದ ಹಸ್ತಪ್ರತಿಗಳು

ರೇಖಾಚಿತ್ರವನ್ನು ಒಳಗೊಂಡ ಹಸ್ತಪ್ರತಿಗಳು ಜನಪದರಲ್ಲಿ ಉಪಲಬ್ಧವಿದ್ದು ಇಲ್ಲಿ ಬರವಣಿಗೆ ಇಲ್ಲದೆ ಕೇವಲ ರೇಖಾ ಚಿತ್ರವಿನ್ಯಾಸಗಳಿವೆ. (ಚಿತ್ರಕಾರರು ಸ್ಕೆಚ್ ಬುಕ್‌ಗಳ ಸ್ವರೂಪವನ್ನು ಇಲ್ಲಿ ಕಾಣಬಹುದು) ಬರವಣಿಗೆಯ ಜೊತೆಯಲ್ಲಿಯೂ ರೇಖಾಚಿತ್ರಗಳಿರುವ ಹಸ್ತಪ್ರತಿಗಳ ಸಂಖ್ಯೆ ತೀರ ಕಡಿಮೆ ಎಂದೇ ಹೇಳಬೇಕು.

ಉದಾಹರಣೆಗಾಗಿ ಕೆಲವನ್ನು ಇಲ್ಲಿ ಉಲ್ಲೇಖಿಸಬಹುದಾಗಿದೆ.


ಅ. ಹಚ್ಚೆಯ ರೇಖಾ ಚಿತ್ರಗಳನ್ನೊಳಗೊಂಡ ಹಸ್ತಪ್ರತಿಗಳು.
ಆ. ಹೆಳವರಲ್ಲಿ ವಂಶಾವಳಿಗಳನ್ನೊಳಗೊಂಡ ರೇಖಾ ಚಿತ್ರಗಳ ಹಸ್ತಪ್ರಗಿಳು
ಇ. ಮದರಂಗಿ (ಮೇಹಂದಿ) ರೇಖಾ ಚಿತ್ರಗಳನ್ನೊಳಗೊಂಡ ಹಸ್ತಪ್ರತಿಗಳು.
ಈ. ರಂಗೋಲಿಯ ರೇಖಾಚಿತ್ರಣ ಒಳಗೊಂಡ ಹಸ್ತಪ್ರತಿಗಳು.
ಉ. ಕಸೂತಿಯ ರೇಖಾಚಿತ್ರಣ ಒಳಗೊಂಡ ಹಸ್ತಪ್ರತಿಗಳು.
ಊ. ನೇಕಾರಿಕೆಯ ನೇಯ್ಗೆಯ ರೇಖಾಚಿತ್ರಣ ಒಳಗೊಂಡ ಹಸ್ತಪ್ರತಿಗಳು.

ಅ. ಹಚ್ಚೆಯ ರೇಖಾಚಿತ್ರಗಳನ್ನೊಳಗೊಂಡ ಹಸ್ತಪ್ರತಿಗಳು

ಕರ್ನಾಟಕದಲ್ಲಿ ಶರೀರದ ಮೇಲೆ ಹಚ್ಚೆ ಹಾಕುವ ವಿಶಿಷ್ಟ ಜನಾಂಗಗಳಿದ್ದು ಅವರಲ್ಲಿ ಹಚ್ಚೆಯ ವಿವಿಧ ರೇಖಾಚಿತ್ರಗಳನ್ನುಹೊಂದಿದ, ಹಸ್ತಪ್ರತಿಗಳಿವೆ. ಹಚ್ಚೆ ಹಾಕಿಸಿಕೊಳ್ಳುವವರಿಗೆ ಆ ಚಿತ್ರಗಳನ್ನು ತೋರಿಸಿ ಅವರಿಗೆ ಮೆಚ್ಚಿಗೆಯಾದ ಚಿತ್ರಗಳನ್ನು ಹಚ್ಚೆಯ ಮೂಲಕ ಹಾಕುವ ಸಂಪ್ರದಾಯ ಗ್ರಾಮೀಣ ಪ್ರದೇಶದಲ್ಲಿ ಈಗಲೂ ಅಲ್ಲಲ್ಲಿ ಕಾಣಸಿಗುತ್ತದೆ. ಸ್ತ್ರೀ ಪುರುಷರೆಲ್ಲರು ಹಚ್ಚೆಯನ್ನು ಹಾಕಿಸಿಕೊಳ್ಳುತ್ತಿದ್ದು ಚಿಕ್ಕ ಮಕ್ಕಳಿಗೆ, ದೊಡ್ಡವರಿಗೆ ಬೇರೆ ಬೇರೆಯಾಗಿ ನಿರ್ದಿಷ್ಟವಾದ ಹಚ್ಚೆಯನ್ನು ಹಾಕುತ್ತಾರೆ. ಈ ಹಚ್ಚೆಯನ್ನು ಚುಚ್ಚುವಾಗ ಉಂಟಾಗುವ ನೋವನ್ನು ಮರೆಸುವಂತೆ ಹಾಡುಗಳನ್ನು ಹೇಳುತ್ತಾರೆ. ಹಸ್ತಪ್ರತಿಯಲ್ಲಿ ಈ ಹಾಡುಗಳಿರುವುದಿಲ್ಲ.

ತಾಳೆಗರಿ ಹಸ್ತ ಪ್ರತಿಗಳಲ್ಲಿ ಜಾನಪದ ಪ್ರಕೃತಿ ಪರಿಸರದ ರೇಖಾ ಚಿತ್ರಗಳು

ಕೃತಿ :ಉಷಾ - ಅನಿರುದ್ಧರ ವಿವಾಹ



Courtesy :

Lalita Kala Akademi New Delhi.

ಕರ್ನಾಟಕದ ಹಸ್ತಪ್ರತಿ ಚಿತ್ರಕಲೆ- ಒಂದು ಅಧ್ಯಯನ

ಕಡಲ ತೀರದ ಜಾನಪದ ಕಾವಿ ಕಲೆ



ಕೃಪೆ:

ಡಾ॥ಕೃಷ್ಣಾನಂದ ಕಾಮತ್

ಕರ್ನಾಟಕ ಲಲಿತ ಕಲಾ ಅಕಾಡಮಿ,ಬೆಂಗಳೂರು.

ತಾಳೆಗರಿ ಹಸ್ತ ಪ್ರತಿಗಳಲ್ಲಿ ರೇಖಾ ಚಿತ್ರಗಳು

ಕೃತಿ : ದೇವಿ ಮಹಾತ್ಮೆ

ಕರ್ನಾಟಕದ ಹಸ್ತಪ್ರತಿ ಚಿತ್ರಕಲೆ- ಒಂದು ಅಧ್ಯಯನ



Courtesy :

Lalita Kala Akademi New Delhi.


ಕರ್ನಾಟಕದ ಹಸ್ತಪ್ರತಿ ಚಿತ್ರಕಲೆ- ಒಂದು ಅಧ್ಯಯನ


ತಾಳೆಗರಿ ಹಸ್ತ ಪ್ರತಿಗಳಲ್ಲಿ ರೇಖಾ ಚಿತ್ರಗಳು

ಕೃತಿ : ಭಾಗವತದಲ್ಲಿ ಉಷೆ ಮತ್ತು ಅನಿರುದ್ಧರ ವಿವಾಹ









Courtesy :

Sisu Shankar

Lalita Kala Akademi New Delhi.

ಹಚ್ಚೆಯ ಹಸ್ತಪ್ರತಿಯಲ್ಲಿರುವ ರೇಖಾಚಿತ್ರಗಳು ಪ್ರಾದೇಶಿಕವಾಗಿ ಆಯಾ ಪ್ರದೇಶದ ವೈಶಿಷ್ಟತೆಯ ಹಿನ್ನಲೆಯಲ್ಲಿ ರಚಿತವಾಗಿರುತ್ತವೆ. ಹಚ್ಚೆಯ ರೇಖಾಚಿತ್ರಗಳನ್ನು ಶರೀರದ ಪ್ರಮುಖ ಭಾಗಗಳಲ್ಲಿ ಹೆಚ್ಚಾಗಿ ಹಾಕಿಸಿಕೊಳ್ಳುತ್ತಾರೆ. 1. ಮುಖದ ಹಚ್ಚೆ 2. ಕೊರಳ ಹಚ್ಚೆ 3. ಕೈಹಚ್ಚೆ 4. ಎದೆಯ ಹಚ್ಚೆ 5. ಹೊಟ್ಟೆಯ ಸುತ್ತಲಿನ ಹಚ್ಚೆ 6. ಬೆನ್ನು ಹಚ್ಚೆ 7. ಗುಪ್ತಾಂಗದ ಹಚ್ಚೆ 8. ಕಾಲಿನ ಹಚ್ಚೆಯಂದು ವಿಂಗಡಿಸಿಕೊಂಡು ಅಧ್ಯಯನ ಮಾಡಬಹುದಾಗಿದೆ. ಧಾರ್ಮಿಕ ಮತ್ತು ಧಾರ್ಮಿಕೇತರ ಹಚ್ಚೆಯ ರೇಖಾಚಿತ್ರಗಳನ್ನು ಈ ಹಸ್ತಪ್ರತಿಗಳಲ್ಲಿ ಕಾಣುತ್ತೇವೆ.

ಆ. ಹೆಳವರಲ್ಲಿ ವಂಶಾವಳಿಗಳನ್ನೊಳಗೊಂಡ ರೇಖಾಚಿತ್ರಗಳ ಹಸ್ತಪ್ರತಿ

ಹೆಳವರು ಗ್ರಾಮೀಣ ಪ್ರದೇಶದ ಎಲ್ಲ ಜನಾಂಗಗಳ ಮನೆತನದ ವಂಶಾವಳಿಯನ್ನು ಸಂರಕ್ಷಿಸಿಕೊಂಡು ಬಂದ ಜನಪದ ಜನಾಂಗ ತಲೆಮಾರಿನಿಂದ ತಲೆಮಾರಿಗೆ ಈ ಕುಟುಂಬದವರು ಪ್ರತಿಮನೆಯ ಕುಟುಂಬದವರ ಜನನದ ವಿವರವನ್ನು ದಾಖಲಿಸಿಕೊಳ್ಳುವುದನ್ನು ಈಗಲೂ ಹಳ್ಳಿಯಲ್ಲಿ ಕಾಣಬಹುದು. ಇವರು ಪ್ರತಿಯೊಂದು ಊರಿನ ಓಣಿಯ ಮನೆಗಳ ವಂಶಾವಳಿಯನ್ನೊಳಗೊಂಡ ರೇಖಾಚಿತ್ರಗಳ ಹಸ್ತಪ್ರತಿಯನ್ನು ಹೊಂದಿರುತ್ತಾರೆ. ಈ ಹಸ್ತಪ್ರತಿಯ ರೇಖಾಚಿತ್ರಗಳು ವೃಕ್ಷದ ಮಾದರಿಯಲ್ಲಿರುತ್ತವೆ. ಆ ವಂಶದ ಪೂರ್ವಜರ ಮೂಲ ಪುರುಷನಿಂದ ಪ್ರಸ್ತುತ ಕುಟುಂಬದವರೆಗೆ ಈ ವಂಶಾವಳಿಯ ವೃಕ್ಷ ಕವಲು ಕವಲಾಗಿ ಕಲಾತ್ಮಕವಾಗಿ ವಿಂಗಡಿಸಿಕೊಂಡು ವಿನ್ಯಾಸಗೊಳಿಸುಕೊಂಡಿರುತ್ತಾರೆ. ಆಯಾ ವಂಶವೃಕ್ಷದ ವರ್ತುಳದಲ್ಲಿ ಹೆಸರುಗಳನ್ನು ನಮೂದಿಸಿರುತ್ತಾರೆ. ಈ ಹಸ್ತಪ್ರತಿಗಳ ಮೇಲಿನ ಹಾಗೂ ಕೆಳಬದಿಯ ರಕ್ಷಾಕವಚದ ಮೇಲೆ ಧಾರ್ಮಿಕ ಹಾಗೂ ಸೌಂದರ್ಯ ಹಿನ್ನಲೆಯ ರೇಖಾಚಿತ್ರಗಳು ಸುಳುವು ಬಳ್ಳಿಗಳ ರೇಖಾವಿನ್ಯಾಸಗಳು ಅಧ್ಯಯನ ಯೋಗ್ಯವಾದವುಗಳಾಗಿವೆ.

ಇ. ಮದರಂಗಿ (ಮೇಹಂದಿ) ರೇಖಾಚಿತ್ರಗಳನ್ನೊಳಗೊಂಡ ಹಸ್ತಪ್ರತಿಗಳು :

ಹಚ್ಚೆಯ ಕಲೆಯಂತೆ ಮದರಂಗಿ ಕಲೆಯೂ ಜನಪದ ಸಮುದಾಯದ ಒಂದು ವಿಶಿಷ್ಠ ಚಿತ್ರಕಲಾ ಪ್ರಕಾರವಾಗಿದೆ. ಹಬ್ಬಹರಿದಿನ, ಮದುವೆಯಂತಹ ಸಂದರ್ಭದಲ್ಲಿ ಈ ಕಲೆ ಸಾಮಾನ್ಯವಾಗಿ ಮಹಿಳೆಯರಲ್ಲಿ ಕಂಡುಬರುತ್ತದೆ. ಮದರಂಗಿ ಹಾಕುವದನ್ನು ವೃತ್ತಿಯನ್ನಾಗಿ ಮಾಡಿಕೊಂಡ ಕುಟುಂಬಗಳು ಗ್ರಾಮೀಣ ಪ್ರದೇಶದಲ್ಲಿದ್ದು ಅವರು ಕೈ ಕಾಲುಗಳ ಮೇಲೆ ಹಾಕುವ ಮದರಂಗಿಯ ರೇಖಾಚಿತ್ರಗಳನ್ನೊಳಗೊಂಡ ಹಸ್ತಪ್ರತಿಯನ್ನು ಹೊಂದಿರುತ್ತಾರೆ. ಹಚ್ಚೆಯವರಂತೆ ಇವರು ಸಹ ವಿವಿಧ ರೇಖಾ ವಿನ್ಯಾಸಗಳನ್ನು ಮದರಂಗಿ ಹಾಕಿಸಿಕೊಳ್ಳುವವರಿಗೆ ತೋರಿಸಿ ಅವರಿಗೆ ಒಪ್ಪಿಗೆಯಾದ ರೇಖಾವಿನ್ಯಾಸಗಳನ್ನು ಮದರಂಗಿಯಿಂದ ಅಲಂಕರಿಸಿ ನಂತರ ಅವರಿಂದ ಸಂಭಾವನೆಯನ್ನು ಪಡೆಯುವ ಸಂಪ್ರದಾಯವಿದೆ. ಈ ಹಸ್ತಪ್ರತಿಯಲ್ಲಿ ಬರವಣಿಗೆ ಗೌಣವಾಗಿರುತ್ತದೆ. ಕೇವಲ ಚಿತ್ರವಿನ್ಯಾಸದ ಹೆಸರುಗಳಿರುತ್ತವೆ. ಆದರೆ ದೀರ್ಘವಾದ ಬರವಣಿಗೆಯಿಲ್ಲದಿರುವದನ್ನು ಕಾಣುತ್ತವೆ. ಇಲ್ಲಿಯೂ ಧಾರ್ಮಿಕ ಹಾಗೂ ಧಾರ್ಮಿಕೇತರ ಹಿನ್ನಲೆಯ ಭೂಮಿತಿ ಆಕೃತಿಯ ರೇಖಾವಿನ್ಯಾಸಗಳ ಚಿತ್ರಗಳಿರುತ್ತವೆ.

ಈ.ರಂಗೋಲಿಯ ರೇಖಾಚಿತ್ರಣ ಒಳಗೊಂಡ ಹಸ್ತಪ್ರತಿಗಳು.

ರಂಗೋಲಿ ಜನಪದರ ಬದುಕಿನಲ್ಲಿ ಬಹು ಪ್ರಾಮುಖ್ಯತೆಯನ್ನು ಪಡೆದ ಒಂದು ಜನಪ್ರಿಯ ಕಲೆ. ಜನಪದ ಮಹಿಳೆ ಬುದುಕು ಪ್ರಾರಂಭಗೊಳ್ಳುವದು. ಮುಂಜಾನೆ ರಂಗೋಲಿಯೊಂದಿಗೆ ರಂಗೋಲಿಯಲ್ಲಿ ವಿವಿಧಾಕಾರದ ಬಣ್ಣ ಬಣ್ಣದ ಚಿತ್ತಾರಗಳು ಬಿಳಿಯ ಚುಕ್ಕೆಗಳು ಕಣ್ಮನಸೆಳೆಯುವ ಶುಭ್ರ ರೇಖೆಗಳು ಪ್ರಮುಖವಾಗಿ ಗಮನ ಸೆಳೆಯುತ್ತವೆ. ರಂಗೋಲಿ ಚಿತ್ರದ ಮೂಲಕ ಆಯಾ ಮನೆಯ ಗೃಹಣಿಯ ಜೀವನಕ್ರಮ ಮುಂತಾದವುಗಳನ್ನು ತಿಳಿದುಕೊಳ್ಳುವರುಂಟು. ಇದರ ಹಿಂದೆ ತಾಂತ್ರಿಕ ಹಿನ್ನೆಲೆ ವಿಧಿ ಕ್ರಿಯೆಗಳು ಐತಿಹಾಸಿಕ ಪೌರಾಣಿಕ ಹಿನ್ನಲೆಯ ಕಥಾನಿಕೆಗಳು ಇರುತ್ತದೆ. ಡಾ. ಎಸ್.ಸಿ.ಪಾಟಿಲರು ಹೇಳುವಂತೆ ಬದುಕಿನ ಖುಷಿಯನ್ನು ಸೌಭಾಗ್ಯ ಮಂಗಳಕರ ಪ್ರಸಂಗವನ್ನು, ಶುಭ ಸನ್ನಿವೇಶವನ್ನು ಹೇಳುವ ಲಾಲಿತ್ಯಪೂರ್ಣ ಕಲಾ ಕೌಶಲ್ಯವೇ ರಂಗೋಲಿ ಎಂಬ ಮಾತು ಅರ್ಥಪೂರ್ಣವುವದಾಗಿದೆ.. ಇಲ್ಲಿಯ ಜನಪದ ಚಿತ್ರಕಲೆಗಳಲ್ಲಿ ಒಂದಾದ ಈ ಕಲೆಯಲ್ಲಿ ಶ್ರೇಷ್ಠಕಲೆಯ ಲಕ್ಷಣಗಳನ್ನು ಇವೆ. ಇದು ಅಲಂಕಾರಿಕಮಾತ್ರವಲ್ಲ ಮಂಗಳಕರವೂ ಆಗಿದೆ. ರಂಗೋಲಿ ಭಾರತದ ಹಳ್ಳಿ ಮೂಲೆಗಳೆಲ್ಲೆಲ್ಲ ತುಂಬಿರುವ ಸೌಂದರ್ಯ ಪ್ರಜ್ಞೆಯದ್ಯೋತಕವಾಗಿದೆ. [೩]

ವಾತ್ಸಾಯನನ 64 ಕಲೆಗಳಲ್ಲಿ ಒಂದಾದ ರಂಗೋಲಿಯ ಪ್ರಾಚೀನತೆ ಬಾಣನ (ಕ್ರಿ.ಶ.606 ರಿಂದ 648)ರ ಕಾದಂಬರಿಯಲ್ಲಿ ಸೂಚಿತಾಗ್ರಹದ ಮುಂದೆ ರಂಗೋಲಿ ಹಾಕುವದನ್ನು ವಿವರಿಸಿದ್ದಾನೆ. ನಾನಾವಿಧವಾದ ಹೂವಿನ ಕಣದಿಂದ ಮನೆಯ ಮುಂದೆ ಬಾಗಿಲ ಎರಡೂ ಬದಿಯಲ್ಲಿ ಸೆಗಣಿಯಿಂದ ಚೌಕಾಕಾರ ಸಾರಿಸಿ ಹೂವಿನ ರಂಗೋಲಿಯನ್ನು ಚೌಕದಲ್ಲಿ ಮತ್ತು ಸ್ವಸ್ತಿಕ್ ಗಳಲ್ಲಿ ತೆಗೆಯುತ್ತಿದ್ದುದನ್ನು ವರ್ಣಿಸುತ್ತಾನೆ. ಕಾಮ ಶಾಸ್ತ್ರದ ತೆಲಗು ವ್ಯಾಖ್ಯಾನಕಾರನಾದ ಮೇಡಿಚರ್ಲ ಅಂಜನೆಯ ಶಾಸ್ತ್ರಿಯವರು ರಂಗೋಲಿ ಇದು ಚಿತ್ರಕಲೆಯಷ್ಟೇ ಪ್ರಾಚೀನವಾದುದು. ಮಂತ್ರಶಾಸ್ತ್ರ ತಂತ್ರಶಾಸ್ತ್ರಮತ್ತು ಆಗಮುಗಳಲ್ಲಿ ಉಕ್ತವಾಗಿರುವ ಅನೇಕ ಕಾಮ್ಯ ಕರ್ಮಗಳಲ್ಲಿ ದೇವತಾ ವಿಗ್ರಹ ಅಥವಾ ಕಲಶವನ್ನು ಸ್ಥಾಪಿಸುವ ಸ್ಥಳದಲ್ಲಿ ಬಣ್ಣ ಬಣ್ಣದ ಧಾನ್ಯಗಳಿಂದ ಇಲ್ಲವೇ ಬಣ್ಣ ಹಚ್ಚಿದ ಅಕ್ಕಿಯಿಂದ ಕಲಾತ್ಮಕವಾದ ಮಂಡಲಗಳನ್ನು ಚಿತ್ರಿಸುತ್ತಿದ್ದುದನ್ನು ಉದಾಹರಿಸುತ್ತಾರೆ. [೪]

ರಂಗೋಲಿ ಚಿತ್ರಕಲೆಯನ್ನು ಮುಖ್ಯವಾಗಿ ಚುಕ್ಕೆಯ ರಂಗೋಲಿ, ಚುಕ್ಕೆಯೇತರ ರಂಗೋಲಿಯೆಂದು ಎರಡು ರೀತಿಯಲ್ಲಿ ವಿವರಿಸುತ್ತಾರೆ. ಈ ಚಿತ್ರಗಳನ್ನು ಚಿತ್ರಿಸುವ ವಿಧಿ-ವಿಧಾನದ ಅನೇಕ ಹಸ್ತಪ್ರತಿಗಳು ಗ್ರಾಮೀಣ ಪ್ರದೇಶದಲ್ಲಿ ಸಿಗುತ್ತಿದ್ದು, ಅವುಗಳಲ್ಲಿ ಚುಕ್ಕೆಯಿಂದ ಇಡುವ ರಂಗೋಲಿ ಬಗೆಗೆ ವಿವರವಾದ ಚುಕ್ಕೆಗಳ ರೇಖಾ ಚಿತ್ರಗಳು ಇರುತ್ತವೆ. ಇಲ್ಲಿ ತ್ರಿಕೋನ, ಚೌಕ, ವರ್ತುಳ, ಆಯತ, ವಜ್ರಾಕೃತಿ ಇತ್ಯಾದಿ ಆಕೃತಿಗಳ ಪ್ರಮಾಣ ಬದ್ಧವಾದ ವಿನ್ಯಾಸಗಳು ಇದ್ದು, ಅವುಗಳನ್ನು ಮದುಮೊದಲು ನೋಡಿ ಚಿತ್ರಿಸುವದನ್ನು ಕಾಣುತ್ತೇವೆ. ಇನ್ನು ಚುಕ್ಕೆ ರಹಿತ ರಂಗೋಲಿ ಇಲ್ಲಿ ಚುಕ್ಕೆಗಳನ್ನು ಇಡಲಾರದೇ ನೇರವಾಗಿ ರಂಗೋಲಿಯ ಪುಡಿಗಳಿಂದಲೇ ರಂಗೋಲಿಯನ್ನು ಹಾಕವು ವಿಧಿ ವಿಧಾನವಿದೆ. ಇದನ್ನು ಸರಳಗೈ ರಂಗೋಲಿ ಎಂದು ಕರೆಯುತ್ತಾರೆ. ಹಸ್ತಪ್ರತಿಗಳಲ್ಲಿ ಈ

---

೩. ಡಾ. ಎಸ್.ಸಿ.ಪಾಟೀಲ : ಕರ್ನಾಟಕದಜನಪದ ಚಿತ್ರಕಲೆ, ಪುಟ-೨೨೨

೪. ಡಾ. ಎಸ್.ಸಿ.ಪಾಟೀಲ : ಕರ್ನಾಟಕದಜನಪದ ಚಿತ್ರಕಲೆ, ಪುಟ-೨೨೨

ರಂಗೋಲಿಯ ರೇಖಾಚಿತ್ರಗಳು ಇದ್ದು, ಅವು ಎಲೆ, ಹೂವು, ಗಿಡ, ಪಕ್ಷಿಪ್ರಾಣಿ, ಮಾನವಾಕೃತಿಗಳು ಪ್ರಮುಖವಾಗಿರುತ್ತವೆ. ಚುಕ್ಕೆ ರಹಿತ ರಂಗೋಲಿಗಳು ಹೆಚ್ಚಾಗಿ ಅಲಂಕಾರಿಕ ವಿನ್ಯಾಸದ ರಚನೆಯಾಗಿವೆ. ಮತ್ತು ಸೃಜನ ಶೀಲತೆಯಿಂದ ಕೂಡಿದವುಗಳಾಗಿರುತ್ತವೆ.

ಇತ್ತೀಚೆಗೆ ಅನೇಕ ರಂಗೋಲಿ ಚಿತ್ರಕಲೆಯ ಕೃತಕ ಪ್ಲಾಸ್ಟಿಕನ ವಸ್ತುಗಳು ಮತ್ತು ಪುಸ್ತಿಕೆಗಳು ಹೇರಳವಾಗಿ ಮಾರುಕಟ್ಟೆಗಳಲ್ಲಿ ಪ್ರಕಟಗೊಂಡಿರುವದನ್ನು ಕಾಣಬಹುದಾಗಿದೆ.

ಉ. ಕಸೂತಿಯ ರೇಖಾಚಿತ್ರಣ ಒಳಗೊಂಡ ಹಸ್ತಪ್ರತಿಗಳು.

ಬಟ್ಟೆಯ ಮಾಧ್ಯಮದಲ್ಲಿ ಕಲಾತ್ಮಕವಾಗಿ ರೂಪಗೊಳ್ಳುವ ವಿಶಿಷ್ಟವಾದ ಕಲೆಯೇ ಕಸೂತಿ ಕಲೆ. ಕಸೂತಿ ಎಂದರೆ ಬಣ್ಣದ ದಾರಗಳಿಂದ ಬಟ್ಟೆಗಳಿಗೆ ಮಾಡುವ ಹೆಣಿಗೆಯ ಅಲಂಕಾರವೆಂಬ ಅರ್ಥವಿದೆ. ವಸ್ತ್ರದಮೇಲೆ ಮತ್ತಿತರ ವಸ್ತುಗಳ ಮೇಲೆ ಸೂಜಿ ದಾರಗಳಿಂದ ಹೆಣೆದು ಮಾಡಿದ ಅಲಂಕಾರಗಳನ್ನೇ ಕಸೂತಿ ಎಂದು ಕರೆಯಲಾಗುತ್ತದೆ. ಈ ಕಸೂತಿಯಲ್ಲಿ ನಾಲ್ಕು ಪ್ರಕಾರಗಳಿದ್ದು 1. ಗಾಂವಟಿ ಕಸೂತಿ 2. ಮೇಂತೆ ಕಸೂತಿ, 3. ನೇಯ್ಗೆ ಕಸೂತಿ 4. ಮುರುಗಿ ಕಸೂತಿ ಎಂಬ ಪ್ರಕಾರಗಳಿವೆ. ಈ ಮೇಲಿನ ಕಸೂತಿಗಳನ್ನು ಹಾಕಲು ಗ್ರಾಮೀಣ ಪ್ರದೇಶದಲ್ಲಿ ಹೆಣ್ಣುಮಕ್ಕಳು ನುರಿತ ಕಸೂತಿ ಕಲಾವಿದೆಯರಿಂದ ರೇಖಾ ಚಿತ್ರಗಳನ್ನು ಬಿಡಿಸಿಕೊಂಡ ಹಸ್ತಪ್ರತಿಗಳೆ ಕಸೂತಿಯ ಹಸ್ತಪ್ರತಿಗಳಾಗಿವೆ. ಸಾಮಾನ್ಯವಾಗಿ ಕಲಶ, ಕಮಲ, ಪದ್ಮ, ಹೂಬಳ್ಳಿ, ವಿವಿಧ ರೀತಿಯ ನಕ್ಷತ್ರ, ನಂದಿ, ಈಶ್ವರ, ಪಕ್ಷಿ, ಗಿಳಿ, ನವಿಲು ಹೀಗೆ ನೂರಾರು ಚಿತ್ರಗಳು ಇರುತ್ತವೆ. ಆಯಾ ಪ್ರದೇಶದ ಧಾರ್ಮಿಕ ದೇವಾನು ದೇವತೆಗಳು ಕಸೂತಿಯಲ್ಲಿ ವಿನ್ಯಾಸ ಗೊಳ್ಳುತ್ತವೆ.

ಊ. ನೇಕಾರಿಕೆಯ ನೇಯ್ಗೆಯ ರೇಖಾಚಿತ್ರಣ ಒಳಗೊಂಡ ಹಸ್ತಪ್ರತಿಗಳು.

ನೇಯ್ಗೆಯ ಬಟ್ಟೆಗಳಾದ ಕಂಬಳಿ, ಜಮಖಾನೆ, ಸೀರೆ ಮುಂತಾದ ಬಟ್ಟೆಗಳ ವಿವಿಧ ವಿನ್ಯಾಸಗಳ ಚಿತ್ತಾರಗಳಿಂದ ಅಲಂಕರಿಸುವದನ್ನು ಕಾಣುತ್ತೇವೆ. ಇವುಗಳಿಗೆ ಮೂಲವಾದ ಮೊದಲೇ ತಯಾರಿಸಿಕೊಂಡ ರೇಖಾವಿನ್ಯಾಸಗಳ ಹಸ್ತಪ್ರತಿಯ ಕಡತವು ಈ ವೃತ್ತಿ ಮಾಡುವರಲ್ಲಿ ಸಾಮಾನ್ಯವಾಗಿ ಇರುವದನ್ನು ಕಾಣುತ್ತೇವೆ. ಇಲ್ಲಿರುವ ರೇಖಾಚಿತ್ರಗಳ ಹಸ್ತಪ್ರತಿಯನ್ನು ನೇಯ್ಗೆಯ ರೇಖಾಚಿತ್ರಣದ ಹಸ್ತಪ್ರತಿಯೆಂದು ಕರೆಯಬಹುದಾಗಿದೆ. ಇಲ್ಲಿ ಎಳೆಗಳನ್ನು ಎಣಿಸಿ ಸೀರೆ ಮುಂತಾದ ನೇಯ್ಗೆಯ ಬಟ್ಟೆಗಳಲ್ಲಿ ಕಲಾತ್ಮಕವಾಗಿ ಎಲೆ, ಹೂವು, ಬಳ್ಳಿ, ಹಣ್ಣು ಮುಂತಾದವುಗಳ ವಿನ್ಯಾಸಗಳನ್ನು ಮಾಡುತ್ತಾರೆ. ಸೀರೆ, ಕುಬಸದ ಖಣ, ಜಮಖಾನೆ ಮುಂತಾದವುಗಳಲ್ಲಿ ಇಂತಹ ಕಲಾತ್ಮಕವಾದ ವಿನ್ಯಾಸಗಳು ವಿಶೇಷವಾಗಿ ಕಂಡುಬರುತ್ತದೆ.

2. ವರ್ಣಚಿತ್ರಪಧಾನ ಜನಪದ ಹಸ್ತಪ್ರತಿಗಳು

ಸಂಪೂರ್ಣ ವರ್ಣಚಿತ್ರಗಳನ್ನೊಳಗೊಂಡ ಜನಪದ ಹಸ್ತಪ್ರತಿಗಳು ರಚನೆಗೊಂಡಿದ್ದು ಅವುಗಳ ಸರಿಯಾದ ಶೋಧ ಮತ್ತು ಮೂಲ ಚಿತ್ರಗಳೊಂದಿಗೆ ಪ್ರಕಟಿಸುವ ಕಾರ್ಯ ಆಗಬೇಕಾಗಿದೆ. ಅನೇಕ ಜನಪದ ಹಸ್ತಪ್ರತಿಗಳಲ್ಲಿರುವ ವರ್ಣಚಿತ್ರಗಳನ್ನು ಬಿಟ್ಟು ವಿಷಯವನ್ನು ಮಾತ್ರ

ಪ್ರಕಟಿಸುವ ಕಾರ್ಯವು ನಡೆದಿದೆ. ದುಬಾರಿಯಾದ ಮುದ್ರಣವೆಚ್ಚವು ಇದಕ್ಕೆ ಕಾರಣವಾಗಿ ಅಮೂಲ್ಯವಾದ ಜನಪದ ವರ್ಣಚಿತ್ರಗಳ ಮೂಲದ ಹಸ್ತಪ್ರತಿಯಲ್ಲೇ, ಅಜ್ಞಾತವಾಗಿ ಉಳಿದಿರುವದೇ ಹೆಚ್ಚು. ಉದಾಹರಣೆಗಾಗಿ ನಂಜುಂಡ ಕವಿಯ ವೃಷಭೇಂದ್ರ ವಿಲಾಸ ಎಂಬ ಯಕ್ಷಗಾನ ಜನಪದ ಹಸ್ತಪ್ರತಿ ಯಲ್ಲಿ ಸಾವಿರಾರು ವರ್ಣಚಿತ್ರಗಳಿದ್ದು ಅವು ಪ್ರಕಟವಾಗದೆ ಇರುವದು ಚಿತ್ರಕಲಾ ಕ್ಷೇತ್ರದ ದೊಡ್ಡ ಕೊರತೆಯನ್ನಬೇಕಾಗಿದೆ. ಇಲ್ಲಿ ಬಸವಣ್ಣನ ಕಥೆಯನ್ನು ಯಕ್ಷಗಾನರೂಪದಲ್ಲಿ ಚಿತ್ರಗಳೊಂದಿಗೆ ಹೇಳಿಕೊಂಡು ಹೋಗಲಾಗಿದೆ. ಶ್ರೀ ತತ್ವನಿಧಿಯಲ್ಲಿರುವಂತೆ ಪುಟಪುಟಗಳಲ್ಲಿಯೂ ಮೈವೆತ್ತು ನಿಂತಿರುವ ಅಸಂಖ್ಯಾತ ವರ್ಣ ಚಿತ್ರಗಳು, ದಪ್ಪವಾದ ಬಿಳಿಯ ಕಾಗದದಲ್ಲಿ ರಚಿತವಾದ ಈ ಗ್ರಂಥ, ಆಕಾರದಲ್ಲಿ ಸುಮಾರು ಒಂದಡಿಗಿಂತಲೂ ಸ್ವಲ್ಪ ಹೆಚ್ಚು ಉದ್ದವಾಗಿಯೂ ಮತ್ತು ಅರ್ಧ ಅಡಿಗಿಂತಲೂ ಸ್ವಲ್ಪ ಹೆಚ್ಚು ಅಗಲವಾಗಿಯೂ ಇದೆ. ಒಂದೊಂದು ಪುಟದ ಸುತ್ತಲೂ ಹಳದಿ ಬಣ್ಣದ ಅಂಚನ್ನು ಕಟ್ಟಲಾಗಿದೆ. ಪ್ರತಿಪುಟದಲ್ಲಿಯೂ ಕಥಾನಿರೂಪಣೆಯ ಒಂದೋ ಎರಡೋ ಪದ್ಯಗಳಿದ್ದು ಅದಕ್ಕೆ ಸಂಬಂಧಪಟ್ಟ ಚಿತ್ರಗಳೇ ಪ್ರಧಾನವಾಗಿ ಕಂಗೊಳಿಸುತ್ತವೆ.[೫]

ಪ್ರಾರಂಭದಲ್ಲಿ ಮುಮ್ಮಡಿ ಕೃಷ್ಣರಾಜ ಒಡೆಯರ ಚಿತ್ರ ಗಣಪತಿ, ಮಹಿಷಾಸುರ ಮರ್ದಿನಿ, ಸರಸ್ವತಿ ಲಕ್ಷ್ಮಿ ಮೊದಲಾದ ಚಿತ್ರಗಳು ಲಿಂಗವನ್ನು ಕೈಲಿಹಿಡಿದು ನಿಂತಿರುವ ಶಿವಯೋಗಿಯ ಚಿತ್ರವಿದ್ದು ಬಸವಣ್ಣನವರ ಕಥೆ ಪ್ರಾರಂಭವಾಗುವದರೊಂದಿಗೆ ಚಿತ್ರಗಳು ಪ್ರಾರಂಭವಾಗುತ್ತವೆ. ಮಾದರಸ ಮಾದಲಾಂಬಿಕೆ ನಂದಿವ್ರತ ಮಾಡುತ್ತಿರುವುದು, ಸುಂದರಿಯರು ತೊಟ್ಟಿಲುಕಟ್ಟಿ ಜೋಗುಳವಾಡುವದು, ಬಸವನ ಅಕ್ಷರಾಭ್ಯಾಸ, ಬಾಲಲೀಲೆಗಳು, ಸಂಗಮಕ್ಕೆ ಆಗಮನ, ಅಲ್ಲಿಂದ ಕಲ್ಯಾಣಕ್ಕೆ ಇತ್ಯಾದಿಯಾಗಿ ಕಥೆ ಬೆಳೆದಂತೆ. ಅದಕ್ಕನು ಗುಣವಾಗಿ ಚಿತ್ರಗಳು ಬೆಳೆಯುತ್ತ ಹೋಗುತ್ತವೆ. ಮೊದಲಿನಿಂದ ಕೊನೆಯವರೆಗೂ ಅಂದರೆ ಬಸವಣ್ಣ ಮರ್ತ್ಯದ ಮಣಿಹವನ್ನು ಮುಗಿಸಿ ಕೂಡಲಸಂಗಮದಲ್ಲಿ ಐಕ್ಯವಾಗಿ ಕೈಲಾಸಕ್ಕೆ ಬರುವವರೆಗೂ ಏಕಪ್ರಕಾರವಾಗಿ ಬೆಳೆದಿರುವ ಈ ಚಿತ್ರಗಳ ವೈಶಿಷ್ಟ್ಯವನ್ನು ವರ್ಣಿಸುವುದು ಅಸಾಧ್ಯ, ಬಸವಣ್ಣನವರ ಕಥೆಮುಗಿದ ಮೇಲೆ ಓಹಿಲಯ್ಯ ಮೊದಲಾದ ಇತರ ಕೆಲವು ಶರಣರ ಕಥೆಗಳು ಬರುತ್ತವೆ. ಅಲ್ಲಿಯೂ ಹೀಗೆಯೇ ಚಿತ್ರಗಳಿವೆ. ಎಂದು ಡಾ. ಎಚ್. ತಿಪ್ಪೇರುದ್ರಸ್ವಾಮಿಗಳು ಈ ಹಸ್ತಪ್ರತಿಯನ್ನು ಕುರಿತು ಹೇಳಿರುವ ಮಾತುಗಳನ್ನು ಗಮನಿಸಬೇಕು. ಇಲ್ಲಿ ಸಾವಿರಾರು ಚಿತ್ರಗಳಿದ್ದು ಇವುಗಳ ಅಧ್ಯಯನವಾಗಬೇಕಾಗಿದೆ. ಶಾಂತಿ ಕೀರ್ತಿಯ ಚತುರ್ವಿಂಶತಿ ತೀರ್ಥಂಕರ ಪುರಾಣದ ಎರಡು ಅಪೂರ್ವವಾದ ಕಾಗದ ಹಸ್ತಪ್ರತಿಗಳು ಕೊಲ್ಲಾಪೂರದ ಶ್ರೀ ಲಕ್ಷ್ಮಿ ಸೇನೆ ಭಟ್ಟಾರಕ ಮಠದ ಸಂಗ್ರಹದಲ್ಲಿವೆ. (ಕ್ರ. 1821:1 51:12): ಇವೆರಡು ಪ್ರತಿಯೊಬ್ಬ ತೀರ್ಥಂಕರನ ಜನನ, ಜನ್ಮಗ್ರಾಮ, ಅವಸಾನಗಳ ಸಂಕ್ಷಿಪ್ತ ಚರಿತ್ರೆಯೊಂದಿಗೆ ಚಿತ್ರರಚನೆಯೂ ಅನುಪಮವಾಗಿರುವುದು ವಿಶೇಷ ಅದರಂತೆ ಈ ಸಂಗ್ರಹದಲ್ಲಿನ ಪ್ರತಿಷ್ಠಾತಿಲಕವು ಕೂಡ ವಿಪುಲವಾದ ಚಿತ್ರರಚನೆಗಳಿಂದ ಕೂಡಿದ್ದು, ಬಸದಿಗಳಲ್ಲಿನ ಮೂರ್ತಿಗಳ ಪೂಜಾದಿ ಸಮಾರಂಭಗಳ ವಿಧಿ - ವಿಧಾನಗಳನ್ನು ಹೇಳಿರುವುದಲ್ಲದೆ ಅದನ್ನು ವರ್ಣ ಚಿತ್ರರೂಪದಲ್ಲಿ ತೋರಿಸಿದ್ದು ಕಂಡುಬರುತ್ತದೆ. ಈ

---

೫. ಡಾ. ಎಸ್.ಸಿ.ಪಾಟೀಲ, ಸತ್ಯಾನಂದ ಪಾತ್ರೋಟ ಸಂ: ನಿಜದ ನೆಲೆ, ಡಾ. ಎಸ್.ಸಿ.ಪಾಟೀಲ, ಪುಟ-೪೬

ಚಿತ್ರಗಳು ಮರಾಠಾ ಶೈಲಿಯ ಪ್ರಭಾವವಿರುವ ಚಿತ್ರ ಶೈಲಿಯ ಸಚಿತ್ರ ಪ್ರತಿಯಾಗಿದೆ. ಎಂದು ಡಾ. ಬಿ.ಕೆ.ಹಿರೇಮಠ ಅವರು ಅಭಿಪ್ರಾಯ ಪಡುತ್ತಾರೆ.[೬]

ಹಂಪಿ ಕನ್ನಡ ವಿಶ್ವವಿದ್ಯಾಲಯ ಪ್ರಕಟಿಸಿದ ಅಮೂಲ್ಯವಾದ ಜನಪದ ಹಸ್ತಪ್ರತಿ ಶ್ರೀ ಕೃಷ್ಣ ಪಾರಿಜಾತ, ಮೂಲ ಹಸ್ತಪ್ರತಿಯಲ್ಲಿ 105 ವರ್ಣಚಿತ್ರಗಳಿದ್ದು ಪ್ರಕಟಿತ ಗ್ರಂಥದಲ್ಲಿ 102 ವರ್ಣಚಿತ್ರಗಳನ್ನು ಗ್ರಂಥದಲ್ಲಿ ಆಯಾ ಕಥಾ ಸಂದರ್ಭದಲ್ಲಿಯೇ ಇವುಗಳನ್ನು ಮುದ್ರಿಸಲಾಗಿದೆ. ಇಲ್ಲಿಯ ವರ್ಣಚಿತ್ರಗಳನ್ನು ರಚಿಸಿದವರು ಒಬ್ಬ ಸ್ತ್ರೀ(ಕಲಾವಿದೆ)ಯೆಂಬುದು ಗಮನಾರ್ಹ ಅಂಶವಾಗಿದೆ. ಇಲ್ಲಿ ಸಂಪೂರ್ಣವಾಗಿ ವರ್ಣಚಿತ್ರಗಳಿರುವುದು ವೈಶಿಷ್ಟ್ಯವಾಗಿದೆ. ಒಂದೂ ರೇಖಾ ಚಿತ್ರವಿಲ್ಲ. ಪಾರಿಜಾತದ ಸಂಭಾಷಣೆ ಅದಕ್ಕೆ ತಕ್ಕಂತೆ ವರ್ಣಚಿತ್ರಗಳು ಇವೆ. ಇಲ್ಲಿರುವ ಚಿತ್ರಗಳು ಸಾಮಾನ್ಯ ಮಟ್ಟದ ಕಲಾವಿದೆಯಿಂದ ನಿರೂಪಣೆಗೊಂಡಿದ್ದು ಇವುಗಳನ್ನು ಜಾನಪದೀಯ ವರ್ಣಚಿತ್ರಗಳೆಂದು ನೋಡಿದಾಕ್ಷಣವೇ ಗುರುತಿಸಬಹುದಾಗಿದೆ.

3. ರೇಖಾ ಮತ್ತು ವರ್ಣಚಿತ್ರ ಪ್ರಧಾನ ಜನಪದ ಹಸ್ತಪ್ರತಿಗಳು

ರೇಖಾ ಮತ್ತು ವರ್ಣಚಿತ್ರಕಲೆಗಳೆರಡನ್ನು ಹೊಂದಿದ ಜನಪದ ಹಸ್ತಪ್ರತಿಗಳು ಇದ್ದು ಇಲ್ಲಿ ಮಾದರಿಯಾಗಿ ಒಂದೆರಡನ್ನು ಚರ್ಚಿಸಲಾಗಿದೆ.

1. ನೀಲಿ ಹೊತ್ತಿಗೆಯ ಹಸ್ತಪ್ರತಿ ಭವಿಷ್ಯವನ್ನು ತಿಳಿದುಕೊಳ್ಳುವ ಜೋತಿಷ್ಯ ಸಿದ್ಧಾಂತ ಶಿಷ್ಟಪದದಲ್ಲಿ ಬೆಳೆದಂತೆ - ಜನಪದರಲ್ಲಿಯೂ ಒಂದು ವಿಧವಾಗಿ ಈ ನೀಲಿ ಹೊತ್ತಿಗೆ ನೋಡುವುದು ಹಾಗೂ ಕೇಳುವುದು ರೂಢಿಯಲ್ಲಿದೆ. ನೀಲಿ ಹೊತ್ತಿಗೆ ಹಸ್ತಪ್ರತಿಯಲ್ಲಿ ಬರವಣಿಗೆಯಿಲ್ಲದೆ ಕೇವಲ ರೇಖಾ ಮತ್ತು ವರ್ಣಚಿತ್ರಗಳಿರುವುದು ಇದರ ವೈಶಿಷ್ಟ್ಯ. ಈ ಹಸ್ತಪ್ರತಿಯನ್ನು ಜಿನಗಾರ, ಅಥವಾ ಚಿತ್ರಗಾರ, ಕುಟುಂಬದವರು ತಯಾರಿಸಿಕೊಟ್ಟದ್ದಾಗಿ ವಿವರಗಳು ಸಿಗುತ್ತವೆ. ಬುಡಬುಡಕಿ, ರಾಮಕೋಂಡಡಿ ಅಥವಾ ಕುರುಮಾಮಾಗಳು ಈ ಹಸ್ತಪ್ರತಿಯ ಚಿತ್ರಗಳನ್ನು ಅವಲಂಬಿಸಿ ವೃತ್ತಿ ಜೀವನ ಮಾಡುತ್ತಾರೆ. ಈಜನಾಂಗದಲ್ಲಿ ಇಂತಹ ನೀಲಿ ಹೊತ್ತಿಗೆಯ ಹಸ್ತಪ್ರತಿಗಳು ಸಿಗುತ್ತವೆ. ಕೆಲವು ಸಲ ಹಳ್ಳಿಗಳಲ್ಲಿರುವ ಗುರುಸ್ಥಲದ ಮಠದಲ್ಲಿಯೂ ಇವು ಕಂಡುಬರುತ್ತವೆ. ಇಲ್ಲಿ ವೃತ್ತಿ ಮತ್ತು ಹವ್ಯಾಸಿಮೂಲವಾಗಿಯೂ ನೀಲಿ ಹೊತ್ತಿಗೆಯ ಹಸ್ತಪ್ರತಿಗಳು ಸಿಗುತ್ತವೆ. ಕೆಲವು ಸಲ ಹಳ್ಳಿಗಳಲ್ಲಿರುವ ಗುರುಸ್ಥಲದ ಮಠದಲ್ಲಿಯೂ ಇವು ಕಂಡುಬರುತ್ತವೆ. ಇಲ್ಲಿ ವೃತ್ತಿ ಮತ್ತು ಹವ್ಯಾಸಿಮೂಲವಾಗಿಯೂ ನೀಲಿ ಹೊತ್ತಿಗೆಯಿಂದ ಒಳಿತು ಕೆಡುಕುಗಳನ್ನು ತಿಳಿದುಕೊಳ್ಳಲಾಗುತ್ತದೆ. ನೀಲಿ ಹೊತ್ತಿಗೆಯಲ್ಲಿ ನೂರಾರು ಶುಭ ಅಶುಭ ಚಿತ್ರಗಳಿರುತ್ತವೆ. ಆ ಹೊತ್ತಿಗೆಯಲ್ಲಿ ಕೇಳುಗರಿಂದ ತಾಮ್ರದ/ಕಂಚಿನ ಕಡ್ಡಿಯನ್ನು ಹಾಕಿಸುತ್ತಾರೆ. ಆ ಕಡ್ಡಿಯನ್ನು ಹಾಕಿದ ಪುಟದಲ್ಲಿಯ ಚಿತ್ರಗಳನ್ನು ತಮ್ಮದೇ ಆದ ರೀತಿಯಲ್ಲಿ ವಿಶ್ಲೇಷಣೆ ಮಾಡಿ ಭವಿಷ್ಯವನ್ನು ಹೇಳಲಾಗುತ್ತದೆ. ಮುತ್ತಿನ ತೆನಿ, ಈಶ್ವರ, ಬಸವಣ್ಣ, ಋಷಿ, ತೊಟ್ಟಿಲು, ಸ್ವಸ್ತಿಕ ಚಿಹ್ನೆ, ಸೂರ್ಯ, ಚಂದ್ರ ಮುಂತಾದ ಚಿತ್ರಗಳನ್ನು ಶುಭ ಲಾಭದ ಚಿತ್ರಗಳೆಂದೂ, ರಾಕ್ಷಸ, ಕಸಬರಿಗೆ, ಗೋರಿ, ಹೆಣ, ಗೂಗೆ, ಹಲ್ಲಿ, ಬೆಕ್ಕು,

೬. ಡಾ. ಬಿ.ಕೆ.ಹಿರೇಮಠ: ಕನ್ನಡ ಹಸ್ತಪ್ರತಿಗಳು ಒಂದು ಅಧ್ಯಯನ, ಪುಟ-೧೯೨

ಜಾನಪದ ಹಸ್ತ ಪ್ರತಿಗಳಲ್ಲಿ ವರ್ಣ ಚಿತ್ರಗಳು

ವಿಷಯ : ಶ್ರೀ ಕೃಷ್ಣ ಪಾರಿಜಾತ





ಕೃಪೆ :

ಸಂ॥ ಡಾ॥ಕೃಷ್ಣ ಕಟ್ಟಿ,ಪ್ರಸಾರಾಂಗ ಕನ್ನಡ ವಿಶ್ವ ವಿದ್ಯಾಲಯ,ಹಂಪಿ.

ಕರ್ನಾಟಕದ ಹಸ್ತಪ್ರತಿ ಚಿತ್ರಕಲೆ- ಒಂದು ಅಧ್ಯಯನ

ಕರ್ನಾಟಕದ ಹಸ್ತ ಪ್ರತಿಗಳಲ್ಲಿ ಶ್ರೀತತ್ತ್ವ ನಿಧಿಯ - ಶಕ್ತಿ ನಿಧಿ ಚಿತ್ರಗಳು







ಕೃಪೆ :

ಡಾ|| ಹೆಚ್.ಪಿ. ದೇವಕಿ, ಪ್ರಾಚ್ಯ ವಿದ್ಯಾ ಸಂಶೋಧನಾಲಯ

ಮೈಸೂರು ವಿಶ್ವವಿದ್ಯಾಲಯ, ಮೈಸೂರು.

ಸಂಗೀತವನ್ನು ಚಿತ್ರಕಲೆಗೆ ಅಳವಡಿಸಿಕೊಮಡು ಹಸ್ತಪ್ರತಿಯಲ್ಲಿ ಚಿತ್ರಗಳನ್ನು ಬಿಡಿಸಿದ್ದು ಒಂದು ಹೊಸ ಪ್ರಯೋಗ. ಇಲ್ಲಿ ವಾತ್ಸಾಯನನ ಷಡಂಗಗಳು ಕ್ರಮವರಿತು ಬಂದಿವೆ. ಜನಪದಕಲೆಯಿಂದ ಶಿಷ್ಟಪದ ಕಲೆ ಬೌದ್ಧಿಕ ವಿಕಾಸ ಪಡೆದು ಹಸ್ತಪ್ರತಿಯಲ್ಲಿ ಹೊಸ ಹೊಸ ತಂತ್ರ ವಿನ್ಯಾಸಗಳನ್ನು ಬಳಸಿಪ್ರಯೋಗಿಸಿದ್ದನ್ನು ಕಾಣುತ್ತೇವೆ. ಇಲ್ಲಿ ಚಿತ್ರಕಲೆಯ ವರ್ಣಗಾರಿಕೆ ಆಕಾರಗಳನ್ನು ಅಧ್ಯಯನ ಮಾಡಿ ಅದಕ್ಕೆ ಬೇಕಾದ ನಿರ್ದಿಷ್ಟ ಚೌಕಟ್ಟನ್ನು ನಿರ್ಮಿಸಿಕೊಂಡು ಸ್ವತಂತ್ರವಾಗಿ ಸೃಷ್ಟಿಸಿದ ಕಲಾ ವಿನ್ಯಾಸವನ್ನು ಶಿಷ್ಟಪದ ಹಸ್ತಪ್ರತಿ ಚಿತ್ರಕಲೆಯಲ್ಲಿ ಗುರುತಿಸಬಹುದಾಗಿದೆ. ಜನಪದ ಹಸ್ತಪ್ರತಿ ಚಿತ್ರಕಲೆಯ ವಿರೋಧವಾದ ಲಕ್ಷಣಗಳನ್ನು ಶಿಷ್ಟಪದ ಹಸ್ತಪ್ರತಿ ಚಿತ್ರಕಲೆಯಲ್ಲಿ ಗುರುತಿಸಬಹುದಾಗಿದೆ.

ಹಸ್ತಪ್ರತಿ ಚಿತ್ರಕಲೆಯ ಬಹುಪಾಲು ಚಿತ್ರಗಳು ನುರಿತ, ಉನ್ನತ ಅಧ್ಯಯನ ಹೊಂದಿದ ಚಿತ್ರಕಾರರಿಂದ ರಚನೆಗೊಂಡಿವೆ. (ಸಾಮಾನ್ಯ ಕಲಾವಿದರಿಂದ ರಚನೆಗೊಂಡ ಚಿತ್ರಗಳು ಇಲ್ಲಿದ್ದು ಅವುಗಳನ್ನು ಜನಪದ ಮೂಲದ ಹಸ್ತಪ್ರತಿಚಿತ್ರಕಲೆಯಲ್ಲಿ ಗುರುತಿಸಿಕೊಂಡು ವಿವೇಚಿಸಬಹುದಾಗಿದೆ.) ಶಾಸ್ತ್ರೋಕ್ತವಾದ ವಿಧಿವಿಧಾನಗಳು ಮತ್ತು ಸಂಕೇತ ಪ್ರತಿಮೆಗಳು ಹಾಗೆಯೇ ಸತ್ವಶಾಲಿ ರೇಖಾವಿನ್ಯಾಸಗಳು, ಪ್ರೌಢವಾದ ವರ್ಣಗಳ ಸಮ್ಮಿಲನ. ಭೂಮಿತಿ ಆಕೃತಿಯ ಬೆಡಗಿನ ಚಿತ್ರವಿನ್ಯಾಸಗಳು ಹೇರಳವಾಗಿ ಇಲ್ಲಿ ಕಂಡುಬರುತ್ತದೆ. [೮]

ಶಿಷ್ಟಪದ ಹಸ್ತಪ್ರತಿ ಚಿತ್ರಕಲೆಯನ್ನು ಮುಖ್ಯವಾಗಿ ಎರಡು ರೀತಿಯಲ್ಲಿ ವಿಂಗಡಿಸಿಕೊಳ್ಳಬಹುದು.

1. ಚಿತ್ರಕಲೆಯ ಉಲ್ಲೇಖವನ್ನು ಹೊಂದಿದ ಹಸ್ತಪ್ರತಿಗಳು.
2. ಚಿತ್ರಕಲಾ ವಿನ್ಯಾಸವನ್ನು ಹೊಂದಿದ ಹಸ್ತಪ್ರತಿಗಳು.

1. ಚಿತ್ರಕಲೆಯ ಉಲ್ಲೇಖವನ್ನು ಹೊಂದಿದ ಹಸ್ತಪ್ರತಿಗಳು

ಹಸ್ತಪ್ರತಿಯಲ್ಲಿ ಚಿತ್ರಕಲೆಯ ಕುರಿತಾದ ಸಾಹಿತ್ಯವನ್ನು ಹೊಂದಿರುವ ಇಲ್ಲವೇ ಪ್ರಾಸಂಗಿಕವಾಗಿ ಚಿತ್ರಕಲೆಯ ವಿಷಯವನ್ನು ಉಲ್ಲೇಖಿಸುವ ಹಸ್ತಪ್ರತಿಗಳು ಹೇರಳವಾಗಿ ಸಿಗುತ್ತವೆ. ಇವುಗಳನ್ನು ಮೂರು ರೀತಿಯಲ್ಲಿ ವಿಭಜಿಸಬಹುದು.

ಅ. ಸಂಸ್ಕೃತ ಹಸ್ತಪ್ರತಿಗಳಲ್ಲಿ ಚಿತ್ರಕಲೆಯ ಉಲ್ಲೇಖ

ಆ. ಕನ್ನಡಹಸ್ತಪ್ರತಿಗಳಲ್ಲಿ ಚಿತ್ರಕಲೆಯ ಉಲ್ಲೇಖ

ಉ. ಪರ್ಷಿಯನ್ ಹಸ್ತಪ್ರತಿಗಳಲ್ಲಿ ಚಿತ್ರಕಲೆಯ ಉಲ್ಲೇಖ.

ಅ. ಸಂಸ್ಕೃತ ಹಸ್ತಪ್ರತಿ ಕೃತಿಗಳಲ್ಲಿ ಚಿತ್ರಕಲೆಯ ಉಲ್ಲೇಖ 8

ಸಂಸ್ಕೃತದ ಸಾಹಿತ್ಯದಲ್ಲಿ ಚಿತ್ರಕಲೆಯ ಉಲ್ಲೇಖದ ಹಲವಾರು ಕೃತಿಗಳಿದ್ದು ಕೆಲವನ್ನು ಇಲ್ಲಿ ಹೆಸರಿಸಬಹುದಾಗಿದೆ.

---

೮. ಡಾ. ಎಸ್.ಸಿ.ಪಾಟೀಲ, ಸತ್ಯಾನಂದ ಪಾತ್ರೋಟ ಸಂ: ನಿಜದ ನೆಲೆ, ಪುಟ-೪೭

1. **ಅಷ್ಟಾಧ್ಯಾಯಿ :** ಈ ಕೃತಿಯಲ್ಲಿ ಪಶು, ಪಕ್ಷಿ ಪುಷ್ಪ ವೃಕ್ಷ ನದಿ, ಪರ್ವತ ಮೊದಲಾದವುಗಳ ಸಾಂಕೇತಿಕ ಲಕ್ಷಣಗಳನ್ನು ಚಿತ್ರಿಸುವ ವಿಧಿವಿಧಾನಗಳನ್ನು ಕುರಿತು ಹೇಳಲಾಗಿದೆ.
2. **ನಾಟ್ಯಶಾಸ್ತ್ರ** ಭರತನ ಈ ನಾಟ್ಯ ಶಾಸ್ತ್ರವು ನಾಟ್ಯಶಾಲೆಯಲ್ಲಿ ಚಿತ್ರಿಸುವ ವಿಧಿ ವಿಧಾನಗಳನ್ನು ಹಾಗೂ ಪ್ರಕೃತಿಯ ನೈಸರ್ಗಿಕ ವರ್ಣಗಳು, ಅವುಗಳ ಅನುಕರಣೆ, ವರ್ಣಮಿಶ್ರಣ ಇತ್ಯಾದಿ ಅಂಶಗಳನ್ನು ವಿವರಿಸುತ್ತದೆ.
3. **ಮೇಘದೂತ:** ಕಾಳಿದಾಸನ ಈ ಕಾವ್ಯದಲ್ಲಿ ಚಿತ್ರಕಲೆಯ ಉಲ್ಲೇಖ ವಿಪುಲವಾಗಿದೆ. ಚಿತ್ರಗಳ ಮೂಲಕ ಪ್ರೇಮಿಗಳು ಪ್ರೇಮ ಸಂದೇಶ ಕಳಿಸುವುದು; ವಿಯೋಗ ವ್ಯಥೆಯನ್ನು ಮರೆಯಲೋಸುವ ನಾಯಕ-ನಾಯಿಕರೆಯರು ಪರಸ್ಪರ ಚಿತ್ರಗಳನ್ನು ಬರೆಯುತ್ತಿದ್ದುದು, ದೇವತೆಗಳ ಚಿತ್ರ ಬರೆದು ಪೂಜಿಸುವದು ಮನೆಗಳನ್ನು ಚಿತ್ರಗಳಿಂದ ಅಲಂಕರಿಸುವುದು ಈ ಅಂಶಗಳನ್ನು ಕಾಳಿದಾಸ ತಿಳಿಸುತ್ತಾನೆ.
4. **ರಘುವಂಶ:** ಹಸ್ತಪ್ರತಿಗಳಲ್ಲಿ ಚಿತ್ರ ಬರೆಯುವುದನ್ನು: ಆನೆ, ಸಿಂಹಗಳ, ಸ್ತ್ರೀಯರ ಸುಂದರ ಚಿತ್ರಗಳನ್ನು ಬಣ್ಣದಿಂದ ಅಲಂಕರಿಸಿದುದನ್ನು ಈ ಕೃತಿಯ ಹದಿನಾರನೆಯ ಸರ್ಗ ವಿವರಿಸುತ್ತದೆ.
5. **ಕಾಮಶಾಸ್ತ್ರ:** ವಾತ್ಸ್ಯಾಯನನು ಈ ಗ್ರಂಥದ ಕರ್ತೃ. ಕ್ರಿ.ಶ. 2ನೇಯ ಶತಮಾನದ್ದಿರಬಹುದು ಎಂದು ಭಾವಿಸಲ್ಪಟ್ಟಿದೆ. ಬಾಭ್ರವ್ಯ, ಜಾರಾಯಣ,ಗೋಣಾರ್ದಿಯ ಮೊದಲಾದವರು ಈ ಶಾಸ್ತ್ರದ ಪ್ರಾಚೀನ ಆಚಾರ್ಯರನ್ನು ವಾತ್ಸ್ಯಾಯನನು ಹೇಳಿದ್ದಾನೆ. ಇದಕ್ಕೆ ಸಂಬಂಧ ಪಟ್ಟ ಕೆಲವು ವಿಷಯಗಳು ಕೌಟಿಲ್ಯನ ಅರ್ಥಶಾಸ್ತ್ರದಲ್ಲಿಯೂ ಪತಂಜಲಿಯ, ಮಹಾಭಾಷ್ಯದಲ್ಲಿಯೂ ವಿವೃತವಾಗಿವೆ. ವಾತ್ಸ್ಯಾಯನನ ಹಿಂದಿನವನಾದ ದತ್ತಕನ ಸೂತ್ರಗಳು ನಷ್ಟವಾಗಿವೆ. ಇದರಲ್ಲಿ ಸ್ತ್ರೀ ಮತ್ತು ಪುರಷರ ಚಿತ್ರಗಳ ಆಕೃತಿಗಳು ಹೇಗಿರಬೇಕೆಂಬುದನ್ನು ವಿವರಿಸಲಾಗಿದೆ. ಈ ಕೃತಿ ಚಿತ್ರಕಲೆಯನ್ನು **ಆಲೇಖ್ಯವೆಂದು** ಹೆಸರಿಸಿ, 64 ಕಲೆಗಳ ವಿವರ ನೀಡುತ್ತದೆ. ಪ್ರತಿಯೊಬ್ಬ ವ್ಯಕ್ತಿ ತನ್ನ ವಿಶ್ರಾಂತಿ ಕೋಣೆಯಲ್ಲಿ ಚಿತ್ರಫಲಕ, ಬಣ್ಣ ಮತ್ತು ಕುಂಚದ ಪೆಟ್ಟಿಗೆ ಇಟ್ಟುಕೊಂಡಿರಬೇಕೆಂಬ ವಿಷಯವನ್ನು ಈ ಗ್ರಂಥ ತಿಳಿಸುತ್ತದೆ.
6. **ಬೃಹತ್ಸಂಹಿತೆ :** ಇದು ವರಹ ಮಿಹಿರಾ ಚಾರ್ಯಕೃತ. ಇದು ಜ್ಯೋತಿಷ್ಯ ಗ್ರಂಥವಾದರೂ ಶಿಲ್ಪಾ ಶಾಸ್ತ್ರಕ್ಕೆ ಸಂಬಂಧಪಟ್ಟ ಐದು ಅಧ್ಯಯಗಳಿವೆ. ಈ ಗ್ರಂಥದಲ್ಲಿ ಕಲಾವಿದನ, ಶಿಲ್ಪಿಯ ಯೋಗ್ಯತೆಯ ಬಗೆಗೆ ವಿವರಿಸಲಾಗಿದೆ.ಮೂರ್ತಿಯ ಲಕ್ಷಣ ಹೇಳುವ ಪ್ರತೀಮಾಲಕ್ಷಣವಾದ ಈಲಾಕ್ಷಣಿಕ ಗ್ರಂಥದಲ್ಲಿ ವಿಗ್ರಹ ರಚನಾ ವಿಧಾನದ ವಿವರ ಹೀಗಿದೆ. ಈ ಗ್ರಂಥದ ವೈಶಿಷ್ಟ್ಯ ವೆಂದರೆ ವಜ್ರಲೇಪನದೊಂದಿಗೆ ಪ್ರಾಚೀನಕಲಾವಿದರುಗಳಾದ ಗಾರ್ಗ, ಮನು, ವಶಿಷ್ಟ ಭಾಸ್ಕರ, ವಿಶ್ವಕರ್ಮ,ನಗ್ನ ಜೀತ, ಮಯ ಎಂಬ ಕಲಾಪರಿಣಿತರ ಹೆಸರುಗಳು ಈ ಗ್ರಂಥದಲ್ಲಿ ಇವೆ. ಇದರ 56 ನೆಯ ಅಧ್ಯಾಯದಲ್ಲಿಚಿತ್ರಕಲೆಯ ಪ್ರಸ್ತಾಪವಿದೆ.
7. **ವಿಷ್ಣು ಧರ್ಮೋತ್ತರ ಪುರಾಣ :** ಇದೊಂದು ನಾಲ್ಕನೆಯ ಶತಮಾನದ ಕುರಿತು. ಚಿತ್ರಕಲೆಯ ಕುರಿತು ಈ ಪುರಾಣದಲ್ಲಿ 25 ರಿಂದ 43ನೇ ಅಧ್ಯಾಯದ ವರೆಗೆ ಚಿತ್ರ ಸೂತ್ರಗಳಿವೆ. ಚಿತ್ರಕಲೆಯ ವಿವರವಾದ ಮತ್ತು ಸಮಗ್ರವಾದ ವರ್ಣನೆ ಈ ಅಧ್ಯಾಯಗಳಲ್ಲಿ ಇದೆ. ಈ

ಸೂತ್ರಗಳ ವಜ್ರನೆಂಬ ರಾಜನಿಗೆ ಮಾರ್ಕಂಡೇಯನೆಂಬ ಋಷಿ ವಿವರಿಸಿದಂತೆ ಸಂವಾದದ ರೂಪದಲ್ಲಿ ಇವೆ.

ವಿಷ್ಣು ಧರ್ಮೋತ್ತರ ಪುರಾಣ ಒಂದು ವಿಶ್ವಕೋಶದಂತಹ ರಚನೆ. ಇದು ಪ್ರಶ್ನೋತ್ತರ ರೂಪದಲ್ಲಿದೆ. ಇದರ ಮೂರನೇ ಖಂಡ ಪೂರ್ತಿ ಲಲಿತಕಲೆಗಳಿಗೇ ಮೀಸಲಾಗಿದೆ. ಕಲಿಯುಗದಲ್ಲಿ ದೇವತೆಗಳಲ್ಲಿ ಕಣ್ಣಿಂದ ನೋಡಲು ಸಾಧ್ಯವಿಲ್ಲವಾದ್ದರಿಂದ ವಿಗ್ರಹಗಳನ್ನು ದೇವತಾ ಗೃಹಗಳನ್ನು ಮಾಡಬೇಕೆಂದೂ ಅದರಿಂದ ಧರ್ಮ ಅರ್ಥ ಕಾಮ ಮೋಕ್ಷಗಳನ್ನು ಪಡೆಯಬಹುದೆಂದೂ ವಿವರಿಸಲಾಗಿದೆ.

8. **ಮಾನಸಾರ :** ಇದು ಗುಪ್ತರ ಅವನತಿಯ ಕಾಲವಾದ ಆರು-ಏಳನೆಯ ಶತಮಾನದಲ್ಲಿ ರಚಿತವಾಗಿರಬೇಕೆಂದು ಕೆಲವರು ಅಭಿಪ್ರಾಯಪಡುತ್ತಾರೆ. ಬ್ರಹ್ಮನ ಚತುರ್ಮುಖಗಳಿಂದ ದೇವ ಶಿಲ್ಪಿಗಳಾದ ವಿಶ್ವಕರ್ಮ, ವಾಯ, ತ್ವಷ್ಟ್ರ ಮತ್ತು ಮನು ಉದ್ಭವಿಸಿದರೆಂದೂ ಕ್ರಮವಾಗಿ ಅವರ ಮಕ್ಕಳುಗಳಾದ ಸ್ಥಪತಿ, ಸೂತ್ರಗ್ರಾಹಿ, ವಾರ್ಧಕಿ, ತಕ್ಷಕರು ಜನಿಸಿದರೆಂದೂ ಗ್ರಂಥಾರಂಭದಲ್ಲಿ ಉಕ್ತವಾಗಿದೆ. ಮಾನಸಾರವು ಕಲಾ ಲಕ್ಷಣ, ಶಿಲ್ಪ ಲಕ್ಷಣಗಳ ಶಾಸ್ತ್ರಕ್ಕೆ ಸಂಬಂಧ ಪಟ್ಟ ಸಂಕಲನದ ಗ್ರಂಥ. ವಿಶ್ವಕರ್ಮನೇ ಮೊದಲಾದ ಮೂವತ್ತೆರಡು ಪ್ರಾಚೀನ ಶಿಲ್ಪಜ್ಞರ ಮತ್ತು ಶಿಲ್ಪ ಶಾಸ್ತ್ರಗಳ ಆಧಾರದ ಮೇಲೆ ಈ ಗ್ರಂಥ ರಚಿತವಾಗಿರುವಂತೆ ನಿರ್ದೇಶಿತವಾಗಿದೆ.

9. **ರಾಜ ತರಂಗಿಣಿ :** ಈ ಗ್ರಂಥವೂ ಕೂಡ ಕಲಾಭ್ಯಾಸಿಗಳಿಗೆ ಆಕರ ಗ್ರಂಥವಾಗಿದೆ. ಕಾಶ್ಮೀರದ ಚರಿತ್ರೆಯಾದ ಈ ಗ್ರಂಥದಲ್ಲಿ ಚಿತ್ರ ಶಾಲೆಗಳೂ, ಚೈತ್ಯಗಳೂ, ವಿಹಾರಗಳೂ ಸೂಚಿತವಾಗಿವೆ. ಪ್ರಾಚೀನ ಕಾವ್ಯ, ನಾಟಕಗಳೊಂದಿಗೆ ಚಿತ್ರಕಲೆಗಿರುವ ಸಂಬಂಧ ವಿವರಿಸಲಾಗಿದೆ. ಹರ್ಷನ ಕಾಲದಲ್ಲಿ ಭಾರತಕ್ಕೆ ಬಂದಿದ್ದ ಚೀಣಾದೇಶದ ಬೌದ್ಧ ಯಾತ್ರಿಕನಾದ ಹುಯಾನತ್ಸಾಂಗನು ಆ ಕಾಲದ ಹರ್ಮ್ಯ ಪ್ರಾಸಾದಗಳ ವಿವಿಧ ಭಾಗಗಳನ್ನು ಮುಕ್ತ ಕಂಠದಿಂದ ಹೊಗಳಿದ್ದಾನೆ. ಇವೆಲ್ಲ ಸಂಸ್ಕೃತದ ಹಸ್ತಪ್ರತಿಗಳಾಗಿದ್ದೂ ಈ ಹಸ್ತಪ್ರತಿಗಳಲ್ಲಿ ಚಿತ್ರಕಲೆಯ ಕುರಿತು ಶಿಲ್ಪ ನಿರೂಪಿಸಿರುವಂತೆ ಅಲ್ಲಲ್ಲಿ ರೇಖಾ ಚಿತ್ರಗಳನ್ನು ಬರೆಯಲಾಗಿದೆ.

10. **ಮತ್ಸ್ಯ ಪುರಾಣ :** ಶಿಲ್ಪ ಮತ್ತು ಚಿತ್ರಶಾಲೆಯ ವಿವರಣೆ ಇಲ್ಲಿದೆ.

11. **ಗರುಡ ಪುರಾಣ :** ಈ ಗ್ರಂಥದ 47 ಮತ್ತು 48ನೆಯ ಅಧ್ಯಾಯಗಳಲ್ಲಿ ಭವನ ನಿರ್ಮಾಣಾದಿವಾಸ್ತು ನಿರ್ಮಾಣದಲ್ಲಿ ಬಳಕೆಯಾಗುವ ಕಲೆಯ ಬಗೆಗೆ ವಿವೇಚಿಸಲಾಗಿದೆ.

12. **ಅಗ್ನಿ ಪುರಾಣ :** ಶಿಲ್ಪ ಮತ್ತು ಚಿತ್ರಕಲೆಯ ಪ್ರಸ್ತಾಪವಿದೆ. ಮೂರ್ತಿ ಕಲೆಯಲ್ಲಿಯ ಚಿತ್ರಕಲೆಯ ಬಳಕೆಯನ್ನು ಇಲ್ಲಿ ಗುರುತಿಸಿ ಹೇಳಲಾಗಿದೆ.

13. **ಹರಿವಂಶ ಪುರಾಣ :** ಸ್ತ್ರೀಯರು ಚಿತ್ರ ಬಿಡಿಸುವ, ಚಿತ್ರದ ಮೂಲಕ ಪ್ರಿಯಕರನನ್ನು ಆಯ್ಕೆ ಮಾಡಿಕೊಳ್ಳುವ ವಿಷಯ ಇಲ್ಲದೆ. ಬಾಣಾಸುರನ ಮಗಳಾದ ಉಷೆ ಉದಾಸೀನಗೊಂಡಿದ್ದಳು.

ಕರ್ನಾಟಕದ ಹಸ್ತಪ್ರತಿ ಚಿತ್ರಕಲೆ- ಒಂದು ಅಧ್ಯಯನ

ಕರ್ನಾಟಕದ ವೈಷ್ಣವ ಹಸ್ತ ಪ್ರತಿಗಳಲ್ಲಿ ರೇಖಾ ಚಿತ್ರಗಳು







Courtesy :

Shivapriyananda

Lalita Kala Akademi New Delhi.

ಆಗ ಅವಳ ಸಖಿಯಾದ ಚಿತ್ರಕಲೇಖೆಯು ಪ್ರಪಂಚದಲ್ಲಿ ತತ್ಕಾಲೀನ ಪ್ರಸಿದ್ಧ ವ್ಯಕ್ತಿಗಳ ಚಿತ್ರಗಳನ್ನು ಚಿತ್ರಿಸಿ ತೋರಿಸಿದಳು. ಆಗ ಉಷೆ ತಾನು ಇಚ್ಛಿಸಿದ ಪ್ರಿಯಕರನನ್ನು ಗುರುತಿಸಿದಳೆಂಬ ವಿವರ ಈ ಗ್ರಂಥದಲ್ಲಿದೆ.

14. **ಸ್ಕಂದ ಪುರಾಣ :** ಇಲ್ಲಿ ಶಿಲ್ಪ ಮತ್ತು ಚಿತ್ರಕಲೆಯ ಉಲ್ಲೇಖಗಳಿವೆ. ಈ ಪುರಾಣದ ನಗರವೆಂಬ ಖಂಡದಲ್ಲಿ ರಾಜಕುಮಾರಿ ರತ್ನಾವಲಿಗೆ ಅವಳ ತಂದೆ ಯೋಗ್ಯವರನನ್ನು ಹುಡುಕುವ ಸಲುವಾಗಿ ದೂರ ದೂರದ ದೇಶಗಳಿಗೆ ತನ್ನ ಚಿತ್ರಕಾರರನ್ನು ಕಳಿಸುತ್ತಾನೆ. ಹಾಗೆ ಹೋದ ಚಿತ್ರಕಾರರು ಸುಯೋಗ್ಯ ರಾಜಕುಮಾರನನ್ನು ಹುಡುಕಿ ಅವರ ಚಿತ್ರ ಬರೆದು ತಂದ ಚಿತ್ರಗಳನ್ನು ರಾಜಕುಮಾರಿ ನೋಡಿ ತನ್ನ ವರನನ್ನು ಆಯ್ಕೆ ಮಾಡಿಕೊಂಡ ಪ್ರಸ್ತಾಪವಿದೆ.

15. **ಪದ್ಮ ಪುರಾಣ :** ಈ ಪುರಾಣ ಉತ್ತರಖಂಡದಲ್ಲಿ ಕೇರಳ ರಾಜ್ಯದ ಮಂತ್ರಿಯ ಮಗಳ ಹತ್ತಿರ ಚಿತ್ರದ ಪುಸ್ತಕವಿದ್ದು ಅದನ್ನು ಅವಳು ರಾಜಕುಮಾರಿ ಗೌರಾಂಗಿಗೆ ತೋರಿಸಿದಳೆಂತೆ. ರಾಜಕುಮಾರಿ ಚಿತ್ರದ ಪ್ರಸ್ತಕದಲ್ಲಿದ್ದ ತೀರ್ಥಕ್ಷೇತ್ರಗಳ ಚಿತ್ರಗಳನ್ನು ನೋಡಿ ಅವುಗಳನ್ನು ತಾನು ದರ್ಶಿಸಬೇಕೆಂದು ನಿರ್ದರಿಸುತ್ತಾಳೆ. ಈ ವಿವರದ ಜೊತೆಗೆ ಕ್ರೀಡಾಗೃಹ ಗೋಡೆಯಲ್ಲಿ ನವಿಲುಗಳ ರಾಜಹಂಸಗಳ ಚಿತ್ರಗಳಿದ್ದುದರ ವಿಷಯವಿದೆ.

16. **ಮೇದಿನಿಕೋಶ :** ಇದರಲ್ಲಿ ಚಿತ್ರಕಾರರನ್ನು ವರ್ಣಾತ್ ಎಂದು ಕರೆಯಲಾಗಿದೆ. ವರ್ಣಾತ್ ಅಂದರೆ ಅನೇಕ ಬಣ್ಣಗಳ ವಿಶ್ಲೇಷಣೆಯ ನಿಪುಣ ಎಂದರ್ಥ.

17. **ಬಾಣ ಕಾದಂಬರಿ :** ಈ ಕೃತಿಯಲ್ಲಿ ವೈಶಂಪಾಯನ ಎಂಬ ಗಿಳಿಯು ಅನೇಕ ಕಲೆಗಳೊಂದಿಗೆ ಚಿತ್ರಕಲೆಯಲ್ಲೂ ಪ್ರಾವಿಣ್ಯತೆ ಪಡೆದ ವಿಷಯವಿದೆ. ಇಲ್ಲಿ ನೀಲಿ, ಹಳದಿ, ಕೆಂಪು, ಬಿಳಿ ಕಪ್ಪು ಈ ಐದು ವರ್ಣಗಳ ಉಲ್ಲೇಖವಿದೆ. ಅಲ್ಲದೆ ವರ್ಣ ಚಿತ್ರ, ಭಾವಚಿತ್ರ, ರೇಖಾಚಿತ್ರಗಳ ಪ್ರಶಂಸೆ ಇದೆ. ರಾಜಭವನದಲ್ಲಿ ಸಂರಕ್ಷಿಸಿದ ಚಿತ್ರಕೃತಿ ಹಾಗೂ ಚಿತ್ರಶಾಲೆಯ ಕುರಿತಾದ ವಿಪುಲ ವಿವರಗಳೂ ಇಲ್ಲೇಖಗೊಂಡಿವೆ.

18. **ಹರ್ಷಚರಿತ :** ಚಿತ್ರಣಕ್ಕೆ ಬೇಕಾಗುವ ಸಾಮಗ್ರಿಗಳನ್ನಾಗಲಿ, ಚಿತ್ರವನ್ನಾಗಲಿ ರಾಜರಿಗೆ ಕಾಣಿಕೆಯಗಿ ಕೊಡುತ್ತಿದ್ದುದು ಈ ಕೃತಿಯಿಂದ ತಿಳಿದುಬರುತ್ತದೆ. ಇನ್ನೊಂದು ಕಡೆಗೆ ಪಟ ಚಿತ್ರದ ಮೂಲಕ ಪರಲೋಕದ ಕಾಲ್ಪನಿಕ ಚಿತ್ರ ಪ್ರದರ್ಶಿಸಿ ಹಣ ಸಂಪಾದಿಸುವ ವಿಷಯವೂ ಉಲ್ಲೇಖಗೊಂಡಿದೆ.

19. **ದಶಕುಮಾರ ಚರಿತೆ:** ರಾಜಕುಮಾರರು ಬೇರೆ ವಿದ್ಯೆಗಳೊಂದಿಗೆ ಚಿತ್ರಕಲೆಯನ್ನೂ ಕಲಿಯಬೇಕಾಗುತ್ತಿತ್ತು. ರಾಜಕುಮಾರ ಉಪಹಾರ ವರ್ಮನು ತನ್ನ ಚಿತ್ರಗಳನ್ನು ತಾನೇ ಬರೆದಿದ್ದನೆಂಬ ಉಲ್ಲೇಖ ಇಲ್ಲಿದೆ.

20. **ಕುಟ್ಟಿನಿಮೀತ :** ವಿದುಷಿ ಯೆಂದು ಕರೆಯಿಸಿಕೊಳ್ಳುವ ಅಭಿಲಾಷೆಯಿಂದ ವನಿತೆಯರು ಚಿತ್ರ ಕಲೆಯಲ್ಲಿ ನಿರತರಾಗಿರುತ್ತಿದ್ದ ವಿಷಯ ಇಲ್ಲಿದೆ. ಈ ಕೃತಿಯನ್ನು ರಚಿಸಿದವ ದಾಮೋದರ ಗುಪ್ತ.

21. **ತಿಲಕಮಂಜರಿ:** ಧನಪಾಲನ ಈ ಕೃತಿಯಲ್ಲಿ ನಿಪುಣ ಚಿತ್ರಕಾರ, ಚಿತ್ರಪಟ, ಪ್ರತಿಬಿಂಬ ಅಥವಾ ವಿದ್ವಚ್ಛಿತ್ರವೆಂಬ ಹೆಸರುಗಳಿವೆ. ಮಾಲವಿಕಾಗ್ನಿ ಮಿತ್ರದಲ್ಲಿ ಹೇಳಿದ ಚಿತ್ರಾಚಾರ್ಯ ಇಲ್ಲಿನ ನಿಪುಣ ಚಿತ್ರಕಾರ ಪದಕ್ಕೆ ಸಮಾನವಾಗಿದೆ. ಕಥೆಯನ್ನು ಚಿತ್ರಪಟಗಳ ಮೂಲಕ ಚಿತ್ರಿಸುವದು ಪ್ರಕೃತಿ ಚಿತ್ರ, ಸಾದೃಶಚಿತ್ರ, ಮತ್ತು ಪ್ರತಿಬಂಧಕ ವಿಚಿತ್ರವೆಂದೂ ಕರೆಯಲಾಗಿದೆ. ಇಲ್ಲಿ ಚಿತ್ರಕಾರ ಹಾಗೂ ಚಿತ್ರವಿದ್ಯೋಪಾಧ್ಯಾಯವೆಂಬ ಪದಗಳು ಪ್ರಯೋಗವಾಗಿವೆ. ಹಾಗೆಯೇ ರಸಚಿತ್ರ ಅಂದರೆ ಬಣ್ಣದ ನೀರಿನಿಂದ ಮಾಡುವುದು: ಧೂಳಿಚಿತ್ರ ಅಂದರೆ ಹುಡಿ ಬಣ್ಣಗಳ ಚಿತ್ರ; ಭಾವಚಿತ್ರ ಅಂದರೆ ರಸ ವ್ಯಕ್ತಿ ಪಡಿಸುವಂಥದ್ದು ಹೀಗೆ ಚಿತ್ರಪ್ರಕಾರಗಳ ವಿಷಯ ಈ ಗ್ರಂಥದಲ್ಲಿದೆ.

22. **ಕಥಾಸರಿತ್ಸಾಗರ:** ಸೋಮದೇವನ ಕಥಾಸರಿತ್ಸಾಗರದ ಹಲವಾರು ಕತೆಗಳಲ್ಲಿ ಚಿತ್ರಕಲೆಯ ಉಲ್ಲೇಖವಿದೆ. ರಾಜಕುಮಾರ - ರಾಜಕುಮಾರಿಯರು ಚಿತ್ರಕಲೆಯನ್ನು ಕಲಿಯುತ್ತಿದ್ದುದು; ಪರಸಪರ ಚಿತ್ರಗಳನ್ನು ಕಾಣಿಕೆ ಕೊಡುತ್ತಿದ್ದುದು ತಿಳಿದುಬರುವುದಲ್ಲದೆ ರಾಜನ ಆಸ್ಥಾನದಲ್ಲಿ ಸಾಮಂತರಿಗೆ ಸಮಾನವಾದ ಸ್ಥಾನ ಚಿತ್ರಕಾರರಿಗಿದ್ದಿತು. ಜೀವನ ನಿರ್ವಹಣೆಗೆ ಚಿತ್ರಕಾರನಿಗೆ ನೂರು ಹಳ್ಳಿಗಳನ್ನು ಜಹಗೀರಾಗಿ ಕೊಡುತ್ತಿದ್ದರು. ರಾಜಾ ನರವಾಹನ ದತ್ತನು ಹಿರಿಯ ಚಿತ್ರಕಾರರನ್ನು ಚಿತ್ರಕಲೆಯ ಸ್ಪರ್ಧೆಯಲ್ಲಿ ಸೋಲಿಸಿದ್ದನೆಂಬ ವಿಷಯ ಗೊತ್ತಾಗುತ್ತದೆ.

22. **ಕಾವ್ಯಪ್ರಕಾಶ :** ಮಮ್ಮಟನ ಈ ಕೃತಿಯಲ್ಲಿ ಶಬ್ದ ಚಿತ್ರ ಮತ್ತು ಕಾವ್ಯಚಿತ್ರದ ಪ್ರಸ್ತಾಪವಿದೆ. ಇಲ್ಲಿ ಚಿತ್ರದ ಉಲ್ಲೇಖ ಸ್ಪಷ್ಟವಾದ ರೀತಿಯಲ್ಲಿ ಬರುತ್ತದೆ.

23. **ನೈಷಧ ಚರಿತ :** ಶ್ರೀಹರ್ಷನನ ಈಕೃತಿಯಲ್ಲಿ ಗೋಡೆಗಳ ಮೇಲೆ ಮತ್ತು ಭಾವಣಿಯ ಒಳಭಾಗದಲ್ಲಿ ಆಭರಣ, ವಸ್ತು ಪುಷ್ಪ ಫಲ, ರತ್ನ ಮುಂತಾದವುಗಳನ್ನು ಚಿತ್ರಿಸುತ್ತಿದ್ದ ವಿಷಯವಿದೆ. ಇವು ಸಜೀವವಾಗಿ ಕಾಣಿಸುವ ರೀತಿಯಲ್ಲಿರುತ್ತಿದ್ದವು. ಇಂತಹ ಚಿತ್ರಗಳಿಗೆ ಕಲ್ಪವಲ್ಲಿಗಳೆಂದು ಕರೆಯುತ್ತಿದ್ದರು. ಮಧ್ಯಕಾಲೀನ ರಾಜರ ದರ್ಬಾರಗಳಲ್ಲಿಯೂ ಕಲ್ಪವಲ್ಲಿಗಳನ್ನು ಚಿತ್ರಿಸುವ ಪದ್ಧತಿಯಿದ್ದಿತು. ಮನೆಯಲ್ಲಿ ಕಲ್ಪವಲ್ಲಿಯ ಚಿತ್ರಗಳಿದ್ದರೆ ಮನೆಗೆ ಮಂಗಳಕರವೆಂಬ ನಂಬಿಕೆಯಿದ್ದಿತು.

24. **ತ್ರಿಷಷ್ಟಿ ಶಲಾಕಾಪುರುಷ ಚರಿತ :** ಜೈನಾಚಾರ್ಯ ಹೇಮಚಂದ್ರ ಈ ಕಾವ್ಯದಲ್ಲಿ ರಾಜರ ಆಸ್ಥಾನಗಳಲ್ಲಿ ನಡೆಯುತ್ತಿದ್ದ ಚಿತ್ರಕಾರರ ಸಭೆ ಹಾಗೂ ಭಿತ್ತಿಚಿತ್ರಗಳಿಂದ ಅಲಂಕೃತಗೊಂಡ ರಾಜರ ಅಸ್ಥಾನಗಳ ಉಲ್ಲೇಖಗಳಿವೆ.

25. **ನಾನಾರ್ಥ ವರ್ಣಸಂಕ್ಷೇಪ :** ಚಿತ್ರಕಾರನ ಕುಂಚವನ್ನು ಇಲ್ಲಿ ವರ್ತಿಕಾ ಎಂದು ಕರೆಯಲಾಗಿದೆ ಚಿತ್ರಕಾರರ ಚಿತ್ರಕೃತಿಯನ್ನು ಕುರಿತು ಅನೇಕ ವಿಷಯಗಳು ಇಲ್ಲಿವೆ.[೯]

ಬ. ಕನ್ನಡ ಹಸ್ತಪ್ರತಿಯ ಕೃತಿಗಳಲ್ಲಿ ಚಿತ್ರಕಲೆಯ ಉಲ್ಲೇಖ

ಕವಿರಾಜಮಾರ್ಗ, ವಡ್ಡಾರಾಧನೆ, ವಿಕ್ರಮಾರ್ಜುನವಿಜಯ, ಕರ್ನಾಟಕ

---

೯. ಡಾ. ಎಸ್.ಸಿ.ಪಾಟೀಲ: ಕರ್ನಾಟಕದ ಜನಪದ ಚಿತ್ರಕಲೆ, ಪುಟ-೫೨

ಕಾದಂಬರಿ, ಮಲ್ಲಿನಾಥ ಪುರಾಣ, ಧರ್ಮಾಮೃತ, ಸಿದ್ಧರಾಮಚಾರಿತ್ರ, ಸೊಬಗಿನ ಸೋನೆ, ಮೋಹನ ತರಂಗಿಣಿ, ಚನ್ನಬಸವ ಪುರಾಣ, ನೇಮಿನಾಥ ಪುರಾಣ, ಯಶೋಧರ ಚರಿತ್ರೆ ಅನಂತನಾಥ ಪುರಾಣ, ಕಬ್ಬಿಗರ ಕಾವ್ಯ, ಅಭಿನವ ದಶಕುಮಾರ ಚರಿತೆ, ರಾಜಶೇಖರವಿಳಾಸ ಮತ್ತು ವಚನ ಸಾಹಿತ್ಯದಲ್ಲಿ ಬಸವಣ್ಣ, ಮಧುವಯ್ಯ, ಬಂಡಾರಿ ಶಾಂತರಸ, ಅಂಬಿಗರ ಚೌಡಯ್ಯ, ಮೊಳಿಗೆಯ ಮಾರಯ್ಯನವರ ವಚನಗಳಲ್ಲಿ ಇನ್ನೂ ಅನೇಕ ಕೃಗಳಲಿ ಚಿತ್ರಕಲೆಯ ಉಲ್ಲೇಖಗಳು ಸಿಗುತ್ತವೆ. [೧೦]

ಕ. ಪರ್ಷಿಯನ್ ಹಸ್ತಪ್ರತಿಯಲ್ಲಿ ಚಿತ್ರಕಲೆಯ ಉಲ್ಲೇಖ

ವಿಜಾಪೂರದ ಅರಸರಲ್ಲಿ ಮೊಘಲ್ ದೊರೆಗಳ ಕಾಲದಿಂದ ಪರ್ಷಿಯನ್ ಹಸ್ತಪ್ರತಿಗಳಲ್ಲಿ ಚಿತ್ರಕಲಾವಿದರ ಅನೇಕ ವಿವರಗಳು ಸಿಗುತ್ತವೆ. ವಿಜಾಪೂರದ ಅರಸ ಇಬ್ರಾಹಿಂ ಆದಿಲ್‌ಶಾ (ಇಮ್ಮಡಿ ಕ್ರಿ.ಶ. 1580-1627) ದಖಣಿ ಕಲಾ ಶೈಲಿಗೆ ಮುಖ್ಯವಾದ ವ್ಯಕ್ತಿ ಮತ್ತು ಸ್ವತ ಚಿತ್ರಕಾರನಾಗಿದ್ದ. ಕಿತಾಬ-ಇ-ನವರಸ ಇವನ ಕಾವ್ಯಕ್ಕೆ ಅನುಗುಣವಾಗಿ ರಾಗಮಾಲಾ ಚಿತ್ರಗಳು ಅಲ್ಲಿ ರಚನೆಯಾಗಿವೆ. ಇವನಿಗಿಂತ ಮೊದಲು ಅಲಿ ಆದಿಲ್ ಶಾ (ಮೊದಲನೆಯ ಕ್ರಿ.ಶ. 1558-1580) ಕೂಡ ನಜಂ-ಉಲ್-ಉಲ್ಮ್ ಎಂಬ ಸಚಿತ್ರ ಗ್ರಂಥವನ್ನು ಸಿದ್ಧಪಡಿಸಿದನೆಂದು ತಿಳಿಯುತ್ತದೆ. ಇಲ್ಲೆಲ್ಲ ಅನೇಕ ಚಿತ್ರಕಾರರ ಹೆಸರುಗಳು ಸಿಗುತ್ತವೆ. ಅಕ್ಬರ್ (ಕ್ರಿ.ಶ. 1556-1605) ಇವನ ಕಾಲದಲ್ಲಿ ತರ್ಖಿ-ಇ-ಅಲ್‌ಪಿ (ಜಗತ್ತಿನ ಇತಿಹಾಸ) ಜಮಿ-ಅಲ್-ತಪರಿಖ್ (ಮೊಗಲರ ಚರಿತ್ರೆ) ದರಬ್ ನಾಮ್, ಶಾ ನಾಮಾ (ದೊರೆಗಳ ವಂಶಾವಳಿ) ತೈಮೂರ-ನಾಮಾ (ತೈಮೂರಲಂಗನ ಚೆ್ರ) ಬಾಬರ್ ನಾಮಾ ಮುಂತಾದ ಗ್ರಂಥಗಳಲ್ಲಿ ಚಿತ್ರಕಾರರ ಹೆಸರುಗಳು ಮತ್ತು ಅನೇಕ ವರ್ಣ ಚಿತ್ರಗಳು ಹಸ್ತಪ್ರತಿಯೊಂದಿಗೆ ಇರುವುದನ್ನು ಕಾಣಬಹುದಾಗಿದೆ. [೧೧]

2. ಚಿತ್ರಕಲಾವಿನ್ಯಾಸವನ್ನು ಹೊಂದಿದ ಹಸ್ತಪ್ರತಿಗಳು

ಕರ್ನಾಟಕದಲ್ಲಿ ಶಿಷ್ಟಪದ ಮೂಲದ ಹಸ್ತಪ್ರತಿಗಳು ಸಂಖ್ಯೆ ಅಪಾರವಾದದ್ದು ಈಗ ಸಿಕ್ಕಿರುವುದಕ್ಕಿಂತ ಹೆಚ್ಚು ಇನ್ನೂ ಸಿಗಬೇಕಾಗಿರುವ ಹಸ್ತಪ್ರತಿಗಳೇ ಹೆಚ್ಚು. ಇವುಗಳ ಸಂಗ್ರಹ ಕಾರ್ಯ ಇನ್ನೂ ನಡೆಯಬೇಕಾಗಿದೆ. ಚಿತ್ರಕಲಾವಿನ್ಯಾಸವನ್ನು ಅಂದರೆ ರೇಖಾಚಿತ್ರ ಮತ್ತು ವರ್ಣಚಿತ್ರವನ್ನು ಹೊಂದಿದ ಹಸಪ್ರತಿಗಳು ಬಹುಸಂಖ್ಯೆಯಲ್ಲಿದ್ದು (ಅ) ಧಾಮಿಕ ಮತ್ತು (ಆ)ಧಾರ್ಮಿಕೇತರ ಹಸ್ತಪ್ರತಿಗಳೆಂದು ವಿಂಗಡಿಸಿಕೊಂಡು ಅಧ್ಯಯನ ಮಾಡಬಹುದು. ಧಾರ್ಮಿಕ **ಹಸ್ತಪ್ರತಿಗಳು** : ಇದರಲ್ಲಿ ಅ) ಜೈನ, ಆ. ವೀರಶೈವ ಇ. ವೈಷ್ಣವ ಈ. ಪಾರ್ಷಿಯನ್ ಎಂದು ಗುರುತಿಸಿಕೊಳ್ಳಬಹುದು.

ಜೈನಧರ್ಮದ ಹಸಪ್ರತಿಗಳಲ್ಲಿ ತೀರ್ಥಂಕರ, ಜೈನ ಮುನಿ, ಯಕ್ಷ - ಯಕ್ಷಿ ಹೂಬಳ್ಳಿ ಪ್ರಾಣಿಗಳ ಚಿತ್ರಗಳು ಸಾಮಾನ್ಯವಾಗಿ ಕಮಡುಬಂದರೆ, ವೀರಶೈವ ಹಸ್ತಪ್ರತಿಗಳಲ್ಲಿ ಶಿವನನನ್ನು ಕುರಿತ ಚಿತ್ರಗಳ ಓಲಗ, ನಂದಿ, ಶಿವಲಿಂಗ, ಗಣೇಶ, ಷಣ್ಮುಖ, ವೀರಭದ್ರ, ಶಿವಪಾರ್ವತಿಯರ

೧೦. ಡಾ. ಎಸ್.ಸಿ.ಪಾಟೀಲ: ಕರ್ನಾಟಕದ ಜನಪದ ಚಿತ್ರಕಲೆ, ಪುಟ-೫೪


೧೧. ಡಾ. ಎಸ್.ಸಿ.ಪಾಟೀಲ, ಸತ್ಯಾನಂದ ಪಾತ್ರೋಟ ಸಂ: ನಿಜದ ನೆಲೆ, ಪುಟ-೪೬

ಮದುವೆ ಮುಂತಾದ ಚಿತ್ರಗಳಲ್ಲದೆ ಮಠ ಮಂದಿರಗಳ ಉತ್ಸವ ಮೂರ್ತಿ ಗುರುಗಳ ಆಯಾಗ್ರಂಥಗಳ ಕಾವ್ಯನಾಯಕರು, ಶಿವಶರಣರು ಮತ್ತು ಶರಣರ ಜೀವನದ ಮಹತ್ವದ ಘಟನೆ-ಸನ್ನಿವೇಶಗಳ ಚಿತ್ರಗಳೂ ಪ್ರಾಣಿ ಪಕ್ಷಿಗಳಾದಿಯಾಗಿ ಸುಳುವುಗಳೂ ಎಲೆ ಬಳ್ಳಿಯ ವಿನ್ಯಾಸಗಳು ಕಂಡುಬರುತ್ತವೆ. ವೈಷ್ಣವ ಹಸ್ತಪ್ರತಿಗಳಲ್ಲಿ ಸಾಮಾನ್ಯವಾಗಿ ಕೃಷ್ಣನ ಬಾಲ್ಯಲೀಲೆ, ದಶಾವತಾರದ ಚಿತ್ರ. ರಾಮ ಲಕ್ಷ್ಮಣ-ಸೀತೆಯ ಪರಿವಾರ, ಲಕ್ಷ್ಮೀ ಸಮೇತ ಶ್ರೀನಿವಾಸ ಗಣಪತಿ, ಸರಸ್ವತಿ ಹೀಗೆ ಹಲವಾರು ಚಿತ್ರಗಳು ಕಂಡುಬರುತ್ತವೆ.

ಪರ್ಷಿಯನ್ ಹಸ್ತಪ್ರತಿಗಳಲ್ಲಿ ವ್ಯಕ್ತಿ ಚಿತ್ರಗಳು. ಸಂಗೀತಗಾರರು ರಾಗರಾಗಿಣಿಯರು, ಅಲಂಕಾರಿಕ ಚಿತ್ರವಿನ್ಯಾಸಗಳು ಮತ್ತು ಇಲ್ಲಿ ಗೆರೆಗಳಿಂದ ಆವರಣವನ್ನು ನಿರ್ದೇಶನಮಾಡುವುದು ಇನ್ನೊಂದು ಅಂಶವಾಗಿದೆ. ಉದ್ಯಾನವನ, ಮರಗಿಡಗಳ ಸಾಲು, ಹಾರುವ ಹಕ್ಕಿಗಳು, ಅಂತಃ ಪುರದ ವಿನ್ಯಾಸದ ಚಿತ್ರಗಳು ಹೆಚ್ಚಾಗಿ ಕಂಡುಬರುತ್ತವೆ.

ರಕ್ಷಾ ಫಲಕಗಳಲ್ಲಿ ಆಯಾ ಮತಗಳು ಮನ್ನಿಸಿದ ದೇವಾನುದೇವತೆಗಳ, ಅವರ ಪರಿವಾರಗಳ, ಸಿದ್ಧರ, ಪ್ರಸಿದ್ಧರ, ಮುನಿಗಳ, ಕಾವ್ಯ ನಾಯಕರುಗಳ, ಶರಣರ, ಭಕ್ತರ ಚಿತ್ರರಚನೆಗಳನ್ನು ಬಿಡಿಸಿರುವುದುಂಟು. ಇನ್ನೂ ಪತ್ರ ಪುಷ್ಪವಲ್ಲಿಗಳ ನೈಸರ್ಗಿಕ,ಅಲಂಕಾರಿಕ ಮತ್ತು ಸಾಂಪ್ರದಾಯಿಕ, ನಕ್ಷಾರಚನೆಗಳು ವೈವಿಧ್ಯ ಪೂರ್ಣವಾದವುಗಳು. ಅದರಂತೆ ಗಣಪತಿ, ಸರಸ್ವತಿ ಚಿತ್ರಗಳು ಮತ ಸಂಬಂಧಿ ಹಸ್ತಪ್ರತಿ ಹಾಗೂ ಫಲಕಗಳಲ್ಲಿಯೂ ಕಾಣಬರುವಂತಹುಗಳಾಗಿವೆ. ಎಂಬ ಡಾ. ಬಿ.ಕೆ.ಹಿರೇಮಠ ಅವರ ವಿಚಾರಗಳು ಅತ್ಯಂತ ಸೂಕ್ತವಾದವುಗಳಾಗಿವೆ.

ಧಾರ್ಮಿಕೇತರ ಹಸ್ತಪ್ರತಿಗಳು ಇವು ಸಾಕಷ್ಟು ಸಂಖ್ಯೆಯಲ್ಲಿದ್ದು ಶಿಲ್ಪ ಶಾಸ್ತ್ರ ಸಂಗೀತ ಹಸ್ತ ಸಾಮುದ್ರಿಕ, ಜೋತಿಷ್ಯ ಶಾಸ್ತ್ರಕ್ಕೆ ಸಂಬಂಧಿಸಿದ ಹಸ್ತಪ್ರತಿಗಳಲ್ಲಿ ಆಯಾ ವಿಷಯಕ್ಕೆ ಸಂಬಂಧಿಸಿದ ರೇಖಾ ವರ್ಣಚಿತ್ರಗಳು, ಕಲಾವಿನ್ಯಾಸಗಳು ರಕ್ಷಾ ಫಲಕದಲ್ಲಿ ಕಂಡು ಬರುತ್ತವೆ. ಇವುಗಳ ಕುರಿತು ವ್ಯಾಪಕವಾದ ಅಧ್ಯಯನವಾಗಬೇಕಾಗಿವೆ.



ಕರ್ನಾಟಕದ ಪ್ರಾಕೃತ ಹಸ್ತಪ್ರತಿ ವರ್ಣಚಿತ್ರಗಳು

ಕೃತಿ : ಧವಳ ಗ್ರಂಥ



Courtesy :

C.Shivaram Murthy
South Indian Paintings
Publication Divsion Minstry of Information
& Broadcasting Govt of India, New Delhi

ಇವುಗಳನ್ನು ಈ ಕೆಳಗಿನ ರೀತಿಯಲ್ಲಿ ವಿವರಿಸಬಹುದಾಗಿದೆ.

1. ಚಿತ್ರಕಲೆಯ ಉಲ್ಲೇಖ ಹೊಂದಿದ ಪಾಕೃತ ಭಾಷೆಯ ಹಸ್ತಪ್ರತಿಗಳು.
2. ಚಿತ್ರಕಲೆಯ ಉಲ್ಲೇಖ ಹೊಂದಿದ ಸಂಸ್ಕೃತ ಭಾಷೆಯ ಹಸ್ತಪ್ರತಿಗಳು.
3. ಚಿತ್ರಕಲೆಯ ಉಲ್ಲೇಖ ಹೊಂದಿದ ಕನ್ನಡ ಭಾಷೆಯ ಹಸ್ತಪ್ರತಿಗಳು.
4. ಚಿತ್ರಕಲೆಯ ಉಲ್ಲೇಖ ಹೊಂದಿದ ಅನ್ಯದೇಶಿಯ ಹಸ್ತಪ್ರತಿಗಳು

1. ಚಿತ್ರಕಲೆಯ ಉಲ್ಲೇಖ ಹೊಂದಿದ ಪಾಕೃತ ಭಾಷೆಯ ಹಸ್ತಪ್ರತಿಗಳು.

ಹೆಸರೇ ಸೂಚಿಸುವಂತೆ ಶಿಷ್ಟಮೂಲದ ಹಸ್ತಪ್ರತಿಗಳು ಸಂಪ್ರದಾಯಕ, ರೂಢಿಬದ್ಧವಾದ ನಿಯಮಗಳಂತೆಯೇ ರಚಿಸಲಾಗಿರುತ್ತದೆ. ಸಾಹಿತ್ಯದಲ್ಲಿಯ ವ್ಯಾಕರಣದ ಲಕ್ಷಣ ಶಾಸ್ತ್ರದಂತೆ. ಇಲ್ಲಿ ಚಿತ್ರಕಲೆಯೂ ಶಾಸ್ತ್ರ ಮತ್ತು ಸಂಪ್ರದಾಯ ಬದ್ದವಾಗಿರುತ್ತದೆ. ವರ್ಣ, ರೇಖೆ, ಸಂಯೋಜನೆಗಳು ಕೂಡಾ ಇಲ್ಲಿ ಕ್ರಮ ಬದ್ಧವಾಗಿರುತ್ತವೆ. ಹಸ್ತಪ್ರತಿ ಮತ್ತು ಸಚಿತ್ರ ಹಸ್ತಪ್ರತಿಗಳ ರಚನೆಯಲ್ಲಿ ಮೊದಲಿಗರಾಗಿರುವ ಜೈನರ ಹಸ್ತಪ್ರತಿಗಳಿಂದ ನಾವು ಒಂದೊಂದಾಗಿ ಶಿಷ್ಟ ಹಸ್ತಪ್ರತಿಗಳ ಅಧ್ಯಯನವನ್ನು ಮಾಡಬಹುದು.

ಭಾರತದ ಪ್ರಾಚೀನ ಭಾಷೆಗಳಲ್ಲಿ ಪ್ರಾಕೃತ ಭಾಷೆಯ ಒಂದು. ಭಾರತೀಯ ಭಾಷೆಗಳ ವಿಕಾಸಕ್ರಮದಲ್ಲಿ ಬಹುಶಃ ಭಾರತದ ಎಲ್ಲ ಭಾಷೆಗಳೊಂದಿಗೆ ಒಂದಲ್ಲ ಮತ್ತೊಂದು ರೂಪದಲ್ಲಿ ಪ್ರಾಕೃತ ಭಾಷೆಯ ಸಂಬಂಧ ಬೆಳೆದು ಬಂದಿದೆ. ಭಾರತೀಯ ಇತಿಹಾಸ, ಸಾಹಿತ್ಯ ಮತ್ತು ಸಂಸ್ಕೃತಿಯ ವಿಕಾಸದಲ್ಲಿ ಪ್ರಾಕೃತದ ಪಾತ್ರ ಮಹತ್ವ ಪೂರ್ಣವಾಗಿದೆ. ಸಂಸ್ಕೃತದಷ್ಟೆ ಪ್ರಾಚೀನವೂ, ಸಂಪನ್ನವೂ ಆದ ಭಾಷೆ ಪ್ರಾಕೃತ, ಹಿಂದಿ, ಮರಾಠಿ, ಗುಜರಾತಿ, ರಾಜಸ್ತಾನಿ ಮುಂತಾದ ಉತ್ತರಭಾರತದ ಭಾಷೆಗಳೆಲ್ಲ ಪ್ರಾಕೃತದ ಕೂಸುಗಳು. ಕನ್ನಡ ತೆಲಗು ತಮಿಳು ಮೊದಲಾದ ದಕ್ಷಿಣಭಾರತದ ಭಾಷೆಗಳ ಬೆಳವಣಿಗೆಯಲ್ಲಿ ಪ್ರಾಕೃತದ ಗಾಢವಾದ ಪ್ರಭಾವ ಕಂಡು ಬರುತ್ತದೆ. ಕನ್ನಡ ಸಾಹಿತ್ಯದ ಪುಷ್ಠಿಗೆ ಸಂಸ್ಕೃತ ಮತ್ತು ಪ್ರಾಕೃತಮೊಲೆಯುಣಿಸಿದೆ. ಪ್ರಾಕೃತದ ಹಾಲುಂಡು ಕನ್ನಡ ಭಾಷೆ-ಸಾಹಿತ್ಯ ಬೆಳೆದು ಬಂದಿರುವ ಹೆಜ್ಜೆ ಗುರುತುಗಳನ್ನು ಡಾ|| ಆ. ನೆ. ಉಪಾಧ್ಯೆ ಮುಂತಾದ ವಿದ್ವಾಂಸರು ವಿವರಿಸಿದ್ದಾರೆ.[೧೨]

ಪ್ರಾಕೃತದ ಮೂಲ ಮತ್ತು ಭಾಷಾ ಸ್ವರೂಪ : 'ಪ್ರಾಕೃತ 'ಎಂಬ ಶಬ್ದಕ್ಕೆ ಮೂಲ, ಸಹಜ, ಅಕೃತ್ರಿಮ, ಸಾಮಾನ್ಯ, ಅಸಂಸ್ಕರಿತ, ಪ್ರಾದೇಶಿಕ,ದೇಶಿಯ ಮೊದಲಾದ ಅರ್ಥಗಳು ನಿಘಂಟುಗಳಲ್ಲಿ ದೊರೆಯುತ್ತವೆ. ಸಾಮಾನ್ಯ ಜನರು ಸಹಜವಾಗಿ ಆಡುತ್ತಿದ್ದ ಭಾಷೆಯನ್ನು ಪ್ರಾಕೃತ. ಬೇರೆ ಬೇರೆ

೧೨. ಡಾ. ಎಸ್.ಸಿ.ಪಾಟೀಲ, ಸತ್ಯಾನಂದ ಪಾತ್ರೋಟ ಸಂ: ನಿಜದ ನೆಲೆ, ಪುಟ-೪೯

ಪ್ರದೇಶಗಳ ಜನರು ಆಡುತ್ತಿದ್ದ ಭಾಷೆಯನ್ನು ಆಯಾಯಾ ಪ್ರಾದೇಶಿಕ ಭಿನ್ನತೆಯನ್ನುನುಸರಿಸಿ ವಿವಿಧ ಪ್ರಾಕೃತಗಳನ್ನು ಗುರುತಿಸಲಾಗಿದೆ. ಭಾರತದ ಭಾಷೆಗಳನ್ನು ವಿವಿಧ ಭಾಷಾ ಕುಟುಂಬಗಳಲ್ಲಿ ವರ್ಗೀಕರಿಸಿರುವ ಭಾಷಾ ವಿಜ್ಞಾನಿಗಳು ಪ್ರಾಕೃತವನ್ನು ಭಾರತೀಯ-ಆರ್ಯಭಾಷಾ ಕುಟುಂಬದೊಳಗೆ ಸೇರುವ ಬಾಷೆಯೆಂದು ಪರಿಗಣಿಸಿದ್ದಾರೆ. ಭಾರತದ ಎಲ್ಲ ಭಾಷೆಗಳ ವಿಕಾಸದಲ್ಲಿಯೂ ಪ್ರಾಕೃತವು ಒಂದಲ್ಲ ಒಂದು ರೀತಿಯಲ್ಲಿ ಪ್ರಭಾವವನ್ನು ಬೀರಿದೆ.

ಶ್ರೀ ಶುಭಚಂದ್ರರು ಪ್ರಾಕೃತಭಾಷಾ ಶಾಸ್ತ್ರದ ಬಗೆಗೆ ಈ ರೀತಿ ವಿವರಿಸುತ್ತಾರೆ. ''ಪ್ರಾಕೃತಭಾಷೆಯ ಮೂಲದ ಬಗೆಗೆ ಸಾಕಷ್ಟು ಚರ್ಚೆಗಳು ನಡೆದಿವೆ. ನಡೆಯುತ್ತಲಿವೆ ಆದರೆ ಆ ಕುರಿತ ಕೊನೆಯ ತೀರ್ಮಾನ ಇನ್ನೂ ಹೊರಬಂದಿಲ್ಲ ಪ್ರಾಕೃತಶಬ್ದವನ್ನು ಅರ್ಥೈಸುವುದರಲ್ಲಿಯೇ ವಿದ್ವಾಂಸರಲ್ಲಿ ಮುಖ್ಯವಾದ ಭಿನ್ನಾಭಿಪ್ರಾಯಗಳಿವೆ. ಪ್ರಾಕೃತವು ಸಂಸ್ಕೃತ ಜನ್ಯವೆಂಬುದು ಕೆಲವರ ಅಭಿಪ್ರಾಯವಾದರೆ ಪ್ರಾಕೃತದಿಂದಲೇ ಸಾದರಣೆಗೊಂಡ ಸುಸಂಸ್ಕಾರಗೊಂಡ ಭಾಷೆ ಸಂಸ್ಕೃತ ಎಂಬುದು ಇನ್ನು ಕೆಲವರ ಮತ.''

''ಪ್ರಕೃತಿ : ಸಂಸ್ಕೃತಂ, ತತ್ರಭಾವಂ ತತ ಆಗತಂ ವಾ ಪ್ರಾಕೃತಮ್''

ಎಂಬ ಈ ಹೇಳಿಕೆಯ ಪ್ರಕಾರ ಸಂಸ್ಕೃತವು ಪ್ರಕೃತಿ, ಆದರಿಂದ ಹುಟ್ಟಿದ್ದು ಪ್ರಾಕೃತ ಪ್ರಾಂತ್ಯದ ಬಹುತೇಕ ಶಬ್ದಗಳು ಸಂಸ್ಕೃತ ಮೂಲದವು ; ಸಂಸ್ಕೃತ ಪ್ರಕೃತಿಯಿಂದ ಅದಕ್ಕೆ ಪ್ರಾಕೃತ ಎಂಬ ಹೆಸರು ಬಂದಿದೆ. ಎಂಬುದು ಒಂದು ವರ್ಗದ ತರ್ಕ ಮತ್ತೊಂದು ವರ್ಗದ ಪ್ರಕಾರ ಪ್ರಾಕೃತದಿಂದಲೇ ಸಂಸ್ಕೃತ ಹುಟ್ಟಿದೆ. ಈ ವರ್ಗದವಾದ ಪ್ರಕೃತಿ ಎಂದರೆ ಸ್ವಾಭಾವಿಕ, ಮೂಲ, ಸಹಜ, ಎಂದು ಅರ್ಥ ಇದರ ಪ್ರಕಾರ ಅಶಿಕ್ಷಿತ ಜನಸಾಮಾನ್ಯರ ಭಾಷೆ ಪ್ರಾಕೃತ. ಇಂಥ ಭಾಷೆ ವ್ಯಾಕರಣ ನಿಯಮಗಳ ಕಟ್ಟುಪಾಡಿಗೆ ಒಳಪಟ್ಟು ಸಂಸ್ಕರಣ ಹೊಂದಿ ಶಿಷ್ಟ ಭಾಷೆಯಾದ ಸಂಸ್ಕೃತ ರೂಪುಗೊಂಡಿದೆ ಇಂಥ ಚರ್ಚೆ ''ಬೀಜ-ವೃಕ್ಷ ನ್ಯಾಯದಂತೆ ಕೊನೆ ಕಾಣುವುದು ಕಷ್ಟವಿದೆ ''[೧೩]

ಪ್ರಾಕೃತ ಭಾಷಾ ಹಿರಿಯ ವಿದ್ವಾಂಸರು, ರಾಜಸ್ಥಾನ ರಾಜ್ಯದ ಉದಯಪುರದ ಸುಕಾಡಿಯಾ ವಿಶ್ವವಿದ್ಯಾಲಯ ಜೈನಾಲಜಿ ಮತ್ತು ಪ್ರಕೃತಿ ಶಾಸ್ತ್ರದ ಮುಖ್ಯಸ್ಥರಾಗಿರುವ ಪ್ರೊ.ಪ್ರೇಮ್ ಸುಮನ್ ಜೈನರು 18,19ನ ಫೆಬ್ರುವರಿ 1985 ರಲ್ಲಿ ಮಾನಸಗಂಗೋತ್ರಿಯಲ್ಲಿ ಏರ್ಪಡಿಸಿದ ಉಪನ್ಯಾಸದಲ್ಲಿ ಈ ರೀತಿಯಾಗಿ ವಿವರಿಸುತ್ತಾರೆ.

ಅತ್ಯಂತ ಪ್ರಾಚೀನ ಸಾಹಿತ್ಯವಾಗಿರುವ ಪ್ರಾಕೃತ ಭಾಷೆಯು ಆಗಮ-ಸಾಹಿತ್ಯವಾಗಿದೆ. ಅರ್ಧ-ಮಾಗಧಿ. ಶುರಸೇನಿ ಯಂತಹ ಪಠ್ಯಗಳು ಪ್ರಾಕೃತವನ್ನು ಆಗಮ ಶಾಸ್ತ್ರವೆಂದು ಪರಿಗಣಿಸಿವೆ. ಕ್ರಿ.ಶ.ಪೂರ್ವದ ಆರು ಮತ್ತು ಐದನೇ ಶತಮಾನದ ಜೈನ ಧರ್ಮ ಮತ್ತು ಜೈನ ತತ್ವಶಾಸ್ತ್ರದ ಭಾಷೆಯಾದ ಈ ಪ್ರಾಕೃತವು ಜನರಿಗೆ ಕಥಾರೂಪದಲ್ಲಿ ಪರಿಚಿತವಾಯಿತು.

---

೧೩. ಶುಭಚಂದ (ಸಂ.) ಪ್ರಾಕೃತ ಸಾಹಿತ್ಯ ಕೈಪಿಡಿ : ಸ್ವಸ್ತಿ ಶ್ರೀ ಚಾರುಕೀರ್ತಿ ಭಟ್ಟಾಚಾರ್ಯರು ಸ್ವಾಮಿಗಳು, ಶ್ರವಣ ಬೆಳಗೋಳ ಅಧ್ಯಕ್ಷರ ನುಡಿ ತೋರಣದಿಂದ.

ಅರ್ಧಮಾಗಧಿ ಭಾಷಾ ಸಾಹಿತ್ಯವನ್ನು ಕಾಂತಾ ಸಮ್ಮಿತಾ ರೂಪದಲ್ಲಿ ಪರಿಚಯಿಸಲ್ಪಟ್ಟಿತು.[೧೪]

ಪ್ರಾಕೃತ ಹಸ್ತ ಪ್ರತಿ ಚಿತ್ರಗಳ ವಸ್ತು ವಿಷಯಗಳು : ಭಾರತೀಯ ಕಲಾ ಭಂಡಾರಕ್ಕೆ ಕರ್ನಾಟಕ ಕೊಟ್ಟ ಹಲವು ಕಾಣಿಕೆಯಲ್ಲಿ ಹೊಯ್ಸಳರ ನಯ ಮನೋಹರ ಶಿಲ್ಪದಷ್ಟೆ ವಿನೂತನವಾದುದು. ಹೊಯ್ಸಳರ ಹಸ್ತಪ್ರತಿಯೊಲಗಿನ ಚಿತ್ರಕಲೆ ಎಂಬುದನ್ನು ಮರೆಯಬಾರದು. ಹೊಯ್ಸಳ ಅರಸುಗಳಾದ ವಿಷ್ಣುವರ್ಧನ ಪ್ರಭುಗಳು ಮಾದರಿಯ ಅರಸರಾಗಿ ಬಾಳಿದಂತೆ. ಶಿಲ್ಪ ಗಂಧವಾರಣಿ ಜಿನ ಉಪಾಸಕಿ, ನೃತ್ಯಗಾರ್ತಿ ಎಂಬ ಹಲವು ಅಭಿಧಾನಗಳಿಂದ ಪ್ರಸಿದ್ಧರಾಗಿದ್ದ ಈ ಹೊಯ್ಸಳ ದೊರೆಗಳ ಪಟ್ಟದ ಅರಸಿ ಶಾಂತಲಾದೇವಿ ಶಿಲ್ಪಕಲಾ ಲೋಕಕ್ಕೆ ಪರಮೋಚ್ಚಕಾಣಿಕೆ ನೀಡಿ ಹೊಯ್ಸಳರ ಕೀರ್ತಿಯನ್ನು ಸದಾಸ್ಮರಣೆಯರನ್ನಾಗಿ ಮಾಡಿದ್ದಾರೆ. ಹೊಯ್ಸಳ ದೊರೆಗಳು ಪ್ರಾಕೃತ ಭಾಷೆಯು ಕರ್ನಾಟಕಕ್ಕೆ ನೀಡಿರುವಂತಹ ಧವಳ, ಜಯಧವಳ ಮತ್ತು ಮಹಾಧವಳ ಜೈನಗ್ರಂಥಗಳು ಪ್ರಾಕೃತ ಭಾಷಾಲೋಕಕ್ಕೆ, ಚಿತ್ರಲೋಕಕ್ಕೆ ನೀಡಿರುವಂತಹ ಅದ್ವಿತೀಯ ಕಾಣಿಕೆಗಳಾಗಿವೆ.

ಈ ಕುರಿತು ಕಾರಂತರು ಈ ಚಿತ್ರಗಳಿರುವುದು - ಇಲ್ಲಿಯ ಗ್ರಂಥಾಲಯದ ಕೀರ್ತಿಯನ್ನು ಭಾರತ ದೇಶದ ಉದ್ದಕ್ಕೂ ಹಬ್ಬಿಸಿದ ಜೈನ ಧರ್ಮಗ್ರಂಥಗಳಾದ 'ಧವಲಾ' ತ್ರಯಗಳಲ್ಲಿ. ಇವು ಧವಲಾ, ಜಯ ಧವಲಾ, ಮಹಾಧವಲಾ ಎಂಬ ಮೂರು ಪ್ರತ್ಯೇಕ ಸಂಪುಟಗಳಿಂದ ಕೂಡಿದ ವಿಖ್ಯಾತ ಗ್ರಂಥ. ಈ ಪುರಾತನ ಗ್ರಂಥಗಳನ್ನು ನೋಡುವುದೇ ಒಂದು ಪುಣ್ಯ ಎಂಬ ಭಾವನೆಯಿಂದ ಮೂಡಬಿದಿರಿಗೆ ಅನೇಕ ಜೈನ ಯಾತ್ರಿಗಳು ಬರುತ್ತಾರೆ. ಈ ಗ್ರಂಥದ ವಸ್ತು ನನ್ನ ತಿಳಿವಿಗೂ, ಉದ್ದೇಶಕ್ಕೂ ಮಿರಿದ ಸಂಗತಿ, ನಾನು ಅವುಗಳಲ್ಲಿ ಕಂಡ ಹಲವಾರು ಚಿಕಣಿ ಚಿತ್ರ (Miniture Painting)ಗಳು ಮಾತ್ರ ನನ್ನ ವಿಷಯಕ್ಕೆ ಸಂಬಂಧಿಸಿದ್ದು.[೧೫]

ಮೊದಲು ಈ ಧವಲಾ ಗ್ರಂಥಗಳ ವಿಚಾರ ಕೆಲವೊಂದು ಸಂಗತಿಗಳನ್ನು ತಿಳಿಸಿ ಅನಂತರ ಅವುಗಳಲ್ಲಿರುವ ಚಿತ್ರಗಳನ್ನು ಕುರಿತು ಬಣ್ಣಿಸುತ್ತೇನೆ. ಪ್ರಾಚ್ಯತೆಯ ದೃಷ್ಟಿಯಿಂದ ಇವು ಹನ್ನೆರೆಡನೆಯ ಶತಮಾನದ ಆದಿಭಾಗದವು. ಅವನ್ನು ಬರೆದು ಇಂದಿಗೆ ಎಂಟು ಶತಮಾನಗಳಿಗಿಂತ ದೀರ್ಘಕಾಲ ಸಂದಿದೆ. ಅಷ್ಟೊಂದು ಕಾಲ ನಮಗೆ ಅದು ಉಳಿದು ಬಂದಿರುವ ಸಂಗತಿಯೇ ಆಶ್ಚರ್ಯದ್ದು. ಇದರ ಓಲೆಗಳು ಸಾಕಷ್ಟು ವಿಶಾಲವಾದವು. ಅವುಗಳ ಉದ್ದಗಲ 66. 5 × 7 ಸೇ.ಮೀ. ತಾಡವಾಲೆಯಲ್ಲಿ ಹನೆ ಮತ್ತು ಸೀತಾಳೆ ಎಂಬೆರೆಡು ಜಾತಿಗಳಿವೆ. ಮೊದಲನೆಯದು ಒರಟು ಮತ್ತು ದಪ್ಪ; ಬರವಣಿಗೆಗೆ ಎರಡನೆಯ ಜಾತಿಯೇ ಉತ್ತಮ ಅದು ಅಗಲ ಮತ್ತು ಸಾಕಷ್ಟು ಉದ್ದದ ಗರಿಗಳನ್ನು ಒದಗಿಸುತ್ತದೆ.

ಡಾ.ಶಿವರಾಮಕಾರಂತರ ವಿಚಾರವನ್ನು ಮುಂದುವರೆಸುತ್ತಾ ''ಧವಲಾ ಗ್ರಂಥದ ಮೂಲವು ಕರ್ನಾಟಕವೇ ; ಅದು ಹೊರಗಿನಿಂದ ಇಲ್ಲಿಗೆ ಬಂದುದಲ್ಲ ಅದರ ಭಾಷೆ ಪ್ರಾಕೃತವಾದದು. ಅಲ್ಲಲ್ಲಿ ಸಂಸ್ಕೃತ ನುಡಿ ಬಂದಿದ್ದರೂ ಆದನ್ನು ಬರೆದುದು ಕನ್ನಡ ಲಿಪಿಯಲ್ಲಿ ಆದಕ್ಕಿಂತ ಮುಖ್ಯ ವಿಷಯ ಇದನ್ನು ಕಂಠದಿಂದ ಬರೆಯದೆಯೇ ಲೇಖನಿ ಮತ್ತು ಅರಗಿನ ಕಪ್ಪು ಶಾಯಿಗಳಿಂದ

---

೧೪. ಶುಭಚಂದ (ಸಂ.): ಪ್ರಾಕೃತ ಸಾಹಿತ್ಯ ಕೈಪಿಡಿ, ಪುಟ -೧ ರಿಂದ ೩.

೧೫. Dr. Prem Suman Jain : Significance of Prakrit Narrative Literature. Page -1.

ಕರ್ನಾಟಕದ ಪ್ರಾಕೃತ ಹಸ್ತಪ್ರತಿ ವರ್ಣಚಿತ್ರಗಳು

ಕೃತಿ : ಧವಳ ಗ್ರಂಥ

ಕರ್ನಾಟಕದ ಹಸ್ತಪ್ರತಿ ಚಿತ್ರಕಲೆ- ಒಂದು ಅಧ್ಯಯನ



Courtesy :

C.Shivaram Murthy
South Indian Paintings
Publication Divsion Minstry of Information & Brod casting Govt.of India, New Delihi

ಬರೆದಿದ್ದಾರೆ ಬರೆದ ಲಿಪಿ ಒಂದಿಷ್ಟೂ ಮಾಸದೆ ಅಚ್ಚ ಕಡುಪಾಗಿ ಇಂದಿಗೂ ಕಾಣಿಸುತ್ತಿದೆ. ಕಂಠದ ಬರವಣಿಗೆಯಲ್ಲಿ ಮಸಿ ತುಂಬಿಸಿದರೂ ಹಳೆಯ ಓಲೆಗಳಲ್ಲಿ ಓಲೆಯ ಬಣ್ಣಕ್ಕೂ ಬರವಣಿಗೆಯ ಕಾಲಾನುಕ್ರಮವಲ್ಲಿ ವ್ಯತ್ಯಾಸ ಕಾಣಿಸದೆ ಓದುವುದು ಕಷ್ಟವಾಗುತ್ತದೆ. ಇದು ಹಾಗಿಲ್ಲ ಈ ಬರಹ ಗೊರೆಸ್ಪೊಪ್ಪೆಯಲ್ಲಿ ಮೊದಲು ಸಿದ್ಧಗೊಂಡಿತೆಂದು ಅದರಿಂದಲೇ ತಿಳಿದು ಬರುತ್ತದೆ. ಆದರೂ ಮುಂದಿನ ಜನರು ತಾಡವಾಲೆ ಕುರಿತು ಬರವಣಿಗೆಗೆ ಲೇಖನಿ ಮಸಿಯನ್ನು ಬಳಸದೇ, ಕಂಠವನ್ನು ಏಕೆ ಉಪಯೋಗಿಸುತ್ತಾ ಹೋದರೋ ನನಗೆ ಹೊಳೆಯುವುದಿಲ್ಲ. ಲೇಖನಿ ಶಾಯಿಗಳಿಂದ ಓಲೆಗರಿಯ ಮೇಲೆ ಚಂದ ಅಕ್ಷರಗಳಿಂದ ಬರೆಯಲು ಉತ್ಸಹಪಟ್ಟ ಆ ಲಿಪಿಕಾರರು ಮತ್ತು ಒಂದು ಹೆಜ್ಜೆ ಮುಂದಕ್ಕಿರಿಸಿ ಅದನ್ನು ಚಿತ್ರಗಳಿಂದ ಅಲಂಕರಿಸಲು ಸಾಹಸಪಟ್ಟದು ಸ್ವಾಭಾವಿಕವೇ. ಅಂಟಿನ ಜತೆಯಲ್ಲಿ ಮಣ್ಣಿನ ಬಣ್ಣಗಳನ್ನು ಅರೆದು ಕುಂಚಗಳಿಂದ ಲೇಪಿಸಿರಬಹುದು. ಕುಂಚದಿಂದಲೋ, ಲೇಖನಿಯಿಂದಲೋ ಚಿತ್ರಗಳ ರೇಖೆಗಳನ್ನು ಬರೆಯಬಹುದು.

ಡಾ.ಕಾರಂತರು ಓಲೆಯಗರಿಯ ಮೇಲೆ ಚಿತ್ರ ಬರೆದ ಇಂತಹುದೆ ಗ್ರಂಥ ದೇಹಲಿಯ ನ್ಯಾಶನಲ್ ಮ್ಯೂಸಿಯಂನಲ್ಲಿದೆ ಎಂದು ಸೂಚಿಸುವುದರಲ್ಲದೇ ಗುಜರಾತ್ ಈ ರೀತಿ ಅಲಂಕೃತ ತಾಡವಾಲೆಗಳು ಸಿಗುತ್ತವೆ ಎಂದು ಸೂಚಿಸುತ್ತಾರೆ.

ತಾಡೋಲೆಗಳು ಹೊಯ್ಸಳ ಅರಸರಿಗೆ ಸಂಬಂಧಿಸಿದವು ಎಂದು ಹಸ್ತಪ್ರತಿಗಳ ಹಿರಿಯ ವಿದ್ವಾಂಸರಾಗಿರುವ ಶ್ರೀ ವಿ.ಟಿ.ಎಸ್.ರಾವ್ ಅವರು ಈ ರೀತಿಯಾಗಿ ತಮ್ಮ ಅಭಿಪ್ರಾಯವನ್ನು ನಮ್ಮೊಂದಿಗೆ ಹಂಚಿಕೊಂಡಿದ್ದಾರೆ. ಹೊಯ್ಸಳರ ಭವ್ಯ ಶಿಲ್ಪಕಲಾ ವೈಭವದಂತೆಯೇ ಅವರ ವರ್ಣಚಿತ್ರ ಕಲೆಯೂ ಅಚ್ಚಳಿಯದೆ ಸುಸ್ಥಿತಿಯಲ್ಲಿ ಕನ್ನಡ ನಾಡಿನ ಜಿನಮಂದಿರ, ಮಠಗಳಲ್ಲಿ ಈಗಲೂ ಉಳಿದು ಶೋಭಿಸುತ್ತಿರುವ ಸಂಗತಿಯನ್ನು ಅನೇಕರು ಅಷ್ಟಾಗಿ ಗಮನಿಸಿಲ್ಲ. ಹೊಯ್ಸಳರ ಕಾಲದ ಉತ್ತಮ ಚಿತ್ರ ಕಲಾವಿದರು, ಜೈನ ಪುರಾಣೋಕ್ತ ಕಥಾ ಚಿತ್ರಗಳಾಗಿ ಶ್ರವಣಬೆಳಗೊಳದ ಜೈನಮಠದ ಗೋಡೆಗಳ ಮಾಡಗಳ ಮೇಲೆ ಭಿತ್ತಿ ಚಿತ್ರಗಳಾಗಿ ಚಿತ್ರಿಸಿ ಹೊಯ್ಸಳರ ಚಿತ್ರಕಲಾ ವೈಭವವನ್ನು ಪ್ರದರ್ಶಿಸಿರುವರು. ಇದೆಲ್ಲಕ್ಕಿಂತಲೂ ಹೆಚ್ಚಿನ ಅವರ ಕಾಣಿಕೆ ಆವರೆಗಿನ ಚಿತ್ರಿಕರಣದ ಮಾಧ್ಯಮಗಳಾದ ಭಿತ್ತಿ, ಫಲಕ, ದುಕುಳಪಟ, ಇವನ್ನು ಬಿಟ್ಟು ಪ್ರಪ್ರಥಮವಾಗಿ ಆಗಿನ ಲೇಖನ ಸಾಮಾಗ್ರಿಯಾದ ತಾಳಪತ್ರಗಳ ಮೇಲೆ ಚಿತ್ರಗಳನ್ನು ಬಿಡಿಸಿ ಪ್ರಾಚೀನ ಹಸ್ತಪ್ರತಿಗಳಿಗೆ ಅಪೂರ್ವ ಶೋಭೆಯನ್ನು ತಂದು ಈಗಲೂ ಸುಸ್ಥಿತಿಯಲ್ಲಿ ಅವು ಕಲೋಪಾಸಕರ ಮನತಣಿಯುವಂತೆ ಬಿಟ್ಟು ಹೋಗಿರುವುದು. ಆಗಿನ ಲೇಖನ ಸಾಮಾಗ್ರಿಗಳು, ಉತ್ತರ ಭಾರತದಲ್ಲಿ ಭೂರ್ಜ ವೃಕ್ಷದ ಒಳ ತೊಗಟೆಯಾದರೆ ದಕ್ಷಿಣದಲ್ಲಿ ಹತ್ತಿಯ ಬಟ್ಟೆಯಿಂದ ವಿಶೇಷ ರೀತಿಯಲ್ಲಿ ತಯಾರಿಸಿದ ಕಡತ ಹಾಗೂ ರೇಷ್ಮೆ ವಸ್ತ್ರಗಳನ್ನು ಬಿಟ್ಟರೆ ತಾಳ ಪತ್ರಗಳೇ ಪ್ರಾಧಾನ್ಯವನ್ನು ಪಡೆದಿದ್ದವು.

ಹೊಯ್ಸಳ ಚಿತ್ರಕಾರನು ತನ್ನ ಅಪರಿಮಿತ ಪ್ರತಿಭೆಯನ್ನು ಸೀಮಿತ ಮಿತಿಯಾದ ತಾಳೆಗರಿಯ ಚಿಕ್ಕ ಅಂಕಣಗಳಲ್ಲಿ ನಿರೂಪಿಸಿರುವನು. ಚಿತ್ರಗಳಲ್ಲಿ ಈಗಲೂ ಕಂಡು ಬರುವ ಅಚ್ಚಳಿಯದ

ವರ್ಣಗಳ ಪ್ರಖರತೆ ಆಗಿನ ಹೊಯ್ಸಳ ಚಿತ್ರಕಲಾವಿದರ ವರ್ಣ ಮಿಶ್ರಣ ಕೌಶಲ್ಯ ಮತ್ತು ನಿಪುಣತೆಯನ್ನು ಪ್ರತಿಬಿಂಬಿಸುತ್ತವೆ. ಈ ಚಿತ್ರಗಳ ಅಂಚುಗಳಲ್ಲಿ ಬಿಡಿಸಿರುವ ವಿನ್ಯಾಸ ಮತ್ತು ರೇಖೆಗಳ ಲಾಸ್ಯ, ಲಾಲಿತ್ಯಗಳು ಬೇಲೂರು ದೇವಾಲಯದಲ್ಲಿರುವ ತಾಮ್ರ ಶಾಸನಗಳನ್ನು ಬಹುವಾಗಿ ಹೋಲುವುದರಿಂದ ಹಾಗೂ ಈ ತಾಮ್ರ ಶಾಸನಗಳ ಬರವಣಿಗೆಯೂ ತಾಳಪತ್ರಗಳ ಬರವಣಿಗೆಯೂ ಏಕರೂಪವಾಗಿರುವುದರಿಂದಲೂ ಈ ಚಿತ್ರ ಪಟಗಳನ್ನು ತಾಳೇಗರಿ ಗ್ರಂಥಗಳಲ್ಲಿ ಅಳವಡಿಸಿರುವ ಕಾಲ ಹೊಯ್ಸಳೇಶ್ವರ ವಿಷ್ಣುವರ್ಧನರ ಕಾಲವೇಂದೇ ದೃಢವಾಗಿ ಹೇಳಬಹುದು. ಚಿತ್ರಗಳ ಅಂಚುಗಳಲ್ಲಿ ಚಿತ್ರಗಳ ನಿರೂಪಣೆಯನ್ನು ಮುದ್ದಾದ ಅಕ್ಷರಗಳಿಂದ ಒಡಮೂಡಿಸಿರುವರು.[೧೬]

ಶ್ರವಣಬೆಳಗೊಳ ಶ್ರೀ ಜೈನ ಮಠದ ಹಸ್ತಪ್ರತಿ ಭಂಡಾರದಲ್ಲಿರುವ ತ್ರಿಲೋಕ ಸಾರದ ಹಸ್ತಪ್ರತಿಯ ಓಲೆಗರಿಗಳ ಮೇಲೆ ಚಿತ್ರಗಳಿವೆ. ಇದು15-16ನೇ ಶತಮಾನಕ್ಕೆ ಸೇರಿರಬಹುದು. ಇದರಲ್ಲಿ ಜೈನ ಬಸದಿ, ಮಾನಸ್ತಂಭ, ಸ್ತಂಬದಪೀಠ, ಸ್ತಂಭದ ಮೇಲಿನ ಮಂಟಪ ಇವುಗಳನ್ನು ತುಂಬ ಸ್ಪಷ್ಟವಾಗಿ ಬಿಡಿಸಲಾಗಿದೆ. ಶ್ರವಣ ಬೆಳಗೊಳದ ರಾಷ್ಟ್ರೀಯ ಪ್ರಾಕೃತ ಅಧ್ಯಯನ ಮತ್ತು ಸಂಶೋದನ ಕೇಂದ್ರದಲ್ಲಿರುವ ಹಸ್ತಪ್ರತಿ ಭಂಡಾರದ ಕೆ.ಎ.11 ಸಂಖ್ಯೆಯ ಹಸ್ತಪ್ರತಿಯು ಬಾಹುಬಲಿ ವರ್ದಮಾನ ವಿರಚಿತ ನಾಗಕುಮಾರ ಚರಿತೆಯಾಗಿದ್ದು ಇದರಲ್ಲಿ ಕೆಲವು ಚಿತ್ರಗಳಿವೆ. ಇದೇ ಭಂಡಾರದ ಕೆ.57 ಹಸ್ತಪ್ರತಿ ಪಾರ್ಶ್ವನಾಥ ಪುರಾಣವಾಗಿದ್ದು ಪ್ರತಿಯ ಆದ್ಯಂತ ಪತ್ರಗಳಲ್ಲಿ ರೇಖಾ ಚಿತ್ರಗಳಿವೆ ಹಾಗೆಯೇ ಕೆ.47 ಸಂಖ್ಯೆ ಭರತೇಶ ವೈಭವದ ಕಟ್ಟನಲ್ಲಿಯೂ ಚಿತ್ರಗಳಿರುವುದು ತಿಳಿದು ಬರುತ್ತದೆ.[೧೭]

ಪ್ರೊ॥ ಬಿ.ಎಸ್.ಸಣ್ಣಯ್ಯನವರು ಶ್ರುತ ಕೇವಲಿ ಎಜುಕೇಷನ್ ಟ್ರಸ್ಟ ಶ್ರವಣ ಬೆಳಗೊಳದ ಪ್ರಕಾಶನದಲ್ಲಿ ಪ್ರಾಕೃತ ಹಸ್ತಪ್ರತಿಗಳ ವರ್ಣನಾತ್ಮಕ ಸೂಚಿಯನ್ನು ಪ್ರಕಟಿಸಿದ್ದಾರೆ 146 ಪ್ರಾಕೃತ ಗ್ರಂಥಗಳ ಸೂಚಿ ಇದಾಗಿದೆ. ಮತ್ತು ಇತರ ಕೆಲವು ಹಸ್ತಪ್ರತಿ ಭಂಡಾರದಲ್ಲಿ ದೊರೆಯುವ ಪ್ರಾಕೃತ ಗ್ರಂಥಗಳ ಪಟ್ಟಿಮಾಡಿ 154 ಗ್ರಂಥಗಳ ಯಾದಿಯೊಂದಿಗೆ ಕನ್ನಡಲಿಪಿಯುಳ್ಳ ಪ್ರಾಕೃತದ 146 ಗ್ರಂಥಗಳ ಯಾದಿಯನ್ನು ಅವರು ನೀಡಿದ್ದಾರೆ. ಈ ವರೆಗೂ ಪ್ರಕಟಗೊಂಡಿರುವ 55 ಗ್ರಂಥಗಳ ಯಾದಿಯೊಂದಿಗೆ ಶ್ರೀ ಕ್ಷೇತ್ರ ಶ್ರವಣಬೆಳಗೊಳದ ಪ್ರಕಟಣೆಯಲ್ಲಿ 33 ಕನ್ನಡ 04 ಆಂಗ್ಲ 09 ಹಿಂದಿ ಗ್ರಂಥಗಳು ಪ್ರಕಟವಾಗಿರುವವು ಎಂದು 132 ಪುಟಗಳ ಪ್ರಾಕೃತ ಹಸ್ತಪ್ರತಿಗಳ ವರ್ಣನಾತ್ಮಾಕ ಸೂಚಿಯ ಸಂಪಾದಕರಾಗಿರುವ ಪ್ರೊ॥ಬಿ.ಎಸ್.ಸಣ್ಣಯ್ಯನವರು ತಿಳಿಸಿದ್ದಾರೆ.[೧೮]

ರಾಷ್ಟ್ರಮಟ್ಟದ ಪ್ರಖ್ಯಾತಿಯನ್ನುಗಳಿಸಿರುವ ಕರ್ನಾಟಕದ ಸಚಿತ್ರ ಹಸ್ತಪ್ರತಿಗಳಲ್ಲಿ ಸುಪ್ರಸಿದ್ಧಿಯನ್ನು ಪಡೆದಿರುವುದು ಮೂಡಬಿದರೆಯ ಭಟಾರಕ ಚಾರುಕೀರ್ತಿ ಜೈನ ಮಠದಲ್ಲಿರುವ

---

೧೬. ಡಾ. ಕೆ. ಶಿವರಾಮ ಕಾರಂತ : ಕರ್ನಾಟಕದಲ್ಲಿ ಚಿತ್ರಕಲೆ, ಪುಟ -೩೯.

೧೭. ಡಾ. ಸಿದ್ದಯ್ಯ ಪುರಾಣಿಕ ಪ್ರ.ಸಂ.: ಮಣಿಹ, ವಿ.ಟಿ.ಎಸ್. ರಾವ್, ಪುಟ -೪೧೪.

೧೮. ಪ್ರೊ. ಬಿ.ಎಸ್. ಸಣ್ಣಯ್ಯ ಸಂ.: ಪ್ರಾಕೃತ ಹಸ್ತಪ್ರತಿಗಳ ವರ್ಣಾನಾತ್ಮಕ ಸೂಚಿ, ಪ್ರಸ್ತಾವನೆಯಿಂದ

ಕರ್ನಾಟಕದ ಪ್ರಾಕೃತ ಹಸ್ತಪ್ರತಿ ವರ್ಣಚಿತ್ರಗಳು

ಕೃತಿ : ಧವಳ ಗ್ರಂಥ

ಕರ್ನಾಟಕದ ಹಸ್ತಪ್ರತಿ ಚಿತ್ರಕಲೆ- ಒಂದು ಅಧ್ಯಯನ



Courtesy :

C.Shivaram Murthy
South Indian Paintings
Publication Divsion Minstry of Information & Brod casting Govt.of India, New Delihi

ಧವಳ, ಜಯಧವಳ ಮತ್ತು ಮಹಾಧವಳ ಗ್ರಂಥಗಳನ್ನು ನೆನಪಿಸಿಕೊಳ್ಳಬಹುದು. ವ್ಯಾಕರಣ, ಗಣಿತ, ವೈದ್ಯಕೀಯ ಮುಂತಾದ ಶಾಸ್ತ್ರಗಳ ಹಸ್ತಪ್ರತಿಗಳಲ್ಲಿ ಪ್ರಾರಂಭಿಕ ಹಂತವಾಗಿ ಅಲಂಕಾರ ಎಂಬುದು ಅಂಚುಗಳ ಅಲಂಕಾರಕ್ಕೆ ಮಾತ್ರ ಸೀಮಿತವಾಗಿತ್ತು. ಚಿತ್ರಕಲೆಯೂ ಕಾಲಕ್ರಮಗಳಲ್ಲಿ ಸಾಹಿತ್ಯಿಕ ಮತ್ತು ಧಾರ್ಮಿಕ ಭಾವಗಳಿಗೆ ರೂಪಕೊಡುವ ನಿಟ್ಟಿನತ್ತ ಹಸ್ತಪ್ರತಿ ಚಿತ್ರಕಲೆಯಾಗಿ ಮುಂದುವರಿಯ ಹತ್ತಿತ್ತು.

ಧಾರ್ಮಿಕ ಮತ್ತು ಶಿಷ್ಟಪದದ ಹಿನ್ನಲೆಯಲ್ಲಿರುವ ಜೈನ ಹಸ್ತ ಪ್ರತಿಗಳ ವಿವರವನ್ನು ಶ್ರೀ ವಿ.ಟಿ.ಎಸ್.ರಾವ್ ಅವರು ಈ ರೀತಿಯಾಗಿ ವಿವರಿಸುತ್ತಾರೆ. ಈ ಅಮೂಲ್ಯವಾದ ಗ್ರಂಥಗಳ ಹಸ್ತಪ್ರತಿಗಳೇ ಮೂಡಬಿದ್ರಿಯ ಸಿದ್ಧಾಂತ ಬಸದಿಯಲ್ಲಿರುವವು ಈ ಗ್ರಂಥಗಳಲ್ಲಿ ವಿಷಯ ನಿರೂಪಣಾ ಚಿತ್ರರಚನೆಗೆ ಸಾಮಾನ್ಯವಾಗಿ ವಿಶಾಲವಾಗಿರುವ ತಾಳೆಗರಿಗಳನ್ನು ಆರಿಸಿ ಚಿತ್ರಗಳನ್ನು ಕೊರೆಯಲಾಗಿದೆ. ಕೂರ್ಚಿಕೆಯೆಂಬ ವಿಶೇಷ ಲೇಖನಿಗಳಿಂದ ಹಾಗೂ ತೂಲಿಕಾ ಶಲಾಕಗಳೆಂಬ ವಿಶೇಷ ತೂಲಿಕೆ (ಕುಂಚ)ಗಳಿಂದ ರೇಖಾ ರಚನೆ ಹಾಗೂ ವರ್ಣಸಂಯೋಜನೆ ಮಾಡಲಾಗಿದೆ. ಉಪಯೋಗಿಸಿರುವ ವರ್ಣಗಳು ಹೆಚ್ಚಿನವು ವನಸ್ಪತಿ ಮೂಲದಾಗಿವೆ. ಕೆಲವು ಕಡೆ ಧಾತು ವರ್ಣಗಳು ಪ್ರಖರತೆಗಾಗಿ ಬಳಸಲಾಗಿದೆ. ಆ ಕಾಲದ ಪ್ರಮುಖ ವರ್ಣಗಳೆಂದು ನಿರ್ಷ್ಕರ್ಷಿತವಾಗಿದ್ದ ಗೈರಿಕ(ಕೆಂಪು), ನೀಲ, ಶುದ್ಧ (ಬಿಳಿಪು) ಕಜ್ಜಲ (ಕಪ್ಪು) ಹರಿತಾಳ (ಹಳದಿ) ಇವುಗಳನ್ನು ಪ್ರಮಾಣ ಬದ್ದವಾಗಿ ಮಿಶ್ರಣಮಾಡಿ ಭಾವಾಬಿಜ್ಞತೆಗೆ ತಕ್ಕಂತೆ ತ್ಯಾಗದ ಸಂಕೇತಕ್ಕೆ ಕೆಂಪು ಕಾವಿಯನ್ನು , ಸರ್ವವ್ಯಾಪಕತೆಯ ಸಂಕೇತಕ್ಕೆ ನೀಲಿಯನ್ನು, ಸಂಪತ್ತಿನ ಸೂಚನೆಗೆ ಹಸಿರು ಬಣ್ಣವನ್ನು ರೂಪ,ಭೇದ,ಭಾವ, ಲಾವಣ್ಯಗಳಿಗೆ ಅನುಗುಣವಾಗಿರುವಂತೆ ನಿಯಮಾನುಸಾರವಾಗಿ ಲೇಪಿಸಿ ಚಿತ್ರ ತಂತ್ರ ಭಾವಭಿಜ್ಞತೆಯನ್ನು ಹೊಯ್ಸಳ ಚಿತ್ರಕಾರನು ತನ್ನ ಸೀಮಿತ ಮಿತಿಯಾದ ತಾಳೆಗರಿಯ ಚಿಕ್ಕ ಅಂಕಣಗಳಲ್ಲಿ ನಿರೂಪಿಸಿರುವನು. ಚಿತ್ರಗಳಲ್ಲಿ ಈಗಲೂ ಕಂಡುಬರುವ ಅಚ್ಚಳಿಯದ ವರ್ಣಗಳ ಪ್ರಖರತೆ ಆಗಿನ ಹೊಯ್ಸಳ ಚಿತ್ರಕಲಾವಿದರ ವರ್ಣ ಮಿಶ್ರಣ ಕೌಶಲ್ಯ ಮತ್ತು ನಿಪುಣತೆಯನ್ನು ಪ್ರತಿ ಬಿಂಬಿಸುತ್ತವೆ.

ಈ ಗ್ರಂಥಗಳು ಉತ್ಕೃಷ್ಟವಾದ ಚಿತ್ರರಚನೆಗಳಿಂದ, ಮೋಹಕ ಅಲಂಕಾರಗಳಿಂದ ರೂಪಗೊಂಡಿವೆ. 66.5 ಸೆ.ಮೀ. ಉದ್ದ 7 ಅಗಲವಾಗಿರುವ ಈ ಗರಿಗಳಲ್ಲಿ ಒಂದೊಂದು ಚಿತ್ರವು ಒಂದೊಂದು ರೀತಿಯಿಂದ ಮೋಹಕವಾಗಿವೆ. ಮಕರ ಪೀಠದ ಮೇಲೆ ಗರ್ಜಿಸುವ ಸಿಂಹಗಳ ಹಿನ್ನೆಲೆಯಲ್ಲಿ ಎರಡು ಬದಿಗಳಿಂದ ಚೌರಿ ಬಿಸುವವರ ಸುಂದರ ಸಂಯೋಜನೆಯಿಂದ ತೀರ್ಥಂಕರ ಚಿತ್ರಗಳನ್ನು ರಚಿಸಲಾಗಿದೆ. ಚಾಮರಧಾರೀಗಳಾದ ಬುಧ ಮತ್ತು ನಾಗರಾಜರ ಚಿತ್ರಗಳು ಅತ್ಯಂತ ಸುಂದರವಾಗಿವೆ. ಕೆಳಗಿನ ಅಂಕಣಗಳಲ್ಲಿ ಬರುವ ಪಾರ್ಶ್ವನಾಥ ಸ್ವಾಮಿಯ ವೈರಾಗ್ಯದ ಮೂರ್ತತೆಯನ್ನು ಬಿಂಬಿಸುವ ಚಿತ್ರಗಳು ಮನೋಹರವಾಗಿವೆ. ಈ ಗ್ರಂಥಗಳಲ್ಲಿ ಬರುವ ಶೃತ ದೇವಿಯ ಚಿತ್ರ, ಮಾತಂಗ,ಯಕ್ಷ ಮಾನಸಿ ದೇವಿ, ಅಜೀತ ಯಕ್ಷರ ಚಿತ್ರಗಳು ಮಕರ ಪೀಠ,ಹಂಸಪೀಠಗಳು ಮನಮೋಹಕವಾಗಿವೆ.

ವರ್ಣಗಾರಿಕೆಯಲ್ಲಿ ತೂಕಬದ್ಧವಾದ ಹಿಡಿತವಿದೆ. ಕೆಂಪು, ಹಸಿರು, ಕೇಸರಿ,ಹಳದಿ,ಬಿಳಿ ಮತ್ತು ಕಪ್ಪು ಬಣ್ಣಗಳನ್ನು ಸಮತೆ, ಸಮತ್ವ ಪುನರಾವರ್ತನ ಮತ್ತು ಒಂದರಮೇಲೊಂದು ಒಂದು ವ್ಯಾಪಿಸಿಕೊಳ್ಳುವ ನಕ್ಷಾ ಚಿತ್ರಗಳ ಹಿನ್ನೆಲೆಯಲ್ಲಿ ಗರಿಯ ತುಂಬಾ ಕಣ್ಣಿಗೆ ಹಿತವಾಗುವಂತೆ ಹರಡಿಕೊಂಡಿವೆ. ಧವಲ ಗ್ರಂಥದ ವರ್ಣಗಾರಿಕೆ ತೀರ್ಥಂಕರ ಕುರಿತು ಕನ್ನಡದಲ್ಲಿ ಮೊಟ್ಟ ಮೊದಲ ಬಾರಿಗೆ ಪರಿಚಯಿಸಿದ ಡಾ.ಶಿವರಾಮಕಾರಂತರು ಈ ರೀತಿ ವಿವರಿಸುತ್ತಾರೆ. ಧವಲಾದ ಮೊದಲ ಹಾಳೆಯ ಯಾವತ್ತು ಮೈಯನ್ನು ನೀಳವಾದ ಒಂದು ಪಟ್ಟಿಯಂತೆ ಚಿತ್ರಿಸಿದ್ದಾರೆ. ಇಲ್ಲಿ ಕಪ್ಪು ಮತ್ತು ಕೆಂಪು ಹಿನ್ನೆಲೆಗಳನ್ನು ಬರೆದು, 15 ಮಂದಿ ತೀರ್ಥಂಕರನ್ನು ಸಾಲಾಗಿ ಚಿತ್ರಿಸಿದ್ದಾರೆ. ತೀರ್ಥಂಕರರ ಸಂಖ್ಯೆ 24 ಇದ್ದರೂ, ಅವರೆಲ್ಲರು ಬಂದಿಲ್ಲ. ಜೈನ ಶಾಸ್ತ್ರಗಳಲ್ಲಿ ಯಾವ ಯಾವ ತೀರ್ಥಂಕರ ಯಾರು ಯಾರು ಎಂಬ ನಿಶ್ಚಯವಿರುವದರಿಂದ ಅವು ಚಿತ್ರಿತ ವ್ಯಕ್ತಿಗಳನ್ನು ಗುರುತಿಸಲು ಸಹಾಯ ಮಾಡುತ್ತದೆ. ಉದಾ: ಕೆಂಬಣ್ಣದ ಶರೀರ,ಪದ್ಮಾ,ಪ್ರಭ ಮತ್ತು ವಾಸು ಪೂಜ್ಯ ತೀರ್ಥಂಕರರಿಗೆ ಬಿಳಿಯ ಬಣ್ಣ ಚಂದ್ರ ಪ್ರಭ, ಪುಷ್ಪದಂತರಿಗೆ; ನೀಲವರ್ಣ ನೇಮಿನಾಥ ಮತ್ತು ಸುವ್ರತರಿಗೆ ಸಲ್ಲುತ್ತದೆ. ಒಂದೇ ಬಣ್ಣ ಇಬ್ಬಿಬ್ಬರನ್ನು ಸಂಕೇತಿಸುವದರಿಂದ ಯಾರು ಯಾರು ಎಂದು ತರ್ಕಿಸಲು ಅವರವರ ಲಾಂಛನಗಳೇನೆಂದು ತಿಳಿಯವುದು ಅವಶ್ಯವಾಗುತ್ತದೆ. ಹಾಗೇ ಲಾಂಛನಗಳನ್ನು ಬರೆದ ಚಿತ್ರಗಳ ಕೆಳ ಭಾಗ ಇಂದು ನಷ್ಟವಾಗಿದೆ. ಜಯಧವಲಾ ಗ್ರಂಥದ 403ನೇ ಪುಟದ ಎಡಗಡೆಯಲ್ಲಿ ಕಪ್ಪುದೇಹದ ಬೆಂಗಡೆ ಸರ್ಪ ಲಾಂಛನವುಳ್ಳ ಪಾರ್ಶ್ವನಾಥ ತೀರ್ಥಂಕರರ ಚಿತ್ರವಿದೆ. ಅವರನ್ನು ಅಚೀಚೆ ಕುಳಿತು ಓಲೈಸುವ ಇಬ್ಬರು ಶಿಷ್ಯರು ಕಾಣಸುತ್ತಾರೆ. [೧೯]

2. ಚಿತ್ರಕಲೆಯ ಉಲ್ಲೇಖ ಹೊಂದಿದ ಸಂಸ್ಕೃತ ಭಾಷೆಯ ಹಸ್ತಪ್ರತಿಗಳು.

ಭಾರತೀಯ ಸಾಹಿತ್ಯ ರಾಶಿಯಲ್ಲಿ ಸಂಸ್ಕೃತ ಸಾಹಿತ್ಯವೇ ಪ್ರಾಚೀನವಾದುದು. ಭಾರತೀಯರ ವೇದ, ಉಪನಿಷತ್ತು, ಅರಣ್ಯಕ ಶೃತಿ,ಸ್ಮೃತಿಯಂತಹ ಅನೇಕ ಸಾಹಿತ್ಯ ಪ್ರಕಾರಗಳಿಗೆ ಸಂಸ್ಕೃತವೇ ಮೂಲವಾಗಿತ್ತು ಕಾವ್ಯಕ್ರಿಯೆಯು ಕಲಾಕ್ರಿಯೆಯಂತೆಯೇ ಸೃಜನಾತ್ಮಕವಾದುದರಿಂದ ಬಹು ಪ್ರಾಚೀನ ಕಾಲದಿಂದ ಕಾವ್ಯರಚನೆ ಸಂಸ್ಕೃತ ಭಾಷೆಯಿಂದ ಪ್ರಾರಂಭವಾಗಿರಬೇಕು. ''ನಾನೃಷಿಃಕುರುತೇಕಾವ್ಯಮ್'' ಎಂಬುದೊಂದು ಪಡೆನುಡಿ ಜನಪ್ರಿಯವಾದುದೆ ಇದಕ್ಕೆ ಸಾಕ್ಷಿ ಎನ್ನಬಹುದು ಋಷಿಗಳು ತಪೋಬಲದಿಂದ ವೇದ ಮಂತ್ರಗಳನ್ನು ಕಂಡು ಹಿಡಿದು ಲೋಕೋಪಕಾರ ಮಾಡಿರುವಂತೆ ಕಲಾವಿದರು ಮಂತ್ರಗಳನ್ನು ಆಧರಿಸಿ ಅನೇಕ ದೇವತೆಗಳ ರೂಪ,ಆಕೃತಿ,ವೇಷ, ವಾಹನಗಳಿಂದ ಪೂರ್ಣಸ್ವರೂಪದ ದೇವತೆಯನ್ನು ಕಾಣುವಂತೆ. ಸೃಷ್ಟಿಸಿರುವಂತೆ ಅನೇಕ ಕವಿಗಳು ತಮ್ಮ ಪ್ರತಿಭಾ ವಿಶೇಷದಿಂದ ಕಾವ್ಯಗಳನ್ನು ರಚಿಸಿ ಜನತಾ ಕಲ್ಯಾಣವನ್ನು ಸಾಧಿಸುತ್ತಾರೆ. ಲೋಕೋಪಕಾರವೇ ಕಾವ್ಯದ ಗುರಿ ಮತ್ತು ಗುರುವಾಗಿತ್ತು ಎಂಬುದನ್ನು ನಾವು ಇಲ್ಲಿ ಗಮನಿಸಬೇಕು. ಹಿರಿಯ ಸಂಸ್ಕೃತ ಭಾಷಾವಿದ್ವಾಂಸರಾಗಿರುವ ಶ್ರೀ ಎಚ್.ವಿ. ನಾರಾಯಣ ಶಾಸ್ತ್ರೀಗಳವರಿಂದ ಸಂಸ್ಕೃತ

---

೧೯. ಡಾ. ಎಸ್.ಸಿ. ಪಾಟೀಲ್ , ಸತ್ಯಾನಂದ ಪಾತ್ರೋಟ (ಸಂ.) ನಿಜದ ನೆಲೆ : ಡಾ. ವೈ.ಸಿ.ಭಾನುಮತಿ ಪುಟ -೫೫

ಕರ್ನಾಟಕದ ಚಿತ್ರಕಲೆ- ಒಂದು ಅಧ್ಯಯನ

ಶ್ರೀ ಸೂಕ್ತಾರ್ಥದ ಸಾದೃಶ್ಯದ ದೇವತೆಗಳು

ಕಲಾವಿದ : ಶ್ರೀ ಜಿ.ಎಲ್.ಎನ್.ಸಿಂಹ,ಮೈಸೂರು.



ಕೃಪೆ :

ದಿ॥ಎಂ.ಬಿ.ಸಿಂಗ್ ಸಂಸ್ಥಾಪಿತ ರಾಮಸನ್ಸ್ ಕಲಾ ಪ್ರತಿಷ್ಠಾನ

ಸಂಶೋಧನೆ, ಪ್ರಶಿಕ್ಷಣ ಮತ್ತು ಕಲಾಭಿವೃದ್ಧಿ ಕೇಂದ್ರ ಮೈಸೂರು.

ಶ್ರೀ ಸೂಕ್ತಾರ್ಥ ಸಾದೃಶ್ಯದ ದೇವತೆಗಳು

ಕಲಾವಿದ : ಶ್ರೀ ಜಿ.ಎಲ್.ಎನ್.ಸಿಂಹ,ಮೈಸೂರು.



ಕೃಪೆ :

ದಿ॥ಎಂ.ಬಿ.ಸಿಂಗ್ ಸಂಸ್ಥಾಪಿತ ರಾಮಸನ್ಸ್ ಕಲಾ ಪ್ರತಿಷ್ಠಾನ
ಸಂಶೋಧನೆ, ಪ್ರಶಿಕ್ಷಣ ಮತ್ತು ಕಲಾಭಿವೃದ್ಧಿ ಕೇಂದ್ರ ಮೈಸೂರು.

ವ್ಯಾಪ್ತಿ ರೂಪ, ನಿಯಮಗಳು ಉತ್ತಮ ಕಾವ್ಯಗಳ ರಚನೆಯಾದ ಮೇಲೆಯೇ ಲಕ್ಷಣಕಾರರಿಂದ ಸಿದ್ಧವಾಗಿರಬೇಕು. ಮಹಾಕಾವ್ಯ ಅಥವಾ ಸರ್ಗಬಂಧಗಳು ದೇವತಾ ಪ್ರಾರ್ಥನೆ ಅಥವಾ ಆಶೀರ್ವಾದದಿಂದ ಪ್ರಾರಂಭವಾಗಬೇಕು ಪ್ರತಿಯೊಂದು ಸರ್ಗದ ಅಂತ್ಯ ಶ್ಲೋಕವು ಭಿನ್ನ ವೃತ್ತಗಳಲ್ಲಿರಬೇಕು. ಅಷ್ಟಾದಶ ವರ್ಣನೆಗಳಿಂದ ಕೂಡಿರಬೇಕು. ವಸ್ತು ಸಾಂಪ್ರದಾಯಿಕ ಅಥವಾ ಪ್ರಸಿದ್ಧವಾಗಿರಬಹುದು. ಪುರುಷಾರ್ಥ ಚತುಷ್ಟಾರ್ಥ ವರ್ಣನೆಗಲಿಂದ ಯುಕ್ತವಾಗಿರಬೇಕು. ಅಲಂಕಾರಗಳಿಂದ ಅಲಂಕೃತವಾಗಿರಬೇಕು. ಸಂಗ್ರಹವಲ್ಲದಿದ್ದರೂ, ಬಹು ದೀರ್ಘವಲ್ಲದ ಸರ್ಗಗಳಾಗಿ ವಿಭಾಗಿಸಲ್ಪಟ್ಟಿರಬೇಕು. ಈ ಲಕ್ಷಣಗಳಿಗೆ ಅನುಗುಣವಾಗಿ ರಚಿತವಾಗಿರುವ ಮಹಾ ಕಾವ್ಯಗಳು ಅಶ್ವಘೋಷ ಮತ್ತು ಕಾಳಿದಾಸರ ಕಾಲದವರೆಗೆ ಉಪಲಬ್ದವಾಗಿಲ್ಲ. ಆದರೂ ಮುಂದೆ ಬಂದ ಸಂಕಲಗಳ ಆಧಾರದಿಂದ ಸುಪ್ರಸಿದ್ಧ ವೈಯಾಕರಣಿಯಾದ ಪಾಣನಿಯ ''ಪಾತಾಳ ವಿಜಯ'' ಜಾಂಬುವತೀ ಪರಿಣಯ ಎಂಬ ಎರಡು ಕೃತಿಗಳನ್ನು ರಚಿಸಿರಬೇಕೆಂದು ಊಹಿಸಬಹುದಾಗಿದೆ. ಪಾಣಿನಿಯ ಸಮಕಾಲೀನನೂ ಅವನ ಅಷ್ಟಾಧ್ಯಾಯಿ ಸೂತ್ರಗಳಿಗೆ ವೃತ್ತಿಕಾರನೂ ಕಾತ್ಯಯನನೆಂಬ ಅಪರನಾಮಧ್ಯೇಯವುಳ್ಳವನೂ ಆದ ವರರುಚಿಯು ವಾರರುಚಂ ಕಾವ್ಯಂ ಎಂಬ ಮಹಾಕಾವ್ಯವನ್ನು ''ಚಾರುಮತಿ'' ಎಂಬ ಅಖ್ಯಾಯಿಕೆಯನ್ನು ರಚಿಸಿರುವಂತೆ ಪ್ರತಿತಿ ಇದೆ. ಪತಂಜಲಿಯ ಮಹಾಭಾಷ್ಯದಲ್ಲಿ ಅನೇಕ ಕಾವ್ಯ, ನಾಟಕ, ಅಖ್ಯಾಯಿಕೆಗಳ ಸೂಚನೆಯಿದೆ. ಕಾಳಿದಾಸನೇ ತನ್ನ ನಾಟಕದ ಪ್ರಾಸ್ತಾವನೆಯಲ್ಲಿ ತನಗಿಂತ ಹಿಂದೆ ಇದ್ದ ಭಾಸ, ಸೌಮಲ್ಲಾದಿಗಳ ನಾಟಕಗಳನ್ನು ಸ್ತೋತ್ರ ಮಾಡಿದ್ದಾನೆ. ಇವನ್ನೇಲ್ಲಾ ನೋಡಿದರೆ ರಾಮಾಯಣದ ಕಾಲದಿಂದ ಕಾಳಿದಾಸರ ಕಾಲದವರೆಗೆ ಕಾವ್ಯ ರಚನೆ ವಿವಿಧ ರೀತಿಯಲ್ಲಿ ಅನುಸ್ಯುತವಾಗಿ ಬೆಳೆದು ಬಂದಿರಬೇಕು. ಕಾಳಿದಾಸನ ಕಾವ್ಯ ನಾಟಕಗಳು ಪ್ರಸಿದ್ಧಿಗೆ ಬಂದ ಮೇಲೆ ಅವೆಲ್ಲ ಲಪ್ತವಾಗಿದ್ದಿರಬೇಕು.

ಸಂಸ್ಕೃತ ಸಾಹಿತ್ಯವು ಕೇವಲ ಭಾಷಾ ಸಾಹಿತ್ಯವಾಗಿರದೆ ಸಮಗ್ರ ಬದುಕಿನ ಸಾಂಸ್ಕೃತಿಕ ಸಾಹಿತ್ಯವೂ ಆಗಿದೆ. ಅನೇಕ ಸಾಂಸ್ಕೃತ ಕವಿಗಳು ತಮ್ಮ ಕಾವ್ಯಗಳಲ್ಲಿ ಕಲಾಲಕ್ಷಣಗಳನ್ನು ಲಲಿತಕಲೆಯನ್ನು ಕಲೆಯ ಅವಶ್ಯಕತೆಯನ್ನು ಕುರಿತು ಬಹುವಿಧದಲ್ಲಿ ಯೋಚಿಸಿ ಕಲಾಲೋಕಕ್ಕೆ ಬಹುದೊಡ್ಡ ಕಾಣಿಕೆಯನ್ನು ನೀಡಿದ್ದಾರೆ.

ಈ ಕುರಿತು ಹಿರಿಯ ವಿದ್ವಾಂಸರಾಗಿರುವ ವಿದ್ವಾನ್ ಎನ್.ಅನಂತ ರಂಗಾಚಾರ್ಯರ ವಿವರಣೆಯನ್ನು ಗಮನಿಬಹುದಾಗಿದೆ. ಕಲಾಕ್ಷೇತ್ರವು ವಿಸ್ತೃತ ಕ್ಷೇತ್ರ ವ್ಯಾಪ್ತಿಯಾದ ಕಲೆಯ ಕುರಿತು ಮನುಷ್ಯನಿಗೂ ಇರುವ ಸಂಬಂಧವೇನು ಅದರ ಉಗಮದಲ್ಲಿ ಎನ್ನುವ ವಿಷಯದಲ್ಲಿ ಅನೇಕ ವಿದ್ವಾಂಸರು ಬಹುಮಟ್ಟಿಗೆ ಶ್ರಮಪಟ್ಟಿದ್ದಾರೆ. ಸಂಗ್ರಹವಾಗಿ ಹೇಳುವುದಾದರೆ ಮಾನವನಿಗೂ ಶಿಲ್ಪಶಾಸ್ತ್ರಕ್ಕೂ ಬಹು ನಿಕಟವಾದ ಸಂಬಂಧವಿದೆ. ಮಾನವನು ಹುಟ್ಟಿದಂದೇ (ಶಿಲ್ಪವೂ) ಕಲಾ ಕ್ಷೇತ್ರವೂ ಹುಟ್ಟಿತ್ತೆಂದು ಹೇಳಬಹುದು. ಅಕ್ಷರ ಜ್ಞಾನವೇ ಇಲ್ಲದ ಅನಾಗರಿಕ ಜನಗಳೂ ಕೂಡ ಇದರ ಬೆಳವಣಿಗೆಗೆ ತಮ್ಮ ಕಾಣಿಕೆಯನ್ನಿತ್ತಿದ್ದಾರೆ. ವಾಸ್ತು ಶಿಲ್ಪವೂ ಮಾನವ ನಾಗರಿಕತೆಯ ಮಾನದಂಡವೆಂದು

ಮಂತ್ರಾರ್ಥ ಸಾದೃಶ್ಯದ ದೇವತೆಗಳು

ಕಲಾವಿದ : ಶ್ರೀ ಜಿ.ಎಲ್.ಎನ್.ಸಿಂಹ,ಮೈಸೂರು.



ಕೃಪೆ :

ದಿ॥ಎಂ.ಬಿ.ಸಿಂಗ್ ಸಂಸ್ಥಾಪಿತ ರಾಮಸನ್ಸ್ ಕಲಾ ಪ್ರತಿಷ್ಠಾನ
ಸಂಶೋಧನೆ, ಪ್ರಶಿಕ್ಷಣ ಮತ್ತು ಕಲಾಭಿವೃದ್ಧಿ ಕೇಂದ್ರ ಮೈಸೂರು.

ಹೇಳಬಹುದು. ಸಾಹಿತ್ಯವೂ ಹೇಗೆ ಜನಜೀವನದ ನುಡಿಗನ್ನಡಿಯೇ ಹಾಗೆಯೇ ಶಿಲ್ಪವೂ ಅದರ ಮಾನಸಿಕ ಪ್ರಗತಿಯನ್ನು ಪ್ರತಿಬಿಂಬಿಸುವ ಪಡಿಯಚ್ಚು ಭಾರತದಲ್ಲಂತೂ ಒಂದೊಂದು ಸಾಂಸ್ಕೃತಿಕ ಚಳುವಳಿಯೂ ಶಿಲ್ಪಕಲೆಗೆ ಪ್ರತ್ಯೇಕವಾದ ಕಾಣಿಕೆಯನ್ನು ಸಮರ್ಪಿಸಿಯೇ ಇದೆ. ಆಯಾ ಕಾಲದ ಜನರ ಆಸೆ ಆತಂಕಗಳೂ ಧ್ಯೇಯ ಸಾಧನೆಗಳೂ ಜೀವನಮಾರ್ಗಗಳೂ ಇಂದು ಉಳಿದುಕೊಂಡಿರುವ ಶಿಲ್ಪದ ಅವಶೇಷದಿಂದ ದೃಷ್ಟಿಗೆ ಗೋಚರವಾಗುತ್ತದೆ.[೨೦]

ಸಂಸ್ಕೃತ ಭಾಷಾಸಾಹಿತ್ಯದಲ್ಲಿ ಭಾರತೀಯ ಕಲೆಯನ್ನು ಕುರಿತು ಆಳವಾಗಿ ವಿವೇಚಿಸಲಾಗಿದೆ. ಸಂಸ್ಕೃತ ಸಾಹಿತ್ಯದಲ್ಲಿ, ಭಾರತೀಯ ಪರಂಪರೆಯಲ್ಲಿ ಶಿಲ್ಪವೇಂದರೇ ಕೇವಲ ಶಿಲ್ಪಕ್ಕೆ ಸಂಬಂಧಿತ ಮಿತಿಯಲ್ಲ. ಅದು ಚಿತ್ರಕಲೆಯನ್ನು ಒಳಗೊಂಡ ವ್ಯಾಪಕ ವಿಚಾರವಾಗಿರುತ್ತದೆ ಶಿಲ್ಪಕ್ಷೇತ್ರ ವೆಂದರೇ ಭಾರತೀಯ ಶಿಲ್ಪ ಮತ್ತು ಚಿತ್ರ ಶಾಸ್ತ್ರವೆಂದೇ ಅರ್ಥಯಿಸಿಕೊಳ್ಳಬೇಕು. ಈ ಹಿನ್ನಲೆಯೊಂದಿಗೆ ಮತ್ಸಪುರಾಣದಲ್ಲಿ ಶಿಲ್ಪ ಚಿತ್ರಕ್ಕೆ ಸಂಬಂಧಿಸಿದ ಎಂಟು ಪ್ರತ್ಯೇಕ ಅಧ್ಯಾಯಗಳಿದ್ದರೆ, ''ಅಗ್ನಿ ಪುರಾಣ''ದಲ್ಲಿ 16 ಅಧ್ಯಾಯಗಳಲ್ಲಿ ಕಲೆಯ ಕುರಿತು ಚಿಂತಿಸಲಾಗಿದೆ. ವರಾಹಮಿಹೀರನ ಬೃಹತ್ಸಂಹಿತೆಯಲ್ಲಿ ಐದು ಅಧ್ಯಾಯಗಳಿವೆ. ಮಾನಸಾರ, ಗನ್ನಮಾಚಾರ್ಯರ ಮಯಾಮತ, ಕಾಶ್ಯಪ ರಚಿತ ''ಅಂಶುಮದ್ವೇದಾಗಮ '' ವಿಶ್ವಕರ್ಮವಿರಚಿತ ''ವಿಶ್ವಕರ್ಮಪ್ರಕಾಶದೊಂದಿಗೆ ಸಂಪೂರ್ಣವಾಗಿ ದೊರೆಯಲಾರದ '' ಅಗಸ್ತ್ಯ ಸಕಲಾಧಿಕಾರ ಮತ್ತು ಸನತ್ಕುಮಾರನ ವಾಸ್ತುಶಾಸ್ತ್ರದೊಂದಿಗೆ ರಾಜವಲ್ಲಭ ಮಂಡನ ಶಿಲ್ಪ ಶಾಸ್ತ್ರ ಭೋಜನ ''ಸಮರಾಂಗಣ ಸೂತ್ರಧಾರ ಶಾಸ್ತ್ರಗಳನ್ನು, ವಾತ್ಸಾಯನನ ಕಾಮಶಾಸ್ತ್ರವನ್ನು ಇಲ್ಲಿ ಸ್ಮರಿಸಬಹುದು.''[೨೧]

ಕರ್ನಾಟಕದಲ್ಲಿ ಸಾಕಷ್ಟು ಸಂಸ್ಕೃತ ಭಾಷೆಯ ಸಚಿತ್ರ ಹಸ್ತಪ್ರತಿಗಳಿವೆ. ಮೈಸೂರು ವಿಶ್ವವಿದ್ಯಾಲಯದ ಪ್ರಾಚ್ಯ ಸಂಶೋಧನಾಲಯದಲ್ಲಿ , ಮಂಡ್ಯ ಜಿಲ್ಲೆಯ ಮೇಲುಕೋಟೆಯ ಸಂಸ್ಕೃತ ಸಂಶೋಧನಾ ಅಕಾಡಮಿ (ಎ.ಎಸ್.ಆರ್.)ಯಲ್ಲಿ ಮತ್ತು ಅದೇ ಮೇಲಿಕೋಟೆಯ ಶ್ರೀ ವೇದ ವೇದಾಂತ ಬೋಧಿನಿ ಸಂಸ್ಕೃತ ಮಹಾಪಾಠಶಾಲೆಯಲ್ಲಿ ಕೆಳದಿ ವಸ್ತು ಸಂಗ್ರಹಾಲಯ, ಗವರ್ನಮೆಂಟ್ ಓರಿಯಂಟಲ್ ರೀಸರ್ಚ್ ಇನ್‌ಸ್ಟಿಟ್ಯೂಟ್ ಮೈಸೂರು, ಕನ್ನಡ ಅಧ್ಯಯನ ಕೇಂದ್ರ ಬೆಂಗಳೂರು, ಕನ್ನಡ ವಿಭಾಗ, ಮಂಗಳೂರು ವಿಶ್ವವಿದ್ಯಾಲಯ ಮಂಗಳೂರು, ಸಂಸ್ಕೃತ ಮಾಹಾಪಾಠಶಾಲೆ ಮೈಸೂರು. ಶ್ರುತ ಕೇವಲಿ ಎಜುಕೇಶನ್ ಟ್ರಸ್ಟ್, ಶ್ರವಣಬೆಳಗೊಳದಲ್ಲಿ, ಚಾರುಕಿರ್ತಿ ಭಟ್ಟಾರಕ ಮೂಡಬಿದರೆ ಜೈನಮಠದಲ್ಲಿ ಶ್ರೀ ಜಗದ್ಗುರು ಮುರುಘ ರಾಜೇಂದ್ರ ಬ್ರಹನ್ಮಠ, ಚಿತ್ರದುರ್ಗ, ಜಗದ್ಗುರು ತೋಂಟದಾರ್ಯ ಸಂಸ್ಥಾನಮಠ, ಗದಗ, ಮೂರು ಸಾವಿರ ಮಠ,ಹುಬ್ಬಳ್ಳಿ. ನಾಗನೂರು ರುದ್ರಾಕ್ಷಿಮಠ ಬೆಳಗಾವಿ. ಬಿ.ಎಂ.ಶ್ರೀ ಪ್ರತಿಷ್ಠಾನ ಬೆಂಗಳೂರು. ಪ್ರೊ॥ಕೆ.ಬಿ.ಪಾಂಡುರಂಗಿ ಮತ್ತು ಡಾ॥ ಪ್ರಭಂಜನಾಚಾರ್ಯ ವ್ಯಾಸನಕೇರಿ ಯಂತಹವರ ಬಳಿ ವೈಯಕ್ತಿಕವಾಗಿಯೂ ಸಂಸ್ಕೃತ ಹಸ್ತಪ್ರತಿಗಳನ್ನು ಸಂಗ್ರಹಿಸಿರುವುದನ್ನು ಗಮನಿಸಬಹುದು.

೨೦. ಡಾ॥ ಸಿದ್ದಯ್ಯ ಪುರಾಣಿಕ ಪ್ರ.ಸಂ.: ಮಣಿಹ, ವಿ.ಟಿ.ಎಸ್. ರಾವ್, ಪುಟ -೪೧೬ .
೨೧. ಎನ್.ಆನಂತ ರಂಗಾಚಾರ್ : ಸಾಹಿತ್ಯ ಭಾರತಿ, ಪುಟ - ೪೫,೪೬

ಸಂಸ್ಕೃತ ಹಸ್ತಪ್ರತಿಗಳಲ್ಲಿಯ ಚಿತ್ರಗಳ ವಸ್ತು ವಿಷಯ : ಮಹಾಭಾರತದ - ವಿರಾಟಪರ್ವ , ಕರ್ನಾಟಕದಲ್ಲಿರುವ ಸಂಸ್ಕೃತ ಸಚಿತ್ರ ಹಸ್ತಪ್ರತಿಯಲ್ಲಿ ಪ್ರೊ||ಕೆ.ಬಿ.ಪಾಂಡುರಂಗಿಯವರು ಭಾಗಶಃ ಸಂಗ್ರಹಿಸಿರುವ ಮಹಾಭಾರತದ - ಸಭಾಪರ್ವದ ಕೃತಿಯೊಳಗಿನ ಚಿತ್ರಗಳು ಅತ್ಯಂತ ಮನಮೋಹಕವಾಗಿದೆ. ಶ್ರೀ ಶಕ 1591 (1669 ಎಡಿ.) ರ ಕಾಲಘಟ್ಟದಲ್ಲಿ ತಯಾರಾಗಿರುವ ಈ ಕೃತಿಯೂ 20×45 ಸೆಂ.ಮೀ. ಮತ್ತು 21×49 ಸೆಂ.ಮೀ. ಅಲತೆಯ ಕಾಗದದ ಪ್ರತಿಗಳಾಗಿವೆ. ಅವುಗಳನ್ನು ಸಂಸ್ಕೃತದ ದೇವನಾಗರಿ ಲಿಪಿಯಲ್ಲಿ ಬರೆಯಲಾಗಿದೆ. ಬೆಂಗಳೂರು ಶ್ರೀ ವಿದ್ಯಾಧೀಶ ಸಂಸ್ಕೃತ ಹಸ್ತಪ್ರತಿ ಭಂಡಾರ ಟ್ರಸ್ಟಿಯಾಗಿರುವ ಪ್ರೊ|| ಕೆ. ಟಿ. ಪಾಂಡುರಂಗಿಯವರು ಹೇಳುವಂತೆ ಅವರು ಕಲ್ಬುರ್ಗಿ ಜಿಲ್ಲೆಯ ಮಳಖೇಡದ ಪರಶುರಾಮ ಬಾಹು ಅವರ ಸಂಗ್ರಹದಲ್ಲಿ ಮಹಾಭಾರತದ ಎಲ್ಲ ಪರ್ವಗಳ ಸಂಗ್ರಹ ಇರುವುದನ್ನು ಕಂಡಿದ್ದರಂತೆ. ಒಂದೊಂದೆ ಚಿತ್ರವಿರುವ ಸಂಸ್ಕೃತ ಹಸ್ತಪ್ರತಿಯ ಉಳಿದ ಪರ್ವಗಳು ಜಗತ್ತಿನಾದ್ಯಂತ ಇರುವ ವೈಯುಕ್ತಿಕ ಸಂಗ್ರಹಣೆಯ ವಸ್ತು ಸಂಗ್ರಹಾಲಯಗಳಿಗೆ ಚದುರಿ ಹೋಗಿವೆ. ಅವುಗಳಲ್ಲಿ ಪ್ರಸಿದ್ಧವಾದಂತ ಜಗದೀಶ ಮತ್ತು ಕಮಲಾ ಮಿತ್ತಲ ಅವರ ಮೂಸಿಯಂ ಇಂಡಿಯನ್ ಆರ್ಟ್, ಹೈದ್ರಾಬಾದ್‌ಗೆ, ಹೊಸದೆಹಲಿಗೆ, ದಿನೇಶನ್-ನಟೇಸನ್ ಸಂಗ್ರಹಕರು, ಬೆಂಗಳೂರು, ಗುಲಬೇನ್‌ಕಿಯಾನ್ (Gulbenkian) ಸಂಗ್ರಹಾಲಯ ದುರ್ಹಾಮ್. ದಿ.ಪ್ರರ್ ಗೆಲ್ಲರಿ ಆಫ್ ಆರ್ಟ್, ವಾಸಿಂಗಟನ್, ದಿ.ಬ್ರೂಕ್‌ಲನ್ (Brooklyn) ಮ್ಯಿಸಿಯಂ ಆಫ್ ಆರ್ಟ್ ನ್ಯೂ-ಯಾರ್ಕ. ಮತ್ತು ಆರ್ಟ್ ಮ್ಯೂಸಿಯಂ ಸಾನ್-ಡಿಗೋ (San-Diego) ದಂತಹುಗಳನ್ನು ಹೆಸರಿದಬಹುದು.

ಈ ಸಚಿತ್ರ ಹಸ್ತಪ್ರತಿಯ ಪುಷ್ಟಿಕೆಯ (Colophon) ಹೇಳಿಕೆಯಂತೆ ಖಲಿತಗ್ರಾಮ ನಿವಾಸಿ ಯಾಗಿರುವ ರತ್ನಾಕರನ ಮಗ ಗೋವಿಂದಶರ್ಮನು ಈ ಕೃತಿಯ ಲಿಪಿಕಾರನಾಗಿದ್ದಾನೆ. ಈ ಹಸ್ತಪ್ರತಿಯಲ್ಲಿಯೇ ಎರಡು ವ್ಯಕ್ತಿಗಳ ಚಿತ್ರಗಳಿವೆ. ಅವುಗಳ ಅಡಿಯಲ್ಲಿ ಲಿಪಿಗಳಿದ್ದು ಒಂದು ಈ ಹಸ್ತಪ್ರತಿಗೆ ಪೋಷಕನಾಗಿ ಪ್ರೋತ್ಸಾಹ ನೀಡಿದ ಧ್ಯಾನ-ನಟರಾಜ-ತಿಮ್ಮಾಜಿ ಪಂಡಿತನದಾದರೆ ಮತ್ತೊಂದು ಐತಿಹ ಪುರುಷ ವೇದವ್ಯಾಸರದು ಆಗಿದೆ. ಈ ಸಚಿತ್ರ ಹಸ್ತಪ್ರತಿಗಳಲ್ಲಿ ಈ ಪ್ರತಿಯೂ ತುಂಬಾ ಭಿನ್ನವಾಗಿದ್ದು ಬಹುಶಃ ಕಾಲಾನಂತರ ಈ ಕಟ್ಟಿನಲ್ಲಿ ಹೇಗೊ ಸೇರ್ಪಡೆಯಾದ ಪ್ರತಿಯಾಗಿರಬಹುದು. ೨೨

ಕರ್ನಾಟಕದ ಸಂಸ್ಕೃತ ಮಹಾಭಾರತದ ರಚನೆ (ಕ್ರಿ.ಶ.1669) ಯ ನಂತರ ದೊರೆತಿರುವ ಜೈಮಿನಿಯ ಭಾರತವು ಸುಮಾರು 150 ವರ್ಷಗಳಷ್ಟು ಹಳೆಯದಾಗಿದೆ. ಪುಷ್ಟಿಕೆಯ ಆದಾರದಿಂದ ಅದರ ಕಾಲವನ್ನು ಕ್ರಿ.ಶ.1819 ಎಂದು ಗುರುತಿಸಲಾಗಿದೆ. ಈ ಕೃತಿಯನ್ನು ಮುಮ್ಮಡಿ ಕೃಷ್ಣರಾಜ ಒಡೆಯರಿಗಾಗಿ ಮೈಸೂರಿನಲ್ಲಿ ರಚಿಸಲಾಗಿದೆ. ಇದರ ಲಿಪಿ ಸಂಸ್ಕೃತವಾಗಿದ್ದು ಇದನ್ನು ಜೈಮಿನಿ ಭಾರತವೆಂದು ಕರೆಯಲಾಗಿದೆ. ಈ ಗ್ರಂಥವು ಪರಿಷ್ಕೃತ (Recension) ಗ್ರಂಥವಾಗಿದೆ.

೨೨.ಎನ್.ಆನಂತ ರಂಗಾಚಾರ್ : ಸಾಹಿತ್ಯ ಭಾರತಿ, ಪುಟ - ೪೫,೪೬

ಕರ್ನಾಟಕದ ಸಂಸ್ಕೃತ ಹಸ್ತ ಪ್ರತಿಗಳಲ್ಲಿ ವರ್ಣ ಚಿತ್ರಗಳು

ಕರ್ನಾಟಕದ ಹಸ್ತಪ್ರತಿ ಚಿತ್ರಕಲೆ- ಒಂದು ಅಧ್ಯಯನ



ಕೃಪೆ:

ದ್ವೈತ ವೇದಾಂತ ಅಧ್ಯಯನ ಮತ್ತು ಸಂಶೋಧನಾ ಪ್ರತಿಷ್ಠಾನ, ಬೆಂಗಳೂರು.

ವಿಶೇಷ ಸಂಚಿಕೆ Vol-VII-2003

ಇದರಲ್ಲಿಯ ಅಶ್ವಮೇಧ ಪರ್ವವು 68 ಆಖ್ಯಾಯಿಕೆಗಳನ್ನು ಹೊಂದಿದೆ. ಮಹಾಭಾರತದ 1-65 ಪಾಠ89-90ರಂತೆ ಮಹಾ ಋಷಿ ವೇದಾವ್ಯಾಸರು ಮಹಾಭಾರತವನ್ನು ತಮ್ಮ ಶಿಷ್ಯಂದಿರಾದ ಸುಮಂತು, ಜೈಮಿನಿ, ಪೈಲ, ವೈಶಂಪಾಯನರಲ್ಲದೇ ಅವರ ಮಗ ಶುಕದೇವನಿಗೂ ಹೇಳಿದರಂತೆ ಈ ಐದು ಜನರು ಮಹಾಭಾರತವನ್ನು ರಚಿಸಿದರಂತೆ ಅವುಗಳಲ್ಲಿ ಈ ಗ್ರಂಥ ಜೈಮಿನಿಯ ಭಾರತವು ಒಂದಾಗಿದೆ. ಇದನ್ನು ತಿಳಿ ಹಳದಿ ಬಣ್ಣದ ಯುರೋಪದ 'S' ಅಂಕಿತವಿರುವ ವೈಸ ಮತ್ತು ಪಾಟ್ಚ 1806 (Wise and Patch) ಎಂಬ ಕಾಗದದ ಮೇಲೆ ದೇವನಾಗರಿ (ಸಂಸ್ಕೃತ) ಲಿಪಿಯಲ್ಲಿ ಬರೆಯಲಾಗಿದೆ. ಕಾಗದದ ಪ್ರತಿಯ ಅಳತೆ 42.5 × 18.5 ಸೇ.ಮೀ.ನಷ್ಟಿದೆ. 192ನೆ ಪುಟದಲ್ಲಿಯ ಪುಷ್ಪಿಕೆಯಂತೆ ಈ ಗ್ರಂಥವನ್ನು ಶಾಲಿವಾಹನ ಶಕೆ 1636 (ಕ್ರಿ.ಶ.1814-15) ಯಲ್ಲಿ ರಚನೆಗೊಂಡಿದೆ. ರಾಘವೇಂದ್ರನು ಕೃತಿಯ ಲಿಪಿಕಾರನಾಗಿದ್ದು ದಿವಾನ್ ರಾಮರಾಯನು ಈ ಹಸ್ತಪ್ರತಿಯ ಪೋಷಕನಾಗಿದ್ದಾನೆ.

ದಿವಾನ್ ರಾಮರಾಯನನ್ನು ಸವಾರ ಭಕ್ಷಿ ರಾಮರಾವ್ ಎಂದೂ ಗುರುತಿಸುತ್ತಾರೆ. ಆತನ ಮೈಸೂರು ಅರಮನೆಯ ಪೌಜುದಾರನು ಆಗಿದ್ದನು. ಆತನ ಸಮರ ಶೌರ್ಯವನ್ನು ಗುರುತಿಸಿದ್ದ ಮುಮ್ಮಡಿ ಕೃಷ್ಣರಾಜ ಒಡೆಯರು ಆತನನ್ನು ಹಲವು ಸಲ ಅನೇಕ ಪದಕ, ಬಿರುದುಗಳನ್ನು ನೀಡಿ ಸನ್ಮಾನಿಸಿದ್ದಾರಲ್ಲದೆ ಅಂಬಾರಿ (Howdah)ಯೊಂದಿಗೆ ಆನೆಯನ್ನು ಸನ್ಮಾನದ ರೂಪದಲ್ಲಿ ನೀಡಿದ್ದರಂತೆ . ಕ್ರಿ.ಶ. 1812 ರಿಂದ ಕ್ರಿ.ಶ. 1825ರ ವರೆಗಿನ ಕಾಲವಧಿಯಲ್ಲಿಯ ಬೇರೆ ಬೇರೆ ಸಂದರ್ಭಗಳಲ್ಲಿ ಆತನಿಗೆ ಮೂರು ಸಲ ದಿವಾನ್ ಪದವಿಯನ್ನು ವಹಿಸಲಾಗಿತ್ತು.

ಈ ಸಂಸ್ಕೃತದ ಹಸ್ತ ಪ್ರತಿಯಲ್ಲಿ ಮೂವತ್ತೊಂದು ಚಿತ್ರಗಳಿದ್ದು. ಅವುಗಳಲ್ಲಿ ಹದಿಮೂರು ಪೂರ್ಣಗೊಂಡಿಲ್ಲ. ಪ್ರತಿಯೊಂದು ಚಿತ್ರಗಳೂ ಪತ್ಯದ ಸಾದೃಶ್ಯಕೆಗಳಂತಿವೆ. ಚಿತ್ರಗಳ ಶೈಲಿಯು ಒಂದೇ ಶೈಲಿಗೆ ನಿಗದಿತಗೊಳ್ಳದೆ ಹಳತು, ಹೊಸತು ಭೇದವಿರದೇ ಸಾರವನ್ನು ಸಂಗ್ರಹಿಸುವ (Electire)ಪದ್ಧತಿಯನ್ನು ಕಲಾವಿದ ಅಥವಾ ಕಲಾವಿದರು ಅನುಸರಿಸಿದ್ದಾರೆ. ವಿಶೇಷವೆಂದರೆ ಪ್ರಾರಂಭಿಕ ಹತ್ತೊಂಭತ್ತನೆಯ ಶತಮಾನದ ಮೈಸೂರು ಅರಮನೆಯ ಶಿಷ್ಟ ಕ್ರಮವನ್ನು ಅನುಸರಿಸದೆ ಜಾನಪದ ಶೈಲಿಯಲ್ಲಿ ಕೃತಿ ರಚಿಸಿರುವುದು ಗಮನಾರ್ಹವಾಗಿದೆ. [೨೩]

ಭಾಗವತ ಪುರಾಣ : ಇದೊಂದು ಸುರಳಿ ಪಟ (Scroll)ಚಿತ್ರವಾಗಿದ್ದು ಜೈಮಿನಿ ಭಾರತದ ಪ್ರಬಾವ ಮತ್ತು ಆ ಕಾಲದಲ್ಲಿಯೇ ಸಿದ್ಧಗೊಂಡ ಕಲಾಕೃತಿಯ ಓರಿಸ್ಸಾದ ಪಟಾವುದಂತಹ ಚಿತ್ರ ಸುರಳಿಯಾಗಿದೆ. ಶಾಲಿವಾಹನ ಶಕೆ 1736 ಅಥವಾ ಕ್ರಿ.ಶ.1814ರಲ್ಲಿ ಮೈಸೂರು ಅರಮನೆಯ ಪೋಷಕರಿಂದ ಮತ್ತು ಅರಮನೆಯ ಅರಸರಿಂದಲೇ ಸಿದ್ದಗೊಂಡ ಜೈಮಿನಿ ಭಾರತದ ಸಮಾಕಾಲೀನ ಕಲಾಕೃತಿಯ ಸಂಪುಟವಾಗಿದೆ. 17 ಸೇ.ಮೀ.ಅಗಲ 273 ಸೇ.ಮೀ.ಉದ್ದದ ಈ ಕೃತಿಯು

---

೨೩. ಪ್ರೊ. ಕೆ.ಟಿ. ಪಾಂಡುರಂಗಿಯವರೊಂದಿಗಿನ ಸಂದರ್ಶನ.

ಭಾಗವತದ ವರ್ಣ ಚಿತ್ರಗಳು

ಕಲಾವಿದರು : ಸಂತ ಕಲಾವಿದ ಶುಭರಾಯ







ಕೃಪೆ :

ಸಂ॥ಪಿ. ಆರ್. ತಿಪ್ಪೇಸ್ವಾಮಿ ಮತ್ತು ಅ. ಲ. ನರಸಿಂಹನ್.

ಕರ್ನಾಟಕ ಲಲಿತ ಕಲಾ ಅಕಾಡಮಿ, ಬೆಂಗಳೂರು.

ಅಪೂರ್ಣಗೊಂಡ ಕೃತಿಯಾಗಿದೆ.

ಈ ಸುರಳಿ ಚಿತ್ರವನ್ನು ಮಹಾರಾಜ ಮುಮ್ಮಡಿ ಕೃಷ್ಣರಾಜ ಒಡೆಯರ ಸಮೀಪ ಸಂಬಂಧಿಯಾಗಿರುವ ಅರಮನೆಯ ಮಹಿಳೆಯೋರ್ವರು ಪೋಷಕರಾಗಿದ್ದರಂತೆ. ಮಹಾರಾಜರ ತಾಯಿಯವರೆ ಆಗಿರಬಹುದೆಂದು ಕೆಲವರ ವಿಚಾರ ಭಾಗವತ ಪುರಾಣದಲ್ಲಿಯ ಶ್ರೀ ಕೃಷ್ಣನ ಚರಿತ್ರೆಯಂತೆ ತಮ್ಮ ರಾಜಕುಮಾರನ ಚರಿತೆ ನಿರ್ಮಾಣವಾಗಬೇಕೆಂಬುದು ಅವರ ಆಕಾಂಕ್ಷೆಯಾಗಿತ್ತು. ಈ ಕೃತಿಯ ಪ್ರಾರಂಭದಲ್ಲಿ ಶ್ರೀ ಗಣೇಶ, ಲಕ್ಷ್ಮೀ ಮತ್ತು ಸರಸ್ವತಿಯರ ಚಿತ್ರಗಳಿದ್ದು ವೇದವ್ಯಾಸರ ಮಗ ಶುಕದೇವನು ಮಹಾಭಾರತವನ್ನು ಪಾಂಡವರ ಕೊನೆಯ ಅರಸು ಪರೀಕ್ಷಿತನಿಗೆ ವಿವರಿಸುವಂತೆ ಕೃತಿಯು ಪ್ರಾರಂಭಗೊಳ್ಳುತ್ತದೆ.

ಜೈಮಿನಿ ಭಾರತದ ಹಸ್ತ ಪ್ರತಿಯೊಳಗಿನ ಚಿತ್ರಗಳಿಗಿಂತಲೂ ಮಿಗಿಲಾಗಿ ಈ ಸುರಳಿಪಟದಲ್ಲಿಯ ಚಿತ್ರಗಳು ಮೋಹಕವಾಗಿವೆ. ಸುಧಾರಿಸಲ್ಪಟ್ಟಿವೆ. ಪ್ರತಿಚಿತ್ರದಲ್ಲು ನೈಸರ್ಗಿಕ ಚೈತನ್ಯವು ಹರಡಿಕೊಂಡಿದೆ. ಹಳದಿ, ಕೆಂಪು, ನೀಲಿ, ಬಂಗಾರದ ರೇಖು (Gold leaf) ಮತ್ತು ಹಸಿರನ್ನು ಹಳದಿ ಮತ್ತು ನೀಲಿಯೊಂದಿಗೆ ಬಳಸಿರುವುದಲ್ಲದೆ ಒಂದರ ಪಕ್ಕದಲ್ಲಿ ಮತ್ತೊಂದು ವ್ಯವಸ್ಥಿತ ರಿತಿಯಲ್ಲಿ ಯಾರ ನೆರವಿರದೇ ನೇರವಾಗಿ ಪಥ್ಯವನ್ನು ಸಾದೃಶ್ಯಗೊಳಿಸಿರುವ ಕಲಾವಿದರ ಘನತೆಗೆ ತಂದಿರುವ ಘನತೆಯಂತಿದೆ.[೨೪]

ಮೇಲುಕೋಟೆಯ ಶ್ರೀ ಚೆಲುವನಾರಾಯಣ ಸ್ವಾಮಿಯ ದೇವಸ್ಥಾನದ ವೇದ ವೇದಾಂತ ಬೋಧಿನಿ ಸಂಸ್ಕೃತ ಮಹಾಪಾಠಶಾಲೆಯಲ್ಲಿ ಸಚಿತ್ರ ಹಸ್ತಪ್ರತಿ ಕಲೆಗೆ ಸಂಬಂಧಿಸಿದ ಈ ಕೆಳಗೆ ವಿವರಿಸಿರುವ ಸಂಸ್ಕೃತ ಗ್ರಂಥಗಳಿದ್ದು ಅವು ಈ ರೀತಿಯಲ್ಲಿ ಇವೆ :

1. ಚಿತ್ರ ಮೀಮಾಂಸೆ : ಗ್ರಂಥ ಸಂಖ್ಯೆ (525-8) ರಸ,ಧ್ವನಿ, ವಿಚಾರಗಳನ್ನೊಳಗೊಂಡ ಲಕ್ಷಣ ಕಾವ್ಯ
2. ಚಿತ್ರಪಟ ಮೀಮಾಂಸೆ ಗ್ರಂಥ ಸಂಖ್ಯೆ (528-9)ಮೀಮಾಂಸ ಸೂತ್ರ ವಿವರಣೆ
3. ವಾರಿತ್ರ ರಹಸ್ಯ ಗ್ರಂಥ ಸಂಖ್ಯೆ (463-5) ಮುಕ್ತಿ ರಹಸ್ಯ ವಿಚಾರ
4. ಸಾಲಿಗ್ರಾಮ ಗ್ರಂಥ ಸಂಖ್ಯೆ (482-5)ಸಾಲಿಗ್ರಾಮ ಮೂರ್ತಿ ವಿಚಾರ
5. ಪಾದಚರಿತ್ರಾಂ ಗ್ರಂಥ ಸಂಖ್ಯೆ (42-11)
6. ಕಲಾಮೃತ ವ್ಯಾಖ್ಯಾನ ಗ್ರಂಥ ಸಂಖ್ಯೆ (593-7) ಮೇಷಾದಿ ರಾಶಿಚಕ್ರಗಳ ಸ್ವರೂಪ, ರೂಪ, ಚಲನಗಳ ಸಮೀಕ್ಷೆ
7. ಪೆರುಮಾಳ್-ತಿರುಮೋಳಿ ಗ್ರಂಥ ಸಂಖ್ಯೆ (681-194)ಶ್ರೀರಾಮಾವತಾರದ ವೈಭವ, ದಿವ್ಯ ಮಂಗಳ ವಿಗ್ರಹದ ಸೌಂದರ್ಯದ ವಿವರ
8. ಮಂತ್ರ ರಹಸ್ಯ ಗ್ರಂಥ ಸಂಖ್ಯೆ (563-2)ಮುಕ್ತಿ ರಹಸ್ಯ

೨೪. Shivpriyanand : Marg Vol - V.

3. ಚಿತ್ರಕಲೆಯ ಉಲ್ಲೇಖ ಹೊಂದಿದ ಕನ್ನಡ ಭಾಷೆಯ ಹಸ್ತಪ್ರತಿಗಳು.

ಕರ್ನಾಟಕದಲ್ಲಿಯ ಪ್ರಾಕೃತ, ಸಂಸ್ಕೃತ ಮತ್ತು ಅನ್ಯ ದೇಶೀಯ ಹಸ್ತಪ್ರತಿಗಳಿಗೆ ಹೊರತಾಗಿ ಈ ನೆಲದ ಭಾಷೆಯಲ್ಲಿ ರಚಿತಗೊಂಡಿರುವ ಕನ್ನಡದ ಹಸ್ತಪ್ರತಿಗಳು ಬಹಳಷ್ಟು ಅಧ್ಯಯನಕ್ಕೆ ಒಳಪಟ್ಟಿವೆ. ಕನ್ನಡದ ಹಸ್ತಪ್ರತಿಗಳಲ್ಲಿ ಅಮೋಘವಾದ ಚಿತ್ರಗಳು ಇದ್ದು ಕನ್ನಡೇತರ ಭಾಷೆಗಳ ಹಸ್ತಪ್ರತಿಗಳಿಗೆ ಸರಿಮಿಗಿಲೇರಿಸುವಂತಿವೆ. ಕನ್ನಡದ ಭೀಮಕವಿಯ ಬಸವ ಪುರಾಣವು ಕನ್ನಡದ ಹಸ್ತಪ್ರತಿಯಲ್ಲಿಯೇ ಅತ್ಯಂತ ಉತ್ಕೃಷ್ಟವಾದುದು ಮೈಸೂರ ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಸಂಸ್ಥೆಯ ಹಸ್ತಪ್ರತಿ ಭಂಡಾರದಲ್ಲಿದೆ. ಭೀಮಕವಿ ಕಾವ್ಯವು ಬಸವಣ್ಣನವರ ಸಾಮಾಜಿಕ ಕ್ರಾಂತಿಯ ವಿಷಯವನ್ನು ಒಳಗೊಂಡಂತೆ ಇದರೊಳಗೆ ಚಿತ್ರಗಳಿಗೂ ಕೂಡ ಕಲಾವಿದರು ಬಹುವಾಗಿ ಸ್ಪಂದಿಸಿದ್ದಾರೆ. ಗುಡಿ ಸಂಸ್ಕೃತಿಯನ್ನು ತಿರಸ್ಕರಿಸುವ ಬಸವ ತತ್ವದಂತೆ ಕಲಾವಿದನು ಗುಡಿಸಂಸ್ಕೃತಿಗೆ ವಿಮುಖವಾದ ಚಿತ್ರಗಳನ್ನು ರಚಿಸಿದ್ದಾನೆ. ಈ ಹಸ್ತಪ್ರತಿಗಳಲ್ಲಿ ಒಳಗಿರುವ ವಿಷಯಗಳಂತೆ ಹಸ್ತಪ್ರತಿಗಳ ಅಂಚುಗಳಲ್ಲೂ ನುತ್ತು ಫಲಕಗಳ ಮೇಲಿನ ಚಿತ್ರಗಳಿಗೂ ಅತ್ಯುತ್ತಮವಾಗಿವೆ.

ಇದರಂತೆ ಈ ಸಂಸ್ಥೆಯಲ್ಲಿರುವ ಸೌಗಂಧಿಕಾ ಪರಿಣಯ ಅಶ್ವಶಾಸ್ತ್ರ ಮನೋರಂಜನಾ ಹಸ್ತಪ್ರತಿಗಳು ಕ್ರೀಡಾ ಹಸ್ತಪ್ರತಿಗಳು, ಅಕ್ಷರ ವಿನ್ಯಾಸ ಹಸ್ತಪ್ರತಿಗಳು ಬೆಳ್ಳಿಯ ಅಣಸುಗಳನ್ನು ಹಾಕಿಸಿಕೊಂಡಿರುವ ಕುಮಾರವ್ಯಾಸ ಭಾರತದಂತಹ ಕನ್ನಡದ ಹಸ್ತಪ್ರತಿಗಳು ಮೈಸೂರ ಹಸ್ತಪ್ರತಿ ಬಂಡಾರದಲ್ಲಿರುವಂತೆ ಮೈಸೂರ ಪ್ರಾಚ್ಯ ಸಂಶೋಧನಾಲಯದಲ್ಲೂ ಕೂಡ ಅನೇಕ ಹಸ್ತಪ್ರತಿಗಳಿವೆ. ಮುಮ್ಮಡಿ ಕೃಷ್ಣರಾಜ ಒಡೆಯರ ತತ್ವನಿಧಿಯ 9 ನಿಧಿಗಳು ಮತ್ತು ಅನೇಕ ಸಂಸ್ಕೃತ ಹಸ್ತಪ್ರತಿಗಳು ಈ ಹಸ್ತಪ್ರತಿ ಬಂಡಾರದಲ್ಲಿದೆ. ಇಂತಹುದೇ ಮತ್ತೊಂದು ಕನ್ನಡದ ಸಚಿತ್ರ ಹಸ್ತಪ್ರತಿ ಎಂದರೆ ಕರ್ನಾಟಕ ವಿಶ್ವವಿದ್ಯಾಲಯದ ಸಿದ್ದನಂಜೇಶನು ರಾಘವಾಂಕರ ಚರಿತ್ರೆಯಲ್ಲಿ ಪುರಾಣದ ಪಟ್ಟಿ ವಿಷಯ ಇರುವಂತೆ ಈ ಪಟ್ಟಕ್ಕೆ ಸರಿಯಾಗಿ ರಚಿಸಿದ ಅನೇಕ ರೇಖಾಕೃತಿಗಳು ಈ ಹಸ್ತಪ್ರತಿಯಲ್ಲಿವೆ. ಪ್ರಭುದೇವ, ಸಿದ್ದರಾಮ, ರಾಘವಾಂಕ, ಹರಿಹರ, ಚಿಕ್ಕನಂಜಾರ್ಯ, ಚನ್ನವಿರಾಂಬಿಕೆ, ಕೆರೆಯ ಪದ್ಮರಸ ರಂತಹ ಅನೇಕ ವ್ಯಕ್ತಿಗಳ ಚಿತ್ರಗಳು ಇದರಲ್ಲಿವೆ.

ಹಸ್ತಪ್ರತಿಯಲ್ಲಿ ವಿನೂತನವಾದ ಹಸ್ತಪ್ರತಿ ವೃಷಭ ವಿಲಾಸ ನಂಜುಂಡಕವಿ ರಚಿಸಿದ ಈ ಕೃತಿಯು ಬಸವಣ್ಣನ ಜೀವನಕ್ಕೆ ಸಂಬಂಧಪಟ್ಟಂತಾಗಿದೆ. ಪತ್ಯದ ಮಾದರಿ ಯಕ್ಷಗಾನದ ಜಾನಪದ ಶೈಲಿಯ ವಿಧಾನವನ್ನು ಒಳಗೊಂಡಿದ್ದರೂ ಈ ಕೃತಿಗೆ ಬರೆದಂತಹ ಚಿತ್ರವೂ ಅತ್ಯಂತ ಸೃಷ್ಠಿ ಸಂಪ್ರದಾಯಬದ್ಧವಾಗಿವೆ. ಬಸವಣ್ಣನವರಿಗೆ ಮೀಸಲಾಗಿಟ್ಟಿರುವ ಈ ಕೃತಿಯಲ್ಲಿ ಅನೇಕ ಚಿತ್ರಗಳಿವೆ. ಈ ರೀತಿಯಾಗಿ ಕರ್ನಾಟಕದಾದ್ಯಂತ ಇರುವ ಅನೇಕ ಹಸ್ತಪ್ರತಿ ಬಂಢಾರಗಳಲ್ಲಿ ಕನ್ನಡದ ಹಸ್ತಪ್ರತಿಗಳಿವೆ. ಇನ್ನೂ ಕೆಲವು ವಯಕ್ತಿಕ ಸಂಗ್ರಹಣೆಯ ಕಾರಣದಿಂದಾಗಿಯೂ ಅನೇಕ ಹವ್ಯಾಸಿ ಸಂಗ್ರಹಕಾರರಲ್ಲಿಯೂ ಕನ್ನಡದ ಹಸ್ತಪ್ರತಿಗಳು ಉಳಿದುಕೊಂಡಿವೆ. ಇವುಗಳೊಳಗಿರುವ ಚಿತ್ರಗಳನ್ನು ಕುರಿತು ವ್ಯಾಪಕವಾದ ಅಧ್ಯಯನವು ನಡೆಯಬೇಕಾಗಿದೆ. ಅದಕ್ಕಿಂತಲೂ ಮಿಗಿಲಾಗಿ ಕರ್ನಾಟಕದ

ವಿವಿಧ ಪ್ರದೇಶವನ್ನು ಪ್ರತಿನಿಧಿಸುವ ಎಲ್ಲ ವಿಶ್ವವಿದ್ಯಾಲಯಗಳು ತಮ್ಮ ಪ್ರಾದೇಶಿಕವಾದ ಸಚಿತ್ರ ಹಸ್ತಪ್ರತಿಯ ವರ್ಣನಾತ್ಮ ಸೂಚಿಯನ್ನು ರಚಿಸಬೇಕಾಗಿದೆ. ಡಾ. ಬಿ.ಕೆ.ಹಿರೇಮಠರು, ಡಾ.ಬಿ.ಆರ್.ಹಿರೇಮಠರು, ಡಾ. ಎಫ್.ಟಿ.ಹಳ್ಳಿಕೇರಿ ಡಾ. ಕೆ. ರವಿಂದ್ರನಾಥ, ಡಾ. ಎಸ್.ಸಿ.ಪಾಟೀಲರು, ಡಾ. ವಿರೇಶ ಬಡಿಗೇರರಂತಹ ಅನೇಕ ಮಹನಿಯರು ಕನ್ನಡದ ಹಸ್ತಪ್ರತಿಗಳ ಕುರಿತು ವಿಶೇಷವಾದ ಅಧ್ಯಯನವನ್ನೇ ಮಾಡಿರುವ ಕಾರಣಕ್ಕಾಗಿ ಕರ್ನಾಟಕದಲ್ಲಿರುವ ಕನ್ನಡೇತರ ಹಸ್ತಪ್ರತಿಗಳನ್ನು ಇಲ್ಲಿ ಅಧ್ಯಯನಕ್ಕೆ ಒಳಪಡಿಸಲಾಗಿದೆ.

4. ಚಿತ್ರಕಲೆಯ ಉಲ್ಲೇಖ ಹೊಂದಿದ ಅನ್ಯದೇಶಿಯ ಹಸ್ತಪ್ರತಿಗಳು

ಪ್ರೀತಿ ಮತ್ತು ಆತ್ಮೀಯತೆಗೆ ಹತ್ತಿರವಾಗುವ ಬಿಜಾಪುರದ ದಖನಿ ಹಸ್ತಪ್ರತಿಯ ಚಿತ್ರಗಳು ಕ್ರಿಸ್ತ ಶಕ ಪೂರ್ವ ಮೂರನೇಯ ಶತಮಾನದಲ್ಲಿ ಚಂದ್ರಗುಪ್ತ ಮೌರ್ಯ ಸಾಮ್ರಾಜ್ಯವನ್ನು ಸ್ಥಾಪಿಸಿ ಕಾರಣಾಂತರಗಳಿಂದ ಕನ್ನಡ ನಾಡಿನ ಶ್ರವಣಬೆಳಗೊಳದಲ್ಲಿಯ ಚಂದ್ರಗಿರಿ ಬೆಟ್ಟಕ್ಕೆ ಒಂದು ನೆಲೆಸುವುದರಿಂದ ಕರ್ನಾಟಕದ ಇತಿಹಾಸವನ್ನು ಪ್ರಾರಂಭಿಸಿದಂತೆ, ಕಾರಾಣಾಂತರಗಳಿಂದ ಭಾರತದ ದಕ್ಷಿಣ ಪ್ರದೇಶಕ್ಕೆ ಬಂದು ತಮ್ಮದೇ ಆದ ಉದಾರತೆ, ಪ್ರೊತ್ಸಾಹ, ಪೋಷಣೆಗಳಿಂದ ಇಂದಿನ ಮಹಾರಾಷ್ಟ್ರ, ಕರ್ನಾಟಕ ಮತ್ತು ಆಂದ್ರಪ್ರದೇಶಗಳಲ್ಲಿ ತಮ್ಮದೇ ಆದ ಸಂಸ್ಕೃತಿಯೊಂದಿಗೆ "ದಖನಿ-ಚಿತ್ರಕಲೆಯನ್ನು" ಬೆಳೆಯಿಸಿದ ಕೀರ್ತಿ ಈ ಭಾಗವನ್ನು ಆಳಿದ ಆದಿಲ್ ಶಾಹಿ ದೊರೆಗಳಿಗೆ ಸಲ್ಲುತ್ತಿದೆ.

ಮುಸ್ಲಿಂ ದೊರೆಗಳ ಪ್ರೋತ್ಸಾಹದಲ್ಲಿ ಅರಳಿಬೆಳೆದು ನಿಂತಿರುವ ದಖನಿ ಚಿತ್ರಕಲೆಯ ಬಗೆಗೆ ಐತಿಹಾಸಿಕ ಅಧ್ಯಯನ ಮಾಡಿರುವ ಡಾ. ಎಸ್.ಕೆ.ಅರುಣಿಯವರು ಕೃತಿಯಾದ "ದಖನಿ - ಚಿತ್ರಕಲೆ"ಯ ಗ್ರಂಥದಲ್ಲಿ ಈ ಹೇಳಿಕೊಂಡಿದ್ದಾರೆ. " ನಾಡಿನ ಚಿತ್ರಕಲೆಯಲ್ಲಿ ವಿಶಿಷ್ಠ ಸ್ಥಾನಗಳಿಸಿರುವ ದಖನಿ ಚಿತ್ರಕಲೆಯ ಪರಿಚಯದ ಕೃತಿ ಇದು. ದಖನ್ ಸುಲ್ತಾನರಿಂದ (ಕ್ರಿ.ಶ.1347) ಬ್ರಿಟೀಷ್ ಸರಕಾರದ (ಕ್ರಿ.ಶ.1900) ಕಾಲದ ವರೆಗೆ ದಖನ್ನದಲ್ಲಿ ಬೆಳೆದು ಬಂದ ಚಿತ್ರಕಲೆಯು ಇತಿಹಾಸವನ್ನು ಇಲ್ಲಿ ಹೇಳಲು ಪ್ರಯತ್ನಸಿಲಾಗಿದೆ. ಮಧ್ಯಕಾಲೀನ ಭಾರತೀಯ ಚಿತ್ರಕಲೆಯಲ್ಲಿ ಉತ್ತರ ಭಾರತದ ಮೋಘಲ ಚಿತ್ರಕಲೆಯ ಒಂದು ಪ್ರಾದೇಶಿಕ ಶೈಲಿಯೆಂದು ಕೆಲವು ವಿದ್ವಾಂಸರು ಅಭಿಪ್ರಾಯ ಪಟ್ಟಿದ್ದಾರೆ. ಆದರೆ ದಖನಿ ಚಿತ್ರಕಲೆ ಒಂದು ಸ್ವತಂತ್ರಕಲೆ. ಇದು ಪರ್ಷಿಯಾ, ಟರ್ಕಿ ಹಾಗೂ ಸ್ಥಳೀಯ ಸಾಂಪ್ರಾದಾಯಿಕ ಶೈಲಿಗಳೊಂದಿಗೆ ಬೆಳೆದು ಬಂದಿದೆ. ಉತ್ತರ ಭಾರತದ ಮೊಘಲ ಅಥವಾ ರಜಪೂತ ಚಿತ್ರಗಳಂತೆ ವಾಸ್ತವಿಕ ಘಟನೆಗಳನ್ನು ಯಥಾವತ್ತಾಗಿ ಚಿತ್ರಿಸುವ ಸಂಪ್ರದಾಯದಿಂದ ಕೂಡಿದೆ. ಕವಿಯ ಕಲ್ಪನೆಯಂತೆ ಭಾವನಾತ್ಮಕ ವಿಷಯಗಳನ್ನು ಆಧರಿಸಿ ಕೃತಿಗಳನ್ನು ರಚಿಸುವ ಸಂಪ್ರದಾಯವನ್ನು ಈ ಕಲೆಯಲ್ಲಿ ಕಾಣುತ್ತೇವೆ."[೨೫]

ಕರ್ನಾಟಕದ ಹಸ್ತಪ್ರತಿ ಚಿತ್ರಕಲೆಯಲ್ಲಿ ದಖನಿ-ಚಿತ್ರಕಲೆಯು ಬಹು ಮಹತ್ವಪೂರ್ಣವಾದುದು. ಸಾಮಾನ್ಯವಾಗಿ ಕಲಾಶೈಲಿ ಅಥವಾ ಮನೆತನಗಳು ಒಂದು ರಾಜ್ಯಕ್ಕೆ,

ಮನೆತನಕ್ಕೂ ಹೊಂದಿಕೊಂಡು ಬೆಳೆಯುತ್ತಿರುತ್ತವೆ. ಆದರೆ ದಖನಿ ಚಿತ್ರಕಲೆ ಉತ್ತರಕರ್ನಾಟಕ, ಪೂರ್ವಮಹಾರಾಷ್ಟ್ರ ಮತ್ತು ವಾಯುವ್ಯ ಆಂಧ್ರಪ್ರದೇಶದ ವ್ಯಾಪ್ತಿಯಲ್ಲಿ ದಟ್ಟವಾಗಿ ಪಲ್ಲವಿಸಿ ಹರಡಿಕೊಂಡು ಬೆಳೆದ ವಿಶಿಷ್ಟ ಶೈಲಿಯಾಗಿದೆ. ಅಳರಸರ ಪ್ರಾದೇಶಿಕತೆಯೊಂದಿಗೆ, ಸಾಂಸ್ಕೃತಿಕ ಸಹ ಭಾಗಿತ್ವದೊಂದಿಗೆ ಬೆಳೆದುದು ಈ ಕಲೆಯಾಗಿದೆ. ವಿಜಯನಗರದ ಚಕ್ರಾಧಿಪತಿಗಳು ಮತ್ತು ಆದಿಲ್‌ಷಾಯಿ ದೊರೆಗಳು ಹಾವು-ಮುಂಗಸಿಗಳಂತೆ ಕಾದಾಡಿದರೂ ಈ ಐದುಷಾಹಿ ಮನೆತನದ ಆಡಳಿತ ವ್ಯಾಪ್ತಿ ಮತ್ತು ವಿಜಯ ನಗರದ ಸಾಮ್ರಾಜ್ಯದ ಚಿತ್ರಕಲಾವಿದರು, ಕಲಾ ಪೋಷಕರು ದಖನಿಯ ಕಲೆಯನ್ನು ರಾಜಕೀಯ ಸಣ್ಣತನವನ್ನು ಕಡೆಗಣಿಸಿ ಸಾಂಸ್ಕೃತಿಕ ರೂಪದಲ್ಲಿ ಮೂರು ರಾಜ್ಯಗಳನ್ನು ಮೀರಿ ದಕ್ಷಿಣ ಭಾರತದಾದ್ಯಂತ ವ್ಯಾಪಿಸಿಕೊಂಡಿತು. ಜಾತಿಯತೆ ಮತ್ತು ರಾಜಕೀಯ ಚತುರಂಗದಾಟವನ್ನು ಕಲೆ ಮೀರಬಲ್ಲದು ಎಂಬುದಕ್ಕೆ ಇದೊಂದು ನಿದರ್ಶನವಾಗಿದೆ.

ಇಬ್ರಾಯಿಂ ಇಮ್ಮಡಿ ಆದಿಲ್‌ಶಹನ ಕಿತಾಬ್-ಎ-ನವರಸ ಗ್ರಂಥ ವಿಮರ್ಶೆಮಾಡಿರುವ ಲಖನೌವಿಶ್ವವಿದ್ಯಾಲಯದ ನಝಿರ್ ಅಹಮ್ಮದ್‌ರ ಮಾತುಗಳನ್ನು ನಾವಿಲ್ಲಿ ಗಮನಿಸೋಣ..... ಇಬ್ರಾಹಿಮ್ ಆದಿಲಶಾಹನ ಸ್ಮರಣೆಯು ಆತನ ಸಮಕಾಲೀನವರ ಅವನ ತಲೆಮಾರಿನವರ (Posterieg) ಹೃದಯಗಳಲ್ಲಿ ದಖನಿ ಕಲಾಶೈಲಿಯ ಹಸ್ತಪ್ರತಿ ಚಿತ್ರಕಲೆಯು ಸದಾ ಹಚ್ಚಹಸಿರಾಗಿರುತ್ತದೆ. ನಿಜ ಹೇಳಬೇಕೆಂದರೆ ಈ ಕಲಾ ಶೈಲಿಯ ಅವಧಿಯು ಕಲಾಭಿಮಾನ ಬಿಜಾಪುರದ ಅರಸುಕುಮಾರರನ್ನು ಹೊಂದಿದ ಉತ್ತುಂಗ ಸ್ಥಿತಿಯಲ್ಲಿತ್ತು. ಏಕೆಂದರೆ ಸ್ವತಃ ಅರಸನೇ ಚತುರ ಚಿತ್ರಕಲಾವಿದ ಮತ್ತು ಲಿಪಿಗಾರನಾಗಿದ್ದನು. ದಖನಿ ಶೈಲಿಯ ಪ್ರಾರಂಭಿಕ ಚಿತ್ರಗಳು ಕಿರುರೂಪದಲ್ಲಿ ನಜಮ್-ಉಲ್-ಉಲಮ್ ದಲ್ಲಿ ಹಿಜರಾ 979 (ಕ್ರಿ.ಶ.1570) ಈ ಕಾಗದದ ಹಸ್ತಪ್ರತಿಯ ಚಿತ್ರಗಳು ವಿಜಯನಗರದೊಂದಿಗೆ ಪರ್ಷಿಯನ್ ಮತ್ತು ತುರ್ಕಿಯ ಪ್ರಭಾವಗಳಿಂದ ಕೂಡಿದ ಸೌಹಾರ್ದತೆಯನ್ನು ಸಾರುವ ಚಿತ್ರಗಳಾಗಿದ್ದವು. ಇದರ ಫಲಿತಾಂಶದಿಂದ ಆದಿಲಶಾಹಿ ರಾಜ್ಯದ ಸಂಸ್ಥಾಪಕನಾದ ಯುಸೂಪ್ ಅಲಿಯ ಆಸ್ಥಾನದಲ್ಲಿದ್ದ ಅನೇಕ ಪರ್ಶಿಯಾ ಮತ್ತು ತುರ್ಕಿಯ ಕಲಾವಿದರು ತಮಗೆ ತಿಳಿಯದಂತೆ ವಿಜಯನಗರದಿಂದ ವಿಜಾಪುರಕ್ಕೆ ಬಂದಿದ್ದ ಹಿಂದು ಚಿತ್ರಕಲಾವಿದರ ಶೈಲಿಯ ಪ್ರಭಾವಕ್ಕೊಳಗಾದರು ಈ ವಲಸೆಯ ಈ ಕಾರಣದಿಂದ ಮೊದಲ ಇಬ್ರಾಯಿಂ ದೊರೆಯ ಕಾಲದಲ್ಲಿ ಸಮಿಶ್ರ ಶೈಲಿಯೊಂದು ಬಿಜಾಪೂರದಲ್ಲಿ ಬೆಳೆಯಲಾರಂಭಿಸಿತು. ಇದು ದೊರೆ ಇಮ್ಮಡಿ ಇಬ್ರಾಯಿಂ ಮತ್ತು ಅಲಿಯವರ ಆಡಳಿತದ ಕಾಲದವರೆಗೂ ಮುನ್ನಡೆಯಿತು. ಈ ಶೈಲಿಯ ಹೊಳೆಯುವ ಲಕ್ಷಣವೆಂದರೆ ಹಸ್ತಪ್ರತಿಯೊಳಗಿನ ಉಜ್ವಲವಾದ ಭಾರತೀಯರ ಬಾವುಕತೆಗಳನ್ನು ಪರ್ಶಿಯಾದ ದೇಶದ ಅಲಂಕಾರಿಕ ವರ್ಣಗಾರಿಕೆ ಯಿಂದ ಒಂದುಗೂಡಿಸಿದ್ದು. [೨೫]

ಇಮ್ಮಡಿ ಇಬ್ರಾಯಿಂನ ದೀರ್ಘಕಾಲದ ಆಡಳಿತದಲ್ಲೂ ಬಿಜಾಪೂರದ ದಖನಿ

---

೨೫. Shivpriyanand : Marg Vol- V.

ಶೈಲಿಯ ಚಿತ್ರಗಾರಿಕೆಯು ಜನರಿಂದ ಮೆಚ್ಚುಗೆಯನ್ನು ಗಳಿಸಿತು. ಇಬ್ರಾಯಿಂದೊರೆಗಳ ಪ್ರೋತ್ಸಾಹ ಮತ್ತು ಪೋಷಣೆಗಳಿಂದ ಬೆಳೆದ ಈ ದಖನಿ ಶೈಲಿಯ ಕೇವಲ ಭಾರತ, ಪರ್ಶಿಯಾ ದೇಶಗಳನ್ನಲ್ಲದೇ ಹೊರಗಿನ ಯುರೋಪಿನ ಕಲಾವಿದರನ್ನು ಆಕರ್ಷಿಸಿತು.[೨೬] ವಿಜಯನಗರದ ಅರಸರ ನಿರಾಕರಣೆ (Sack)ಯಿಂದ ಮರಳಿಬಂದ ಅನೇಕ ಹಿಂದೂ ಚಿತ್ರಗಾರರು ಧಾರ್ಮಿಕ ಸೌಹಾರ್ದತೆಯ ಸಹಬಾಳ್ವೆಯ ಕಲಾಗಾರಿಕೆಯಿಂದ ಆಕರ್ಷಿಸಲ್ಪಟ್ಟರು. ಯುರೋಪಿನ ಕಲಾವಿದರು ಕೂಡಾ ಬಿಜಾಪುರದ ಆಸ್ಥಾನದಲ್ಲಿ ಕಲಾವಿದರಾಗಿ ಸೇರಿಕೊಂಡರು. ಈ ಕಾರಣದಿಂದಾಗಿ ಈ ವಿಶೇಷವಾದ ಸಮ್ಮಿಶ್ರ ಶೈಲಿಯ ಚಿತ್ರಕಲೆಯು ವಿಜಯನಗರದ, ಬಿಜಾಪೂರು, ಪರ್ಶಿಯಾ, ತುರ್ಕಿ ಮತ್ತು ಯುರೋಪಿನ ಕಲೆಯ ಸತ್ವನ್ನು ಒಳಗೊಂಡ ಕಲೆಯಾಗಿ ಅರಳಿತು. ಡಾ||ಮೋತಿಚಂದರ ಅಭಿಪ್ರಾಯದಂತೆ ಈ ಕಲೆಯನ್ನು ಕುರಿತು ಈ ಕೆಳಗಿನಂತೆ ಮಾತನಾಡಿದ್ದಾರೆ.[೨೭]

★ ಇದು ಸಮೃದ್ಧವಾಗಿ ಸುವರ್ಣವನ್ನು ಆಳದವರೆಗೂ ಕಾಣುವಂತೆ ವರ್ಣಗಾರಿಕೆಯಿಂದ ತುಂಬಿಕೊಂಡಿರುವ ಕಲಾಶೈಲಿಯಾಗಿದೆ. ಇದು ಉತ್ತರದ ಮೊಘಲ ಶೈಲಿಯ ಸಮಕಾಲೀನವಾಗಿ ಅದರೊಂದಿಗೆ ಗುರುತಿಸಿಕೊಳ್ಳುವ ಹಲವು ಅಂಶಗಳನ್ನೊಳಗೊಂಡಿರುವಂತಹ ಶೈಲಿಯಾಗಿದೆ.

★ ಈ ಕಿರು ರೂಪದ ಚಿತ್ರಗಳು ಆಗಾಗ ಒಂದೇ ಆಕೃತಿಯಲ್ಲಿರುತ್ತವೆ. ಕೆಲವು ಸಲ ಒಂದಕ್ಕಿಂತ ಹೆಚ್ಚು ಆಕೃತಿಗಳು ಇದ್ದಲ್ಲಿ ಅವುಗಳ ಭಾವ, ಭಂಗಿಯನ್ನು ಆದರೊಂದಿಗೆ ಯಥಾದರ್ಶನ (Perspective)ದ ಹಿನ್ನಲೆಗೂ ಅನುಗುಣವಾಗಿರುತ್ತವೆ.

★ ಮಾನವ ಆಕೃತಿಗಳ ಮುಖಗಳು ಒಮ್ಮುಖ (Profile) ವಾಗಿರುವಂತೆ. ಪ್ರಾರಂಭಿಕ ಮುಘಲ್ ಮತ್ತು ಪರ್ಶಿಯಾ ಶೈಲಿಗೆ ವಿಲೋಮವಾಗಿರುತ್ತವೆ.

ಮಹಿಳೆಯರ ಚಿತ್ರಗಳನ್ನು ವಿಶೇಷವಾದ ಭಾರತೀಯ ಶೈಲಿ ಮತ್ತು ಚೇತನಗಳೊಂದಿಗೆ ರಚಿಸಲಾಗಿರುವುದಲ್ಲದೆ ಅವರ ಉಡುಗೆಯಲ್ಲಿ ಸೀರೆ ಪ್ರಮುಖ ಆಕರ್ಷಣೆಯಾಗಿ ಮೂಡಿ ಬಂದಿರುತ್ತದೆ.[೨೮]

ಕರ್ನಾಟದ ದಖನಿ ಶೈಲಿಯ ಹಸ್ತಪ್ರತಿ ಚಿತ್ರಗಳ ವೈವಿಧ್ಯತೆಗಳು :

ಬಾಸಿಲ್ ಗ್ರೇನ್ ವಿಚಾರದಂತೆ. ಬಿಜಾಪುರದ ದಖನಿ ಶೈಲಿಯ ಹಸ್ತಪ್ರತಿಯ ಚಿತ್ರಕಲೆಯನ್ನು ಎರಡು ಭಾಗಗಳಲ್ಲಿ ಪ್ರತ್ಯೇಕಿಸಬಹುದು.

1) ಹಿಜಿರಾ ಶಕ 998 (ಕ್ರಿ.ಶ.1590)ರ ಕಾಲಾವಧಿಯಿಂದ ಹೆಚ್.1012(ಕ್ರಿ.ಶ.1605)ವರೆಗೆ

---

೨೬. ಡಾ. ಎಸ್.ಕೆ. ಅರುಣಿ : ದಖನಿ ಚಿತ್ರಕಲೆ, ಲೇಖಕರ ಮಾತುಗಳಿಂದ.
೨೭. Khandalwala: Marg Vol. -V, Book -I, Page -26, 27.
೨೮. Basil Gray : Indian Miniatures, Page No. 8.
೨೯. Khandalwala: Marg Vol. -V, Book -I, Page -25-56

ಮೋಹಮ್ಮದಿಯರ ಹಸ್ತಪ್ರತಿಗಳಲ್ಲಿ ವರ್ಣ ಚಿತ್ರಗಳು.









Courtesy:
B.S.Keshavan's The Book In India

2) ಹಿಜಿರಾ ಶಕ 1014 (ಕ್ರಿ.ಶ.1905) ರಿಂದ ಕಾಲಾವಧಿಯಿಂದ ಎ.ಹೆಚ್. 1037 (ಕ್ರಿ.ಶ.1623)ವರೆಗೆ

ಮೊದಲ ಕಾಲಾವಧಿಯ ಭಾಗವನ್ನು ಭಾರತ, ಪರ್ಶಿಯಾ ಮತ್ತು ಯುರೋಪಿನ ಮಿಶ್ರ ಶೈಲಿಯಾದರೆ ಎರಡನೆ ಘಟ್ಟವನ್ನು ಉತ್ತರದ ಮೊಘಲ ಮತ್ತು ಬಿಜಾಪುರದ ದಖನಿ ಮಿಶ್ರಣವೆಂದು ಕರೆಯಬಹುದು. ದಖನಿಯ ಶೈಲಿಯು ತನ್ನದೆಯಾದ ವಿಶೇಷ ಗುಣಗಳನ್ನು ಹೊಂದಿದೆ. ಇದಕ್ಕೆ ಉದಾಹರಣೆಗಾಗಿ ಹೇಳುವುದಾದರೆ ಇಮ್ಮಡಿ ಇಬ್ರಾಯಿಂ ಕೋರಿಕೆಯಂತೆ ಮೊಘಲ ದೊರೆ ಜಹಾಂಗೀರರು ತಮ್ಮ ಭಾವ ಚಿತ್ರವನ್ನು ಕಳಿಸಿದ್ದರು.[೩೦] ಈ ಕೊಡುಕೊಳ್ಳುವಿಕೆಯು ಬೆಳೆದಂತೆ ಉತ್ತರದ ಮುಘಲರ ಮತ್ತು ದಕ್ಷಿಣದ ಶಾಹಿ ಆಡಳಿತದ ಅನೇಕ ರಾಜಕೀಯ ನಿಪುಣರನ್ನು ವಿನಿಮಯ ಮಾಡಿಕೊಳ್ಳುವ ಕಾರ್ಯ ಪ್ರಾರಂಭವಾದಂತೆ ಎರಡು ಶೈಲಿಗಳ ಸಮ್ಮಿಶ್ರಣಕ್ಕೂ ಕಾರಣವಾಯಿತು.

ಹಿಂದೆ ಹೇಳಿಕೊಂಡಂತೆ ಮಹಾರಾಷ್ಟ್ರ ಕರ್ನಾಟಕ ಮತ್ತು ಆಂಧ್ರಪ್ರದೇಶದವರೆಗೂ ಹರಡಿಕೊಂಡಿರುವ ದಖನಿಯ ಚಿತ್ರಕಲೆ ಒಂದೇಯಾದರೂ ಚಿತ್ರಗಳನ್ನು ಗಮನಿಸಿದಾಗ ಪ್ರಾದೇಶಿಕತೆಯ ಭಿನ್ನತೆ ಇದ್ದರೂ ಎಲ್ಲ ಚಿತ್ರಗಳ ಶೈಲಿ ಒಂದೇ ಆಗುತ್ತದೆ. ಈ ದಖನಿಯ ಕಲೆಯನ್ನು ಪ್ರಾದೇಶಿಕವಾಗಿ ಬಹುಮನಿ ಚಿತ್ರಕಲೆ ಅಹ್ಮದ್ ನಗರ ನಿಜಾಮ್‌ಷಾಯಿ ಚಿತ್ರಕಲೆ, ಬಿಜಾಪುರದ ಆದಿಲ್‌ಶಾಹಿ ಚಿತ್ರಕಲೆ, ಗೋಲ್ಕೊಂಡಾದ ಕುತುಬ್ ಷಾಯಿ ಚಿತ್ರಕಲೆ, ಮರಾಠ ಚಿತ್ರಕಲೆ, ಹೈದ್ರಾಬಾದ ನಿಜಾಮಕಲೆ, ಕರ್ನೂಲ ನವಾಬಾರ ಚಿತ್ರಕಲೆ, ಸುರುಪುರದ ಚಿತ್ರಕಲೆ, ಗದವಾಲ, ವನಪರ್ತಿ ಚಿತ್ರಕಲೆಗಳು ಎಂದು ಕರೆಯುತ್ತಾರೆ.

ಡಾ. ಎಸ್. ಕೆ. ಅರುಣಿಯವರು"ದಖನಿ ಚಿತ್ರಕಲೆ" ಈ ಶೈಲಿಯೊಳಗಿನ ಮುಖ್ಯ ಲಕ್ಷಣಗಳನ್ನು ಈ ರಿತಿಯಾಗಿ ಗುರುತಿಸಿದ್ದಾರೆ.

★ ಮೊಘಲ ಚಿತ್ರಗಳು ವಾಸ್ತವಿಕ ಘಟನೆಗಳನ್ನು ಯಥಾವತ್ತಾಗಿ ಚಿತ್ರಿಸುವ ಸಂಪ್ರದಾಯಕ್ಕೆ ಹೆಸರು ವಾಸಿಯಾುಗಿದ್ದಾರೆ. ಇಬ್ರಾಹಿಮ್ ಕಾಲದ ಬಿಜಾಪುರ ಚಿತ್ರಗಳು ಕವಿಯ ಕಾಲ್ಪನಿಕ ಲೋಕದಂತೆ ಸುಂದರ ನಿಸರ್ಗದ ಮಧ್ಯದಲ್ಲಿ ವಿಹರಿಸುತ್ತಿರುವ ಸುಲ್ತಾನರ ಚಿತ್ರಗಳಿಗೆ ಹೆಸರುವಾಸಿಯಾಗಿವೆ.

★ ಆಕೃತಿಗಳನ್ನು ಪಾರ್ಶ್ವಮುಖದಲ್ಲಿ ಚಿತ್ರಿಸುವುದು ನಿಲ್ಲಿಸಿ, ನೇರ ಇಲ್ಲವೆ ಮುಕ್ಕಾಲುಭಾಗ ಮುಖ ಕಾಣುವಂತೆ ಚಿತ್ರಿಸಲಾಗಿದೆ. ಈ ರೀತಿ ಚಿತ್ರಿಸುವ ಶೈಲಿಯನ್ನು ಸಮಕಾಲೀನ ಅಹ್ಮದ್ ನಗರ ಮತ್ತು ಗೋಲ್ಕೊಂಡ ಚಿತ್ರಕಲೆಗಳಲ್ಲಿ ಕಂಡು ಬರುತ್ತವೆ.

★ ಸುಲ್ತಾನರನ್ನು ಒಳಗೊಂಡು ಪುರುಷ ಆಕೃತಿಗಳು ಎತ್ತರದೇಹ, ದುಂಡು ಮುಖ, ನೀಳ ಮೂಗು, ಅಗಲವಾದ ಕಣ್ಣುಗಳು, ಹರವಾದ ಹಣೆ ಇತ್ಯಾದಿ ದೈಹಿಕ ಲಕ್ಷಣಗಳಿಂದ ಕೂಡಿವೆ. ಬಿಗಿಯಾದ ಪೈಜಾಮ ಮತ್ತು ಉದ್ದನೆಯ ನಿಲುವಂಗಿ, ನಡುವಿನಲ್ಲಿ ವಸ್ತ್ರದ ನಡುಪಟ್ಟಿ ಇವರು

---

೩೦. Nazir Ahmad :Textual Notes on Kitab -E- Nauras, Page - 28

ಧರಿಸಿದ ಉಡುಪುಗಳು.ನಡುಪಟ್ಟಿಯ ಅಂಚಿನಲ್ಲಿ ಸೂಕ್ಷ್ಮ ರೇಖೆಗಳಿಂದ ಕೂಡಿದ ವಿನ್ಯಾಸ ಕಂಡು ಬರುತ್ತದೆ. ಭುಜದ ಮೇಲಿನ ಶಾಲು ಕೂಡ ಸೂಕ್ಷ್ಮ ರೇಖೆಗಳ ಕುಸುರಿ ಕಲೆಯಲ್ಲಿ ಮಾಡಲಾಗಿದೆ. ಪುರುಷರು ಧರಿಸಿದ ಪೇಟ ಶಂಖಾಕೃತಿಯ ಆಕಾರದಲ್ಲಿದೆ. ಇದರ ಮಧ್ಯದಲ್ಲಿ ಅಡ್ಡಲಾಗಿ ಪಟ್ಟಿಗಳಿವೆ. ಈ ಪಟ್ಟಿಗಳಲ್ಲಿ ಲಿಪಿ (Caliography) ಅಥವಾ ಕುಸುರಿಯನ್ನು ಸೂಕ್ಷ್ಮರೇಖೆಗಳಲ್ಲಿ ತೋರಿಸಲಾಗಿದೆ.

★ ಸುಲ್ತಾನ ಇಬ್ರಾಹಿಮ್‌ನನ್ನು ಚಿತ್ರಿಸುವಾಗ ಕಲಾವಿದರು ವಿಶೇಷ ಕಾಳಜಿ ವಹಿಸಿರುವರು, ಪ್ರಾರಂಭದಲ್ಲಿ ನವಯುವಕನಂತೆ ನಂತರದ ಚಿತ್ರಗಳಲ್ಲಿ ಗಡ್ಡದಾರಿಯಾಗಿ ಕಂಡು ಬರುತ್ತಾನೆ. ದುಂಡನೆಯ ಮುಖ, ಚಿಕ್ಕತುಟಿ, ತುಂಬಿದಗಲ್ಲ, ಗಿಳಿಮುಗು, ಅಗಲಹಣೆ ಉತ್ತಮ ದೇಹದಾರ್ಢ್ಯ ಇತ್ಯಾದಿ.

★ ಚಿತ್ರಗಳಲ್ಲಿ ಕಂಡು ಬರುವ ಹಿನ್ನಲೆಯ ನಿಸರ್ಗ ದೃಶ್ಯದಲ್ಲಿ ಕಪ್ಪು ಮಿಶ್ರಿತ ಹಸಿರು ವರ್ಣದಲ್ಲಿ ಚಿತ್ರಿಸಲಾಗಿದೆ. ಮರಗಳನ್ನು ದಟ್ಟವಾಗಿ ಹರಡಿಕೊಂಡಿರುವಂತೆ ತೋರಿಸಲು ಕಪ್ಪು ವರ್ಣವನ್ನು ಮಧ್ಯದಲ್ಲಿ ದಪ್ಪವಾಗಿ ಲೇಪಿಸಲಾಗಿದೆ. ಮಾವು, ಶಮಿ,ಬೇವು. ಅಶೋಕ ಇತ್ಯಾದಿ ವೃಕ್ಷಗಳು ಚಿತ್ರಗಳಲ್ಲಿ ಕಂಡು ಬರುವ ವೃಕ್ಷಗಳು ಬೆಟ್ಟ ಗುಡ್ಡಗಳನ್ನು ಸಮುದ್ರದ ತೆರೆಗಳಂತೆ ಚಿತ್ರಿಸಲಾಗಿದೆ. ಚಿತ್ರದ ಮೇಲ್ಭಾಗದಲ್ಲಿ ಸಾಮಾನ್ಯವಾಗಿ ಸುರ್ಯಾಸ್ತದ ಚಿತ್ರಣ ಚಿತ್ರಿಸಲಾಗಿದೆ. ಹಳದಿ, ಕೇಂಪು,ಶ್ವೇತ, ನೀಲಿ, ಮಿಶ್ರ ವರ್ಣಗಳ ಮುಸ್ಸಂಜೆಯ ಬಾನನ್ನು ಕಲಾವಿದರು ಯಥಾವತ್ತಾಗಿ ಚಿತ್ರಿಸಿರುವರು.

★ ಬಿಜಾಪುರ ಚಿತ್ರಕಲೆಯ ಕಲಾವಿದರು ವನ್ಯಪ್ರಾಣಿ, ಪಕ್ಷಿಗಳ ಬಗ್ಗೆ ಸಂಪೂರ್ಣವಾಗಿ ಜ್ಞಾನವುಳ್ಳವರಾಗಿದ್ದರು. ಈ ಕಲೆಯಲ್ಲಿ ಕಂಡು ಬರುವ ಆನೆ.ಅಶ್ವ ಇತ್ಯಾದಿ ಪ್ರಾಣಿಗಳನ್ನು ಪ್ರಮಾಣಬದ್ಧವಾಗಿ ಚಿತ್ರಿಸಲಾಗಿದೆ. ಇವುಗಳನ್ನು ವಿವಿಧ ಆಭರಣಗಳಿಂದ ಅಲಂಕಾರಗೊಳಿಸಲಾಗಿದೆ. ಇನ್ನೂ ಕೆಲವು ಸಂದರ್ಭಗಳಲ್ಲಿ ಪ್ರಾಣಿಗಳನ್ನು ದ್ವಿವರ್ಣದಲ್ಲಿ ತೋರಿಸಿ ಚಿತ್ರಕ್ಕೆ ಸೌಂದರ್ಯ ಹೆಚ್ಚಿಸಲು ಪ್ರಯತ್ನಿಸಲಾಗಿದೆ.

★ ಕಪ್ಪು ಮಿಶ್ರಿತ ಹಸಿರು, ಗುಲಾಬಿ,ಶ್ವೇತ, ಪಾಟಲ, ನೆರಳೆ, ಕಪ್ಪು ನೀಲಿ,ತಿಳಿಹಸಿರು, ಹಳದಿ,ಕೆಂಪು ಚಿತ್ರಕಲೆಯಲ್ಲಿ ಹೆಚ್ಚಾಗಿ ಬಳಸಲಾದ ವರ್ಣಗಳು, ಚಿನ್ನದ ಲೇಪನವನ್ನು ಆಭರಣಗಳಿಗಾಗಿ ಬಳಸಲಾಗಿದೆ, ಆಭರಣಗಳಲ್ಲಿ ಕಂಡು ಬರುವಂತೆ ದಪ್ಪವಾಗಿ ಕಂಡು ಬರುವುದಿಲ್ಲ.

★ ಚಿತ್ರಗಳಲ್ಲಿ ಕಂಡು ಬರುವ ಕಟ್ಟಡಗಳು ಕಮಾನು, ಗುಮ್ಮಟ, ಕಟಾಂಜನಗಳಿಂದ ಕೂಡಿವೆ. ಬಿಜಾಪುರ ಆದಿಲ್ ಷಾಹಿ ವಾಸ್ತು ಶೈಲಿಯ ಕಟ್ಟಡಗಳೆಂದು ಇವುಗಳನ್ನು ಗುರುತಿಸಬಹುದು.[೨೧] ಕೆಲವು ನಂತರದ ಚಿತ್ರಗಳಲ್ಲಿ ಐರೋಪ್ಯರ ಪ್ರಭಾವದಿಂದ ಐರೋಪ್ಯಶೈಲಿಯ ಕಟ್ಟಡಗಳನ್ನು ಚಿತ್ರಿಸಲಾಗಿದೆ.

ಡಾ.ಕೃಷ್ಣ ಕೋಲ್ಹಾರ ಕುಲಕರ್ಣಿಯವರು ಬಿಜಾಪುರದ ವಾಸಿಗಳಾಗಿ ಆದಿಲಶಾಹಿ ಇತಿಹಾಸವನ್ನು ಅಭ್ಯಾಸಮಾಡಿದವರಾಗಿದ್ದಾರೆ. ಬಿಜಾಪುರದ ಅರಸು ಸಾಹಿತ್ಯ ಚರಿತ್ರೆ ಕುರಿತು ಅವರು ರಚಿಸಿರುವ "ಆದಿಲಶಾಹಿ ಆಸ್ಥಾನ ಸಾಹಿತ್ಯ"ಕೃತಿಯಿಂದ ಕೆಲವು ಭಾಗಗಳನ್ನು ಆಯ್ದು ಕೊಂಡು ಇಲ್ಲಿ ಉದ್ಧರಿಸಲಾಗಿದೆ.

ಬಿಜಾಪುರವನ್ನು ನಾಲ್ವರು ಆದಿಲ್‌ಶಾಹಿ ದೊರೆಗಳ ಕ್ರಿ.ಶ.1580-1626 ರ ವರೆಗೆ ಅವನ ಮಗ ಮಹ್ಮದ ಆದಿಲ್‌ಶಾಹಿ (ಕ್ರಿ.ಶ.1626 - 1656) ಅವರ ಕಾಲದಲ್ಲಿ ಆದಿಲಶಾಹಿ ರಾಜ್ಯವು ಸಾಮ್ರಾಜ್ಯವಾಗಿ ವೈಭವದ ತುತ್ತ ತುದಿಯನ್ನು ಮುಟ್ಟಿತು. ಕ್ರಿ.ಶ.1656 ರಲ್ಲಿ ಮಹ್ಮ ಆದಿಲ್‌ಶಾಹಿನು ಮರಣ ಹೊಂದಿದ. ದಕ್ಷಿಣೋತ್ತರ ತಂಜಾವುರದಿಂದ ಮುಂಬಯಿ ಹಾಗೂ ಪಶ್ಚಿಮದಿಂದ ಪೂರ್ವಕ್ಕೆ ಗೋವೆಯಿಂದ ಕೃಷ್ಣ ತುಂಗೆಯರ ಸಂಗಮದವರೆಗೂ ಆದಿಲ್‌ಶಾಹಿ ರಾಜ್ಯ ಹಬ್ಬಿಕೊಂಡಿತ್ತು.

ಮಹ್ಮದ್‌ನ ಮಗ ಎರಡನೆಯ ಆಲಿ ಆದಿಲ್ ಶಾಹ (ಕ್ರಿ.ಶ.1656 - 1672) ಕಾಲದಲ್ಲಿ ಆದಿಲಶಾಹಿ ರಾಜ್ಯದ ಅವನತಿ ಪ್ರಾರಂಭವಾಗಿ ಅವನ ಮಗ ಸಿಕಂದರ (ಕ್ರಿ.ಶ.1672-1686)ನ ಕಾಲದಲ್ಲಿ ಕ್ರಿ.ಶ.1686 ರಲ್ಲಿ ಬಿಜಾಪುರವು ಔರಂಗಜೇಬನ ವಶವಾಗಿ, ದೆಹಲಿಯ ಮೊಗಲ ಸಾಮ್ರಾಜ್ಯದಲ್ಲಿ ಸೇರಿಕೊಂಡಿತು.

ಬಿಜಾಪುರದ ಬಾದಶಹರು ಕಲೆ, ಸಾಹಿತ್ಯ, ಸಂಗೀತ, ಚಿತ್ರಕಲಾ ಪ್ರಿಯರಾಗಿದ್ದರು. ಕೆಲವು ರಾಣಿಯರು ಕೂಡಾ ಸಂಗೀತ, ಸಾಹಿತ್ಯ ಲಲಿತಕಲೆಗಳಲ್ಲಿ ಆಸಕ್ತರಾಗಿದ್ದರು. ಆದಿಲ್‌ಶಾಹಿ ಬಾದಶಹರು ಶ್ರೇಷ್ಠಯೋಧರಾಗಿದ್ದರಂತೆ ಸಾಮಾಜಿಕ ಕಳಕಳಿ ಉಳ್ಳವರೂ ಆಗಿದ್ದರು. ಸಾಹಿತ್ಯ, ಸಂಗೀತ ಕಲೆಗಳ ಪೋಷಕರು ಆಗಿದ್ದರು, ಸ್ವತಃ, ಸಾಹಿತಿಗಳು, ಸಂಗೀತಗಾರರು, ಕಲಾವಿದರು ಆಗಿದ್ದರು.

ಆದಿಲಶಾಹಿ ರಾಜ್ಯದ ಸ್ಥಾಪಕ ಯುಸೂಪ್ ಆದಿಲಖಾನನು ಕಾವ್ಯ ಪ್ರೇಮಿ ಯಾಗಿದ್ದನು ಕವಿಯಾಗಿ ಕೆಲವು ಕೃತಿಗಳನ್ನು ರಚಿಸಿದ್ದನು. ಪರ್ಶಿಯಾದ ಹೆಸರಾಂತ ಕವಿ ಸಾಹಿತಿಗಳನ್ನು ಕರೆಯಿಸಿ ಕೊಂಡಿದ್ದಾನೆ. ಯುಸೂಫ್‌ನು ಸ್ವತಃ ಶ್ರೇಷ್ಠ ಸಂಗೀತಗಾರನಾಗಿದ್ದ. ಆತ ಸ್ವತಃ ಎರಡು ಮೂರು ಬೇರೆ ಬೇರೆ ತರಹದ ವಾದ್ಯ ನುಡಿಸುತ್ತಿದ್ದನು. ತನ್ನ ಕೃತಿಗಳನ್ನು ಸ್ವತಃ ಹಾಡುತ್ತಿದ್ದನು - ಎಂದು ಖ್ಯಾತ ಇತಿಹಾಸಕಾರ ಫರಿಸ್ತಾ ಹೇಳುತ್ತಾರೆ.

ಯೂಸೊಫನ ಮಗ ಇಸ್ಮಾಯಿಲ್, ಇಸ್ಮಾಯಿಲ್ ಮಗ ಮೊದಲ ಇಬ್ರಾಹಿಮ್ ಮತ್ತು ಎರಡನೇಯ ಇಬ್ರಾಹಿಮ್ ದೊರೆಯ ಸಹ, ಸಂಗೀತ, ಚಿತ್ರಕಲೆ ಬಲ್ಲವರಾಗಿದ್ದರು. ಇಮ್ಮಡಿ ಇಬ್ರಾಹಿಮ್ ಸ್ವತಃ ಕವಿಯಾಗಿ "ಕಿತಾಬೆ-ನವರಸ" ಕೃತಿ ರಚಿಸಿದ ಆತನ ಆಸ್ಥಾನದಲ್ಲಿ ಮುನ್ನರಕ್ಕು ಅಧಿಕ ಕವಿ, ಸಾಹಿತಿಗಳಿದ್ದರು. ಜಹೂರಿಯಂತಹ ವಿಶ್ವವಿಖ್ಯಾತ ಕವಿ, ಫಿರಿಶ್ತಾನಂಥ ಇತಿಹಾಸಕಾರ,

೩೧. The Tazuk: Vol-II, Page - 245 - 6


ಅಬ್ದುಲ್ಲಾ ದೇಹಲಿವಿ ಮುಲ್ಲಾ ನುಸ್ರುತಿ ಯವರಲ್ಲದೆ ಇಬ್ರಾಹಿಮನ ಮಗ ಮಹ್ಮದನು ಕೂಡಾ ಕವಿಯಾಗಿದ್ದ ಆತನೂ ''ಮಹ್ಮದ - ನಾಮಾ'' ರಚಿಸಿದ್ದಾನೆ.

ಈ ಸಾಮ್ರಾಜ್ಯದಲ್ಲಿ ರಚನೆಗೊಂಡ ಉರ್ದು ಸಾಹಿತ್ಯ ಕೃತಿಗಳು ಹೀಗಿವೆ.

ಕೃತಿ	ಕೃತಿಕಾರ	ವಿಷಯ
1. ತಾರೀಖ- ಇ-ಪರಿಸ್ತಾ	ಮುಹಮ್ಮದ ಕಾಶಿಮ್	ಇತಿಹಾಸ
2. ಗುಲ್ಶನ್ - ಇ-ಇಬ್ರಾಹಿಮಿ	ಮುಹಮ್ಮದ ಕಾಶಿಮ್	ಇತಿಹಾಸ
3. ನವರಸ ನಾಮಾ	ಮುಹಮ್ಮದ ಕಾಶಿಮ್	ಇತಿಹಾಸ
4. ತಜ್‌ಕಿರಾತ-ಆಲ್-ಮುಲುಕ್	ರಫೀಯೊದ್ದಿನ್ ಇಬ್ರಾಹಿಮ್ ಶಿರಾಜ್	ಇತಿಹಾಸ
5. ಮಹಮ್ಮದ್ ನಾಮಾ	ಮಹಮ್ಮದ ಜಹೂರ	ಇತಿಹಾಸ
6. ಪುತೂಹತ್-ಇ-ಆದಿಲಶಾಹಿ	ಪುಜೂನಿ ಅಸ್ಟ್ರಾಬಾದಿ ಹಾಸೀಮ್ ಬೇಗ	ಇತಿಹಾಸ
7. ತಾರಿಖ-ಇ-ಅಲಿ	ನೂರುಲ್ಲಾ ಇಬ್ನ ಕಾಜೇ ಸೈ.ಅಲಿ ಮಹ್ಮದ್	ಇತಿಹಾಸ
8. ಕಿತಾಬೆ - ನವರಸ	ಇಮ್ಮಡಿ ಆದಿಲಶಾಹ	ಗೀತಸಂಕಲನ
9. ಇಬ್ರಾಹಿಮ-ನಾಮ	ಅಬ್ದುಲಾ	ಕಾವ್ಯ

ಇವುಗಳೊಂದಿಗೆ ಅಬ್ದುಲ್ ಹಸನ್ ಕಾದ್ರಿ, ಅಮಿನ ಸಯ್ಯದ್, ಅಮೀನುದ್ದಿನ್ ಆಲಾ ಶಾಹ ದಂತಹ 21 ಸೂಫಿ ಸಂತರ ಸಾಹಿತ್ಯವು ಈ ಕಾಲದಲ್ಲಿ ಸಿದ್ಧಗೊಂಡಿತು.[೨೨]

II ಶಿಷ್ಟ ಮೂಲದ ಹಸ್ತಪ್ರತಿ ಚಿತ್ರಕಲೆ :



1. ಚಿತ್ರಕಲಾ ವಿನ್ಯಾಸವನ್ನು ಹೊಂದಿದ ಭೌದ್ಧ ಧರ್ಮದ ಧಾರ್ಮಿಕ, ಹಸ್ತಪ್ರತಿಗಳು :

ಜಗತ್ತಿನಲ್ಲಿಯ ಮನುಜರೆಲ್ಲರೂ ಸಮಾನರು ಹುಟ್ಟಿನಿಂದ, ಸಾವಿನಿಂದ ಯಾರೂ ಉಚ್ಚ ಅಥವಾ ನೀಚರಾಗುವುದಿಲ್ಲ ಎನ್ನುವ ಸಮಾನತೆ ಮತ್ತು ಶಾಂತಿಮಾರ್ಗದಲ್ಲಿ ಜಗತ್ತಿನ ಮನುಜರನು ವಿಶ್ವಮಟ್ಟಕ್ಕೆರಿಸಿ ಸಹಬಾಳ್ವೆಕಲಿಸಿರುವ ಜಗತ್ತಿನ ಪ್ರಮುಖಧರ್ಮವೆಂದರೆ ಬುದ್ಧ ಧರ್ಮ

೨೨.ಡಾ. ಎಸ್.ಕೆ. ಅರುಣಿ : ದಖನಿ ಚಿತ್ರಕಲೆ, ಪುಟ -೪೨,೪೩

ಬೌದ್ಧರ ಹಸ್ತ ಪ್ರತಿಗಳಲ್ಲಿ ವರ್ಣ ಚಿತ್ರಗಳು.



Courtesy:
B.S.Keshavan's The Book In India

ಭಾರತದಲ್ಲಿ ಹುಟ್ಟಿ ಜಗತ್ತಿಗೆ ಬೆಳಕುನೀಡಿದ ಈ ಧರ್ಮ ಶಾಂತಿ ಮತ್ತು ವಿಶ್ವಮಾನವ ಬಂಧುತ್ವಕ್ಕೆ ಮೂಲ ಬುನಾದಿಯಂತಿರುವ ಕಾರಣಕ್ಕಾಗಿಯೇ ಬಹುಶಃ ಚಂದ್ರಗುಪ್ತಮೌರ್ಯನು ಜೈನನಾದರೂ, ಮೊಮ್ಮಗ ಅಶೋಕ ಬೌದ್ಧಧರ್ಮದ ಆಶ್ರಿತನಾಗಿ ಅಹಿಂಸೆಯಿಂದಲೇ ಭಾರತವನ್ನು ಆಳಿದ ಸಾಮ್ರಾಟನಾಗಿದ್ದಾನೆ.

ಕರ್ನಾಟಕದಾದ್ಯಂತವೂ ಬೌದ್ಧದರ್ಮವೂ ವ್ಯಾಪಿಸಿಕೊಂಡಿತ್ತು. ಕರ್ನಾಟಕದಲ್ಲಿ ಬೌದ್ಧಧರ್ಮಕುರಿತು ಎಚ್.ವಿ.ಶ್ರೀರಂಗರಾಜು ಅವರು ಈ ರೀತಿಯಾಗಿ ವಿವರಿಸುತ್ತಾರೆ.....ಪ್ರಪಂಚದ ಬೇರೆ ಬೇರೆ ಕಡೆ ಬೌದ್ಧ ಧರ್ಮದ ಆಳ ವ್ಯಾಸಂಗ ನಡೆಯುತ್ತದೆ. ಇಂಥ ಒಂದು ವ್ಯಾಸಂಗ ಕರ್ನಾಟಕದಲ್ಲಿ ನಡೆಯುತ್ತಿದೆ. ಜನ ಸಾಮಾನ್ಯರಲ್ಲೂ ಹಿಂದಿನ ವರಾಗಲಿ ಆಮೇಲೆ ಬಂದ ಮಹಾಯಾನಾ ಪಂಥದವರಾಗಲಿ ಆಚರಣೆಯಲ್ಲಿಲ್ಲ. ಬೌದ್ಧ ಧರ್ಮವನ್ನು ಪರಿಚಯ ಮಾಡಿಕೊಡುವ ಹಲವು ವಿದ್ಯಾವಂತರು ಆ ಧರ್ಮಕ್ಕೆ ಮಾರುಹೋಗಿ ಬುದ್ಧನ ಬೋಧನೆಯನ್ನು ವಿದ್ಯಾವಂತರಲ್ಲಿ ಪ್ರಸಾರ ಮಾಡಲು ಪ್ರಯತ್ನ ಪಟ್ಟರು. ಅಂಥವರಲ್ಲಿ ಹಿಂದೆ ಮೈಸೂರು ಹೈಕೋರ್ಟಿನ ನ್ಯಾಯಮೂರ್ತಿಗಳಾಗಿದ್ದ ವಿ.ಎಸ್.ಆರ್.ಚಾರಿಯವರು ಅಗ್ರಗಣ್ಯರು. ಸುಮಾರು 50 ವರ್ಷಗಳ ಹಿಂದೆ ''ಯುನಿವರ್ಸಲ್ ಬುದ್ಧ ಸೊಸೈಟಿ''ಯ ಮೂಲಕ ಧರ್ಮವನ್ನು ಪರಿಚಯ ಮಾಡಿಕೊಡಲು ಶ್ರಮಿಸಿದರು. 1940 ರಲ್ಲಿ ಶ್ರೀ ಲಂಕೆಯ ಮಹಾಬೋದಿ ಸೊಸೈಟಿ ಬೆಂಗಳೂರಿನಲ್ಲಿ ಒಂದು ಶಾಖೆಯನ್ನು ತೆರೆಯಿತು. ಆದರೆ 1956 ರ ವರೆಗೆ ಅದು ಯಾವ ಕೆಲಸವನ್ನು ಮಾಡಲಿಲ್ಲ. ಆಗ ನವಲಗುಂದದಿಂದ ಬಂದ ಆಚಾರ್ಯ ಭಿಕ್ಷು ಬುದ್ಧ ರಕ್ಷತರು ಈ ಸೋಸೈಟಿಯನ್ನು ಸಚೇತನ ಗೊಳಿಸಿದರು. ಮಹಾಬೋಧಿ ಸೊಸೈಟಿ ಇಂದೂ ಅವರ ನೇತೃತ್ವದಲ್ಲಿ ಜನಸಾಮಾನ್ಯರಲ್ಲಿ ಶೀಲ ಸಂವರ್ಧನೆಯನ್ನು ಉಂಟು ಮಾಡಲು ಶ್ರಮಿಸುತ್ತದೆ.

ಮಹಾಬೋಧಿ ಸೊಸೈಟಿಯ ಸಹೋದರ ಸಂಸ್ಥೆಯಾದ ಬುದ್ಧ ವಚನ ಟ್ರಸ್ಟ್ ಪಾಲ ಗ್ರಂಥಗಳನ್ನು ಕನ್ನಡದಲ್ಲಿ ತರುವ ಮಹಾ ಯೋಜನೆಯನ್ನಿಟ್ಟುಕೊಂಡಿದೆ. ಇದರಿಂದ ಕನ್ನಡ ಜನ ಬುದ್ಧ ಧರ್ಮವನ್ನು ಶುದ್ಧರೂಪದಲ್ಲಿ ಅರಿಯಲು ಸಹಾಯಕವಾಗುತ್ತದೆ. ಅದು ಈಗಾಗಲೇ ಹಲವಾರು ಪುಸ್ತಕಗಳನ್ನು ಇಂಗ್ಲೀಷ, ಕನ್ನಡ ಭಾಷೆಗಳಲ್ಲಿ ಪ್ರಕಟಿಸಿ ಧರ್ಮವನ್ನು ಪರಿಚಯ ಮಾಡಿಕೊಡುತ್ತಿದೆ.[೩೩] ಹಿರಿಯ ವಿದ್ವಾಂಸರೂ ಆದ ಜಿ.ಪಿ.ರಾಜರತ್ನಂ ಅವರು ಬೌದ್ಧ ಧರ್ಮಕುರಿತು ಈ ರೀತಿಯಾಗಿ ವಿವರಿಸುತ್ತಾರೆ.

''ನಮೋ ತಸ್ಸ ಭಗವತೋ ಅರಹತೋ ಸಮ್ಮಾಸಂಬುದ್ಧಸ್ಸ''

ಭಗವಂತನೂ ಅರ್ಹಂತನೂ ಸಮ್ಯಕ್ ಸಂಬುದ್ಧನೂ ಆತ ಆತನಿಗೆ ನಮಸ್ಕಾರ. ಬುದ್ಧ, ಧರ್ಮ,ಸಂಘ ಎಂಬ ಮೂರು ರತ್ನಗಳಿಗೆ ನಾನು ಒಂದು ಬಾರಿ, ಎರಡುಬಾರಿ, ಮೂರುಬಾರಿ

೩೩. ಡಾ. ಕೃಷ್ಣ ಕೋಲ್ಹಾರ ಕುಲಕರ್ಣಿ: ಆದಿಲ್‌ಶಾಹಿ ಆಸ್ಥಾನದ ಸಾಹಿತ್ಯ, ಪುಟ -೨.

ಶರಣು ಹೋಗುತ್ತೇನೆ. ರತ್ನತ್ರಯರಲ್ಲಿ ಕೂಟ ಪ್ರಾಯವಾಗಿರುವ ''ಧರ್ಮ''ವನ್ನು ಕುರಿತು ಸಂಗ್ರಹವಾಗಿ ಪ್ರಸ್ತಾಪಿಸುತ್ತೇನೆ.

ಇತರ ಪಂಥದವರು ''ಮತ' ದರ್ಶನ, ಸಿದ್ಧಾಂತ ಎಂದು ಯಾವುದನ್ನೂ ಹೆಸರಿಸುವರೋ ಅದನ್ನು ಬುದ್ಧನು ''ಧರ್ಮ'' ಎಂದು ಕರೆದನು. ಅದನ್ನು ಬೌದ್ಧರು ''ಧರ್ಮ'' ಎಂದೇ ಕರೆಯುತ್ತಾರೆ. ಆದ್ದರಿಂದ ಬೌದ್ಧಧರ್ಮ ಎಂಬುದನ್ನು ಬುದ್ಧನು ಹೇಳಿದ ಧರ್ಮವೂ ಹೌದು, ಬೌದ್ಧರು ಧರ್ಮವೂ ಹೌದು. ಧರ್ಮವೆಂಬುದು ಬದುಕಿಗೆ ಸಂಬಂಧಪಟ್ಟುದಾದ್ದರಿಂದ ಬುದ್ಧನ ಧರ್ಮಕ್ಕೂ ಬೌದ್ಧರ ಧರ್ಮಕ್ಕೂ ಬೀಜವೃಕ್ಷ ನ್ಯಾಯದ ಸಂಬಂಧ ಬೆಳೆದು ಬಂದಿದೆ. ಈ ಪಂಥದಲ್ಲಿ ಅವರ ಧರ್ಮಕ್ಕೆ ''ಮಾರ್ಗ'' ಎಂದೂ ಹೆಸರುಂಟು. ಈ ಮಾರ್ಗವನ್ನು 'ಮಾಧ್ಯಮ ಪ್ರತಿ ಪದಾ' ಎಂದೂ 'ಆರ್ಯ ಅಷ್ಟಾಂಗಿಕ ಮಾರ್ಗ ' ಎಂದೂ ಕರೆಯುವುದುಂಟು.[೩೪]

ಕರ್ನಾಟಕದಲ್ಲಿಯ ಬೌದ್ಧಧರ್ಮ ಕುರಿತು ಹಿರಿಯ ವಿದ್ವಾಂಸರಾಗಿರುವ ಡಾ॥. ಹೆಚ್.ತಿಪ್ಪೇರುದ್ರಸ್ವಾಮಿಯವರು ಈ ರೀತಿಯಾಗಿ ವಿವರಿಸುತ್ತಾರೆ.... ಜೈನದರ್ಮಕ್ಕಿಂತ ಹೆಚ್ಚಿನ ಪ್ರಭಾವವನ್ನು ಬೀರಲು ಶಕ್ತವಾಯಿತು ಬೌದ್ಧಧರ್ಮ. ಮಹಾವೀರನೂ ಸ್ವಲ್ಪ ಹೆಚ್ಚು ಕಡಿಮೆ ಬುದ್ಧನ ಕಾಲದಲ್ಲಿಯೇ ಇದ್ದವನು. ಅನೇಕ ಅಂಶಗಳು ಇಬ್ಬರಿಗೂ ಸಮಾನವಾಗಿದ್ದವು. ವೇದದ ಪರಮ ಪ್ರಾಮಾಣ್ಯವನ್ನು ಪ್ರತಿಭಟಿಸಿದರು; ಯಜ್ಞ ಯಾಗಾದಿಗಳನ್ನು ಖಂಡಿಸಿದರು; ಚತುರ ವರ್ಣಗಳನ್ನೂ ಮೇಲು ಕೀಳುಗಳನ್ನು ತಳ್ಳಿ ಹಾಕಿದರು; ಸರ್ವರಿಗೂ ಸಮಾನ ಅವಕಾಶಗಳನ್ನು ಕಲ್ಪಿಸಿ ಕೊಟ್ಟರು ಮತ್ತು ನೈತಿಕ ಜೀವನಕ್ಕೆ ಹೆಚ್ಚು ಗಮನಕೊಟ್ಟರು ಆದರೆ ಬುದ್ಧ ಆಹಿಂಸೆಯಬ್ಬು ಅವ್ಯವಹಾರಿಕವಾದ ಅತಿರೇಕಕ್ಕೆ ಕೊಂಡೊಯ್ಯಲಿಲ್ಲ. ಅಲ್ಲದೆ ಈತನ ಉಪದೇಶಗಳು ಎಲ್ಲ ಮನೋಧರ್ಮವರಿಗೂ ಹಿಡಿಸುವಂತೆ ವೈಚಾರಿಕ ವಿಮರ್ಶೆಯಿಂದಲೂ ವ್ಯಾವಹಾರಿಕ ದೃಷ್ಟಿಯಿಂದಲೂ ಕೂಡಿದ್ದವು. ಮೇಲಾಗಿ ಸಂಘ, ವ್ಯವಸ್ಥೆಯ ಶಕ್ತಿ ಬುದ್ಧನಿಗೆ ಅದ್ಭುತವಾಗಿತ್ತು. ಅದು ಆತನ ಧರ್ಮ ಪ್ರಸರಣ ಕಾರ್ಯಕ್ಕೆ ಸಹಕಾರಿಯಾಯಿತು.[೩೫]

ಬುದ್ಧ ಧರ್ಮವನ್ನು ಶಿಲ್ಪ, ಚಿತ್ರ ವಾಸ್ತುಗಳ ಮುಖಾಂತರ ಜನರ ಮಧ್ಯ ಹರಡಿದರೂ ಬುದ್ಧ ಧರ್ಮಕ್ಕಿಂತ ಶಿಲ್ಪ , ಚಿತ್ರ, ವಾಸ್ತುಕಲೆಗಳು ಇದರಿಂದ ಮೆಲ್ಮಟ್ಟಕ್ಕೆ ಅಭಿವೃದ್ದಿಗೊಂಡವಲ್ಲದೆ ಧರ್ಮ ಪ್ರಸರಣಕ್ಕೂ ಈ ಕಲಾ ಮಾಧ್ಯಮಗಳು ಧಾರ್ಮಿಕ ಪಾಠೋಪಕರಣಗಳಾದವು ಮತ್ತು ಬೌದ್ಧಧರ್ಮ ಎಷ್ಟೊಂದು ಸರಳವಾಗಿತ್ತು ಎಂಬುದನ್ನು ಮಹಾರಾಷ್ಟ್ರದ ಹಿರಿಯ ವಿದ್ವಾಂಸ ವಾಸ್ತು ಶಿಲ್ಪ ತಜ್ಞ ಮತ್ತು ಕಲಾವಿಮರ್ಶಕರಾಗಿ ಅನೇಕ ಅಜಂತಾ, ಎಲ್ಲೋರಾಗಳ ಕುರಿತು ಸರಳ ಆಂಗ್ಲ ಗ್ರಂಥ ರಚಿಸಿರುವ ಡಾ॥ ಬಿ.ವಿ.ಪತಿ (Pathy) ಯವರು ಹೀಗೆ ವಿವರಿಸುತ್ತಾರೆ.

---

೩೪. ಎಚ್ಚೆತ್ತಕ್ಕೆ ಸಂ.: ಅವಲೋಕನ, ಎಚ್.ವಿ. ರಂಗರಾಜು , ಪುಟ -೧೬೧.
೩೫. ಅ.ನ. ಕೃಷ್ಣರಾಯ ಸಂ.: ಭಾರತೀಯ ಸಂಸ್ಕೃತಿ ದರ್ಶನ, ಜಿ.ಪಿ.ರಾಜರತ್ನಂ. ಪುಟ - ೧೯೧.

ಕ್ರಿ.ಶ.ಪೂ.ಆರನೇ ಶತಮಾನದಲ್ಲಿ ಬುದ್ಧನಿಂದ ಬೋಧಿಸಲ್ಪಟ್ಟ ಬೌದ್ಧ ಧರ್ಮವು ಸರಳ ಧರ್ಮವಾಗಿದೆ ನಂತರದ ಶತಮಾನಗಳಲ್ಲಿ ಅದನ್ನು ಧಾರ್ಮಿಕ ಆಚರಣೆ ಮತ್ತು ಪೂಜೆಗಳಿಂದ ಸಂಕೀರ್ಣಗೊಳಿಸಲಾಗಿದೆ. ಅದರಲ್ಲೂ ಪುರಾಣ ಕಥೆಗಳು ಇರುವಂತೆ ಅಸಂಖ್ಯಾತ ದೇವ-ದೇವತೆಯರ ಆಕಾಶಗಂಗೆಯೇ ಆಧರ್ಮದಲ್ಲಿಗೆ ಪ್ರಾರಂಭ ಪೂಜಾವಿದಾನವನ್ನು 'ಹೀನಾಯಾನ ' ಎಂದು ಕರೆಯುತ್ತಿದ್ದರು ಅದು ತುಂಬಾ ಸರಳ ಮತ್ತು ಸಂಪ್ರದಾಯ ಬದ್ಧವಾಗಿತ್ತು. ಬುದ್ಧನನ್ನು ಈ ವಿಧಾನದಲ್ಲಿ ಮನುಷನನ್ನಾಗಿ ಸಾಕಾರಗೊಳಿಸದೆ ಚಕ್ರ, ಪಾದಮುದ್ರೆ, ಬೋದಿ ವೃಕ್ಷಗಳಂತಹ ಸಾಂಕೇತಿಕ ರೂಪದಲ್ಲಿ ಪೂಜಿಸಲಾಗುತ್ತಿತ್ತು ಆದರೆ ಮಹಾಯಾನ ಪಂಥವು ಮೂಲಧರ್ಮವನ್ನು ಅಲಂಕಾರಿಕವಾಗಿ, ಜನಸಾಮಾನ್ಯರ ಪರವಾಗಿವಾಗಿ ಮತ್ತು ರೂಪಾಂತರಗಳ (Anthropomorphic) ನೆಲೆಯಲ್ಲಿ ಬೆಳೆಯಿತು. ಬುದ್ಧಧರ್ಮ ಬೆಳೆದಂತೆ ಆತನದೆ ಕಲೆ, ಪ್ರತಿಮಾ ಶಾಸ್ತ್ರ ಮತ್ತು ಶಿಷ್ಯಮಂಡಳಿ ಬೆಳೆಯಿತಲ್ಲದೆ ಧಾರ್ಮಿಕ ನಂಬುಗೆ ಮತ್ತು ಆಚರಣೆಗಳು ಚಿತ್ರಕಲಾ ಮಾಧ್ಯಮದ ಹಿನ್ನಲೆಯಲ್ಲೂ ಬುದ್ಧಧರ್ಮ ವಿಸ್ತಾರಗೊಂಡಿತು. [೩೬]

ಬೌದ್ಧ ಧರ್ಮದ ಹಸಪ್ತ್ರತಿಗಳನ್ನು ಯಾರೂ ಸಂಗ್ರಹಿಸಲಿಲ್ಲವೋ ಅಥವಾ ಸಂಗ್ರಹಿಸಿ ನಾಶಪಡಿಸಲಾಯಿತೋ? ತಿಳಿಯದು. ದೇಶದಲ್ಲಿಯೇ ಪ್ರಚಲಿತವಿದ್ದ ಬೌದ್ಧಧರ್ಮ ಆಂದ್ರಪ್ರದೇಶ, ಮಹಾರಾಷ್ಟ್ರದಲ್ಲಿರುವಂತೆ ಕರ್ನಾಟಕದಲ್ಲೂ ಸಮೃದ್ಧವಾಗಿ ಇತ್ತು ಬಹುಶಃ ಅನೇಕ ಬೌದ್ಧ ದೇವಾಲಯಗಳನ್ನು ಅನೇಕ ಧರ್ಮಿಯರು ಇಂದಿಗೂ ಆಕ್ರಮಣ ಮಾಡಿಕೊಂಡಿರುವಂತೆ ಪುರೋಗಾಮಿ ಮನೋಭಾವದವರು ಹಸ್ತಪ್ರತಿಗಳನ್ನು ನಾಶಪಡಿಸಿರಬಹುದು. ಧರ್ಮ ಎಂಬುದನ್ನು ತಿಳಿದು ಕೊಂಡವನು ಧಾರ್ಮಿಕನಾಗುತ್ತಾನೆ. ಆ ಧರ್ಮ ತಿಳಿಯದವನು ದಾರ್ಮಿಕ ಧ್ವಂಸಕನು, ಲೋಕ ಕಂಟಕನು ಧರ್ಮಕ್ಕಿಂತ ಜಾತಿವಾದಿಯು ಆಗಬಲ್ಲ ಎಂಬುದಕ್ಕೆ ಇಂತಹ ಘಟನೆಗಳು ಉದಾಹರಣೆಯಾಗಬಲ್ಲವು.

ಮಹಾಯಾನ ಧರ್ಮ ಕೇವಲ ಬನವಾಸಿ ಅಲ್ಲದೇ ಕನ್ನಡ ನಾಡಿನ ಈಶಾನ್ಯ ಭಾಗದಲ್ಲಿಯೂ ಪ್ರಚಲಿತವಿತ್ತೆಂದು ಊಹಿಸಬಹುದು. ಭಂತೆ ನಾಗಾರ್ಜುನನು ಕರ್ನಾಟಕದ ಈಶಾನ್ಯ ಭಾಗದಲ್ಲಿಯೇ ಇದ್ದವನು ಇವನು ಕನ್ನಡಿಗನೆಂದು ಕೆಲವು ವಿದ್ವಾಂಸರು ಅಭಿಪ್ರಾಯ ಪಡುತ್ತಾರೆ. ಅತ್ಯಂತ ಪ್ರಭಾವಶಾಲಿ ವೆಕ್ತಿತ್ವವನ್ನು ಪಡೆದಿದ್ದ ನಾಗಾರ್ಜುನ ತನ್ನ ಹತ್ತಿರದ ಜನರಿಂದಲೂ ಸಾಕಷ್ಟು ಗೌರವ, ಮನ್ನಣೆಗಳನ್ನು ಪಡೆಯುತ್ತಿದ್ದಿರಬೇಕು. ಆದುದರಿಂದ ಇವನ ಕಾಲದಲ್ಲಿ ಇಂದಿನ ಗುಲ್ಬರ್ಗಾ, ಬೀದರ ಜಿಲ್ಲೆಗಳಲ್ಲಿ ಮಹಾಯಾನ ಬೌದ್ಧಧರ್ಮ ಆಚರಣೆಯಲ್ಲಿತ್ತು ಎಂದು ಊಹಿಸಬಹುದು. ಕರ್ನಾಟಕದ ಮಧ್ಯಭಾಗದಲ್ಲಿಯೂ ಮಹಾಯಾನ ಪ್ರಚಲಿತವಾಗಿತ್ತು 1065 ರ ಶಾಸನದಂತೆ ಲೋಕಿತೇಶ್ವರ ಮತ್ತು ತಾರಾ ಭಾಗವತಿಯವರಿಗೆ ಪೂಜೆ ನಡೆಯುತ್ತಿತ್ತು. ನಾಗಿಯಕ್ಕನೆಂಬ ಬುದ್ಧ ಭಕ್ತೆ

---

೩೬. ಅ.ನ. ಕೃಷ್ಣರಾಯ ಸಂ.: ಭಾರತೀಯ ಸಂಸ್ಕೃತಿ ದರ್ಶನ, ಎಚ್.ತಿಪ್ಪೇರುದ್ರ ಸ್ವಾಮಿ, ಪುಟ - ೧೯೧.

ತಾರಾದೇವಿಯ ವಿಗ್ರಹ ವನ್ನು ಮಾಡಿಸಿದಳು ಧಾರವಾಡ ಜಿಲ್ಲೆ (ಇಂದಿನ ಗದಗ) ಕೋಳಿವಾಡ, ಡಂಬಳಗಳಲ್ಲಿ ತಾರಾದೇವಿ ದೇವಾಲಯಗಳಿದ್ದವು ಬಿಜಾಪುರ ಜಿಲ್ಲೆಯ ಲೋಕಾಪುರದಲ್ಲಿನ ದೇವಸ್ಥಾನವು ಬೌದ್ಧ ದೇವಾಲಯವಾಗಿತ್ತು. ಡಂಬಳ ಕೋಳಿವಾಡಗಳಂತೆ ಮಲೆನಾಡ ಕದರಿ ದೇವಸ್ಥಾನ, ಧರ್ಮಸ್ಥಳ ದೇವಾಲಯ, ಕೊಲ್ಲೂರ ದೇವಾಲಯ ಶೃಂಗೇರಿಯ ಶಾರಾದಾ ದೇವಾಲಯವೂ ಹಿಂದೆ ಪ್ರಜ್ಞಾ ಪಾರಮಿತ ದೇವಾಲಯವಾಗಿತ್ತೆಂದು ಕೆಲವರು ಹೇಳುತ್ತಾರೆ.[೩೭]

ಬುದ್ಧನನ್ನು ಕುರಿತು ಕರ್ನಾಟಕದ ಪರಿಸರದಲ್ಲಿ ಹಸ್ತಪ್ರತಿಯಾಗಲಿ, ಚಿತ್ರವಾಗಲಿ ಸದ್ಯಕ್ಕೆ ಹೊರಬರದೇ ಇದ್ದರೂ ಬಿಹಾರದ ವಿಕ್ರಮಶಿಲಾ ಚೌತಾಲ್ಯಯದಲ್ಲಿ ಕ್ರಿ.ಶ. 1145 ಕಾಲಘಟ್ಟದೆಂದು ಹೇಳಬಹುದಾದ '' ಬುದ್ಧಾ ಮಂಜುಶ್ರೀ ಮತ್ತು ತಾರಾದಂತಹ ಗ್ರಂಥದಲ್ಲಿ 69 × 69''ಮಿಲಿಮೀಟರ ಆಳತೆಯ ಕಿರುರೂಪದ ಮನಮೋಹಕ ಚಿತ್ರಗಳು ದೊರೆತಿವೆ. ಇತ್ತಿಚೆಗೆ ವಾಸಿಂಗಟನ್ ಸೋನಿಯಾ ಸಾಕ್ಲೇರ್ ಗ್ಯಾಲರಿಯಲ್ಲಿ ನಡೆದ ಹಿಮಚ್ಛಾದಿತ ಪರಿಸರ 160ಕ್ಕೂ ಮಿಗಿಲಾದ ಬೌದ್ಧ ಹಿಂದು ಕಲಾಕೃತಿಗಳು ಜನರ ಮನ ಸೆಳೆದವು ಅದರಲ್ಲಿ ಹನ್ನೆರೆಡನೆ ಶತಮಾನದ ಪ್ರಜ್ಞಾನರಮಿತ ಕೃತಿಯ ಹಸ್ತಾಪ್ರತಿಯಾಳಗಿನ ಬುದ್ಧ, ಬೋದಿಸತ್ವ ಮತ್ತು ಬಿಕ್ಷುಗಳೊಂದಿಗೆ ಇರುವ ತಿಬೇಟಿನ ಹಸ್ತಾಪ್ರತಿ ಚಿತ್ರಕಲಾಕೃತಿ ಪ್ರದರ್ಶನಾಲಯದ ಪ್ರಥಮ ಆಕರ್ಷಣೆಯ ಕೇಂದ್ರವೂ ಆಗಿತ್ತು. ಈ ರೀತಿಯ ಕಲಾವಿದರು ರೇಷ್ಮೆ, ಕಾಗದ, ಕಾಷ್ಟಗಳ ಮೇಲೂ ಕಲಾಕೃತಿ ರಚಿಸಬಲ್ಲ ರಂತಹ ಖ್ಯಾತ ಕಲಾವಿದರಾಗಿದ್ದರು.[೩೮]

2. ಚಿತ್ರಕಲಾ ವಿನ್ಯಾಸವನ್ನು ಹೊಂದಿದ ಜೈನ ಧರ್ಮದ ಧಾರ್ಮಿಕ, ಹಸ್ತಪ್ರತಿಗಳು

ತತ್ತ್ವ ಪ್ರೀತಿ ಮನಕ್ಕೆ ಪುಟ್ಟಲದು ಸಮ್ಯಗ್ದರ್ಶನಂ ; ಮತ್ತಮಾ ।
ತತ್ತ್ವಾರ್ಥಂಗಳನೊಲ್ದು ಭೇದಿಪುದು ಸಮ್ಯಜ್ಞಾನ ಮಾಬೋಧದಿಂ ॥
ಸತ್ವಂಗಳ್ಕಿಡದಂತು ಟೋವಿ ನಡೆಯಲ್ಸಮ್ಯಕ್ಚರಿತ್ರಂ ಸುರ ।
ತ್ನತ್ವಂ ಮೂರಿವು ಮುಕ್ತಿಗೆಂದರುಪಿದೈ ರತ್ನಾಕರಾಧೀಶ್ವರಾ ॥

ರತ್ನಾಕರ ವರ್ಣಿ.[೩೯]

ಕರ್ನಾಟಕದ ಪ್ರಾಚೀನತಮ ಧರ್ಮಗಳಲ್ಲಿ ಅಹಿಂಸಾ ಪ್ರಧಾನವಾದ ಜೈನಧರ್ಮ ಪ್ರಮುಖವಾಗಿದೆ. ಕನ್ನಡ ನಾಡಿಗೂ ಜೈನ ಧರ್ಮಕ್ಕೂ ಇರುವ ಸಂಬಂಧ ತುಂಬ ನಿಕಟವಾದುದು. ಭಾರತದಲ್ಲಿ ಇತಿಹಾಸದ ಕಾಲವನ್ನು ಪ್ರಾರಂಭಿಸಿದ ಮೌರ್ಯ ಚಂದ್ರಗುಪ್ತನು ಕನ್ನಡನಾಡಿನ ಶ್ರವಣಬೆಳಗೊಳದ ಚಂದ್ರಗಿರಿ ಬೆಟ್ಟಕ್ಕೆ ಬಂದು ನೆಲೆಸುವುದರಿಂದ ಕರ್ನಾಟಕದ ಇತಿಹಾಸವನ್ನು ಪ್ರಾರಂಭಿಸಿದ ಈ ಕಾರಣಕ್ಕಾಗಿ ಕರ್ನಾಟಕದ ಇತಿಹಾಸವನ್ನು ಜೈನ ಇತಿಹಾಸ ಮತ್ತು ಅದು ಜೈನ ಧರ್ಮದ ಇತಿಹಾಸ. ಜೈನ ಧರ್ಮ ಹಲವು ಶತಮಾನಗಳವರೆಗೆ ಕರ್ನಾಟಕದ ರಾಷ್ಟ್ರೀಯ

---

೩೭. T.V. Pathy : Ajanta, Ellora and Aurangabad Caves, Page -12.

೩೮ . ಎಚ್ಚೆಸ್ಕೆ ಸಂ.: ಅವಲೋಕನ : ಎಚ್.ವಿ. ರಂಗರಾಜು, ಪುಟ -೧೪

೩೯. ರತ್ನಾಕರ ವರ್ಣಿ : ಭರತೇಶ ವೈಭವ, ಪುಟ -೫೫

ಕರ್ನಾಟಕದ ಪ್ರಾಕೃತ ಹಸ್ತಪ್ರತಿ ವರ್ಣಚಿತ್ರಗಳು

ಕೃತಿ : ಧವಳ ಗ್ರಂಥ



Courtesy :

C.Shivaram Murthy
South Indian Paintings
Publication Divsion Minstry of Information
& Brod casting Govt.of India, New Delihi

ಧರ್ಮವಾಗಿತ್ತು.[೪೦] ಎನ್ನುವ ಡಾ॥ಕಮಲಾ ಹಂಪನಾ ಅವರ ಮಾತನ್ನು ಇಲ್ಲಿ ಸ್ಮರಿಸಬೇಕು.

ಜೈನ ಧರ್ಮಕುರಿತು ಹಿರಿಯ ವಿದ್ವಾಂಸರಾಗಿರುವ ಡಾ|.ಹೆಚ್.ತಿಪ್ಪೇರುದ್ರ ಸ್ವಾಮಿಯವರು ಈ ರೀತಿ ವಿವರಿಸುತ್ತಾರೆ. ಜೈನ ಧರ್ಮದ ಸಂದೇಶವೆಂದರೇ '' ಅಹಿಂಸೆ ಮತ್ತು ಸಮತೆ'' ಜಾತಿ ಮತಗಳ ಯಾವ ತಾರತಮ್ಯವೂ ಇಲ್ಲದೆ ಎಲ್ಲ ಮಾನವ ಜೀವಿಗಳು ಕರ್ಮ ಬಂಧನವನ್ನು ಪರಿಹರಿಸಿ ಕೊಳ್ಳುವ ಮಾರ್ಗವನ್ನು ಕೈಕೊಳ್ಳಬೇಕೆಂದು ಸಾರಿತು. ಮಾನವ ಜನ್ಮದ ಮಹತ್ವವನ್ನು ಮನಗಾಣಿಸಿಕೊಟ್ಟಿತು. ದೇವತೆಗಳಿಗೂ ಇಲ್ಲದ ಅಪೂರ್ವ ಅವಕಾಶ ಮಾನವನಿಗೆ ಮಾತ್ರ ಉಂಟು. ದೇವಲೋಕದಲ್ಲಿ ಹುಟ್ಟಿದ ಜೀವ ಮೋಕ್ಷ ಪಡೆಯಬೇಕಾದರೆ ಮತ್ತೆ ಭೂ ಲೋಕಕ್ಕೆ ಬರಲೇಬೇಕು. ಮಾನವ ಲೋಕದಿಂದ ಮಾತ್ರ ಸಿದ್ಧಶಿಲೆಗೆ ಹೋಗುವುದು ಸಾಧ್ಯವೆಂಬ ಅವರ ಕಲ್ಪನೆಯಲ್ಲಿ ಈ ಅಭಿಪ್ರಾಯ ವ್ಯಕ್ತವಾಗುತ್ತದೆ '' ಅಮೃತಸ್ಯ ಪುತ್ರಾ ಃ '' ಎಂದು ಉಪನಿಷತ್ತುಗಳು ಆಗಲೇ ಘೋಷಿಸಿದ್ದ ಮಾನವತ್ವದ ಬೆಲೆಯನ್ನು ಜೈನಧರ್ಮ ಮತ್ತೆ ಎತ್ತಿ ತೋರಿಸಿತು. ಭರತ ಖಂಡದ ಸಾಂಸ್ಕೃತಿಕ ಜೀವನವನ್ನು ರೂಪಿಸಿದ ಬಹು ದೊಡ್ಡ ಶಕ್ತಿಯಾಗಿ ಪರಿಣಮಿಸಿತು. ಬಹು ಪ್ರಾಚೀನ ಕಾಲದಲ್ಲಿಯೇ ಕರ್ನಾಟಕಕ್ಕೂ ಕಾಲಿಟ್ಟು ಕನ್ನಡ ಸಾಹಿತ್ಯ ಮತ್ತು ಸಂಸ್ಕೃತಿಗಳ ಉಗಮಕ್ಕೆ ಮತ್ತು ಬೆಳವಣಿಗೆಗೆ ಪ್ರಚೋದಕ ಶಕ್ತಿಯಾಯಿತು.[೪೧]

ಜೈನ ಧರ್ಮದ ಕಲಾತ್ಮಕ ಪರಿಕಲ್ಪನೆ : ಹಿರಿಯ ವಿದ್ವಾಂಸರು, ಜೈನ ಶಾಸ್ತ್ರ ಪರಿಣಿತರಾಗಿರುವ ಶ್ರೀ ಕೆ.ಎಸ್.ಧರಣೇಂದ್ರಯ್ಯನವರು ಜೈನ ಧರ್ಮವನ್ನು ಆಕಾಶದಲ್ಲಿ ನರ್ತಿಸುವ ಸಾಧಕನಂತೆ ಇದ್ದು ಅದರ ಮುಖಾಂತರವೇ ಧರ್ಮಸೂಕ್ಷ್ಮವನ್ನು ಹೇಗೆ ಪರಿಗ್ರಹಿಸಲಾಗುತ್ತಿದೆ ; ಎಂಬುದನ್ನು ಈ ರೀತಿಯಾಗಿ ವಿವರಿಸಿದ್ದಾರೆ. '' ಜೈನ ಸಿದ್ಧಾಂತದ ಪ್ರಕಾರ ಲೋಕ ಅನಾದಿ ; ಜೀವ ಅನಾದಿ, ಕರ್ಮ ಅನಾದಿ, ಲೋಕವನ್ನು ಯಾರು ಸೃಷ್ಟಿಸಲಿಲ್ಲ. ಯಾರೂ ರಕ್ಷಿಸುವುದಿಲ್ಲ; ಯಾರೂ ನಾಶಪಡಿಸುವುದಿಲ್ಲ ಸ್ವಾಭಾವಿಕ, ಪ್ರಾಕೃತಿಕ ನಿಯಮಗಳಿಗೆಗೊಳಪಟ್ಟ ಲೋಕದಲ್ಲಿ ಪರಿವರ್ತನಗಳಾಗುವುದುಂಟು. ಲೋಕವು ಆಕಾಶದಲ್ಲಿ ತೇಲುತ್ತಾ ಮೂರು ಆವೃತ್ತವಾಗಿದೆ. ಇದು ಆಕಾರದಲ್ಲಿ ಕಾಲನ್ನಗಲಿಸಿ ಸೊಂಟದ ಮೇಲೆ ಕೈಯಿಟ್ಟಿರುವ ನರ್ತಕನಂತಿದೆ. ಲೋಕದ ತುಟ್ಟತುದಿಯೇ ಮೋಕ್ಷಸ್ಥಾನ ಅದರ ಕೆಳಗಡೆ ಕ್ರಮವಾಗಿ ಸರ್ವಾರ್ಥಸಿದ್ಧಿ 5 ಅನುತ್ತರ, 9 ಅನುದಿಶ, 9 ಗ್ರೇವೆಯತ ವಿಮಾನಗಳು, ಹದಿನಾರು ಸ್ವರ್ಗಗಳೂ, ಅವುಗಳ ಮಧ್ಯದಲ್ಲಿ ಮನುಷ್ಯ ಲೋಕವೂ ಅದರ ಕೆಳಗಡೆ ಏಳು ನರಕಗಳೂ ಇವೆ.[೪೨]''

ಜೈನ ದರ್ಮವು ಚಿತ್ರ, ಶಿಲ್ಪ, ವಾಸ್ತು ಶಿಲ್ಪಕ್ಕೆ ವಿಪುಲವಾದಂತ ಪ್ರಾಶಸ್ತ್ಯ ನೀಡಿದೆ ಎಂದು ಡಾ॥ ಕಮಲಾ ಹಂಪನಾ ಅವರು ಅತ್ಯಂತ ಅಧಿಕೃತವಾದ ಮಾಹಿತಿಯನ್ನು ಈ ರೀತಿಯಾಗಿ ವಿವರಿಸುತ್ತಾರೆ. '' ಕರ್ನಾಟಕದ ವಾಸ್ತು ಶಿಲ್ಪ ಮತ್ತು ಚಿತ್ರಕಲೆಗೆ ಜೈನಧರ್ಮದ ಕಾಣಿಕೆ ವಿಪುಲವಾಗಿದೆ.

೪೦. ಎಚ್ಚೆಸ್ಕೆ ಸಂ.: ಅವಲೋಕನ, ಹೆಚ್. ತಿಪ್ಪೇರುದ್ರಸ್ವಾಮಿ , ಪುಟ -೧೭
೪೧. ಎಚ್ಚೆಸ್ಕೆ ಸಂ.: ಅವಲೋಕನ, ಡಾ. ಕಮಲಾಹಂಪನ , ಪುಟ -೦೯
೪೨ . ಎಚ್ಚೆಸ್ಕೆ ಸಂ.: ಅವಲೋಕನ, ಎಚ್.ವಿ. ರಂಗರಾಜು , ಪುಟ -೧೪

ಜೈನರ ಹಸ್ತಪ್ರತಿಗಳಲ್ಲಿ ವರ್ಣ ಚಿತ್ರಗಳು.



Courtesy:
B.S.Keshavan's The Book In India,
N.B.T.Publication, New Delhi.

ಈ ನಾಡಿನ ಎಲ್ಲ ಭಾಗಗಳಲ್ಲೂ ಜೈನಕಲೆಯು ವೈಭವದ ಪ್ರಸಾರ ಕಾಣಬಹುದುದಾಗಿದೆ. ಕನ್ನಡ ರಾಜರ ನಿರ್ಮಾಣವಾದ ಅಜಂತ, ಎಲ್ಲೋರ ಈಗ ಕರ್ನಾಟಕದ ಹೊರಗಡೆ ಇದ್ದರೂ ಇಲ್ಲಿಯ ಜೈನಧರ್ಮದ ಪ್ರಾಚೀನ ಮೂರ್ತಿ ಕಲೆಗೆ ನಿದರ್ಶನಗಳಾಗಿವೆ. ಕದಂಬ ದೊರೆ, ಮೃಗೇಶವರ್ಮ ಕಟ್ಟಿಸಿಕೊಟ್ಟ ಹಲಸಿ(ಗೆ)ಯ (ಬೆಳಗಾವಿಜಿಲ್ಲೆ) ಬಸದಿ, ಬೆಳಗಾವಿಯ ಕಮಲ ಬಸದಿ, ಹುಂಚದ ಪಂಚ ಬಸ್ತಿ, ಮೂಡಬಿದರೆಯ ಸಿದ್ಧಾಂತ ಮತ್ತು ಸಾವಿರ ಕಂಬದ ಬಸದಿ, ಕಾರ್ಕಳದ ಚತುರ್ಮುಖ ಬಸದಿ, ಹಳೇಬಿಡು, ಜಿನನಾಥಪುರ, ಕಂಬದ ಹಳ್ಳಿ ಬಸದಿಗಳು ಗೇರು ಸೊಪ್ಪಿಯ ಚತುರ್ಮುಖ ಬಸದಿ, ವರಾಂಗದ ಬಸದಿ, ಲಕ್ಷ್ಮೇಶ್ವರದ ಶಂಕ ಬಸದಿ ಮೊದಲಾದ ಜೈನ ಮಂದಿರಗಳು ಅಲ್ಲಿರುವ ಮೂರ್ತಿಗಳು ಕರ್ನಾಟಕಕ್ಕೆ ಜೈನ ವಾಸ್ತು ಶಿಲ್ಪದ ಕೊಡುಗೆಯ ಕುರುಹುಗಳಾಗಿವೆ. ವೇಸರ, ನಾಗರ,ದ್ರಾವಿಡ ಶೈಲಿಗಳಲ್ಲಿ ಮೇಳೈಸಿಕೊಂಡು ಜೈನ ಮಂದಿರಗಳು ತಮ್ಮದೇ ಆದ ಸಮನ್ವಯ ಶೈಲಿಯನ್ನು ಪಡೆದುಕೊಂಡಿವೆ.

ಜೈನ ಚಿತ್ರಕಲೆಯೂ ಸ್ಮರಣೆಯವಾದುದು,ಶ್ರವಣ ಬೆಳಗೊಳ, ಮೂಡಬಿದಿರೆ ಕಾರ್ಕಳ, ಹುಂಚ ಮೊದಲಾದ ಕಡೆಗಳಲ್ಲಿರುವ ಜೈನ ಮಠಗಳಲ್ಲಿ ಇರುವ ಭಿತ್ತಿ ಚಿತ್ರಗಳು, ಜೈನ ಚಿತ್ರಕಲೆಗೆ ಸಾಕ್ಷಿ ಹೇಳುತ್ತವೆ. ಇವಲ್ಲದೇ ಅನೇಕ ಓಲೆ ಗರಿಗಳಲ್ಲೂ ಓಲೆಗ್ರಂಥಗಳಿಗೆ ಎರಡೂ ಕಡೆ ಹಾಕುತ್ತಿದ್ದ ಮರದ ಕಟ್ಟುಗಳ ಮೇಲೂ ಚಿತ್ರಗಳೂ, ರೇಖಾ ವಿನ್ಯಾಸಗಳೂ ಕಂಡು ಬಂದಿವೆ. ಜೈನ ಸಿದ್ಧಾಂತದ ಪ್ರತಿಪಾದನೆ ಹಾಗೂ ಶುಭ, ಅಶುಭ ಸ್ವಪ್ನ ದರ್ಶನ ಮೊದಲಾದವನ್ನು ತೋರಿಸುವ ಜೈನ ಧರ್ಮಕ್ಕೆ ವಿಶಿಷ್ಟವಾದ ಚಿತ್ರಗಳು ಹತ್ತು ಹಲವಾರಿವೆ.[೪೩]

ಹಿರಿಯ ಮಹಿಳಾ ವಿದ್ವಾಂಸರು ಹಸ್ತ ಹ್ತಪ್ರತಿತಜ್ಞರು ಆಗಿರುವ ಡಾ।.ವೈ.ಸಿ.ಭಾನುಮತಿಯವರು ಜೈನ ಹಸ್ತಪ್ರತಿಯನ್ನು ಕುರಿತು ಈ ರೀತಿ ವಿವರಿಸಿದ್ದಾರೆ...... ಕರ್ನಾಟಕದ ಜೈನಹಸ್ತಪ್ರತಿಗಳಲ್ಲಿ ಚಿತ್ರಕಲೆ ತನ್ನ ಉತ್ಕರ್ಷ ಕಂಡು ಕೊಂಡಿದ್ದು ಹೊಯ್ಸಳರ ಕಾಲದಲ್ಲೆಂದು ತೋರುತ್ತದೆ.''ಗ್ರಂಥಗಳಲ್ಲಿ ಲಿಪಿಕಾರನು ಅಂಚುಗಳನ್ನು ರೇಖಾ ವಿನ್ಯಾಸದಿಂದ ಅಲಂಕರಿಸುತ್ತಿದ್ದನಾದರೂ ಅದನ್ನೇ ಮಾಧ್ಯಮವಾಗಿ ಉಪಯೋಗಿಸಿ ಗ್ರಂಥದ ಮಹತ್ವವನ್ನು ಮೊತ್ತ ಮೊದಲಿಗೆ ಹೆಚ್ಚಿಸಿದವರು ಹೊಯ್ಸಳ ಚಿತ್ರಕಲಾವಿದರು. ಮೂಡಬಿದರೆಯ ಜೈನ ಸಿದ್ಧಾಂತ ಭವನದ ಹಸ್ತಪ್ರತಿ ಭಂಡಾರದಲ್ಲಿ ಸುರಕ್ಷಿತವಾಗಿರುವ. ಧವಳ, ಜಯಧವಳ, ಮಹಾಧವಳ ಗ್ರಂಥಗಳ ಹಸ್ತಪ್ರತಿಗಳು ಕರ್ನಾಟಕದ ಸಂರಕ್ಷಿತ ಹಸ್ತಪ್ರತಿಗಳು ಎಂದಷ್ಟೇ ಪ್ರಸಿದ್ಧವಾಗಿರದೇ ಅಲ್ಲಿ ಬರೆಯಲಾಗಿರುವ ಚಿತ್ರಗಳಿಂದಲೂ ತುಂಬ ಮಹತ್ವದ ಹಸ್ತಪ್ರತಿಗಳೆನಿಸಿವೆ.''

ಚಿತ್ರಗಳನ್ನು ಬರೆಯಲೋಸುಗ ವಿಶಾಲವಾಗಿರುವ ತಾಳೆಗರಿಗಳನ್ನು ಆಯ್ದುಕೊಳ್ಳಲಾಗಿದೆ. ಈ ಗ್ರಂಥಗಳಲ್ಲಿ ಜೈನ ತೀರ್ಥಂಕರರು, ಯಕ್ಷಿಯರು, ಮುನಿಗಳು,

---

೪೩. ರತ್ನಾಕರ ವರ್ಣಿ : ಭರತೇಶ ವೈಭವ, ಪುಟ -೫೫

ಕರ್ನಾಟಕದ ಹಸ್ತಪ್ರತಿ ಚಿತ್ರಕಲೆ- ಒಂದು ಅಧ್ಯಯನ

ಜೈನರ ಹಸ್ತಪ್ರತಿಗಳಲ್ಲಿ ವರ್ಣ ಚಿತ್ರಗಳು.

ಮಹಾರಾಣಿ ತ್ರಿಶಲಾದೇವಿಯ ೧೪ ಕನಸುಗಳು.



Courtesy:
B.S.Keshavan's The Book In India,
N.B.T.Publication, New Delhi.

ಭಕ್ತರು,ಸಖಿಯರು, ಸೇವಕ ವರ್ಗದವರು ಮುಂತಾದವರ ಚಿತ್ರಗಳಿವೆ. ವರ್ಣ ಚಿತ್ರಗಳನ್ನು ಗರಿಯ ಎರಡೂ ಪಾರ್ಶ್ವ ಅಂಚಿನಲ್ಲಿ ಬಿಡಿಸಲಾಗಿದೆ. ಇದರಲ್ಲಿ ಕೂರ್ಚಿಕೆಯೆಂಬ ವಿಶೇಷ ಲೇಖನಿಯಿಂದ ರೇಖೆಗಳನ್ನು ಎಳೆದು ತೂಲಿಕಾ ಶಲಾಕವೆಂಬ ಕುಂಚದಿಂದ ಬಣ್ಣ ಮೂಡಿಸಲಾಗಿದೆ, ಈ ಬಣ್ಣಗಳು ಸಸ್ಯಜನ್ಯವೆಂಬುದನ್ನು ಗಮನಿಸಬೇಕು.[೪೪]

ಡಾ. ಎಂ. ಎಂ. ಕಲಬುರ್ಗಿಯವರ ಜೈನ ಹಸ್ತಪ್ರತಿಗಳ ಬಗೆಗೆ ಈ ರೀತಿಯಾದ ವಿವರ ನೀಡುತ್ತಾರೆ...... ಜೈನ ಹಸ್ತಪ್ರತಿಗಳ ದೃಷ್ಟಿಯಿಂದ ಮೂಡಬಿದಿರೆ ಒಂದು ಅಪರೂಪದ ಊರು. ಮಠ, ಬಸದಿಗಳಲ್ಲಿ, ವ್ಯಕ್ತಿವಶದಲ್ಲಿ ನೂರಾರು ಜೈನ ಹಸ್ತಪ್ರತಿಗಳಿವೆ. ಇವುಗಳಲ್ಲಿ ಮೂಡುಬಿದರೆಯ '' ಜೈನ ಮಠದ ಹಸ್ತಪ್ರತಿ ಭಂಡಾರ'' ತುಂಬ ಮಹತ್ವದ್ದಾಗಿದೆ. ಕನ್ನಡ, ಸಂಸ್ಕೃತ, ಪ್ರಾಕೃತ ಭಾಷೆಯ ವಿಪುಲ ಗ್ರಂಥಗಳನ್ನು ಹೊಂದಿರುವ ಈ ಮಠದಲ್ಲಿ ಪ್ರಾಚೀನ ಕಾಲದಿಂದಲೂ ಹಸ್ತಪ್ರತಿಗಳನ್ನು ಸಂಗ್ರಹಿಸುತ್ತಾ ಬರಲಾಗಿದ್ದು. ಈ ಹಿಂದಿನ ಸ್ವಾಮೀಜಿಯವರ ಕಾಲದಲ್ಲಿ ಈ ಸಂಪತ್ತು ವಿಶೇಷವಾಗಿ ವರ್ಧಿಸಿತೆಂದು ತಿಳಿದುಬರುತ್ತದೆ. ಪ್ರಕಟಿತ ಕನ್ನಡ ಪ್ರಾಂತೀಯ ತಾಡಪತ್ರಿ ಗ್ರಂಥ ಸೂಚಿಯ ಪ್ರಕಾರ ಇಲ್ಲಿ ಒಟ್ಟು 2069 ಪ್ರತಿಗಳಿವೆ. ಈ ಕೇಂದ್ರಕ್ಕೆ ಜೈನ ಧರ್ಮಶಾಲಾ ಎಂಬುದು ಪರ್ಯಾಯನಾಮ. ಕೆಲವು ವರ್ಷಗಳ ಹಿಂದೆ ಇಮ್ಮಡಿ ನಾಗವರ್ಮನ ವರ್ಧಮಾನ ಪುರಾಣ ಈ ಸಂಸ್ಥೆಯಲ್ಲಿ ಲಭ್ಯವಾಗಿದ್ದು ಬಹುಶಃ ಜೈನಹಸ್ತಪ್ರತಿ ಭಂಡಾರಗಳಲ್ಲಿಯೇ ಇದು ದೊಡ್ಡದೆಂದು ಕಾಣುತ್ತದೆ.[೪೫]

ಕರ್ನಾಟಕದ ಹಸ್ತಪ್ರತಿ ಚಿತ್ರಗಳಲ್ಲಿಯೇ ವಿಶೇಷವಾಗಿರುವ 'ಧವಲಾ' ಗ್ರಂಥದ ಮೂರು ತಾಳೆ ಪ್ರತಿಗಳಿದ್ದು, ಕ್ರಮವಾಗಿ 1417, 605 ಮತ್ತು 592 ಪತ್ರಗಳನ್ನೊಳಗೊಂಡಿವೆ. ಇವುಗಳಲ್ಲಿ ಒಂದು ಪ್ರತಿಯನ್ನು ಗಂಡರಾದಿತ್ಯ ಅರಸನ ಸೇನಾಪತಿ ಮಲ್ಲದೇವನು ಬರೆಯಿಸಿ ಸಿದ್ಧಾಂತಮುನಿ ಶ್ರೀ ಕುಲಭೂಷಣರಿಗೆ ಶಾಸ್ತ್ರದಾನವಾಗಿ ಕೊಟ್ಟಿದ್ದಾನೆ. ಇನ್ನೊಂದು ಪ್ರತಿಯ ದಾನಿ ಯಾರು ಎಂಬುದು ತಿಳಿದು ಬಂದಿರುವುದಿಲ್ಲ. ಮತ್ತೊಂದು ಪ್ರತಿಯನ್ನು ಮಂಡಲಿನಾಡ ಭುಜಬಲಿ ಗಂಗ ಪೆರ್ಮಾಡಿಯ ಅತ್ತೆ ದೇವಿಯಕ್ಕನು ಕೂಪಣ ತೀರ್ಥದ ಪ್ರಸಿದ್ಧ ದಾನಿ ಜಿನ್ನಪನ ಮೂಲಕ ಪ್ರತಿಮಾಡಿಸಿ, ಬನ್ನಿ ಕೆರೆಯ ಉತ್ತುಂಗ ಜಿನ ಚೈತ್ಯಾಲಯದ ಸಿದ್ಧಾಂತಮುನಿ ಶ್ರೀ ಶುಭ ಚಂದ್ರದೇವರಿಗೆ ಶ್ರುತ ಪಂಚಮಿ ವ್ರತಸಂದರ್ಭದಲ್ಲಿ ಶಾಸ್ತ್ರದಾನವಾಗಿ ನೀಡಿದ್ದಾಳೆ. ಇತ್ತೀಚೆಗೆ ಈ ಮೂರು ಪ್ರತಿಗಳ ಕಾಗದ ಪ್ರತಿಗಳನ್ನು ಕ್ರಮವಾಗಿ ಮಿರಜನ ಗಣಪತಿ ಶಾಸ್ತ್ರಿ ಮೂಡಬಿದರೆಯ ಕಲ್ಲು ಬಸದಿ ಶಾಂತಪ್ಪ ಮೂಡ ಬಿದರಿಯ ದೇವರಾಜ ಶೆಟ್ಟಿ ನಕಲು ಮಾಡಿದ್ದಾರೆ.

''ಜಯಧವಲಾ'' ಗ್ರಂಥದ ಒಂದು ತಾಳೆಪ್ರತಿ ಇದ್ದು, 518 ಪತ್ರಗಳಿವೆ. ಚಿಕ್ಕಮಯ್ಯನ ಬಲ್ಲಿಸೆಟ್ಟಿ ಬರೆಯಿಸಿ ಸಿದ್ಧಾಂತಮುನಿ ಪದ್ಮಸೇನನಿಗೆ ಶಾಸ್ತ್ರದಾನ ಮಾಡಿದ್ದಾನೆ. ಲಿಪಿಕಾರ ಭುಜಬಲಿ ಅಣ್ಣ ಇದರ ಮೂರು ಕಾಗದ ಪ್ರತಿಗಳನ್ನು ಮಿರಜದ ಗಣಪತಿ ಶಾಸ್ತ್ರಿ ಮೂಡಬಿದರೆಯ

---

೪೪. ಎಚ್ಚೆಸ್ಕೆ (ಸಂ.) ಅವಲೋಕನ : ಡಾ. ಕಮಲಾಹಂಪನ , ಪುಟ -೧೬೫

೪೫. ಡಾ. ಎಸ್.ಸಿ. ಪಾಟೀಲ್ , ಸತ್ಯಾನಂದ ಪಾತ್ರೋಟ ಸಂ.: ನಿಜದ ನೆಲೆ, ಡಾ. ವೈ.ಸಿ.ಭಾನುಮತಿ, ಪುಟ -೫೫. ೨೫೭

ಕಲ್ಲು ಬಸದಿ ಶಾಂತಪ್ಪ, ಮೂಡಬಿದರೆಯ ದೇವರಾಜ ಶೆಟ್ಟಿ ಸಿದ್ಧಪಡಿಸಿದ್ದಾರೆ.

ಮಹಾಧವಲಾ (ಮಹಾಬಂಧ)ದ ಒಂದು ತಾಳೆಪ್ರತಿ ಇದ್ದು 176 ಪತ್ರಗಳಿವೆ ಇದರ ಲಿಪಿಕಾರ ಉದಯಾದಿತ್ಯ. ರಾಜನಾದ ಶಾಂತಿ ಸೇನನ ಪತ್ನಿ ಮಲ್ಲಿಕಬ್ಬೆ ಇದನ್ನು ಬರೆಯಿಸಿ ಪಂಚಮಿವ್ರತ ಸಂದರ್ಭದಲ್ಲಿ ಸಿದ್ಧಾಂತಮುನಿ ಮೂಘನಂದಿಗೆ ಶಾಸ್ತ್ರದಾನ ಮಾಡಿದ್ದಾಳೆ. ಇತ್ತಿಚೆಗೆ ಇದರ ಇನ್ನೆರಡು ಕಾಗದ ಪ್ರತಿಗಳನ್ನು ಮೂಡಬಿದರಿಯ ಲೋಕನಾಥ ಶಾಸ್ತ್ರಿ ಮೂಡಬಿದರಿಯ ನೇಮಿರಾಜಶೆಟ್ಟಿ ನಕಲು ಮಾಡಿದ್ದಾರೆ. ಸಂರಕ್ಷೆಯ ದೃಷ್ಟಿಯಿಂದ ಈ ಮೂರು ಕೃತಿಗಳ ಮೂಲ ಪ್ರತಿಗಳನ್ನು ಲ್ಯಾಮಿನೇಶನ್ ಮಾಡಿಸಿ ಇಡಲಾಗಿದೆ.[೪೬]

ಇವು ಅಲ್ಲದೇ ಮುಂಬೈಯ ಜರ್ನಲ್ ಆಫ್ ದಿ ಏಶಿಯಾಟಿಕ್ ಸೋಸಾಯಿಟಿಯು ಕೆಲವು ಜೈನ ಗ್ರಂಥಗಳನ್ನು ಸಂಗ್ರಹಿಸಿದೆ.ಅವುಗಳಲ್ಲಿ ಹೇಮಚಂದ್ರನ ಅಭಿದಾನ ಚಿಂತಾಮಣಿ (BBRASNO 98) ಸಮಯ ಸುಂದರನ ಕಲ್ಪಸೂತ್ರದೊಂದಿಗೆ ಕಲ್ಪಲತಾ (No.1441) ಚತುಃಶರಣ ಪ್ರಕೀರ್ಣಕ (ಸಂಖ್ಯೆ1513) ದಂತಹ ಅನೇಕ ಕೃತಿಗಳು ಇವೆ. ಈ ರೀತಿಯಾಗಿ ಜೈನಗ್ರಂಥಗಳು ಕನ್ನಡ ನಾಡಿನಲ್ಲಿ ತುಂಬ ಸಮೃದ್ಧವಾಗಿ ದೊರೆಯುತ್ತವೆ.

3. ಚಿತ್ರಕಲಾ ವಿನ್ಯಾಸವನ್ನು ಹೊಂದಿದ ವೀರಶೈವ ಧರ್ಮದ ಧಾರ್ಮಿಕ, ಹಸ್ತಪ್ರತಿಗಳು

ಇವನಾರವ, ಇವನಾರವ, ಇವನಾರವನೆಂದೆನಿಸದಿರಯ್ಯಾ
ಇವ ನಮ್ಮವ, ಇವ ನಮ್ಮವ, ಇವ ನಮ್ಮವನೆಂದೆನಿಸಯ್ಯಾ
ಕೂಡಲ ಸಂಗಮದೇವಾ
ನಿಮ್ಮ ಮನೆಯ ಮಗನೆಂದೆನಿಸಯ್ಯಾ.

ಬಸವಣ್ಣನವರು [೪೭]

ಹನ್ನೆರಡನೆಯ ಶತಮಾನದ ಶಿವಶರಣರು ಸಾಮಾಜಿಕ, ರಾಜಕೀಯ, ಆರ್ಥಿಕ ನೆಲೆಗಳಲ್ಲೂ ಯೋಚಿಸಿ ಸಮಾಜದ ಕೊನೆಯ ಮನುಷ್ಯನನ್ನು ಕೈಹಿಡಿದು ನಡೆಯಿಸಿದ ಕೀರ್ತಿ ವಚನಕಾರರಿಗೆ ಸಲ್ಲುತ್ತಿದೆ. ಬುದ್ಧನಂತೆ ಆಡು ಭಾಷೆಗೆ ದುಡಿಯುವ ಜನವರ್ಗಕ್ಕೆ ಸ್ತ್ರೀವರ್ಗಕ್ಕೆ ನ್ಯಾಯ ಒದಗಿಸಿದ ಕೀರ್ತಿಯೂ ಈ ಶಿವಶರಣರಿಗೆ ಸಲ್ಲುತ್ತದೆ.

ಕಲ್ಯಾಣದ ಶಿವಶರಣರದು ಕನ್ನಡದ ನೆಲದ ಮೇಲೆ ನಡೆದ ಪ್ರಥಮ ಸಮಾಜೋ ಧಾರ್ಮಿಕ ಆಂಧೋಲನವಾಗಿದೆ. 12 ನೇ ಶತಮಾನದಲ್ಲಿ ಜರುಗಿದ ಈ ಆಂಧೋಲನದ ನಾಯಕ ವ್ಯಕ್ತಿ ಬಸವಣ್ಣ. ಬಸವಣ್ಣ ಬಾಳಿದ್ದು ಕನ್ನಡ ನಾಡಿನಲ್ಲಿ, ಬರೆದದ್ದು ಕನ್ನಡ ಭಾಷೆಯಲ್ಲಿ ಈ ಪರಿಮಿತಿಯ ಕಾರಣವಾಗಿ ಇವನಿಗೆ ನ್ಯಾಯವಾಗಿ ಸಿಗಬೇಕಾದ ಜಾಗತೀಕ ಪ್ರಸಿದ್ಧಿ ಇನ್ನೂ ಸಿಕ್ಕಿಲ್ಲವಾದರೂ ಇವನನ್ನು ಕುರಿತು ಕನ್ನಡ ಸಾಹಿತ್ಯದಲ್ಲಿ ಕೃತಿ ರಚನೆ ಕಲ್ಯಾಣದ ಶಿವಶರಣರು ರಚನೆಯಾದಷ್ಟು ಬೇರೆ ಯಾರನ್ನೂ ಕುರಿತು ಹುಟ್ಟಿಲ್ಲ. ಇವನಷ್ಟು ಅಖಂಡ ಪ್ರಭಾವ ಕರ್ನಾಟಕದ

---

೪೬. ಡಾ. ಎಂ. ಎಂ. ಕಲಬುರ್ಗಿ : ಕನ್ನಡ ಹಸ್ತಪ್ರತಿ ಶಾಸ್ತ್ರ, ಪುಟ -೫೬.
೪೭. ಡಾ. ಎಂ. ಎಂ. ಕಲಬುರ್ಗಿ : ಕನ್ನಡ ಹಸ್ತಪ್ರತಿ ಶಾಸ್ತ್ರ, ಪುಟ -೫೮.

ಮೇಲೆ ಯಾವ ಧಾರ್ಮಿಕ ಮಹಾಪುರಷನು ಬೀರಿಲ್ಲ.

ಜಾಗತಿಕ ಸಂಸ್ಕೃತಿಗೆ ಘನತೆಯನ್ನು ತಂದು ಕೊಡುವವರೆಂದರೆ ತಮ್ಮ ವ್ಯಕ್ತಿತ್ವವನ್ನು ಉದಾತ್ತೀಕರಿಸಿಕೊಂಡ ಮಹಾಪುರಷರು ಮತ್ತು ತಮ್ಮ ಪರಿಸರವನ್ನು ಉದಾತ್ತಿಕರಿಸುವ ಯುಗಪುರಷರು ಈ ಎರಡನ್ನೂ ಸಾಧಿಸುವ ಮೂಲಕ ಬಸವಣ್ಣ ಕೇವಲ ಮಹಾಪುರಷನಾಗಿ ಉಳಿಯದೆ ಯುಗ ಪುರಷನಾಗಿ ಬೆಳೆದಿದ್ದಾನೆ. ಸಾಮಾನ್ಯವಾಗಿ ಯುಗಪುರಷರು ಸಾಮಾಜಿಕ, ಧಾರ್ಮಿ, ಸಾಹಿತ್ಯಿಕ ಹೀಗೆ ಜೀವನದ ಯಾವುದೇ ಒಂದು ಕ್ಷೇತ್ರಕ್ಕೆ ಹೊಸ ತಿರುವ ತಂದುಕೊಡುತ್ತಾರೆ. ಬಸವಣ್ಣ ಇಂತಹ ಎಲ್ಲ ಕ್ಷೇತ್ರಗಳಿಗೆ ಹೊಸ ತಿರುವ ಕೊಟ್ಟ ಕಾರಣ ಸಮಗ್ರ ಯುಗ ಪುರಷನೆನಿಸಿದ್ದಾನೆ. ಹೀಗಾಗಿ ಅವನು ಜಗತ್ತುಕಂಡ ಒಬ್ಬ ಅಪರೂಪದ ವ್ಯಕ್ತಿಯೆಂದು ಗುರುತಿಸಲಾಗಿದೆ.


ಬಸವಪೂರ್ವಯುಗವೆಂಬುದು ಕರ್ನಾಟಕದ ಇತಿಹಾಸದಲ್ಲಿ ಪತನ ವೈಭವದ ಕಾಲವಾಗಿದಿತ್ತು. ಅಂದು ರಾಜಸತ್ತೆ, ಮತಸತ್ತೆಗಳು ಸಮಾಜವನ್ನು ನಿಯಂತ್ರಿಸುವ ಶಕ್ತಿಯಾಗಿದ್ದವು. ರಾಜಸತ್ತೆಯ ಪೋಷಣೆಗಾಗಿ ಯುದ್ಧದಲ್ಲಿ ತೊಡಗುವುದು, ಸುಂಕ ತೆರುವುದಕ್ಕಾಗಿ ದುಡಿಯುವುದು ಅಂದಿನ ಪ್ರಜೆಗಳ ಸ್ಥಿತಿಯಾಗಿದ್ದಿತು. ಈ ರಾಜಸತ್ತೆಗೆ ಪೂರಕವೆನಿಸುವ ಮತಸತ್ತೆಯಲ್ಲಿ ಪ್ರತಿಷ್ಠಿತ ಧರ್ಮಗಳ ಆಡಂಬರಗಳೂ, ಜನಪದ ಧರ್ಮಗಳ ಕ್ರೂರ ಆಚರಣೆಗಳೂ ಉಲ್ಬಣಗೊಂಡಿದ್ದವು. ಒಟ್ಟು ಜನವರ್ಗದಲ್ಲಿಯೇ ಪುರುಷ ವರ್ಗವು ಸ್ತ್ರೀವರ್ಗವನ್ನು ತುಳಿಯುತ್ತಲಿದ್ದಿತ್ತು. ಹೀಗಾಗಿ ಸಮಾಜದಲ್ಲಿ ರಾಜವರ್ಗ-ಪ್ರಜಾವರ್ಗ, ಪುರೋಹಿತ ವರ್ಗ-ಭಕ್ತಿವರ್ಗ, ಪುರುಷವರ್ಗ-ಸ್ತ್ರೀವರ್ಗಗಳೆಂಬ ಸೀಳು ತಲೆದೋರಿ ಒಂದು ಇನ್ನೊಂದನ್ನು ಶೋಷಿಸುವಲ್ಲಿ, ಜೀವನ ವ್ಯವಸ್ಥೆಯ ಸಮತೋಲನ ತಪ್ಪಿ ಹೋಗಿದ್ದಿತ್ತು. ಈ ಅನ್ಯಾಯದ ಗರ್ಭಸೀಳಿ ಹುಟ್ಟಿಕೊಂಡು ಸಾಮಾಜಿಕ ಸಮತೋಲನೆಗಾಗಿ ಹೋರಾಡಿದವ ಬಸವಣ್ಣ[೪೮]

ಬಸವಣ್ಣನವರ ಹಿರಿಯತನದಲ್ಲಿ ಒಗ್ಗೂಡಿದ ವಚನಕಾರರು ಸಮಾಜದ ಬದುಕಿನ ಒಂದೊಂದು ಮಜಲು, ಮಜಲುಗಳನ್ನು ಕುರಿತು ಚಿಂತನೆ ಮಾಡಿದರು. ಚಿತ್ರಕಲೆ, ನಾಟ್ಯಕಲೆ, ಸಂಗೀತದಂತಹ ಕಲಾತ್ಮಕ ವಸ್ತು ವಿಷಯಗಳ ಅರಿವು ಶಿವಶರಣರಿಗೆ ಅಪಾರವಾಗಿ ತಿಳಿದು ಇದ್ದುದರಿಂದಲೇ ಚಿತ್ರಗಳನ್ನು ಅಲ್ಲಲ್ಲಿ ಪೂರಕವಾಗಿ, ಸಹಾಯಕವಾಗಿ ಬಳಸಿಕೊಂಡಿದ್ದಾರೆ. ಬಸವಣ್ಣನವರಂತಹ ಮಹಾನುಭಾವಿಗಳಿಗೆ ಕಲೆಯವಿಚಾರದಲ್ಲಿ ಪ್ರಭುತ್ವವಿದ್ದುದರಿಂದಲೇ ಇಲ್ಲಿ ಉಲ್ಲೇಖಿಸಿರುವ ಅವರ ಅನೇಕ ವಚನಗಳಲ್ಲಿ ಕಲೆಯ ಅಂಶಗಳನ್ನು ಗುರುತಿಸಬಹುದು. 'ವಿಕಳನಾದೆನು' ಪಂಚೇದ್ರಿಯ ಸಪ್ತಧಾತುವಿನಿಂದ (43) ನೀರಿಂಗೆ ನೈದಿಲೆಯ ಶೃಂಗಾರ (74) ಸಗಣಿಯ ಬೆನಕಂಗೆ (93) ಕಾಗೆ ನಂದನವನದೊಳಗಿದ್ದಡೇನು? ಕೋಗಿಲೆಯಾಗಬಲ್ಲುದೆ ಹೇಳಾ ? (98) ಸುಣ್ಣದ, ತುಯ್ಯಾಲ (ದ) ಬಣ್ಣವೊಂದೆ ಎಂದೆಡೆ (120) ಚಿತ್ರದ ರೂಹು ಕಾಣೆರಣ್ಣಾ. ಚಿತ್ರದ

೪೮. ಡಾ. ಎಂ. ಎಂ. ಕಲಬುರ್ಗಿ ಸಂ.: ಬಸವಣ್ಣನವರು ವಚನ ಸಂಪುಟ -೧, ವ.ಸಂ. -೬೩, ಪುಟ -೧೮.

ಕರ್ನಾಟಕದ ಹಸ್ತ ಪ್ರತಿಗಳ (ಅಂಚುಗಳಲ್ಲಿ) ರೇಖೆ ಮತ್ತು ವರ್ಣ ಚಿತ್ರಕಲೆ







ಕೃಪೆ:
೧, ೨.೩. ಕುವೆಂಪು ಕನ್ನಡ ಅಧ್ಯಾಯನ ಸಂಸ್ಥೆ. ಮಾನಸಗಂಗೋತ್ರಿ, ಮೈಸೂರು ವಿಶ್ವ ವಿದ್ಯಾಲಯ,ಮೈಸೂರು.

ಕಟ್ಟುಕಾಣಿರಣ್ಣಾ(126) ಅಂಕ 'ಕಳ'ನೇರಿ (178) ನಾದಪ್ರಿಯ ಶಿವನೆಂಬರು (181) ಕಲ್ಲನಾಗರ ಕಂಡುದೆ (194) ಆಡಿದಡೇನು? ಹಾಡಿದಡೇನು ? (202) ಕರಗಿಸಿ ಎನ್ನ ಮನದ ಕಾಳಿಕೆಯ (251) ಒಳಿಹ ಮೈಲಾರನ ಒಳಗೆಲ್ಲ (281) ಶಬ್ದ ಸಂಭಾಷಣೆಯ (290) ಆ ಕರಿಯಾಕೃತಿಯ ಸೂಕರನ ಹೋಲಿಸಿದಡೆ (330) ಮೋಟನ ಮೌಳಿ (331) ಮೂಗಿಲ್ಲದ ಮುಖಕ್ಕೆ ಶೃಂಗಾರವೇ ? (332) ಭಿತ್ತಿಯಿಲ್ಲದೆ ಬರೆಯುಬಹುದೆ ಚಿತ್ತಾರವ ? (399)ನೋಡಿ ನೋಡಿ ಲಿಂಗಧ್ಯಾನವನ್ನು ಮನ (489) ಎನ್ನ ಕಾಯವ ದಂಡಿಗೆಯ ಮಾಡಯ್ಯ (499) ಅರಗಿನ ಪುತ್ಥಳಿಯನುರಿಯ ನಾಲಗೆ ಹೊಯಿದು (661) ಅಂದಂದಿನ ಹೊದ್ದಿಗೆಯ ಬಿಂದು ಮಾತ್ರದಲಾದ (763) ಸುನಾದ ಬಿಂದು ಪ್ರಣವ ಮಂತ್ರದಗ್ರದ (816) ರಚ್ಚೆಯ ನೆರವಿಗೆ 826) ಬಯ ರೂಪ ಮಾಡಬಲ್ಲಾತನೆ ಶರಣನು (923) ಶ್ರೀ ಬಸವಣ್ಣನವರಂತೆ ಅನೇಕ ತಳವರ್ಗದ ಪುರುಷ ಮತ್ತು ಮಹಿಳಾ ವಚನಕಾರರು ತಮ್ಮ ವಚನಗಳ ಹಸ್ತಪ್ರತಿಗಳಲ್ಲಿ ಚಿತ್ರಕಲೆಯನ್ನು ಕುರಿತು ಅಧಿಕೃತವಾಗಿಯೂ ಮಾತನಾಡಿದ್ದಾರೆ. ಈ ನಿಟ್ಟಿನತ್ತ ಅಧ್ಯಯನವೂ ನಡೆಯಬೇಕಾಗಿದೆ.

ಅನೇಕ ವೀರಶೈವ ಹಸ್ತಪ್ರತಿಗಳಲ್ಲಿ ಸಾಕಷ್ಟು ಚಿತ್ರಗಳಿದ್ದು ಅವುಗಳು ನಿರ್ಲಕ್ಷ್ಯಕ್ಕೆ ಒಳಪಟಟ್ಟಿದ್ದು ಅವುಗಳ ಕುರಿತು ಅಧ್ಯಯನ ನಡೆಯಬೇಕಾಗಿದೆ.

ಡಾ|| ಆರ್.ಸಿ.ಹಿರೇಮಠ ಕನ್ನಡ ಅಧ್ಯಯನ ಪೀಠ ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡ ಹಸ್ತಪ್ರತಿ ಭಂಡಾರದ ಶ್ರೀ ಸಿದ್ಧರಾಮೇಶ್ವರ ವಾದ ವಚನ ಪ್ರಾರಂಭದ (116) ಕಾಗದದ ಪ್ರತಿಯಲ್ಲಿ ಶಿವನ ಕೈಲಾಸದ ಒಡ್ಡೊಲಗದ ಚಿತ್ರವಿದೆ. ಇಲ್ಲಿ ಶಿವನು ಹಿಮಗಿರಿಯ ಕಲ್ಲುಹಾಸಿನ ಮೇಲೆ ಕೂಡುವ ಬದಲು ಸಿಂಹಾಸನದ ಮೇಲೆ ಧೋತರವನ್ನು ಕಟ್ಟಿಕೊಂಡು ಕುಳಿತಿದ್ದಾನೆ. ಅವನ ಆಭರಣಗಳಲ್ಲಿ ಬರುವ ಕೊರಳ ಸರ್ಪ, ತಲೆಯೊಳಗಿನ ಅರ್ಧಚಂದ್ರ ಕಣ್ಮರೆಯಾಗಿವೆ. ಶಿವನನ್ನು ಕಲಾವಿದ ವಿಭಿನ್ನ ರೀತಿಯಲ್ಲಿ ಚಿತ್ರಿಸಿದ್ದಾನೆ. ಶಿವನ ಬಲಗೈಯಲ್ಲಿ ತ್ರಿಶೂಲವಿದ್ದರೆ ಎಡಗೈಯಲ್ಲಿ ಡಮುರುಗ ಬದಲು ಶಂಖನ್ನು ಹಿಡಿದಿದ್ದಾನೆ. ಎದುರಿಗೆ ಐದುಜನ ಭಕ್ತರಿದ್ದಾರೆ. ಅವರು ಬಸವಣ್ಣ, ಅಲ್ಲಮ ಪ್ರಭು, ಚನ್ನಬಸವಣ್ಣ, ಸಿದ್ಧರಾಮರೊಂದಿಗೆ ಮತ್ತೊಬ್ಬ ಶರಣರನ್ನೆ ಅಥವಾ ಈ ಕಾಗದವೇ ಸ್ಥಳಾಂತರಗೊಂಡು ಈ ಪ್ರತಿಯಲ್ಲಿ ಸೇರಿದೆಯೇ ತಿಳಿಯದು. ರೇಖೆ, ಶಾರೀರ ಶಿಲ್ಪ ಸಂಯೋಜನ ತುಂಬ ದುರ್ಬಲವಾಗಿವೆ. ಶಿವನ ಓಲುಗ ಬಯಲಾಟದ ದೃಶ್ಯದಂತೆ ಇದೆ. ಮೇಲಿನ ಮದ್ಯಭಾಗದಲ್ಲಿ ಹೈದರಾಬಾದ ನಿಜಾಮ ಅರಸರು ಹಾಕುವ ಕಾಜಿನ ಗುಳಾಪು ಇದ್ದು. ಬೆಳಕಿನ ಕಿರಣಗಳು ಇಲ್ಲದ ಕಾರಣ ಅದು ಬರುಶಃ ಆರಿದ ಮೇಣದ ಬತ್ತಿಯಾಗಿರಬೇಕು.*

★ **ಮಾಚಿದೇವ ಮನೋವಿಲಾಸ :** ಇದು ಕನ್ನಡ ಅಧ್ಯಯನ ಸಂಸ್ಥೆಯ ಸಂಗ್ರಹದಲ್ಲಿರುವ ಕಾಗದದ ಪ್ರತಿಯಾಗಿದೆ. (ಕೆ.ಬಿ.434)ಚೌಕದ ಅಲಂಕೃತ ನಕ್ಷೆಯೊಳಗೆ ಶಿವನ ಓಲಗವಿದೆ. ಅದರ ಮಧ್ಯ ಶಿವ ಪಾರ್ವತಿಯರಿದ್ದಾರೆ. ಬೃಂಗಿ ನೃತ್ಯ ಮಾಡುತ್ತಿದ್ದರೆ. ಪ್ರೊತ್ಸಾಹದ ದೃಷ್ಟಿಯಿಂದ ಮಾಚೀದೇವ ಶಂಖ ಊದುತ್ತಿದ್ದಾನೆ. ಚಿತ್ರವು ಕಲಾವಿದನ ಸಾಮಾನ್ಯ ಪರಿಣತಿಯನ್ನು ಅಗಾದ ಕಲ್ಪನಾ ಶಕ್ತಿಯನ್ನು

ವೀರಶೈವ ಹಸ್ತಪ್ರತಿ ಫಲಕಗಳಮೇಲಿನ ವರ್ಣ ಚಿತ್ರಗಳು



ಕೃಪೆ:

ಡಾ॥ಬಿ.ಕೆ.ಹಿರೇಮಠ,

ಗೌರವ ಉಪನ್ಯಾಸಕರು, ಕರ್ನಾಟಕ ವಿಶ್ವವಿದ್ಯಾಲಯ ಸ್ನಾತಕೋತ್ತರ ಕೇಂದ್ರ

ಶ್ರೀ ಬಸವೇಶ್ವರ ಮಹಾವಿದ್ಯಾಲಯ, ಬಾಗಲಕೋಟ.

ತೋರಿಸುತ್ತದೆ. ಮಸಿಯ ಕಳಿಯಿಂದಲೇ ಚಿತ್ರವನ್ನು ನಿರ್ಮಿಸಲಾಗಿದೆ.

ಪರಮ ಪೂಜ್ಯರಾದ ಶ್ರೀ ಹಾನಗಲ್ಲ ಕುಮಾರ ಸ್ವಾಮಿಗಳವರ ಕನಸಿನ ಕಲ್ಪನೆಯ ಕೂಸಾಗಿರುವ ಶಿವಯೋಗ ಮಂದಿರವು ನಾಡಿನ ಮಠ ಮಂದಿರಗಳಿಗೆ ಬೇಕಾಗುವ ವೀರಶೈವ ಧರ್ಮದ ಸ್ವಾಮಿಗಳವರನ್ನು ಸಿದ್ಧಗೊಳಿಸುವಂತಹ ಮಾರ್ಗದರ್ಶಿ ಕೇಂದ್ರವಾಗಿದೆ. ಇಲ್ಲಿ ಅನೇಕ ಫಲಕ ಮೇಲಿನ, ಫಲಕದೊಳಗಿನ ಕಾಗದ ಮತ್ತು ತಾಳೆಯಗರಿಯ ಗ್ರಂಥಗಳಲ್ಲೂ ಅನೇಕ ಚಿತ್ರಗಳಿವೆ.

★ **ಷಡಕ್ಷರ ದೇವನ ರಗಳೆಯ ತಾಳೆಗರಿ :** (355) ಅಲ್ಲಮ ಪ್ರಭುದೇವರ ವಚನಗಳ: ಕಟ್ಟಿನಲ್ಲಿ (ನಂ.62) ಕೈವಾರರಿಂದ ರಚಿಸಿರುವ ನಕ್ಷಾ ಚಿತ್ರಗಳಿವೆ. ಭೀಮಕವಿಯ ಬಸವಪುರಾಣವು ಚಿತ್ರಕೃತಿಗಳ ಭಂಡಾರವೇ ಆಗಿದ್ದು ಸಾಕಷ್ಟು ಚಿತ್ರಗಳನ್ನು ಒಳಗೊಂಡಿದೆ. ಪ್ರತಿ ಪುಟದ ಅಂಚುಗಳನ್ನು ಅಲಂಕಾರಗೊಳಿಸಲಾಗಿದೆ.

ಕವಿಯ ಪಾಠಕ್ಕೆ ಅನುಸರಿಸಿ ಹಂತಕ್ಕೆ ಅನುಸರಿಸಿ ಅನೇಕ ಚಿತ್ರಗಳನ್ನು ರಚಿಸಲಾಗಿದೆ. ಬಸವ ಪುರಾಣದ 47ನೇ ಪ್ರಕರಣದಲ್ಲಿ 52ನೇ ಪ್ರಕರಣದಲ್ಲಿ ಚಿತ್ರಗಳಿರುವಂತೆ ದೇಶಿಂಗರಾಯನ ಕಥೆ, ಸೇದಿರಾಜನ ಕಥೆ, ತೆಲುಗು ಬೊಮ್ಮಯ್ಯನ ಕಥೆಯೊಂದಿಗೆ ರಾಘವಾಂಕನ ಬಗೆಗೆ ಚಿತ್ರಗಳಿರುವುದನ್ನು ಗಮನಿಸಬಹುದು.

ಹಸ್ತಪ್ರತಿಯ ಫಲಕಗಳಾದ 1ರ ಕರಣ ಹಸಗೆಯಲ್ಲಿ ಕಾಗದದ ಪ್ರತಿ (1/843) ಬಸವೇಶ್ವರ ಘಟಸ್ಥಲದ ವಚನಗಳ ಫಲಕದಲ್ಲಿ ಪ್ರಭುವಿನ ವಚನ ಫಲಕ (ನಂ182) ಶಿವಾದಿಕ್ಯ ಪುರಾಣ (ನಂ.26) ಜ್ಞಾನ ಚಕ್ರೊದ್ದರಣೆ (ನಂ.95), ಚೆನ್ನಬಸವಣ್ಣನವರ ಕರಣಹಸಿಗೆ (ನಂ.80-81) ಶ್ರೀ ಸಿದ್ಧೇಶ್ವರ ಷಟ್ಸ್ಥಲ ಜ್ಞಾನಸಾರಾಮೃತ (ನಂ.219) ಗಳು ಅನೇಕ ಫಲಕಗಳ ಮೇಲೆ ಚಿತ್ರಗಳಿವೆ.

ಇಂತಹ ಅನೇಕ ಹಸ್ತಪ್ರತಿ ಚಿತ್ರಗಳನ್ನು ಕಂಡಿರುವ ಅಧ್ಯಯನಶೀಲರಾಗಿರುವ ಡಾ॥ಸ್ನೇಹಾ ಭೂಸನೂರರು ಈ ರೀತಿ ಹೇಳುತ್ತಾರೆ. ಮಾನವನು ನಾಗರಿಕತೆಯ ಮೆಟ್ಟಲನ್ನೇರುತ್ತಾ ನಡೆದಂತೆ, ತನ್ನ ಕಣ್ಣು ಮನಸ್ಸು ಭಾವನೆಗಳಿಗೆ ಸಂಸ್ಕೃತಿಯ ಸಂಸ್ಕಾರವನ್ನು ಕೊಟ್ಟು ಜೀವನವನ್ನು ಸುಂದರ ಮತ್ತು ಆನಂದಗೊಳಿಸುವುದಕ್ಕೆ ಪ್ರಯತ್ನಿಸಿದ್ದುಂಟು. ಸೌಂದರ್ಯಾನುಭವ ಹಾಗೂ ಆನಂದದ ಅನುಭೂತಿಯೇ ಕಾರಣವಾಗಿ ತಾನು ಬಳಸುವ ವಸ್ತುಗಳಲ್ಲಿ ಉಪಯುಕ್ತತೆ ಜೊತೆಗೆ ಕಣ್ಮನಗಳನ್ನು ಸೆಳೆಯುವ ಒಪ್ಪ-ಓರಣ-ಬಣ್ಣ ಬೆಡಗುಗಳನ್ನು ಆಪೇಕ್ಷಿಸಿದವನು. ಆಂತಹ ಆಪೇಕ್ಷೆಯ ಸಾಕಾರವೇ ಚಿತ್ರಕಲಾ ರಚನೆ ಈ ಚಿತ್ರಕಲಾ ರಚನೆಗೆ ಹಸ್ತಪ್ರತಿಗಳೂ ಹೊರತಾಗಿಲ್ಲ.[೪೯]

ಹಿರಿಯ ವಿದ್ವಾಂಸರಾಗಿರುವ ಡಾ॥ ಎಸ್.ಆರ್. ಗುಂಜಾಳ್ ನಿರ್ದೇಶನದಲ್ಲಿ ಶ್ರೀ ಮಠದ ಸ್ವಾಮಿಗಳವರ ಆಸಕ್ತಿಯ ಕಾರಣದಿಂದ ಸುಸಜ್ಜಿತವಾಗಿರುವಂತಹ ಈ ಗ್ರಂಥಭಂಡಾರದಲ್ಲಿ ಕಾಗದ, ತಾಳೆಯಗರಿಯ ಅನೇಕ ಹಸ್ತಪ್ರತಿಗಳು ಇದ್ದು ಇಲ್ಲಿ ಎರಡು ; ಸುರಳಿಗಳ ಪಟಚಿತ್ರದಂತಹ

---

೪೯. ಡಾ. ಎಂ. ಎಂ. ಕಲಬುರ್ಗಿ ಸಂ.: ಬಸವಣ್ಣನವರು ವಚನ ಸಂಪುಟ -೧, ಪ್ರಸ್ತಾವನೆಯಿಂದ -೬೩, ಪುಟ -೧೮

ಉದ್ಧರಣೆಗಳಿವೆ. ಮತ್ತು ಮಹೋದ್ದರಣೆಯ ಗ್ರಂಥವೂ ಇದೆ ಸಾಮಾನ್ಯವಾಗಿ ಎಲ್ಲ ಭಂಡಾರಗಳಲ್ಲಿ ಉದ್ಧರಣೆಯ ಸುರುಳಿಗಳಿದ್ದರೆ. ಇಲ್ಲಿ ಉದ್ಧರಣೆಯ ಸುರುಳಿ ಚಿತ್ರಗಳೊಂದಿಗೆ ಮಹೋದ್ದರಣೆಯ ಸಂಪುಟದೊಂದಿಗೆ ಉದ್ಧರಣೆಯ ಕುರಿತು ಎರಡು ಸಮಗ್ರ ಮಾಹಿತಿಯ ಸಚಿತ್ರ ಗ್ರಂಥಗಳಿರುವುದು ವಿಶೇಷ. ಇದರಲ್ಲಿ ಇನ್ನೂ ಹೆಚ್ಚಿನ ವಿಶೇಷವೆಂದರೆ ರಾಯಚೂರು ಜಿಲ್ಲೆಯ ಮಾನ್ವಿ ತಾಲೂಕಿನ ಕವಿತಾಳ ಗ್ರಾಮದ ಕಲ್ಲುಮಠದ ಶ್ರೀ ಮ.ನಿ.ಪ್ರ.ಲಿಂ॥ ಸಿದ್ಧಲಿಂಗ ಸ್ವಾಮಿಗಳು ದಿ.18-12-1957ರಲ್ಲಿ ಪ್ರಕಟಿಸಿರುವ '' ಚಿದೈಶ್ವರ್ಯ, ಚಿದಾಭರಣ ಶಿವಾನುಭವವು'' ಎಂಬ ಉದ್ಧರಣೆ ಗ್ರಂಥ ಸಂಗ್ರಹಗೊಂಡರೆ ಶ್ರೀ ಮದುಜ್ಜಯನೀ ಸದ್ಧರ್ಮ ಸಿಂಹಾಸನಾಧೀಶ್ವರ ಜ.ಚರಪಟ್ಟಾಧ್ಯಕ್ಷ ಶ್ರೀಮನ್‌ಮರುಳ ಶಿವಾನುಭವಶಾಸ್ತ್ರ ಎಂಬ ಗ್ರಂಥವು ಸಚಿತ್ರವಾಗಿದ್ದು 100 ಪುಟಗಳ ಗಾತ್ರದಲ್ಲಿದೆ. ಚಿತ್ರಗಳು ಅತ್ಯಂತ ಉತ್ತಮ ಗುಣಮಟ್ಟದ ಚಿತ್ರಗಳನ್ನು ಈ ಎರಡು ಗ್ರಂಥಗಳಲ್ಲಿ ಕಾಣಬಹುದಾಗಿದೆ.

ಮೈಸೂರು ವಿಶ್ವವಿದ್ಯಾಲಯದ ಹಸ್ತಪ್ರತಿ ಭಂಡಾರದಲ್ಲಿಯ ವೀರಶೈವ ಹಸ್ತಪ್ರತಿಗಳು ಇವೆ. ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಯು ಹಸ್ತಪ್ರತಿಗಳನ್ನು ಅಚ್ಚುಕಟ್ಟಾಗಿ ಸಂಗ್ರಹಿಸಿದ ಕೀರ್ತಿ ಈ ಸಂಸ್ಥೆಗೆ ಇದೆ. ಇದರಂತೆ ವರ್ಣನಾತ್ಮಕ ಹಸ್ತಪ್ರತಿಗಳ ಒಂಭತ್ತು ಸಂಪುಟಗಳನ್ನು ಅತ್ಯಂತ ವೈಜ್ಞಾನಿಕವಾಗಿ ಸಂಗ್ರಹಿಸಿರುವ ಪ್ರೊ॥ಬಿ.ಎಸ್.ಸಣ್ಣಯ್ಯನವರಿಗೆ ಕೀರ್ತಿ ಸಲ್ಲುವಂತೆ ಗುಣಮಟ್ಟದ ಹಸ್ತಪ್ರತಿಗಳನ್ನು ಕಾಯ್ದುಕೊಂಡ ಘನತೆಯು ಈ ಸಂಸ್ಥೆಗೆ ಸೇರುತ್ತದೆ.

ಭೀಮಕವಿಯ ಬಸವಪುರಾಣವು ಶಿವಯೋಗಮಂದಿರದ ಪ್ರತಿಯೊಂದರ ಮತ್ತೊಂದು ಕಾಗದದ ಪ್ರತಿಯಾಗಿದ್ದು ಉತ್ಕೃಷ್ಟ ಚಿತ್ರಗಳಿಂದ ಅಂಚು, ಫಲಕಗಳಿಂದ ಅಲಂಕೃತಗೊಂಡಿರುವ ಉತ್ಕೃಷ್ಟ ಕೃತಿಯಾಗಿದೆ. ಇದರೊಳಗಿನ ಚಿತ್ರಗಳ ರಚನೆಯೂ ಪಠ್ಯದ ವಿಷಯದಂತೆಯೇ ಕ್ರಾಂತಿಕಾರಕವಾಗಿವೆ. ಇಲ್ಲಿರುವ ಉದ್ಧರಣೆಯ ಎರಡು ಸಂಪುಟಗಳು ಕೂಡಾ ಬಸವ ಪುರಾಣದಂತೆ ಉತ್ಕೃಷ್ಟವಾಗಿವೆ. ಮೈಸೂರಿನ ಶ್ರೀ ಸಿದ್ಧಲಿಂಗಾಚಾರ್ಯರು ಉದ್ಧರಣೆಗಳನ್ನು ರಚಿಸಿರುವಂತೆ ಉದ್ಧರಣೆಯೊಳಗಿನ ಜಂಗಮೋದ್ಧರಣೆ, ಅಘೋರನಾಥ, ಬಸವೋದ್ಧಾರಣೆಗಳು ಕಲಾಕ್ಷೇತ್ರಕ್ಕೆ ಸಂದಿರುವ ಎರಡಿಲ್ಲದ ಕಾಣಿಕೆಗಳಂತಿವೆ.

ಬಸವಪುರಾಣ ಹಸ್ತಪ್ರತಿ ಚಿತ್ರಗಳು :

ಚಿತ್ರಗಳನ್ನು ಕೇವಲ ಅಲಂಕಾರಕ್ಕಾಗಿ ಪೂರಕವಾಗಿ ಬಳಸಿದ ಹಸ್ತಪ್ರತಿಗಳು ಪ್ರಾರಂಭಿಕ ದೆಸೆಯಲ್ಲಿ ಕಂಡರೂ ನಂತರದ ಕಾಲ ಘಟ್ಟದಲ್ಲಿ ಸಾಹಿತ್ಯದಷ್ಟೆ ಹಸ್ತಪ್ರತಿ ಚಿತ್ರಗಳು ಪ್ರಮುಖ ಸ್ಥಾನದಲ್ಲಿ ನಿಲ್ಲುವುದಲ್ಲದೇ ಕೆಲವು ಹಸ್ತಪ್ರತಿಗಳಲ್ಲಂತೂ ಕ್ರಾಂತಿಕಾರಿಕ ಮಟ್ಟದಲ್ಲಿ ಹಸ್ತಪ್ರತಿಯ ಚಿತ್ರಗಳು ಬಂದು ನಿಲ್ಲುತ್ತವೆ. ಉದಾಹರಣೆಗೆ ಹೇಳುವುದಾದರೆ ಮೈಸೂರು ವಿಶ್ವವಿದ್ಯಾಲಯದ ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಯಲ್ಲಿರುವ ಭೀಮಕವಿಯ ಬಸವಪುರಾಣ (ಕೆ.ಎ.312) ದಲ್ಲಿರುವ ಕಾಗದ ಮತ್ತು ಫಲಕಗಳ ಮೇಲಿರುವ ಚಿತ್ರಗಳು ಅಮೋಘವಾಗಿವೆ. ಹನ್ನೆರಡನೆಯ ಶತಮಾನದ ಬಸವಣ್ಣನವರ ಸಾಮಾಜಿಕ ಕ್ರಾಂತಿಯ ವಿಷಯವನ್ನು ಬಸವಪುರಾಣ ವಿವರಿಸಿದಂತೆ ಅದರೊಳಗಿನ

ಕರ್ನಾಟಕದ ಹಸ್ತಪ್ರತಿ ಚಿತ್ರಕಲೆ- ಒಂದು ಅಧ್ಯಯನ

ಕರ್ನಾಟಕದ ಹಸ್ತ ಪ್ರತಿಗಳಲ್ಲಿ ವರ್ಣ ಚಿತ್ರಕಲೆ



ಕೃಪೆ :

೧, ೨.೩. ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ. ಮಾನಸಗಂಗೋತ್ರಿ. ಮೈಸೂರು ವಿಶ್ವ ವಿದ್ಯಾಲಯ.ಮೈಸೂರು.

ಚಿತ್ರಗಳು ಶಿಷ್ಟಬದ್ಧವಾಗಿ ಕ್ರಾಂತಿಕಾರಕವಾಗಿಯೇ ಹೇಳುವ ಚಿತ್ರಗಳಾಗಿವೆ. ಶಿಷ್ಟವಾಗಿರುವುದು ಸಂಪ್ರದಾಯ, ರೂಢಿ-ಆಚರಣೆಗಳನ್ನು ಮೀರಿ ಸಾಮಾನ್ಯವಾಗಿ ನಡೆಯುವುದಿಲ್ಲ. ಆದರೆ ಅನಾಮಿಕನಾಗಿರುವ ಈ ಹಸ್ತಪ್ರತಿಯ ಕಲಾವಿದರು ಕವಿಯ ಭಾವವನ್ನು ಅನುಸರಿಸಿ ತನ್ನ ಮಾಧ್ಯಮದಲ್ಲೂ ಶಾಸ್ತ್ರ-ಸೂತ್ರಗಳ ಮಧ್ಯ ಕ್ರಾಂತಿಮಾಡಿರುವುದನ್ನು ಗಮನಿಸಬಹುದು.

ಹನ್ನೆರಡನೇಯ ಶತಮಾನದ ಸಾಮಾಜಿಕ ಜೀವನದಲ್ಲಿ ದೇವಾಯಗಳು ಸಾಮಾಜಿಕ ಕೇಂದ್ರಗಳಾಗಿದ್ದವು. ಅಲ್ಲಿಯ ನ್ಯಾಯನಿರ್ಣಯಗಳು ಸಾಮಾಜಿಕ ನಿರ್ಣಯಗಳಾಗಿರುತ್ತಿದ್ದವು. ಇದು ಎಲ್ಲರಿಗೂ ತಿಳಿದ ವಿಷಯವೇ ಆಗಿದೆ. ಆದರೆ ಈ ಗ್ರಂಥದ ಚಿತ್ರಗಳಲ್ಲಿಯ ವಿಶೇಷವೇನೆಂದರೆ ಚಿತ್ರದೊಳಗಿರುವ ದೇವಾಲಯದ ಸ್ಥಾವರಲಿಂಗದತ್ತ ಯಾರೂ ತಿರುಗದೆ ಅದರ ವಿರುದ್ಧ ದಿಕ್ಕಿನತ್ತ ಎಲ್ಲರೂ ಮುಖ ತಿರುವಿಕೊಂಡಿದ್ದಾರೆ. ಸಾಮಾನ್ಯ ಭಕ್ತರ ಹಂತದಲ್ಲಿ , ಶರಣಸಂಸ್ಕೃತಿಯಂತೆ ಸತಿ ಪತಿಗಳು ಒಂದಾದ ಭಕ್ತಿ ಹಿತವಪ್ಪುವುದು ಶಿವಂಗೆ ಎನ್ನುವ ಸರಳ ಧೋರಣೆಯಿಂದ, ಯಾವ ವೈಭವ, ವಿಶೇಷತೆಗಳು ಇರದೆ ಶಿವನ ವೇಷ ಭೂಷಣಗಳು ಆತನ ಕನಿಷ್ಟ ಸಮವಸ್ತ್ರಗಳಾಗಿರುವ ಹಾವು, ಅರ್ಧಚಂದ್ರ, ನಾಲ್ಕು ಕೈ, ತ್ರಿಶೂಲ, ಡಮರುಗಳಾವವೂ ಇರದೆ ಸಾಮಾನ್ಯ ಜನ ದಂಪತಿಗಳಂತೆ ಕುಳಿತ್ತಿದ್ವಾರೆ. ಅವರನ್ನು ದಂಪತಿಗಳಿಬ್ಬರು ಪೂಜಿಸುತ್ತಿದ್ದಾರೆ.

ಶಿವನಿಗೆ ಸಮೀಪದಲ್ಲಿರುವ ವ್ಯಕ್ತಿಯ ಬಸವಣ್ಣನವರೇ? ಎಂದು ಊಹಿಸಿದರೆ ಬಸವಣ್ಣನವರು ಮಾಂಜವ್ಯದಲ್ಲಿ ತಿರಸ್ಕರಿದ್ದ ಜನಿವಾರ ಕೊರಳಲ್ಲಿ ಇದೆ ಕಾರಣ ಆತ ಬಸವಣ್ಣನವರಾಗದೆ ಬರೀ ಅರ್ಚಕನಾಗುತ್ತಾನೆ. ಅರ್ಚಕನ ಹಿಂಭಾಗದಲ್ಲಿ ಷಡಸ್ಥಲ ಜ್ಞಾನಚಕ್ರವರ್ತಿ ಶ್ರೀ ಚೆನ್ನಬಸವಣ್ಣ ಮತ್ತು ಶೂನ್ಯ ಸಿಂಹಾಸನದ ಅಧ್ಯಕ್ಷ ಅಲ್ಲಮಪ್ರಭು ಕುಳಿತಿದ್ದಾರೆ. ಸಂಯೋಜನೆಯಲ್ಲಿ ಪ್ರಬುದ್ಧತೆ ಇರುವುದರಿಂದ ಕಲಾವಿದ ತುಂಬಾ ಪರಿಣಿತನಾಗಿದ್ದಾನೆ ಫಲಕಗಳ ಮೇಲಿನ ಚಿತ್ರ, ಕಾಗದಗಳ ಮೇಲಿನ ಚಿತ್ರಗಳು ಸ್ವಲ್ಪ ಭಿನ್ನವಾಗಿರುವಂತೆ ಕಾಣುತ್ತವೆ. ಪ್ರತಿಕಾಗದಗಳ ಮೇಲೆ ಅಂಚುಗಳಲ್ಲಿ ಬರೆದಿರುವ ಹೂ ಬಳ್ಳಿಯ ಚಿತ್ರಗಳು ತುಂಬಾ ಭಿನ್ನವಾಗಿವೆ. ಆದ ಕಾರಣ ಬಹುಶಃ ಪರಿಣಿತರಾದ 3-4 ಜನ ಕಲಾವಿದರು ಅಥವಾ ಕಲಾವಿದರು ಕುಟುಂಬದವರು ಸೇರಿಕೊಂಡು ರಚಿಸಿರುವ ಚಿತ್ರಗಳು ಆಗಿರಬಹುದು.

ಧರ್ಮಸ್ಥಳದ ಶ್ರೀ ಮಂಜುನಾಥೇಶ್ವರ ಸಂಸ್ಕೃತಿ ಸಂಶೋಧನಾ ಪ್ರತಿಷ್ಠಾನದಲ್ಲಿ ಒಂದು ಉತ್ತಮವಾದ ಉದ್ಧರಣೆ ಇದೆ. ಗದಗ ಜಗದ್ಗುರು ತೋಂಟದಾರ್ಯಮಠದಲ್ಲೂ ಎರಡು ಉದ್ಧರಣೆಸುರುಳಿಗಳಿವೆ. ಇದರಂತೆ ಚಿತ್ರದುರ್ಗ, ಆದಿ ಚುಂಚನಗಿರಿ, ಬೆಂಗಳೂರು ಕನ್ನಡ ಸಾಹಿತ್ಯ ಪರಿಷತ್ತಿನ ಹಸ್ತಪ್ರತಿ ಭಂಡಾರದಲ್ಲಿ ವೀರಶೈವ ಧಾರ್ಮಿಕ ಸಾಹಿತ್ಯದಲ್ಲಿ ಹಸ್ತಪ್ರತಿಗಳಲ್ಲಿ ಸಾಕಷ್ಟು ಚಿತ್ರಗಳು ದೊರೆಯುತ್ತವೆ.

ಸಿದ್ದನಂಜೇಶನ ರಾಘವಂಕ ಚರಿತೆಯು ಕಾಗದದ ಪ್ರತಿ (1174) ಬಹುಶ

ಹದಿನೇಳನೇಯ ಶತಮಾನದ ಕೊನೆಯ ಭಾಗದಲ್ಲಿ[೩೦] ರಚಿತವಾಗಿರಬಹುದಾದ ಈ ಕೃತಿ ಇತಿಹಾಸದ ಕಾಲಘಟ್ಟದಲ್ಲಿ ಮರೆಯಾದ ಶರಣರ ಭಾವಚಿತ್ರಗಳನ್ನು ಕಾಯ್ದಿಟ್ಟುಕೊಳ್ಳುವುದರಿಂದ ಇದೊಂದು ಧಾರ್ಮಿಕ ಕೃತಿಯಾಗಿದೆ, ಐತಿಹಾಸಿಕ ಕೃತಿಯು ಇದಾಗಿದೆ. ಪ್ರಭುದೇವ, ಸಿದ್ದಾರಾಮ, ರಾಘವಾಂಕ, ಹರಿಹರ, ಚಿಕ್ಕ ನಂಜಾರ್ಯ, ಚೆನ್ನವೀರಾಂಬಿಕೆ, ಮಹಾದೇವ -ರುದ್ರಾಣಿ, ಏಕ,ದ್ವಿ ಮತ್ತು ತ್ರಿದಂಡಿ, ಪ್ರತಾಪರುದ್ರ, ವಿರೂಪಾಕ್ಷ ಪಂಡಿತ, ಕೆರೆಯ ಪದ್ಮರಸ ಮೊದಲಾದವರ ವರ್ಣಚಿತ್ರಗಳಿವೆ ಈ ಕುರಿತು ಹಿರಿಯ ವಿದ್ವಾಂಸರಾಗಿರುವ ಡಾ॥ ಬಿ.ಕೆ. ಹಿರೇಮಠ ''ರ ರಾಘವಾಂಕ ಚಾರಿತ್ರದ ಪ್ರತಿಯೊಂದು ಘಟನೆಯನ್ನು ಚಾಕ್ಷುಷಗೊಳಿಸುತ್ತದೆ.''[೩೧] ಹಿರಿಯ ವಿದ್ವಾಂಸರಾದ ಡಾ. ಶ್ರೀ ಆರ್.ಸಿ. ಹಿರೇಮಠ ಅವರು ಈ ವರ್ಣಚಿತ್ರಗಳ ಮಹತ್ವವನ್ನು ವಿವರಿಸುತ್ತಾ ''ರಾಘವಾಂಕನ ಬಗೆಗೆ ಪುರಾತನ ಇಲ್ಲವೆ ಆಧುನಿಕವಾದ ಯಾವ ಚಿತ್ರಗಳೂ ಪ್ರಕಟವಾಗದಿರುವಾಗ ಕವಿಯ ವ್ಯಕ್ತಿತ್ವವನ್ನು ಹೆಚ್ಚು ಸ್ಪುಟಗೊಳಿಸಬಹುದಾದ ಚಿತ್ರ ಇದಾಗಿವೆ.'' [೩೨] ಎಂದಿದ್ದಾರೆ.

ವಚನಶೋಧ -1: ಇದೇ ರೀತಿಯಾಗಿ ಖ್ಯಾತ ಸಂಶೋಧಕರು ಹಸ್ತಪ್ರತಿ ತಜ್ಞರು ಆಗಿರುವ ಡಾ. ಎಂ.ಚಿದಾನಂದ ಮೂರ್ತಿಯವರು ಅವರ ಮಿತ್ರರಾಗಿರುವ ಶ್ರೀ ಕಂಬಾಳು ಬಿ.ಸಿದ್ದಗಂಗಯ್ಯ ಅವರಿಂದ ಸಂಗ್ರಹಿಸಿರುವ ಬೆಂಗಳೂರು ಜಿಲ್ಲೆಯ ನೆಲಮಂಗಲ ತಾಲೂಕಿನ ದೊಡ್ಡ ಬೆಲೆಯ ಮಠದ ಪರಮ ಪೂಜ್ಯ ಶ್ರೀ ರುದ್ರದೇವರು ರಚಿಸಿದ್ದು ಎಂದು ಕಲ್ಪಿಸಿಕೊಂಡಿರುವ ಡಾ.ಮೂರ್ತಿಯವರು ಸಂಪಾದಿಸಿ ಕನ್ನಡ ಸಾಹಿತ್ಯ ಪರಿಷತ್ ಪ್ರಕಟಿಸಿರುವ ವಚನ ಶೋಧ-1 ರ ಒಳಗಿರುವ ಶರಣರ ಸಕೀಲ ವರ್ಣಚಿತ್ರಗಳು ಶಿಷ್ಠ ಬದ್ದವಾಗಿವೆ. ದೇಹದ ಪ್ರಮಾಣ, ಅಲಂಕಾರ, ವರ್ಣಗಾರಿಕೆ, ಸಾಂಕೇತಿಕ ವಿವರಗಳು ಅತ್ಯಂತ ಮೋಹಕವಾಗಿವೆ.ಆದರೆ ವೀರಶೈವ ಧರ್ಮಕ್ಕನುಗುಣವಾಗಿ ಪ್ರಾಥಮಿಕ ಹಂತದ ಅವಶ್ಯಕತೆಗಳಾದ ಭಸ್ಮ, ರುದ್ರಾಕ್ಷಿ, ಇಷ್ಟಲಿಂಗಗಳ ಧಾರಣೆಗಳು ಈ ಚಿತ್ರಗಳಿಗೆ ಇರದ ಕಾರಣ ಇವುಗಳನ್ನು ಶಿವಶರಣರ ಚಿತ್ರಗಳೆಂದು ಪರಿಗಣಿಸಬಹುದೇ ? ಎಂಬುದು ಬಲ್ಲ ವಿದ್ವಾಂಸರ ಮುಂದಿರುವ ಪ್ರಶ್ನೆಯಾಗಿದೆ ಮತ್ತು ಕಾಗದದ ಚಿತ್ರಗಳಲ್ಲಿ ದೊಡ್ಡ ಬೆಲಿ ಮಠದ ಪೂಜ್ಯ ಶ್ರೀಗಳವರು ಸ್ವಹಸ್ತಾಕ್ಷರಗಳಿಂದ ಬರೆದ ಒಂದೇ ಕಾರಣಕ್ಕಾಗಿ ಅವರು ಕಲಾವಿದರಾಗಬಲ್ಲರೇ? ಎಂಬುದು ನಮ್ಮೆಲ್ಲರ ಮುಂದಿರುವ ಎರಡನೇ ಪ್ರಶ್ನೆಯಾಗಿದೆ.

ಪ್ರಭುಚರಿತೆ ಹಸ್ತಪ್ರತಿ ಚಿತ್ರಗಳು : ಶಿಷ್ಟಬದ್ಧವಾದ ಮತ್ತೊಂದು ಹಸ್ತಪ್ರತಿ ಚಿತ್ರಕಲೆಯ ಉದಾಹರಣೆಯನ್ನು ಹಸ್ತಪ್ರತಿಯ ವಿದ್ವಾಂಸರಾಗಿರುವ ಡಾ.ಬಿ.ಕೆ.ಹಿರೇಮಠರು ಈ ರೀತಿಯಾಗಿ ವಿವರಿಸುತ್ತಾರೆ. ಕೆಲವು ಸಾಂಕೇತಿಕ ಚಿತ್ರಗಳನ್ನೊಳಗೊಂಡ ಹಸ್ತಪ್ರತಿಯೊಂದು ಪ್ರೊ। ಜಿ.ಎಮ್.ಉಮಾಪತಿ ಶಾಸ್ತ್ರಿಯವರ ಸಂಗ್ರಹದಲ್ಲಿದೆ. ಇದರಲ್ಲಿಯೇ ಅಲ್ಲಮ ಪ್ರಭುದೇವರ

---

೩೦. ಡಾ. ಎಸ್.ಸಿ. ಪಾಟೀಲ್ , ಸತ್ಯಾನಂದ ಪಾತ್ರೋಟ ಸಂ.: ನಿಜದ ನೆಲೆ : ಡಾ. ಸ್ನೇಹಾಭೂಸನೂರು, ಪುಟ -೩೩

೩೧. ಡಾ. ಎಫ್.ಟಿ. ಹಳ್ಳಿಕೇರಿ : ಕಂಠಪತ್ರ, ಪುಟ -೧೨.

೩೨. ಡಾ. ಬಿ.ಕೆ. ಹಿರೇಮಠ : ಕನ್ನಡ ಹಸ್ತಪ್ರತಿ ಒಂದು ಅಧ್ಯಯನ, ಪುಟ-೧೩.

ಸಕೀಲಗಳಲ್ಲಿ ಶಿವಶರಣರ ವರ್ಣ ಚಿತ್ರಗಳು



ಕೃಪೆ:

ಡಾ॥ಎಂ.ಚಿದಾನಂದ ಮೂರ್ತಿ.ವಚನ ಶೋಧ-೧

ಕನ್ನಡ ಸಾಹಿತ್ಯ ಪರಿಷತ್ತು,ಚಾಮರಾಜ ಪೇಟೆ.ಬೆಂಗಳೂರು.

ಚಿತ್ರಣವನ್ನು ಚಿತ್ರಕಾರನು (ಬಹುಶ್ಯಹ ಪ್ರತಿಕಾರನೇ ಇರಬಹುದು). ಅತ್ಯಂತ ಅಮೋಘವಾಗಿ ಚಿತ್ರಿಸಿದ್ದಾನೆ. ಹಾಳೆಯ ಮೇಲೆ ಪ್ರಧಾನವಾಗಿ ಕಾಣುವದು ಹರಡಿನಂತೆ ಒಂದು ಕದಳಿ ವೃಕ್ಷ. ಈ ವೃಕ್ಷದಲ್ಲಿಯೇ ಪ್ರಭುವಿನ ಅಂಗಾಂಗಗಳು ಅಡಕಗೊಂಡಿವೆ. ಕದಳಿಯ ಮಧ್ಯದಲ್ಲಿ ಪ್ರಭುದೇವರ ಮುಖವನ್ನು ಮಾತ್ರ ಕಾಣುವಂತೆ ಚಿತ್ರಿಸಲಾಗಿದೆ. 'ಕಾಯವೆಂಬುದೊಂದು ಕದಳಿ' ಎಂಬ ಶರಣರ ಮಾತೆ ಚಿತ್ರರೂಪ ತಾಳಿ ನಿಂತಿರುವದನ್ನು ಇಲ್ಲಿ ಕಾಣಬಹುದು. ಈ ಹಸ್ತಪ್ರತಿಯಲ್ಲಿ ಮೇಲೆ ವರ್ಣಿಸಲಾದ ಸಿದ್ದಲಿಂಗ ಯತಿಯ ಸಾಂಕೇತಿಕ ವರ್ಣ ಚಿತ್ರವನ್ನು ಹೋಲುವ ಚಿತ್ರವೂ ಇದ್ದ ಅದರೊಟ್ಟಿಗೆ ಮಹಾದೇವಿ ಅಕ್ಕ ಮೊದಲಾದ ಶರಣ -ಶರಣೇಯರ ಇದ್ದದ್ದು ಕಂಡು ಬರುತ್ತದೆ.[೫೨]

4. ಚಿತ್ರಕಲಾ ವಿನ್ಯಾಸವನ್ನು ಹೊಂದಿದ ವೈಷ್ಣವ ಧರ್ಮದ ಧಾರ್ಮಿಕ, ಹಸ್ತಪ್ರತಿಗಳು :

ಮಲಗಿ ಪರಮಾದರದಿ ಪಾಡಲು
ಕುಳಿತು ಕೇಳುವ, ಕುಳಿತು ಪಾಡಲು
ನಿಲುವ, ನಿಂತರೆ ನಲಿವ, ನಲಿದರೆ ಒಲವೆ ನಿಮಗೆಂಬ।
ಸುಲಭನೋಹರಿ ತನ್ನ ವರನರ
ಗಳಿಗೆ ಬಿಟ್ಟಗಲನೋ ರಮಾಧವ
ನೊಲಿಸಲರಿಯದ ಪಾಮರರು ಬಳಲುವರು ಭುವನದೊಳಗೆ. *

ಕರ್ನಾಟಕದ ಹಸ್ತಪ್ರತಿಗಳಲ್ಲಿ ವೈಷ್ಣವ ಹಸ್ತಪ್ರತಿಗಳ ಸ್ಥಾನವು ಪ್ರಮುಖವಾಗಿದೆ. ಆದರೆ ಈವರೆಗೂ ಯಾವ ವೈಷ್ಣವ ಮಠದಿಂದ ಹಸ್ತಪ್ರತಿ ಸೂಚಿ ಪ್ರಕಟವಾಗಿರದ ಕಾರಣ ಈ ಹಸ್ತಪ್ರತಿಗಳ ಕುರಿತು ಹೆಚ್ಚುವರಿ ಅಧ್ಯಯನ ನಡೆದಿರುವಂತೆ ಕಾಣಿಸಿರುವದಿಲ್ಲ. ಕರ್ನಾಟಕದ ಹಸ್ತಪ್ರತಿಗಳ ಹಿರಿಯ ವಿದ್ವಾಂಸರಾಗಿರುವ ಕೆಳದಿಯ ಗುಂಡಾ ಜೋಯಿಸರು[೫೩] ಬೆಂಗಳೂರು ಹನುಮಂತ ನಗರದ ಪ್ರಭಂಜನಾಚಾರ್ಯರು, ಕೆ.ಟಿ.ಪಾಂಡುರಂಗಿಯವರು ಸಂಗ್ರಹಿಸುವ ಹಸ್ತಪ್ರತಿಗಳಲ್ಲಿ ಅನೇಕ ಶಿಷ್ಟದ ಚಿತ್ರಗಳಿವೆ. ಸಂಸ್ಕೃತದ ಹಿರಿಯರು, ವಿದ್ವಾಂಸರಾಗಿರುವ ಪ್ರೊ॥ ಕೆ. ಟಿ. ಪಾಂಡುರಂಗಿಯವರು ದ್ವೈತ ವೇದಾಂತ ಅಧ್ಯಯನ ಮತ್ತು ಸಂಶೋದನಾ ಪ್ರತಿಷ್ಠಾನ, ಬೆಂಗಳೂರಿನಲ್ಲಿ ಸಂಗ್ರಹಿಸಿರುವ ಮಹಾಭಾರತ ಹಸ್ತಪ್ರತಿಯ ಸಭಾ-ಪರ್ವದ ಸಂಗ್ರಹಣೆಯ ಚಿತ್ರಗಳನ್ನು ಇಲ್ಲಿ ಸ್ಮರಿಸಬಹುದು. ಪ್ರೊ॥ಪಾಂಡುರಂಗಿಯವರು ಸಂಗ್ರಹದಲ್ಲಿರುವ ಹಸ್ತಪ್ರತಿಗಳಲ್ಲಿ ಹದಿನಾರು ಹಸ್ತಪ್ರತಿ ಚಿತ್ರಗಳಿವೆ. ಅವುಗಳನ್ನು ಕುರಿತು ಶ್ರೀ ಶಿವಪ್ರಿಯಾನಂದರು ಈ ರೀತಿ ವಿವರಿಸುತ್ತಾರೆ. '' ಮಹಾಭಾರತ ಕೃತಿಯ ಹಸ್ತಪ್ರತಿಯ ಈಗ ಹಲವಾರು ಸಂಗ್ರಹಕಾರರಲ್ಲಿ ಚದುರಿಹೋಗಿವೆ. ಸಭಾ-ಪರ್ವದ ಭಾಗವು ಶ್ರೀ ವಿದ್ಯಾದೀಶ ಸಂಸ್ಕೃತ ಹಸ್ತಪ್ರತಿ ಗ್ರಂಥಾಲಯ, ಬೆಂಗಳೂರಿನ ಪ್ರೊ॥ಕೆ.ಟಿ.ಪಾಂಡುರಂಗಿಯವರ ಸಂಗ್ರಹದಲ್ಲಿದೆ. ಅದರಲ್ಲಿ ಹದಿನಾರು ಹಸ್ತಪ್ರತಿಯ ಚಿತ್ರಗಳಿವೆ. ಇವುಗಳನ್ನು ಶಕ ಸಂವತ್ಸರ 1591 (ಕ್ರಿ.ಶ.1670) ದ ಕಾಲದಲ್ಲಿ ನಿರ್ಮಿಸಿದ್ದು ಇವುಗಳಿಗೆ ಖಲಿತಾ ಗ್ರಾಮದ ರತ್ನಾಕರನ ಪುತ್ರ ಗೋವಿಂದ ಶರ್ಮನು ಲಿಪಿಕಾರನಾಗಿದ್ದಾನೆ. ತಿಮ್ಮಾಜಿ ಪಂಡಿತನು ಈ ಹಸ್ತಪ್ರತಿಯ ಪೋಷಕನಾಗಿದ್ದಾನೆ.''

★ ಶ್ರೀ ಜಗನ್ನಾಥ ದಾಸರು : ಹರಿಕಥಾಮೃತ ಸಾರ, ಸಂಧಿ -೨ ಪದ್ಯ -೫.
೫೩. ಕೆಳದಿ ಶ್ರೀ ಗುಂಡಾ ಜೋಯಿಸ : ಕಸ್ತೂರಿ, ದೀಪಾವಳಿ ಸಂಚಿಕೆ - ೨೦೦೪.

ಕರ್ನಾಟಕದ ಹಸ್ತಪ್ರತಿ ಚಿತ್ರಕಲೆ- ಒಂದು ಅಧ್ಯಯನ

ವೈಷ್ಣವ ಪುಷ್ಠಿ ಮಾರ್ಗದ ಹಸ್ತ ಪ್ರತಿಗಳಲ್ಲಿ ವರ್ಣ ಚಿತ್ರಗಳು







ಕೃಪೆ :

ಲೇ||ಆರ್. ಪಿ. ಗುರಪೂರ, ಉದಯವಾಣಿ ದೀಪಾವಳಿ ವಿಶೇಷಾಂಕ-೧೯೯೦

ಹಸ್ತಪ್ರತಿ ಚಿತ್ರಕಲೆಯ ಕ್ಷೇತ್ರಕಾರ್ಯ ನಿಮಿತ್ಯ ದಿನಾಂಕ : 11-07-2004 ರ ರವಿವಾರ ಬೆಂಗಳೂರಿನ ಜಯನಗರದ ಸೌಧ ಎಂಡ ವರ್ತುಳದ ಆನೆಬಂಡಿ ರಸ್ತೆಯಲ್ಲಿರುವ ಅವರ ಮನೆಯಲ್ಲಿ ಪ್ರೋ|| ಕೆ.ಟಿ. ಪಾಂಡುರಂಗಿಯವರನ್ನು ಕಂಡಾಗ ಪ್ರಾಚ್ಯ ಇಲಾಖೆಗೆ ಕೊಟ್ಟಿರುವ ಅವರು ಆ ಚಿತ್ರಗಳ ಪೈಕಿ ನಾಲ್ಕು ಚಿತ್ರಗಳನ್ನು ನನಗಾಗಿ ತಮ್ಮ ಮನೆಗೆ ತಂದಿದ್ದ ಅವರುಗಳು ತಮ್ಮಲ್ಲಿರುವ ಹಸ್ತ ಪ್ರತಿಗಳ ವಿವರವನ್ನು ಹಸ್ತಪ್ರತಿಯೊಳಗಿರುವ ಶ್ಲೋಕವನ್ನು ಉದ್ಧರಿಸುತ್ತಾ ಈ ರೀತಿ ವಿವರಿಸಿದರು.

ರತ್ನಾಕರ ತನೂಜನಾ ಖಾಲಿತಗ್ರಾಮ ವಾಸಿಽಽನಾ ||

ಗೋವಿಂದ ಪಂಡಿತನೇಈದಂ ಸಭಾಪರ್ವ ಮಹಾಭಿದಂ ||

ಖಲಿತಗ್ರಾಮದ ರತ್ನಾಕರನ ಚಿರಂಜೀವಿ ಗೋವಿಂದ ಶರ್ಮನು ಸಭಾಪರ್ವನ ಲಿಪಿಕಾರನಾಗಿದ್ದು ಕೃತಿಯನ್ನು ಶ್ರೀ ಶಾಲಿವಾಹನ ಶಕೆ 1591ನೇ ಸೌಮ್ಯನಾಮ ಸಂವತ್ಸರದ ಜೇಷ್ಠಮಾಸ ದ್ವಾದಶಿಯ ತಿಥಿಯ ದಿನ ಕೃತಿರಚನೆ ಪ್ರಾರಂಭಗೊಂಡು ಮರು ವರ್ಷದ ಆಷಾಡಮಾಸದ ಶುಕ್ಲ ಪಕ್ಷ ಚತುರ್ದಶಿಯ ದಿನದಂದು ಕೃತಿ ಪೂರ್ಣಗೊಂಡ ವಿವರವನ್ನು ತಿಳಿಸುವ ಅವರು ಈ ಕೃತಿಯು ಅಪ್ಪಟ ಕನ್ನಡನಾಡಿನ ಕೃತಿಯಾಗಿದೆ. ಇದು ಕ್ರಿ.ಶ. 1690 ಕಾಲಘಟ್ಟದ ಕೃತಿಯಾಗಿದ್ದು ಇಂದಿನ ಮಹಾರಾಷ್ಟ್ರದ ಸತಾರ ಜಿಲ್ಲೆಯ ಪಗಡಿ ಸೇತುಮಾಧವರಾವ್ ಅವರ ಅಧಿ ೕನದಲ್ಲೂ ಕೆಲವು ಹಸ್ತಪ್ರತಿಯ ಭಾಗಗಳಿದ್ದವು. 1690 ರ ಕಾಲಘಟ್ಟವು ಹಸ್ತಪ್ರತಿಗಳ ರಚನೆಯಲ್ಲಿ ವಿಶೇಷವಾದದುದ ಆಗಿದೆ. ಮಳಖೇಢ, ಸತಾರಗಳಂತಹ ಅನೇಕ ಅಗ್ರಹಾರಗಳಲ್ಲಿ ಆಗಾಗ ಸಾಹಿತ್ಯ ಸಭೆಗಳಾಗುತ್ತಿದ್ದವು ಆ ಸಭೆಗಳಿಗೆ ಕವಿಗಳು ಕೃತಿಯೊಂದಿಗೆ ಬಂದಿರುವಂತೆ ಕಲಾವಿದರೂ ಕೃತಿಗಳಿಗೆ ಕಲಾಕೃತಿ ರಚಿಸಲು ಬಂದಿರುತ್ತಿದ್ದರು. ತಿಪ್ಪಾಜಿ, ಪಗಡಿ ಸೇತುಮಾಧವರಾವ್‌ರಂತಹ ಸಾಹಿತ್ಯ ಪೋಷಕರು ಕವಿ ಕಲಾವಿದರನ್ನು ಸಮ್ಮಾನಿಸುತ್ತಿದ್ದರು.

ಪ್ರೊ||ಪಾಂಡುರಂಗಿಯವರು ವಿವರಿಸುತ್ತಾ ಐತಿಹಾಸಿಕ ಮಾತನ್ನು ಈ ರೀತಿ ವಿವರಿಸಿದರು ಕ್ರಿ.ಶ.1690 ರ ಕಾಲವೆಂದರೆ ಮಹಾರಾಷ್ಟ್ರವೆಂಬುದು ಪ್ರತ್ಯೇಕವಾಗಿರದೆ "ಕಾವೇರಿಯಿಂದಮಾ ಗೋದಾವರಿ ವರ - ಮಿರ್ದ ನಾಡದಾ ಕನ್ನಡದೊಳ್ ಭಾವಿಸಿದ ಜನಪದಂ ವಸುಧಾವಲಯ ವಿಲೀನ ವಿಶದ ವಿಷಯ ವಿಶೇಷಂ" ಎಂಬ ಕವಿರಾಜ ಮಾರ್ಗದ ಲಾಕ್ಷಣಿಕ ಗ್ರಂಥ ಹೇಳುವಂತೆ ಕನ್ನಡ ವಿಸ್ತೃತೆಗೆ ಒಳಪಟ್ಟಿದ್ದ ಕಾಲವಾಗಿತ್ತು. ಇಂದಿನ ಸತಾರ ಆಗ ಅಪ್ಪಟ ಕನ್ನಡದ ನಾಡಾಗಿತ್ತು. ಪೇಶ್ವೆಯವರು ಮತ್ತು ಕೊಂಕಣಸ್ಥರು ಅಲ್ಲಿ ಬಂದು ಈಗಿನಂತೆ ನೆಲೆಗೊಂಡಿರಲಿಲ್ಲ ಎಂಬುದನ್ನು ಹೇಳುತ್ತಾ ಚಿತ್ರಕಲಾವಿದರೂ ಉತ್ತರಕರ್ನಾಟಕದ ಕಲ್ಪಟಗಿ, ಗೋಕಾಕಗಳಲ್ಲಿ ತೊಟ್ಟಿಲುಗಳಿಗೆ ಕಿರುರೂಪ ಚಿತ್ರರಚಿಸುವ, ದೇವಿ-ದೇವತೆಯರನ್ನು ನಿರ್ಮಿಸುವಂತಹ ಚಿತ್ರಕಲೆಯನ್ನು ಕುಲಕಸುಬು ಮಾಡಿಕೊಂಡಿರುವ ಜನಾಂಗದ ಕಲಾವಿದರಾಗಿರಬೇಕೆಂದು ಅವರು ಅಭಿಪ್ರಾಯ ಪಡುತ್ತಾರೆ. ಅಲ್ಲದೇ ಕಲಾಕೃತಿಗೆ ಬೇಕಾಗುವ ಬಣ್ಣಗಳನ್ನು ನಿಸರ್ಗಮೂಲದಿಂದಲೇ ಪಡಿದು ಕೊಂಡಿರುವ ಕಾರಣ ಕಲಾಕೃತಿಗಳು ಅಂದಿನಿಂದ ಇಂದಿನವರೆಗೂ ತಮ್ಮ ಪ್ರಖರತೆಯನ್ನು

ಕರ್ನಾಟಕದ ಹಸ್ತಪ್ರತಿ ಚಿತ್ರಕಲೆ- ಒಂದು ಅಧ್ಯಯನ

ಕಾಗದದ ಹಸ್ತ ಪ್ರತಿಗಳಲ್ಲಿ ರೇಖಾ ಚಿತ್ರಗಳು

ಕಲಾವಿದರು : ಶ್ರೀ ಭೀಮಣ್ಣ,ತಿಪ್ಪಣ್ಣ,ಗುರುರಾಜಪ್ಪ ಚಿತ್ರಗಾರ,ಕನಕಗಿರಿ.









ಕೃಪೆ:

ಶ್ರೀ ಯಂಕಣ್ಣ ಚಿತ್ರಗಾರ,ಗಂಗಾವತಿ

ಕಾಯ್ದಿಟ್ಟುಕೊಂಡಿವೆ. ಕೃತಿಯೊಳಗಿನ ಆಕೃತಿಗಳ ಆಭರಣಗಳಿಗೆ ಸುವರ್ಣವನ್ನೇ ಬಳಸುತ್ತಿರುವುದರಿಂದ ಅದರ ಹೊಳಪನ್ನು ನಾವು ಇಂದಿಗೂ ಗಮನಿಸಬಹುದಾಗಿದೆ. ಎಂದು ವಿವರಿಸಿದ ಪ್ರೊ||ಕೆ. ಟಿ. ಪಾಂಡುರಂಗಿಯವರು ''ದ್ವೈತ ವೇದಾಂತ ಅಧ್ಯಯನ ಮತ್ತು ಸಂಶೋಧನಾ ಪ್ರತಿಷ್ಠಾನ ''ದ ವಿಶೇಷ ಸಚಿತ್ರ ಸಂಚಿಕೆಯಾದ ದ್ವಾಸುಪರ್ಣವನ್ನು ಅಧ್ಯಯನಕ್ಕೆ ಬಳಸಿಕೊಳ್ಳಲು ಆಶೀರ್ವದಿಸಿ ಕಳಿಸಿಕೊಟ್ಟರು.

ಶ್ರೀ ಶಿವಪ್ರಿಯಾನಂದರು ಆಂಗ್ಲ ಮಾಧ್ಯಮದ ಹಸ್ತಪ್ರತಿ ಚಿತ್ರಕಲೆಯ ಲೇಖಕರಾಗಿದ್ದು, ಆಂಗ್ಲ ಮಾಧ್ಯಮ ಹಸ್ತಪ್ರತಿ ಚಿತ್ರಕಲೆಯ ಸಂಚಿಕೆಗಳ ಬಗ್ಗೆ 'ಮಾರ್ಗಕ್ಕೆ' ಸಂಚಿಕೆಗೆ ಬರೆದ ಲೇಖನದಲ್ಲಿ ಶಿಷ್ಟ ಹಸ್ತಪ್ರತಿ ಯೊಳಗಿನ ಶಿಷ್ಟ ಚಿತ್ರಕೃತಿಯೊಳಗಿನ ವ್ಯಾಪಕವಾದ ವಿವರವನ್ನು ನೀಡಿದ್ದಾರೆ. ಮಹಾಭಾರತದ ಚಿತ್ರಗಳ ಬಗೆಗೆ ಒಂದು ನೂರಾ ಇಪತ್ಮೂರು ಸಚಿತ್ರ ಜಲವರ್ಣ ಚಿತ್ರಗಳಿರುವ ' ಹರಿವಂಶ 'ದ ಬಗೆಗೆ ಕೃಷ್ಣರಾಜ ಒಡೆಯರ ಶ್ರೀತತ್ತ್ವನಿಧಿಯ ಬಗಗೆ ಜೈಮಿನಿಭಾರತ ಅಶ್ವಮೇಧ ಪರ್ವದ ಬಗೆಗೂ ಭಾಗವತ ಪುರಾಣದೊಳಗಿರುವ ಹಸ್ತಪ್ರತಿ ಚಿತ್ರಗಳ ಬಗೆಗೂ ವ್ಯಾಪಕವಾದ ವಿವರವನ್ನು ನೀಡುತ್ತಿದ್ದಾರೆ. ಇವೆಲ್ಲವೂ ಮೈಸೂರು-ಶೈಲಿಯ ಸಂಪ್ರದಾಯ ಕಲಾವಿದರು ರಚಿಸಿರುವ ಚಿತ್ರಗಳಾಗಿವೆ. ಎಂಬುದನ್ನು ನಾವಿಲ್ಲಿ ಗಮನಿಸಬೇಕು.


ಶ್ರೀ ಶಿವಪ್ರಿಯಾನಂದರು ''ಹರಿವಂಶ''ಪುರಾಣದೊಳಗಿರುವ ಚಿತ್ರಗಳನ್ನು ಕುರಿತು ಈ ರೀತಿಯಾದ ವಿವರವನ್ನು ನೀಡುತ್ತಾರೆ. ಹರಿವಂಶದ ಕೃತಿಯು ಮಹಾಭಾರತದ ಒಂದು ಭಾಗವೆಂದು ಪರಿಗಣಿಸಿದ್ದು ಇದನ್ನು ವೈಶಂಪಾಯನ ಮುನಿಯು ಜನಮೇಜಯನಿಗೆ ಶ್ರೀಕೃಷ್ಣನ ಕೌಟುಂಬಿಕ ಸಂಬಂಧಿಗಳಾದ ವೃಷ್ಠಿ ಮತ್ತು ಅಂಧಕರ ಕಥೆಯನ್ನು ಹೇಳಿರುವ ಕಥಾ ಸಾರವಾಗಿದೆ. ಇದರಲ್ಲಿ 16000 ಶ್ಲೋಕಗಳಿದ್ದು. ಅವುಗಳನ್ನು ಹರಿವಂಶ, ವಿಷ್ಣು ಮತ್ತು ಭವಿಷ್ಯ ಪುರಾಣಗಳೆಂದು ವಿಭಾಗಿಸಲಾಗಿದೆ. ಕೃತಿಯಭಾಷೆ ಸಂಪೂರ್ಣವಾಗಿ ಸಂಸ್ಕೃತವೇ ಆಗಿದ್ದು ಅದನ್ನು ಕನ್ನಡ ಲಿಪಿಯಲ್ಲಿ ಬರೆಯಲಾಗಿದೆ. ಹದಿನೆಂಟನೆಯ ಶತಮಾನದ ಈ ಕೃತಿಯ ಪ್ರತಿ ಪುಟದಲ್ಲೂ ಒಂದರಿಂದ 657ರ ವರೆಗೆ ಕ್ರಮಸಂಖ್ಯೆಯನ್ನು ಪುಟದಪಕ್ಕದಲ್ಲಿ ನೀಡಲಾಗಿದ್ದು ಈ ಕಾಗದ ಪ್ರತಿಯ ಅಳತೆಯು 32.5 ಡ 20.5 ಸೇ.ಮೀ. ಇವೆ. ಅಲಂಕೃತವಾದ 123 ಚಿತ್ರಗಳಿವೆ. ಈ ಹಸ್ತಪ್ರತಿಯೊಳಗಿನ ಚಿತ್ರಗಳನ್ನು ಬಂಗಾರದ ಪತ್ರರೇಕುಗಳಿಂದ ಜಲವರ್ಣಗಳಿಂದ ಚಿತ್ರರಚಿಸಿದ್ದು ಚಿತ್ರಗಳ ಅಂಚುಗಳಿಗೆ ಕಪ್ಪು ಬಣ್ಣದ ರೇಖೆಗಳನ್ನು ಎಳೆಯಲಾಗಿದೆ. ಪ್ರತಿಯೊಂದು ಪ್ರತಿಯಲ್ಲಿ 15 ಸಾಲುಗಳ ಪಠ್ಯವನ್ನು 26×15 ಸೇ.ಮೀ. ಅಳತೆಗಳ ಆಯತದಲ್ಲಿ ಹಳದಿ ಮತ್ತು ಕೆಂಪು ಬಣ್ಣದ ಅಂಚುಗಳ ಒಳಭಾಗದಲ್ಲಿ ಬರೆಯಲಾಗಿದೆ. ಕಾಗದವು ತಿಳಿ ಹಾಲಗೆನೆಯ ಮತ್ತು ತಿಳಿ ನೀಲಿಯ ಬಣ್ಣಗಳಿಂದ ಕೂಡಿದೆ. ತಿಳಿ ಹಾಲುಗೆನೆಯ ಯೂರೋಪಿನ ಕಾಗದದಲ್ಲಿ 1846 ಎಂಬ ಅಂಕಿತವಿದೆ. (Watermark) ತಿಳಿನೀಲಿಯಲ್ಲಿ ...... ಎಂದು ಇದ್ದು ಪುಷ್ಪಿಕೆ (Brides 1852) ಚಿತ್ರ 08 ಪುಟ 657 ಈ ರಿತೀಯ ವಿಷಯದ ವಿವರಣೆಯನ್ನು ನೀಡಲಾಗಿದೆ.

ಶಾಲಿವಾಹನ ಶಕಾಬ್ದ 1776 ಆನಂದ ನಾಮ ಸಂವತ್ಸರ ಮಾಘ ಶುಕ್ಲ

ಕರ್ನಾಟಕದ ವೈಷ್ಣವ ಹಸ್ತಪ್ರತಿ ವರ್ಣಚಿತ್ರಗಳು

ಕೃತಿ : ರಾಮಾಯಣ





Courtesy :

Shiva Priyananda

Marga Vol.No. XLVII No.3

ದ್ವಿತೀಯಯಾಮ್ ಸ್ಥಿರವಾರನ್ವಿತಾಯಾಮ್ ।
ಶ್ರೀ ಮದ್ಶ್ರಿವತ್ ಸಗೋತ್ರೋದ್ಭವ - ರಾಘವೇಂದ್ರ ನಾಮಾನಾ ಲಿಖಿತಾಮಿದಂ
ಹರಿವಂಶ-ಪುಸ್ತಕ ಲೇಖನಾಮ್ ಸಂಪೂರ್ಣಾನಾಮ್

ಎಂದು ವಿವರಿಸಿರುವ ಶ್ರೀ ಶಿವಪ್ರಿಯಾನಂದರು ಅವುಗಳ ಒಳಗಿರುವ ಚಿತ್ರಕೃತಿಗಳ ಬಗ್ಗೆ ಈ ರೀತಿ ವ್ಯಾಪಕವಾದ ವಿವರಣೆಯನ್ನು ನೀಡುತ್ತಾರೆ. '' ಕೃತಿಯಲ್ಲಿ 123 ಚಿತ್ರಕೃತಿಗಳಿವೆ. ಸಾಮಾನ್ಯವಾಗಿ ಪ್ರಮುಖಾವಾದ ಭಾಗಗಳಿಗೆ ಚಿತ್ರಗಳನ್ನು ಚಿತ್ರಿಸಲಾಗಿದೆ. ಎಲ್ಲ ಚಿತ್ರಗಳನ್ನು ಜಲವರ್ಣದಲ್ಲಿ ಸಾರಿಣೆ (WASH) ಕ್ರಮದಲ್ಲಿ ರಚಿಸಲಾಗಿದೆ.

ಪ್ರತಿ ಚಿತ್ರವನ್ನು ಕಪ್ಪುವರ್ಣದ ಹೋರ ರೇಖೆಯಿಂದ ಪೂರ್ಣಗೊಳಿಸಿದ ಕಾರಣ ಸಮಗ್ರ ಚಿತ್ರ ಸಂಯೋಜನೆಯನ್ನು ಕಪ್ಪು ವರ್ಣವೇ ಆಳುತ್ತಿರುವಂತೆ ಭಾಸವಾಗುತ್ತಿದೆ. ಚಿತ್ರಗಳಿಗಾಗಿ ಬಿಟ್ಟಿರುವ ಸ್ಥಳದಲ್ಲಿ ಪಠ್ಯಕ್ಕೆ ಅನುಸರಿಸಿ ಬಲಯುತವಾದ ರೇಖೆಗಳಿಂದ ಸಂಯೋಜನೆ ಮಾಡಿಕೊಂಡಿರುವಂತಿದೆ. ನಂತರ ವರ್ಣಗಳನ್ನು ಸೇರಿಸಿರುವಂತಿದೆ. ಮಾದರಿಯ ಕೃತಿಗಳಿಗಾಗಿ ದಟ್ಟವರ್ಣಗಳಲ್ಲದೇ ದೈಹಿಕ ಅಂಚುಗಳಲ್ಲಿ ರೇಖೆಗಳನ್ನು ದುಡಿಸಿಕೊಳ್ಳಲಾಗಿದೆ. ವಾಸ್ತು ಶಿಲ್ಪ ಕೃತಿಗಳನ್ನು, ಬೆಟ್ಟಗಳನ್ನು, ಮರಗಳನ್ನು ಪರದೆಯ ಮಡಿಕೆಗಳನ್ನು ಸಾಮಾನ್ಯವಾಗಿ ತಿಳು ಎತ್ತರದಲ್ಲಿ ಚಿತ್ರಿಸಿಲಾಗಿದೆ. ಪುರುಷ ಮತ್ತು ಸ್ತ್ರಿಯರ ಗುಂಪುಗಳನ್ನು ಚಿತ್ರದ ಈ ಕಡೆ ಆಕಡೆ ಚಿತ್ರಿಸಿರುವಂತೆ, ಮುಖ್ಯ ಆಕೃತಿ ಮಧ್ಯದಲ್ಲಿ ಇದ್ದರೆ ಅದರ ಇಕ್ಕೆಲಗಳಲ್ಲಿ ಪಾರ್ಶ್ವ (Profile)ಮುಖದ, ಪಾದದ ಆಕೃತಿಗಳಿರುವಂತೆ ಎಲ್ಲಾ ಕೃತಿಗಳು ಸಂಪ್ರದಾಯ ಬದ್ದವಾಗಿವೆ. ಮೈಸೂರು ಶೈಲಿಯ ಮಾಂಸಭರಿತ ದುಂಡು ಕ -ಪೋಲದ ಸುಂದರ ಚಿತ್ರಗಳನ್ನು ನಾವು ಕಾಣಬಹುದು.[೫೪]

ಮಂಡ್ಯ ಜಿಲ್ಲೆಯ ಮೇಲುಕೋಟೆಯ ಸಂಸ್ಕೃತ ಸಂಶೋಧನ (ಎ.ಎಸ್.ಆರ್) ಆಕಾಡೆಮಿ ಕೇಂದ್ರದಲ್ಲಿರುವ ಅಳಿಯಲಿಂಗರಾಜನ ಸೌಗಂದಿಕಾ - ಪರಿಣಯದ ಕಾಗದದ ಕಲ್ಲಚ್ಚು ಪ್ರತಿಗಳಲ್ಲೂ ಸಾಕಷ್ಟು ಚಿತ್ರಗಳಿದ್ದು ಒಂದು ಮಾತ್ರ ವರ್ಣಚಿತ್ರವಿದೆ. ಮೈಸೂರು ವಿಶ್ವವಿದ್ಯಾಲಯದ ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಯ ಹಸ್ತಪ್ರತಿ ಭಂಡಾರದಲ್ಲಿ ದಂತದ ಕುಶಲತೆಯಿಂದ ಅಲಂಕೃತವಾದ ಬಿಟೇ ಮರದ ಪೆಟ್ಟಿಗೆಯಲ್ಲಿ ಇರುವ ತಾಳಪ್ರತಿಗಳಲ್ಲಿ ಅಳಿಯ ಲಿಂಗರಾಜನ ಸೌಗಂಧಿಕಾ-ಪರಿಣಯ ವಿದ್ದು ಆದರಲ್ಲಿ ಯಾವುದೇ ಚಿತ್ರಗಳಿಲ್ಲ, ಆದರೆ ಮೇಲುಕೋಟೆಯಲ್ಲಿ ವಿದ್ವಾನ್ ಪ್ರೊ||ಲಕ್ಷ್ಮೀತಾತಾಚಾರ್ಯ ಮತ್ತು ಶ್ರೀ ಹನುಮಂತರಾವ್ ಅವರುಗಳ ಮೇಲ್ವಿಚಾರಣೆಯಲ್ಲಿ ಸಂರಕ್ಷಿತವಾಗಿರುವ ಸೌಗಂಧಿಕ-ಪರಿಣಯದ ಕಾಗದದ ಕಲ್ಲಚ್ಚಿನ ಪ್ರತಿಯಲ್ಲಿ ಸಾಕಷ್ಟು ರೇಖಾ ಚಿತ್ರಗಳಿವೆ. ಪಠ್ಯಕ್ಕೆ, ವಿಷಯಕ್ಕೆ ತಕ್ಕಂತೆ ಮೈಸೂರು ಶೈಲಿಯಲ್ಲಿ ಚಿತ್ರಿಸಿರುವ ಅನೇಕ ರೇಖಾ ಚಿತ್ರಗಳು ಈ ಗ್ರಂಥದಲ್ಲಿವೆ.

ಅನೇಕ ಹಸ್ತಪ್ರತಿಯ ಫಲಕಗಳ ಮೇಲೂ ಸುಂದರವಾದ ಚಿತ್ರಗಳಿವೆ. ಗದುಗಿನ

---

೫೪ Shivapriyananda : Marg, Vol. - V.

ತೊಂಟದಾರ್ಯಮಠದ ಹಸ್ತಪ್ರತಿಗಳ ಭಂಡಾರದಲ್ಲಿ ಧರ್ಮಸ್ಥಳದ ಮಂಜುನಾಥಸ್ವಾಮಿ ಹಸ್ತಪ್ರತಿ ಸಂಸ್ಕೃತಿ ಸಂಶೋಧನಾ ಭಂಡಾರ, ಬೆಳಗಾವಿ ಲಿಂಗಾಯಿತ ಸಂಶೋಧನಾ ಕೇಂದ್ರದ ಹಸ್ತಪ್ರತಿ ಭಂಡಾರದಲ್ಲಿ, ಮೇಲುಕೋಟೆಯ ಹಸ್ತಪ್ರತಿ ಭಂಡಾರದಲ್ಲಿರುವಂತೆ ಶ್ರವಣ ಬೆಳ್ಗೊಳದ ಶೃತಕವೇಲಿ ಹಸ್ತಪ್ರತಿ ಭಂಡಾರದಲ್ಲಿಯೂ ಭರತೇಶ ವೈಭವದ ಗ್ರಂಥಗಳ ಫಲಕದಮೇಲೆ ಯುದ್ಧರಂಗದಲ್ಲಿ ಕಪಿವೀರರ ಚಿತ್ರಗಳನ್ನು ನಕ್ಷಾಮಾದರಿಯ ಚಿತ್ರವನ್ನು ಫಲಕಗಳ ಎರಡೂ ಬದಿಯಲ್ಲಿ ಇರುವುದನ್ನು ಗಮನಿಸಬಹುದಾಗಿದೆ. ಈ ಫಲಕಗಳ ಮೇಲಿರುವ ಚಿತ್ರಗಳಿಗೆ ವರ್ಣಗಾರಿಕೆ ಪೂರ್ಣಗೊಂಡಿದ್ದರೂ ಆಕೃತಿಗಳಿಗೆ ಕಪ್ಪುವರ್ಣದ ರೇಖೆಗಳನ್ನು ಅದಕ್ಕೆ ಎಳೆಯದ ಕಾರಣ ಕೃತಿ ಅಪೂರ್ಣವಾದಂತೆ ಅನಿಸುತ್ತದೆ.

ಶ್ರೀ ತತ್ವನಿಧಿಯ ಹಸ್ತಪ್ರತಿ ಚಿತ್ರಗಳು : ಮತ್ತೊಂದು ಮನಮೋಹಕ ಮತ್ತು ಶಿಷ್ಟತೆ ಮತ್ತು ಶಾಸ್ತ್ರಬದ್ಧ ಹಸ್ತಪ್ರತಿಗಳಿಗೆ ಮಾದರಿಯಾಗಿರುವ ಕಾಗದದ ಮತ್ತೊಂದು ಹಸ್ತಪ್ರತಿ ಎಂದರೆ ಹಂಪಿ. ಕನ್ನಡ ವಿಶ್ವವಿದ್ಯಾಲಯವು ಪ್ರಕಾಶನಗೊಳಿಸಿರುವ ಮುಮ್ಮಡಿ ಕೃಷ್ಣರಾಜ ಒಡೆಯರ ಶ್ರೀ ತತ್ವ್ವನಿಧಿ, ಸಂಪುಟ - 01ರ. ಸಂಪಾದಕರಾಗಿರುವ -ಸಾಲಿಗ್ರಾಮ ಕೃಷ್ಣ ರಾಮಚಂದ್ರರಾವ್. ಚಿತ್ರ, ಕಾವ್ಯ,ಸಂಗೀತಶಾಸ್ತ್ರಕ್ಕೆ ಆಕಾರವಾಗಿರುವ ಈ ಗ್ರಂಥವನ್ನು ಕುರಿತು ಸಂಪಾದಕರೆ ಹೇಳುವಂತೆ ಸಂಪುಟದಲ್ಲಿ 1500 ಪುಟಗಳ ಮತ್ತು ಒಂದು ಸಾವಿರ ವರ್ಣಚಿತ್ರಗಳಿದ್ದು ಕರ್ನಾಟಕದ ಮೈಸೂರು ಚಿತ್ರಶೈಲಿಯ ಚಿತ್ರಕಲೆಗೆ ಅತ್ಯುತ್ತಮ ನಿದರ್ಶನವಾಗಿದೆ. ಈ ಗ್ರಂಥದ ಬಗೆಗೆ ಕೆಲವು ಟೀಕೆಗಳಿದ್ದರೂ ಇದು ಕರ್ನಾಟಕ ಚಿತ್ರಲೋಕಕ್ಕೆ ಸಂಪಾದಕರಾದ ಡಾ|| ಸಾಲಿಗ್ರಾಮ ಕೃಷ್ಣರಾಮಚಂದ್ರರಾವ್ ಅವರು ಮತ್ತು ಹಂಪಿಯ ಕನ್ನಡ ವಿಶ್ವವಿದ್ಯಾಲಯವು ಅಭಿನಂದನಾರ್ಹವಾಗಿದೆ. [೫೫]

ಶಕ್ತಿನಿಧಿ ಹಸ್ತಪ್ರತಿ ಚಿತ್ರಗಳು : ಇಂತಹುದೇ ಮತ್ತೊಂದು ಲೋಕೋತ್ತರ ಕೃತಿಗಳೆಂದರೆ ಮೈಸೂರು ವಿ.ವಿ.ಪ್ರಾಚ್ಯ ವಿದ್ಯಾ ಸಂಶೋಧನಾಲಯದ ಶ್ರೀ ಮುಮ್ಮಡಿ ಕೃಷ್ಣರಾಜ ಒಡೆಯರ ಶ್ರೀ ತತ್ವನಿಧಿ - ಶಕ್ತಿನಿಧಿ (ಭಾಗ-1) ಸಂಪಾದಕರು ಡಾ|| ಎಚ್.ಪಿ. ದೇವಕಿಯವರು ಇಂತಹುದೇ ಈ ವಿಶ್ವವಿದ್ಯಾಲಯದ ಮತ್ತೊಂದು ಮೌಲಿಕ ಗ್ರಂಥ ಮುಮ್ಮಡಿ ಕೃಷ್ಣರಾಜ ಒಡೆಯರ ರಚಿಸಿದ ಶ್ರೀ ತತ್ತ್ವ ನಿಧಿಯ - ವಿಷ್ಣುನಿಧಿ (ಭಾಗ-2) ಸಂಪಾದಕರು ಡಾ||ಕೆ.ವಿ.ರಮೇಶರು ಮೈಸೂರು ವಿಶ್ವವಿದ್ಯಾಲಯದ ಪ್ರಾಚ್ಯೆ ವಿದ್ಯಾ ಸಂಶೋಧನಾಲಯವು ಪ್ರಕಟಿಸಿರುವ ಕೃತಿಗಳಲ್ಲಿ ಕಾಣುವ ವಿಶೇಷ ಅಂಶಗಳನ್ನು ಸಂಪಾದಕರೇ ವಿವರಿಸಿಕೊಂಡಿದ್ದಾರೆ. ಶ್ರೀ ತತ್ವನಿಧಿಯಲ್ಲಿ ಎದ್ದು ಕಾಣುವ ಅಂಶವೆಂದರೇ ಅಲ್ಲಿ ಬರುವ ದೇವತೆಗಳಿಗೆ ಮಾಡಿರುವ ಆಕಾರ ಕಲ್ಪನೆ, ಗ್ರಹ ನಕ್ಷತ್ರಗಳು ಮಾತ್ರವಲ್ಲದೇ ಸಂವತ್ಸರ, ಋತು, ಮಾಸಗಳಿಗೂ ಸಹ ಆಕೃತಿಯನ್ನು ಸೂಚಿಸಿ ಅವುಗಳಿಗೆ ಪತ್ನಿಯರನ್ನು ಕಲ್ಪಿಸಿರುವುದು ಇಲ್ಲಿನ ವಿಶೇಷ. ಈ ಆಕಾರ ಚಿಂತನೆಯ ಬೇರುಗಳನ್ನು ವೇದಗಳಲ್ಲಿಯೇ ಕಾಣಬಹುದು ಎಂದು ಹೇಳಿರುವುದು ಅವರ

೫೫. ಡಾ. ಎಸ್.ಕೆ. ರಾಮಚಂದ್ರರಾವ್ : ಶ್ರೀ ತತ್ತ್ವನಿಧಿ, ಮುನ್ನುಡಿಯಲ್ಲಿ

ಕರ್ನಾಟಕದ ಹಸ್ತಪ್ರತಿ ಚಿತ್ರಕಲೆ- ಒಂದು ಅಧ್ಯಯನ

ಶ್ರೀ ತತ್ವನಿಧಿ - ವಿಷ್ಣು ನಿಧಿಯ ಚಿತ್ರಗಳು








ಕೃಪೆ:

ಡಾ||ಕೆ.ವಿ.ರಮೇಶ್,

ಪ್ರಾಚ್ಯ ವಿದ್ಯಾ ಸಂಶೋಧನಾಲಯ,ಮೈಸೂರು ವಿಶ್ವವಿದ್ಯಾಲಯ,ಮೈಸೂರು.

ಕರ್ನಾಟಕದ ಹಸ್ತಪ್ರತಿ ಚಿತ್ರಕಲೆ- ಒಂದು ಅಧ್ಯಯನ

ತತ್ತ್ವ ನಿಧಿ ಹಸ್ತಪ್ರತಿಗಳಲ್ಲಿ ರಾಗಮಾಲಾ ಚಿತ್ರಗಳು



ಕೃಪೆ:
ಮುಮ್ಮಡಿ ಕೃಷ್ಣ ರಾಜ ವಡೆಯರವರ ಶ್ರೀ ತತ್ತ್ವ ನಿಧಿ
ಸಂಪಾದಕರು ಡಾ॥ಸಾಲಿಗ್ರಾಮ ಕೃಷ್ಣರಾಮಚಂದ್ರ ರಾವ
ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ,ಹಂಪಿ.

ವ್ಯಾಸಂಗಕ್ಕೆ ಹಿಡಿದ ಕನ್ನಡಿಯಂತಿದೆ. ಚತ್ವಾರಿ ಶೃಂಗಾ : ಎಂಬ ಋಗ್ವೇದಾದ (4-58-3) ಮಂತ್ರದಲ್ಲಿ ಅಗ್ನಿಗೆ ನಾಲ್ಕು ಕೊಂಬು, ಮೂರು ಕಾಲು, ಎರಡು ತಲೆ ಎಂದೆಲ್ಲ ಕಲ್ಪಿಸಲಾಗಿದೆ. ನಾಟ್ಯಮಾಡುವ ನವ ತರುಣಿಗೆ ಹೋಲಿಸಲ್ಪಟ್ಟಿರುವ ಉಷಸ್ಸಿನ ಕಲ್ಪನೆಯಂತೂ ಸೌಂದರ್ಯದ ಪರಾಕಾಷ್ಠೆಯನ್ನು ಮುಟ್ಟಿರುವುದನ್ನು ಶ್ರೀ ತತ್ವನಿಧಿಯಲ್ಲಿ ಕಾಣಬಹುದು. ಶ್ರೀ ತತ್ವ ನಿಧಿಯಲ್ಲಿ ಬರುವ ಒಟ್ಟು ಆರುಸಾವಿರಕ್ಕೂ ಮೀರಿದ ಶ್ಲೋಕಗಳಲ್ಲಿ ವರ್ಣಿತರಾಗಿರುವ ದೇವತೆಗಳಿಗೆ ಅವರವರ ಬಣ್ಣ, ವಸ್ತ್ರ ಆಭರಣ, ಮುಖಗಳ ಸಂಖ್ಯೆ, ಕೈಗಳ ಸಂಖ್ಯೆ, ಧರಿಸಿರುವ ಆಯುಧಗಳು ಕುಳಿತಿರುವ ವಾಹನಗಳ ವರ್ಣನೆಗಳಿಗೆ ಅನುಸಾರವಾಗಿ ಸಾವಿರಕ್ಕೂ ಮೀರಿದ ಚಿತ್ರಗಳು ಬರೆಯಲ್ಪಟ್ಟಿವೆ. ಶ್ರೀ ತತ್ವನಿಧಿಯ ಪ್ರಾರಂಭದಲ್ಲಿಯೇ ಬರುವ ಚಾಮುಂಡಾಂಬಿಕೆಯ ವರ್ಣನೆಯನ್ನು ಗಮನಿಸಬಹುದು.[೫೬]

ದೇವತೆಗಳ ಹಸ್ತಪ್ರತಿ ಚಿತ್ರಗಳು : ಶ್ರೀ ರಾಮಕೃಷ್ಣಾಶ್ರಮ ಮಠದಿಂದ ಪ್ರಕಾಶನ ಗೊಂಡಿರುವ Hindu Gods and Godesses ಕೃತಿಯೊಳಗಿನ ವರ್ಣ ರಹಿತ ರೇಖಾ ಚಿತ್ರಗಳು ಶಿಷ್ಟ ಮತ್ತು ಸಂಪ್ರದಾಯ ಬದ್ಧವಾಗಿವೆ. 177 ಪುಟಗಳ ಈ ಕೃತಿಯಲ್ಲಿ ಅನೇಕ ಕೃತಿಗಳು ಅತ್ಯಂತಮನಮೋಹಕವಗಿವೆ. ಸ್ವಾಮಿ ಹರ್ಷಾನಂದರು ಈ ಕೃತಿಯ ಸಂಪಾದಕರಾಗಿದ್ದಾರೆ. ಕರ್ನಾಟಕ ಶಿಲ್ಪಕಲಾ ಆಕಾಡೆಮಿಯು ಕೆ.ಜ್ಞಾನೇಶ್ವರ ಮತ್ತು ಡಾ॥ ಆ.ಲ.ನರಸಿಂಹನ್ ಅವರ ಸಂಪಾದಕತ್ವದಲ್ಲಿ ಪ್ರಕಟಿಸಿರುವ ಶ್ರೀ ತಿಪ್ಪಾಜಪ್ಪನವರ ರೇಖಾ ಚಿತ್ರಗಳು ಕೃತಿಯೊಳಗಿನ ಚಿತ್ರಗಳು ಶಿಷ್ಟ ಬದ್ಧವಾಗಿವೆ. ಕೆ.ಜ್ಞಾನೇಶ್ವರರ ಮನೆಯೊಳಗೆ ಸಂಗ್ರಹಿಸಿರುವ ಮೂಲ ಕ್ಷೇತ್ರಕಾರ್ಯಕ್ಕೆ ಹೋದಾಗ ಚಿತ್ರಗಳನ್ನು ನೋಡಿರುವೆ. ಶಾಸ್ತ್ರ ಇತಿಹಾಸ ಸಂಪ್ರದಾಯಗಳನ್ನು ಮೈಗೂಡಿಸಿಕೊಂಡಿರುವ ಈ ಕೃತಿಗಳು ತುಂಬಾ ಮೌಲಿಕವಾಗಿವೆ.

ಗದುಗಿನ ಜಗದ್ಗುರು ತೋಂಟದಾರ್ಯ ಸಂಸ್ಥಾನ ಮಠ ಹಸ್ತಪ್ರತಿ ಭಂಡಾರದಲ್ಲಿರುವ ಚಿತ್ರಗಳು. ಶ್ರೀ ಧರ್ಮಸ್ಥಳ ಶ್ರೀ ಮಂಜುನಾಥೇಶ್ವರ ಹಸ್ತಪ್ರತಿ ಭಂಡಾರದಲ್ಲಿರುವ ತಾಳೆಗರಿಯೊಳಗಿನ ಕಿರಾತಾರ್ಜುನರ ಕಾಳಗ ಮತ್ತು ಉದ್ದರಣೆಯೊಳಗಿರುವ ಬಂಗಾರದ ರೇಖುವಿನಿಂದ ಬರೆದಿರುವ ಬಸವೂದ್ದರಣೆಯ ಚಿತ್ರವು ಅತ್ಯಂತ ಶಿಸ್ತು, ಶಿಷ್ಠ, ಸಂಪ್ರದಾಯ ಬದ್ಧವಾಗಿದೆ. ಬೆಳಗಾವಿಯ ನಾಗನೂರು ರುದ್ರಾಕ್ಷಿ ಮಠದ ಲಿಂಗಾಯಿತ ಅಭಿವೃದ್ಧಿ ಸಂಶೋಧನಾಲಯದ ಹಸ್ತಪ್ರತಿ ಭಂಡಾರದೊಳಗಿರುವ ಉದ್ದರಣೆಯೊಳಗಿನ ಚಿತ್ರಗಳು, ಮಹೋದ್ದರಾಣದ ಚಿತ್ರಗಳು ತಾಳೆಗರಿಯೊಳಗಿನ ಚಿತ್ರಗಳು ಶಿಷ್ಟಕ್ಕೆ ಮಾದರಿಯಾಗಿವೆ.

ಅಸಂಖ್ಯಾತ ಕರ್ನಾಟಕದ ಹಸ್ತಪ್ರತಿಗಳ ತಿಂಥಿಣಿಯಲ್ಲಿ ಚಿತ್ರ ಉಲ್ಲೇಖಿತ ಹಸ್ತಪ್ರತಿಗಳೂ ಅಸಂಖ್ಯಾತವಾಗಿವೆ. ಸಂಗ್ರಹಿತ ಮತ್ತು ಸಂಗ್ರಹದೊಳಗಿನ ಹಸ್ತಪ್ರತಿಗಳ ಲೆಕ್ಕವೇ ದೊರೆಯದ ಕಾರಣ ಕರ್ನಾಟದಲ್ಲಿರುವ ಹಸ್ತಪ್ರತಿಗಳ ಅಂದಾಜು ಲೆಕ್ಕ ಕೂಡಾ ನಮಗೆ ದೊರೆಯಲಾರದಾಗಿದೆ. ಈ ವರೆಗೂ ಅನೇಕ ಮಠಗಳಲ್ಲಿ ಹಸ್ತಪ್ರತಿ ಸೂಚಿ ಕೂಡಾ ಸಿದ್ಧಗೊಂಡಿಲ್ಲ.

---

೫೬. ಡಾ. ಹೆಚ್.ಪಿ. ದೇವಕಿ : ಶ್ರೀ ತತ್ತ್ವನಿಧಿ - ಶಕ್ತಿನಿಧಿ, ಮೈಸೂರು ವಿಶ್ವವಿದ್ಯಾಲಯ.

ರೇಖೆಗಳಲ್ಲಿ ಹಿಂದು ದೇವತೆಗಳು









Courtesy :
Swami Harshananda, Sri Ramakrishna Matt
Mylapur,Madras.600 004

ರೇಖೆಗಳಲ್ಲಿ ಹಿಂದು ದೇವತೆಗಳು









Courtesy :
Swami Harshananda, Sri Ramakrishna Matt
Mylapur,Madras.600 004

ಕಲ್ಬುರ್ಗಿ ವಿಶ್ವವಿದ್ಯಾಲಯದಲ್ಲಿ ಈ ವರೆಗೂ ಹಸ್ತಪ್ರತಿ ಸೂಚಿಯೇ ಸಿದ್ಧವಾಗಿಲ್ಲ. ಧಾರವಾಡ ವಿಶ್ವವಿದ್ಯಾಲಯದಲ್ಲಿ ಪ್ರಕಟಿತ ಹಸ್ತಪ್ರತಿಯ ಸೂಚಿಗಳೇ ದೊರೆಯುವುದಿಲ್ಲ. ಹೀಗಾಗಿ ಹಸ್ತಪ್ರತಿಗಳ ತುರ್ತು ಸಂರಕ್ಷಣೆ, ಸಂಸ್ಕರಣೆಯಷ್ಟೆ ಸಂಗ್ರಹ ಮತ್ತು ಸೂಚಿ ಕಾರ್ಯವೂ ಬೇಗ ಸಿದ್ಧಗೊಳ್ಳಬೇಕಾಗಿದೆ. ಅನೇಕ ಹಸ್ತಪ್ರತಿ ವಿದ್ವಾಂಸರು ವಯಕ್ತಿಕವಾಗಿಯೂ ಕೆಲವು ಹಸ್ತಪ್ರತಿಗಳನ್ನು ಸಂಗ್ರಹಿಸಿಕೊಂಡಿದ್ದಾರೆ. ಈ ರೀತಿ ಹಸ್ತಪ್ರತಿಯ ಕುರಿತು ಜನಸಾಮಾನ್ಯರಿಗೆ ಸಾಕಷ್ಟು ಜಾಗ್ರತೆಯಾದರೂ ಕಾಯ್ದಿಡುವ, ಸಂಸ್ಕರಿಸುವ ಕಾರ್ಯ ತುಂಬಾ ದೂರದಲ್ಲಿಯೇ ಉಳಿದುಕೊಂಡಿದೆ. ಈ ಪ್ರಥಮ ಕಾರ್ಯವು ಪ್ರಾಥಾಮಿಕ ಹಂತದಲ್ಲಿಯೇ ನಡಿಯಬೇಕಾಗಿರುವುದು ತುರ್ತಿನ ಕಾರ್ಯವಾಗಿದೆ.

ಸಾಹಿತ್ಯಿಕ ವಲಯದಿಂದ ಹಸ್ತಪ್ರತಿಗಳನ್ನು ಗುರುತಿಸುವ ಕಾರ್ಯವು ವ್ಯಾಪಾಕವಾಗಿ ನಡೆದಂತೆ ಸಚಿತ್ರ ಹಸ್ತಪ್ರತಿಗಳ ಅಧ್ಯಯನ, ಸೂಚಿಕರಣದ ಕಾರ್ಯ ನಡೆಯಬೇಕಾಗಿದೆ. ಚಿತ್ರಗಳಿರುವ ಹಸ್ತಪ್ರತಿಗಳ ವಿವರ, ಹೆಸರೂ ಹೀಗಿಗ ಸಾಕಷ್ಟು ಕೇಳಿ ಬರುತ್ತಿರುವುದು ಅಲ್ಲಲ್ಲಿ ಹಸ್ತಪ್ರತಿಯೊಳಗಿನ ಜೈನ, ವೈದಿಕ, ವೀರಶೈವ ಮತ್ತು ಇತರ ಹಸ್ತ ಪ್ರತಿಗಳ ಬಗೆಗೆ ಅಲ್ಲಲ್ಲಿ ಪ್ರಕಾಶನಗೊಳ್ಳುತ್ತಿರುವ ಮಾಸಿಕ, ಸಪ್ತಾಹಿಕ ಮತ್ತು ರವಿವಾರದ ವಿಶೇಷ ಅಂಕಣದಲ್ಲಿ ಪ್ರಕಟಗೊಳ್ಳುವಂತೆ ಡಾ.ಬಿ.ಕೆ.ಹಿರೇಮಠರಂತವರ ಅಭಿನಂದನಾ ಗ್ರಂಥ 'ನಿಜದ ನೆಲೆ'ಯಲ್ಲಿ ಸಮೃದ್ಧವಾಗಿ ಹಸ್ತಪ್ರತಿಗಳ ವಿಷಯ ಪ್ರಕಟಗೊಳ್ಳುತ್ತಿರುವುದು ಸಂತಸದ ವಿಷಯವಾಗಿದೆ.

5. ಚಿತ್ರಕಲಾ ವಿನ್ಯಾಸವನ್ನು ಹೊಂದಿದ ಮಹ್ಮದೀಯ ಧರ್ಮದ ಧಾರ್ಮಿಕ, ಹಸ್ತಪ್ರತಿಗಳು :

ಭಾರತೀಯ ಕಲೆ, ಸಾಹಿತ್ಯ, ಸಂಗೀತಗಳ ಚರಿತ್ರೆಯಲ್ಲಿ ಮೊಹಮ್ಮದೀಯರ ಪ್ರಭಾವ ಅಧಿಕವಾದದ್ದು. ಇತಿಹಾಸದ ಕಾಲಕೋಶಗಳಲ್ಲಿ ಮೊಹಮ್ಮದೀಯರನ್ನು ಅನ್ಯದೇಶಿಗರು, ವಲಸಿಗರು, ಆಕ್ರಮಣಕಾರರು ಎಂದು ಚರಿತ್ರೆಯ ಪುಟಗಳಲ್ಲಿ ದಾಖಲಾತಿಗಳಿದ್ದರೂ. ಘನವಂತರಾದ ಅನೇಕ ಮೊಹಮ್ಮದೀಯ ಅರಸರು, ಭಾರತದಲ್ಲಿ ನೆಲೆಸಿ, ಭಾರತೀಯತೆಯನ್ನು ಮೆರೆದಿದ್ದಾರೆ. ಘನವಂತರಾದ ಇಲ್ತುಮಿಷ್, ಮೊಹ್ಮದ ತಘಲತ್, ಬಾಬರ್, ಅಕ್ಬರ್, ಷಹಜಹಾನ್, ಜಹಂಗೀರರು, ಕೇವಲ ಪ್ರಾದೇಶಿಕವಾಗಿ ಭಾರತದೇಶಕ್ಕೊಳಪಡದೆ ವಿಶ್ವವ್ಯಾಪಕತೆಯನ್ನು ಹೊಂದಿದಂತಹ ಸಾಮ್ರಾಟರಾಗಿದ್ದಾರೆ. ಅವರು ಕೊಟ್ಟ ಕಲಾ ಪ್ರೋತ್ಸಾಹದಿಂದ ಇಂದು ಭಾರತ ಚಿತ್ರ, ಶಿಲ್ಪ, ವಾಸ್ತು ಶಿಲ್ಪ ಮತ್ತು ಸಂಗೀತ ಜಗತ್ತಿನಲ್ಲಿ ಅಭಿಮಾನ ಪಡುವಷ್ಟು ಹೆಮ್ಮೆಯಿಂದ ಬೀಗುವಷ್ಟು ಎತ್ತರಕ್ಕೆ ಬೆಳೆದಿದೆ. ಹಾಗಾಗಿ ಮೊಹಮ್ಮದೀಯರು ಪ್ರಥಮದಲ್ಲಿ ಭಾರತೀಯರೇ ಆಗಿದ್ದಾರೆ. ಅವರ ಧಾರ್ಮಿಕ ಹಿನ್ನೆಲೆಯೊಂದಿಗೆ ಭಾರತೀಯತೆಯನ್ನು, ಕಲೆಯನ್ನೂ ಬೆಳೆಸಿದ್ದಾರೆ. ಹೀಗಾಗಿ ಒಟ್ಟು ಭಾರತದಲ್ಲಿ ಜೈನ ಕಲೆ, ಬೌದ್ಧ ಕಲೆ ಮತ್ತು ಮೊಹಮ್ಮದೀಯರ ಕಲೆಗಳೆಂದು ವರ್ಗೀಕರಣ ಮಾಡಿಕೊಳ್ಳಬಹುದು.

ಪರ್ಷಿಯಾ ಮೂಲದ ಮೊಹಮ್ಮದೀಯ ಕಲೆ : ಏಷಿಯಾ ಖಂಡದಲ್ಲಿ ಕ್ರಿಸ್ತಪೂರ್ವ 550 ರ ಸುಮಾರಿಗೆ ಪ್ರಸಿದ್ಧವಾದದು ಪರ್ಷಿಯಾ ದೇಶ. ಸೈರಸ್, ಡೇರಿಯಸ್ ಮತ್ತು ಜರ್ಕ್ಸೀಸ್‌ರ ಕಾಲದಲ್ಲಿ ಪರ್ಷಿಯಾ ಪ್ರಬಲವಾಗಿತ್ತು. ಗ್ರೀಕ್‌ವೀರ ಅಲೆಕ್ಸಾಂಡರ್ ದಾಳಿ ಮಾಡಿ ಈ ಪ್ರದೇಶವನ್ನು

ವಶಪಡಿಸಿಕೊಳ್ಳುವಷ್ಟು ಸಂಪದ್ಭರಿತವಾಗಿತ್ತು. ಕ್ರಿ.ಶ. 7ನೇ ಶತಮಾನದಲ್ಲಿ ಅರಬ್ಬರು ಪರ್ಷಿಯಾವನ್ನು ವಶಪಡಿಸಿಕೊಂಡಂತೆ 9ನೇ ಶತಮಾನದಲ್ಲಿ ತುರ್ಕಿಯವರು ದಾಳಿಮಾಡಿ 14ನೇ ಶತಮಾನದವರೆಗೂ ಈ ಪ್ರದೇಶವನ್ನು ತಮ್ಮ ವಶದಲ್ಲಿಟ್ಟುಕೊಂಡರು. ದಂಗೆ, ದಾಳಿಗಳಿಂದ ವಿಚಲಿತರಾಗದ ಪರ್ಷಿಯಾ ಜನರು ತಮ್ಮ ಕಲೆಯನ್ನು ಕಾಯ್ದುಕೊಂಡು ಬಂದರು. ಸುಂದರವಾದ ಮಸೀದಿಗಳನ್ನು, ಬಣ್ಣ ಬಣ್ಣದ ಕಲ್ಲು ಹೊಂದಿಸಿ ಚಿತ್ತಾರಗಳನ್ನು , ಅಮೃತ ಶಿಲೆಯ ಕೆತ್ತನೆ ಗೋಡೆಯ ವರ್ಣಾಲಂಕಾರ, ಪ್ರಾರಂಭವಾದಂತೆ ಇವರಲ್ಲಿ ಬುರಡೆಯಾಕಾರದ ಗುಮ್ಮಟ, ಕಮಾನು ಗೋಪುರ, ಲಿಪಿ ರೇಖಾಚಿತ್ರ, ವಾಸ್ತು ಶಿಲ್ಪಗಳು ಮತ್ತು ಜಗತ್ಪ್ರಸಿದ್ಧ ರೇಷ್ಮೆ ಹಾಗೂ ರತ್ನ ಗಂಬಳಿಗಳು ಜಗತ್ತನ್ನೇ ಆಕರ್ಷಿಸುವಷ್ಟು ಪ್ರಸಿದ್ಧವಾಗಿದ್ದವು.

ಪರ್ಷಿಯಾದ ಚಿತ್ರಕಲೆಯು ತುಂಬಾ ಪ್ರಸಿದ್ಧವಾಗಿತ್ತು ತೈಮೂರನ ಸಂತತಿಯ ಕೊನೆಯ ಷಹಾನ ಆಸ್ಥಾನದಲ್ಲಿ ಬಹ್‌ಜ್ರಾ ಎಂಬ ಪ್ರಸಿದ್ಧ ಚಿತ್ರಕಾರನಿದ್ದ ಅವನು ಚಿತ್ರಗಳಿಗೆ ಅನೇಕ ಜನಪ್ರಿಯ ವಸ್ತುಗಳನ್ನು ಆಯ್ದುಕೊಳ್ಳುತ್ತಿದ್ದ. ಪ್ರಸಿದ್ಧ ಕಾವ್ಯಗಳಿಂದ ಮನುಷ್ಯನ ಮನಸ್ಸಿನ ರಾಗ, ಭಾವಗಳ ನಿರೂಪಣೆಯನ್ನೂ, ಬೇಟೆಯ ದೃಶ್ಯವನ್ನು, ಪ್ರಕೃತಿ ಸೌಂದರ್ಯದ ದೃಶ್ಯಗಳನ್ನು ಅವನು ತನ್ನ ಚಿತ್ರಗಳಲ್ಲಿ ಸಂಯೋಜಿಸುತ್ತಿದ್ದ. ಜುಳು ಜುಳು ಹರಿಯುವ ಹೊನಲುಗಳು, ನೀರು ಚಿಮ್ಮುವ ಕಾರಂಜಿಗಳು, ಹಣ್ಣು ತುಂಬಿದ ಮರಗಳು, ಗಿಡದ ನೆರಳಿನಲ್ಲಿ ನೆರೆದ ಸುಂದರ ಯುವಕ ಯುವತಿಯರ ಚಿತ್ರಗಳನ್ನು ರಚಿಸುವುದರಲ್ಲಿ ಆತ ನಿಪುಣನಾಗಿದ್ದ. [೫೭]

ಈ ರೀತಿ ಸಿದ್ಧಗೊಂಡ ಪರ್ಷಿಯಾದ ಕಲೆ ಹಲವಾರು ಮಾರ್ಗಗಳ ಮುಖಾಂತರ ಭಾರತವನ್ನು ಪ್ರವೇಶಿಸಿತು. ರಾಜಕೀಯ ಆಡಳಿತದ ಬದಲಾವಣೆಯಲ್ಲಿಯೂ ಕ್ರಿ.ಶ. 1526 ವೇಳೆಗೆ ಬಾಬರ್ ದೊರೆಯು, ಈ ಕಲೆಯನ್ನು ಭಾರತದಲ್ಲಿ ಮೊಗಲ್ ಕಲೆಯನ್ನಾಗಿ ಪರಿಚಯಿಸಿದ 1526 ರಿಂದ 1707 ರವರೆಗೂ ಸುಮಾರು 280 ವರ್ಷಗಳ ಕಾಲ, 3 ಶತಮಾನಗಳ ಕಾಲ ಭಾರತದಲ್ಲಿ ಸಮೃದ್ಧವಾಗಿ ಬೆಳೆಯಿತು. ಬಾಬರನ ಸಂತತಿಯವರಾದ ಮೊಗಲರ ಆಳ್ವಿಕೆಯ ಕಾಲದಲ್ಲಿ ಭಾರತದಲ್ಲಿ ರೂಪಗೊಂಡ ಚಿತ್ರಕಲಾ ಸಂಪ್ರದಾಯವನ್ನು ಮೊಗಲ ಚಿತ್ರಕಲೆಯೆಂದು ಕರೆಯುತ್ತಾರೆ. ಇದರಲ್ಲಿ ಹಿಂದೂ, ಮುಸ್ಲಿಂ ಧರ್ಮ ಮತ್ತು ದೇಶಗಳ ಪ್ರಭಾವಗಳಿರುವುದನ್ನು ನಾವು ಗಮನಿಸಬಹುದು. ದೊರೆ ಬಾಬರನ ಸಂತತಿಯಲ್ಲಿ ಬರುವ ಸಾಮ್ರಾಟ ಅಕ್ಬರನ ಕಾಲವನ್ನು ಭಾರತದ ಕಲೆ, ಸಾಹಿತ್ಯಗಳ, ಸುವರ್ಣಯುಗವೆಂದು ಕರೆಯುತ್ತೇವೆ. ಅಕ್ಬರ್‌ದೊರೆಯು ಅಧಿಕಾರಕ್ಕೆ ಬಂದ ಬಳಿಕ ಚಿತ್ರಕಲೆ ಸಮೃದ್ಧವಾಗಿ ಬೆಳೆಯಹತ್ತಿತ್ತು. ಆತನು ಪರ್ಷಿಯಾ ಮತ್ತು ಭಾರತೀಯ ಕಲಾಸಂಪ್ರದಾಯಗಳ ಪರಸ್ಪರ ಸಮ್ಮಿಳನವನ್ನು ಏರ್ಪಡಿಸಿದ. ಪರ್ಷಿಯಾದ ಕಲಾವಿದರು, ಭಾರತೀಯ ಕಲಾವಿದರೂ ಒಂದಾಗಿ ದುಡಿದರು. ಫಾರೂಕ್ ಬೇಗ್, ದಶವಂತ ಬಾಸ್ವನ್ ನಂತಹ ಅನೇಕ ಚಿತ್ರಕಲಾವಿದರೂ ಆಸ್ಥಾನದಲ್ಲಿದ್ದರು. ಅವರು ಬಾಬರೀ ನಾಮಾ, ತಾರೀಖ್-ಐ-ಖಾನ್‌ದಾನ್ -ಇ-ತೈಮೂರಿಯಾ,

---

೫೭. ನಿರಂಜನ ಸಂ. : ಜ್ಞಾನಗಂಗೋತ್ರಿ, ಸಂಪುಟ -೫, ಪುಟ-೩೫೨.

ಅಕ್ಬರ್‌ನಾಮಾದಂತಹ ಚಾರಿತ್ರಿಕ, ಕಲಾತ್ಮಕ ಗ್ರಂಥಗಳನ್ನು ರಚಿಸಿದಂತೆ ದೊರೆಯ ಪ್ರೋತ್ಸಾಹದೊಂದಿಗೆ, ರಾಮಾಯಣ, ಮಹಾಭಾರತ ಮತ್ತು ಹರಿವಂಶದಂತಹ ಭಾರತೀಯ ಧಾರ್ಮಿಕ ಕೃತಿಗಳನ್ನು ಪರ್ಷಿಯಾಕ್ಕೆ ಅನುವಾದ ಗೊಳಿಸುವುದರೊಂದಿಗೆ ಕಾವ್ಯಗಳಲ್ಲಿಯ ನಾಯಕರ, ಚರಿತ್ರೆಗಳ ವೀರರ, ಆಡಳಿತಗಾರರ ಚಿತ್ರಗಳನ್ನು ಆ ಕಾವ್ಯಗಳಲ್ಲಿ ವೈಭವಯುತವಾಗಿ. ಚಿತ್ರಿಸಲಾಗಿತ್ತು.

ಅಕ್ಬರ ದೊರೆಯ ಮಗನಾದ ಜಹಾಂಗೀರ ಕೂಡ ಚಿತ್ರಕಲಾಪ್ರೇಮಿಯಾಗಿದ್ದ. ತಾನು ರಾಜ್ಯಾಧಿಕಾರವನ್ನು ವಹಿಸಿಕೊಳ್ಳುವುದಕ್ಕೆ ಮೊದಲೇ ಹಲವಾರು ಜನ ಚಿತ್ರಕಾರರಿಗೆ ಆಶ್ರಯವನ್ನು ಕೊಟ್ಟಿದ್ದ. ಈತನ ಕಾಲದಲ್ಲಿ ರಚಿತವಾದ ಚಿತ್ರಗಳನ್ನು ನೋಡಿದರೆ ಈ ಅವಧಿ ಯಲ್ಲಿಯೂ ಸಹಜ ದೃಶ್ಯರಚನೆಗಳ ಕಡೆ ದೃಷ್ಟಿ ಹರಿಯುವಂತೆ ಕಂಡು ಬರುತ್ತದೆ. ಆಸ್ಥಾನದ ಅನೇಕ ದೃಶ್ಯಗಳನ್ನು ಈ ಸಮಯದಲ್ಲಿ ಚಿತ್ರಿಸಲಾಯಿತು. ಚಿತ್ರಕಲಾವಿದರು ಆಸ್ಥಾನದ ಯಥಾವತ್ತಚಿತ್ರಣದಲ್ಲಿ ಆಸಕ್ತರಾಗಿದ್ದರು. ಇದರೊಂದಿಗೆ ಪ್ರಾಣಿ ಪಕ್ಷಿಗಳ ಚಿತ್ರಗಳನ್ನು ವರ್ಣಮಯ ಚಿತ್ರಗಳೊಂದಿಗೆ ರಚಿಸಲು ಯುವರಾಜ ಜಹಾಂಗೀರನು ಸಾಕಷ್ಟು ಪ್ರೋತ್ಸಾಹ ನೀಡಿದನು. ಈತನೊಂದಿಗಿದ್ದ ಖ್ಯಾತ ಯುವ ಕಲಾವಿದನೆಂದರೆ ಉಸ್ತಾದ್ ಮನ್‌ಸೂರ್.[೫೮]

ಜಹಾಂಗೀರ್ ದೊರೆಯನ್ನು ಕುರಿತು ಭಾರತದ ಪ್ರಖ್ಯಾತ ಕಲಾವಿಮರ್ಶಕರಾಗಿರುವ ಇ.ಬಿ.ಹ್ಯಾವೆಲ್‌ರು ಈ ರೀತಿ ವಿವರಿಸುತ್ತಾರೆ. ಜಹಂಗೀರ ದೊರೆಯು ಸಾಮ್ರಟ್ ಅಕ್ಬರರ ಬಹುಪ್ರೀತಿಯ ಮಗ (Intemperate) ತಂದೆಯದೇ ಮಹಾತ್ವಾಕಾಂಕ್ಷೆಯ ಗುಣ, ಚರಿತ್ರೆ ಮತ್ತು ವಂಶಾವಳಿಯನ್ನು ಹೊಂದಿರುವ ಈತ ಚಿತ್ರಕಲೆಗೆ ತನ್ನನ್ನು ತಾನೇ ಅರ್ಪಿಸಿಕೊಂಡಿದ್ದ ಕಲಾಪೋಷಕನಾಗಿದ್ದ ಯುವರಾಜಚಿತ್ರಕಲಾವಿದರನ್ನು ತನ್ನ ಗೆಳೆಯರನ್ನಾಗಿ ಮಾಡಿಕೊಂಡಿದ್ದ ಅವರ ಮೇಲೆ ಪ್ರೇಮದ ಮಳೆಯನ್ನೇ ಸುರಿಸುತ್ತಿದ್ದ ಅಕ್ಬರ ದೊರೆಯ ಭಾವಚಿತ್ರದ ನಿರ್ಮಾಣಕನಾಗಿದ್ದ ಅಬ್ದುಲ್ ಮೊಹಮ್ಮದನ ಮಗ ಶರೀಫನು ಕೂಡ ಯುವಕಲಾವಿದನಾಗಿದ್ದ, ಯುವ ಕಲಾವಿದ್ದ ಶರೀಫನ ಕಲೆಯನ್ನು ಮೆಚ್ಚಿಕೊಂಡಿದ್ದ ಜಹಾಂಗೀರ ದೊರೆ ತನ್ನ ಯುವರಾಜ ಪಟ್ಟಾಭಿಷೇಕದಲ್ಲಿ ಆತನಿಗೆ ಖಾನ್ ಎಂಬ ಬಿರುದನ್ನು ಇತ್ತು ಸನ್ಮಾನಿಸಿದರು. ಸ್ವತಃ ಜಹಾಂಗೀರನೇ ಈ ಕಲೆಯ ಬಗ್ಗೆ ಕಲಾವಿದರ ಬಗೆಗೆ ಹೇಳಿದ ಮಾತುಗಳು ಈ ರೀತಿಯಾಗಿವೆ.

ನನಗೆ ಚಿತ್ರಕಲೆಯೆಂದರೆ ಅಚ್ಚುಮೆಚ್ಚು ನನಗೆ ಚಿತ್ರವೀಕ್ಷಣೆ ವಿಷಯದಲ್ಲಿ ಬಹುದೊಡ್ಡ ಪ್ರಾವಿಣ್ಯತೆ ಇದೆ. ಕಲಾಕೃತಿಯನ್ನು ನೋಡುವುದರಿಂದಲೇ ಆ ಕಲಾಕೃತಿಯ ಕಲಾವಿದರ ಹೆಸರನ್ನು ಹೇಳಬಲ್ಲೆ ಒಂದೇ ವ್ಯಕ್ತಿಯ ಚಿತ್ರವನ್ನು ಹಲವು ಕಲಾವಿದರು ಬರೆದರೂ ಕೂಡ ನಾನು ಖಚಿತವಾಗಿ ಆಯಾ ಕಲಾಕೃತಿಗಳ ಮುಖಾಂತರ ಆಯಾ ಕಲಾವಿದರನ್ನು ಗುರುತಿಸಲಬಲ್ಲೆ ಅಲ್ಲದೆ ಒಂದೇ ವ್ಯಕ್ತಿಯ ಭಾವಚಿತ್ರವನ್ನು ಹಲವು ಕಲಾವಿದರು ಕೂಡಿ ಮಾಡಿದರೂ ಆ ಚಿತ್ರದ ಹುಬ್ಬು

೫೮. E.B. HAVELL : Indian Sculpture and Paintings, Pg. -203.

ಎವೆಗಳ ಕೇಶಗಳನ್ನು ಯಾರು ಮಾಡಿದ್ದಾರೆಂದು ಹೇಳಬಲ್ಲೆ.[೫೯] ಎಂದು ಹೇಳುವ ಜಹಾಂಗೀರ ದೊರೆಯು ತನ್ನ ಕಲಾವಿದರನ್ನು ಗೋವಾ, ಹಿಮಾಲಯ ಭಾರತದಾದ್ಯಂತ ಕಳುಹಿಸಿ ವಿವಿಧ ಪ್ರಾಣಿ ಪಕ್ಷಿಗಳ ಚಿತ್ರಗಳನ್ನು ಸಂಗ್ರಹಿಸಿದ್ದಾನೆ. ಆ ಕಲಾಕೃತಿಗಳು ನಾವು ಕಳೆದುಕೊಂಡು ಬಹುದೊಡ್ಡ ಕಲಾಕೃತಿಗಳಾಗಿರುವಂತೆ ಅವೆಲ್ಲವೂ ಕಳೆದುಕೊಂಡ ಪ್ರಾಣಿ, ಪಕ್ಷಿಗಳ ಅವಶೇಷಗಳ ದಾಖಲಾತಿಯಾಗಿ ಉಳಿದುಕೊಂಡಿವೆ.

ಅಕ್ಬರದೊರೆ ಆಸ್ಥಾನದಲ್ಲಿ ಆದ್ವಿತೀಯರಾದ ಹದಿಮೂರು ಜನ ಕಲಾವಿದರು ಇದ್ದರೂ ಎಂದು ಹಾವೆಲ್ ಹೇಳುತ್ತಾನೆ. ಅವರುಗಳ ಹೆಸರುಗಳು ಈ ರೀತಿಯಾಗಿವೆ. ಕೇಶು, ಝಾಲ್, ಮುಕುಂದ್, ಮುಷುಕೀನ್, ಫಾರೂಕ್, ಕಲ್ಮಾಕ, ಮಧು, ಜಗನ್, ಮೊಹೇಶ್, ಖೇಮಕರನ್, ತಾರಾ, ಸನ್ವಾಲಾಹ, ಹರಿಬನ್, ರಾಮ್, ಇವರೊಂದಿಗೆ ತಬ್ರೀಜದ ಮೀರ ಸೈಯದ್ ಅಲಿ, ಅಮೀರ ಹಮ್ಜಾ, ಖಾಜಾ, ಅಮ್ದುಖಮ್ಮದ್, ದಶವಂತ, ಬಾಸವನ್ನರಂತಹ ದಿಗ್ಗಜ ಕಲಾವಿದರು, ಮೊಗಲ ಸಭಾಭವನದ ಕಲಾವಿದರಾಗಿದ್ದರಂತೆ,

ಮೊಘಲ್ ಕಲೆಯ ಬಹುಮುಖ್ಯವಾದ ಲಕ್ಷಣಗಳೆಂದರೆ, ಅಂಚುಗಳ ಅಲಂಕಾರ, ಅರಬ್ಬ ಮಾದರಿಯ ಚಿತ್ರಗಳೊಂದಿಗೆ ಬೇಟೆಯ ದೃಶ್ಯ, ವಿವಿಧ ಹಕ್ಕಿ, ಪಕ್ಷಿಗಳು, ಪ್ರಾಣಿಗಳು ವನಭೋಜನ, ವಿಹಾರಗಳು, ನೃತ್ಯ, ಸಂಗೀತದ ಕೂಟಗಳು. ವಿವಿಧ ಕಾರ್ಯಚಟುವಟಿಕೆಗಳಲ್ಲಿ ತಲ್ಲೀನರಾಗಿರುವ ಜನರು, ಮೊಘಲ್ ಕಲೆಯ ವಿಷಯಗಳಾಗಿದ್ದರು. ಯುರೋಪಿನ ಚಿತ್ರಗಳಿಂದ ಪ್ರಭಾವಕ್ಕೊಳಗಾಗಿವೆ. ಯೂರೋಪಿನ ಚಿತ್ರಗಳಿಗೆ ಆಕರ್ಷಿತನಾಗಿದ್ದ ಜಹಾಂಗೀರ ದೊರೆಯು ಭಾರತೀಯ ಚಿತ್ರಗಳಲ್ಲಿ ವಿದೇಶಿಯ ತಂತ್ರಗಳನ್ನು, ಭೂದೃಶ್ಯಗಳನ್ನು ವ್ಯಕ್ತಿ ಚಿತ್ರಗಳನ್ನು , ಯಥಾದರ್ಶನವನ್ನು ಬಳಸಿಕೊಳ್ಳಲಾಗಿದೆ. ಸಭಾ ಸದರ, ಸಭಾ ಭವನ ಚಿತ್ರಗಳು, ವ್ಯಕ್ತಿ ಚಿತ್ರಗಳು, ವಿದೇಶಿ ತಂತ್ರಗಳ ಮೂಲಕ ಮೊಘಲ್ ಕಲೆಯನ್ನು ಪ್ರವೇಶಿಸಿರುವಂತೆ ಅಂತಹ ಕ್ರಮಗಳನ್ನು ಈ ಶೈಲಿ ಮೈಗೂಡಿಸಿಕೊಂಡಿದೆ.[೬೦]

ಔರಂಗಜೇಬನ ಆಳ್ವಿಕೆಯ ನಂತರ ಮೊಘಲ ಆಳ್ವಿಕೆ ಅವನತಿಯ ಹಾದಿಯನ್ನು ಹಿಡಿದಂತೆ ಮೊಘಲ ಕಲೆಯು ರಾಜಾಶ್ರಯದ ಪ್ರೋತ್ಸಾಹದಿಂದ ದೂರ ಉಳಿಯಿತು. 1739 ರಲ್ಲಿ ನಾದಿರ್‌ಷಾಹ್ ದೆಹಲಿಯ ಮೇಲೆ ದಾಳಿ ಮಾಡಿದ ನಂತರ ಮೊಘಲ್ ಚಿತ್ರಕಲೆ ಹಿನ್ನಡೆಯತ್ತ ಸಾಗಿತು. ಈ ದಾಳಿಯ ಪರಿಣಾಮವಾಗಿ ಅನೇಕ ಮಂದಿ ಹಿಂದೂ ಚಿತ್ರಕಲಾವಿದರು. ದೆಹಲಿಯನ್ನು ಬಿಟ್ಟು ಹೊಸ ಆಶ್ರಯವನ್ನು ಹುಡುಕುತ್ತಾ, ಪಂಜಾಬಿನ ಕಣಿವೆಗಳ ಕಡೆಗೆ ಹೋದರು. ಇವರೆಲ್ಲರೂ ಮೊಘಲ್ ಚಿತ್ರರಚನಾ ಶೈಲಿಯಲ್ಲಿ ಪಳಗಿದವರೇ ಆಗಿದ್ದರು. ಅಲ್ಲಿ ಇವರಿಗೆ ರಾಜ ದಿಲೀಪ್ ಸಿಂಗ್‌ನ ನಂತರ ಅವನ ಮಗ ಗೋವರ್ಧನ ಚಂದನ ಆಶ್ರಯದೊರೆಯಿತು. ಗೋವರ್ಧನ ಚಂದನ ಮಗ

---

೫೯. MOTICHANDER : Moghal Paintings, pg.-16
೬೦. ನಿರಂಜನ ಸಂ. : ಜ್ಞಾನಗಂಗೋತ್ರಿ, ಸಂಪುಟ -೫, ಪುಟ-೫೦೧.

ಪ್ರತಾಪ ಚಂದ್ ಕಾಂಗ್ರಾಕೋಟೆಯನ್ನು ಆಕ್ರಮಿಸಿಕೊಂಡ. ಅಲ್ಲಿ ನೆಲೆಸಿದ ಮೇಲೆ ಅದು ಚಿತ್ರಕಾರರ ನೆಲೆಯಾಯಿತು. ಅವನ ಆಶ್ರಯದಲ್ಲಿ ಉತ್ತಮ ಚಿತ್ರರಚನೆ ನಡೆಯಿತು. ವಿಷ್ಣು ಭಕ್ತಿಯಿಂದ ಪ್ರೇರಿತರಾದ ಉತ್ತಮ ಕಲಾವಿದರು ಜಯದೇವನ ಗೀತಗೋವಿಂದ, ರಾಮಾಯಣ, ಮಹಾಭಾರತ, ಭಾಗವತ ಗ್ರಂಥಗಳಿಂದ ಆರಿಸಿದ ಸಂದರ್ಭಗಳನ್ನು ಆಧರಿಸಿ ಸುಂದರ ಚಿತ್ರಗಳನ್ನು ಬರೆದರು. ಹಾಗೆಯೇ ಋತುಗಳನ್ನು ನಿರೂಪಿಸುವ ಮತ್ತು ರಾಗಗಳನ್ನು ಸಂಯೋಜಿಸುವ ಚಿತ್ರಗಳನ್ನು ರಚಿಸಿದರು. ಕಾಂಗ್ರಾ ಶೈಲಿಯಲ್ಲಿ ಉತ್ತಮ ಚಿತ್ರಗಳು ರಚಿತವಾದವು ಇವುಗಳ ರೇಖಾ ಲಾಲಿತ್ಯ, ವರ್ಣಮೋಹಕತೆ ಅಪೂರ್ವವಾಗಿದ್ದವು. ಕಾಂಗ್ರಾ ಸಂಪ್ರದಾಯ ಚಿತ್ರಗಳಲ್ಲಿ ಮೊಘಲ ಹಾಗೂ ರಜಪೂತ ಚಿತ್ರಗಳ ಶೈಲಿಯ ಪ್ರಭಾವವಿದ್ದರೂ ಇದು ಒಂದು ವಿಶಿಷ್ಟ ಶೈಲಿಯಾಗಿ ರುಪಗೊಂಡು ವಿಶ್ವವಿಖ್ಯಾತವಾಯಿತು. ಕೃಷ್ಣ ರಾಧೆಯರ ಪ್ರೇಮ ನಿರೂಪಣೆ ಈ ಶೈಲಿಯ ವಿಶಿಷ್ಟ ಕೊಡುಗೆ [೬೧]

ಮೊಘಲ್‌ಕಲೆಯ ಪ್ರಭಾವದೊಂದಿಗೆ ಅದರದೇ ಸಮಕಾಲೀನ ಕಲೆಯಾಗಿ ಮೂಡಿ ಬಂದಿರುವ ರಜಪೂತ ಕಲೆಯ ಬಗೆಗೆ ಹಿರಿಯ ಕಲಾವಿಮರ್ಶಕರಾಗಿರುವ ಪರ್ಷಿಬ್ರೌನ್ ಅವರು ರಜಪೂತ ಕಲೆಯ ಬಗೆಗೆ ಈ ರೀತಿ ವಿವರಿಸುತ್ತಾರೆ.

ಮೊಘಲ ಕಲಾಕೃತಿಗಳಿಗೆ ಸಮಾನವಾಗಿರುವ ಅನೇಕ ಕಿರುಚಿತ್ರಗಳು ಆ ಕಾಲದ ಮಿತಿಯಲ್ಲಿ ಬೇರೆ ಬೇರೆ ಶೈಲಿಗಳಲ್ಲಿ ಕಾಣುತ್ತೇವೆ. ಮೇಲು ನೋಟದಲ್ಲಿ ಒಂದಾಗಿ ಕಂಡರೂ ಅತಿ ಭಿನ್ನ ಸ್ವರೂಪದಲ್ಲಿ ಕಾಣುವ ಉತ್ತರಭಾರತದ ರಜಪೂತ, ಪಂಜಾಬ್, ಹಿಮಾಲಯಗಳ ಶೈಲಿಗಳು ವಿಶೇಷ ಶೈಲಿಗಳಾಗಿವೆ. ಅಜಂತೆ ಹಳತಾದರೂ ಹೊಸತಾದ ಮೊಘಲ ಶೈಲಿಯನ್ನು ಒಳಗೊಂಡ ಈ ಶೈಲಿಯ ವಿಧಾನವೇ ವಿನೂತನವಾದದು. ರಜಪೂತ ಕಲೆಯಲ್ಲಿ ರಾಗ ರಾಗಿಣಿಯರ ಚಿತ್ರಗಳಿವೆ. ಈ ಒಂದು ಚಿತ್ರವು ವರ್ಣಗಳ ಒಂದು ದಿವ್ಯಮೇಳದಂತಿವೆ. ಋತುಗಳ ವರ್ಣನೆಯ ಚಿತ್ರಗಳು ರಜಪೂತ ಕಲಾವಿದರು ಕೊಯ್ಲುಗಾಲದ ಶರದೃತುವಿನಾನಂದವನ್ನು , ವಸಂತಋತುವಿನ ಪರಮಾನಂದವನ್ನು ಮಳೆಗಾಲದ ಆರಂಭದ ಶಖೆ, ತಂಪುಗಳಲ್ಲಿಯ ಹಿತವನ್ನು ತಮ್ಮ ಕೃತಿಗಳಲ್ಲಿ ಸೆರೆಹಿಡಿದಿದ್ದಾರೆ. ಋತುಗಳ ಹೆಸರುಗಳು ಹೊಂದಿರುವ ಆರು ರಾಗಗಳು, ಅವಕ್ಕೆ ಆರು ರಾಗಿಣಿಯರು, ಕಲಾವಿದರ ಪ್ರತಿಭಾ ಕಲ್ಪನೆಗೆ ಸಾಕಷ್ಟು ಉತ್ತೇಜನದ ವಸ್ತುಗಳಾಗಿವೆ. ರಜಪೂತ ಕಲೆ, ಬಣ್ಣಗಳ ತೇಜೋವೈಭವಕ್ಕೆ ಪ್ರಸಿದ್ಧವಾಗಿವೆ. ಕೆಲವು ಚಿತ್ರಗಳಂತೂ ನೀರೊಳಗಿದ್ದು , ಹೊಳೆಯುತ್ತ ಕಾಣುವ ಅನರ್ಘ್ಯರತ್ನಗಳಂತೆ ತೋರುತ್ತವೆ. ರಜಪೂತ ರೇಖಾ ವಿನ್ಯಾಸದಲ್ಲಿ ಭಾರತೀಯರ ಆತ್ಮವೇ ಇದೆ ಎನ್ನಬಹುದು, ಎಂದು ಸರ್.ವಿಲಿಯಂ ಜೋನ್ಸ್ ಹೇಳುತ್ತಾರೆ. [೬೨]

ರಜಪೂತ ಚಿತ್ರಗಾರನಿಗೆ ಪ್ರಮದೆಯರ ಚಿತ್ರಗಳನ್ನು ಬರೆಯುವುದೆಂದರೆ,

---

೬೧. EKNATH RANADE : Indian Paintings through the ages, Percy Brown : Pg. 47.
೬೨. ಪಂ. ತಾರಾನಾಥ : ಸುಲಭ ಚಿಕಿತ್ಸೆಗಳು, ಪ್ರೇಮಾ ಆಶ್ರಮ ತುಂಗಭದ್ರ.

ಕರ್ನಾಟಕದ ಹಸ್ತಪ್ರತಿ ಚಿತ್ರಕಲೆ- ಒಂದು ಅಧ್ಯಯನ

ಹಸ್ತ ಪ್ರತಿಗಳಲ್ಲಿ ಕಾಂಗ್ರಾ ಚಿತ್ರಕಲೆ





Courtesy:
P.Banerjee, The Blue God
Lalit Kala Akademi, New Delhi

ಹಸ್ತ ಪ್ರತಿಗಳಲ್ಲಿ ಪಹಾಡಿ ಚಿತ್ರಕಲೆ

ಕರ್ನಾಟಕದ ಹಸ್ತಪ್ರತಿ ಚಿತ್ರಕಲೆ- ಒಂದು ಅಧ್ಯಯನ






Courtesy:
P.Banerjee, The Blue God
Lalit Kala Akademi,New Delhi

ಬಹಳ ಇಷ್ಟವೆಂದು ಕಾಣುವುದು. ಬೆಳ್ಳನೆಯ ನುಣುಪಾದ ದೇಹ, ಕೆಂದುಟಿಗಳು, ಬಣ್ಣ ಬಣ್ಣದ ಉಡುಪು ಇವೆಲ್ಲ ಕಲಾವಿದರ ವರ್ಣ ಕೌಶಲ್ಯ ಪ್ರದರ್ಶಿಸುವ ವಿಶೇಷಗಳಾಗಿವೆ. ರಾಗ ರಾಗಿಣಿಯರ ರಮ್ಯವಾದ ಪ್ರಕೃತಿಚಿತ್ರಗಳು, ಗೀತಗೋವಿಂದಾದ ಪ್ರೇಮಗೀತೆಗಳು ಇವುಗಳ ನಿರೂಪಣೆಯಲ್ಲಿ ರಜಪೂತ ಕಲಾವಿದರ ಪ್ರತಿಭೆ ಎದ್ದು ಕಾಣುತ್ತದೆ. ಹದಿನೈದುನೂರ ತೊಂಬತ್ತೊಂದರಲ್ಲಿ ಜೀವಿಸಿದ್ದ ಮಹಾಕವಿ, ಕೇಶವದಾಸನ ಕವನಗಳು ಅನೇಕ ಕಾಂಗ್ರಾ ಕಲಾಕೃತಿಗಳಿಗೆ, ವಸ್ತುಗಳಾಗಿದ್ದವು. ಪ್ರೇಮೋನ್ಮಾದ ಪ್ರಣಯಕೋಪ, ವಿರಹತಾಪ, ಮಿಲನದ ಸಂತೋಷದ ಎಲ್ಲವನ್ನು ಕಲಾವಿದ ನಿರೂಪಿಸಿದ್ದಾನೆ. ರಜಪೂತ ಕಲಾವಿದರು ಹೆಣ್ಣಿನ ಮನಮೋಹಕ ಸೌಂದರ್ಯವನ್ನು ಚಿತ್ರಿಸಿರುವಷ್ಟು ಘನವಾಗಿ ಏಷಿಯಾದ ಇನ್ನಾವ ಕಲೆಗಾರನೂ ಚಿತ್ರಿಸಿಲ್ಲ.

ರಜಪೂತ ಕಲೆಯ ಮೊಘಲಕಲೆಯ ಪ್ರಭಾವದಲ್ಲಿ ಅರಳಿನಿಂತಿರುವ ಮತ್ತೊಂದು ಭಾರತದ ದೇಶೀಯ ಕಲೆಯಲ್ಲಿ ಕಾಂಗ್ರಾಶೇಲಿಯು ಒಂದಾಗಿದೆ. ಗ್ರಾಮೀಣ ಪರಿಸರ ಮಧ್ಯಾಹ್ನದ ಬಿಸಿಲಿನ ಬೇಗೆಯನ್ನು ನಿವಾರಿಸಿಕೊಳ್ಳಲು ಆಲ, ಬಸಿರಿ, ಬೇವಿನ ಹೆಮ್ಮರಗಳ ಅಡಿಯಲ್ಲಿ ಹುಕ್ಕಾ ಸೇದುತ್ತಿರುವ ಕೃಷಿಕರು, ಕೃಷಿಯಲ್ಲಿ ನಿರತರಾದ ಮಹಿಳೆಯರು, ಬಾವಿಗಳಿಂದ ನೀರು ಸೇದುತ್ತಿರುವ ಪ್ರಮದೆಯರು ಭಾವ -ಭಂಗಿಗಳು ಹಿಮಾಲಯದ ಕಣಿವಿ ಪರಿಸರದ ಕಾಂಗ್ರಾಶೈಲಿಯಲ್ಲಿ ಕಾಣುತ್ತೇವೆ. ಇದರಲ್ಲಿ ಕಲಾವಿದ ಬಲು ಕಷ್ಟಕರವಾದ ಪ್ರಭಾವಳಿಗಳನ್ನು ಬೆಳೆಸಿಕೊಂಡು ವಸ್ತು ವಿಷಯವನ್ನು ಘಟನೆಯನ್ನು ಹೇಳುತ್ತಿರುತ್ತಾನೆ. ಎಡಬಲಗಳಿಂದ ಬರುವ ಬೆಳಕಿನ ಬೆಳಕನ್ನು ಬಯಲಿನಲ್ಲಿರುವ ಈ ಚಿತ್ರಗಳಲ್ಲಿ ಕರಾರುವಕ್ಕಾಗಿ ತೋರಿಸಿದ್ದಾನೆ. ಸಾಮಾನ್ಯವಾಗಿ ಈ ಮಾಧ್ಯಮ ಆಯ್ದುಕೊಂಡ ರಜಪೂತ ಕಲಾವಿದ ಚಿತ್ರಗಳಿಗೆ ಬಂಗಾರದ ರೇಖಿ ಬಳಸದೇ ಅದರ ಪ್ರಭಾವವನ್ನು ವರ್ಣಗಳಲ್ಲೇ ತರಬಲ್ಲ. ಹೂ, ಬಳ್ಳಿ, ಎಲೆ, ನಿಸರ್ಗದ ಪರಿಸರದಲ್ಲಿ ಹುಟ್ಟು ಕಾಂಗ್ರಾಶೈಲಿಯು ವನದೇವತೆಯ ಮಡಿಲಿನಲ್ಲಿ ಹುಟ್ಟಿಕೊಂಡಿದೆ.

ಆ. ಧಾರ್ಮಿಕೇತರ ಮೂಲದ ಹಸ್ತಪ್ರತಿ ಚಿತ್ರಕಲೆ




1. ಜೀವನಾವಶ್ಯಕ ಹಸ್ತಪ್ರತಿಯ ಚಿತ್ರಗಳು : ಸಾಮಾಜಿಕ ಬದುಕಿನಲ್ಲಿ ಭಾಷೆ ಮತ್ತು ಧರ್ಮಗಳ ಪಾತ್ರ ಪ್ರಮುಖವಾಗಿರುವಂತೆ ಧಾರ್ಮಿಕೇತರ ಬದುಕು ಅವೆಲ್ಲವುಗಳಿಗೂ ಮಿಗಿಲಾದ ಪಾತ್ರವನ್ನು ನಿರ್ವಹಿಸುತ್ತದೆ. ಕರ್ನಾಟಕದ ಹಸ್ತಪ್ರತಿಗಳು ಮಾನವ ಬದುಕಿನ ವಿಸೃತ ರೂಪದ ಜೀವನವನ್ನು ವಿವರಿಸುವ ಕೈಗನ್ನಡಿಗಳಂತಿವೆ. ಅವು ಕರ್ನಾಟಕದ ಭಾಷೆ, ಧರ್ಮ, ಸಾಮಾಜಿಕ ಬದುಕು ಬೆಳೆದು ಬಂದಿರುವುದನ್ನು ತಿಳಿಸುವ ಐತಿಹಾಸಿಕ ಕಾಲಕೋಶಗಳಂತೆ ಇವೆ. ಜೀವನಾವಶ್ಯಕ ಬದುಕನ್ನು ವಿವರಿಸುವ ದಿನದ ಬದುಕಿನಲ್ಲಿ ಸಾಮಾನ್ಯ ಜನರ ಜೀವನ, ಅವರೊಂದಿಗಿರುವ ಪ್ರಾಣಿ, ಪಕ್ಷಿ, ಕ್ರೀಡೆ, ಮನ್ನೋಲ್ಲಾಸ, ಶಿಕ್ಷಣ, ಪರಿಶ್ರಮ, ರೋಗ, ವೈದ್ಯ, ರಸವೈದ್ಯ, ಚಿಕಿತ್ಸೆ, ಶಸ್ತ್ರಚಿಕಿತ್ಸೆ, ದಾಂಪತ್ಯಜೀವನ, ಕಾಮಶಾಸ್ತ್ರ ವಿಲಾಸದ ಬದುಕು ಮತ್ತು ಸಾರ್ವತ್ರಿಕ ಜೀವನದಲ್ಲಿಯ ಸಾತ್ವಿಕ ಕುಟುಂಬ ನಿರ್ವಹಣೆಯನ್ನು ವಿವರಿಸುವಂತಹ ಅಸಂಖ್ಯಾತ ಹಸ್ತಪ್ರತಿಗಳಿವೆ. ಅಂತಹವುಗಳನ್ನು ಕುರಿತು ಸಂಕ್ಷಿಪ್ತವಾಗಿ ಕೆಲವನ್ನು ಅವಲೋಕಿಸೋಣ.

ಅ. ರಸರತ್ನಾಕರ : ಜೈನಕವಿಯಾದ ಸಾಳ್ವನಕೃತಿಯಾದ ಇದು ಕ್ರಿ.ಶ. 1550 ರ ಕಾಲಘಟ್ಟದಲ್ಲಿ ರಚನೆಯಾದ ಕೃತಿಯಾಗಿದೆ. ರಸಶಾಸ್ತ್ರದ ಬಗೆಗೆ ತುಂಬಾ ಉಪಯುಕ್ತವಾಗಿದೆ. ಬದುಕಿನ ಬಹುಭಾಗವನ್ನು ವ್ಯಾಪಿಸಿಕೊಂಡಿರುವ ರಸಾಯನ ಶಾಸ್ತ್ರದ ವೈಜ್ಞಾನಿಕ ವಿವರಣೆಯನ್ನು ಈ ಕೃತಿಯು ಬೋಧಿಸುವುದು. ಯಾವ ವಸ್ತುವಿನಲ್ಲಿ ಯಾವ ಯಾವ ರಸವಿರುವುದು ಎಂಬುದನ್ನು ಆ ರಸವನ್ನು ಯಾವ ಯಾವ ವಿಧಾನಗಳಿಂದ ಹೊರ ಹಾಕುತ್ತಿದ್ದರೆಂಬುದನ್ನು, ಭಟ್ಟಿ ಭಸ್ಮಗಳ ವಿವರಗಳನ್ನು ಈ ಕೃತಿಯು ವಿವರಿಸುತ್ತದೆ.

ಆ. ಖಗೇಂದ್ರ ಮಣಿ ದರ್ಪಣ : ಕಂದ ವೃತ್ತದ ಹಳೆಗನ್ನಡದ ಕೃತಿಯಾದ ಇದನ್ನು ಮೊದಲನೆಯ ಮಂಗ ರಾಜನು 1360 ಸುಮಾರಿಗೆ ರಚಿಸಿದ ಎನ್ನಲಾಗಿದೆ. ಮದರಾಸು ವಿಶ್ವವಿದ್ಯಾಲಯದ ಕನ್ನಡ ಗ್ರಂಥಮಾಲೆಯ 9 ನೇ ಕೃತಿಯಾಗಿ ಇದನ್ನು ಪ್ರಕಟಿಸಲಾಗಿದೆ. 16 ಅಧ್ಯಾಯಗಳ ಈ ಕೃತಿಗೆ ಶ್ರೀ ಮರಿಯಪ್ಪ ಭಟ್ಟರು ಪ್ರಸ್ತಾವನೆಯನ್ನು ಬರೆದಿದ್ದಾರೆ. ವಿಷ ವೈದ್ಯಕೃತಿಯಾದ ಈ ಗ್ರಂಥದಲ್ಲಿ ವಿಷವನ್ನು ಕುರಿತು ಅಧ್ಯಯನಕ್ಕೆ ಒಳಪಡಿಸಲಾಗಿದೆ. ವಿಷ ಸ್ವರೂಪ ವಿಧಾನಗಳೊಂದಿಗೆ ವಿಷ ಪ್ರಯೋಗ, ವಿಷ ನಿರೋಧ, ನಿವಾರಣೆಯ ಬಗೆಗೂ ಚರ್ಚಿಸುತ್ತಾ, ಗಿಡ, ಮೂಲಿಕೆಗಳಲ್ಲಿ ವಿಷಯ ಸಂರಕ್ಷಣೆಯ ವಿಷಯ ಕುರಿತು ವಿವರಿಸಲಾಗಿದೆ.

ಕರ್ನಾಟಕದ ಹಸ್ತಪ್ರತಿ ಚಿತ್ರಕಲೆ- ಒಂದು ಅಧ್ಯಯನ

ಕರ್ನಾಟಕದ ಹಸ್ತ ಪ್ರತಿಗಳಲ್ಲಿ ಅಶ್ವ ಶಾಸ್ತ್ರ



ಕೃಪೆ:

ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮಾನಸ ಗಂಗೋತ್ರಿ,
ಮೈಸೂರು ವಿಶ್ವವಿದ್ಯಾಲಯ, ಮೈಸೂರು.

ಇ. ಅಶ್ವಶಾಸ್ತ್ರ : ಮೈಸೂರು ವಿಶ್ವವಿದ್ಯಾಲಯದ ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಯ ಮಾನಸ ಗಂಗೋತ್ರಿಯ ಹಸ್ತಪ್ರತಿ ಭಂಡಾರದಲ್ಲಿ ಪ್ರಾಣಿ ಶಾಸ್ತ್ರಕ್ಕೆ ಸಂಬಂಧಿಸಿದ ಎರಡು ಅಮೋಘ ಸಚಿತ್ರ ಹಸ್ತಪ್ರತಿಗಳಿವೆ. ಅದರಲ್ಲಿ ಕೆ.ಎ. 572 ನೆಯ ಕ್ರಮಾಂಕದ ಅಶ್ವಪರೀಕ್ಷೆ ಮತ್ತು ಕೆ.ಎ. 571 ನೆಯ ಕ್ರಮಾಂಕದ ಅಶ್ವವೈದ್ಯ ಎಂಬ ಸಚಿತ್ರ ಹಸ್ತಪ್ರತಿಗಳಿವೆ. ಸಮಗ್ರ ಅಶ್ವ ಜಾತಿಗಳ ಸ್ವರೂಪ, ಲಕ್ಷಣ, ಶರೀರ ಶಾಸ್ತ್ರ ಅದರ ನಡಿಗೆ ಓಟದ ಪರೀಕ್ಷೆ ಮತ್ತು ತರಬೇತಿ ಮೊದಲನೆಯ ಗ್ರಂಥದಲ್ಲಿದ್ದರೆ. ರೋಗ ಗ್ರಸ್ಥ ಅಶ್ವಕ್ಕೆ ನೀಡುವ ವೈದ್ಯಕೀಯ ಕ್ರಮವನ್ನು ಎರಡನೆಯ ಗ್ರಂಥದಲ್ಲಿ ವಿವರಿಸಲಾಗಿದೆ. ಮೈಸೂರಿನ ದೊರೆಗಳಾದ ಶ್ರೀ ಚಾಮರಾಜ ಒಡೆಯರ ಕಾಲಕ್ಕೆ ಕ್ರಿ.ಶ. 1868 ರಲ್ಲಿ ರಚಿಸಲ್ಪಟ್ಟ ಈ ಎರಡೂ ಗ್ರಂಥಗಳಲ್ಲಿ 203 ಉಲ್ಲೇಖಗಳು ವರ್ಣ ರಂಜಿತ ಕುದುರೆಗಳ ಚಿತ್ರಗಳು ಮತ್ತು ಚಿಕಿತ್ಸಾ ನೀಡುವ ಕ್ರಮವನ್ನು ಸಚಿತ್ರವಾಗಿ ವಿವರಿಸಲಾಗಿದೆ.

ಈ) ಆಯುರ್ವೇದ ಹಸ್ತಪ್ರತಿ ಚಿತ್ರಗಳು : ಶೈಕ್ಷಣಿಕ ವಿಧಾನವಾಗಿ ಆಯುರ್ವೇದದಲ್ಲಿ ಭಾರತೀಯರ ಪ್ರಾರಂಭಿಕ ವೈದ್ಯಕೀಯ ಪದ್ಧತಿ ಮತ್ತು ಸಸ್ಯಗಳ ವಿವರಣೆ ಇದೆ. ಶರೀರ ಶಾಸ್ತ್ರದ ವಿವರ ಇರುವಂತೆ ಹೂವು, ರಸ, ಎಲೆಗಳ ವಿವರವೂ ದೊರೆಯುತ್ತದೆ. ಹೂವುಗಳಿಂದ ರಸ ಸಂಗ್ರಹಿಸಿ ತ್ರಾಣಿಕವನ್ನು ರಚಿಸುವ ವಿವರಣೆಯನ್ನು ರಾಯಚೂರು ವಿಭಾಗದ ಪಂ॥ ತಾರಾನಾಥರು ಕಂಡುಹಿಡಿದಿದ್ದರು. ಅವರು ಫ್ರಾನ್ಸ್ ದೇಶದ ಕ್ರಾಕ್‌ವಾನ್ ವೀಡ್ ನಿಗೆ ಹೇಳುವ ವಿವರವೂ ದೊರೆಯುವಂತೆ ನೀರು, ಲವಣ, ಬೆಳಕು ಮತ್ತು ಸಂಗೀತಗಳ ವಿಧಾನಗಳಿಂದಲೂ ಅವರು ಶಸ್ತ್ರ ಚಿಕಿತ್ಸೆಯನ್ನು ಮಾಡುವ ವಿಧಾನವನ್ನು ಕುರಿತು ತಿಳಿಸಿದ್ದಾರೆ. ಅವರದೇ ಕೃತಿಯಾದ ಸುಲಭ ಚಿಕಿತ್ಸೆಗಳು [೬೩] ಎಂಬ ಗ್ರಂಥದಲ್ಲೂ ಸಾಕಷ್ಟು ವಿವರಣೆ ದೊರೆಯುತ್ತದೆ.

ಭಾರತೀಯರ ಬದುಕಿನಲ್ಲೂ ಆಯುರ್ವೇದ ಬಹುಮುಖ್ಯವಾದ ಶಾಸ್ತ್ರವಾಗಿದ್ದು, ಅದನ್ನು 5 ನೇ ವೇದವೆಂದು ಆಯುಷ್ಯ ವೃದ್ಧಿಯ ವಿದ್ಯೆಯೆಂದು ಪರಿಗಣಿಸಲಾಗಿದೆ. ಆಯುರ್ವೆದ ಕುರಿತು ಸಾಕಷ್ಟು ಹಸ್ತಪ್ರತಿಗಳು ಕರ್ನಾಟಕದ ಹಸ್ತಪ್ರತಿಭಂಡಾರಗಳಲ್ಲಿ ದೊರೆಯುತ್ತವೆ. ಇವುಗಳಲ್ಲಿ ಭಸ್ಮರಚನಾ ವಿಧಾನ, ರೋಗ ನಿವಾರಣಾ ವಿಧಾನ ಮತ್ತು ಯೋಗ ಆಧಾರಿತ ವ್ಯಾಯಾಮದ ವಿಧಾನವನ್ನು ಸಮಗ್ರ ಚಿತ್ರಗಳೊಂದಿಗೆ ವಿವರಿಸಲಾಗಿದೆ. ಕುಂಡನಿ ಚಿತ್ರ, ಅಧೋ ನಾಡಿ, ಬ್ರಹ್ಮ ಕಮಲ, ಸಹಸ್ರ ಕಮಲದಂತಹ ಹೆಸರುಗಳನ್ನು ಸ್ಮರಿಸಿಕೊಳ್ಳಬಹುದು.

2. ಮನೋಲ್ಲಾಸಕಾರಕ ಹಸ್ತಪ್ರತಿ ಚಿತ್ರಕಲೆ :


ಅ. ಸಾಂಸ್ಕೃತಿಕ ಹಸ್ತಪ್ರತಿಗಳು : ನಮ್ಮ ಅನೇಕ ಹಸ್ತಪ್ರತಿಗಳಲ್ಲಿ ನಾಡಿನ ಸಾಂಸ್ಕೃತಿಕ ಸ್ವರೂಪವನ್ನು ವಿವರಿಸುವಂತಹ ಅನೇಕ ಹಸ್ತಪ್ರತಿಗಳಿವೆ. ಈ ನಾಡಿನಲ್ಲಿ ಬೆಳೆದು ಬಂದಿರುವ ಸಾಂಪ್ರದಾಯಕ ಆಚರಣೆಗಳನ್ನು ಜನಪದರ ಬದುಕನ್ನು ಈ ಹಸ್ತಪ್ರತಿಗಳು ವಿವರಿಸುವುದರೊಂದಿಗೆ ಒಂದು ಕಾಲದಲ್ಲಿ

---

೬೩. ಪಂಡಿತ ತಾರಾನಾಥ : ಸುಲಭ ಚಿಕಿತ್ಸೆಗಳು, ತಾರಾ ಆಶ್ರಮ, ತುಂಗಭದ್ರ.

ಕರ್ನಾಟಕದ ಹಸ್ತಪ್ರತಿ ಚಿತ್ರಕಲೆ- ಒಂದು ಅಧ್ಯಯನ

ಕರ್ನಾಟಕದ ಕಾಗದದ ಹಸ್ತಪ್ರತಿಗಳಲ್ಲಿ ಮನೋಲ್ಲಾಸದ ಕ್ರೀಡೆಗಳ -ಚಿತ್ರಗಳು.



ಕೃಪೆ:

ಡಾ॥ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ ಮಾನಸ ಗಂಗೋತ್ರಿ

ಮೈಸೂರು ವಿಶ್ವ ವಿದ್ಯಾಲಯ, ಮೈಸೂರು.

ಮಾನವನ ಬದುಕಿನ ಅಂಗಗಳಾಗಿದ್ದ ಮಲ್ಲವಿದ್ಯೆ, ಧನುರ್ವಿದ್ಯೆ, ಕತ್ತಿವರಸೆ, ಯುದ್ಧ ಕುಶಲತೆ ಮತ್ತು ತಂತ್ರವಿದ್ಯೆಗಳನ್ನು ವಿವರಿಸುವಂತಹ ಹಸ್ತಪ್ರತಿಗಳು ದೊರೆಯುವಂತೆ ಕುದುರೆ, ಆನೆ, ಹಸು, ಎಮ್ಮೆಗಳಂತಹ ಸಾಕುಪ್ರಾಣಿಗಳಿಗೆ ಬರುವ ಜಾಡ್ಯ ಅವುಗಳ ನಿವಾರಣಾ ಕ್ರಮವನ್ನು ವಿವರಿಸುವ ಸಚಿತ್ರ ಹಸ್ತಪ್ರತಿಗಳು ದೊರೆಯುತ್ತವೆ. ಇದರೊಂದಿಗೆ ಸ್ತ್ರೀಯರ ರೋಗ ಸಂಬಂಧಿಯಾದ ಅನೇಕ ಹಸ್ತಪ್ರತಿಗಳು ಕರ್ನಾಟಕದ ಹಸ್ತಪ್ರತಿ ಭಂಡಾರಗಳಲ್ಲಿ ದೊರೆಯುತ್ತವೆ.

ಆ. ಸಾಂಘಿಕ ಹಸ್ತಪ್ರತಿ : ಹಸ್ತಪ್ರತಿ ವಿದ್ವಾಂಸರಾದ ಡಾ|| ಎಫ್.ಟಿ. ಹಳ್ಳಿಕೇರಿಯವರು ಹಸ್ತಪ್ರತಿಯೆಂದು ಕೇವಲ ವಿದ್ವತ್ತಿನ ಕಂತೆಯಾಗಿರದೆ ಅದು ಒಂದು ಸಮೂಹ ಬದುಕಿನ ಸಾಂಘಿಕ ಶಾಸ್ತ್ರಯೆಂಬುದನ್ನು ಈ ರೀತಿಯಾಗಿ ವಿವರಿಸುತ್ತಾರೆ. '' ಲೋಕ ವ್ಯವಹಾರಕ್ಕೆ ಸಂಬಂಧಿಸಿದಂತೆ ಕನ್ನಡದಲ್ಲಿ ಹಲವಾರು ಕೃತಿಗಳು ಪ್ರಾಚೀನಕಾಲದಿಂದಲೂ ರಚನೆಗೊಳ್ಳುತ್ತಾ ಬಂದಿವೆ. ಗೃಹ ವಾಸ್ತು, ವೈದ್ಯಕೀಯ, ಗಜಶಾಸ್ತ್ರ ಹಯಶಸ್ತ್ರ, ಗಾರ್ಧಭ ಶಾಸ್ತ್ರ ಜ್ಯೋತಿಷ್ಯ ಶಾಸ್ತ್ರ ಕಾಮಶಾಸ್ತ್ರ ಶಕುನ ಶಾಸ್ತ್ರ ಸೂಪಶಾಸ್ತ್ರ, ಮುಂತಾದವುಗಳು ಲೌಕಿಕ ಶಾಸ್ತ್ರಕೃತಿಗಳಾಗಿವೆ.

ಶಕ್ತಿರ್ನಿಪುತಾ ಲೋಕಶಾಸ್ತ್ರಕಾವ್ಯದ್ಯವೇಕ್ಷಣಾತ್
ಕಾವ್ಯಜ್ಞ ಶಿಕ್ಷರಿಯಾಭ್ಯಾಸ ಇತಿ ಹೇತುಸ್ತದುದ್ಭವೇ.

ಎಂದು ಮುಮ್ಮಟನು ತನ್ನ ಕಾವ್ಯ ಪ್ರಕಾಶದಲ್ಲಿ ವಿವರಿಸಿದ್ದಾನೆ. ಪ್ರತಿಭೆಯ ಜೊತೆಗೆ ಲೋಕ ಶಾಸ್ತ್ರಗಳಾದ ಪಂಚಾಂಗ, ಕಾವ್ಯಭ್ಯಾಸ, ಬಹುಶೃತತ್ವಕೂಡ ಕಾವ್ಯೋದ್ಭವದ ಕಾರಣಗಳೆನಿಸುತ್ತವೆ. ಕನ್ನಡ ಕವಿಗಳಿಗೆ ಇವೆರಡು ಇದ್ದುದರಿಂದ ಅವರು ಉತ್ತಮ ಕಾವ್ಯಗಳನ್ನು, ಶಾಸ್ತ್ರಗಳನ್ನು ರಚಿಸಿದರು.[೬೪]

ಮನುಷ್ಯನ ದೇಹಕ್ಕಿಂತ ಮಿಗಿಲಾದದು ಅವನ ಮನಸ್ಸು ದೇಹವನ್ನು ಕಾಯ್ದುಕೊಳ್ಳುವಂತೆ ಮನ ಕಾಯುವದು ಅತಿ ದುಸ್ತರದ ಕಾರ್ಯ ಅದಕ್ಕಾಗಿಯೇ ಕನಕದಾಸರಂತಹ ಅನೇಕ ದಾರ್ಶನಿಕರು '' ಮನಸ್ಸು ನಿಲಿಸುವುದು ಬಲು ಕಷ್ಟ, ಸುರರಿಗದು ಅಳವಲ್ಲ '' ಎಂದು ತಮ್ಮ ರಚನೆಗಳಲ್ಲಿ, ಕೀರ್ತನೆಗಳಲ್ಲಿ ಮನತುಂಬುವಂತೆ ಹಾಡಿದ್ದಾರೆ. ಇಂತಹ ಮನವನ್ನು ಕಾಯುವುದು ಉಲ್ಲಾಸದಲ್ಲಿರುವಂತೆ ಉಳಿಯುವುದಕ್ಕಾಗಿ ತತ್ವಜ್ಞಾನಿಗಳಾಗಿದ್ದ ಪೂಜ್ಯ ನಿಜಗುಣರು ಮನಸ್ಸನ್ನು ಮುದ್ದುಕೋಗಿಲೆ, ಜಾಣಕೋಗಿಲೆ ಎಂದು ಸಂತೈಸಿದರು. ದೇಹಕ್ಕೆ ಅಂಟಿರುವ ಆತ್ಮನಂತೆ ದೇಹದೊಳಗಿದ್ದು ನೆಲೆಗೆ ನಿಲುಕದ ಮನದ ಆನಂದಕ್ಕಾಗಿ, ಉಲ್ಲಾಸಕ್ಕಾಗಿ ಮಾನವನು ಆದಿಮಾನವನ ಬದುಕಿನಿಂದ ಪ್ರಾರಂಭಿಸಿ ಶಿಷ್ಟದ ಬದುಕಿನಲ್ಲೂ ಹಲವಾರು ಚಿತ್ರಗಳನ್ನು ಚಿತ್ರಿಸುತ್ತಲೇ ಬಂದಿದ್ದಾನೆ. ಅವುಗಳಲ್ಲಿ ಕ್ರೀಡೆಯೂ ಒಂದು ಕ್ರೀಡೆಗಳು ಮನೋಲ್ಲಾಸಕಾರಕ ಅಂಶಗಳಾಗಿರುತ್ತವೆ. ರಂಜನೆಗಾಗಿ

---

೬೪. ಡಾ. ಎಫ್.ಟಿ. ಹಳ್ಳಿಕೇರಿ : ಕಂಠ ಪತ್ರ ಪುಟ - ೯೮

ಕರ್ನಾಟಕದ ಕಾಗದದ ಹಸ್ತಪ್ರತಿಗಳಲ್ಲಿ ಮನೋಲ್ಲಾಸದ ಕ್ರೀಡಾ -ಚಿತ್ರಗಳು.



ಕೃಪೆ :

ಡಾ॥ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ ಮಾನಸ ಗಂಗೋತ್ರಿ

ಮೈಸೂರು ವಿಶ್ವ ವಿದ್ಯಾಲಯ, ಮೈಸೂರು.

ಹುಟ್ಟಿಕೊಂಡ ಕ್ರೀಡೆಗಳು ನಮ್ಮ ಬದುಕಿನ ಅವಶ್ಯಕ ಅಂಗಗಳಾಗಿವೆ. ಚಿಣಿದಾಂಡುವಿನಿಂದ ಹಿಡಿದು ಕತ್ತಿವರಸೆ, ಕುದುರೆ ಸವಾರಿ, ಇಂದಿನ ಕ್ರಿಕೆಟ್ ಮತ್ತು ಬಿಲಾಯಾರ್ಡ್ಸ್ ವರೆಗೂ ಬೆಳೆದು ಬಂದಿದೆ. ಗ್ರಾಮೀಣ ಪರಿಸರದಲ್ಲಿ ಬೆಳೆದ ಕ್ರೀಡೆಗಳು ಸಾಮೂಹಿಕ ಮತ್ತು ವೈಯಕ್ತಿಕವಾಗಿ ಇರುವಂತೆ ಹೊರಾಂಗಣ ಮತ್ತು ಒಳಾಂಗಣ ಕ್ರೀಡೆಗಳಾಗಿಯೂ ಇವೆ.


ಆಳರಸರು ಮನ್ನೋಲ್ಲಾಸಕ್ಕಾಗಿ ಅಂತಃಪುರಗಳಲ್ಲಿ ಆಡುತ್ತಿದ್ದ ಚದುರಂಗದಾಟ, ಪಗಡೆಯಾಟ, ಹುಲಿ ಮನೆ, ಲತ್ತಗಳ ಆಟಗಳವರೆಗೂ ವ್ಯಾಪಿಸಿಕೊಂಡಿವೆ. ಮೈಸೂರು ವಿಶ್ವವಿದ್ಯಾಲಯದ ಮಾನಸ ಗಂಗೋತ್ರಿ ಕನ್ನಡ ಅಧ್ಯಯನ ಸಂಸ್ಥೆಯಲ್ಲಿರುವ ಅನೇಕ ಕಾಗದ ಹಸ್ತಪ್ರತಿಗಳಲ್ಲಿ ಇಂತಹ ಆಟದ ಹಸ್ತಪ್ರತಿಗಳನ್ನು ಗಮನಿಸಬಹುದು. ಹಸ್ತಪ್ರತಿ ಚಿತ್ರಕಲಾವಿದರು ಕ್ರೀಡೆಗಾಗಿ ಹಲವು ಚೌಕ ವರ್ತುಳಗಳನ್ನು ಬಳಸಿಕೊಂಡಿರುವಂತೆ ಮರ, ರಥ, ಬ್ರಹ್ಮ, ಬಾಲಕೃಷ್ಣ ಗಣಪತಿ, ಷಣ್ಮುಖರಂತಹ ಅನೇಕ ದೇವತೆಗಳ ಆಕಾರಗಳನ್ನು ಚದುರಂಗದ ಆಟಕ್ಕೆ ಬಳಸಿಕೊಂಡಿರುವುದನ್ನು ಕಾಣುತ್ತೇವೆ. ವ್ಯಾಖ್ಯಾನದ ವ್ಯಾಪ್ತಿಯನ್ನು ದಾಟಿ ವಿಶ್ವವ್ಯಾಪಿಯಾಗಿರುವ ಕ್ರೀಡೆಗಳು ಸಮಗ್ರವಾಗಿ ಅಲ್ಲದಿದ್ದರೂ ಕೆಲವಾದರೂ ದಾಖಲೆಗೊಂಡಿರುವುದು ಸಂತಸದ ವಿಷಯವಾಗಿದೆ.

ಇ. ಅಲಂಕಾರಿಕ ಹಸ್ತಪ್ರತಿ ಚಿತ್ರಕಲೆ :


ಮನುಷ್ಯನ ಸುಪ್ತಮನದ ಪದರುಗಳಡೆಯಲ್ಲಿ ಸೃಷ್ಠಿ ಇಟ್ಟಿರುವ ಅದ್ವಿತೀಯ ಪ್ರಕೃತಿಜನ್ಯ ಬಾವವೇ ಅಲಂಕಾರ. ವ್ಯಯಕ್ತಿಕ ನೆಲೆಯಿಂದ ಹುಟ್ಟಿಕೊಳ್ಳುವ ಈ ಭಾವ ಸಮೂಹ ಬದುಕನ್ನು ಆವರಿಸಿಕೊಳ್ಳಬಲ್ಲದು. ಅಲಂಕಾರ ಭಾವನೆ ಮಾನವನಿಗೆ ಇದ್ದ ಕಾರಣದಿಂದಲೇ ಅವನು ಮನಕ್ಕೆ ತನ್ನ ಮನೆಗೆ ಆನಂದ ನೀಡುವ ಅನೇಕ ವಸ್ತುಗಳಿಂದ ಸಿಂಗರಿಸಿಕೊಂಡಿದ್ದಾನೆ. ಈ ಪ್ರಜ್ಞೆಯ ಕವಿ, ಲಿಪಿಕಾರ ಕಲಾವಿದರು. ಇಂತಹ ಹೆಜ್ಜೆ ಗುರುತುಗಳನ್ನು ಬಿಟ್ಟ ಹೋಗಿದ್ದಾರೆ. ಹಸ್ತಪ್ರತಿಗಳ ಅಂಚಿನ ಅಲಂಕಾರದಲ್ಲೂ ಅನೇಕ ಭೂಮಿತಿ ರೇಖಾ ಚಿತ್ರ ವರ್ಣಚಿತ್ರಗಳಿಂದಲೂ ಅಲಂಕರಿಸಿದ್ದಾರೆ.

ಧರ್ಮಸ್ಥಳದ ಶ್ರೀ ಮಂಜುನಾಥೇಶ್ವರ ಸಾಂಸ್ಕೃತಿಕ ಸಂಶೋಧನಾ ಹಸ್ತಪ್ರತಿ ಭಂಡಾರದಲ್ಲಿ ಗದುಗಿನ ಜಗದ್ಗುರು ತೋಂಟದಾರ್ಯ ಮಠದ ಹಸ್ತಪ್ರತಿ ಭಂಡಾರದಲ್ಲಿ ಮೈಸೂರು ವಿಶ್ವವಿದ್ಯಾಲಯದ ಪ್ರಾಚ್ಯ ಮತ್ತು ಕನ್ನಡ ಅಧ್ಯಯನ ಸಂಸ್ಥೆ ಹಸ್ತಪ್ರತಿ ಭಂಡಾರದಲ್ಲಿ ಇಂತಹ ಹಸ್ತಪ್ರತಿಗಳನ್ನು ಗಮನಿಸಬಹುದು. ಅಲಂಕಾರದ ಹವ್ಯಾಸವೇ ಕಾಲಾನುಕ್ರಮದಲ್ಲಿ ಕಡ್ಡಾಯವಾದ ಕಾರಣ ಕಲೆಯು ಪೂರ್ಣಪ್ರಮಾಣದಲ್ಲಿ ಹಸ್ತಪ್ರತಿಗಳಲ್ಲಿ ವ್ಯಾಪಿಸಿ ಕೊಂಡಿತು. ಕಲೆಯ ಈ ಕಾರಣದಿಂದ ಕಳೆದು ಹೋದ ಅನೇಕ ಮಹನೀಯರನ್ನು ಹಸ್ತಪ್ರತಿ ಚಿತ್ರಕಲೆಯಿಂದ ಕಾಯ್ದಿಟ್ಟು ಕೊಳ್ಳಬಹುದಾಗಿದೆ. ರಾಘವಾಂಕ ಚರಿತೆ (ಸಂಖ್ಯೆ 1174), ನಂಜುಂಡ ಕವಿಯ ವೃಷಭೇಂದ್ರ ವಿಲಾಸ, ಶಬರ ಶಂಕರ ವಿಲಾಸ ಶ್ರೀ ತತ್ವನಿಧಿ, ವಚನ ಶೋಧದಂತಹ ಅನೇಕ ಕೃತಿಗಳಲ್ಲಿ ಇಂತಹ ಅಲಂಕಾರಗಳನ್ನು ಗುರುತಿಸಬಹುದು.

ಕರ್ನಾಟಕದ ಹಸ್ತ ಪ್ರತಿಗಳ ಅಂಚುಗಳಲ್ಲಿ ರೇಖಾ ಚಿತ್ರಕಲೆ




೧.



೪.



೨.



೩.


ಕೃಪೆ :

೧, ೨. ಕುವೆಂಪು ಕನ್ನಡ ಅಧ್ಯಾಯನ ಸಂಸ್ಥೆ. ಮಾನಸಗಂಗೋತ್ರಿ, ಮೈಸೂರು ವಿಶ್ವ ವಿದ್ಯಾಲಯ, ಮೈಸೂರು.
೩ .ಸಂಸ್ಕೃತ ಸಂಶೋಧನಾ ಅಕಾಡೆಮಿ, ಮೇಲುಕೋಟೆ.
೪. ಶ್ರೀ ಮಂಜುನಾಥೇಶ್ವರ ಸಂಸ್ಕೃತಿ ಸಂಶೋಧನ ಸಂಸ್ಥೆ, ಧರ್ಮಸ್ಥಳ.

ಕರ್ನಾಟಕದ ಹಸ್ತ ಪ್ರತಿಗಳ ಅಂಚುಗಳಲ್ಲಿ ರೇಖಾ ಚಿತ್ರಕಲೆ



೧



೨



೩


ಕೃಪೆ:

೧, ೨. ಕುವೆಂಪು ಕನ್ನಡ ಅಧ್ಯಾಯನ ಸಂಸ್ಥೆ. ಮಾನಸಗಂಗೋತ್ರಿ, ಮೈಸೂರು ವಿಶ್ವ ವಿದ್ಯಾಲಯ.ಮೈಸೂರು.

೩. The Book in India, Published By: National Book Trust, Delhi

ಕರ್ನಾಟಕದ ಜ್ಯಾಮಿತಿ ಚಿತ್ರಕಲೆ- ಒಂದು ಅಧ್ಯಯನ

ಕರ್ನಾಟಕದ ತಾಳೆ ಗರಿಗಳಲ್ಲಿ ಭೂಮಿತಿ ರೇಖಾ ಚಿತ್ರಗಳು



ಕೃಪೆ:

ವೀರಶೈವ ಅಧ್ಯಯನ ಸಂಸ್ಥೆ,

ಜಗದ್ಗುರು ತೋಂಟದಾರ್ಯ ಸಂಸ್ಥಾನ ಮಠ, ಗದಗ.

ಕರ್ನಾಟಕದ ಹಸ್ತಪ್ರತಿ ಚಿತ್ರಕಲೆ- ಒಂದು ಅಧ್ಯಯನ

ಕರ್ನಾಟಕದ ತಾಳೆ ಗರಿ ಹಸ್ತಪ್ರತಿಗಳಲ್ಲಿ ಭೂಮಿತಿ ಚಿತ್ರಗಳು




ಕೃಪೆ:


ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ


ಮಾನಸ ಗಂಗೋತ್ರಿ ಮೈಸೂರು ವಿಶ್ವವಿದ್ಯಾಲಯ, ಮೈಸೂರು.

ಕರ್ನಾಟಕದ ಹಸ್ತಪ್ರತಿ ಚಿತ್ರಕಲೆ- ಒಂದು ಅಧ್ಯಯನ

ಕರ್ನಾಟಕದ ತಾಳೆ ಗರಿ ಹಸ್ತಪ್ರತಿಗಳಲ್ಲಿ ಅಕ್ಷರ ವಿನ್ಯಾಸಗಳು







ಕೃಪೆ :
ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ,
ಮನಸ ಗಂಗೋತ್ರಿ ಮೈಸೂರು ವಿಶ್ವ ವಿದ್ಯಾಲಯ, ಮೈಸೂರು.

ಕರ್ನಾಟಕದ ತಾಳೆ ಗರಿ ಹಸ್ತಪ್ರತಿಗಳಲ್ಲಿ ಭೂಮಿತಿ ಚಿತ್ರಗಳು

ಕರ್ನಾಟಕದ ಹಸ್ತಪ್ರತಿ ಚಿತ್ರಕಲೆ- ಒಂದು ಅಧ್ಯಯನ



ಕೃಪೆ :

ಶ್ರುತಿ ಕವೇಲಿ ಜೈನ ಹಸ್ತ ಪ್ರತಿ ಭಂಡಾರ,

ಶ್ರವಣ ಬೆಳಗೊಳ

ಹಸ್ತಪ್ರತಿಗಳಿಗೆ ಪೂರಕವಾಗಿರುವ ಅನೇಕ ಹಸ್ತಪ್ರತಿ ಚಿತ್ರಗಳಲ್ಲಿ ರೇಖಾ ಪ್ರಧಾನವಾದ ಶಿಷ್ಟರೂಪದ ಅನೇಕ ಹಸ್ತಪ್ರತಿಗಳನ್ನು ಕರ್ನಾಟಕದಾದ್ಯಂತ ಕಾಣುತ್ತೇವೆ. ತಾಳೇಗರಿಗಳಿಗಿಂದ ಅಧಿಕವಾಗಿ ಕಾಗದದ ಪ್ರತಿಗಳಲ್ಲಿಯೇ ಈ ರೇಖಾಚಿತ್ರಗಳು ದೊರೆಯುತ್ತವೆ. ಕನಕಗಿರಿಯ, ಕಿನ್ನಾಳ, ಶಿಖಾರಿಪುರ, ಎಂ.ಎ. ಚೆಟ್ಟಿ, ಶಂಕರರಾವ್ ಆಳಂದಕರ ಮಿಣಜಿಗಿ ಅಂತಹವರ ಅನೇಕ ಕೃತಿಗಳನ್ನು ನಾವು ಕಾಣುತ್ತೇವೆ.

ಈ. ಸಂಗೀತ ಮೂಲದ ಕರ್ನಾಟಕ ಹಸ್ತಪ್ರತಿ ಚಿತ್ರಗಳು :

ಸಂಗೀತ ಸರ್ವರಿಗೂ ಚಿರಪರಿಚಿತ ಶಾಸ್ತ್ರಸಂಗೀತ ತಿಳುವಳಿಕೆ ಇಲ್ಲದವರನ್ನು ನಮ್ಮ ದೇಶೀಯ ಜನಪದರು '' ಸಾಕ್ಷಾತ್ಪಶು'' ಎಂದು ಕರೆದಿದ್ದಾರೆ. ಅಂದರೆ ಸಂಗೀತ ಅವಿದ್ಯಾವಂತರಿಂದ ಹಿಡಿದು ಸಮಸ್ತರಿಗೂ ಚಿರಪರಿಚಿತವಾದಂತಹ ಜ್ಞಾನವಾಗಿದೆ.

ಯೋsಸೌಧ್ವನಿ ವಿಶೇಷಸ್ತು ಸ್ವರವರ್ಣ ವಿಭೂಷಿತಃ ।
ರಂಜಕೋ ಜನಚಿತ್ತಾನಾಂ ಸರಾಗಃ ಕಥಿತೋ ಬುಧೈಃ ॥

ಗೊಂಚಲು ಗೊಂಚಲಾದ ಸುಂದರ ಸ್ವರ ಸಮೂಹ ಇವುಗಳಿಂದ ಕೂಡಿ ಜನತೆಗೆ ಹರ್ಷವನ್ನು ಉಂಡು ಮಾಡುವ ಧ್ವನಿ ವಿಶೇಷಕ್ಕೆ ರಾಗ ಎಂದು ಮತಂಗನು ಘೋಷಿಸಿದಂದಿನಿಂದ ರಾಗವು ವಿವಿಧ ರೂಪಗಳಲ್ಲಿ ಸಂಗೀತವನ್ನು ನಮ್ಮ ಸಂಸ್ಕೃತಿಯ ಮುಖ್ಯ ಅಂಗವಾಗಿ ಬೆಳಗುವಂತಾಗಿದೆ.[೬೫]

ಚಿತ್ರ, ಶಿಲ್ಪ, ವಾಸ್ತು ಶಾಸ್ತ್ರಗಳಂತೆ ಸಂಗೀತವೂ ಒಂದು ಕಲಾ ಶಾಸ್ತ್ರ ಚಿತ್ರಕಲೆಗೆ ಪ್ರಕೃತಿಯೇ ಜನನಿಯಾದಂತೆ ಸಂಗೀತಕ್ಕೂ ನಿಸರ್ಗವೇ ತಾಯಿಯಾಗಿದೆ. ಶಿವನ ಕೈಯೊಳಗಿನ ಡಮುರಗವು ಪೃಥ್ವಿಯೊಳಗಿನ ಪ್ರಣವನಾದವನ್ನು ಸಾರುವ ಸಂಕೇತವೆಂದು ಕೆಲ ವಿದ್ವಾಂಸರು ಅಭಿಪ್ರಾಯ ಪಡುತ್ತಾರೆ. ಸಂಗೀತವನ್ನು ಕುರಿತು ಸಂಗೀತಜ್ಞರಾದ ಶ್ರೀ ಮ. ಶ್ರೀಧರ ಮೂರ್ತಿ ಹೀಗೆ ವಿವರಿಸುತ್ತಾರೆ.

ಕಾಮಶಾಸ್ತ್ರದ ವ್ಯಾಖ್ಯಾನಕಾರನಾದ ಯಶೋಧರನು- ಸ್ವರಪ್ರಧಾನವೂ ಲಯ ಪ್ರಧಾನವೂ ಚೇತನದ ಅವಧಾನ ಪ್ರಧಾನವೂ ಆದ ಗಾನ ಎಂದು ಗೀತಕ್ಕೆ ವಿವರಣೆ ನೀಡಿದ್ದಾನೆ. ಇದೇ ಸಂಗೀತವೆಂದು ಸುಪ್ರಸಿದ್ಧವಾಗಿರುವ ಕಲೆ. ಸಂಗೀತ ಸಾಮವೇದದಿಂದ ಹುಟ್ಟಿದ್ದು ಎಂಬುದು ನಮ್ಮ ನಂಬಿಕೆ ಇದನ್ನು ಗಂಧರ್ವ ವಿದ್ಯೆಗಳಲ್ಲಿ ಒಂದು ಎಂದು ಪರಿಗಣಿಸಲಾಗಿದೆ. ನಾರದ ಸನತ್ಕುಮಾರನನ್ನು ಪರಮಾರ್ಥ ತತ್ತ್ವೋಪದೇಶವನ್ನು ನೀಡುವಂತೆ ಪ್ರಾರ್ಥಿಸಿದಾಗ ತಾನು ಸಂಗೀತಾದಿ ದೇವಜನ ವಿದ್ಯೆಗಳನ್ನು ಸಹ ಅರಿತಿರುವುದಾಗಿ ವಿನಂತಿಸಿಕೊಳ್ಳುತ್ತಾನೆ ಎಂದು ಛಾಂದೋಗ್ಯೋಪನಿಷತ್ತಿನಲ್ಲಿ ಹೇಳಿದೆ. [೬೬]

ಭಾಷಾಶಾಸ್ತ್ರದ ಸಾಹಿತ್ಯವನ್ನು ಸಾದೃಶ್ಯಗೊಳಿಸಂದತೆ ಅಮೂರ್ತವಾದ, ಭಾವಪೂರ್ಣವಾದ ಸಂಗೀತವನ್ನು ಭಾರತೀಯ ಕಲಾವಿದರು ಬಣ್ಣಗಳಲ್ಲಿ, ರೇಖೆಗಳಲ್ಲಿ ಸಂಯೋಜಿಸಿ

೬೫. ಅ.ನ. ಕೃಷ್ಣರಾಯರು ಸಂ.: ಭಾರತೀಯ ಸಂಸ್ಕೃತಿ ದರ್ಶನ , ಬಿ.ವಿ.ಕೃಷ್ಣಶಾಸ್ತ್ರಿ ಪುಟ -೫೪೧.
೬೬.ಶ್ರೀಧರ ಮೂರ್ತಿ : 64 ಕಲೆಗಳು , ಪುಟ -೧..

ಸಂಗೀತವನ್ನು ಜೀವಂತವಾಗಿ ಇಟ್ಟಿದ್ದಾರೆ. ಆಕಾರವಿಲ್ಲದೆ ಆಸ್ತಿತ್ವದಲ್ಲಿರುವ ಗಾಳಿಯಂತಿರುವ ಗೀತಕ್ಕೂ ಆಕಾರ ಕೊಟ್ಟಿರುವ ಕಲಾವಿದರು ರಾಗಗಳನ್ನು ಚಿತ್ರ ಸ್ವರೂಪದಲ್ಲೇ ಹಿಡಿದಿಟ್ಟಿದ್ದಾರೆ. ಈ ಕುರಿತು ಹಿರಿಯ ವಿದ್ವಾಂಸರಾಗಿರುವ ಡಾ|| ಸದಾನಂದ ಕನವಳ್ಳಿಯವರು ಈ ರೀತಿ ವ್ಯಾಖ್ಯಾನಿಸುತ್ತಾರೆ. " ರಾಗಮಾಲಾ ಚಿತ್ರಗಳು ಸಂಗೀತ ಮತ್ತು ಚಿತ್ರಕಲೆ ಇವೆರಡೂ ಲಲಿತಕಲೆಗಳ ಸಂಗಮ ಪರಸ್ಪರ ಕೊಡುಕೊಳ್ಳುವಿಕೆಯಿಂದ ಶ್ರೀಮಂತವಾಗಿವೆ. ಸಂಗೀತ ಅಮೂರ್ತ ಕಲೆ, ಚಿತ್ರ ಮೂರ್ತಕಲೆ. ಸಂಗೀತವು ಕಾಲಘಟ್ಟದ ಅವಧಿಯಲ್ಲಿ ಅಭಿವ್ಯಕ್ತಗೊಂಡರೆ ಚಿತ್ರಕಲೆ ಆಕಾಶದಲ್ಲಿ ಅಭಿವ್ಯಕ್ತಗೊಳ್ಳುತ್ತದೆ. ಪ್ರತಿಯೊಂದು ಶ್ರವಣಾರ್ಹ ಧ್ವನಿಗೂ ಒಂದು ದೃಗ್ಗೋಚರ ಪ್ರತಿಮಾ ರೂಪವಿರುತ್ತದೆಂಬ ಗ್ರಹಿಕೆಯುಂಟು. ಆ ದೃಗ್ಗೋಚರ ಪ್ರತಿಮಾ ರೂಪವನ್ನು ರೇಖೆ ಬಣ್ಣಗಳಲ್ಲಿ ಸೆರೆ ಹಿಡಿಯುವ ಪ್ರಯತ್ನ ರಾಗಮಾಲಾ ಚಿತ್ರಗಳದ್ದು[೬೭]

ಭಾರತೀಯ ಹಸ್ತಪ್ರತಿ ಚಿತ್ರಕಲೆಯಂತೆ ಕರ್ನಾಟಕ ಹಸ್ತಪ್ರತಿ ಚಿತ್ರಕಲೆಯಲ್ಲೂ ರಾಗಮಾಲಾ ಚಿತ್ರಗಳ ಪ್ರಯೋಗ ನಡೆದಿದೆ ಒಂದು ರಾಗಮಾಲಾ ಹಸ್ತಪ್ರತಿ ಚಿತ್ರವು ಬರೀ ಒಂದು ಚಿತ್ರಕಲಾಕೃತಿಯಾಗಿರದೆ ಅದು ಸಾಹಿತ್ಯಕೃತಿಯೊಂದರ ಕಾವ್ಯ ಸಂಗೀತ ಮತ್ತು ಆಯಾ ಸಂಚಾರಿ ಭಾವಗಳ ಅಂತಶಿಸ್ತಿನ ತ್ರಿವೇಣಿ ಸಂಗಮವಾಗಿರುತ್ತದೆ. 17ನೇ ಶತಮಾನದಲ್ಲಿ ಭಾರತದಲ್ಲಿ ಜನ್ಮ ತಾಳಿದ ಈ ಕಲೆ ಜಾಗತಿಕ ಮಟ್ಟದಲ್ಲಿ ಎಲ್ಲೂ ರೂಪಗೊಂಡಂತೆ ಕಾಣುವುದಿಲ್ಲ. ಕಾವ್ಯ ಸಂಗೀತ ಚಿತ್ರಗಲ ಹೊಸ ಸಂಬಂಧದಲ್ಲಿ ಮೂಡಿ ಬಂದುದು ರಾಗಮಾಲೆಯ ಚಿತ್ರಕಲೆಯಾಗಿದೆ. ಈ ಕುರಿತು ವಿದ್ವಾಂಸರಾಗುವ ಸ್ಟೂಕ್ (Stooke) ಮತ್ತು ಖಂಡಲವಾಲಾ ಅವರು ಈ ರೀತಿ ವ್ಯಾಖ್ಯಾನಿಸುತ್ತಾರೆ. ಈ ಕಲೆಯನ್ನು ವಿಶೇಷವಾದ ಕಾವ್ಯ ಬಾವವನ್ನು ಚಿತ್ರಿಸಲು ಬಳಸಲಾಗಿದೆ. ಆ ಛಾಯೆಯ ಗುರಿ ಕಾವ್ಯಭಾವದ ವಿವರಣೆ ಚಿಕ್ಕದಾಗಿರಬೇಕು ಎಂಬುದಾಗಿತ್ತಲ್ಲದೆ ಶಾಸ್ತ್ರೀಯ ಸಂಗೀತ ಸ್ವರೂಪಕ್ಕೆ ಒಂದು ಭಾವುಕತೆ ಮತ್ತು ಮನೋಧರ್ಮವನ್ನು ನೀಡುವ ಮಹತ್ವಾಕಾಂಕ್ಷೆಯು ಅದರಲ್ಲಡಗಿತ್ತು.[೬೮]

ಸುಶೀಲಾ ಮಿಶ್ರಾ ಅವರು ರಾಗಮಾಲಾ ಚಿತ್ರಗಳಿಗಿರಬೇಕಾದ ವಿವರವನ್ನು ಹೀಗೆ ಉಲ್ಲೇಖಿಸುತ್ತಾರೆ. ಸಂಗೀತದ ಭಾವವನ್ನು ಕಲಾತ್ಮಕವಾಗಿ ಚಿತ್ರಿಸುವುದು ಆಗಿರುತ್ತದೆ. ಆ ವರ್ಷದ ಋತು, ಕಾಲ, ದಿನ ಇರುವ ಸ್ಥಳದಂತಹ ವಿವರಗಳೊಂದಿಗೆ ಪ್ರಖರವಾದ ತಿಳಿಹಸಿರು ವರ್ಣವನ್ನು ಹಿನ್ನೆಲೆಗೆ ಬಳಸಿದರೆ, ತಿಳಿನೀಲಿಬಣ್ಣವನ್ನು ಆಕಾಶಕ್ಕೆ, ಬಿಳಿಯನ್ನು ಭವನಗಳಿಗೆ, ಗುಲಾಬಿಯನ್ನು ಕಂಭಗಳಿಗೆ, ದಟ್ಟಕೆಂಪನ್ನು ಬಾಗಿಲು ಮುಂಚಾವಣಿಗಳಿಗೆ ಮತ್ತು ತಿಳಿಹಸಿರನ್ನು ಮಾಳಿಗೆಗಳಿಗೆ ಕೆಂಪು ಕೇಸರಿ ಕೆಂಗುಲಾಬಿ ಮತ್ತು ಹಳದಿಯನ್ನು ಮೇಲುಡುಗೆಗಳಿಗೆ. ಲಂಗ, ದಾವಣಿ, ದೇಹದ ಭಾಗಗಳಿಗೆ ಬಳಸಲಾಗುವುದು. ಕಪ್ಪು ಮತ್ತು ಬಂಗಾರದ ವರ್ಣವನ್ನು ಗಾಜಿನ ಕಿಟಕಿಗಳಿಗೆ,

---

೬೭. ಡಾ. ಎಸ್.ಸಿ. ಪಾಟೀಲ್ , ಸತ್ಯಾನಂದ ಪಾತ್ರೋಟ ಸಂ.: ನಿಜದ ನೆಲೆ : ಡಾ|| ಸದಾನಂದ ಕನವಳ್ಳಿ. ರಾಗಮಾಲಾ ಚಿತ್ರಗಳು, ಪುಟ -೩೪೨.

೬೮. Susheela Misra : Bhavan's Journal : 1982. Page -42.

ಪಾಟಲುಕಪ್ಪನ್ನು ನದಿಗಳಿಗೆ ಕೆಂಪನ್ನು ಆಕೃತಿಗಳ ಸಂಯೋಜನೆಗೆ ಬಳಸಬೇಕಲ್ಲದೆ ಗುಂಪಿನ ಸಂಯೋಜನೆಯಲ್ಲಿ ನಾಯಕ ನಾಯಕಿಯರು ಅನ್ಯರಿಗಿಂತ ಭಿನ್ನರಾಗಿರಬೇಕು.[೧೯]

ಸದಾನಂದ ಕನವಳ್ಳಿಯವರು ರಾಗಮಾಲಾ ಎಂದರೆ ರಾಗಗಳ ಮಾಏಲೆ ಎಂದಿದ್ದಾರೆ. ಚಿತ್ರಕಲೆಯು ರಾಗಮಾಲೆಯನ್ನು ವಸ್ತುವಾಗಿಸಿಕೊಳ್ಳುವ ಬಹುಪೂರ್ವದಲ್ಲಿಯೇ ಸಂಗೀತ ಮತ್ತು ಕಾವ್ಯ ರಾಗಮಾಲಾ ಕಲ್ಪನೆಯನ್ನು ರೂಢಿಯಲ್ಲಿ ತಂದಿದ್ದವು. ರಾಗಮಾಲಾ ಚಿತ್ರವು ಚಿಕಣಿ ಚಿತ್ರಕಲೆಯ ಒಂದು ಅಂಗ. ಚಿಕಣಿ ಎಂದರೆ ಚಿಕ್ಕಮ. ಅತೀ ಚಿಕ್ಕ ರಾಗಾಮಾಲಾಚಿತ್ರ $1^3/_4 \times 2$ ಇದ್ದರೆ ಅತಿ ದೊಡ್ಡದು $9^5/^8 \times 13^5/^8$ ಅಂಗುಲಗಳಲ್ಲಿ ಇರಬೇಕು. ಇವುಗಳ ಮಧ್ಯೆ ಎಲ್ಲಾ ರಾಗಗಳ ರಾಗಮಾಲಾ ಚಿತ್ರಗಳಿವೆ. ಲಭ್ಯವಿರುವ ಅತಿ ಪುರಾತನ ರಾಗಮಾಲಾ ಚಿತ್ರಸಂಪುಟ ಕ್ರಿ.ಶ. 1475 ರದ್ದು ಈ ರಾಗಮಾಲಾ ಚಿತ್ರಗಳು ಕಲ್ಪಸೂತ್ರದಲ್ಲಿ ಕಂಡುಬರುತ್ತವೆ. ಕಲ್ಪಸೂತ್ರ ತೀರ್ಥಂಕರ ದಿವ್ಯ ಚರಿತ್ರೆಗಳು 15ನೇ ಶತಮಾನದಲ್ಲಿ ಜೈನ ವ್ಯಾಪಾರಿಗಳು ಪರ್ಶಿಯಾದಿಂದ ಕಾಗದ ಆಮದು ಮಾಡಿಕೊಂಡರು ಕಾಗದದೊಂದಿಗೆ ಪರ್ಶಿಯನ್ ಚಿಕಣಿ ಚಿತ್ರಗಳು ಭಾರತಕ್ಕೆ ಬಂದವು.

ಕಾಗದವು ತಾಡೋಲೆಗಳಿಗಿಂತ ಭಿನ್ನ ಮೇಲ್ಮೆಯುಳ್ಳದ್ದು ಹಗುರಾದ ನಮ್ರವಾದದು ಮತ್ತು ತಾಳಿಕೆ ಬರುವಂತಹದು ಆಗಿದೆ. ಜೈನ ವಣಿಕರು ಕಲ್ಪ ಸೂತ್ರದ ಪ್ರತಿಗಳನ್ನು ಮಾಡಿಸಿ ಹಂಚುವ ಪುಣ್ಯಕಾರ್ಯ ಮಾಡಿದರು. ಪ್ರತಿಕಾರರು ಪುಟಗಳ ಅಂಚಿನಲ್ಲಿ ರಾಗಮಾಲಾ ಚಿತ್ರಗಳನ್ನು ಬಿಡಿಸಿದರು. ಕಲ್ಪಸೂತ್ರದಲ್ಲಿ ರಾಗಮಾಲಾ ಚಿತ್ರಗಳು ಒಂದು ಪರಂಪರೆಯಾಗಿ ಪ್ರವಹಿಸಿದೆ ಅಲ್ಲಿಗೇ ನಿಂತುಬಿಟ್ಟವು. ಅವುಗಳ ಪ್ರಭಾವ ಮುಂದೆ ಬಂದ ರಾಗಮಾಲಾ ಚಿತ್ರಗಳ ಮೇಲೆ ಕಾಣಿಸಲಿಲ್ಲ. ಅಷ್ಟೇ ಏಕೆ ಅವುಗಳ ಅಸ್ತಿತ್ವಕೂಡ 16 ನೇ ಶತಮಾನದಲ್ಲಿ ರಾಗಮಾಲಾ ಚಿತ್ರಗಳನ್ನು ಪುನರಾರಂಭಿಸಿದ ಚಿತ್ರಕಲಾವಿದರಿಗೆ ಗೊತ್ತಿರಲಿಲ್ಲವೆಂದರೂ ಸರಿಯೇ. ರಾಗಮಾಲಾ ಚಿತ್ರ ಪರಂಪರೆ 16ನೇ ಶತಮಾನದಿಂದ 19ನೇ ಶತಮಾನದವರೆಗೆ ಅವ್ಯಾಹತವಗಿ ಪ್ರವಹಿಸಿತು. ದಖನಿ, ರಾಜಸ್ಥಾನ, ಪಹಡಿ, ಕಾಂಗ್ರಾ, ಮೊಗಲ್, ಗುಜರಾತ್, ಜೈಪೂರು, ಬೂಂದಿ, ಮಾಳ್ವಾ ಮೊದಲಾದ ಶೈಲಿಗಳಾಗಿ ಕವಲೊಡೆಯಿತು. ಇವೆಲ್ಲವುಗಳಲ್ಲಿ ರಾಜಸ್ಥಾನಿ ಸಂಪ್ರದಾಯ ಪ್ರಮುಖವಾದದ್ದು. ರಾಜಮಾಲಾ ಚಿತ್ರಗಳು ಉತ್ತರಭಾರತದಲ್ಲಿ ಹುಟ್ಟಿ ಬೆಳೆದುದರಿಂದಲೇ ಹಿಂದುಸ್ತಾನಿ ರಾಗಗಳನ್ನು ವಸ್ತುವಾಗಿಸಿಕೊಂಡಿವೆ.[೨೦]

ನಾಡಿನ ಹಿರಿಯ ವಿದ್ವಾಂಸರು, ಚಿತ್ರಕಲಾವಿದರೂ ಚಿತ್ರಕಲಾಸಾಹಿತಿಗಳೂ ಆಗಿರುವ ಡಾ॥ ಸಾಲಿಗ್ರಾಮ ಕೃಷ್ಣ ರಾಮಚಂದ್ರರಾವ್ ಅವರು ಕರ್ನಾಟಕ ಹಸ್ತಪ್ರತಿ ಚಿತ್ರಗಳಲ್ಲಿ ಸ್ವರ ಚೂಡಾಮಣಿ, ಕರ್ನಾಟಕ ಸಂಗೀತದ ವಿವರಗಳ ಬೆಳವಣಿಗೆಯನ್ನು ಈ ರೀತಿ ಉಲ್ಲೇಖಿಸಿದ್ದಾರೆ.

ಮುಮ್ಮಡಿಯವರ ಕಾಲದಲ್ಲಿ ಪುಸ್ತಕಗಳಲ್ಲಿ ಚಿತ್ರವನ್ನಳವಡಿಸುವ ಪದ್ಧತಿ ವಿಶೇಷವಾಗಿ ಬೆಳೆದು ಬಂದಿತು. ಮುಮ್ಮಡಿಯವರೇ ರಚಿಸಿದ ಶ್ರೀ ತತ್ವನಿಧಿ ಸ್ವರಚೂಡಾಮಣಿ,

---

೧೯ Susheela Misra : Indian PaintingsThrough the Ages.

೨೦.ಎಸ್.ಕೆ. ರಾಮಚಂದ್ರರಾವ್ : ಶ್ರೀ ತತ್ವನಿಧಿ : ಸ್ವರಚೂಡಾಮಣಿ ಚಿತ್ರಗಳು, ಪುಟ-೧೫೦.

ಕರ್ನಾಟಕದ ಹಸ್ತಪ್ರತಿ ಚಿತ್ರಕಲೆ- ಒಂದು ಅಧ್ಯಯನ

ತತ್ತ್ವ ನಿಧಿ ಹಸ್ತ ಪ್ರತಿಗಳಲ್ಲಿ ರಾಗಮಾಲಾ ಚಿತ್ರಗಳು





ಕೃಪೆ :

ಮುಮ್ಮಡಿ ಕೃಷ್ಣ ರಾಜ ಒಡೆಯರವರ ಶ್ರೀ ತತ್ತ್ವ ನಿಧಿ

ಸಂಪಾದಕರು ಡಾ॥ಸಾಲಿಗ್ರಾಮ ಕೃಷ್ಣರಾಮಚಂದ್ರ ರಾವ

ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ,ಹಂಪಿ.

ಸಂಗೀತ ಆಧಾರಿತ ರಾಗಮಾಲಾ ಚಿತ್ರಗಳು



೧)



೨)

ಕೃಪೆ:

೧.ರಾಗ ಭಾಗ್ಯಶ್ರೀ ಕಲಾವಿದರು : ಶ್ರೀ ವಿ.ಟಿ.ಕಾಳೆ.ಸಂಡೂರು.

೨. ರಾಗ ಪಟಮಂಜರಿ , ಕಲಾವಿದರು : ಶ್ರೀ ಎಂ.ವಿ.ಮಿಣಜಗಿ.

ದೇವತಾನಾಮ ಕುಸುಮಾ ಮಂಜರಿ, ಮೊದಲಾದ ಹಸ್ತ ಲಿಖಿತ ಗ್ರಂಥಗಳಲ್ಲಿ ಚಿತ್ರಗಳದ್ದೇ ಸಿಂಹಪಾಲು. ಉಳಿದಂತೆ ಬರಹಾದಲ್ಲಿ ಸ್ವಾರಸ್ಯ ಅಷ್ಟಕ್ಕಷ್ಟೇ. ಈ ಪದ್ಧತಿ ಮೊಗಲಾಯಿ ಕಲೆಯಲ್ಲಿ ಪರ್ಶಿಯನ್ನ ಮೂಲದಿಂದ ಹೆಚ್ಚಾಗಿ ಕಾಣಸಿಗುತ್ತದೆ. ಅದು ನಮ್ಮ ದೇಶದಲ್ಲಿ ಏನಿಲ್ಲವೆಂದರೂ ಹತ್ತು ಹನ್ನೊಂದು ಶತಮಾನಗಳಿಂದ ಬಳಕೆಯಲ್ಲಿದ್ದಿತು. ಬಂಗಾಳ, ಬಿಹಾರದಲ್ಲಿ ಪಾಲ ಮನೆತನದ ಮತ್ತು ಸೇನ ಮನೆತನದ ದೊರೆಗಳು ಬೌದ್ಧಗ್ರಂಥಗಳನ್ನು ತಾಳಪತ್ರಗಳಲ್ಲಿ ಲಿಪಿ ಮಾಡಿಸುವಾಗ ಸಮಯೋಚಿತವಾಗಿ ವರ್ಣಚಿತ್ರಗಳನ್ನು ಕಿರುಪ್ರಮಾಣದಲ್ಲಿ ಬಿಡಿಸುವ ಕೆಲಸ ಪ್ರಾಂಭಿಸಿದರು. ಬುದ್ಧ ಅವನ ಜೀವಿತದ ಪ್ರಮುಖ ಪ್ರಸಂಗಗಳು ಬೋಧಿಸತ್ವರು. ಇಲ್ಲಿನ ಮುಖ್ಯವಸ್ತು ಆದರೆ ಅಲ್ಲಿ ಚಿತ್ರಣದಲ್ಲಿ ಬಳಸಿರುವ ಸಂವಿಧಾನವು ಅಜಂತಾ ಭಿತ್ತಿ ಚಿತ್ರಗಳದ್ದೇ. ಕಿರು ಚಿತ್ರಗಳಿಗೆ ಮಾರ್ಪಡಿಸಿಕೊಂಡಿದ್ದಾರಷ್ಟೇ ಅಂದರೆ ಸಾಂಪ್ರದಾಯಕ ಶೈಲಿಯನ್ನೇ ಅನುಸರಿಸಿದ್ದಾರೆ. ಗುಜರಾತಿನ ಜೈನ ಗ್ರಂಥ ಚಿತ್ರಗಳಿಗೂ ಇದೇ ಮಾತು ಅನ್ವಯವಾಗುತ್ತದೆ. ವೇರೂಳದ ಜೈನ ಗುಹೆಗಳಲ್ಲಿ ಕಾಣುವ ಸಂವಿಧಾನವನ್ನು ಇಲ್ಲಿ ಬೆಳೆಸಿಕೊಂಡಿದ್ದಾರೆ. ಗುಜರಾತಿನ ಪಾಟ್ಣಾಗಳಿಗೆ ತಾಳಪತ್ರ ಗ್ರಂಥಗಳ ಮರದ ರಕ್ಷಾ ಫಲಕಗಳ ಮೇಲೆ ಬಿಡಿಸಿರುವ ಹೂ, ಬಳ್ಳಿ ಹಕ್ಕಿ , ಪ್ರಾಣಿ, ಮೊದಲಾದ ಅಲಂಕರಣ ವಿನ್ಯಾಸಗಳಿಗೆ ಅಜಂತಿಯ ಭಿತ್ತಿ ಚಿತ್ರಗಳು ಸ್ಪೂರ್ತಿಯಾಗಿವೆ. 14ನೇ ಶತಮಾನದ ವೇಳೆಗೆ ಕಾಗದದ ಬಳಕೆ ಶುರುವಾಗಿ ಗ್ರಂಥರಚನೆಗೂ ಚಿತ್ರಣಕ್ಕೂ ಒದಗಿತು, ಶೈಲಿಯೆನೋ ಅದೇ ಮುಂದುವರೆಯಿತು.[೭೧]

ಕರ್ನಾಟಕದಲ್ಲಿಯೂ ರಾಗಮಾಲಾ ಚಿತ್ರನಿರ್ಮಾಣ ಪರಂಪರೆಯಲ್ಲಿ ಇದ್ದು ಅದು ಮೈಸೂರು ಅರಸರ ಪ್ರೋತ್ಸಾಹ ಮತ್ತು ಚಿತ್ರಗಾರ ನಾರಾಯಣಪ್ಪ, ಚಿನ್ನಕೃಷ್ಣ, ಚಿತ್ರಗಾರ ಮೇಸ್ತ್ರಿ ಲಕ್ಷ್ಮ ಯ್ಯನಂತವರಿಂದ ಕರ್ನಾಟಕದ ಹಸ್ತಪ್ರತಿ ಚಿತ್ರಕಲೆಯು ರಾಗಮಾಲಾ ಚಿತ್ರಕಲೆಯಾಗಿ ಮೂರ್ತಗೊಂಡರೂ ಆ ಪರಂಪರೆಯು ಆ ಕಾಲಕ್ಕೇ ನಿಲ್ಲದೆ ಮುಂದುವರೆಸಿಕೊಂಡು ಬಂದಿರುವ ಅನೇಕ ಮಹನೀಯರು ಇಂದಿಗೂ ಕರ್ನಾಟಕದಲ್ಲಿದ್ದಾರೆ. ಅಂತಹವರಲ್ಲಿ ಕೆ. ವೆಂಕಟಪ್ಪ, ಎಂ.ವ್ಹಿ ಮಿಣಜಗಿ, ಎಂ.ಎ. ಚಟ್ಟಿ , ವಿ.ಟಿ.ಕಾಳೆ, ಎಂ. ಶಂಕರರಾವ್ ಜೈನ್, ಎಚ್.ಎಲ್.ಎನ್.ಸಿಂಹಾ, ಎಚ್.ಶ್ರೀಹರಿ, ಲಲಿತಾಬಾಯಿ ಹೊಯ್ಸಳರಂತಹ ಅನೇಕರು ಇಂದಿಗೂ ಕ್ರಿಯಾಶೀಲರಾಗಿ ಕಾರ್ಯನಿರ್ವಹಿಸುತ್ತಿದ್ದಾರೆ.

III. ಶಿಷ್ಟ ಜನಪದ ಮೂಲದ ಹಸ್ತಪ್ರತಿ ಚಿತ್ರಕಲೆ

ಹಸ್ತಪ್ರತಿ ಚಿತ್ರಕಲೆಯಲ್ಲಿ ಜನಪದ ಮತ್ತು ಶಿಷ್ಟ ಗಳೆಂಬ ಎರಡು ವಿಧ ಇರುವಂತೆ ಇವೆರಡೂ ವಿಭಿನ್ನ ನೆಲೆಗಳು ಒಂದೇಯಾಗುವಂತಹ ಅನೇಕ ಹಸ್ತಪ್ರತಿಗಳು ಕರ್ನಾಟಕದಾದ್ಯಂತ ಹಸ್ತಪ್ರತಿ ಬಂಢಾರಗಳಲ್ಲಿ ದೊರೆಯುತ್ತವೆ. ಈ ಹಸ್ತಪ್ರತಿಗಳಲ್ಲಿಜನಪದ ಲಕ್ಷಣಗಳು ಮತ್ತು ಶಿಷ್ಟಪದದ ಲಕ್ಷಣಗಳು ಮೇಳವಿಸಕೊಂಡಿರುವಕಾರಣ ಇವುಗಳನ್ನು ಶಿಷ್ಟಜನಪದ ಮೂಲ ಹಸ್ತಪ್ರತಿಗಳಂದೇ ವರ್ಗೀಕರಿಸಲಾಗಿದೆ.

---

೭೧. ಡಾ. ಆರ್.ಸಿ. ಹಿರೇಮಠ : ಸೋಮನಾಥ ಚರಿತ್ರೆ, ಪ್ರಸ್ತಾವನೆಯಲ್ಲಿ.

ಕರ್ನಾಟಕದ ಹಸ್ತಪ್ರತಿ ಚಿತ್ರಕಲೆ- ಒಂದು ಅಧ್ಯಯನ

ಜಾನಪದ ಹಸ್ತ ಪ್ರತಿಗಳಲ್ಲಿ ವರ್ಣ ಚಿತ್ರಗಳು

ವಿಷಯ : ಶ್ರೀ ಕೃಷ್ಣ ಪಾರಿಜಾತ







ಕೃಪೆ :

ಸಂ॥ ಡಾ॥ಕೃಷ್ಣ ಕಟ್ಟಿ,ಪ್ರಸಾರಾಂಗ ಕನ್ನಡ ವಿಶ್ವ ವಿದ್ಯಾಲಯ.ಹಂಪಿ.

ಇವುಗಳಲ್ಲಿ ಜನಪದದ ದಟ್ಟ ಹಿನ್ನೆಲೆ ಶಿಷ್ಟ ಕಲೆಯೇ ಶಾಸ್ತ್ರಿಯತೆ ಇರುವದರಿಂದ ಇವುಗಳನ್ನು ಜನಪದ ಹಂತದಿಂದ ಮುಂದುವರೆದ ಭಾಗಗಳೆಂದು ಪರಿಗಣಿಸಿದರೂ ಇವುಗಳಲ್ಲಿ ಎರಡೂ ಅಂಶ ಇರುವದರಿಂದ ಕೆಲವು ಸಲ ಇವುಗಳನ್ನು ಪ್ರತ್ಯೇಕಿಸಲು ಆಗುವದೇ ಇಲ್ಲ. ಹೀಗಾಗಿ ಇವುಗಳನ್ನು ಸಮ್ಮಿಶ್ರಶೈಲಿಯ ಹಸ್ತಪ್ರತಿಗಳೆಂದು ಡಾ.ಎಸ್.ಸಿ.ಪಾಟೀಲರು ಗುರುತಿಸಿದ್ದಾರೆ.

ಅಪರಾಳ ತಮ್ಮಣ್ಣನ ಕೃಷ್ಣಪಾರಿಜಾತ, ವೀರಶೈವರ ಉದ್ಧರಣೆಗಳು, ಮತ್ತು ಪ್ರಾರಂಭಿಕ ಹಂತದಲ್ಲಿರುವ ದಖನಿ ಚಿತ್ರಗಳು ಸಮ್ಮಿಶ್ರ ಶೈಲಿಯ ಹಸ್ತಪ್ರತಿಗಳೆಂದೇ ಪರಿಗಣಿಸಬೇಕಾಗುತ್ತದೆ. ಡಾ. ಕೃಷ್ಣಕಟ್ಟಿಯವರು ಸಂಪಾದಿಸಿರುವ ಶ್ರೀಕೃಷ್ಣ ಪಾರಿಜಾತದಲ್ಲಿಯ ಒಟ್ಟು ಚಿತ್ರಗಳಲ್ಲಿ ಕೆಲವು ಪ್ರಬುದ್ಧವಾದ ಶಿಷ್ಟಪ್ರಧಾನವಾಗಿರುವಂತೆ ಇನ್ನೂ ಕೆಲವು ಮಧ್ಯಮ ಹಂತದಲ್ಲಿವೆ. ಕೊನೆಯ ಭಾಗದ ಚಿತ್ರಗಳು ವರ್ಣ ಮತ್ತು ರೇಖಾ ಸಂಯೋಜನೆಯಲ್ಲಿ ಪ್ರಾರಂಭಿಕ ಹಂತದಲ್ಲಿವೆ. ಇದೇ ರೀತಿ ಉದ್ಧರಣೆಗಳಲ್ಲಿ ಜನಪದ ಲಕ್ಷಣ ಹೊಂದಿದ ಶಿಷ್ಟ ಚಿತ್ರಗಳನ್ನು ನಾವು ಕಾಣುತ್ತೇವೆ.

ಕರ್ನಾಟಕ ಹಸ್ತಪ್ರತಿ ಚಿತ್ರಕಲೆಯ ಇತಿಹಾಸವನ್ನು ಕಟ್ಟಿ ಕೊಡಲು ವಸ್ತು ವಿಷಯಗಳನ್ನಾಗಿ ಕ್ರಿ.ಶ.ಪೂಕಾಲದಿಂದ ಪ್ರಾರಂಭಿಸಿ ಆಧುನಿಕ ಕಾಲದವರೆಗೂ ವಿಷಯವನ್ನು ವಿಸ್ತರಿಸಿಕೊಳ್ಳಲಾಗಿದೆ. ವೇದಕಾಲದಲ್ಲಿ ಹಸ್ತಪ್ರತಿಗಳ ನೇರವಾದ ಚಿತ್ರಗಳು ನಮಗೆ ದೊರೆಯಲಾರವು. ಏಕೆಂದರೆ ವೇದಕಾಲೀನ ಮಾಧ್ಯಮವು ಕೇವಲ ಶೃತಿ ಪಾತಳಿಯ ಮಾಧ್ಯಮವಾಗಿತ್ತು. ಸಂಸ್ಕೃತ ಯುಗದಿಂದ ಪ್ರಾರಂಭವಾದ ಹಸ್ತಪ್ರತಿಗಳು ಬಹು ವಿಭಿನ್ನಮಯವಾಗಿ ಕರ್ನಾಟಕದ ರಾಜ್ಯದಾದ್ಯಂತ ದೊರೆಯುತ್ತದೆ. ಈ ಎಲ್ಲಾ ಕರ್ನಾಟಕದ ಹಸ್ತಪ್ರತಿಗಳಿಗೆ ಅಧ್ಯಯನಕ್ಕೆ ಒಳಪಡಿಸುವದಕ್ಕಾಗಿಯೇ ವಿಸ್ತೃತ ವಿಷಯವನ್ನೇ ಜನಪದ, ಶಿಷ್ಟಪದ, ಜನಪದ ಶಿಷ್ಟ ಎಂಬ ಮೂರು ಭಾಗಗಳಲ್ಲಿ ವರ್ಗೀಕರಿಸಿಕೊಂಡು ಶಿಷ್ಟಪದದಲ್ಲಿ ಭಾಷಾ ಬೆಳವಣಿಗೆ ಹಿನ್ನೆಲೆ ಮತ್ತು ಧಾರ್ಮಿಕ ಬೆಳವಣಿಗೆಗಳ ಹಿನ್ನೆಲೆ ಇಟ್ಟುಕೊಂಡು ಅಧ್ಯಯನಕ್ಕೆ ಒಳಪಡಿಸಿಕೊಳ್ಳಲಾಗಿದೆ. ಇಲ್ಲಿ ಶಿಷ್ಟ ಮತ್ತು ಜನಪದ ಮೂಲದ ಸಮ್ಮಿಶ್ರಣದ ಶಿಷ್ಟ ಜನಪದದ ಹಸ್ತಪ್ರತಿಳಲ್ಲಿ ಪ್ರಮುಖವಾಗಿ ಚರ್ಚಿಸಲೇಬೇಕಾದ ಹಸ್ತಪ್ರತಿಯ ಚಿತ್ರಕಲೆ ಉದ್ಧರಣೆಯ ಚಿತ್ರಗಳು. ಈ ಚಿತ್ರಗಳನ್ನು ಶಿಷ್ಟ ಜನಪದದ ಅಡಿಯಲ್ಲಿ ಗುರುತಿಸಿ ಅಧ್ಯಯನ ಮಾಡಲಾಗಿದೆ.

ಶಿಷ್ಟ ಜನಪದ ಮೂಲದ ವೀರಶೈವ ಉದ್ಧರಣೆಯ ಹಸ್ತಪ್ರತಿ ಚಿತ್ರಗಳು :

ಆಧಾರಲಿಂಗ ಕುಂಡಲಿವಿಡಿದು; ಹೃದಯಕಮಲದಲ್ಲಿ ಬ್ರಹ್ಮ
ನಾಳದಲ್ಲಿ ವಿಷ್ಣು, ನಾಳಾಗ್ರದಲ್ಲಿ ರುದ್ರ,
ಭ್ರೂಮಧ್ಯದ ಮೇಲೆ ಈಶ್ವರನು, ಬ್ರಹ್ಮರಂಧ್ರದ ಮೇಲೆ ಸದಾಶಿವನು
ಶಿಖಾಗ್ರದಲ್ಲಿ ಸರ್ವಗತ ಶಿವನು
ಆದಿ ಅನಾದಿಯಿಲ್ಲದಂದು ಗುಹೇಶ್ವರಲಿಂಗ ನಿರಾಳನು

- ಅಲ್ಲಮ ಪ್ರಭು

ಮಾನವನು ಬೆಳೆಯುತ್ತಿರುವ ತನ್ನ ಬದುಕಿನ ಹತ್ತಿರದ ಎಲ್ಲಾ ವ್ಯವಹಾರವನ್ನು ತಾನು ಅರಿತ, ನುರಿತ ಭಾಷಾ ಮಾಧ್ಯಮದ ಗಡಿಯೊಳಗೆ ನಿರ್ವಹಿಸುತ್ತಿರುತ್ತಾನೆ. ಭಾವುಕತೆಯನ್ನು ಮನೋವೇದನೆಯನ್ನು ಕಾವ್ಯ, ಕತೆಗಳಂತಹ ಭಾಷಾ ಮಾಧ್ಯಮಗಳ ಮಿತಿಯಲ್ಲಿ ದಾಖಲುಗೊಳಿಸುತ್ತಲೂ ಇರುತ್ತಾನೆ. ಮಾನವನ ಸಾರಸ್ವತ ಬೆಳವಣಿಗೆಯ ಹಂತದ ನಂತರದ ಹಂತದಲ್ಲಿ ಮಾತಿನ ಧ್ವನಿ

ಕರ್ನಾಟಕದ ಹಸ್ತಪ್ರತಿ ಚಿತ್ರಕಲೆ- ಒಂದು ಅಧ್ಯಯನ

ಕರ್ನಾಟಕದ ತಾಳೆ ಗರಿ ಹಸ್ತಪ್ರತಿಗಳಲ್ಲಿ ರೇಖಾ ಚಿತ್ರಗಳು

ಕೃತಿ : ವೀರಶೈವ ಉದ್ಧರಣೆಗಳು



ಕೃಪೆ :

ಶ್ರೀ ಮಂಜುನಾಥೇಶ್ವರ ಸಂಸ್ಕೃತಿ ಸಂಶೋಧನಾ ಕೇಂದ್ರ

ಧರ್ಮಸ್ಥಳ.

ಘನೀಕರಣಗೊಳ್ಳುತ್ತದೆ. ಶಬ್ದದ ವಚನ ನಿರ್ವಚನಗೊಳ್ಳುತ್ತದೆ. ಬದುಕು ಬಯಲನ್ನು ಪ್ರವೇಶಿಸುತ್ತಿರುವಂತೆ ಭೌತದಾಚೆಗೆ ಆತ ನಿಲ್ಲುತ್ತಾನೆ. ಆಗ ಅಲ್ಲಿಯ ಎತ್ತರದಾಚೆಯ ಅಮೂರ್ತದ ಅನುಭಾವದ ಅನುಭವವನ್ನು ಮೂರ್ತಗೊಳಿಸಲು ಚಿತ್ರವನ್ನು, ವರ್ಣವನ್ನು ಮಾಧ್ಯಮವಾಗಿ ಬಳಸಿಕೊಳ್ಳುತ್ತಾನೆ. ಈ ರೀತಿಯ ಭಾಷೆಗೆ ಮೀರಿದ, ಭೌತದಾಚೆಯ ಬಯಲ ಬದುಕನ್ನು ಮಾನವನು ಅಧೀಮಕಾಲದಿಂದಲೂ ವ್ಯಕ್ತಪಡಿಸುತ್ತಲೇ ಬಂದಿದ್ದಾನೆ. ಇಂತಹ ಅಂತರಂಗದ ಅರಿವಿನ ಅನುಭಾವದ ಹೊರ ರೂಪಗಳನ್ನೇ ನಾವು ಉದ್ಧರಣೆಗಳೆಂದು ಕರೆಯಬಹುದು. ಇವು ವೀರಶೈವ ಧರ್ಮದಲ್ಲಿ ಉದ್ಧರಣೆಗಳಾದರೆ ಭಾಗವತರಲ್ಲಿ ಮುಂಡಿಗೆಗಳೆಂದು, ಬೌದ್ಧರಲ್ಲಿ ಟಂಕಾ ಚಿತ್ರಗಳೆಂದು ಯೋಗದಲ್ಲಿ ಕುಂಡನಿಗಳೆಂದು ಕರೆಯುತ್ತಾರೆ.

ವೀರಶೈವ ಸಾಹಿತ್ಯದಲ್ಲಿ ಸಕಿಲ, ಕುಂಡನಿ, ಕರುಣಹಸಿಗೆ, ಮಂತ್ರಗೋಪ್ಯಗಳು ಉದ್ಧರಣೆಯ ರೂಪದಲ್ಲಿ ಸಂಯೋಜನೆ ಗೊಂಡಿದೆ. ಇವುಗಳನ್ನು ಕುರಿತು ಹಿರಿಯ ವಿದ್ವಾಂಸರೂ. ಉದ್ಧರಣೆಗಳನ್ನು ಕುರಿತು ಮೊದಲು ಮಾತನಾಡಿರುವ ಡಾ|| ಶ್ರೀ ಜ.ಚ.ನಿಯವರು ಈ ರೀತಿಯಾಗಿ ವಿವರಿಸುತ್ತಾರೆ. ಅವರ ವಿವರವನ್ನು ಸೂಕ್ಷ್ಮವಾಗಿ ಗಮನಿಸೋಣ.

ವೀರಶೈವ ಸಾಹಿತ್ಯಕ್ಕೆ ವಿವಿಧ ಮುಖಗಳಿವೆ ಒಡಬು, ವಚನ, ರಗಳೆ, ಷಟ್ಪದಿ, ಕಂದ, ಸಾಂಗತ್ಯ, ತ್ರಿಪದಿ, ಚೌಪದಿ, ಕೈವಲ್ಯ ಇತ್ಯಾದಿ ಇವೆಯಲ್ಲದೆ ಇನ್ನೊಂದು ಬಗೆಯಲ್ಲಿ ವಿಷಯ ಪ್ರಧಾನವಾಗಿ ಹೇಳುವುದಾದರೆ ಅರ್ಚನ , ಸಾಹಿತ್ಯ, ಅರ್ಪಣ ಸಾಹಿತ್ಯ, ಅನುಭವ ಸಾಹಿತ್ಯ, ಅಷ್ಟಾವರಣ ಸಾಹಿತ್ಯ, ಪಂಚಚಾರ ಮತ್ತು ಷಟಸ್ಥಲ ಸಾಹಿತ್ಯ, ಸಕೀಲ ಸಾಹಿತ್ಯಗಳೂ ಉಂಟು. ಇನ್ನೊಂದು ಗಮನಾರ್ಹ ಸಾಹಿತ್ಯವೆಂದರೆ ಉದ್ಧರಣೆಯ ಸಾಹಿತ್ಯ ಇದು ವಾಙ್ಮಯವೂ ಹೌದು. ವರ್ಣಮಯವೂ ಹೌದು. ಇದನ್ನು ಅಂಗಲಿಂಗ ಸಾಹಿತ್ಯವೆಂದು ಹೇಳಬೇಕು. ಇದು ಅಂಕಿ, ಅಕ್ಷರ, ವರ್ಣಪ್ರಧಾನವಾದ ಸಾಹಿತ್ಯ. ಅಂತರಂಗವನ್ನು ಅರಿತುಕೊಳ್ಳಲು ಅನುವನ್ನುಂಟು ಮಾಡಲು ಸಾಂಕೇತಿಕ ದೃಶ್ಯ ಸಾಹಿತ್ಯ. ಸಾಂಖ್ಯಯೋಗ, ಮೀಮಾಂಸೆ ಮತ್ತು ಜ್ಯೋತಿಷ್ಯಗಳ ಸಮನ್ವಯ ಈ ಉದ್ಧರಣೆಯ ಸಾಹಿತ್ಯ. ಇವೆಲ್ಲಕ್ಕೂ ಮಿಗಿಲಾಗಿ ವೀರಶೈವ ಸ್ವಯಾನುಭೂತ ಸಕೀಲ ಸಮನ್ವಿತ ಸಾಹಿತ್ಯ.[೭೩]

ಗೌ.ಮ ಉಮಾಪತಿ ಶಾಸ್ತ್ರಿಗಳು(ಧರ್ಮಸ್ಥಳ) ಉದ್ಧರಣೆಗಳನ್ನು ಕುರಿತು ಹೀಗೆ ವಿವರಿಸುತ್ತಾರೆ " ಉದ್ಧರಣೆಗಳು ಎಂದರೆ ವೀರಶೈವ ತತ್ವಗಳ ಧಾರ್ಮಿಕ ರಹಸ್ಯವನ್ನು ತಿಳಿಸುವ ಪಾಠೋಪಕರಣ ಸಾಧನಗಳು. ಇಲ್ಲಿ ಉದ್ಧರಣಾ ಎಂದರೆ ಉತ್ +ಹರಣ ಎಂಬ ಎರಡು ಪದಗಳಿಂದ ಕೂಡಿದೆ. ಉತ್ ಎಂಬುದು ಊರ್ಧ್ವ ಪದದಿಂದ ಹುಡಿಕೊಂಡಿದೆ ಹರಣ ಎಂದರೆ ಲಯಗೊಳ್ಳು ಎಂದು, ಲೀನವಾಗು ಎಂಬ ಅರ್ಥವಿದೆ. ಇದರ ವ್ಯಾಪಕ ಅರ್ಥದಲ್ಲಿ ಭವ ಬಂಧನದಿಂದ ಮೇಲಕ್ಕೆ ಏಳು. ಈ ಬಂಧನದಿಂದ ಮುಕ್ತಗೊಂಡು ಪರಿಪೂರ್ಣ ಹಂತ ತಲುಪು ಎಂಬುದು ಇದರ ಒಳಾರ್ಥ. ಎಂದು ವಿವರಿಸಿದರು." [೭೪]

---

೭೩. ಡಾ. ಬಿ.ವಿ. ಶಿರೂರ ಸಂ.: ಗೌರವ, ಉದ್ಧರಣ ಸಾಹಿತ್ಯ , ಡಾ. ಶ್ರೀ ಜ.ಚ.ನಿ , ಪುಟ -೧೫೩.

೭೪. ಗೌ.ಮ. ಉಮಾಪತಿ ಶಾಸ್ತ್ರಿಗಳು, ನಿರ್ದೇಶಕರು : ಶ್ರೀ ಮಂಜುನಾಥೇಶ್ವರ ಸಂಸ್ಕೃತ ಸಂಶೋಧನಾ ಕೇಂದ್ರ. ಶ್ರೀ ಧರ್ಮಸ್ಥಳ. ಕ್ಷೇತ್ರ ಕಾರ್ಯದಲ್ಲಿ ಅವರು ತಿಳಿಸಿದ್ದು.

ಕರ್ನಾಟಕದ ಹಸ್ತಪ್ರತಿ ಚಿತ್ರಕಲೆ- ಒಂದು ಅಧ್ಯಯನ

ಕರ್ನಾಟಕದ ಕಾಗದದ ಹಸ್ತಪ್ರತಿಗಳಲ್ಲಿ ಉದ್ಧರಣೆಯ - ಚಿತ್ರಗಳು.









ಕೃಪೆ :

ಶ್ರೀ ಮಂಜುನಾಥೇಶ್ವರ ಸಂಸ್ಕೃತಿ ಸಂಶೋಧನಾ ಕೇಂದ್ರ, ಧರ್ಮಸ್ಥಳ

ಉದ್ಧರಣೆಗಳ ಕುರಿತು ಡಾ|| ಬಿ.ಕೆ. ಹಿರೇಮಠ ಅವರು ಹೀಗೆ ವಿವರಿಸುತ್ತಾರೆ. ''ಕರ್ನಾಟಕದ ಚಿತ್ರಕಲೆಯ ಬಹು ವಿಧಾನಗಳನ್ನು ಪರಿಚಯಿಸುವ ಉದ್ಧರಣೆಗಳಿಗೆ ಮಹತ್ವದ ಸ್ಥಾನವಿದೆ. ಕಲೆಗಾರಿಕೆ ಹಾಗೂ ಅನುಭಾವಗಳೆರಡೂ ಎರಕಗೊಂಡ ಅಪೂರ್ವ ರಚನೆಗಳಿವು. ಹೀಗಾಗಿ ಉದ್ಧರಣೆಯ ಚಿತ್ರಗಳಲ್ಲಿನ ಪ್ರತಿಯೊಂದು ರಚನೆಗೂ ಆಕೃತಿಗೂ ಇರುವ ಅರ್ಥವತ್ತಾದ ವಿವರಣೆಯನ್ನು ಗಮನಿಸಿದರೆ ಇಲ್ಲಿನ ಸಂಕೇತಗಳು ಶರಣರ ಬೆಡಗಿನ ವಚನಗಳಿಗೆ ತೀರಾ ಹತ್ತಿರವಾಗಿ ಕಾಣುತ್ತವೆ. ಇಂತಹ ಹಲವಾರು ಸಂಕೇತಗಳೇ ಚಿತ್ರಗಳಾಗಿ ಮೂಡಿ ನಿಲ್ಲುವ ಈ ಕೃತಿಗಳು ಕಣ್ಣಿಗೆ ಒಗಟಾಗಿ ಕಂಡರೂ ಇವು ಕೇವಲ ಕಲ್ಪನೆಯ ಅಥವಾ ಭ್ರಮೆಯ ಚಿತ್ರಗಳಲ್ಲ. ಇವುಗಳನ್ನು **ಅನುಭಾವದ ನಿಲುಗನ್ನಡಿಗಳೆಂದು ಹೇಳಬೇಕಾಗುತ್ತದೆ.** [೭೫]

ಕರ್ನಾಟಕದ ಹಸ್ತಪ್ರತಿಗಳಲ್ಲಿ ಉದ್ಧರಣೆಯ ಸಾಹಿತ್ಯವು ಪ್ರಮುಖವಾಗಿದ್ದು ಸಾಮಾನ್ಯವಾಗಿ ಕರ್ನಾಟಕದ ಹಸ್ತಪ್ರತಿ ಭಂಡಾರದಲ್ಲಿ ದೊರೆಯುತ್ತವೆ. ಉದ್ಧರಣೆಯ ಚಿತ್ರಗಳು ತಾಳೆಗರಿ ಮತ್ತು ಕಾಗದದ ಪತ್ರಗಳಲ್ಲಿ ಸಾಕಷ್ಟು ದೊರೆಯುತ್ತವೆ. ಇಂತಹ ಕೃತಿಗಳ ಕುರಿತು ಶ್ರೀ ಎಸ್. ಶ್ರೀಕಂಠ ಶಾಸ್ತ್ರಿಗಳು ಈ ರೀತಿಯಾಗಿ ಅಭಿಪ್ರಾಯ ಪಡುತ್ತಾರೆ. '' ಭಾತೀಯ ಚಿತ್ರಕಲೆ ತಾಂತ್ರಿಕ ಸಂಬಂಧದಿಂದ ಹುಟ್ಟಿದುದು. ಬಣ್ಣಗಳನ್ನು ಬಳಿಯುವುದು, ರೇಖೆಗಳನ್ನು ಕೊರೆಯುವುದು, ಚಿತ್ರಕಲೆಗೂ ಬ್ರಾಹ್ಮೀ ಅಕ್ಷರ ಮಾಲೆಗೂ ಅವಶ್ಯಕವಾದವು. ಶಿಲಾಯುಗದ ಗುಹೆಗಳಲ್ಲಿ ಕಂಡು ಬರುವ ಆದಿ ಜನಾಂಗದ ಚಿತ್ರಗಳೂ ಕೂಡ ತಾಂತ್ರಿಕವೆಂದು ಹೇಳಬಹುದು. ರೂಪವೆಂದರೆ ಬಣ್ಣ , ಆಕಾರವೆಂಬ ಎರಡು ಅರ್ಥಗಳೂ ಇವೆ. ನಾಮ ಮತ್ತು ರೂಪಗಳು ಮಾಯಾಪ್ರಪಂಚಕ್ಕೆ ಸೇರಿದವು. ಇವುಗಳಿಂದ ಸಚ್ಚಿದಾನಂದಗಳು ಪ್ರತ್ಯೇಕವಾಗಿದ್ದರೂ ಸಗುಣ ಬ್ರಹ್ಮ ಗುಣಗಳನ್ನು ದೂರದಿಂದಾದರೂ ನಾಮರೂಪಗಳು ಸೂಚಿಸಲು ಸಮರ್ಥವಾಗಬೇಕು. ಇಂತಹ ಕಾರ್ಯದಲ್ಲಿ ಮಂಡಲ ಚಿತ್ರಗಳು ಉಪಯುಕ್ತವಾದುದರಿಂದ ಭಾರತೀಯ ಚಿತ್ರಕಲೆಯಲ್ಲಿ ಪ್ರಾಶಸ್ತ್ಯವಿದೆ.[೭೬]

ಉದ್ಧರಣೆಗಳನ್ನು ಕುರಿತು ಡಾ|| ಕೆ. ರವೀಂದ್ರನಾಥರು ಹೀಗೆ ವಿವರಿಸುತ್ತಾರೆ. ಉದ್ಧರಣೆಗಳು ಚಿತ್ರಕ್ಕೆ ಚಿತ್ರವೂ ಹೌದು, ಸಾಹಿತ್ಯಕ್ಕೆ ಸಾಹಿತ್ಯವೂ ಹೌದು, ಶಾಸ್ತ್ರಕ್ಕೆ ಶಾಸ್ತ್ರವೂ ಹೌದು ಇವುಗಳ ರಚನಾಕಾರನಿಗೆ ಉನ್ನತ ಅಧ್ಯಯನ, ಪರಿಶ್ರಮ, ಹಲವು ವಿಷಯಗಳ ಜ್ಞಾನ, ಸಂಸ್ಕಾರಗಳಿರುವುದುನ್ನು ಗುರುತಿಸಿಕೊಂಡರೆ ಈ ಚಿತ್ರಗಳನ್ನು ಜಾನಪದ ಎನ್ನಬೇಕೋ ? ಬೇಡವೋ ಎಂಬ ಚರ್ಚೆ ವಿದ್ವಾಂಸರಲ್ಲಿದೆ. ಸಿಂಹ, ಜಿಂಕೆ, ಚಿಗುರೆ, ಹಾವು, ಮೀನು, ಕಪ್ಪೆ ಹಾಗೂ ಬಿಳಿ ಆಕಾರದ ಚಿತ್ರಗಳು ಶುದ್ಧ ಜನಪದ ಚಿತ್ರಕಲೆಗೆ ನಿದರ್ಶನಗಳಾಗಿವೆ. [೭೭]

ಚಿತ್ರಕಲೆ, ಜಾನಪದ ಮತ್ತು ಶಿಷ್ಟ ಸಾಹಿತ್ಯದಲ್ಲಿ ಕೃಷಿ ಮಾಡುತ್ತಿರುವ ಡಾ||

---

೭೫. ಡಾ. ಬಿ.ಕೆ. ಹಿರೇಮಠ : ಕನ್ನಡ ಹಸಪ್ರತಿ ಒಂದು ಅಧ್ಯಯನ, ಪುಟ-೧೯೭.

೭೬. ಪಿ.ಆರ್. ತಿಪ್ಪೇಸ್ವಾಮಿ ಪ್ರ.ಸಂ. : ಚಿತ್ರಕಲಾ ಪ್ರಪಂಚ : ಚಿತ್ರಕಲೆಯಲ್ಲಿ ಮಂಡಲ , ಶ್ರೀ ಎಸ್. ಶ್ರೀಕಂಠ ಶಾಸ್ತ್ರಿ ಪುಟ -೨೪೭

೭೭. ಡಾ. ಎಸ್.ಸಿ. ಪಾಟೀಲ್ , ಸತ್ಯಾನಂದ ಪಾತ್ರೋಟ ಸಂ.: ನಿಜದ ನೆಲೆ , ಡಾ.ಕೆ.ರವೀಂದ್ರನಾಥ, ಪುಟ -೭೨

ಕರ್ನಾಟಕದ ಹಸ್ತಪ್ರತಿ ಚಿತ್ರಕಲೆ- ಒಂದು ಅಧ್ಯಯನ

ಕರ್ನಾಟಕದ ತಾಳೆ ಗರಿ ಹಸ್ತಪ್ರತಿಗಳಲ್ಲಿ ರೇಖಾ ಚಿತ್ರಗಳು

ಕೃತಿ : ವೀರಶೈವ ಉದ್ಧರಣೆಗಳು



ಕೃಪೆ :

ಶ್ರೀ ಮಂಜುನಾಥೇಶ್ವರ ಸಂಸ್ಕೃತಿ ಸಂಶೋಧನಾ ಕೇಂದ್ರ

ಧರ್ಮಸ್ಥಳ.

ಎಸ್.ಸಿ.ಪಾಟೀಲರು, ಉದ್ಧರಣೆಗಳನ್ನು ಅನುಲಕ್ಷಿಸಿ ಹೀಗೆ ಉಲ್ಲೇಖಿಸಿದ್ದಾರೆ. ಉದ್ಧರಣೆ ಪಟಲದ ತಾಂತ್ರಿಕ ಚಿತ್ರಗಳು ಆಧ್ಯಾತ್ಮದ ಹಿನ್ನೆಲೆಯಿಂದ ಹುಟ್ಟಿಕೊಂಡಿರುವ ವರ್ಣ ಚಿತ್ರಗಳಾಗಿವೆ. ಶಬ್ದಕ್ಕೂ ಸಾಹಿತ್ಯಕ್ಕೂ ಮೀರಿರುವ ಇವು. ಜೀವ ವಿಕಾಸ, ಕಲಾವಿಕಾಸದ ಕೊಂಡಿಗಳಂತಿವೆ. ಉದ್ಧರಣೆಯ ಹಸ್ತಪ್ರತಿಯಲ್ಲಿ ಜಾನಪದ ಲಕ್ಷಣಗಳಿರುವಂತೆ ಶಿಷ್ಟ ಆಧ್ಯಾತ್ಮದ ಲಕ್ಷಣಗಳ ಸಂಕಲನದಂತಿವೆ.[೭೮]

ಡಾ. ಎಫ್.ಟಿ. ಹಳ್ಳಿಕೇರಿಯವರು ಉದ್ಧರಣೆಗಳ ಹಸ್ತಪ್ರತಿಗಳಲ್ಲಿ ಚಿತ್ರ, ವರ್ಣ ವಿನ್ಯಾಸ ಕುರಿತು ಹೀಗೆ ಉಲ್ಲೇಖಿಸಿದ್ದಾರೆ. ಕ್ರಿಯೆಗಳ ಸ್ವರೂಪ ಮತ್ತು ಅವುಗಳ ಪರಸ್ಪರ ಸಂಬಂಧವನ್ನು ತಿಳಿಯಪಡಿಸುವುದೇ ಉದ್ಧರಣೆ ಮತ್ತು ಸಕೀಲಗಳ ಮುಖ್ಯ ಉದ್ದೇಶ. ಇವುಗಳಲ್ಲಿ ಅಷ್ಟ ವಿಧ ಸಕೀಲಗಳು ನೂರೆಂಟು ವಿಧದ ಸಕೀಲಗಳು ಮತ್ತು ಇನ್ನೂರ ಹದಿನಾರು ಸಕೀಲಗಳು ಮುಖ್ಯವಾದವುಗಳು ಸಕೀಲಗಳನ್ನು ಆರು ಅಂಗ ಸ್ಥಳಗಳಿಗೆ ಇಲ್ಲವೇ ಒಂಬತ್ತು ಚಕ್ರಗಳಿಗೆ ಇಲ್ಲವೇ ಇಷ್ಟಲಿಂಗದ ಆರು ಸ್ಥಳಗಳಿಗೆ ಸಂಬಂಧಿಸಿ ವಿವೇಚನೆ ಮಾಡುವುದುಂಟು.[೭೯]

ಉದ್ಧರಣೆಯೊಳಗಿನ ಚಿತ್ರಗಳು ಸಾಂಕೇತಿಕ ಸ್ವರೂಪದಲ್ಲಿಯೇ ರೂಪಗೊಂಡು ಅಪಾರ ಅರ್ಥವನ್ನು ಪಾರಮಾರ್ಥಿಕ ತತ್ವಗಳನ್ನು ಸಾಂಕೇತಿಸಿಕೊಂಡಿವೆ ಎಂದು ಸ್ವಾಮಿ ಸ್ವಹಾನಂದರು ಹೀಗೆ ವಿವರಿಸುತ್ತಾರೆ. " ಸಂಕೇತವೆಂಬದು ನಾವು ಆಧ್ಯಾತ್ಮ ಸ್ವರೂಪದಲ್ಲಿ ಗುರುತಿಸಿಕೊಳ್ಳುವ ಅಂಕಿತವಾಗಿದೆ. ಗ್ರೀಕ್ ಮೂಲದ Symbolon ದ ಅರ್ಥವು ಕೂಡ ಇದನ್ನೇ ಹೇಳುತ್ತದೆ. ನೀನು ಯಾವುದನ್ನು ತಿಳಿದಿರುವಿ ಅದನ್ನು ಉಲ್ಲೇಖಿಸು. ಸಾಂಕೇತಿಕತೆಯು ಕಾಣಲಾರದನ್ನು ಕಾಣುವ ಜಗತ್ತಿಗೆ ಪ್ರತಿನಿಧಿಸುವ ಪ್ರಾತಿನಿಧಿಕವಾಗಿರುತ್ತದೆ.[೮೦]

ಇಂದಿನ ಕೆಲವು ಮಾನಸಿಕ ತಜ್ಞರು ಇಂತಹ ಸಂಕೇತಗಳ ಕುರಿತು ಅಧ್ಯಯನ ಕೈಗೊಂಡಿದ್ದಾರೆ. ಅವರು ಹೇಳುವ ವಿಚಾರಗಳು ನಮ್ಮ ನಿಲುವಿಗೆ ಎಟುಕದಿದ್ದರೂ ಅವರ ವಿಚಾರಗಳನ್ನು ಗಮನಿಸಬಹುದು. ಮಾನಸಿಕ ವಿದ್ವಾಂಸರಾಗಿರುವ ಡಾ|| ಮೇಸ್ ಅವರು ಹೀಗೆ ವಿವರಿಸುತ್ತಾರೆ. "ಸಂಕೇತಗಳನ್ನು ಪಾರಮಾರ್ಥಿಕ ಬದುಕಿನಲ್ಲಿರುವವರ ವೈಯಕ್ತಿಕ ಕನಸುಗಳೆಂದು ಇತ್ತಿಚೆಗೆ ಗುರುತಿಸಲಾಗುತ್ತಿದೆ. ಪಾರಮಾರ್ಥಿಕ ಚಿಂತನೆಯಲ್ಲಿ ಮೂಡಿಬಂದಿರುವ ಸಂಕೇತಗಳು ಕೇವಲ ವಸ್ತುವಾಚಕ, ಧಾರ್ಮಿಕ ಸಂಕೇತದ ಚಿತ್ರಗಳಲ್ಲಿ ಅವು ಪವಿತ್ರವಾದ ವಿಷಯವೊಂದನ್ನು ತಿಳಿಸುವ ಭಾಗಗಳಂತಿವೆ.[೮೧]

ಶಿಸ್ತು ಶಿಷ್ಟ ಮತ್ತು ಪ್ರಮಾಣ ಬದ್ಧ ಉದ್ಧರಣೆಯನ್ನು ನಾವು ಕಾಣುವುದು ಮೈಸೂರು ವಿಶ್ವವಿದ್ಯಾಲಯದ ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಯ ಹಸ್ತಪ್ರತಿ ಭಂಡಾರದಲ್ಲಿರುವ (ಕೆ.ಎ.312) ವೀರಶೈವ ಸಿದ್ಧಾಂತದ ಉದ್ಧರಣೆಯಲ್ಲಿ ಇಂತಹ 33 ಉದ್ಧರಣೆಯ ಅಮೋಘವಾದಂತಹ ಶಿಷ್ಟಬದ್ಧವಾದ ಚಿತ್ರಗಳಿವೆ. ಇವುಗಳನ್ನು ಮಹಾಶಿಲ್ಪಿ ಹಿರಿಯ ಕಲಾವಿದ ಸಿದ್ದಲಿಂಗಾಚಾರ್ಯರು ರಚಿಸಿರುವ ಕಾರಣ ಆಕಾರ,ಅಳತೆ, ಬಣ್ಣ ಸಂಯೋಜನೆಗಳಲ್ಲಿ ಶಾಸ್ತ್ರಸಂಬಂಧಿತ ಕ್ರಮಗಳನ್ನು ಅನುಸರಿಸಲಾಗಿದೆ. ಜಂಗಮ ಉದ್ಧರಣೆಯೊಳಗಿನ ಉಜ್ವಲ ಕಾಂತಿಯ ಜಂಗಮ

---

೭೮. ಡಾ. ಎಸ್.ಸಿ. ಪಾಟೀಲ್ , ಸತ್ಯಾನಂದ ಪಾತ್ರೋಟ ಸಂ.: ನಿಜದ ನೆಲೆ , ಡಾ. ಎಸ್.ಸಿ.ಪಾಟೀಲ್, ಪುಟ -೫೧

೭೯. ಡಾ. ಎಸ್.ಸಿ. ಪಾಟೀಲ್ , ಸತ್ಯಾನಂದ ಪಾತ್ರೋಟ ಸಂ.:ನಿಜದ ನೆಲೆ , ಡಾ.ಎಫ್.ಟಿ.ಹಳ್ಳಿಕೇರಿ, ಪುಟ -೫೧


೮೦. Swamy Swahnanda : Hind Symbol ogy & Other Essays. Page -1


೮೧. Dr. Mees : Psycology of the Unconscious Jung. Page - 02


ಕರ್ನಾಟಕದ ಕಾಗದದ ಹಸ್ತಪ್ರತಿಗಳಲ್ಲಿ ಉದ್ಧರಣೆಯ - ಚಿತ್ರಗಳು.

ಕಲಾವಿದ - ಶಿಲ್ಪ ಸಿದ್ಧಾಂತಿ ಸಿದ್ಧಲಿಂಗಾಚಾರ್ಯ

ಕರ್ನಾಟಕದ ಹಸ್ತಪ್ರತಿ ಚಿತ್ರಕಲೆ- ಒಂದು ಅಧ್ಯಯನ







ಕೃಪೆ :

ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ ಮಾನಸ ಗಂಗೋತ್ರಿ

ಮೈಸೂರು ವಿಶ್ವ ವಿದ್ಯಾಲಯ, ಮೈಸೂರು.

ಕರ್ನಾಟಕದ ತಾಳೆ ಗರಿ ಹಸ್ತಪ್ರತಿಗಳಲ್ಲಿ ರೇಖಾ ಚಿತ್ರಗಳು

ಕೃತಿ : ವೀರಶೈವ ಉದ್ಧರಣೆಗಳು




ಕೃಪೆ :


ಶ್ರೀ ಮಂಜುನಾಥೇಶ್ವರ ಸಂಸ್ಕೃತಿ ಸಂಶೋಧನಾ ಕೇಂದ್ರ


ಧರ್ಮಸ್ಥಳ.

ಕರ್ನಾಟಕದ ಕಾಗದದ ಹಸ್ತಪ್ರತಿಗಳಲ್ಲಿ ಉದ್ಧರಣೆಯ - ಚಿತ್ರಗಳು.

ಕರ್ನಾಟಕದ ಹಸ್ತಪ್ರತಿ ಚಿತ್ರಕಲೆ- ಒಂದು ಅಧ್ಯಯನ









ಕೃಪೆ :

ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ ಮಾನಸ ಗಂಗೋತ್ರಿ

ಮೈಸೂರು ವಿಶ್ವ ವಿದ್ಯಾಲಯ, ಮೈಸೂರು.

ಕರ್ನಾಟಕದ ಹಸ್ತಪ್ರತಿ ಚಿತ್ರಕಲೆ- ಒಂದು ಅಧ್ಯಯನ

ಕರ್ನಾಟಕದ ತಾಳೆ ಗರಿ ಹಸ್ತಪ್ರತಿಗಳಲ್ಲಿ ರೇಖಾ ಚಿತ್ರಗಳು

ಕೃತಿ : ವೀರಶೈವ ಉದ್ಧರಣೆಗಳು



ಕೃಪೆ :

ಶ್ರೀ ಮಂಜುನಾಥೇಶ್ವರ ಸಂಸ್ಕೃತಿ ಸಂಶೋಧನಾ ಕೇಂದ್ರ

ಧರ್ಮಸ್ಥಳ.

ಕರ್ನಾಟಕದ ಹಸ್ತಪ್ರತಿ ಚಿತ್ರಕಲೆ- ಒಂದು ಅಧ್ಯಯನ

ಕರ್ನಾಟಕದ ಕಾಗದದ ಹಸ್ತಪ್ರತಿಗಳಲ್ಲಿ ಉದ್ಧರಣೆಯ -ಚಿತ್ರಗಳು.



ಕೃಪೆ :

ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ ಮಾನಸ ಗಂಗೋತ್ರಿ

ಮೈಸೂರು ವಿಶ್ವ ವಿದ್ಯಾಲಯ, ಮೈಸೂರು.

ಮೂರ್ತಿಯ ಅಘೋರನಾಥನಾಗಿ ಅಕಾರ ನಂತರ ಬರುವ ಗಜಮರ್ಧನ, ಪರಮೇಶ್ವರನು ಗಜ ಚರ್ಮಾಂಬರನಾಗಿರುವ ಚಿತ್ರವಂತೂ ಅತ್ಯಂತ ಮನಮೋಹಕವಾಗಿದೆ.[೮೨] ಈ ಉದ್ಧರಣೆ ಕಟ್ಟಿನಲ್ಲಿ ಇಂತಹ ಅನೇಕ ಶಿಷ್ಟ ಜನಪದ ಲಕ್ಷಣಗಳ ಸಮ್ಮಿಶ್ರ ಚಿತ್ರಗಳು ಇವೆ.

ಒಟ್ಟಾರೆ ಹಸ್ತಪ್ರತಿ ಚಿತ್ರಕಲೆಯ ವಸ್ತು ವಿಷಯವನ್ನು ಮುಖ್ಯವಾಗಿ ಈ ಮೇಲಿನಂತೆ ವರ್ಗೀಕರಿಸಿಕೊಂಡು ಸ್ಥೂಲವಾದ ಅಧ್ಯಯನವನ್ನು ಮಾಡಲಾಗಿದೆ. ಜನಪದ ಮೂಲದ ಹಸ್ತಪ್ರತಿ ಚಿತ್ರಕಲೆ, ಶಿಷ್ಟಪದ ಮೂಲದ ಹಸ್ತಪ್ರತಿಚಿತ್ರಕಲೆಗಳೆಂದು ಮತ್ತು ಶಿಷ್ಟಜನಪದ ಮೂಲದ ಹಸ್ತಪ್ರತಿ ಚಿತ್ರಕಲೆಯೆಂದು ಮುಖ್ಯವಾಗಿ ವಿಂಗಡಿಸಿಕೊಂಡು ಅಧ್ಯಯನವನ್ನು ನಡೆಸಲಾಗಿದೆ. ಜನಪದ ಮೂಲದ ಹಸ್ತಪ್ರತಿ ಚಿತ್ರಕಲೆಯಲ್ಲಿ ಜನಪದ ಹಸ್ತಪ್ರತಿಗಳನ್ನು ಆಧಾರವಾಗಿಟ್ಟುಕೊಂಡು ಅಲ್ಲಿ ರಚನೆಯಾದ ರೇಖಾಚಿತ್ರ ಮತ್ತು ವರ್ಣಚಿತ್ರ ಅಲ್ಲದೆ ರೇಖಾವರ್ಣಚಿತ್ರಗಳನ್ನು ವಿಶೇಷವಾಗಿ ವರ್ಗೀಕರಿಸಿಕೊಂಡು ಚರ್ಚೆನಡೆಸಲಾಗಿದೆ. ಶಿಷ್ಟಪದ ಮೂಲದ ಹಸ್ತಪ್ರತಿಚಿತ್ರಕಲೆಯನ್ನು ಇಲ್ಲಿ ಗಂಭೀರವಾಗಿ ಅಧ್ಯಯನ್ನಕ್ಕೆ ಒಳಪಡಿಸಲಾಗಿದ್ದು ಶಿಷ್ಟಪದ ಮೂಲದಲ್ಲಿ ಭಾಷಾ ಮೂಲದ ಹಸ್ತಪ್ರತಿಚಿತ್ರಗಳು ಧಾರ್ಮಿಕ ಮೂಲದ ಹಸ್ತಪ್ರತಿಚಿತ್ರಗಳು ಮತ್ತು ಧಾರ್ಮಿಕೇತರ ಮೂಲದ ಹಸ್ತಪ್ರತಿಚಿತ್ರಗಳೆಂದು ವರ್ಗೀಕರಣ ಮಾಡಿಕೊಳ್ಳಲಾಗಿದೆ. ಭಾಷಾ ಮೂಲದ ಹಸ್ತಪ್ರತಿಯಲ್ಲಿ ಇನ್ನು ಅಧ್ಯಯನಕ್ಕೆ ಒಳಪಡದ ಪ್ರಾಕೃತ, ಸಂಸ್ಕೃತ ಅನ್ಯ ದೇಶೀಯ ಹಸ್ತಪ್ರತಿಗಳನ್ನು ಅಧ್ಯಯನಕ್ಕೆ ಒಳಪಡಿಸಿಕೊಳ್ಳಲಾಗಿದೆ. ಧಾರ್ಮಿಕ ಮೂಲದ ಹಸ್ತಪ್ರತಿಗಳಲ್ಲಿ ಬೌದ್ಧ, ಜೈನ, ವೀರಶೈವ, ವೈದಿಕ ಮತ್ತು ಮೊಹ್ಮದೀಯ ಹಸ್ತಪ್ರತಿ ಚಿತ್ರಗಳನ್ನು ವಿಷಯಗಳೊಂದಿಗೆ ವರ್ಗೀಕರಣ ಮಾಡಿಕೊಂಡಿದೆ.

ಧಾರ್ಮಿಕೇತರ ವಿಭಾಗದಲ್ಲಿ ಆರೋಗ್ಯ ಅಲಂಕಾರ ಮನೋರಂಜನೆ, ಸಂಗೀತ ಮೂಲದ ರಾಗಮಾಲಾ ಚಿತ್ರಗಳನ್ನು ಅಧ್ಯಯನ ಮಾಡಲಾಗಿದೆ. ಉತ್ತರ ಭಾರತದ ಹಿನ್ನಲೆಯಲ್ಲಿ ಹುಟ್ಟಿಕೊಂಡ ರಾಗಮಾಲಾ ಚಿತ್ರಪರಂಪರೆಯಂತೆ ಕನ್ನಡದ ಹಸ್ತಪ್ರತಿಗಳಲ್ಲಿ ಸಹ ರಾಗಮಾಲಾ ಚಿತ್ರಪರಂಪರೆ ಹಾಗೂ ಚಿಕಣಿ ಚಿತ್ರಪರಂಪರೆ ಮುಂತಾದ ದೇಶಿ ಚಿತ್ರಕಲೆ ಪ್ರಭಾವಗಳು ಹಸ್ತಪ್ರತಿ ಚಿತ್ರಕಲೆ ಮೇಲಾಗಿರುವದನ್ನು ಮತ್ತು ಅವುಗಳ ಪ್ರಮುಖ ಲಕ್ಷಣಗಳನ್ನು ಗುರುತಿಸುವ, ದಾಖಲುಗೊಳಿಸುವ ಪ್ರಯತ್ನವನ್ನು ಇಲ್ಲಿ ಮಾಡಲಾಗಿದೆ. ಈ ಅಧ್ಯಾಯದಲ್ಲಿ ಹಸ್ತಪ್ರತಿ ಚಿತ್ರಕಲೆ ವಿವಿಧ ರೀತಿಯಲ್ಲಿ ಅಧ್ಯಯನಕ್ಕೊಳಪಡಿಸಲಾಗಿದೆ. ಹಸ್ತಪ್ರತಿ ಚಿತ್ರಗಳ ವೈವಿಧ್ಯಮಯವಾದ ವಸ್ತು ವಿಷಯಗಳು ಮತ್ತು ಚಿತ್ರಗಳ ಸ್ವರೂಪವನ್ನು ಸಮೀಕ್ಷಿಸಲಾಗಿದೆ. ಇದು ಕಲಾಕ್ಷೇತ್ರದಲ್ಲಿ ಕೆಲಸಮಾಡುವವರಿಗೆ ಒಂದು ಹೊಸ ಅಧ್ಯಯನದ ಸಾಧ್ಯತೆಗಳನ್ನು ತೆರೆದಿಡುವ ಪ್ರಯತ್ನವಾಗಿದೆ.

*****

---

೮೨. ನಿರಂಜನ (ಸಂ.) ಜ್ಞಾನ ಗಂಗೋತ್ರಿ ಸಂಪುಟ -೫, ಪುಟ -೩೪೫



ಅಧ್ಯಾಯ : ಐದು

ಹಸ್ತಪ್ರತಿ ಚಿತ್ರಕಲೆ -ಕಲಾವಿದರು

ಜೀವನವದೊಂದು ಕಲೆ; ಕಲೆಯ ಕಲಿಸುವುದೆಂತು ?
ಸಾವಿರದ ನಿಯಮ ಯುಕ್ತಿಗಳನೊರೆದೊಡೆಯುಂ ॥
ಆವುದೋ ಕುಶಲತೆಯದೊಂದಿರದೆ ಜಯವಿರದು ।
ಆ ವಿವರ ನಿನ್ನೊಳಗೆ - ಮಂಕುತಿಮ್ಮ[೧]

ಕರ್ನಾಟಕದ ಪ್ರಾಚೀನ ಚಿತ್ರಲಾವಿದ ಕುರಿತು ವಿವರಗಳು ನಮಗೆ ಸಿಗುವದು ತುಂಬಾ ಅಪರೂಪ. ಅಲ್ಲಲ್ಲಿ ಅಲ್ಪ ಸ್ವಲ್ಪ ಹೆಸರುಗಳು, ವಿವರಗಳು ಹಸ್ತಪ್ರತಿ ,ಶಾಸನಗಳಲ್ಲಿ ಸಿಗುತ್ತಿದ್ದು ಅವುಗಳನ್ನು ಸಂಗ್ರಹಿಸಿ ಸ್ಥೂಲವಾಗಿ ಅವರ ಚರಿತ್ರೆಯನ್ನು ಕಟ್ಟಿಕೊಡುವ ಪ್ರಯತ್ನವನ್ನು ಇಲ್ಲಿ ಮಾಡಲಾಗಿದೆ.

ಪೌರಾಣಿಕ ನಂಬಿಕೆಯಂತೆ ಬ್ರಹ್ಮನ ನಾಲ್ಕು ಮುಖಗಳಿಂದ ವಿಶ್ವಕರ್ಮ, ಮಯ, ತ್ವಷ್ಟ ಮತ್ತು ಮನು ಜನಿಸಿದರು. ಇವರಲ್ಲಿ ಮಯನಿಂದ ಹುಟ್ಟಿದ ವರ್ಧಕಿ ಸಂತತಿಯವರು ಚಿತ್ರಕಲೆಯನ್ನು ಅನುರಸಿರಿಸಿದರು. ಮತ್ತೊಂದು ಮೂಲಕದ ಪ್ರಕಾರ ವಿಶ್ವಕರ್ಮದ ಒಂಭತ್ತುಜನ ಪತ್ರರಾದ ಮಾಲೆಗಾರ, ಕಮ್ಮಾರ, ಶಂಖಕಾರ, ನೇಕಾರ, ಕುಂಭಕಾರ, ಕಂಚುಕಾರ, ಸೂತ್ರಧಾರ, ಚಿತ್ರಗಾರ ಹಾಗೂ ಸ್ವರ್ಣಗಾ ಎಂಬುವರಲ್ಲಿ ಚಿತ್ರಗಾರನಿಂದ ಚಿತ್ರಕಲೆ ಬೆಳೆಯಿತು ಎಂಬ ವಿವರವಿದೆ. ವಿಶ್ವಕರ್ಮನಿಗೆ ಬ್ರಹ್ಮನಿಂದಲೇ ಚಿತ್ರಕಲೆ ಬೋಧಿಸಲ್ಪಡುತ್ತದೆ. ನಂತರ ಬ್ರಹ್ಮನ ಆದೇಶದಂತೆ

---

೧. ಡಿ.ವಿ.ಗುಂಡಪ್ಪ: ಮಂಕುತಿಮ್ಮನ ಕಗ್ಗ, ಸಂಖ್ಯೆ ೭೪೦. ಪುಟ- ೧೪೦

ಅರಮನೆಯಲ್ಲಿ ವೃತ್ತಿನಿರತ ಚಿತ್ರಕಲಾವಿದ



Courtesy :

Abhinava Publication
E-37. House khas, New Delhi-16.

ಭಯಾಜಿತ ಎಂಬ ರಾಜನಿಗೆ ವಿಶ್ವಕರ್ಮನು ಚಿತ್ರಕಲೆಯನ್ನು ಉಪದೇಶಿಸಿದನು. ರಾಜನು ನಗ್ನಜಿತ ಎಂಬ ಹೆಸರಿನಲ್ಲಿ ಚಿತ್ರಲಕ್ಷಣ ಗ್ರಂಥ ಪ್ರಚೂರಪಡಿಸಿದನು. ಚಿತ್ರಕ ಮಹಾರಾಜನು ಮುಕ್ತಕ ರಾಜನಿಂದ ಚಿತ್ರಕಲೆಯ ಉಪದೇಶ ಪಡೆದು ಅದನ್ನು ಬೆಳೆಸಿದನೆಂಬುದು ಸೋಮವಂಶ ಆರ್ಯಕ್ಷತ್ರಿಯರ ಪುರಾಣ ಹೇಳುತ್ತದೆ.

ಅನಿರುದ್ಧ ಉಷೆಯರಿಗೆ ವಿವಾಹ ಮಾಡಿದ ಚಿತ್ರಕಲೇಖೆಯಿಂದ ಚಿತ್ರಕಲೆ ಬಂದಿತೆಂದು ಆರ್ಯಕ್ಷತ್ರಿಯರು ನಂಬುತ್ತಾರೆ. ಮಾಂಡ್ಲ ಜನಪದ ಚಿತ್ರಕಾರರು ತಮಗೆ ಜಬ್ಬಲ್‌ಪುರದ ಬಳಿ ಇರುವ ಗರ್‌ಹದಲ್ಲಿನ ಸತಿಯೊಬ್ಬಳಿಂದ ಚಿತ್ರಕಲೆ ಬಂದಿತೆಂದು ಹೇಳುತ್ತಾರೆ. ಕಿಳ್ಳೇಕ್ಯಾತರ ಪಂಗಡ ಸ್ತ್ರೀಯೊಬ್ಬಳು ಅಕ್ಕಸಾಲಿಗನೊಬ್ಬನೊಂದಿಗೆ ಸಂಬಂಧವಿರಿಸಿಕೊಂಡು ಮಕ್ಕಳನ್ನು ಪಡೆದುಳೆಂದೂ, ಆತ ತನ್ನ ಮಗಕ್ಕಳಿಗೆ ಗೊಂಬೆ ತಯಾರಿಕೆ ಮತ್ತು ಚಿತ್ರಗಾರಿಕೆ ಕಲಿಸಿದನೆಂದು ಕಥೆಯಿದೆ. ಜೈನರಪ್ರಕಾರ ಆದಿ ದೇವನು ಅನಂತವಿಜಯನಿಗೆ ಚಿತ್ರಕಲೆ ಕಲಿಸಿಕೊಟ್ಟನೆಂದು ತಿಳಿದುಬರುವದು. ಬುದ್ಧನು ತನ್ನ ಚಿತ್ರ ಮೊದಲು ತಾನೇ ಬರೆದು ಕಲಾವಿದ ಶಿಷ್ಯರಿಗೆ ಬಣ್ಣ ತುಂಬುವದನ್ನು ತಿಳಿಸಿದನೆಂಬ ಐತಿಹ್ಯವಿದೆ. ನಾರಾಯಣನೆಂಬ ಋಷಿಯ ತಪೋಭಂಗ ಮಾಡಲು ಬಂದ ಅಪ್ಸರೆಯು ನಾಚುವಂತೆ ಮಾವಿನ ಎಲೆಯ ರಸದಿಂದ ಊರ್ವಶಿಯ ಚಿತ್ರವನ್ನು ತಮ್ಮ ತೊಡೆಯ ಮೇಲೆ ಬರೆದು ಅದಕ್ಕೆ ಜೀವ ತುಂಬಿದನು, ಅದೇ ಮೊದಲಚಿತ್ರವಾಯಿತು ಎಂಬ ವಿವರಗಳು ನಮಗೆ ಸಿಗುತ್ತವೆ.★

ಚಂದೇಲ ದೊರೆಗಳ ಕಾಲದ ಪ್ರಖ್ಯಾತ ಶಿಲ್ಪಿ ಚಿತ್ರಣಕನು ತಾನು ಚಿತ್ರಕಾರ ಕುಲದವನೆಂದೂ, ಸಕಲಶಿಲ್ಪ ವಿದ್ಯಾಕುಶಲನೆಂದು ಚಿತ್ರಕಾ ಶ್ರೀ ಸಾತಣನ ಮಗನೆಂದೂ ಶಾಸನವೊಂದರಲ್ಲಿ ಹೇಳಿಕೊಂಡಿದ್ದಾನೆ. ಬಹುಶಃ ಈತನ ಮಡದಿ ತಾನು ನಿರ್ಮಿಸಿದ ತಾರಾ ಭಗವತಿಯ ಶಿಲ್ಪದ ಮೇಲೆ ತಾನು ಚಿತ್ರಕಾರ ಶ್ರೀ ಸಾತಣನ ಸೊಸೆ ಎಂಬುದನು ಸಾತಣಸ್ಯ ವಧೂಕಸ್ಯ ಇಯಂ ಎಂದು ಹೇಳಿಕೊಂಡಿದ್ದಾಳೆ.

ವಡ್ಡಾರಾಧನೆ ಕೃತಿಯಲ್ಲಿ ಚಿತ್ರಕಥೆಗಳನ್ನು ಪಟಗಳಲ್ಲಿ ಬರೆದು ತೋರಿಸುತ್ತಿದ್ದ ವೈನಯಿಕ, ಸುಕೇಶಿನಿಯ ಕರುಮಾಡದ ಗೋಡೆಗಳ ಮೇಲೆಲ್ಲ ಚಿತ್ತಾರಿಗರಿಂದ ಚಿತ್ರ ಬರೆಯಿಸುವ ಅರಸ, ಹಿಂದಿನ ಜನ್ಮದ ಘಟನೆಗಳನ್ನು ನೆನೆದುಕೊಂಡು ಸ್ವತಃ ಚಿತ್ರಬರೆಯುವ ಸುಕೇಶನೆಯ ವಿವರಗಳು ಉಲ್ಲೇಖಗೊಂಡಿವೆ. ವಚನಕಾರರಾದ ಚೌಡಯ್ಯ, ಮುಧುವಯ್ಯಾದಿಗಳು ಹಸ್ತಪ್ರತಿಗಳಲ್ಲಿ ಚಿತ್ರರಚನೆ ಮಾಡುತ್ತಿದ್ದಿರಬಹುದು ಎಂಬ ವಿಚಾರವನ್ನು ಡಾ.ಬಿ.ಕೆ.ಹಿರೇಮಠರು ವ್ಯಕ್ತಿ ಪಡಿಸುತ್ತಾರೆ. ದಾಸ ಪರಂಪರೆಯಲ್ಲಿ ಆಗಿಹೋದ ಗೋಪಾಲದಾಸರು ಅಷ್ಟವರ್ಣಗಳನ್ನು ಬಳಸಿಕೊಂಡು ಧ್ಯಾನೋಪಾಸನ ವಿರಾಡ್ರೂಪ ಚಿತ್ರವನ್ನು (6X3/5)ಬರೆದಿರುವದನ್ನು ಸಹ ಅವರು ಉಲ್ಲೇಖಿಸಿದ್ದಾರೆ.

ಕನ್ನಡದ ಸಾಹಿತ್ಯ ಕೃತಿಗಳಲ್ಲಿ ಹಸ್ತಪ್ರತಿ ಚಿತ್ರಕಲಾವಿದರು :

ಚೀರಘಟ್ಟ:

ಕರ್ನಾಟಕದ ಪ್ರಾಚೀನ ಕನ್ನಡ ಸಾಹಿತ್ಯದಲ್ಲಿ ಮೊಟ್ಟಮೊದಲಿಗೆ ಸಿಗುವ ಚಿತ್ರಕಲಾವಿದನ ಹೆಸರೆ ''ಚೀರಘಟ್ಟ'' ಪ್ರಾಚೀನ ಆದಿಕವಿ ಪಂಪನ ನಂತರ ಬರುವ ಜೈನ

★ ಯಾದಪ್ಪ ಪರದೇಶಿ : ಉತ್ತರಕರ್ನಾಟದ ಭಿತ್ತಿಚಿತ್ರಕಲೆ ಒಂದು ಅಧ್ಯಯನ, ಪುಟ- ೪೭೯-೪೮೦

ಮಹಾಕವಿಯಾಗಿರುವ ಪೊನ್ನಕವಿಯು ತನ್ನ ಶಾಂತಿ ಪುರಾಣದಲ್ಲಿ ಮೊದಲು ''ಚೀರಘಟ್ಟ'' ಎಂಬ ಚಿತ್ರಕಲಾವಿದನ ಹೆಸರನ್ನು ಪ್ರಸ್ತಾಪಿಸಿದ್ದಾನೆ. ಚೀರಘಟ್ಟಿ ಎಂಬುದು ಪರಿಣಿತ ಚಿತ್ರಕಲಾವಿದನಾಗಿದ್ದ ಕಲಾವಿದನ ಹೆಸರೋ ? ವಿಶೇಷಣವೋ ? ಅಥವಾ ಅರಸರು ನೀಡಿರಬಹುದಾದ ಪ್ರಶಸ್ತಿಯೋ ? ಏನು ಎಂಬುದು ವಿವರವಾಗಿ ತಿಳಿದುಬಂದಿಲ್ಲ. ಖ್ಯಾತ ಚಿತ್ರಗಾರನಾಗಿದ್ದ ''ಚೀರಘಟ್ಟ''ಯ ಕುರಿತು ಹಿರಿಯ ವಿದ್ವಾಂಸರಾಗಿರುವ ಡಾ|| ಜಿ.ಎಸ್.ಶಿವರುದ್ರಪ್ಪ ಅವರು ಈ ರೀತಿಯಾಗಿ ವಿವರಿಸುತ್ತಾರೆ. ''ಪೊನ್ನನ ಶಾಂತಿ ಪುರಾಣದಲ್ಲಿ ಮೊದಲು ನಮಗೆ ''ಚಿರಘಟ್ಟ'' ಎಂಬ ಕಲಾವಿದನ ಹೆಸರು ದೊರೆಯುತ್ತದೆ.'' ವಿದೇಹದ ಬನವನ್ನು ವರ್ಣಿಸುತ್ತಾ ಪೊನ್ನನು

ನಯ ಮಳವಟ್ಟ ಪಟ್ಟಿ ಸಹಕಾರದೊಳಿಂಗುಳಿಕಂ ತಳಿರ್ತಶೋಕೆ
ಯೊಳರಿದಾಳ ಮುಳ್ಕಲರ್ದ ಸಂಪಗೆಯೊಳ್ ಕಡುಗಪ್ಪು ಭೃಂಗಕೋಟಿಯೊಳೆಸೆದಿರ್ದ
ನೀಲಗಿರಿ ಮಲ್ಲಿಗೆಯೊಳ್ ಸಮನಾಗೆ ''ಚಿರಘಟ್ಟ''ಯೆ
ಬರೆದಿಟ್ಟ ಬನಕ್ಕಣೆಯಾಯ್ತು ಬನಂ ವಿದೇಹದೊಳ್ [೨]

ಎಂದು ಹೇಳುತ್ತಾನೆ. ಮತ್ತೆ ಅಲ್ಲೇ ಜಲಕ್ರೀಡಾ ವರ್ಣನೆಯಲ್ಲಿ, ಜಲಕೇಳಿಯಾಡಿ ಬಟ್ಟೆಯುಡಲು ನಿಂತ ಹೆಣ್ಣೊಬ್ಬಳು '' ಬರೆಗುಂ ಬರೆಯಂ ದೊರೆವತ್ತ ಚೀರಘಟ್ಟಿಯುಮ್ ಎನೆ ಭಿತ್ತಿ ವೆತ್ತ ತೆರನೊಪ್ಪಿರ್ದುದು ಒರ್ವಳ ಅಪೂರ್ವ ಶೋಭೆಯಾ'' (8-40) ಎಂದು ಹೇಳುವಲ್ಲಿಯೂ ಚೀರಘಟ್ಟಿಯ ಹೆಸರು ಬಂದಿದೆ. ಮಲ್ಲಿನಾಥ ಪುರಾಣದಲ್ಲಿ ಎರಡು ಕಡೆ ಚೀರಘಟ್ಟಿಯ ಹೆಸರು ಬಂದಿದೆ. ಮಲ್ಲಿನಾಥ ಪುರಾಣದಲ್ಲಿ ಎರಡು ಕಡೆ ಚೀರಘಟ್ಟಿಯ ಹೆಸರು ಬರುತ್ತದೆ. ರಾಜನ ಬಳ್ಳಿಮಾಡದ ಕರು ಮಾಡದ ಬಾಗಿಲ್ವಾಡವು ''ಬರೆಯಲ್ಕೆ ಚಿರಘಟ್ಟಿಗಮ್ ಅರಿದೆನಿಪುದು'' (2-69) ಎನ್ನುವಲ್ಲಿಯೂ, ರಾಜನು ಚಿತ್ರವೊಂದನ್ನು ಮೆಚ್ಚಿಕೊಂಡು. ಈ ತ್ರಿಭಂಗ ದಿಂ ಚೀರಘಟ್ಟಿಗೆ ಮಾನ ಭಂಗಮಂ ಪುಟ್ಟಿಸಿದುದು. (5-42), ಚೀರಘಟ್ಟಿಯ ಮಾಂಡವ್ಯನ ವಿಶ್ವಕರ್ಮನ ಅಳವಲು (5-44) ಎನ್ನುವಲ್ಲಿಯೂ ಚೀರಘಟ್ಟಿಯ ಹೆಸರಿದೆ. ಗುಣವರ್ಮನ ಪುಷ್ಪದಂತ ಪುರಾಣದಲ್ಲಿಯೂ, ರುದ್ರಭಟ್ಟನ ಜಗನ್ನಾಥ ವಿಜಯದಲ್ಲಿಯೂ, ಅಗ್ಗಳನ ಚಂದ್ರಪ್ರಭಾ ಪುರಾಣದಲ್ಲಿಯೂ ಈತನ ಹೆಸರು ಬಂದಿದೆ.

ಚೀರಘಟ್ಟಿ ಯಾರು ? ಯಾವ ಕಾಲದಲ್ಲಿದ್ದ ? ಎನ್ನುವ ವಿಚಾರ ತುಂಬ ಸ್ವಾರಸ್ಯವಾದುದಾದರೂ ಅದಕ್ಕೆ ಇನ್ನೂ ಸರಿಯಾದ ಉತ್ತರ ಸಿಕ್ಕಿಲ್ಲ ''ಪೊನ್ನನ ಪೂರ್ವದಲ್ಲಿ ಅಂದರೆ ಹತ್ತನೇ ಶತಮಾನದ ಆದಿಯಲ್ಲಿಯೇ ಕದಾಚಿತ್ ರಾಷ್ಟ್ರಕೂಟರ ಆಶ್ರಯದಲ್ಲಿ ಚೀರಘಟ್ಟ ಎಂಬ ಹೆಸರಿನ ಚಿತ್ರಶಿಲ್ಪಿ ಆಗಿ ಹೋಗಿರಬೇಕೋ ಏನೋ - ಚೀರಘಟ್ಟಿಯು ಐತಿಹಾಸಿಕ ಪುರುಷನಿರಬೇಕೆಂದು ಅನುಮಾನದಿಂದಾರೂ ಸಿದ್ಧವಾಗುವ ಪಕ್ಷಕ್ಕೆ ಕರ್ನಾಟಕದ ಚಿತ್ರಶಿಲ್ಪ ಚರಿತೆಯೊಳಗಿನ ಕದಾಚಿತ್ ಮೊಟ್ಟಮೊದಲಿನ ಮಹಾ ಪುರುಷನ ಹೆಸರು ತಿಳಿದಂತಾಗಬಹುದು.'' ಅವನು ಐತಿಹಾಸಿಕ ವ್ಯಕ್ತಿಯಾಗಿರುವುದು ಹೆಚ್ಚು ಸಂಭವವಲ್ಲವೇ [೩] ಎಂದು ಶ್ರೀಮಾನ್ ಬೇಂದ್ರೆಯವರು ಊಹಿಸುತ್ತಾರೆ. ಈ ಊಹೆಯ ಹೊರತು ಚೀರಘಟ್ಟಿಯನ್ನು ಕುರಿತು ಬೇರೆ ಯಾವ ಸಂಶೋಧನೆಯೂ ನಡೆದಂತೆ ತೋರುವುದಿಲ್ಲ.[೪]

---

೨. ಪೊನ್ನ ಕವಿಯ : ಶಾಂತಿಪುರಾಣ, ೧-೬೪

೩. ದ.ರಾ.ಬೇಂದ್ರೆ : ಸಾಹಿತ್ಯ ಸಂಶೋಧನೆ, ಪುಟ - ೧೩೪-೧೩೫

೪. ಡಾ.ಜಿ.ಎಸ್.ಶಿವರುದ್ರಪ್ಪ : ಸೌಂದರ್ಯ ಸಮೀಕ್ಷೆ , ಪುಟ- ೨೫೦-೨೫೧

ಚಿರಘಟ್ಟಿಯ ಕುರಿತು ಪೊನ್ನ (ಕ್ರಿ.ಶ.950), ಶಾಂತಿನಾಥ(ಕ್ರಿ.ಶ.1068), ನಾಗಚಂದ್ರ (ಕ್ರಿ.ಶ.1100), ರುದ್ರಭಟ್ಟ (ಕ್ರಿ.ಶ.1185) ಅಗ್ಗಳ(ಕ್ರಿ.ಶ.1189), ಗುಣವರ್ಮ(ಕ್ರಿ.ಶ. 1215) ಇವರುಗಳ ಕೃತಿಯಲ್ಲಿ ಉಲ್ಲೇಖಗೊಂಡಿದ್ದಾನೆ. ಬೇಂದ್ರೆಯವರು ಹೇಳುವಂತೆ ಈತ ಒಬ್ಬ ಐತಿಹಾಸಿಕ ಪುರುಷ ಎನ್ನುವದರಲ್ಲಿ ಸಂದೇಹವಿಲ್ಲ. ಈತ 12ನೇ ಶತಮಾನದಲ್ಲಿ ಆಗಿಹೋದ ಕಲಾವಿದನಾಗಿರುವ ಸಾಧ್ಯತೆ ಇದೆ. ಕಾರಣ ಕ್ರಿ.ಶ.10 ಶತಮಾನದಲ್ಲಿ ಸಮಕಾಲೀನ ಕವಿಗಳು ಇತನು ಉಲ್ಲೇಖಿಸಿದ್ದಾರೆ. ನಂತರದಲ್ಲಿ ಹದಿಮೂರನೆ ಶತಮಾನದವರೆಗೂ ಕೆಲವರು ಈತನನ್ನು ಉಲ್ಲೇಖಿಸಿದ್ದಾರೆ. ಹಾಗಾಗಿ ಈತ ಒಬ್ಬ ಪ್ರಸಿದ್ಧ ಚಿತ್ರಕಾರನಾಗಿದ್ದುದು ನಮಗೆ ಇಲ್ಲಿ ತಿಳಿದುಬರುತ್ತದೆ.[೫]

ಕರ್ನಾಟಕ ಚಿತ್ರ, ಸಾಹಿತ್ಯ ಮತ್ತು ಸಂಗೀತ ಶಾಸ್ತ್ರಗಳನ್ನು ಬಲ್ಲಂತಹ ಶ್ರೀ ಬಿ.ವಿ.ಕೆ.ಶಾಸ್ತ್ರಿಯವರು ಕನ್ನಡ ಸಾಹಿತ್ಯದಲ್ಲಿ ಬರುವಂತಹ ಚಿತ್ರಕಲೆ, ಚಿತ್ರ ಕಲಾವಿದರ ಬಗೆಗೂ ವ್ಯಾಪಕವಾದ ವಿವರವನ್ನು ಹನ್ನೊಂದನೇ ಶತಮಾನದ ನಾಗಚಂದ್ರನ ಕಾವ್ಯವನ್ನು ಉದಾಹರಿಸುತ್ತಾ ಈ ರೀತಿ ವಿವರಿಸುತ್ತಾರೆ. '' ವೈಶ್ರವಣ ಮಹಾರಾಜ ಒಂದು ದಿನ ರಾಜಕಾರ್ಯ ಎಲ್ಲಾ ಮುಗಿದ ಮೇಲೆ, ಸರಸ, ಸಲ್ಲಾಪ, ಸಂಗೀತ ಗೋಷ್ಟಿಯಲ್ಲಿ ವಿದ್ವತ್ ಜನರೊಡನೆ ಕುಳಿತಿದ್ದಾನೆ. ಆಗ ಅಲ್ಲಿಗೆ ಒಬ್ಬ ಚಿತ್ರಕ ಅಥವಾ ಚಿತ್ರಕಾರ ಬರುತ್ತಾನೆ. ಅವನ ಬೆರಳುಗಳ ಅಂಚುಗಳು, ಉಗುರುಗಳು'' ಪತ್ತಿದಿಂಗುಲೀಕದಿಂದ್ವಿಗುಣಿಸೆ - ಬಣ್ಣಗಳು ಹತ್ತಿಕೊಂಡು ಹೊಳೆಯುತ್ತಿವೆ. ಎಂದು ವರ್ಣಿಸಿರುವ ಕೃತಿಕಾರನ ಜಾಡನ್ನೇ ಹಿಡಿದು ಸಾಗುವ ಲೇಖಕರು ಕಲಾವಿದ ಚೀರಘಟ್ಟಿಯ ಬಗೆಗೆ ರಾಜನು ಹರ್ಷಿತನಾಗಿರುವುದನ್ನು ವಿವರಿಸುತ್ತಾ ಚೀರಘಟ್ಟಿಯ ಬಗೆಗೆ ಈ ರೀತಿ ವಿವರಿಸುತ್ತಾರೆ.

ಇಲ್ಲಿ ಬರುವ ಚೀರಘಟ್ಟಿ ಎಂಬ ಪದವು ಗಮನಾರ್ಹವಾದುದು. ಕರ್ನಾಟಕದ ಇತಿಹಾಸದಲ್ಲಿ ಅನೇಕ ಕಲಾವಿದರು ಹುಟ್ಟಿ ತಮ್ಮ ಪ್ರತಿಭೆಯನ್ನು ತೋರಿ ಮರೆಯಾಗಿದ್ದಾರೆ. ಆದರೆ ಅವರ ಯಾರ ಹೆಸರೂ ಉಳಿದು ಬಂದಿಲ್ಲ. ಹೊಯ್ಸಳ ಶಿಲ್ಪಗಳ ಕೆಲವು ಹೆಸರು ಮಾತ್ರ ಉಳಿದಿವೆ. ಈ ಹಿನ್ನಲೆಯಲ್ಲಿ ಚೀರಘಟ್ಟಿ ಎಂಬ ಪದವನ್ನು ಪರೀಶೀಲಿಸಬೇಕಾಗಿದೆ. ಕನ್ನಡ ಕಾವ್ಯಗಳಲ್ಲಿ ಚಿತ್ರಕಲೆಯ ಪ್ರಸ್ತಾಪ ಬಂದಾಗಲೆಲ್ಲಾ ಬಹುಶಃ ಚೀರಘಟ್ಟಿಯ ಹೆಸರೂ ಬರುತ್ತದೆ. ಆ ಚಿತ್ರಣದ ಗುಣವನ್ನು ಅಳೆಯುವ ಮಾನದಂಡದಂತೆ ಚೀರಘಟ್ಟಿಯ ಹೆಸರನ್ನು ಪ್ರಸ್ತಾಪಿಸಲಾಗುತ್ತಿದೆ.

ಚೀರಘಟ್ಟಿಯು ಬರೆದಿಟ್ಟ ಚಿತ್ರ ಬನಕ್ಕೆಣೆಯಾಯ್ತು ಎಂದಿದೆ ಶಾಂತಿ ಪುರಾಣ ಅದರಂತೆ ''ವಿಶ್ವಕರ್ಮನ, ಮಾಂಡವ್ಯನ, ಚೀರಘಟ್ಟಳವಲ್ಲೇಂದಳ್ಕರಿಂ'' ಎಂದಿದೆ ಜಗನ್ನಾಥ ವಿಜಯದಲ್ಲಿ. ಹೀಗೆ ಸುಮಾರು ಹತ್ತನೆ ಶತಮಾನದಿಂದ ಹನ್ನೆರಡನೇ ಶತಮಾನದ ಅನೇಕ ಕಾವ್ಯಗಳಲ್ಲಿ ಚೀರಘಟ್ಟಿಯ ಪ್ರಶಂಸೆ ಬರುತ್ತದೆ. ಇದರಿಂದ ಕರ್ನಾಟಕ ಚಿತ್ರಕಲಾ ಇತಿಹಾಸದಲ್ಲಿ ಚೀರಘಟ್ಟಿ ಎಂಬ ಒಬ್ಬ ಮಹಾನ್ ಕಲಾವಿದನಿದ್ದ ಎಂದು ಊಹಿಸಬಹುದು.[೬] ಇದಕ್ಕಿಂತ ಸದ್ಯದಲ್ಲಿ ಇನ್ನೂ ಹೆಚ್ಚು ಮಾಹಿತಿ ದೊರೆತಿಲ್ಲ.

---

೫. ಯಾದಪ್ಪ ಪರದೇಶಿ : ಉತ್ತರಕರ್ನಾಟದ ಭಿತ್ತಿಚಿತ್ರಕಲೆ ಒಂದು ಅಧ್ಯಯನ, ಪುಟ- ೪೮೨

೬. ಬಿ.ವಿ.ಕೆ.ಶಾಸ್ತ್ರಿ: ಚಿತ್ರಕಲಾ ಪ್ರಪಂಚ, ಪುಟ-೯೫

ಬಹು ಮೌಲಿಕವಾದ ಕರ್ಣಾಟಕದ ಕಲೆಯ ಬಗ್ಗೆ 'ರಸಯೋಗಿ' (ಗೆಳೆಯರ ಗುಂಪು)ಯವರು ವಿವರವಾದ ವಿವರಣೆಯನ್ನು ಈ ರೀತಿ ನೀಡುತ್ತಿದ್ದಾರೆ. ಇತ್ತೀಚೆಯ ನಮ್ಮ ಚಿತ್ರ ಕಲೆಯ ಬಗ್ಗೆ ನಮಗೇನೂ ಗೊತ್ತಿಲ್ಲವೆಂದರೂ ಸಲ್ಲುವುದು. ಮುಮ್ಮಡಿ ಕೃಷ್ಣರಾಜರ ಆಸ್ಥಾನದಲ್ಲಿದ್ದ ಚಿತ್ರಗಾರ ತಿಪ್ಪಣ್ಣನವರ ಹೆಸರು, ಜಗನ್ಮೋಹನ ಪ್ರಾಸ್ತಾಪದಲ್ಲಿರುವ ಕೆಲವೊಂದು ಚಿತ್ರಗಳೂ, ಹಂಪೆಯ ವಿರೂಪಾಕ್ಷೇಶ್ವರ ರಂಗ ಮಂಟಪನ ಮೇಲ್ಗಡೆ ಬರೆಯಲ್ಪಟ್ಟ ಎರಡು ವಿಶಾಲ ಚಿತ್ರಗಳು, ವಿಜಾಪುರ ವಸ್ತು ಸಂಗ್ರಹಾಲಯದೊಳಗಿನ ಕೆಲ ಚಿತ್ರಗಳೂ ಇವಷ್ಟನ್ನೂ ಬಿಟ್ಟರೆ ನಮ್ಮ ಚಿತ್ರಗಾರರು ಬರೆದ ಚಿತ್ರಗಳು ಎಂದು ತೋರಿಸಲು ಇನ್ನು ಬೇರೆ ಇಲ್ಲವೇ ಇಲ್ಲ ವೆಂದರೆ ತಪ್ಪಾಗಲಾರದು.

"ಕರ್ನಾಟಕದ ಧುರೀಣ"ದ ವಿಶೇಷ ಸಂಚಿಕೆಯಲ್ಲಿ 'ಜಿಜ್ಞಾಸೆ' ಎಂಬ ತಮ್ಮ ಒಂದು ಲೇಖನದಲ್ಲಿ 'ಗೆಳೆಯರ ಗುಂಪಿನ'ನ ದತ್ತಾತ್ರೇಯ ಬೇಂದ್ರೆಯವರು ಪ್ರತಿಪಾದಿಸಿದಂತೆ "ಚೀರಘಟ್ಟ" ಯು ಕರ್ಣಾಟಕದ ಐತಿಹಾಸಿಕ ಪುರುಷನೆಂದೇ ನಿರ್ಣಾಯಿತವಾದರೆ, ಭಾರತೀಯ ಚಿತ್ರಶಿಲ್ಪ ಪರಂಪರೆಯೆಂದು ನಾವು ಹೆಮ್ಮೆಯಿಂದ ಹೇಳಿಕೊಳ್ಳುವ ಅಜಂತಾ ಚಿತ್ರಶಿಲ್ಪಗಳ ಮಹಾ ಗುರುವು - ಮೂಲ ಪುರುಷನು ನಮ್ಮ ಕರ್ಣಾಟಕದ "ಚೀರಘಟ್ಟ" ಯೇ ಎಂದು ಹೇಳಲು ಯಾವ ಪ್ರತ್ಯವಾಯವೂ ಇಲ್ಲ. ಬಾದಾಮಿ ಚಾಲುಕ್ಯರ ಇಮ್ಮಡಿ ಪುಲಕೇಶಿ ಮೊದಲ್ಗೊಂಡು ಕಲ್ಯಾಣದ ಚಾಲುಕ್ಯ ವಿಕ್ರಮನ ವರೆಗೂ ಅಜಂತಾ ಗುಹೆಗಳಲ್ಲಿ ಕನ್ನಡ ಚಿತ್ರಶಿಲ್ಪಗಳೂ ತಮ್ಮ ಕೈಕುಸುರಿನ ಕೈವಾಡ ಒಪ್ಪವಿಟ್ಟಿದ್ದಾರೆ ! ಹೀಗಿದ್ದೂ ಇಂಥ ಕರ್ಣಾಟಕ ಚಿತ್ರಶಿಲ್ಪಗಳ ಪರಂಪರೆಯವರು ರಚಿಸಿದ ಕೃತಿಗಳು ಚಾಲುಕ್ಯ ವಿಕ್ರಮನಿಂದೀಚೆಗೆ ಸಿಕ್ಕ ಬೇಕಾದಷ್ಟೇ ಸಿಕ್ಕಿಲವೋ ತಿಳಿಯದಾಗಿದೆ. ಅಜಂತಾ ಚಿತ್ರಪದ್ಧತಿಯು ಕರ್ಣಾಟಕದಲ್ಲಿ ಕಾಲಮಾನಕ್ಕನುಸರಿಸಿ ಮಾರ್ಪಡುತ್ತ ಬಂದುದು 15ನೇ ಶತಮಾನದಿಂದೀಚೆಗೆ 'ನಾಗಪದ್ದತಿ' ಎಂಬುದೊಂದು ಇದ್ದಿತು ಎನ್ನುವುದರಿಂದ ತಿಳಿದುಬರುವ ಆಗಿದೆ.[೭]

ದೀಪದ ಕಲಿಯ ಕಾವ್ಯದಲ್ಲಿ: ತಿರುಕುಳ ನಂಬಿ ಚಿತ್ರ ಕಲಾವಿದ

ಹರಭಕ್ತಿ ಪಾರಮ್ಯದ ಕವಿ ಚೆನ್ನಮಲ್ಲೇಶನು ಕಲಬುರಗಿ ಜಿಲ್ಲೆ ಅಂಬಲಗಿ ಗ್ರಾಮದವನು. ಈತ ಕ್ರಿ.ಶ.1700ರಲ್ಲಿ ಜೀವಿಸಿದ್ದನೆಂದು ವಿದ್ವಾಂಸರು ಅಭಿಪ್ರಾಯಪಡುತ್ತಾರೆ. ಭೀಮ ಕವಿಯ ಪ್ರೇರಣೆಯಿಂದ ದೀಪದ ಕಲಿಯರ ಸಾಂಘತ್ಯ ಕಾವ್ಯವನ್ನು ರಚಿಸಿದನು. ಈ ಕಾವ್ಯವನ್ನು ಬೆಂಗಳೂರು ವಿಶ್ವವಿದ್ಯಾಲಯದ ಎಸ್.ಶಂಕರ ಸಂಪಾದಿಸಿದ್ದಾರೆ. ಒಂಭತ್ತನೆಯ ಸಂಧಿಯಲ್ಲಿ ಮೂಲ ಲೇಖಕರು ತಿರುಕುಳ ನಂಬಿ ಎಂಬ ಕಲಾವಿದನನ್ನು ಪರಿಚಯಿಸುತ್ತಾರೆ. ಬಿದರಕ್ಕಿ ಉಂಡು ಶಿವನನ್ನು ಆರಾಧಿಸುವ ಆತ ಹಲವರ ಚಿತ್ರಬರೆದು ಬಂದ ಹಣದಿಂದ ಗುರುಲಿಂಗ ಜಂಗಮರ ಸೇವೆಯನ್ನು ಮಾಡುತ್ತ ಶಿವಭಕ್ತನಾಗಿ ಬದುಕುತ್ತಿದ್ದ ಎಂಬುದನ್ನು ಈ ರೀತಿ ಹೇಳುತ್ತಾರೆ.[೮]

ಬಿದಿರಕ್ಕ ಸವಿದು ಬಾಳ್ಮದನಾರಿ ಪೂಜಿಸಿ।

---

೭. ರಸಯೋಗಿ : ಕರ್ನಾಟಕ ಸಾಹಿತ್ಯ ಪರಿಷತ್ಪತ್ರಿಕೆ

೮. ಎಸ್.ವಿದ್ಯಾಶಂಕರ ಸಂ: ಅಂಬಲಗಿ ಚನ್ನೆಮಲ್ಲೇಶನ ದೀಪದ ಕಲಿಯರ ಕಾವ್ಯ, ಪುಟ-೧೬೬

ಸುದತಿ ಹೇಳಿದಳೊಂದು ಕಥೆಯ।
ಮಧುರೆ ದೇಶದೊಳು ಕೋವಿದ ತಿರುಕುಳ ನಂಬಿ।
ಚದುರ ಬರೆವನು ಚಿತ್ರವನು ॥ 23॥

ಶರಣಂಗಳ ಬರೆದು ಚಿತ್ರವ ಶಿವ।
ಶರಣರ ಬಳಿಗೆ ತಂದಿರಿಸಿ।
ಹರುಷಾಬ್ಧಿ ಯೋಳು ಹಣ ತರುವನು ಕಾಯಕ।
ಗುರುಲಿಂಗ ಜಂಗಮ ಕುಣಿಸಿ ॥ 24 ॥ 1

ಕಲಾವಿದರಾಗಿ ಅರಸರು – ಅರಸಿಯರು

ಕಲಾವಿದ ಎಂಬುದು ಕಾಲಘಟ್ಟದ ಅಂತರದಲ್ಲಿ ಇಂದು ಬಹು ಸಂಕುಚಿತ ಅರ್ಥವನ್ನು ಹೊಂದಿದೆ. ಕಲಾವಿದನೆಂಬುದು ಕೇವಲ ಕಲೆಯನ್ನು ಬಲ್ಲುವನು ಎಂಬುದು ಮಾತ್ರ ಈಗ ಅರ್ಥೈಸಲಾಗುತ್ತಿದೆ. ಒಂದು ಕಾಲದಲ್ಲಿ ರಾಜ್ಯವನ್ನು ಆಳುತ್ತಿದ್ದ ದೊರೆಗಳು, ಅವರ ಅರಸಿಯರು ಇಂಥ ಕಲಾ ಪ್ರಾಕಾರಗಳಲ್ಲಿ ಬಲ್ಲಿದರಾಗಿದ್ದರು ಎಂಬುದು ಭಾರತ ಇತಿಹಾಸ ಚರಿತ್ರೆಯಲ್ಲಿ ದೊರೆಯುತ್ತದೆ. ಭಾತದೇಶದ ಅರಸರಂತೆ ಅವರ ಅರಸಿಯರು ಮತ್ತು ಮಹಮ್ಮದೀಯ ಅನೇಕ ದೊರೆಗಳು ಕಲಾವಿದರು, ಕಲಾಪ್ರೇಮಿಗಳು, ಕಲಾಪೋಷಕರು ಆಗಿದ್ದರು ಎಂಬುದನ್ನು ಡಾ. ಎಸ್.ಸಿ.ಪಾಟೀಲರು ಈ ರೀತಿ ವಿವರಿಸುತ್ತಾರೆ.**

ಸರ್ವ ಕಲಾಧಾರಭೂತ ಚಿತ್ರಕಲಾಭಿದೇನ
ವಿಶ್ವಕರ್ಮಾಚಾರ್ಯೇಣೇದಂ ಶಾಸನಂ ಲಿಖಿತಂ।

ಸರ್ವ ಕಲೆಗಳನ್ನೂ ಬಲ್ಲಿದನಾದ ವಿಶ್ವಕರ್ಮನು ಎಲ್ಲರೊಳಗೂ ಇರಬಲ್ಲ ಎಂಬ ಮಾತನ್ನು ಅನೇಕ ಕಲಾವಿದರು ಭಾರತದಲ್ಲಿ ಅರಸರಾಗಿದ್ದರು. ಕದಂಬ ವಂಶದ ದಯಾಸಿಂಹನು ಚಿತ್ರಕಲೆಯಲ್ಲಿ ಪರಿಣಿತನಾಗಿದ್ದನು. ರಾಷ್ಟ್ರಕೂಟರ ದೊರೆ ಖೊಟ್ಟಿಗನನ್ನು ಒಂದು ಶಾಸನವು ಚಿತ್ರವೆಡೆಂಗಂ ಎಂಬುದಾಗಿ ಹೊಗಳಿದೆ. ತ್ರೈಲೋಕ್ಯಮಲ್ಲ ನನ್ನಿನೊಳಂಬ ಪಲ್ಲವ ಪೆರ್ಮಾನಟಿಗಳನ್ನು ಚಿತ್ರವೆಡಂಗಂ ಎಂದು ಒಂದು ಶಾಸನ ಹೊಗಳಿದೆ. ರಾಜಾಲಯಗಳಲ್ಲಿ ದೇವಾಲಯಗಳಲ್ಲಿ ಒಳಗೋಡೆಗಳಲ್ಲಿ ಚಿತ್ರಗಳಿಂದ ತುಂಬಿಸುತ್ತಿದ್ದರು. ಏಚದಂಡಾದೀಶನೆಂಬಾತ ಶ್ರವಣ ಬೆಳಗೊಳದಲ್ಲಿ ಕಲಾವಿದನಾಗಿದ್ದ.

ರಾಜ ಮನೆತನದ ಸ್ತ್ರೀಯರು, ಪ್ರಧಾನಮಂತ್ರಿ, ದಂಡನಾಯಕ ಮುಂತಾದ ದೊಡ್ಡ ಅಧಿಕಾರಿಗಳು ಮನೆಯ ಹೆಣ್ಣುಮಕ್ಕಳು ತಕ್ಕ ಮಟ್ಟಿಗೆ ವಿದ್ಯಾವತಿಯರಾಗಿರುತ್ತಿದ್ದರು. ಇಂತಹ ಶ್ರೀಮಂತ ಮನೆತನಗಳಲ್ಲಿ ಲಲಿತಕಲೆಗಳಾದ ನರ್ತನ, ಸಂಗೀತ, ಚಿತ್ರಕಲೆಗಳ ಅಭ್ಯಾಸಕ್ಕೆ ಹೆಚ್ಚು ಮಹತ್ವ ಇದ್ದಂತೆ ಕಾಣುತ್ತದೆ. ಸುಮಾರು 900ರ ಶಾಸನವೊಂದರಲ್ಲಿ ನಾಗಾರ್ಜುನಯ್ಯ ಮತ್ತು

**. ಎಸ್.ಸಿ.ಪಾಟೀಲ : ಮಾಧ್ಯಮಿಕ ಶಾಲಾ ಶಿಕ್ಷಣದಲ್ಲಿ ಚಿತ್ರಕಲಾ ಶಿಕ್ಷಣ ಒಂದು ಅಧ್ಯಯನ, (ಅಪ್ರಕಟಿತ) (ಕರ್ನಾಟಕ ವಿ.ವಿ. ಶಿಕ್ಷಣ ವಿಭಾಗಕ್ಕೆ ಸಲ್ಲಿಸಿದ ಕಿರು ಸಂಶೋಧನಾ ಮಹಾಪ್ರಬಂಧ) ಪುಟ-೧೬.

ನಂದಿಂಗೆಬ್ಬೆಯ ಮಗಳು ಸಾಮೀನಿರ್ಮಡಿ ಎಂಬಾಕೆಯು ಸರ್ವಶಾಸ್ತ್ರ ಪ್ರಸಿದ್ಧಯಾಗಿದ್ದಳು ಎಂದಿದೆ. ಮಹಾಸಾಮಂತ ಶೂದ್ರಾಂಕನ ಜಕ್ಕಿ ಸುಂದರಿಯನ್ನು ಸಹಜಸರಸ್ವತಿ ಎಂದು ಶಾಸನವೊಂದು ಕರೆಯುತ್ತದೆ. ಈ ವಿಶೇಷಣವು ಅವಳ ಕಲಾಪ್ರೌಢಿಮೆಯನ್ನು ಸೂಚಿಸುತ್ತದೆ. ತ್ರಿಭುವನಮಲ್ಲದೇವನ ಪಟ್ಟದ ರಾಣಿಯಾದ ಹಿರಿಯ ಕೇತಲದೇವಿಯು ಸಕಳ ಕಲಾಧರಿಯೆಂದೂ, ಅಭಿನಯ ಸರಸ್ವತಿಯೆಂದೂ ಪ್ರಶಂಸಿಸುತ್ತದೆ. ಗಂಗರಾಜನ ಹೆಂಡತಿ ಲಕ್ಷಲೆಯು ಒಬ್ಬ ದೊಡ್ಡ ಪಂಡಿತೆಯೆನಿಸಿಕೊಂಡಿದ್ದಳು. ವಿಷ್ಣುವರ್ಧನನ ಹೆಂಡತಿ ಶಾಂತಲೆ ಒಬ್ಬ ಅತ್ಯಪೂರ್ಣವ್ಯಕ್ತಿ ಅವಳಿಗೆ ಸಕಲ ಕಲಾಗಳಲ್ಲಿಯೂ ಪರಿಣಿತಿಯಾಗಿದ್ದಳು ವಿವಿಧ ಶಾಸ್ತ್ರಕಲಾ ಪ್ರತಿಭಾ ಸರಸ್ವತಿಯೆಂದು ರವಿದೇವ ದಂಡಾಧೀಶನ ಪತ್ನಿ ರಬ್ಬಲದೇವಿ ಕರೆಯಿಸಿಕೊಂಡಿದ್ದಾಳೆ. ವಿಷ್ಣುವರ್ಧನನ ರಾಣಿ ಜಾಂತಲೆಯ ಕಲಾಪ್ರೌಢಿಮೆಯಂತೂ ಅನೇಕ ಶಾಸನಗಳು ಹೊಗಳಿವೆ.[೯]

ಈ ರೀತಿ ಅರಮನೆ, ದೇವಮನೆಗೆ ಸೀಮಿತವಾದ ಕಲೆಯು ಕಲಾವಿದರ ಪರಂಪರೆಯು ಕಾಲಾನುಕ್ರಮದಲ್ಲಿ ವಯಕ್ತಿಕವಾಗಿ ಒಂದೊಂದೇ ವ್ಯಕ್ತಿಯಲ್ಲಿ ನೆಲೆಸಿ ಕಲಾಮನೆತನದ ಪರಂಪರೆಗೆ ನಾಂದಿಯಾಗಿದೆ. ಇಂತಹ ಕಲಾವಿದರು ಇಂದು ಹಸ್ತಪ್ರತಿ ಚಿತ್ರಕಲೆ ಕಲಾವಿದರಾಗಿರದಿದ್ದರೂ ಅವರ ಮನೆತನದ ಪೂರ್ವಜರು ಒಂದಿಲ್ಲ ಒಂದು ಕಲಾಪ್ರಕಾರದ ಬಲ್ಲಿದರೇ ಆಗಿದ್ದರು. ಅಂಥವರು ವಂಶಾವಳಿಯ ಕೆಲವು ಜನರ ಆ ಕಲಾ ಹಿನ್ನಲೆಯಲ್ಲಿಯೇ ಬೇರೊಂದು ಕಲಾಮಾಧ್ಯಮದ ಕಲಾವಿದರಾಗಿದ್ದರೂ ಅವರನ್ನು ಪೂರ್ವಜನರ ಕಲಾಹಿನ್ನಲೆಯಲ್ಲಿಯೇ ಗುರುತಿಸಿಕೊಳ್ಳಲಾಗಿದೆ.

ಮೈಸೂರು ಭಾಗದ ಕರ್ನಾಟಕ ಹಸ್ತಪ್ರತಿ ಚಿತ್ರಕಲಾವಿದರು :

ವಿಜಯನಗರದ ಪ್ರೇರಣೆಯಿಂದ ಉದಯಿಸಿದ ಹಲವು ಕಲಾ ಶೈಲಿಗಳಲ್ಲಿ ಮೈಸೂರು ಸಂಸ್ಥಾನವೂ ಒಂದು. ಅನೇಕ ಕಲಾವಿದರಿಗೆ ಆಸರೆ, ಪ್ರೋತ್ಸಾಹ ನೀಡಿದ ಕಾರಣಕ್ಕಾಗಿಯೇ ಅಸಂಖ್ಯಾತ ಕಲಾವಿದರು ಅನೇಕ ವಿಧದ ಕಲೆ, ಸಾಹಿತ್ಯ, ಸಂಗೀತ ಈ ಪರಿಸರದಲ್ಲಿ ಬೆಳೆಯಲು ಕಾರಣವಾಗಿದೆ. ಹಿರಿಯ ಕಲಾವಿದರು ಕಲಾನುಭವಿಗಳು ಆಗಿರುವ ಶ್ರೀ ಅ.ನ.ಸುಬ್ಬರಾವ್ ಅವರು ಮೈಸೂರು ಪರಿಸರದ ಕಲಾವಿದರ ಬಗ್ಗೆ ಮಾಹಿತಿ ನೀಡುತ್ತಾರೆ.

ಮುಮ್ಮಡಿ ಕೃಷ್ಣರಾಜ ಒಡೆಯರ ಕಾಲದಲ್ಲಿ ಕಲೆಗೆ ವಿಶೇಷ ಉತ್ತೇಜನ ದೊರೆಯಲಾರಂಭವಾಯಿತು. ಈ ರಾಜರು ರಸಿಕರು ; ಸಂಸ್ಕೃತ ಮತ್ತು ಕನ್ನಡದಲ್ಲಿ ಒಳ್ಳೆಯ ಪಾಂಡಿತ್ಯ ಪಡೆದವರು. ಸ್ವತಃ ಭಾರತ ಮುಂತಾದ ಗ್ರಂಥಗಳನ್ನೂ ಅನೇಕ ಕವನಗಳನ್ನು ಬರೆದ ಪ್ರಸಿದ್ದರು. ''ಶ್ರೀ ತತ್ತ್ವನಿಧಿ'' ಎಂಬ ತತ್ತ್ವ ಗ್ರಂಥವನ್ನು ಇವರೇ ಬರೆದಿರುವರು. ಈ ಗ್ರಂಥವು ಇಂದು ಓರಿಯಂಟಲ್ ಗ್ರಂಥಭಂಡಾರದಲ್ಲಿದೆ. 18 ಅಂಗುಲ ಉದ್ದ 12 ಅಂಗುಲ ಅಗಲದ ಈ ಪುಸ್ತಕದಲ್ಲಿ

---

೯. ಎನ್.ಮರಿಶಾಮಾಚಾರ : ಸಾಹಿತ್ಯ ದಲ್ಲಿ ಚಿತ್ರಕಲೆ, ಪುಟ -೩೭

ಕಾಗದ ಹಸ್ತಪ್ರತಿಗಳಲ್ಲಿ ಮೈಸೂರ ಶೈಲಿಯ ಚಿತ್ರಗಳು

೧)



೨)



ಕೃಪೆ:

೧. ಉದಯವಾಣಿ ದೀಪಾವಳಿ ವಿಶೇಷಾಂಕ-೧೯೯೮

೨. ತುಷಾರ ಅಕ್ಟೋಬರ್-೧೯೯೨

ಕರ್ನಾಟಕದ ಹಸ್ತಪ್ರತಿ ಚಿತ್ರಕಲೆ- ಒಂದು ಅಧ್ಯಯನ

ಕರ್ನಾಟಕದ ಹಸ್ತ ಪ್ರತಿಗಳಲ್ಲಿ ಶ್ರೀತತ್ತ್ವ ನಿಧಿಯ - ಶಕ್ತಿ ನಿಧಿ ಚಿತ್ರಗಳು







ಕೃಪೆ:

ಡಾ॥ ಹೆಚ್.ಪಿ. ದೇವಕಿ, ಪ್ರಾಚ್ಯ ವಿದ್ಯಾ ಸಂಶೋಧನಾಲಯ

ಮೈಸೂರು ವಿಶ್ವವಿದ್ಯಾಲಯ, ಮೈಸೂರು.

538 ಪುಟಗಳಿವೆ. ಸುಂದರವಾದ ಕೈ ಬರವಣಿಗೆಯಲ್ಲಿ ಈ ಪುಸ್ತಕದಲ್ಲಿ ಶೈವ, ಶಾಕ್ತೇಯ, ವೈಷ್ಣವ ಸಂಬಂಧವಾದ ತತ್ತ್ವ ಮೂರ್ತಿಗಳ ವಿವರ, ಧ್ಯಾನ ಶ್ಲೋಕ, ಇದಕ್ಕನುಗುಣವಾಗಿ ಬರೆದು ಬಣ್ಣ ಹಾಕಿದ ನುರಾರು ಚಿತ್ರಗಳುಂಟು. ಇದಲ್ಲದೆ ಬಗೆ ಬಗೆಯ ಶಸ್ತ್ರಾಸ್ತ್ರಗಳ, ಆಯುಧಗಳ, ಮೃಗಪಕ್ಷಿಗಳ, ಚತುರಂಗದಾಟದ ಅನೇಕ ಚಿತ್ರಗಳು ಬಹು ಸೊಗಸಾಗಿ ಚಿತ್ರಿತವಾಗಿವೆ. ಮುಮ್ಮಡಿ ಕೃಷ್ಣರಾಜ ಒಡೆಯರ ಆಸ್ಥಾನದಲ್ಲಿ ಚಿತ್ರಗಾರ ವೈ ಸುಂದರಯ್ಯ ಎಲ್ಲಪ್ಪ ತಂಜಾವೂರು ಕೊಂಡಯ್ಯ, ನಗೂನಳ್ಳಿ ನಾರಾಣಪ್ಪ ಆಳಸಿಂಗ್ರಯ್ಯನವರಿದ್ದಲ್ಲದೆ.

ನಾಲ್ವಡಿ ಕೃಷ್ಣರಾಜ ಒಡೆಯರ ಕಾಲದಲ್ಲಿ ಚಾಮರಾಜೇಂದ್ರ ಟೆಕ್ನಿಕಲ್ ಇನ್‌ಸ್ಟಿಟ್ಯೂಟ್ ಎಂಬ ಕಲಾಶಾಲೆಯನ್ನು ಪ್ರಾರಂಬಿಸಿದರು. ಲಲಿತ ಕಲೆಗಳ ಮತ್ತು ಕುಶಲಕಲೆಗಳ ವ್ಯಾಸಂಗಕ್ಕೆ ಅವಕಾಶ ಕಲ್ಲಿಸಿದರು. ಚಿತ್ರಗಾರ ಮನೆತನದವರಲ್ಲಿ ವಿಶೇಷ ಆಸಕ್ತಿವಹಿಸಿ ಅನೇಕರಿಗೆ ವಿದ್ಯಾರ್ಥಿವೇತನ ವಿತ್ತು, ಪ್ರೌಢಕಲಾ ವ್ಯಾಸಂಗಕ್ಕೆ ಅನುಕೂಲಮಾಡಿಕೊಟ್ಟರು. ಕಲಾವಿಭೂತಿ ಕೆ.ವೆಂಕಟಪ್ಪನವರ ಪ್ರತಿಭೆ ಮೆಚ್ಚಿ ಕಲ್ಕತ್ತೆಯ ಕಲಾಶಾಲೆಯ ವ್ಯಾಸಂಗಮಾಡಲು ವಿದ್ಯಾರ್ಥಿ ವೇತನವಿತ್ತು ಸಹಾಯ ಮಾಡಿದರು. ಅಂತೆಯೇ ಗತಿಸಿದ ಕಲಾವಿದ ಕೇಶವಯ್ಯನವರಿಗೂ ವಿದ್ಯಾರ್ಥಿವೇತನಕೊಡಿಸಿ ಕಲಾವ್ಯಾಸಂಗಕ್ಕೆ ಉತ್ತೇಜನವಿತ್ತರು. ದಿವಂಗತ ಶಿಲ್ಪಿ ಸಿದ್ಧಾಂತಿ ಸಿದ್ದಲಿಂಗ ಸ್ವಾಮಿಗಳಿಂದ ಅನೇಕ ದೇವತಾ ಚಿತ್ರಗಳನ್ನು ಬರೆಯಿಸಿದರು.

ಅನೇಕ ಖಾಸಗಿ ಕಲಾವಿದರೂ ಕಲೆಯ ಏಳಿಗೆಗೆ ಅಪಾರ ಸೇವೆ ಸಲ್ಲಿಸಿದ್ದಾರೆ. ಶ್ರೀ ಎನ್.ಜಿ.ಪಾವಂಜಿ, ಗೋಪಾಲ ಕೃಷ್ಣ ಪಾವಂಜಿಯವರು ಧರ್ಮಸ್ಥಳದ ಮಂಜಯ್ಯ ಹೆಗ್ಗಡೆಯವರು, ಕೆ.ಕೃಷ್ಣಾ ಹೆಬ್ಬಾರರು, ಕನ್ನಡನಾಡಿನ ಕಲಾವಿದರಾಗಿದ್ದಾರೆ. ಹುಬ್ಬಳ್ಳಿಯಲ್ಲಿರುವ ಎಂ.ವಿ.ಮಿಣಜಗಿಯವರು, ಶ್ರೀಮತಿ ಕಮಲಮ್ಮನವರು ಹಾಲಭಾವಿ ಸಿಂಗಾಚಾರ್ಯರ ಮಕ್ಕಳಾದ ಎಸ್.ಎನ್.ಸ್ವಾಮಿ ಅಲ್ಲದೇ ಕಲಾವಿದರ ದೊಡ್ಡ ತಂಡವೇ ಕಲಾ ಸೇವೆಗೆ ಮುಂದು ಬಂದು ನಿಂತಿದೆ. ಅವರಲ್ಲಿ ಎನ್,ಹನುಮಯ್ಯ, ಎಂ.ಎಸ್.ಚಂದ್ರಶೇಖರ್, ಯಸ್.ವಿ.ಸೋಮಸುಂದರ್, ಎಂ.ಹೆಚ್.ರಾಮು, ವೈ.ನಾಗರಾಜ, ಎಂ.ವೀರಪ್ಪ ಎಫ್.ಎಂ.ಸೂಫಿಯವರು, ಎಸ್.ಎಸ್.ಕುಕ್ಕೆ, ಎಸ್.ಆರ್.ಸ್ವಾಮಿ, ಎಂ.ಎಸ್.ಶುದ್ದೋದನ, ಆರ್.ಎಸ್.ಸ್ವಾಮಿ, ವೈ.ಸುಬ್ರಹ್ಮಣ್ಯ ರಾಜು, ರುಮಾಲೆ ಚನ್ನಬಸವಯ್ಯ, ಅಗರಂ ಕೃಷ್ಣಮೂರ್ತಿ ಕೃಷ್ಣಸ್ವಾಮಿ, ಇನಾಮತಿ, ಹರಿರಾವ್, ನಂಜುಂಡರಾವ್, ಎಸ್.ಆರ್. ಅಯ್ಯಂಗರ್ ಅನಂತಯ್ಯ, ವಿ.ಎನ್.ರಾವ್, ಮಧ್ಯಸ್ತ ಶ್ರೀನಿವಾಸರಾವ್, ಎಚ್.ಬಿ.ಸಿದ್ದಪ್ಪ ಶ್ರೀನಿವಾಸ, ಎ.ಎಸ್.ಮೂರ್ತಿ, ಎಂ.ಗೋಪಾಲ್, ಸುಬ್ಬಕೃಷ್ಣ ಎಂ.ಟಿ.ವ್ಹಿ ಆಚಾರ್ ಅವರಂತಹ ಅನೇಕರು ಕನ್ನಡ ನಾಡಿನ ಕಲಾ ಪ್ರಪಂಚದಲ್ಲಿ ಅಪಾರ ಸೇವೆ ಸಲ್ಲಿಸುತ್ತಿದ್ದಾರೆ.[೧೦]

ಕಿನ್ನಾಳದ ಹಸ್ತಪ್ರತಿ ಚಿತ್ರಕಲಾವಿದರು :

---

೧೦. ಅ.ನ. ಸುಬ್ಬರಾವ್ : ಮೈಸೂರು ರಾಜ್ಯ , ಕರ್ನಾಟಕ ಸರಕಾರ ೧-೧೧-೧೯೫೬.

ಈ ಕಲಾವಿದರು ಇಂದು ಯಾವುದೇ ಹಸ್ತಪ್ರತಿಗಳನ್ನು ಕುರಿತು ಚಿತ್ರಗಳನ್ನು ಬರೆಯದಿದ್ದರೂ ಇವರ ತಲೆಮಾರಿನ ಹಿಂದಿನವರು ಅಲ್ಲಲ್ಲಿ ಪುರಾಣ, ಇತಿಹಾಸಗಳ ಗ್ರಂಥಗಳಿಗೆ ಚಿತ್ರಗಳನ್ನು ಬರೆದಿರುವ ಕಾರಣ ಆ ತಲೆಮಾರಿನವರಾದ ಇವರನ್ನು ಇಲ್ಲಿ ಹಸ್ತಪ್ರತಿ ಚಿತ್ರಕಲಾವಿದರೆಂದು ಪರಿಗಣಿಸಲಾಗಿದೆ. ಕಾಲ ಬದಲಾದಂತೆ ಲಿಪಿಕಾರರು ಬೇರೆ ಉದ್ಯೋಗಗಳನ್ನು ಅರಸಿ ಜೀವನೋಪಾಯವನ್ನು ನಡೆಸುತ್ತಿರುವಂತೆ ಈ ಕಲಾವಿದರೂ ಕೂಡ ಬದುಕಿನ ಉಳುವಿಕೆಗಾಗಿ ಹತ್ತಾರು ಅನೇಕ ಕೆಲಸಗಳನ್ನು ಮಾಡುತ್ತಿದ್ದರೂ ಅವರು ಪೂರ್ವದಲ್ಲಿ ಹಸ್ತಪ್ರತಿ ಚಿತ್ರಕಲಾವಿದರಾಗಿದದರು ಎಂಬುದನ್ನು ನಾವಿಲ್ಲಿ ಗಮನಿಸಬೇಕು.

ನೇರವಾಗಿ ಅರಸರಿಂದ, ನವಾಬರಿಂದ, ದೇಸಾಯಿ ಮನೆತನದವರಿಂದ ಸಹಾಯ, ಪ್ರೊತ್ಸಾಹ ನಿರಂತರ ದೊರೆಯದಿದ್ದರೂ ಅವರ ಹೆಸರಿನಡಿಯಲ್ಲಿ ಸಾಮಾನ್ಯ ಜನವರ್ಗ ಚಿತ್ರಕಲಾ ಪೋಷಕರಿಂದ ಬೆಳೆದು ಬಂದಿರುವುದು ಕಿನ್ನಾಳಿನ ಚಿತ್ರಕಲೆ ಕಲಾವಂತಿಕೆಯೇ ಈ ಜನಾಂಗದ ಬದುಕಿನ ಅಂಗವಾಗಿರುವುದರಿಂದ ಪರಂಪರಾಗತವಾಗಿ ಈ ಕಲೆಯು ತಲೆಮಾರಿನಿಂದ ತಲೆಮಾರಿಗೆ ಸಾಗಿದೆ. ಮೈಸೂರ ಅರಸರ ಕೃಪೆಗೆ ಪಾತ್ರರಾಗಿ ಅವರ ನೆರಳಿನಲ್ಲಿಯೇ ಬದುಕಿದ ಮೈಸೂರು ಚಿತ್ರಕಲಾವಿದರಷ್ಟು ಇವರು ಸುದೈವಿಗಳಲ್ಲ. ಬದುಕಿನ ತಮ್ಮ ಉಳಿಯುವಿಕೆಯ ಹೋರಾಟಗಾರರಾದ ಇವರು ದೈಹಿಕ ಮತ್ತು ಮಾನಸಿಕವಾದ ಪರಿಶ್ರಮಿಗಳು, ಮೈಸೂರಿಗಿಂತ ವಿಭಿನ್ನವಾಗಿ ಕಿನ್ನಾಳ ಪರಂಪರೆಯಲ್ಲಿ ಬೆಳೆದ ಇವರಲ್ಲಿ ಅನೇಕ ಮಹಿಳಾ ಚಿತ್ರಕಲಾವಿದರೂ ತಮ್ಮ ಪ್ರೌಢಿಮೆಯನ್ನು ಮೆರೆದಿದ್ದಾರೆ.

ಕಿನ್ನಾಳ ಚಿತ್ರಕಲೆಯನ್ನು ಕುರಿತು ಶ್ರೀ ಆರ್.ಎಚ್.ಕುಲಕರ್ಣಿಯವರು ಅಧ್ಯಯನಶೀಲವಾದ ತಮ್ಮ ವಿವರವನ್ನು ಈ ರಿತಿಯಾಗಿ ಕೊಡುತ್ತಾರೆ. ''ಕಿನ್ನಾಳ ಈಗಿನ ರಾಯಚುರು ಜಿಲ್ಲೆಯ ಕೊಪ್ಪಳ ತಾಲೂಕಿನಲ್ಲಿರುವ ಒಂದು ಗ್ರಾಮ. ಅದು (ಜಿಲ್ಲಾ ಕೇಂದ್ರ ಸ್ಥಳ) ಕೊಪ್ಪಳದಿಂದ ಕೇವಲ 21 ಕಿ.ಮೀ. ದೂರದಲ್ಲಿದೆ. ಕಿನ್ನಾಳದ ಇತಿಹಾಸ ವಿಜಯನಗರ ಅರಸರ ಕಾಲದಷ್ಟು ಹಿಂದಿನದು. ಕಿನ್ನಾಳು ಗ್ರಾಮ ಪ್ರಾದೇಶಿಕವಾಗಿ ಮೊದಲು ವಿಜಯನಗರ ಅರಸರ ಆಡಳಿತಕ್ಕೆ ಒಳಪಟ್ಟಿತ್ತು. ಅನಂತರ ಕೊಪ್ಪಳದ ನವಾಬರ ಆಡಳಿತ ಪರಿಧಿಗೆ ಬಂದಿತು. ಹೀಗಾಗಿ ಹಿಂದೂ-ಮುಸ್ಲಿಮ್ ಸಾಮರಸ್ಯವನ್ನು ಅಲ್ಲಿನ ನಿತ್ಯ ಜೀವನದಲ್ಲಿ ಕಾಣಬಹುದು. ಅದೇ ರೀತಿ ದಖನಿ ಸುಲ್ತಾನರ ಮೀನಿಯೇಚರ್ ಶೈಲಿಯ ಅಂಶಗಳನ್ನು ಸಹ ಕಿನ್ನಾಳ ಚಿತ್ರಶೈಲಿಯಲ್ಲಿ ಗಮನಿಸಬಹುದು. ಇಲ್ಲಿನ ಚಿತ್ರಗಾರ ಕುಟುಂಬ ವಂಶಪರಂಪರವಾಗಿ ಚಿತ್ರಶೈಲಿಯನ್ನು ರೂಢಿಸಿಕೊಂಡು ಬಂದಿದೆ. ಚಿತ್ರಕಲೆ ಅವರ ಕುಲ ಕಸಬು ಅಹುದು. ತುತ್ತಿನ ಚೀಲ ತುಂಬಿಸಲು ಆಧಾರವೂ ಅಹುದು. ಇಂದಿಗೂ ಆ ಕುಟುಂಬದವರು ಚಿತ್ರಕಲೆಯನ್ನೇ ನಂಬಿ ಜೀವನ ನಡೆಸುತ್ತಿದ್ದಾರೆ. [೧೧]

---

೧೧. ಆರ್.ಹೆಚ್. ಕುಲಕರ್ಣಿ : ಕಿನ್ನಾಳ ಕಲೆ , ಪುಟ-೬.

ಪಿ.ಆರ್.ತಿಪ್ಪೆಸ್ವಾಮಿಯವರು ಕಿನ್ನಾಳದ ಕಲಾವಿದರ ಬಗ್ಗೆ ತಮ್ಮ ಅಧ್ಯಯನ ಪೂರ್ಣ ವಿವರಣಯನ್ನು ಈ ರೀತಿ ನೀಡಿದ್ದಾರೆ..... ಕಿನ್ನಾಳದಲ್ಲಿ ಹಲವು ಕುಟುಂಬಗಳು ತಮ್ಮ ಕಲೆಯನ್ನು ಉಳಿಸಲು ಶ್ರಮಿಸಿದ್ದಾರೆ. ಅಂಥವರಲ್ಲಿ ವೆಂಕೋಬಪ್ಪ ಚಿತ್ರಗಾರರು, ಇವರ ತಂದೆ ಕೃಷ್ಣಪ್ಪ ವೆಂಕಪ್ಪ ಚಿತ್ರಗಾರರು, ಇವರ ತಾತ ವೆಂಕಪ್ಪ ಚಿತ್ರಗಾರರು, ಶ್ರೀರಾಮಚಂದ್ರಪ್ಪ ಪರಶುರಾಮಪ್ಪ ಚಿತ್ರಗಾರ, ಕೃಷ್ಣ ಮೂರ್ತೆಪ್ಪ ರಿಂದಪ್ಪ ಚಿತ್ರಗಾರ, ಟೆಂಕಪ್ಪ ಚಿತ್ರಗಾರ, ಶಾಂತಪ್ಪ ಶೀನಪ್ಪ ಚಿತ್ರಗಾರ, ಏಕಪ್ಪ ಚಿತ್ರಗಾರ, ಸೋಮಣ್ಣ ವೆಂಕೋಬಪ್ಪ ಚಿತ್ರಗಾರ ಹೀಗೆ ಇನ್ನೂ ಅನೇಕ ಚಿತ್ರಗಾರರು ಕಿನ್ನಾಳ ಚಿತ್ರಕಲೆಯನ್ನು ಬೆಳೆಸಲು ಸತತ ಶ್ರಮಿಸಿದವರು ಮತ್ತು ಶ್ರಮಿಸುತ್ತಿರುವವರನ್ನು ಸ್ಮರಿಸಬಹುದಾಗಿದೆ. ಇವರಲ್ಲಿ ಅನೇಕರು ರಾಜ್ಯ ಪ್ರಶಸ್ತಿಗಳಿಸಿದ್ದಾರೆ. ಆವರಲ್ಲಿ ದಿ॥ಕೃಷ್ಣಪ್ಪ ವೆಂಕಪ್ಪ ಚಿತ್ರಗಾರ 1969 ರಲ್ಲಿ ಪ್ರಥಮ ಬಾರಿಗೆ ಪ್ರಶಸ್ತಿಗಳಿಸಿದರು.[೧೨]

ಕಿನ್ನಾಳ ಶೈಲಿಯ ಕುರಿತು ಶ್ರೀ ಆರ್.ಹೆಚ್. ಕುಲಕರ್ಣಿಯವರು ಈ ರೀತಿ ವಿವರಿಸುತ್ತಾರೆ. ವಿಜಯನಗರದ ಚಿತ್ರಶೈಲಿ, ಶಿಲ್ಪಶೈಲಿಗಳಿಂದ ಹಾಗೇ ದಖನಿ ಸುಲ್ತಾನರ ಕಾಲದ ಚಿಕಣಿ ಚಿತ್ರಗಳ ಶೈಲಿ, ಜೈನ, ಓಲೆಗರಿ ಹಸ್ತಪ್ರತಿಗಳ ಚಿತ್ರಶೈಲಿಗಳ ಪ್ರೇರಣೆ ಪ್ರಭಾವಗಳಿಂದ ಕಿನ್ನಾಳ ಶೈಲಿ ರೂಪುಗೊಂಡಿದೆ. ರೇಖೆ, ವಿನ್ಯಾಸ, ವರ್ಣ ಸಂಯೋಜನೆ, ಆಕೃತಿಗಳ ರಚನಾ ವಿನ್ಯಾಸಗಳಲ್ಲಿ ಪ್ರಭಾವವನ್ನು ಗುರುತಿಸಬಹುದು. ಹೀಗಾಗಿ ಕಿನ್ನಾಳ ಶೈಲಿಯ ಐತಿಹಾಸಿಕ ಬೆಳವಣಿಗೆಯೂ ಗಮನಾರ್ಹವಾಗಿದೆ.[೧೩]

ಹಿರಿಯ ಹಸ್ತಪ್ರತಿ ತಜ್ಞರಾಗಿರುವ ಡಾ॥ವೀರೇಶ ಬಡಿಗೇರ ಅವರು ಕಿನ್ನಾಳಕಲೆಯ ವೈಶಿಷ್ಟತೆಯ ಕುರಿತು ಈ ರೀತಿಯಿಂದ ಅಭಿಪ್ರಾಯವನ್ನು ನೀಡಿದ್ದಾರೆ.

★ ಚಿಕಣಿ ಚಿತ್ರಕಲೆಯ ಪ್ರಮುಖ ಲಕ್ಷಣಗಳಾದ ಶೃಂಗಾರ, ಸಂಗೀತ, ವಿರಹ,ಸಸ್ಯಪ್ರಾಣಿ ಸಂಪತ್ತು ಅತೀನಾಜುಕತೆ ಇಲ್ಲಿ ಕಂಡು ಬರುತ್ತದೆ. ಈ ಚಿಕಣಿ ಕಲೆಯ ಉಪಯುಕ್ತತೆ ಹೆಚ್ಚಿದ್ದು ಅಕ್ಬರನ ಕಾಲದಲ್ಲಿ ಆದರೆ ಇದಕ್ಕೆ ನಾಂದಿ ಹಾಡಿದವರು ಕವಿ, ಸಂಗೀತಗಾರ ಅಮೀರ ಖುಸ್ರು, ಮೊಗಲರ ದಖ್ಖನಿ ಪ್ರವೇಶ ಆದಿಲ್ ಶಾಹಿಗಳೊಂದಿಗಿನ ಸಂಬಂಧಗಳು ಈ ಚಿಕಣಿ ಕಲೆ ಕರ್ನಾಟಕದಲ್ಲಿ ಬೇರೂರಲು ಕಾರಣ ವಾಯಿತು.

★ ದೇವಾನುದೇವತೆಗಳ ಚಿತ್ರರಚಿಸಿದರೂ ಸಾಮಾನ್ಯರಿಗಿರುವಂತಹ ಸಹಜ ಲಕ್ಷಣಗಳು ಹೊರಹೊಮ್ಮುವಂತೆ ಚಿತ್ರಿಸುತ್ತಾರೆ. ಸ್ತ್ರೀ ದೇವತೆಯನ್ನು ರೂಪಗೊಳಿಸುವಾಗ ಸ್ತ್ರೀ ಸಹಜ ನಯ, ನಾಜೂಕು, ಮುಗ್ಧ ಭಾವುಕ ಬಿಡುಗಣ್ಣ ಉಬ್ಬಿದ ದುಂಡು ಮೊಲೆ, ಗಲ್ಲ ಚಿಕ್ಕಗದ್ದ ಸಿಂಹಕಟಿ ಮುಂತಾದ ಅಂಗಸೌಷ್ಟವಗಳನ್ನು ಪರಿಣಾಮಕಾರಿಯಾಗಿ ಚಿತ್ರಿಸುತ್ತಾರೆ.[೧೪]

೧೨. ಪಿ.ಆರ್. ತಿಪ್ಪೇಸ್ವಾಮಿ : ಕಿನ್ನಾಳ ಕಲೆ, ಅಧ್ಯಕ್ಷರ ನುಡಿಯಿಂದ.
೧೩. ಆರ್.ಹೆಚ್. ಕುಲಕರ್ಣಿ : ಕಿನ್ನಾಳ ಕಲೆ, ಪುಟ-೬.
೧೪. ಡಾ. ಎಸ್.ಸಿ. ಪಾಟೀಲ್, ಸತ್ಯಾನಂದ ಪಾತ್ರೋಟ(ಸಂ.): ಡಾ.ವೀರೇಶ್ ಬಡಿಗೇರ, ನಿಜದ ನೆಲೆ, ಪುಟ -೧೩೮

ಈ ರೀತಿಯ ಕಿನ್ನಾಳಕಲಾವಿದರು ತಮ್ಮದೇ ಆದ ಶೈಲಿಯ ಕಲಾವಂತಿಕೆಯಿಂದ ಪುರುಷ ಮತ್ತು ಮಹಿಳಾ ಕಲಾವಿದರು ತುಂಬಾ ಪ್ರಸಿದ್ಧರಾಗಿದ್ದಾರೆ. ಮೂರ್ತಿಶಿಲ್ಪ ಮತ್ತು ಕಿರು ರೂಪ ಚಿತ್ರಕಲಾವಿದರಾಗಿರುವ ಕಿನ್ನಾಳ ಕಲಾವಿದರು ನಾಡಿನಾದ್ಯಂತ ಚದುರಿ ಹೋಗಿದ್ದಾರೆ.

ಗೋಕಾಕದ - ಹಸ್ತಪ್ರತಿ ಚಿತ್ರಕಲಾವಿದರು :

ಬೆಳಗಾಂವ ಜಿಲ್ಲೆಯ ಗೋಕಾಕದ ಚಿತ್ರಕಲಾವಿದರೂ ಕನ್ನಡ ನಾಡಿನ ಚಿತ್ರಕಲಾ ಪರಂಪರೆಯಲ್ಲಿ ಬರುವ ಹಿರಿಯ ತಲೆಮಾರಿನ ಕಲಾವಿದರಾಗಿದ್ದಾರೆ.

''ಗೋಕಾಕದ ಈ ವರ್ಣಕಲೆಗೆ ಸುಮಾರು ಮುನ್ನೂರು ವರ್ಷಗಳ ಇತಿಹಾಸವಿದೆಯೆಂದು ಇಲ್ಲಿಯ ಹಿರಿಯರು ಹೇಳುತ್ತಾರೆ. ಆನಂದರಾವ್, ಆತ್ಮಾರಾಮ, ಶಂಬಾಜಪ್ಪ ಶಂಕರಪ್ಪ..... ಹೀಗೆ ಅನೇಕ ಕಲಾವಿದರು ಪೂರ್ವದಿಂದಲೂ ಗೋಕಾಕದ ಜೀನಗಾರಿಕೆಯ ಕಲೆಯಲ್ಲಿ ಪ್ರಸಿದ್ಧರಾದವರು. ಇಲ್ಲಿಯ ಕೆಲವು ಮನೆತನಗಳು ಈ ಕಲೆಯನ್ನು ವೃತ್ತಿಯಾಗಿಸಿಕೊಂಡು ಪ್ರಸಿದ್ಧಿಗಳಿಸಿದ್ದುಂಟು. ವಿಶೇಷವಾಗಿ ಸೋಮವಂಶ ಆರ್ಯ ಕ್ಷತ್ರಿಯ ಸಮಾಜದ ಕೆಲವು ಮನೆತನಗಳು ಮೊದಲಿನಿಂದಲೂ ವಂಶಪಾರಂಪರ್ಯವಾಗಿ ಕಲೆಯನ್ನು ಉಳಿಸಿಕೊಂಡು ಬಂದಿವೆ. ಇವರಿಗೆ ಚಿತ್ತಾರೆ, ಚಿತ್ರಗಾರ, ಜೀನಗಾರ, ಬಣ್ಣಗಾರ ಎಂದು ಹಲವು ಹೆಸರುಗಳುಂಟು. ಚಿತ್ರಕಲೆಯಲ್ಲಿ ನಿಷ್ಣಾತರೆಂಬುದರಿಂದ ಚಿತ್ರಗಾರರೆಂದೂ, ಇಂಥ ಜಿನುಗು ಕೆಲಸ ಮಾಡುವುದರಿಂದ ಜಿನಗಾರರೆಂದೂ ಇವರನ್ನು ಕರೆಯುವುದು ರೂಢಿ. ಗೋಕಾಕದಲ್ಲಿ ಚಿತ್ರಗಾರರ ಓಣಿಯೇ ಇರುವುದು. ಈ ಕಲಾವಿದರ ಅಧಿಕ ಸಂಖ್ಯೆಯನ್ನು ಸಾಬೀತು ಗೊಳಿಸುತ್ತದೆ. ಇವರಲ್ಲದೇ ಅನ್ಯ ಸಮಾಜದ ಅನೇಕ ಜನ ಕಲಾವಿದರೂ ಈ ಕಲೆ ಹೆಸರುವಾಸಿಯಾಗಲು ಕಾರಣರಾಗಿದ್ದಾರೆ.''[೧೫]

ಈ ಕಲೆಯಲ್ಲಿ ಸಾಕಷ್ಟು ಅನುಭವ ಗಳಿಸಿದ ಸದ್ಯ ಹಿರಿಯರೆಂದರೆ ಗುರುನಾಥ ಚಿತಾರೆ, ದತ್ತಾತ್ರೇಯ ಚವ್ಹಾಣ, ಚುಡಾಮಣಿ ವಾಗುಲೆ. ಈ ತರಬೇತಿ ಶಾಲೆಯಲ್ಲಿ ಕಲಿತ ಗುರುಸಾತಯ್ಯ ಕೆಳಗಿನ ಮಠ ಎನ್ನುವವರು ಅತ್ಯಂತ ಸುಪ್ರಸಿದ್ಧ ಕಲಾವಿದರಾಗಿದ್ದು, ಇತ್ತೀಚೆಗೆ ತೀರಿಕೊಂಡರು. ಇವರ ಅಣ್ಣಂದಿರು ತರಬೇತಿ ಪಡೆದಿದ್ದರು. ಗುರುಸಾತಯ್ಯನವರ ಕಲೆಗಾರಿಕೆ ಅತ್ಯಂತ ಪ್ರಸಿದ್ಧಿಯನ್ನು ಪಡೆದಿತ್ತು. ಲೇಖಕರಾದ ಎಸ್.ಆರ್.ಜಗದೀಶ ಅವರು ಗುರುಸಾತಯ್ಯನವರು ಸಾಧಿಸಿದ ಪರಿಣಿತಿಯನ್ನು ಚೆನ್ನಾಗಿ ವಿವರಿಸಿದ್ದಾರೆ. ಈ ಕಲೆಯಲ್ಲಿ ನಿಪುಣತೆ ಸಾಧಿಸಿರುವ ಗುರುಸಾತಯ್ಯನವರು ತಮ್ಮ ಸಾಧನೆಯನ್ನು ಗೋಕಾಕಕ್ಕೆ ಮಾತ್ರ ಸೀಮಿತಗೊಳಿಸಿಲ್ಲ ರಾಜ್ಯ ಕೇಂದ್ರ ಸರ್ಕಾರಗಳ ಆಹ್ವಾನದ ಮೇರೆಗೆ ಅವರು ರಾಜ್ಯ ಹಾಗೂ ರಾಷ್ಟ್ರ ಮಟ್ಟದ ಕರಕುಶಲ ವಸ್ತು ಪ್ರದರ್ಶನಗಳಲ್ಲಿ ಭಾಗವಹಿಸಿದ್ದಾರೆ.[೧೬]

ಕಲಘಟಗಿಯ ಹಸ್ತಪ್ರತಿ ಚಿತ್ರಕಲಾವಿದರು :

---

೧೫. ಡಾ. ಎಸ್. ಸಿ. ಪಾಟೀಲ್ ಸತ್ಯಾನಂದ ಪಾತ್ರೋಟ ಸಂ.: ನಿಜದ ನೆಲೆ ,ಶ್ರೀರಾಮ ಇಟ್ಟಣ್ಣನವರು , ಪುಟ ೧೪೫- ೧೪೬.

೧೬. ಡಾ. ಎಸ್. ಸಿ. ಪಾಟೀಲ್ ಸತ್ಯಾನಂದ ಪಾತ್ರೋಟ ಸಂ.: ನಿಜದ ನೆಲೆ ,ಡಾ. ಧನವಂತ ಹಾಜವಗೋಳ , ಪುಟ ೧೫೨-೧೫೭.

ಧಾರವಾಡ ಜಿಲ್ಲೆಯ ಕಲಘಟಗಿಯು ವರ್ಣ ಚಿತ್ರಕಲಾವಿದರ ತವರು ಮನೆಯಾಗಿದೆ. ಇಲ್ಲಿಯ ಕಲಾವಿದರು ತೊಟ್ಟಿಲುಗಳ ಚಿಕ್ಕ ಪಟ್ಟಿಕೆಗಳ ಮೇಲೆ ಕಿರುರೂಪದ ಬಹು ಮುದ್ದಾದ ಚಿತ್ರಗಳನ್ನು ಬರೆಯುವದರಲ್ಲಿ ಸಿದ್ಧಹಸ್ತರು. ಹಸ್ತಪ್ರತಿಯ ಚಿತ್ರಕಲೆ ಕಲಾವಿದರಂತೆ ಇವರು ಕೂಡಾ ಸಿಕ್ಕಿರುವ ಬಹು ಚಿಕ್ಕ ಅವಕಾಶವನ್ನೇ ಬಳಸಿಕೊಂಡು ಅನೇಕ ಕಿರುರೂಪದ ಚಿತ್ರಗಳನ್ನು ಬರೆಯುತ್ತಾರೆ. ಮೋಹಕ ಬಣ್ಣಗಾರಿಕೆ, ರಭಸದ ರೇಖೆಗಳಿಂದ ಇವರ ಚಿತ್ರಗಳು, ಸದಾ ಜೀವಂತವಾಗಿರುತ್ತವೆ. ಈ ಕುರಿತು ಡಾ|| ಧನವಂತ ಹಾಜವಗೋಳ ಅವರು ಕಲಘಟಗಿ ಚಿತ್ರಕಲೆ ಮತ್ತು ಚಿತ್ರಗಾರ ಜನರ ಬಗೆಗೆ ಬಹು ವಿಸ್ತಾರದ ವಿವರವನ್ನು ಈ ರೀತಿ ವಿವರಿಸುತ್ತಾರೆ.

ಧಾರವಾಡ ಜಿಲ್ಲೆಯ ತಾಲೂಕು ಕೇಂದ್ರವಾದ ಕಲಘಟಗಿ ಮಲೆನಾಡಿನ ಅಂಚಿನಲ್ಲಿರುವ ಪ್ರದೇಶ. ಇದು ಧಾರವಾಡದಿಂದ ದಕ್ಷಿಣಕ್ಕೆ 36 ಕಿ.ಮೀ ದೂರದಲ್ಲಿದೆ. ಅಧಿಕ ಮಳೆಯಾಗುವ ಈ ಪ್ರದೇಶದಲ್ಲಿ ಭತ್ತವೇ ಪ್ರಧಾನಬೆಳೆಯಾಗಿದೆ. ಸುಮಾರು ಒಂದು ಲಕ್ಷ ಜನ ಸಂಖ್ಯೆಯನ್ನೊಳಗೊಂಡ ಇದು ಪಟ್ಟಣ ಪಂಚಾಯತಿಯನ್ನು ಹೊಂದಿದೆ. ಈ ಪಟ್ಟಣದ ಹೃದಯಭಾಗದಲ್ಲಿರುವ ರಸ್ತೆ ಬದಿಗೆ ಹೊಂದಿಕೊಂಡ ಸಣ್ಣಮಳಿಗೆಯೊಂದರಲ್ಲಿ ಕರಕುಶಲ ಕಲೆಯಲ್ಲಿ ನಿರತರಾಗಿರುವ ''ಸಾಹುಕಾರ ''ಮನೆತನದ ಕಲಾಕಾರರು ಕಾಣುತ್ತಾರೆ. ಮೊದಲು ಏಳೆಂಟು ಮನೆತನದವರು ಮಾತ್ರ ಮೂರ್‍ನಾಲ್ಕ ತಲೆಮಾರುಗಳಿಂದ ಇದನ್ನು ಮುಂದುವರಿಸಿಕೊಂಡು ಬಂದಿದ್ದಾರೆ. ಅಂತಹವರಲ್ಲಿ ಗಂಗಾಧರ ಪಿರಾಜಿ ಸಾಹುಕಾರ ಮನೆತನ ಮತ್ತು ಶ್ರೀಬಾಲಾಜಿ ಎಸ್. ಸಾಹುಕಾರ ಮನೆತನಗಳನ್ನು ಕಾಣಬಹುದು. ಈ ಸಾಹುಕಾರ ಮನೆತನದವರು ಮೂಲತಃ ಉತ್ತರ ಭಾರತದವರು. ದೆಹಲಿ ಇವರ ಪೂರ್ವಜರ ನೆಲೆಯಾಗಿತ್ತೆಂದು ತಿಳಿಯುತ್ತದೆ. ಮೊಗಲರ ದಾಳಿಯಿಂದ ನಿರಾಶ್ರಿತರಾಗಿ ಜಯಪುರಕ್ಕೆ ಬಂದರಂತೆ, ಅಲ್ಲಿಂದ ಕೊಲ್ಲಾಪುರ, ಬೆಳಗಾವಗಳಲ್ಲಿ ಹಲವು ವರ್ಷವಾಸವಾಗಿದ್ದು ಧಾರವಾಡ ಜಿಲ್ಲೆಯ ಹುಲಿಕೊಪ್ಪ ಗ್ರಾಮಕ್ಕೆ ಬಂದು ನೆಲೆಸಿದರಂತೆ ಅಲ್ಲಿಂದ ಈಗ ಕಲಘಟಗಿಗೆ ಬಂದು ಶಾಶ್ವತ ನೆಲೆ ಕಂಡುಕೊಂಡಿರುವುದಾಗಿ ಹೇಳುತ್ತಾರೆ. ಈಗ ಮೂರ್‍ನಾಲ್ಕು ತಲೆಮಾರುಗಳಿಂದ ಕಟ್ಟಿಗೆ ಕರಕುಶಲ ಕಲೆಯಲ್ಲಿ ನಿಪುಣರಾಗಿರುವ ಈ ಕಲಾವಿದರ ಪೂರ್ವಜರು ಅರಿವೆ ಅಂಗಡಿಯಲ್ಲಿ ಕೆಲಸಕ್ಕಿದ್ದರಂತೆ ಇವರು ಮೂಲತಃ ಮರಾಠಿಗರಾದರೂ ಮಾತೃಭಾಷೆಯಾಗಿ ಕನ್ನಡವನ್ನು ಬಳಸುತ್ತಾರೆ.[೧೭]

ಕಲಾಕೃತಿಗಳು :

ಕಲಘಟಗಿಯ ಈ ಕಲಾವಿದರು ತಯಾರಿಸುವ ಕಲಾಕೃತಿಗಳಲ್ಲಿ ಸುಂದರವಾದ ಬಣ್ಣದ ತೊಟ್ಟಿಲುಗಳು ಮತ್ತು ದೇವರ ಕಲಾತ್ಮಕವಾದ ವಿವಿಧ ವಿನ್ಯಾಸಗಳ ಪಲ್ಲಕ್ಕಿಗಳು

---

೧೭. ಡಾ. ಎಸ್. ಸಿ. ಪಾಟೀಲ್ ಸತ್ಯಾನಂದ ಪಾತ್ರೋಟ ಸಂ.: ನಿಜದ ನೆಲೆ, ಡಾ. ಧನವಂತ ಹಾಜವಗೋಳ , ಪುಟ ೧೫೨-೧೬೦.

ಪ್ರಮುಖವಾಗಿವೆ. ಅಲ್ಲದೆ ಸೋಪಾಸೆಟ್ಟುಗಳು, ತೂಗಮಂಚಗಳು, ವಿವಿದ ವಿಗ್ರಹಗಳು ಗಂಗೆ,ಗೌರಿ ಮಂಟಪಗಳು, ಗ್ರಾಮದೇವತೆಗಳು ಮುಂತಾದವುಗಳನ್ನು ತಯಾರಿಸುತ್ತಾರೆ. ಮಕ್ಕಳ ಆಟಿಕೆ ವಸ್ತುಗಳು, ಲತ್ತಿಗುಣಿ, ಬಾರಕೋಲು, ಹಿಡಿಕೆಗಳನ್ನು ಸಿದ್ಧಪಡಿಸುತ್ತಾರೆ. ಇವರು ರಚಿಸಿದ ಕಲಾಕೃತಿಗಳು ದೇಶದಲ್ಲೆಡೆ ಜನಮೆಚ್ಚಿಗೆಗಳಿಸಿವೆ. ಹಲವು ಕಡೆ ಪ್ರದರ್ಶನಗೊಂಡಿವೆ ; ಅಪಾರ ಸಂಖ್ಯೆಯಲ್ಲಿ ಮಾರಾಟವಾಗಿವೆ.

ತೊಟ್ಟಿಲುಗಳ ಪಟ್ಟಿಗಳ ಮೇಲೆ ಬರೆಯುವ ಕಿರುರೂಪದ ಚಿತ್ರಗಳು ಕಲಘಟಗಿ ಕಲೆಯ ವೈಶಿಷ್ಟ್ಯವಾಗಿವೆ. ಜಂತಿಗೆ ಕಟ್ಟುವ ತೊಟ್ಟಿಲು, ನಿಲುಗಡೆಯ ತೊಟ್ಟಿಲು, ದೇವಿ ತೊಟ್ಟಿಲು, ಹರಕೆ ತೊಟ್ಟಿಲು, ಅಲಂಕಾರದ ತೊಟ್ಟಿಲು, ಹೀಗೆ ವಿವಿಧ ವಿನ್ಯಾಸಗಳಲ್ಲಿ ತೊಟ್ಟಿಲುಗಳನ್ನು ತಯಾರಿಸುತ್ತಾರೆ. ಚಿತ್ರವಿಚಿತ್ರವಾಗಿ ಕಿರುರೂಪದ ಚಿತ್ರಗಳನ್ನು ಬಿಡಿಸಿ ಬಣ್ಣಕೊಡುವ ಕಲೆಗಾರಿಕೆ ಅಪೂರ್ವವಾದುದು. ಕೃಷ್ಣನ ಅವತಾರದ ವಿವಿಧ ವಿನ್ಯಾಸಗಳ ಚಿತ್ರಗಳನ್ನು ಕಾಣಬಹುದು. ದೇವಕಿ ವಸುದೇವರಿಗೆ ವಿಷ್ಣು ವರಕೊಡುವುದು.ಕಂಸ ಬಂಧನದಲ್ಲಿಟ್ಟುರುವುದು ಕೃಷ್ಣನ ಜನನ, ಯಮುನ ನದಿದಾಟುತ್ತಿರುವುದು, ದೇವಕಿ ಹತ್ತಿರ ಮಲಗಿರುವುದು, ಬೆಣ್ಣೆ ಕದಿಯುವುದು. ಕಾಳಿಂಗ ಸರ್ಪಮೆಟ್ಟರುವುದು. ಗೋಪಿಕಾಸ್ತ್ರಿಯರ ವಸ್ತ್ರ ಕಳವು ಮಾಡುತ್ತಿರುವುದು. ವಿರಾಟರೂಪ ಪ್ರದರ್ಶಿಸುತ್ತಿರುವುದು. ಗೋವುಗಳನ್ನು ಕಾಯುತ್ತಿರುವುದು. ಪೂತನಿ ಸಂಹಾರ ಅಲ್ಲದೆ ರಾಮಾಯಣ, ಮಹಾಭಾರತದ ಧಾರ್ಮಿಕ ಘಟನೆಗಳನ್ನು, ಗ್ರಾಮದೇವತೆಗಳನ್ನು ಚಿತ್ರಿಸುತ್ತಾರೆ. ಆಯಾ ಮತದ ಭಕ್ತಿಗನುಗುಣವಾಗಿ ಚಿತ್ರಗಳನ್ನು ರಚಿಸುತ್ತಾರೆ. ಲಿಂಗಾಯತರು ಶಿವನ ಅವತಾರ ಚಿತ್ರ ಬಯಸಿದರೆ, ವೈದಿಕರು ಕೃಷ್ಣಾವತಾರದ ಚಿತ್ರಗಳನ್ನು ಆಪೇಕ್ಷಿಸುತ್ತಾರೆ. ಮುಸ್ಲಿಂರ ಮಕ್ಕಾ-ಮದಿನಾ, ಮಸಿದಿ, ಪೈಗಂಬರ ಜೀವನ ಚಿತ್ರಾ ಬಯಸುತ್ತಾರೆ ಅವರವರ ಆಸೆ, ಆಸಕ್ತಿಗಳಿಗೆ ಅನುಗುಣವಾಗಿ ಮನಮೋಹಕ ಚಿತ್ರ ಬರೆಯುತ್ತಾರೆ.

ಬದುಕಿನ ನಿರ್ವಾಹಣೆಯ ಅನಿವಾರ್ಯತೆಗೆ ಒಂದೇ ಕೆಲಸವನ್ನು ನಂಬಿಕೊಳ್ಳದ ಈ ಕಲಾವಿದರು ದುರಗಮ್ಮ , ದ್ಯಾಮಮ್ಮ, ಕರೆಮ್ಮ, ಮಾರೆಮ್ಮ, ಉಡುಚಮ್ಮ ಮೊದಲಾದ ಸ್ತ್ರೀದೇವತೆಯರ ವಿಗ್ರಹಗಳನ್ನು ತಯಾರಿಸುತ್ತಾರೆ. ಮಂಟಪದ ಮೇಲೆ ಸಣ್ಣ ಸಣ್ಣ ಆಕೃತಿ ಚಿತ್ರಗಳನ್ನು ಬಿಡಿಸಿ-ವಿವಿಧ ಬಣ್ಣ ತುಂಬಿ ವರ್ಣಮಯವಾಗಿ ಮಾಡುತ್ತಾರೆ. ತೊಟ್ಟಿಲು,ಪಲ್ಲಕ್ಕಿ, ಮಣೆ,ಮಂಚ,ದೇವತಾ ವಿಗ್ರಹ ಗಣೇಶನ ಮೃತ್ತಿಕಾ ವಿಗ್ರಹ,ಸೂಕ್ಷ ಚಿತ್ರಗಾರಿಕೆ ಇವರ ವಿಶೇಷತೆಯಾಗಿದೆ. ಈ ಕಲೆಯನ್ನು ಜೀವನೋಪಾಯದ ವೃತ್ತಿಯನ್ನಾಗಿ ಇವರು ಮುಂದುವರೆಸಿ ಕೊಂಡು ಬಂದಿದ್ದಾರೆ.[೧೮]

ತಾಳಿಕೋಟೆಯ ಹಸ್ತಪ್ರತಿ ವರ್ಣ ಚಿತ್ರಕಲೆ :

---

೧೮. ಡಾ. ಎಸ್. ಸಿ. ಪಾಟೀಲ್ ಸತ್ಯಾನಂದ ಪಾತ್ರೋಟ ಸಂ.: ನಿಜದ ನೆಲೆ ಡಾ. ಧನವಂತ ಹಾಜವಗೋಳ , ಪುಟ- ೧೫೨-೧೬೦.

ಬಿಜಾಪೂರ ಜಿಲ್ಲೆಯ ತಾಳಿಕೋಟೆಯ ವರ್ಣಗಾರಿಕೆಯೂ ವಿನೂತನವಾದುದು. ಈ ಕುರಿತು ಲೇಖಕರಾಗಿರುವ ಜಿ.ಎಸ್.ಭೂಸಗೊಂಡರು ಈ ರೀತಿಯಾಗಿ ವಿವರಿಸುತ್ತಾರೆ. 80 ವರ್ಷದ ವಯೋವೃದ್ಧ ಕುಬೇರಪ್ಪ ರಾಮಪ್ಪ ಬುಸಾರೆ ಮೂರು ತಲೆಮಾರಿನ ಇತಿಹಾಸ ಗೊತ್ತಿರುವ ಮಾಗಿದ ಜೀವ. ಚಿತ್ರಗಾರ ವೃತ್ತಿಮಾಡುವ ಈ ಜನ ಮೂಲತಃ ತಾಳಿಕೋಟೆಯವರೆ ಎಂದು ಸ್ಪಷ್ಟಪಡಿಸುತ್ತಾರೆ. ಧರ್ಮರಾಜನ ವಂಶದ ಯಯಾತಿ, ಅವನಮಗ ಪುರು ಅವನ ವಂಶ "ಸೋಮ ವಂಶ" ಕ್ಷತ್ರಿಯ ಮತಕ್ಕೆ ಸೇರಿದ ಜನಾಂಗದವರು ನಿಮಿಷಾಂಬಾ ಇವರ ಕುಲದೇವತೆ, ಅಂಬಾ ಭವಾನಿ ಇವರ ಆರಾಧ್ಯ ದೇವರು. ಕುಬೇರಪ್ಪ ಭೂಸಾರೆ,ಧರ್ಮಾಜಪ್ಪ ಚಿತ್ರಗಾರ, ರಾಮಪ್ಪ ಚಿತ್ರಗಾರ, ಬಾಬು ಮುಂತಾದವರು ತಾಳಿಕೋಟೆ ಕಲಾವಿದರಾಗಿದ್ದು ಕುಬೇರಪ್ಪ ಸ್ವಾತಂತ್ರ ಹೋರಾಟಗಾರರು ಹೌದು ಜನರು ಪರಿಶ್ರಮದ ಕೆಲಸಗಾರರಾದರೂ ಬಹಳ ಜನ ನಿರಕ್ಷರಿಗಳಾಗಿದ್ದಾರೆ.

ನೈಸರ್ಗಿಕ ಮೂಲದಿಂದ ಇವರು ವರ್ಣಗಳನ್ನು ತಯಾರಿಸಿಕೊಳ್ಳುತ್ತಾರೆ. ಸ್ಥಳಿಯವಾಗಿ ದೊರೆಯುವ ಬಿಳಿಕಲ್ಲು, ಅಂಟು ಮತ್ತು ನಿಸರ್ಗ ಮೂಲದ ಅಂಶಗಳಿಂದ ಬಣ್ಣಗಳನ್ನು ತಯಾರಿಸಿಕೊಳ್ಳುತ್ತಾರೆ. ಅದೇ ರೀತಿ ಸ್ಥಳೀಯವಾಗಿ ದೊರೆಯುವ ಹೊನ್ನಿ, ಕಿನ್ನಿ, ರಕ್ತ ಭೂತಾರಾಕ್ಷಿ, ಹಾಲಗುರ್ಕಿ, ಹೆದ್ದಿ, ಮಾವು, ಬನ್ನಿ, ಬಸರಿ, ಆಲ, ಮಳಗ್ಯಾನಕಟ್ಟಿಗೆ ಮತ್ತಿ ಕಟ್ಟಿಗೆಗಳಿಂದ ಮೂರ್ತಿ, ಮಂಟಪ ಮತ್ತು ಜನೋಪಯೋಗಿ ವಸ್ತುಗಳನ್ನು ತಯಾರಿಸಿಕೊಡುತ್ತಾರೆ. ಇದೇ ರೀತಿ ದ್ಯಾಮವ್ವ ಕಾಳಮ್ಮ, ಮರಗಮ್ಮ ಮತ್ತು ಮರುಗಮ್ಮನ ಗುಡಿ, ದುರ್ಗಾದೇವಿ, ದೇವತೆಗಳ ವಾಹನಗಳಾದ ಹುಲಿ,ಸಿಂಹ, ಆನೆ, ಕುದುರೆ, ಗಂಗೆ ಗೌರಿ,ಪಲ್ಲಕ್ಕಿ, ಡೊಳ್ಳಿನ ಪಡಗ, ಶಿವ, ಪಾರ್ವತಿ, ಬಸವಣ್ಣ ಗಂಗೆ ಗೌರಿ ಯಂತಹ ಮೂರ್ತಿಗಳನ್ನು ಈ ಜನರು ಮಾಡುತ್ತಾರೆ.ಜನರ ಬೇಕು - ಬೇಡಗಳು ಇವರ ಕಲೆಯ ಮೂಲವಾಗಿದ್ದು ಜನ ಬಯಸಿದ ಯಾವುದೇ ವಿಧದ ಕಲಾಕೃತಿಯನ್ನು ಈ ಜನರು ಮಾಡಿ ಕೊಡುತ್ತಾರೆ. ಅವಶ್ಯಕತೆಯೇ ಆವಿಷ್ಕಾರಕ್ಕೆ ಮೂಲವಾಗಿರುವಂತೆ ಜನರಿಗೆ ಬೇಕಾದ ಐದು ಅಡಿ ಎತ್ತರದ ಕಲಾಕೃತಿಯಿಂದ ಒಂದು ಅಂಗುಲದ ಅಳತೆಯೊಳಗೆ ಅವರು ಕೃತಿಗಳು ರಚಿಸಬಲ್ಲರು. ಜನರ ಬಯಕೆಗಯನ್ನು ಅನುಸರಿಸಿ ಬೆಳೆಯುತ್ತಿರುವ ಈ ಕಲಾವಿದರು ಬಹು ಪರಿಶ್ರಮಿಗಳು ಆಗಿದ್ದಾರೆ.[೧೯]

ಹಸ್ತಪ್ರತಿಯ ಉದ್ಧರಣೆಯ ಚಿತ್ರ ಕಲಾವಿದರು :

ಭಾರತೀಯರ ಯೋಗ ಮತ್ತು ವೀರಶೈವಧಾರ್ಮಿಕ ಸಾಹಿತ್ಯದ ಸಾದೃಶ್ಯಕೆ ಗಳಂತಿರುವ ಉದ್ಧರಣೆಯ ಚಿತ್ರಗಳು ಅನೇಕ ಬೀಜಾಕ್ಷರ, ಸಾಂಕೇತಿಕ ನಕ್ಷೆಗಳು, ಚಕ್ರಗಳು, ಕಮಲದಳಗಳನ್ನು ಮತ್ತು ಮಂತ್ರದ ಬೀಜಾಕ್ಷರಗಳನ್ನು ಒಳಗೊಂಡಿರುವ ಅನುಪಮವಾದ ಕಲಾಕೃತಿಗಳಾಗಿವೆ. ಇವು ಕರ್ನಾಟಕದಾದ್ಯಂತದ ವೀರಶೈವ ಮಠಗಳಲ್ಲಿ, ಹಸ್ತ ಪ್ರತಿ ಭಂಡಾರಗಳಲ್ಲಿ ದೊರೆಯುತ್ತವೆ ಆದರೆ ಕಲಾವಿದರು, ಕಲಾ ನಿರ್ದೇಶಕರು ಯಾರು ಎಂಬುದು ಗೊತ್ತಾಗುವುದಿಲ್ಲ ಆದರೆ ಮೈಸೂರಿನ ಉದ್ಧರಣೆಗಳು ಕರ್ನಾಟಕದ ಉದ್ಧರಣೆಗಳಲ್ಲಿಯೇ ವಿಶೇಷವಾದುದಾಗಿದ್ದು

---

೧೯. ಡಾ. ಎಸ್. ಸಿ. ಪಾಟೀಲ್ ಸತ್ಯಾನಂದ ಪಾತ್ರೋಟ ಸಂ. : ನಿಜದ ನೆಲೆ , ಜಿ.ಎಸ್.ಭೂಸಗೊಂಡ, ಪುಟ- ೧೬೪

ಅವುಗಳನ್ನು ಕುರಿತು ಹಿರಿಯ ವಿದ್ವಾಂಸರು, ಶರಣ ಸಾಹಿತಿಗಳು ಬಸವಾಭಿಮಾನಿಗಳೂ ಆಗಿರುವ ಡಾ|| ಹೆಚ್. ತಿಪ್ಪೇರುದ್ರಸ್ವಾಮಿಯವರು ಈ ರೀತಿ ವಿವರಿಸುತ್ತಾರೆ.

"ಮೈಸೂರಿನ ಪ್ರಾಚ್ಯ ಸಂಶೋಧನಾ ಸಂಸ್ಥೆಯಲ್ಲಿ ಎರಡು ಕಟ್ಟುಗಳು ದೊರೆಯುತ್ತವೆ. ಇವುಗಳಲ್ಲಿ ಒಂದು ಬಹುಶಃ ಮುಮ್ಮಡಿ ಕೃಷ್ಣರಾಜ ಒಡೆಯರ ಕಾಲ ಅಥವಾ ಸ್ವಲ್ಪ ಈಚೆಗೆ ರಚಿತವಾಗಿರಬೇಕು. ಇನ್ನೊಂದು ಕಟ್ಟು ಈ ಶತಮಾನದ ಪ್ರಾರಂಭದಲ್ಲಿ ನಿರ್ಮಿತವಾದುದು" ಶ್ರೀ ಜಗದ್ಗುರು ನಾಗಲಿಂಗ ಪರಿವ್ರಜಕಾಚಾರ್ಯರ ಮಠಾಧ್ಯಕ್ಷರಾದ ಶ್ರೀ ಶಿಲ್ಪ ಸಿದ್ಧಾಂತಿ ಸಿದ್ಧಲಿಂಗ ಸ್ವಾಮಿಗಳವರಿಂದ ಪ್ರಾಚೀನ ಪ್ರತಿಯನ್ನುನುಸರಿಸಿ ಪರಿಷ್ಕರಿಸಲ್ಪಟ್ಟು ಚಿತ್ರಿಸಿದ ಉದ್ದರಣೆ ಪಟಗಳು ಎಂದು ಇವುಗಳ ಪ್ರಾರಂಭದಲ್ಲಿ ಹೇಳಿರುವುದುರಿಂದ ಈ ವಿಚಾರದಲ್ಲಿ ಸಂದಿಗ್ದತೆಗೆ ಅವಕಾಶವಿಲ್ಲ. ಆದರೆ ಅವರು ಪ್ರಾಚೀನ ಪ್ರತಿಯನ್ನು ನುಸರಿಸಿ ಚಿತ್ರಿಸಿದರೆಂದು ಹೇಳಿರುವುದು ಗಮನಾರ್ಹ ಆ ಪ್ರಾಚೀನ ಪ್ರತಿ ಯಾವುದೋ ? ತಿಳಿಯದಾಗಿದೆ. ಅಂತೂ ಅವು ಬಹಳ ಕುತೂಹಲಕರವಾದ ಚಿತ್ರಗಳಿಂದ ಕೂಡಿವೆ.[೨೦] (ಉದ್ದರಣೆಗಳ ವಿವರಕ್ಕೆ ವೀರಶೈವ ಹಸ್ತಾಪ್ರತಿ ಚಿತ್ರಕಲೆಯನ್ನು ಗಮನಿಸಿರಿ)

ಶ್ರೀ ತತ್ತ್ವ ನಿಧಿ ಹಸ್ತಪ್ರತಿ ಚಿತ್ರಕಲಾವಿದರು :

ಮೈಸೂರು ಅರಸರಿಂದಲೇ ಮೂಡಿಬಂದ ಶ್ರೀತತ್ತ್ವನಿಧಿ ಗ್ರಂಥದಲ್ಲಿ ಅನೇಕ ಭಾಗಗಳಿವೆ. ಇದೊಂದು ಸಂಕೀರ್ಣಗ್ರಂಥ. ಈ ಗ್ರಂಥದೊಳಗಿನ ಚಿತ್ರಕಲಾವಿದರ ಕುರಿತು ಕನ್ನಡನಾಡಿನ ಹಿರಿಯ ವಿದ್ವಾಂಸರಾಗಿರುವ ಡಾ. ಎಂ.ಎಂ.ಕಲಬುರ್ಗಿಯವರು ಈ ರೀತಿಯ ವಿವರಣೆಯನ್ನು ನೀಡಿದ್ದಾರೆ.....ಮೈಸೂರು ಪ್ರಾಚ್ಯವಿದ್ಯಾ ಸಂಶೋಧನಾಲಯದಲ್ಲಿರುವ ವೈಷ್ಣವ ಪರಂಪರೆಗೆ ಸೇರಿದ. ಮುಮ್ಮಡಿ ಕೃಷ್ಣರಾಜರ ಕಾಲದಲ್ಲಿ ರಚಿತವಾದ ಶ್ರೀತತ್ತ್ವನಿಧಿ ಹೆಸರಿನ 1146 ಪುಟಗಳ ಗ್ರಂಥದಲ್ಲಿ 2000ಕ್ಕೂ ಮೇಲ್ಪಟ್ಟು ಸುಮದರ ವರ್ಣ ಚಿತ್ರಗಳಿವೆ. ಇವುಗಳನ್ನು ಬಿಡಿಸಿದವನು ತಿಪ್ಪಯ್ಯ ನೆಂಬ ಕಲಾವಿದನೆಂದು ತಿಳಿದು ಬರುತ್ತದೆ. ಇದಲ್ಲದೆ ಕನ್ನಡ ಅಧ್ಯಯನ ಸಂಸ್ಥೆಯ, ಚದುರಂಗ ಚಕ್ರ, ಗಂಜೀಫು ಆಟಗಳು ಇತ್ಯಾದಿ ಹೆಸರಿನ ಹಸ್ತಪ್ರತಿಯಲ್ಲಿ ನಂದಿ, ಬಾಲಗೋಪಾಲ, ಬ್ರಹ್ಮ, ಲಕ್ಷ್ಮೀ, ಗಿರಿಜೆ, ಗಣಪತಿ, ಸರಸ್ವತಿ, ಕಾಮಧೇನು ಮೊದಲಾದ ಅಪೂರ್ವ ವರ್ಣಚಿತ್ರಗಳು ಕಂಡುಬರುತ್ತವೆ.[೨೧]

ಕಾಗದದ ಹಸ್ತಪ್ರತಿ ಚಿತ್ರಕಲಾವಿದ ಶ್ರೀ ತಿಪ್ಪಾಜಪ್ಪ ಶಿಖಾರಿಪುರ :

ಕನ್ನಡ ನಾಡಿನ ಕಲೆಯ ಕೀರ್ತಿಯನ್ನು ಗಗನೆತ್ತರದವರೆಗೂ ಎರಿಸಿದ ಕರ್ನಾಟಕದ ಹಸ್ತಪ್ರತಿ ಚಿತ್ರಸಂಪ್ರದಾಯದ ಕಲಾವಿದರಲ್ಲಿ ಶಿವಮೊಗ್ಗ ಜಿಲ್ಲೆಯ ಶಿಖಾರಿಪುರದ ತಿಪ್ಪಾಜಿ ರಾವ್ ಚಿತ್ರಗಾರರು ಅತ್ಯಂತ ಪ್ರಮುಖರು ಅಂದಿನ ಮೈಸೂರು ಅರಸರ ಆಸರೆ ಬಯಸಿ ಬಂದವರಲ್ಲಿ ಅಸಂಖ್ಯಾತರಿದ್ದಾರೆ. ಆ ಆಸರೆಯನ್ನು ನಿರಾಕರಿಸಿ ತಮ್ಮ ಸ್ವಾಭಿಮಾನದಿಂದ ಕಲೆಯ ದಿಗಂತದೆತ್ತರಕ್ಕೆ ಎರಿಸಿದವರಲ್ಲಿ ತಿಪ್ಪಾಜಿಯವರು ಒಬ್ಬರು. ತಿಪ್ಪಾಜಿಯವರ ಸಮೀಪದ ಸಂಬಂಧಿ

---

೨೦. ಡಾ. ಎಂ.ಎಂ. ಕಲಬುರ್ಗಿ : ಕನ್ನಡ ಹಸ್ತಪ್ರತಿ ಶಾಸ್ತ್ರ , ಪುಟ -೩೭.

೨೧. ಡಾ. ಎಸ್.ಕೆ. ರಾಮಚಂದ್ರರಾವ್ : ಶ್ರೀ ತತ್ತ್ವನಿಧಿ , ಸ್ವರಚೂಡಾಮಣಿ ಚಿತ್ರಗಳು.

ಕರ್ನಾಟಕದ ಹಸ್ತಪ್ರತಿ ಚಿತ್ರಕಲೆ- ಒಂದು ಅಧ್ಯಯನ

ಕಾಗದದ ಹಸ್ತ ಪ್ರತಿಗಳಲ್ಲಿ ರೇಖಾ ಚಿತ್ರಗಳು

ಕಲಾವಿದರು : ಶಿಕಾರಿಪುರದ ತಿಪ್ಪಾಜಪ್ಪನವರು



ಕೃಪೆ:
ಶಿಲ್ಪಿ ಶ್ರೀ ಕಾಶಿನಾಥ ಮತ್ತು ಜ್ಞಾನೇಶ್ವರ್ ಕೌಟೇಕರ್ ಸಹೋದರರು.
ಮಹಾಕವಿ ಕಾಳಿದಾಸ ರಸ್ತೆ, ಶಿವಮೊಗ್ಗ.

ಕಾಗದದ ಹಸ್ತ ಪ್ರತಿಗಳಲ್ಲಿ ರೇಖಾ ಚಿತ್ರಗಳು

ಕಲಾವಿದರು : ಶಿಖಾರಿಪುರದ ತಿಪ್ಪಾಜಪ್ಪನವರು



ಕೃಪೆ :

ಶಿಲ್ಪಿ ಶ್ರೀ ಕಾಶಿನಾಥ ಮತ್ತು ಜ್ಞಾನೇಶ್ವರ್ ಕೌಟೇಕರ್ ಸಹೋದರರು.

ಮಹಾಕವಿ ಕಾಳಿದಾಸ ರಸ್ತೆ, ಶಿವಮೊಗ್ಗ.

ಕಾಗದದ ಹಸ್ತ ಪ್ರತಿಗಳಲ್ಲಿ ರೇಖಾ ಚಿತ್ರಗಳು

ಕಲಾವಿದರು : ಶಿಕಾರಿಪುರದ ತಿಪ್ಪಾಜಪ್ಪನವರು



ಕೃಪೆ:

ಶಿಲ್ಪಿ ಶ್ರೀ ಕಾಶಿನಾಥ ಮತ್ತು ಜ್ಞಾನೇಶ್ವರ್ ಕೌಟೇಕರ್ ಸಹೋದರರು.

ಮಹಾಕವಿ ಕಾಳಿದಾಸ ರಸ್ತೆ, ಶಿವಮೊಗ್ಗ.

ಯಾಗಿರುವ ಸಂಪ್ರದಾಯದ ಕಲಾವಿದ, ಶಿಲ್ಪ ಮತ್ತು ವಿಜ್ಞಾನ ಪದವಿಧರರಾಗಿರುವ ಶಿವಮೊಗ್ಗೆಯ ಹಾಲುಕೊಳದ ಬಡಾವಣೆಯಲ್ಲಿರುವ ಶ್ರೀ ಜ್ಞಾನೇಶ್ವರ ಕೌಟೇಕರ್ ಅವರು ತಮ್ಮ ಮಾತುಗಳಲ್ಲಿ ತಿಪ್ಪಾಜಿಯವರ ವಿವರಣೆಯನ್ನು ಹೀಗೆ ಕೋಡುತ್ತಾರೆ.

ತಿಪ್ಪಾಜಿಯವರು ಹುಟ್ಟಿದ್ದು ಅನೇಕ ಪ್ರತಿಭಾವಂತ ಕಲಾವಿದರಿಗೆ ಜನ್ಮ ನೀಡಿರುವ ಶಿಖಾರಿಪುರದಲ್ಲಿ ನಿಖರವಾದ ದಿನಾಂಕ ತಿಳಿದು ಬರದಿದ್ದರೂ ಇವರು ಕ್ರಿ.ಶ.1830ರ ದಶಕದಲ್ಲಿ ಹುಟ್ಟಿರಬಹುದೆಂದು ಎಂದು ಖಚಿತವಾಗಿ ಊಹಿಸಬಹುದು. ಇವರ ತಂದೆ ಖಂಡಪ್ಪನವರು ಇವರ ಪ್ರಾರಂಭಿಕ ಶಿಕ್ಷಣ ತಂದೆಯವರಲ್ಲೆ ನಡೆಯಿತು. ತಂದೆಯವರು ಶಿಖಾರಿಪುರದಲ್ಲಿ ಪ್ರಸಿದ್ಧಕಾಷ್ಟ ಲೋಹ ಶಿಲ್ಪಿಗಳಾಗಿದ್ದು ಮರ, ಕಂಚು, ಹಿತ್ತಾಳೆಗಳಲ್ಲಿ ಮೂರ್ತಿಗಳನ್ನು ತಯಾರಿಸುತ್ತಿದ್ದರು. ಮಗ ತಿಪ್ಪಾಜಿ ಇವರ ಕೆಲಸದಲ್ಲಿ ಸಹಾಯ ಮಾಡುತ್ತಾ ಬೇಲೂರು, ಹಳೇಬಿಡು ಸ್ಥಳ ಸುತ್ತುತ್ತಿದ್ದರಿಂದರಂತೆ.

ಕಲಾವಿದನಾದವನು ಕಷ್ಟ ಯಾತನೆಗಳನ್ನು ಅನುಭವಿಸಲೇ ಬೇಕು ಎಂಬುದು ಪ್ರಕೃತಿಯ ನಿಯಮವಾದ ಕಾರಣ. ತಿಪ್ಪಾಜಿಯವರು ತಮ್ಮ ಜೀವಿತಕಾಲದಲ್ಲಿ ಅನೇಕ ಕಷ್ಟ ನಷ್ಟಗಳನ್ನು ಅನುಭವಿಸಿದರು. ಕಿತ್ತು ತಿನ್ನುವ ಬಡತನ ತುಂಬು ಸಂಸಾರ ಜೀವನ ನಿರ್ವಾಹಣೆ ಮಧ್ಯ ಕಲಾರಾಧನೆ ಮುಂದುವರೆಸಿದರು. ಶ್ರೀಮಂತರ ಸಾಲದ ದಾಕ್ಷಿಣ್ಯಕ್ಕಾಗಿ ತಮ್ಮ ಅಮೂಲ್ಯ ಕಲಾಕೃತಿಗಳನ್ನು ಕೊಟ್ಟಬಿಟ್ಟರು. ಬಡತನಕ್ಕೆ ಏನಾದರೂ ಬದಲಾವಣೆಯಾದೀತೆ ಎಂದು ಬಯಸಿ ಮೈಸೂರು ಅರಸರ ಆಶ್ರಯಕ್ಕೆ ಬಂದರು ಇವರ ಕಲಾಪ್ರೌಢಿಮೆಗಾಗಿ ಇವರಿಗೆ ರಾಜಾಶ್ರಯ ಕೂಡಾ ದೊರೆಕಿತು ಅಲ್ಲಿ ಅನೇಕ ಚಿತ್ರಪಟಗಳನ್ನು, ಕವಿಪಾಠಗಳಿಗೆ ತಕ್ಕಂತೆ ಹಸ್ತಪ್ರತಿಗಳಲ್ಲಿ ಚಿತ್ರಗಳನ್ನು ರಚಿಸಿದರು. ಇಂದಿಗೂ ಜಗನ್ಮೋಹನ ಅರಮನೆಯಲ್ಲಿರುವ ''ಕೃಷ್ಣಾರ್ಜುನರ-ಕಾಳಗ'' ಇವರ ಶ್ರೇಷ್ಠಕಲಾವಂತಿಕೆಗೆ ಸಾಕ್ಷಿಯಾಗಿದೆ.[೨೨] ಮತ್ತು ಶಿವಮೊಗ್ಗದ 48ನೇ ದೊಡ್ಡ ಬ್ರಹ್ಮಣರ ಬೀದಿಯಲ್ಲಿರುವ ಶ್ರೀ ಕೆ.ಎಸ್.ಚಕ್ರಪಾಣಿ ಮತ್ತು ರಾಮರಾವ್ ಕರೋಡೆ ಪ್ಲೀಡರ ಅವರ ಮನೆಯೊಳಗೆ ಇರುವ ನಾಲ್ಕು ವೈಷ್ಣವ ಕಲಾಕೃತಿಗಳು ತಿಪ್ಪಾಜಿಯವರ ಹಿರಿಮೆಯನ್ನು ಸಾರುತ್ತಿವೆ. ರೇಖಾ ಚಿತ್ರವಾಗಲಿ ವರ್ಣ ಚಿತ್ರಗಳ ಸಂಯೋಜನೆಯಲ್ಲಿರುವ ರೇಖೆಗಳ ಓಟದ ಬೀಸು, ವರ್ಣಚಿತ್ರಗಳೊಳಗಿರುವ ವಿಭಿನ್ನ ಭಾವಸ್ಪರ್ಶಗಳು ಇವರ ಕಲೆಯ ಹಿರಿಮೆಯನ್ನು ಸಾರುತ್ತವೆ.

ಡಾ. ಎಂ. ಎಂ. ಕಲ್ಬುರ್ಗಿಯವರು ಮತ್ತು ಶ್ರೀ ಎಚ್.ದೇವಿರಪ್ಪನವರು ತಮ್ಮ ಕೃತಿಗಳಲ್ಲಿ ಶ್ರೀ ತತ್ತ್ವನಿಧಿ ಹೆಸರಿನ ಗ್ರಂಥದಲ್ಲಿಯ ಚಿತ್ರಗಳಲ್ಲಿ ಕೃಷ್ಣಾರ್ಜುನರ ಕಾಳಗದ ಕಲಾವಿದ ತಿಪ್ಪಯ್ಯ ಎಂದು ಹೆಸರಿಸುವ ವ್ಯಕ್ತಿಯೇ ಶ್ರೀ ತಿಪ್ಪಾಜಪ್ಪನವರಾಗಿರಬೇಕು. ಅಲ್ಲದೇ ಮೂಡ ಬಿದರೆಯ ತ್ರಿಭುವನ ತಿಲಕ ಚುಡಾಮಣಿ ಜೈನ ಮಠದೊಳಗೆ ಇರುವ ಭಿತ್ತಿ ಚಿತ್ರಗಳನ್ನು ಬಹುಶಃ ತಿಪ್ಪಾಜಿಯವರೆ

೨೨. ಕನ್ನಡ ಅಧ್ಯಯನ ಸಂಸ್ಥೆ: ಮಾನಸಗಂಗೋತ್ರಿ, ಮೈಸೂರು ವಿಶ್ವವಿದ್ಯಾಲಯ ಮೈಸೂರು.

ಮಾಡಿರಬೇಕು. ಶ್ರೀ ಜ್ಞಾನೇಶ್ವರ ಕೌಟೇಕರ ಅವರ ಸಂಹಗ್ರಹದಲ್ಲಿ ಶ್ರೀ ತಿಪ್ಪಾಜಿಯವರು ರಚಿಸಿದ 78 ಕಾಗದದ ಹಸ್ತ ಪ್ರತಿಯ ಚಿತ್ರಗಳಿವೆ. 7×9 ಅಂಗುಲಗಳ ಅಳತೆಯ ಬಹು ವೈವಿಧ್ಯಮಯ ರೇಖಾ ಚಿತ್ರಗಳಿವೆ ಕಾಮಧೇನು, ಧರ್ಮರಾಯನ ಸಭಾ, ಪಂಚನಾರಿ ತರುಗ, ಈಶಾನ್ಯ, ವಾಯುವ್ಯ, ನೈರುತ್ಯ, ಕುಬೇರಾ, ಯಮ, ವರುಣ, ಅಗ್ನಿ, ಇಂದ್ರ, ಕೃಷ್ಣ ವರಹ, ಪರಶುರಾಮ, ಕೂರ್ಮ, ಮೃತ್ಯು, ವೀರಭದ್ರ, ಸ್ತ್ರೀಲೋಲ, ಕೃಷ್ಣ ಶೇಷನಾರಾಯಣ, ರಾಮಪಟ್ಟಾಭಿಷೇಕ, ಶಿವತಾಂಡವದಂತಹ ಮತ್ತು ಅನೇಕ ರಾಜಕೀಯ ವ್ಯಕ್ತಿಗಳ ರೇಖಾ ಚಿತ್ರಗಳು ಶ್ರೀ ತಿಪ್ಪಾಜಿಯವರ ಹಿರಿಮೆಯನ್ನು ಸಾರುತ್ತವೆ.

ಸ್ವರಚೂಡಾಮಣಿಯ ಹಸ್ತಪ್ರತಿ ಚಿತ್ರಕಲಾವಿದರು :

ವಿಜಯನಗರ ಸಾಮ್ರಾಜ್ಯದ ಸಾಂಸ್ಕೃತಿಕ ಪರಂಪರೆಯಲ್ಲಿ ಮುಂದುವರಿದ ಭಾಗದಂತಿರುವ ಮೈಸೂರು ಒಡೆಯರ ಸಾಮ್ರಾಜ್ಯವು ಸಾಹಿತ್ಯ, ಸಂಗೀತಗಳಿಗೆ ನೀಡಿದ ಉತ್ತೇಜನದಂತೆಯೇ ಹಸ್ತಪ್ರತಿ, ಚಿತ್ರಕಲೆಗೂ ಪ್ರೋತ್ಸಾಹ ಕೊಟ್ಟ ಕಾರಣ ಶ್ರೀ ತತ್ತ್ವ ನಿಧಿಯಂತಹ ಸಂಕೀರ್ಣ ಗ್ರಂಥಗಳಲ್ಲಿಯ ಚಿತ್ರಕೃತಿಗಳು ಕವಿ ಪಾಠಗಳಿಗೆ ಸರಿಯಾಗಿ ದೃಶ್ಯ ಮಾಧ್ಯಮಗಳಾಗಿ ಕೃತಿಯ ಘನತೆಯನ್ನು ಹೆಚ್ಚಿಸಿವೆ. ಅಲ್ಲದೆ ಅನೇಕ ಪಟ ಚಿತ್ರಗಳು ಮೂಡಿ ಬರಲು ಕಾರಣವಾಗಿವೆ. ಈ ವಿಷಯ ಕುರಿತು ಕನ್ನಡ ನಾಡಿನ ಹಿರಿಯ ವಿದ್ವಾಂಸರು, ಬಹು ಭಾಷಾ ಬಲ್ಲಿದರು ಮತ್ತು ಚಿತ್ರ, ಶಿಲ್ಪಸಂಗೀತ ವಿದ್ಯಗಳನ್ನು ಬಲ್ಲ ಡಾ. ಸಾಲಿಗ್ರಾಮ ಕೃಷ್ಣ ರಾಮಚಂದ್ರರಾವ್ ಅವರು ಚಿತ್ರಕಲಾವಿದರ ಕುರಿತು ವಿವರವಾಗಿ ಈ ರೀತಿಯಲ್ಲಿ ವಿವರಿಸುತ್ತಾರೆ.

ಮುಮ್ಮಡಿಯವರು ಕಲಾ ರಸಿಕರು, ಸಂಗೀತ, ನೃತ್ಯಗಳಂತೆ ಚಿತ್ರ, ಶಿಲ್ಪಕಲೆಗಳಲ್ಲೂ ಅವರದ್ದು ನೈಜವಾದ ಆಸಕ್ತಿ ಚಿತ್ರಕಲೆಗಂತೂ ಅವರು ನೀಡಿದ ಪ್ರೋತ್ಸಾಹ ಹೆಚ್ಚಿನದು. ಅವರ ಹತ್ತಿರದ ಆಶ್ರಿತರಲ್ಲಿ ಜಾವಗಲ್ಲು ನರಸಿಂಹಯ್ಯ, ನಗೂನಳ್ಳಿ ನಾರಣಪ್ಪ ಯಲ್ಲಯ್ಯ, ವೀರಣ್ಣ, ಅಳಸಿಂಗ್ರಯ್ಯ, ಸುಂದರಯ್ಯ, ನೆಲಮಂಗಲದ ರಂಗಪ್ಪ ದುರ್ಗದ ಕೃಷ್ಣಪ್ಪ ಗುರಿಕಾರ ತಿಪ್ಪಣ್ಣ, ತಂಜಾವೂರು ಕೊಂಡಯ್ಯ, ವೆಂಕಟಸುಬ್ಬು ಮೊದಲಾದ ಚಿತ್ರಗಾರರಿದ್ದರು. ತಾವು ಬರೆದ ಪುಸ್ತಕಗಳಿಗೆ ಅವರಿಂದ ಚಿತ್ರ ಬರೆಯಿಸುವುದಲ್ಲದೆ ಸ್ವತಂತ್ರವಾದ ವ್ಯಕ್ತಿ ಚಿತ್ರಗಳನ್ನು ಬಿಡಿಸುವಂತೆ ಪ್ರೇರಿಸುತ್ತಿದ್ದರು. ಇಂಥ ಬಿಡಿ ಚಿತ್ರಗಳೇ ಮುಮ್ಮಡಿಯವರ ಕಾಲದಲ್ಲಿ ಸಿದ್ದವಾದವು ಒಂದು ಸಾವಿರದಷ್ಟಿವೆ. ಅರಮನೆಯಲ್ಲಿ ಪುರಾಣ ಕಥೆಗಳಿಂದ ಪ್ರಸಂಗಗಳನಾಯ್ದು ಚಿತ್ರಗಳನ್ನು ಮನೆಗಳಲ್ಲಿರಿಸಿಕೊಳ್ಳಲು ಮತ್ತು ಭಜನೆ ಮಂದಿರಗಳಿಗಾಗಿ ದಶಾವತಾರ, ವಿಶ್ವರೂಪ ದರ್ಶನ, ಚಾಮುಂಡೇಶ್ವರಿ,ರಾಜರಾಜೇಶ್ವರಿ ಮುಂತಾದ ದೇವತಾ ಚಿತ್ರಗಳನ್ನು ತಮ್ಮ ಚಿತ್ರಗಾರರಿಂದ ಬರೆಯುಸುತ್ತಿದ್ದರು. ತಾವು ಕಲ್ಪಿಸಿದ ಅಥವಾ ಜೀರ್ಣೋದ್ಧಾರ ಮಾಡಿದ ಹಲವು ಗುಡಿಗಳಲ್ಲೂ ಇವರ ಕಾಲದಲ್ಲಿ ಭಿತ್ತಿ ಚಿತ್ರಗಳು ತೂರಿಕೊಂಡವು.[೨೩]

---

೨೩. ಕೆ. ಜ್ಞಾನೇಶ್ವರ , ಡಾ. ಎ.ಲ.ನರಸಿಂಹನ್ ಸಂ.: ತಿಪ್ಪಾಜಪ್ಪನವರ ರೇಖಾಚಿತ್ರಗಳು, ಪುಟ -೨.

ಕರ್ನಾಟಕದ ಹಸ್ತಪ್ರತಿ ಚಿತ್ರಕಲೆ- ಒಂದು ಅಧ್ಯಯನ

ಕರ್ನಾಟಕದ ಹಸ್ತ ಪ್ರತಿಗಳಲ್ಲಿ ಶ್ರೀತತ್ತ್ವನಿಧಿಯ - ಶಕ್ತಿ ನಿಧಿ ಚಿತ್ರಗಳು



ಕೃಪೆ:

ಡಾ|| ಹೆಚ್.ಪಿ. ದೇವಕಿ, ಪ್ರಾಚ್ಯ ವಿದ್ಯಾ ಸಂಶೋಧನಾಲಯ

ಮೈಸೂರು ವಿಶ್ವವಿದ್ಯಾಲಯ, ಮೈಸೂರು.

ಮೈಸೂರು ಅರಸೊತ್ತಿಗೆಯಲ್ಲಿ ರಾಜವಡೆಯರ ಕಾಲದಿಂದಲೂ ಚಿತ್ರಕಲೆಗೆ ಪ್ರೋತ್ಸಾಹವಿದ್ದಿತು. ವಿಜಯನಗರ ಸಾಮ್ರಾಜ್ಯದಲ್ಲಿದ್ದ ಕಲಾಸಕ್ತಿ ಇವರ ಕಾಲದಲ್ಲಿ ಮೈಸೂರಿಗೆ ಬಂದಿಳಿಯಿತು. ಆ ಸಾಮ್ರಾಜ್ಯ ಮುರಿದು ಬಿದ್ದ ಮೇಲೆ ಅಲ್ಲಿದ್ದ ಕಲಾವಿದರಲ್ಲಿ ಬಹು ಮಂದಿ ಮೈಸೂರು ಕಡೆ ಬಂದರು. ವಿಜಯನಗರದ ದೊರೆಗಳಲ್ಲಿ ಕಡೆಯವನಾದ ತಿರುಮಲ ರಾಯನು ಶ್ರೀರಂಗ ಪಟ್ಟಣದಲ್ಲಿರುತ್ತಿದ್ದ. ಆ ಮನೆತನ ಅಳಿದ ಮೇಲೆ ರಾಜವಡೆಯರು ಶ್ರೀರಂಗ ಶ್ರೀರಂಗಪಟ್ಟಣವನ್ನೇ ರಾಜಧಾನಿಯನ್ನಾಗಿ ಮಾಡಿಕೊಂಡರು. ವಿಜಯನಗರ ಸಾಮ್ರಾಜ್ಯವೇ ಮುಂದುವರಿದಂತೆ ಆಯಿತು. ಚಿತ್ರಗಾರರೆನ್ನಲ್ಲ ತಮ್ಮಲ್ಲಿಗೆ ಕರೆಯಿಸಿ ಕೊಂಡು ಅವರಿಗೆ ನೆಲೆಗಾಣಿಸಿದರು. ಬಂದವರು ಬಹುಮಟ್ಟಿಗೆ ಕ್ಷತ್ರಿಯ ರಾಜು ಮನೆತನದ ಚಿತ್ರಗಾರರು; ಅವರ ಕುಲದೇವತೆ ನಿಮಿಷಾಂಬೆ, ರಾಜ ವಡೆಯರ ಕಾಲದಲ್ಲಿ ಶ್ರೀರಂಗಪಟ್ಟಣದಲ್ಲಿ ಚಿತ್ರಗಾರರದ್ದೇ ಪ್ರತ್ಯೇಕವಾಗಿ ವಸತಿಯಿದ್ದು, ಆದರ ನಡುವೆ ಶ್ರೀ ನಿಮಿಷಾಂಬಾ ದೇವಿಯ ಗುಡಿಯನ್ನು ಅರಸರೇ ಕಟ್ಟಿಸಿಕೊಟ್ಟರಂತೆ. ಕಂಠೀರವ ನರಸರಾಜ ವಡೆಯರ (1638-1956) ಆಸ್ಥಾನದಲ್ಲಿದ್ದ ಗೋವಿಂದ ವೈದ್ಯನೆಂಬ ಕವಿ ತಾನು ಬರೆದ ಕಂಠೀರವ 'ನರಸರಾಜ ವಿಜಯ' ಎಂಬ ಸಾಂಗತ್ಯ ಕೃತಿಯಲ್ಲಿ ಶ್ರೀರಂಗ ಪಟ್ಟಣವನ್ನು ಬಣ್ಣಿಸುತ್ತಾ ಊರಲ್ಲಿ ಚಿತ್ರಗಾರರದ್ದೇ ಕೇರಿಯೊಂದು ಇದ್ದುದನ್ನು ಉಲ್ಲೇಖಿಸುತ್ತಾನೆ.[೨೪]

ಶ್ರೀ ಸಾಲಿಗ್ರಾಮ ಕೃಷ್ಣ ರಾಮಚಂದ್ರರಾವ್ ಅವರು ಮೈಸೂರು ಅರಸರ ಕಾಲದಲ್ಲಿ ಕಲಾವಂತಿಕೆಯ ಶೈಲಿಯು ಭಿತ್ತಿಯಿಂದ ಗ್ರಂಥಕ್ಕೆ ಗ್ರಂಥದಿಂದ ಭಿತ್ತಿಯತ್ತ ಚದುರಿರುವ ಉದಾಹರಣೆಯನ್ನು ಪಾಂಡಿತ್ಯಪೂರ್ಣವಾಗಿ ನೀಡಿದ್ದಾರೆ. ಮುಮ್ಮಡಿಯವರ ಆಶ್ರಯದಲ್ಲಿ ಮೈದಳೆದ ಚಿತ್ರಕಲಾ ಪ್ರಕಾರವು ಯಾವೊಂದು ನಿರ್ಧಿಷ್ಟ ಶೈಲಿಯ ಒಂದು ಪಟ್ಟವೆಂದಾಗಲಿ, ಫಲವೆಂದಾಗಲಿ ಎಂದು ಹೇಳುವಂತಿಲ್ಲ; ಇದ್ದಕ್ಕಿದ್ದಂತೆ ಯಾವ ಪೂರ್ವೋತ್ತರವು ಇರದೆ ಕಾಣಿಸಿಕೊಂಡಿದ್ದು ಅಲ್ಲ. ಆಗ ಸಿದ್ದವಾಗಿ ಈಗ ಉಳಿದು ಬಂದಿರುವ ಕಲಾಕೃತಿಗಳನ್ನು ಪರಿಶೀಲಿಸಿದರೆ ಕೆಲವು ವಿವರಗಳು ಸ್ಪಷ್ಟವಾಗುತ್ತವೆ. ರಾಜಸ್ಥಾನ ಕಲಾ ಸಂಪ್ರದಾಯದಂತೆ (16-17 ಶತಮಾನಗಳಲ್ಲಿ, 18 ಶತಮಾನದಲ್ಲಿ ಬಸೋರಿ, ಗುಲೇರ್, ಕಾಂಗಡ, ಘರವಾಲ್ ಮೊದಲಾದ ಉಪ ಪ್ರಕಾರಗಳಾದ ಸಂಪ್ರದಾಯ) ಇಲ್ಲಿಯ ಭಿತ್ತಿ ಚಿತ್ರಗಳ ಪ್ರೇರಣೆಯನ್ನು, ಸ್ವಭಾವವನ್ನೇ ಅಳವಡಿಸಿಕೊಂಡು ಕಿರುಚಿತ್ರಗಳು ಸಿದ್ದವಾದವು. ಚಿತ್ರಗಳ ಸ್ವಾರಸ್ಯ ಇರುವುದು ನೈಜ ನಿರೂಪಣೆಯಲ್ಲಲ್ಲ. ಭಾವದ್ಯೋತಕವಾದ ಸ್ವರೂಪದಲ್ಲಿ ಅವೇನೂ ಮೆದುಳಿಗೆಂದು ಮೈದೆಳೆದವಲ್ಲ. ಹೃದಯ ಸಂವಾದ ಅವುಗಳ ಗುರಿ, ಮುಂದೆ ಮೊಗಲಾಯಿ ಸಂಪ್ರದಾಯದ ಪ್ರಭಾವದಿಂದ ರಾಜಸ್ಥಾನದ ಸಂದರ್ಭ,ಮೆರವಣಿಗೆ, ಭೇಟಿ, ವ್ಯಕ್ತಿ ಚಿತ್ರಣ ಇವು ರಾಜಸ್ಥಾನ ಕಲಾ ಸಂಪ್ರದಾಯದಲ್ಲಿ ಕಾಣಿಸಿಕೊಂಡಂತೆ ಇಲ್ಲಿಯೂ ಸೇರಿಕೊಂಡವು. ಮುಮ್ಮಡಿಯವರು[೨೫] ತಮ್ಮ ಪರಿವಾರದವರ, ತಮ್ಮ ಗುರು-ಹಿರಿಯರ ವ್ಯಕ್ತಿ ಚಿತ್ರಣಗಳನ್ನೆಲ್ಲಾ ಕಿರು ಪ್ರಮಾಣದಲ್ಲಿ ಮಾಡಿಸಿಟ್ಟಿದ್ದಾರೆ.

---

೨೪. ಡಾ. ಸಾಲಿಗ್ರಾಮ ಕೃಷ್ಣ ರಾಮಚಂದ್ರರಾವ್ , ಶ್ರೀ ತತ್ತ್ವನಿಧಿ

೨೫. ಡಾ. ಸಾಲಿಗ್ರಾಮ ಕೃಷ್ಣ ರಾಮಚಂದ್ರರಾವ್ , ಶ್ರೀ ತತ್ತ್ವನಿಧಿ ದಸ

ಕಂಪಿಲಿಯ ಹಸ್ತಪ್ರತಿ ಚಿತ್ರಕಲಾವಿದರು :

ಬಳ್ಳಾರಿ ಜಿಲ್ಲೆಯ ಹೊಸಪೇಟ ತಾಲೂಕಿನ ಕಂಪಲಿ ಕುಮಾರ ರಾಮನಿಂದ ತುಂಬ ಪ್ರಸಿದ್ಧಿಗೆಬಂದ ಸ್ಥಳ. ಕಂಪಿಲರಾಯ ಮತ್ತು ಕುಮಾರರಾಮನ ಪರಿಸರದ ಕಂಪ್ಲಿ, ಕನಕಗಿರಿ, ಆನೆಗೊಂದಿಗಳಲ್ಲೂ ಅನೇಕ ಕಲಾವಿದರ ಕುಟುಂಬಗಳಿದ್ದು ಅನೇಕ ಕಾರಣಗಳಿಂದ ಅವರು ಊರುಗಳನ್ನು ತೊರೆದು ಗಂಗಾವತಿ, ಬಳ್ಳಾರಿಗಳಂತ ನಗರಗಳಲ್ಲಿ ಹೊಟ್ಟೆಪಾಡಿಗಾಗಿ ವಲಸೆ ಹೋಗಿದ್ದಾರೆ ಆಶ್ರಯ ನೀಡಿದ ದೊರೆಯು ಕಣ್ಮರೆಯಾದಂತೆ ಆತನ ಆಶ್ರೀತರಾಗಿದ್ದ ಕಲಾವಿದರು ಇಂದು ಕಣ್ಮರೆಯಾಗಿರುವುದು ವಿಶೇಷವಾದ ವಿಷಯವೇನೂ ಅಲ್ಲ.

ಕಂಪಿಲಿ ನಗರದಲ್ಲಿ ಇಂದಿಗೂ ಇರುವ ಬಸವಣ್ಣನ ದೊಡ್ಡ ತೇರು ಮತ್ತು ನೀಲಮ್ಮನ (ಚಿಕ್ಕ) ತೇರುಗಳಲ್ಲಿ ಕಿರುರೂಪದ ಅನೇಕ ಚಿತ್ರಗಳನ್ನು, ಮೂರ್ತಿಗಳನ್ನು ಕಾಣಬಹುದು ಬಸವಣ್ಣನ ತೇರಿನಲ್ಲಿ ಮಾರ್ಕಂಡೆಯ ಚರಿತ್ರೆಯ ಯಮ, ಶಿವ, ಮಾರ್ಕಂಡೆಯರ ಕಿರು ಮೂರ್ತಿಗಳಿದ್ದರೆ ಅವುಗಳ ಹಿನ್ನೆಲೆಯಲ್ಲಿ ಅನೇಕ ಪುರಾತನ ಶಿವಶರಣರ ಚಿತ್ರಗಳಿವೆ. ತೇರಿನೊಳಗಣ ಚರ ಮೂರ್ತಿ ಕಾಣುವುದಕ್ಕಾಗಿ ತೇರಿಗೆ ಹನ್ನೆರಡು ಬಾಗಿಲುಗಳು, ನಾಲ್ಕು ಹುಸಿ ಅಂಕಣಗಳನ್ನು ಮಾಡಲಾಗಿದೆ. ಅವುಗಳ ಮಧ್ಯ, ಲಿಂಗ, ಬಸವಣ್ಣಗಳೊಂದಿಗೆ ಅನೇಕ ಶಿವಶರಣರ ಚಿತ್ರಗಳೂ ಇವೆ. ಈ ಮುದ್ದಾದ ಮೂರ್ತಿಗಳನ್ನು ಮಾಡಿದ ಕಲಾವಿದರು ಎದುರಾಯಪ್ಪ, ವರ್ಣರೂಪದ ಕಿರುಚಿತ್ರಗಳನ್ನು ಮಾಡಿದವರು ಫಕೀರಪ್ಪ ಎಂದು ರಾಮಕ್ಕ ಎಂಬ ಮಹಿಳೆ ಫಕೀರಪ್ಪನ ಹೆಂಡತಿಯಾಗಿದ್ದು, ವರ್ಣಗಾರಿಕೆಯ ಸಹಾಯಕ ಕೆಲಸಗಳನ್ನು ಮಾಡುತ್ತಿದ್ದ ಮಹಿಳೆಯಾಗಿದ್ದಳು.

ನೀಲಮ್ಮನ ಚಿಕ್ಕ ತೇರಿನಲ್ಲಿ ರಾವಣ, ನಂದೀಶ, ಬೃಂಗಿ, ದ್ವಾರಪಾಲಕರ ಮೂರ್ತಿಗಳಿರುವಂತೆ 42 ಪಠದ ಕಿರುರೂಪದ ಚಿತ್ರಗಳಿವೆ. ಶರಭವತಾರ ಕಥಾವಸ್ತುವಾಗಿದ್ದು ಕಲಾವಿದರು ಮೂರ್ತಿ ಮತ್ತು ವರ್ಣಚಿತ್ರಕಲೆಯಲ್ಲಿ ಬಲ್ಲಿದರಾಗಿರುವ ಕಾರಣ ಎರಡೂ ಮಾಧ್ಯಮಗಳನ್ನು ಇಲ್ಲಿ ಬಳಸಲಾಗಿದೆ. ರಾಮಣ್ಣ ತಂದೆ ಮಲ್ಲಪ್ಪ ಚಿತ್ರಗಾರ ಇವುಗಳನ್ನು ರಚಿಸಿದ ಕಲಾವಿದರೆಂದು ತಿಳಿದು ಬಂದಿದೆ. ಹಿರಿಯ ಜಂತಕಲ್ಲಿನ ಪಂಪಾಪತೀಶ್ವರನ ದೇವಾಲಯದಲ್ಲೂ ಈ ಕಲಾವಿದರು ರಚಿಸಿದ್ದ ಅನೇಕ ಕಿರು ಚಿತ್ರಗಳಿವೆ. ಹಿಂದೆ ಇವರೇ ಬರೆದಿದ್ದ ಅನೇಕ ಫಲಕದ ವರ್ಣ ಚಿತ್ರಗಳು[೨೬] ಆರೈಕೆ ಇರದೆ ವಿನಾಶದ ಅಂಚಿನಲ್ಲಿವೆ, ಇವುಗಳ ಬಗ್ಗೆ ನಾವು ತೀವ್ರ ಗಮನಹರಿಸಬೇಕಾದ ಅವಶ್ಯಕತೆ ತುಂಬಾ ಇದೆ.

ಕನಕಗಿರಿಯ ಹಸ್ತಪ್ರತಿ ಚಿತ್ರಕಲಾವಿದರು :

ಗಂಗಾವತಿ ತಾಲೂಕಿನ ಕನಕಗಿರಿ ಎಂಬ ಪ್ರಸಿದ್ಧವಾದ ಐತಿಹಾಸಿಕ ಸ್ಥಳವಾಗಿದೆ. ಕಣ್ಣಿದ್ದವರು ಕನಕಗಿರಿ ನೋಡಬೇಕು, ಕಾಲಿದ್ದವರು ಹಂಪಿಯ ನೋಡಬೇಕು ಎನ್ನುವುದು ನಮ್ಮ

೨೬. ಶ್ರೀ ಪರಸಪ್ಪ ಚಿತ್ರಗಾರ ಕಂಪ್ಲಿ : ಕ್ಷೇತ್ರಕಾರ್ಯದಲ್ಲಿ ವಿವರಣೆ ನೀಡಿದ್ದು.

ನಾಡಿನ ಜನಪ್ರಿಯ ನಾಣ್ನುಡಿ. ನಾಡಿನ ಹಿರಿಮೆಯನ್ನು ವಾಸ್ತು, ಶಿಲ್ಪ, ಮತ್ತು ಚಿತ್ರಕಲೆಗಳ ಹಿನ್ನೆಲೆಯಲ್ಲೇ ನೋಡಬೇಕೆಂಬುದು ನಮ್ಮ ಜಾನಪದರು ನಿರ್ದೇಶಿಸಿದ ಜಾಣ್ನುಡಿಯು ಇದಾಗಿದೆ. ಇಂದಿನ ತಾಲೂಕಾ ಮತ್ತು ವಾಣಿಜ್ಯ ಕೇಂದ್ರವಾಗಿರುವ ಗಂಗಾವತಿ ಪಟ್ಟಣದಿಂದ ಪಶ್ಚಿಮ ದಿಕ್ಕಿನಲ್ಲಿ ಕೇವಲ 23 ಕಿ.ಮೀ. ದೂರದಲ್ಲಿರುವ ಕನಕಗಿರಿಯು ನಿರ್ಲಕ್ಷಿತ ಸ್ಮಾರಕಗಳನ್ನು, ಅನಾಮಿಕ ಕಲಾವಿದರ, ಕಾರ್ಮಿಕರು ಬದುಕಿದ ಇತಿಹಾಸವನ್ನು ಒಡಲಲ್ಲಿಟ್ಟುಕೊಂಡಿದೆ. ಅಂದಿನ ಹಂಪೆಯ ಆಡಳಿತಕ್ಕೆ ಒಳಪಟ್ಟ ಈ ಸುವರ್ಣಗಿರಿ ಈಗ ಮತ್ತೊಂದು ಹಂಪೆಯಾಗಿ ಉಳಿದುಕೊಂಡಿದೆ.

ಸಾಮ್ರಾಟ್ ಅಶೋಕನ ಶಾಸನದಲ್ಲಿ, ಸ್ಕಂದ ಪುರಾಣದಲ್ಲಿ ದಾಸವರೇಣ್ಯರಾದ ಶ್ರೀ ಜಗನ್ನಾಥ ಮತ್ತು ಶ್ರೀ ವಿಜಯದಾಸರ ಕೃತಿಗಳಲ್ಲಿ ಉಲ್ಲೇಖಗೊಂಡಿದೆ. ಇದೇ ರೀತಿ ಅಪರಾಳ ತಮ್ಮಣ್ಣನವರ ಶ್ರೀಕೃಷ್ಣ ಪಾರಿಜಾತ ಆಟದಲ್ಲಿ ''ಸುವರ್ಣ -ಗಿರಿ'' ಎಂದು ಪ್ರಸ್ತಾಪಿಸಲ್ಪಟ್ಟಿದೆ. ವಿಜಯನಗರ ಇತಿಹಾಸದೊಂದಿಗೆ ತನ್ನ ಇತಿಹಾಸವನ್ನೂ ಕನಕಗಿರಿ ಪ್ರಾರಂಭಿಸಿಕೊಳ್ಳುತ್ತಿದೆ. ನಗರದ ಪ್ರಸಿದ್ಧ ಲಕ್ಷ್ಮೀಕನಕಾಚಲ ಸ್ವಾಮಿ ದೇವಸ್ಥಾನದಲ್ಲಿ ದೊರೆತಿರುವ ದತ್ತಿ ಶಾಸನಗಳಿವೆ. ಶಾಸನಗಳಿಂದ ರಾಜಪರಮೇಶ್ವರ ಪ್ರೌಢದೇವರಾಯ (ಕ್ರಿ.ಶ. 1436-37) ವೀರಪ್ರತಾಪ, ಧರಣಿವರಾಹ ಶ್ರೀಸಾಳುವ ನರಸಿಂಹ (ಕ್ರಿ.ಶ. 1488-89) ಮತ್ತು ಕನ್ನಡಿಗರ ಕಣ್ಮಣಿ ಕೃಷ್ಣದೇವರಾಯ (ಕ್ರಿ.ಶ. 1521-29)ರಂತಹ ಆಳುವ ಅರಸರಿಗೂ ಮತ್ತು ಕನಕಗಿರಿಯ ಪ್ರಸಿದ್ಧ ಪಾಳೇಗಾರರಾಗಿದ್ದ ಗುಜ್ಜಲ ವಂಶದ ಪರಸಪ್ಪನಾಯಕ, ನವಾಬ್ ಉಡಿಚನಾಯಕ, ಕೆಲವಡಿ ಉಡಿಚನಾಯಕ, ಕನಕಯ್ಯ ಉಡಿಚನಾಯಕ, ಮುಮ್ಮಡಿ ಉಡಿಚನಾಯಕ ರಂತಹ ಪಾಳೇಗಾರರು ಪ್ರಸಿದ್ಧ ದೊರೆಗಳಾಗಿದ್ದರು. ಅವರಂತೆ ರಾಣಿವಾಸದ ಅನೇಕ ರಾಣಿಯರು ಕೂಡ ಜನಹಿತ ಕಾರ್ಯದಲ್ಲಿ ನಿರತರಾದುದು ತಿಳಿದು ಬಂದಿದೆ. ಮುಮ್ಮಡಿ ಉಡಿಚನಾಯಕರ ರಾಣಿ ಚೆನ್ನಮ್ಮ ಮತ್ತು ಕನಕಯ್ಯ ಉಡಿಚನಾಯಕ ರಾಣಿ, ಲಕ್ಷ್ಮಿನಾಗತಿಯವರು ರಾಜ್ಯ ಕಾರ್ಯದಲ್ಲಿ ಸಹಾಯಕರಾಗಿದ್ದರು.

ಗುಜ್ಜಲವಂಶದ ಪರಸಪ್ಪ ನಾಯಕರು, ಈ ನಾಯಕರಲ್ಲೇ ಮೊದಲನೆಯವರು, ಇವರು ವಿಜಯನಗರದ ಪ್ರೌಢದೇವರಾಯನ ಆಧೀನ ಸಾಮಂತರಾಗಿ ನಲವತ್ತು ಲಕ್ಷ ವರಹ ವಾರ್ಷಿಕ ವರಮಾನದ ದೊರೆಗಳಾಗಿದ್ದರು. ಇವರ ಪುತ್ರ ನವಾಬ್ ಉಡಿಚನಾಯಕ ಕನಕಗಿರಿಯ ಮುನ್ನೂರಕ್ಕೂ ಅಧಿಕ ದೇವಾಲಯ ಕಟ್ಟಿಸಿದ ದೊರೆ. ಗರ್ಭಗೃಹಕ್ಕೆ ಉಳಿದು ಕೊಂಡಿದ್ದ ಶ್ರೀ ಕನಕಾಚಲ ದೇವಾಲಯವನ್ನು ತೊಟ್ಟಿಲು ಮಂಟಪದವರೆಗೂ ಕಟ್ಟಿಸಿದುದಲ್ಲದೆ ಹೊರಗಿನ 208×90 ಅಡಿಗಳ ವಿಸ್ತಾರದ ಪೌಳಿ ನಿರ್ಮಿಸಿದ ಕೀರ್ತಿ ಈತನದು.

ಈತನ ನಂತರ ಬರುವ ಕೆಲವಡಿ ಉಡಿಚನಾಯಕನು ತೊಟ್ಟಿಲು ಮಂಟಪದ ಎದುರಿಗಿರುವ 54×36 ಅಡಿ ದೊಡ್ಡ ಮಂಟಪ ನಿರ್ಮಿಸಿದ 36 ಅಡಿ ಉದ್ದದ ಹಾಸು ಬಂಡೆಗಳಿಂದ ದೇವಾಲಯದ ಮೇಲ್ಛಾವಣಿಯನ್ನು , 50 ಅಡಿ ಉದ್ದದ ಗರುಡಗಂಭ ಸ್ಥಾಪಿಸಿದ ದೊರೆ ಕೆಲವಡಿ ಉಡಿಚನಾಯಕನ ಮತ್ತೊಂದು ಕಾರ್ಯವೆಂದರೆ ಕನಕಾಚಲಪತಿ ದೇವಸ್ಥಾನದಲ್ಲಿ ಸ್ಥಳೀಯ

ಕಲಾವಿದರನ್ನು ಬಳಸಿಕೊಂಡು ಮತ್ತು ದೇವಸ್ಥಾನದ ಪ್ರಾಂಗಣದಲ್ಲಿ ಅಸಂಖ್ಯಾತ ಮೂರ್ತಿ ಶಿಲ್ಪಗಳನ್ನು ರಚಿಸಿದುದು ಈ ಮೂರ್ತಿಗಳ ತಯಾರಿಕೆಗಾಗಿ ಬೇಕಾಗಿರುವ ಕರಡು ರೇಖಾಚಿತ್ರಗಳು ಕ್ಷೇತ್ರಕಾರ್ಯದಲ್ಲಿ ಗಂಗಾವತಿಯ ಶ್ರೀ ಯಂಕಣ್ಣ ಚಿತ್ರಗಾರರ ಮನೆಯಲ್ಲಿ ದೊರೆತವು. ಕೆಲವಡಿ ಉಡಿಚನಾಯಕ ಮತ್ತು ವಿಜಯನಗರದ ಶ್ರೀ ಕೃಷ್ಣದೇವರಾಯರು ಸಮಕಾಲೀನರಾಗಿದ್ದರು.ಈ ಉಭಯತರ ಕಾಲದಲ್ಲಿ ಕಲೆ, ವಾಸ್ತುಶಿಲ್ಪಗಳು ಸ್ಥಾಪಿಸಲ್ಪಟ್ಟವು. ಕನಕಯ್ಯನ ಕಾಲದಲ್ಲಿ ಕನಕಗಿರಿಯಲ್ಲಿ ವೆಂಕಟಪತಿ ಭಾವಿ ನಿರ್ಮಾಣವಾದಂತೆ ಮುಮ್ಮಡಿ ಉಡಿಚನಾಯಕನ ಕಾಲದಲ್ಲಿ ಹಂಪೆಯಲ್ಲಿ ಉತ್ತರದ್ವಾರವನ್ನು ಇವರೇ ನಿರ್ಮಿಸಿದರು ಅದಕ್ಕೆ ಕನಕಗೋಪುರ ಅಥವಾ ಕನಕಗಿರಿ ಗೋಪುರ ಎನ್ನುತ್ತಾರೆ. ಈ ರೀತಿ ವಿಜಯನಗರದ ಮತ್ತು ಕನಕಗಿರಿಯ ಆಡಳಿತ ವಲಯದಾದ್ಯಂತ ಕಲೆ, ಶಿಲ್ಪ, ವಾಸ್ತು ಶಿಲ್ಪಗಳ ಸುವರ್ಣಯುಗವಾಗಿದೆ.

ಕನಕಗಿರಿಯಲ್ಲಿ ಚಿತ್ರಗಾರರದೇ ಮನೆಗಳಿದ್ದು ಸಾಂಪ್ರದಾಯಕವಾಗಿ ಅವರು ಇಂದಿಗೂ ದೇವಾಲಯದ ಬಾಬುದಾರರಾಗಿದ್ದಾರೆ. ದೇವಸ್ಥಾನದಲ್ಲಿ ಈ ಕಲಾವಿದರು ಸಲ್ಲಿಸುವ ಯಾವುದೇ ಸೇನೆಗೂ ಕರಮುಕ್ತಿಯಿದೆ. ಚಿತ್ರಗಾರ ಜನಾಂಗದ ಶಂಕ್ರಪ್ಪ, ಭೀಮಣ್ಣ ತಿಪ್ಪಣ್ಣ ಪೊಂಪಣ್ಣ, ಗುಂಡಣ್ಣ, ಗುರುರಾಜಪ್ಪ ರಂಗಣ್ಣರಂತಹ ಅನೇಕ ಕಲಾವಿದರು ಕಲಾವಿದರಾಗಿ ಬಾಳಿದ್ದಾರೆ. ರಥಶಿಲ್ಪ, ಮೂರ್ತಿಶಿಲ್ಪ ವಾಸ್ತು ಶಿಲ್ಪದ ಕಾರ್ಯದಲ್ಲಿ ಬಲ್ಲಿದರಾಗಿದ್ದ ಇವರು ಬರೆದ ಚಿತ್ರಗಳು ಕಾಲನ ದಾಳಿಯಲ್ಲಿ ಕಣ್ಮರೆಯಾಗಿ ಊನಗೊಂಡ ಗಾರೆಗಚ್ಚಿನ ಮೂರ್ತಿಗಳು ಊರ ತುಂಬಾ ಇವೆ. ಇಂದಿನ ತಲೆಮಾರಿನಲ್ಲಿ ಈರಣ್ಣ ಚಿತ್ರಗಾರ, ನರಸಿಂಹರಾವ್ ಚಿತ್ರಗರ, ಶಂಕ್ರಣ್ಣ ಚಿತ್ರಗಾರರು ಅವರ ಹಿರಿಯರು ಹಾಕಿದ ದಾರಿಯಲ್ಲಿಯೇ ಸಾಗಿದ್ದಾರೆ. ಈರಣ್ಣ, ಶಂಕ್ರಣ್ಣ ರಥ ಶಿಲ್ಪಗಳಾಗಿದ್ದಾರೆ. ನರಸಿಂಹರಾವ್ ಅವರು ಚಿತ್ರಕಲಾವಿದರಾಗಿದ್ದಾರೆ.

ಕನಕಗಿರಿಯ ಗುರುರಾಜಪ್ಪನವರ ಮನೆಯಲ್ಲಿ ಪ್ರಖ್ಯಾತ ಮಹಿಳಾಕಲಾವಿದರಾಗಿದ್ದರು ಅವರು ಗರುಡ, ಆಂಜನೇಯ, ದ್ವಾರ ಪಾಲಕರನ್ನಲ್ಲದೆ ವಿವಿಧ ಹಣ್ಣು ಮತ್ತು ಪಕ್ಷಿಗಳನ್ನು ನಿರ್ಮಿಸಬಲ್ಲ ಮಹಿಳಾ ಕಲಾವಿದೆಯರಾಗಿದ್ದರು. ಕಳೆದ ತಲೆಮಾರಿನ ಪಂಪಣ್ಣನವರ ಹೆಂಡತಿ ಅಚ್ಚಮ್ಮನವರು ಭಿತ್ತಿ ಕಾಗದ, ಅರಿವೆ, ಹಲಗೆಗಳ ಮೇಲೆ ಕಿರುರೂಪದ ಚಿತ್ರಗಳನ್ನು ಜಲವರ್ಣಗಳಿಂದ ರೂಪಿಸಬಲ್ಲ ಕಲಾವಿದರಾಗಿದ್ದರು. ಪಾಳೆಗಾರ ಉಡಿಚನಾಯಕರ ಕಾಲದಲ್ಲಿ ದೇವಾಲಯ ನಿರ್ಮಾಣವಾಗುತ್ತಿದ್ದ ಸಂದರ್ಭದಲ್ಲಿ ಆಯಾ ಸ್ಥಳಕ್ಕೆ ಬೇಕಾದ ಮೂರ್ತಿಗಳ ಚಿತ್ರಗಳನ್ನು ಕರಡರೇಖೆಗಳಲ್ಲಿ ಮೂರ್ತಿಯ ಮಾದರಿಗಾಗಿ ರಚಿಸಿದ್ದಾರೆ. ದೊರೆತಿರುವ ಚಿತ್ರಗಳ ಮೇಲೆ ಯಾವ ಮೂರ್ತಿಯನ್ನು ಯಾವ ಜಾಗದಲ್ಲಿ ಯಾವುದರ ಅಕ್ಕಪಕ್ಕದಲ್ಲಿ ಕೂಡಿಸಬೇಕು ಎಂಬುದರ ವಿವರವೂ ಇದೆ. ಈ ರೇಖಾಚಿತ್ರಗಳನ್ನು ಅನೇಕ ಕಲಾವಿದರು ಕೂಡಿ ರಚಿಸಿರಬೇಕು ಏಕೆಂದರೆ ಅಲ್ಲಲ್ಲಿ ಮುಖಭಾವ ಭಂಗಿಗಳಲ್ಲಿ ಸಾಕಷ್ಟು ವ್ಯತ್ಯಾಸಗಳು ಕಾಣುವುದನ್ನು ಗಮನಿಸಬಹುದಾಗಿದೆ.

ಹಸ್ತಪ್ರತಿಗಳಲ್ಲಿ ವ್ಯಕ್ತಿಗಳ ಭಾವಚಿತ್ರ ರಚನೆಯೂ ಆಗ ರೂಢಿಯಲ್ಲಿತ್ತು. ಈ

ಕಾರಣದಿಂದ ಅನೇಕ ಆಸ್ಥಾನದ ಮಹಾ ವ್ಯಕ್ತಿಗಳ ರೇಖಾಚಿತ್ರಗಳನ್ನು ರಚಿಸಲಾಗಿದೆ. ಅವರಲ್ಲಿ ಲಾಲ್‌ಗುಡಿರಾಮಯ್ಯ, ಸಂಗೀತಜ್ಞ, ವೀಣೆ ಅಣ್ಣಯ್ಯ, ಜ॥ ಶಂರಕದಾಸು,ಚಿತ್ರಗಾರ ಮೇಸ್ತ್ರಿ ಲಕ್ಷ್ಮಯ್ಯ, ಮುಳ್ಳೊತ್ತಿನ ಕೆಂಚಯ್ಯ, ಬೈರಾಗಿ, ದಫೇದಾರ ವೆಂಕಟರಾಮಯ್ಯ, ಚಿತ್ರಗಾರ ನಾರಾಯಣಪ್ಪ ಚಿತ್ರಗಾರ ಚಿನ್ನಿಕೃಷ್ಣ ಚದುರಂಗದ ಬಡಿಗಚಾರಿ,ವೀಣೆ ಮಕಟ ಸುಬ್ಬಯ್ಯನವರಂತಹ 32 ಆಸ್ಥಾನದ ಮಹಾ ವ್ಯಕ್ತಿಗಳ ರೇಖಾಚಿತ್ರಗಳನ್ನು ಅನುಬಂಧ-1 ವ್ಯಕ್ತಿ ಚಿತ್ರಣದಲ್ಲಿ ಕೊಡಲಾಗಿದೆ. ಅನುಬಂಧ-2 ರಲ್ಲಿ ಧಾರ್ಮಿಕ ಮತ್ತು ಆದ್ಯಾತ್ಮ ರಂಗದ ದೇವತೆಗಳಾದ ಚಾಮುಂಡೇಶ್ವರಿ, ಗಿರೀಶ-ಗಿರಿಜೆ, ಬ್ರಹ್ಮ-ಪಾರ್ಥಸಾರಥಿ, ಅರ್ಧನಾರೇಶ್ವರ,ವೇಣುಗೋಪಾಲ, ಧನ್ವಂತರಿ, ಅಶ್ವತ್ ವೃಕ್ಷ, ಸೂರ್ಯ ಚಂದ್ರರು, ಶಂಕರ ನಾರಾಯಣ, ಮನ್ಮಥ,ಕಾಮಧೇನು, ನವಗ್ರಹ,ಲಕ್ಷ್ಮೀನಾರಾಯಣ, ನರ ನಾರಾಯಣ, ಭೈರವ, ಸುಬ್ರಹ್ಮಣ್ಯ, ಕಾವೇರಿ, ದತ್ತಾತ್ರೇಯ, ಸರ್ವಗುರು, ರಾಮಾನುಜಚಾರ್ಯ, ಶಂಕರಾಚಾರ್ಯರ ರೇಖಾ ಚಿತ್ರಗಳಿವೆ.

ಮೊಹ್ಮದೀಯ ಹಸ್ತಪ್ರತಿ ಚಿತ್ರಕಲಾವಿದರು :

ಕರ್ನಾಟಕದ ಮೊಹಮ್ಮದೀಯ ಹಸ್ತಪ್ರತಿ ಚಿತ್ರಕಲಾವಿದರ ಬಗೆಗೆ ಸಾಕಷ್ಟು ವಿವರ ದೊರೆಯದಿದ್ದರೂ ಬಿಜಾಪುರದ ದೊರೆ ಇಬ್ರಾಯಿಮ್ ಆದಿಲ್ ಶಾಹಿಯ ಆಸ್ಥಾನದಲ್ಲಿ ಅದ್ವಿತೀಯ ಕಾರ್ಯನಿರ್ವಹಿಸಿದ ಭಾರತದ, ಪರ್ಶಿಯಾದ, ಮತ್ತುಪೋರ್ತಗೀಸ ಕಲಾವಿದರ ಸಂಕ್ಷಿಪ್ತ ಪರಿಚಯ ದೊರೆತಿದೆ. ಇವರೆಲ್ಲರಲ್ಲಿ ಪ್ರಮುಖನಾಗಿರುವ ಅರಮನೆಯ ಕಲಾವಿದನಾದ ಮುಲ್ಲಾ ಫಾರೂಖ ಹುಸೇನ್ (Mulla Farrukh Hussain) ಆತನು ರಚಿಸಿರುವ ಪೆನ್ಸಿಲ್ ಕಿರು ಚಿತ್ರವನ್ನು ಹೈದ್ರಾಬಾದ್ ಸಾಲಾರ ಜಂಗ್ ವಸ್ತು ಸಂಗ್ರಹಾಲಯದಲ್ಲಿ ಸಂರಕ್ಷಿಸಿ ಇಡಲಾಗಿದೆ. ಆತನಂತೆ ಮುರ್ತೂಜಾಖಾನ್ ನಖ್ವಾಸ್‌ನು (Murtuza Naqqash)ಪ್ರತಿಭಾವಂತ ಕಲಾವಿದನಾಗಿದ್ದು ಆತನು ಬಿಜಾಪುರದ ಯುವರಾಜನಾಗಿ ಕಾರ್ಯನಿರ್ವಹಿಸಿದ. ಆತನ ಕಲಾಕೃತಿಯ ಕೆಳಭಾಗದಲ್ಲಿ ಮನಮೋಹಕ ಪರ್ಶಿಯಾ ಲಿಪಿಯಲ್ಲಿ ಬರೆದ ಆತನ ಅಂಕಿತವೂ ಇದೆ. ಮತ್ತೊಬ್ಬ ಕಲಾವಿದ ಮುಹಮ್ಮದ ಅಲಿ (Mohammed Ali) ಆತನ ತೋಟದಲ್ಲಿರುವ ಕವಿಯ ಕಿರುಚಿತ್ರ ಮೋಹಕವಾಗಿದ್ದು ಮುಘಲದೊರೆಯ ಆಸ್ಥಾನದಲ್ಲಿ ಕುಮಾರಸ್ವಾಮಿಯ ಕೃತಿಗಳ ಪ್ರಭಾವವಳಿಗಳನ್ನು ಖಂಡಾಲವಾಲದಂತಹ ವಿಮರ್ಶಕರು ಗುರುತಿಸಿದ್ದಾರೆ.

ನಾಸಿರ್-ಎ-ರಹೆಮಿ, ಮಹ್ಮದ್ ಬಾಖೀರ್, ಝೂಹುರಿ, ಅಬ್ದುಲ್ ಲತೀಫ್ ಮುಸ್ತಾಫ್, ಅಬ್ದುಲ್ ಲತೀಫ್ ಮಜಲಿಶಿ, ಅಬ್ದುಲ್ ಹಲೀಮ್, ಅಬ್ದುರ್ ರಷೀದ್, ಯೂಸೂಫ್ ಇಬ್ರಾಯಿಂ ಶಾಹಿ ಯಂತಹ ಅನೇಕರು ಅತ್ಯುತ್ತಮ ಲಿಪಿಕಾರರಾಗಿದ್ದರು.

ಹಿಂದೆ ಹೇಳಿಕೊಂಡಂತೆ ಮಹಾರಾಷ್ಟ್ರ ಕರ್ನಾಟಕ ಮತ್ತು ಆಂಧ್ರಪ್ರದೇಶದವರೆಗೂ ಹರಡಿಕೊಂಡಿರುವ ದಖನಿಯ ಚಿತ್ರಕಲೆ ಒಂದೇಯಾದರೂ ಚಿತ್ರಗಳನ್ನು ಗಮನಿಸಿದಾಗ ಪ್ರಾದೇಶಿಕತೆಯ ಭಿನ್ನತೆ ಇದೆ. ಎಲ್ಲ ಚಿತ್ರಗಳ ಶೈಲಿ ಒಂದೇ ಆಗಿದೆ. ಈ ದಖನಿಯ

ಚಿತ್ರಕಲೆಯನ್ನು ಪ್ರಾದೇಶಿಕವಾಗಿ ಬಹುಮನಿ ಚಿತ್ರಕಲೆ ಅಹ್ಮದ್‌ನಗರದ ನಿಜಾಮ್‌ಷಾಹಿ ಚಿತ್ರಕಲೆ, ಬಿಜಾಪುರದ ಆದಿಲ್‌ಶಾಹಿ ಚಿತ್ರಕಲೆ, ಗೋಲ್ಕೊಂಡಾದ ಕುತುಬ್ ಷಾಯಿ ಚಿತ್ರಕಲೆ, ಮರಾಠ ಚಿತ್ರಕಲೆ, ಹೈದ್ರಾಬಾದ ನಿಜಾಮಕಲೆ, ಕರ್ನೂಲ ನವಾಬಾರ ಚಿತ್ರಕಲೆ, ಸುರುಪುರದ ಚಿತ್ರಕಲೆ, ಗದವಾಲ, ವನಪರ್ತಿ ಚಿತ್ರಕಲೆಗಳು ಎಂದು ಕರೆಯುತ್ತಾರೆ.

ಡಾ. ಕೃಷ್ಣ ಕೋಲ್ಹಾರ ಕುಲಕರ್ಣಿಯವರು ಬಿಜಾಪುರದ ವಾಸಿಗಳಾಗಿ ಆದಿಲಶಾಹಿ ಇತಿಹಾಸವನ್ನು ಬಲ್ಲವರಾಗಿದ್ದಾರೆ. ಬಿಜಾಪುರದ ಅರಸು ಸಾಹಿತ್ಯ ಚರಿತ್ರೆ ಕುರಿತು ಅವರು ರಚಿಸಿರುವ '' ಆದಿಲಶಾಹಿ ಆಸ್ಥಾನ ಸಾಹಿತ್ಯ''ಕೃತಿಯಿಂದ ಕೆಲವು ಭಾಗಗಳನ್ನು ಆಯ್ದುಕೊಂಡು ಇಲ್ಲಿ ಉದ್ದರಿಸಲಾಗಿದೆ.

ಬಿಜಾಪುರವನ್ನು ನಾಲ್ವರು ಆದಿಲ್‌ಶಾಹಿ ದೊರೆಗಳ ಕ್ರಿ.ಶ.1580-1626 ರ ವರೆಗೆ ಅವನ ಮಗ ಮಹ್ಮದ ಆದಿಲ್‌ಶಾಹಿ (ಕ್ರಿ.ಶ.1626 - 1656) ಅವರ ಕಾಲದಲ್ಲಿ ಆದಿಲಶಾಹಿ ರಾಜ್ಯವು ಸಾಮ್ರಾಜ್ಯವಾಗಿ ವೈಭವದ ತುತ್ತ ತುದಿಯನ್ನು ಮುಟ್ಟಿತು. ಕ್ರಿ.ಶ.1656 ರಲ್ಲಿ ಮಹ್ಮ ಆದಿಲ್‌ಶಾಹಿನು ಮರಣ ಹೊಂದಿದ. ದಕ್ಷಿಣೋತ್ತರ ತಂಜಾವುರದಿಂದ ಮುಂಬಯಿ ಹಾಗೂ ಪಶ್ಚಿಮದಿಂದ ಪೂರ್ವಕ್ಕೆ ಗೋವೆಯಿಂದ ಕೃಷ್ಣ ತುಂಗೆಯರ ಸಂಗಮದವರೆಗೂ ಆದಿಲ್‌ಶಾಹಿ ರಾಜ್ಯ ಹಬ್ಬಿಕೊಂಡಿತ್ತು, ಮಹ್ಮದ್‌ನ ಮಗ ಎರಡನೆಯ ಆಲಿ ಆದಿಲ್ ಶಾಹನ (ಕ್ರಿ.ಶ. 1656- 1672) ಕಾಲದಲ್ಲಿ ಆದಿಲಶಾಹಿ ರಾಜ್ಯದ ಅವನತಿ ಪ್ರಾರಂಭವಾಗಿ ಅವನ ಮಗ ಸಿಕಂದರ (ಕ್ರಿ.ಶ. 1672-1686)ನ ಕಾಲದಲ್ಲಿ ಕ್ರಿ.ಶ.1686 ರಲ್ಲಿ ಬಿಜಾಪುರವು ಔರಂಗಜೇಬನ ವಶವಾಗಿ, ದೆಹಲಿಯ ಮೊಗಲ ಸಾಮ್ರಾಜ್ಯದಲ್ಲಿ ಸೇರಿಕೊಂಡಿತು.

ಹಸ್ತಪ್ರತಿ ಚಿತ್ರಕಲಾವಿದರ ನೈಪುಣ್ಯತೆಗಳು :

ರೂಪುನರ್ಪಿಸಿ ನಿರೂಪಪ್ರಸಾದಿ ತನ್ನನ್ನರ್ಪಿಸಿ
ತಾನಿಲ್ಲದ ಪ್ರಸಾದಿ ಇವೆಲ್ಲವನ್ನರ್ಪಿಸಿ
ಬಯಲಪ್ರಸಾದಿ ಕೂಡಲ ಚೆನ್ನಸಂಗಯ್ಯ
ನಿಮ್ಮ ಶರಣರು ಮಹಾಪ್ರಸಾದಿಗಳು [೨೭]

ಕರ್ನಾಟಕದ ಹಸ್ತಪ್ರತಿಯ ಇತಿಹಾಸದಂತೆ ಕನ್ನಡ ನಾಡಿನ ಹಸ್ತಪ್ರತಿ ಚಿತ್ರಕಲಾವಿದರ ಇತಿಹಾಸವು ಕನ್ನಡ ನಾಡಿನ ಸಂಸ್ಕೃತಿಯನ್ನು ಕಟ್ಟುವ ನಿಟ್ಟಿನಲ್ಲಿ ಪ್ರಮುಖವಾದದು. ಕನ್ನಡ ಸಾಹಿತ್ಯ ವಲಯದಲ್ಲಿ ಐತಿಹಾಸಿಕ ದಾಖಲಾತಿಯ ಕೊರತೆಯ ಕಾರಣ ಕರ್ನಾಟಕ ಹಸ್ತಪ್ರತಿ ಇಂದಿಗೂ ಸ್ಪಷ್ಟವಾಗದಂತೆ ಕರ್ನಾಟಕದ ಹಸ್ತಪ್ರತಿ ಚಿತ್ರಕಲಾವಿದರ ಇತಿಹಾಸವೂ ಅಸ್ಪಷ್ಟವಾಗಿದೆ.

ಬಹಳ ಕಾರಣಗಳಿಂದ ಉದಾಸೀನತೆಗೆ ಅವಜ್ಞೆಗೆ ಒಳಗಾದ ಕರ್ನಾಟಕದ ಹಸ್ತಪ್ರತಿ ಕಲಾವಿದರ ಬದುಕು ಬರಹ-ಮನೋಭಾವ,ಕಲಾ ಬದುಕಿಗೆ ಅರ್ಪಿಸಿಕೊಂಡಿರುವ

---

೨೭. ಡಾ. ಬಿ.ವಿ.ಮಲ್ಲಾಪೂರ ಸಂ :ಶ್ರೀ ಚನ್ನಬಸವಣ್ಣನವರು , ಸಮಗ್ರವಚನ ಸಂಪುಟ -೩, ವಚನ ಸಂಖ್ಯೆ- ೧೫೬೬, ಪುಟ -೫೭೮.

ಕಲಾವಿದರ ಬದುಕು, ಚಿತ್ರಕಲಾ ರಚನ ವಿಧಾನಗಳು ಇಂದಿಗೂ ನಮಗೆ ತಿಳಿದು ತಿಳಿಯದಂತಿವೆ. ಇಂತಹ ಕರ್ನಾಟಕದ ಚಿತ್ರಕಲಾವಿದರನ್ನು ಅರಿಯುವ ಅವರ ಮನೋಭಾವವನ್ನು ದಾಖಲಿಸುವ ಯತ್ನವನ್ನು ಇಲ್ಲಿ ಮಾಡಲಾಗಿದೆ.

ಕಲೆಗಾಗಿ ಕಲೆ ಎನ್ನುವ ಪಾಶ್ಚಿಮಾತ್ಯರ ಧೋರಣೆಗಿಂತ ಕಲೆಯಲ್ಲಿಯೇ ದೈವತ್ವವನ್ನು ಕಂಡವರು ಭಾರತೀಯ ಕಲಾವಿದರು. ಅವರು ಸಮಾಜಕ್ಕಾಗಿ ಕಲೆ, ದೇವರಿಗಾಗಿ ಕಲೆ ಎಂದುಕೊಂಡವರು. ಕಲೆಯ ಮುಖಾಂತರ ತಮ್ಮನ್ನು ಸಮರ್ಪಿಸಿಕೊಳ್ಳಲು ಕಲೆಯನ್ನು ಮಾಧ್ಯಮ ಮಾಡಿಕೊಂಡಿರುವ ಈ ಕಲಾವಿದರು. ಕಲೆಯೊಳಗೆ ಜಗತ್ತನ್ನೇ ಕಂಡವರು. ಕಲಾವಿದರ ವಿಶ್ವತೋಮುಖದ ದೃಷ್ಟಿ ಕುರಿತು ಕರ್ನಾಟಕದ ಹಿರಿಯ ಚಿತ್ರಕಲಾವಿದರು, ಶಾಂತಿನಿಕೇತರನದ ವಿದ್ಯಾರ್ಥಿ ಮತ್ತು ಸ್ವಾತಂತ್ರ ಹೋರಾಟಗಾರರಾಗಿರುವ ಬೆಟ್ಟದೂರು ಶಂಕರಗೌಡರು ಕಲಾವಿದನ ದೃಷ್ಟಿ ಕುರಿತು ಈ ರೀತಿ ವಿವರಿಸುತ್ತಾರೆ. ನಮ್ಮ ಚಿತ್ರಕಾರರು ದೃಷ್ಟಿಯ ಪ್ರತಿಯೊಂದು ವಸ್ತುವಿನಲ್ಲಿಯೂ ಸೌಂದರ್ಯವಿದೆ ಎಂದು ಸಾರಿದ್ದಾರೆ. ಸಾಮಾನ್ಯ ನೋಟಕ್ಕೂ, ಕಲಾವಿದನ ನೋಟಕ್ಕೂ ಇರುವ ವ್ಯತ್ಯಾಸವನ್ನು ಅಜಂತ ಗುಹೆಗಳ ಭಿತ್ತಿ ಚಿತ್ರಗಳಲ್ಲಿ ನಿಚ್ಚಳವಾಗಿ ಕಾಣಬಹುದು. ಯಾವ ವಸ್ತುವಿನಲ್ಲಿಯೂ ಸೌಂದಯ್ಯವಿಲ್ಲದಿಲ್ಲ. ಆದರೆ ವಸ್ತುಗಳನ್ನು ನೋಡುವವನ ದೃಷ್ಠಿಕೋನದ ಮೇಲೆ ಅವಲಂಬಿಸಿರುತ್ತದೆ. ಸಾಮಾನ್ಯ ಜನಗಳಿಗೆ ಸುಂದರವಾಗಿ ಕಾಣದ ವಸ್ತುಗಳಾಗಿರುಬಹುದು. ಆದರೆ ಅವುಗಳಲ್ಲಿ ಸೌಂದರ್ಯವಿಲ್ಲವೆಂದಲ್ಲ. ಯಾವ ದಿಕ್ಕಿನಿಂದ ನೋಡಿದರೆ ಸುಂದರವಾಗಿ ಕಾಣಬಹುದು ಎಂಬುದನ್ನು ಅವರರಿಯರು. ಅದನ್ನೇ ಅಜಂತದ ಕಲಾವಿದರು ಸಾಧಿಸಿ ಸಾಮಾನ್ಯರು ಸೌಂದರ್ಯವನ್ನು ಒಣಗಿದ ಗಿಡದಲ್ಲಿ ಮತ್ತು ಪ್ರತಿಯೊಂದು ವಸ್ತುವಿನಲ್ಲಿ ಸೌಂದರ್ಯವನ್ನು ಕಂಡರಲ್ಲದೆ ಪ್ರತಿಯೊಂದು ವಸ್ತುವಿಗೆ ಅಷ್ಟೇ ಗೌರವ ಕೊಟ್ಟರು. ರಾಜನಿಗಿದ್ದ ಗೌರವ ಪ್ರಜೆಗಳಿಗೂ ಕೊಟ್ಟರು. ರಾಜನು ಪ್ರಜೆಗಳಿಗೆ ಒಡೆಯನು, ಅಧಿಕಾರವುಳ್ಳವನು ಎಂದು ಅವನ ಚಿತ್ರವನ್ನು ಚೆನ್ನಾಗಿ ಚಿತ್ರಿಸಿ, ಉಳಿದ ಪ್ರಜೆಗಳ ಚಿತ್ರಗಳನ್ನು ಚಿತ್ರಿಸುವಲ್ಲಿ ಉಪೇಕ್ಷೆ ಮಾಡಲಿಲ್ಲ. ಸುಂದರವಾದ, ಕೋಮಲ ಕಮಲವನ್ನು ಶ್ರದ್ಧೆಯಿಂದ ಚಿತ್ರಿಸಿ, ತರಗಲೆ ಒಣಗಿದ ಗಿಡ, ಬಂಡೆಗಲ್ಲು, ಇವುಗಳನ್ನು ಚಿತ್ರಿಸುವಾಗ ಅಶ್ರದ್ಧೆ ವಹಿಸಲಿಲ್ಲ, ಅವರು ಬುದ್ಧನ ಶಾಂತತೆಯನ್ನು ಚಿತ್ರಿಸಿದರಲ್ಲದೆ ಗೂಳಿ, ಕೋಳಿಗಳ ಕಾದಾಟವನ್ನು ತೋರಿಸಿ, ಕಣ್ಣಿಗೆ ಕಾಣದ ಸಿಟ್ಟನ್ನು ಚಿತ್ರಿಸಿದ್ದಾರೆ. ಇದೆಲ್ಲವೂ ಚಿತ್ರಿಕಾರರ ವಿಶ್ವತೋಮುಖ ದೃಷ್ಟಿಯನ್ನೂ ಪ್ರದರ್ಶಿಸುತ್ತದೆ. ಅಲ್ಲದೆ ಮಹಿಳೆಯರ ಬಗೆಗೂ ಹಾಗೂ ನಮ್ಮ ಕಲಾವಿದರು ಹಿರಿದಾದ ಮಾರ್ಗ ಹಾಕಿದರು. ವೇದಗಳು ಹೆಣ್ಣನ್ನು ಕೀಳಾಗಿ ತಿಳಿದಂತೆ ಅಜಂತೆಯ ಚಿತ್ರಕಾರರು ತಿಳಿಯಲಿಲ್ಲ, ಸೌಂದರ್ಯದ ನಿಧಿಯಾದ ಹೆಣ್ಣನ್ನು ಅನೇಕ ರೀತಿಯಲ್ಲಿ ಚಿತ್ರಿಸಿದ್ದಾರೆ. ಪ್ರತಿಯೊಂದು ಸ್ಥಳದಲ್ಲಿ ಬೇಕಾಗುವ ಭಾಗವನ್ನು ನಿರೂಪಿಸಿದ್ದಾರಲ್ಲದೆ, ಅದೆಷ್ಟು ಕೋಮಲೆ ಎಂಬುದನ್ನು ತೋರಿಸಿ ಕೊಟ್ಟಿದ್ದಾರೆ. ಅಂದರೆ ಚಿತ್ರಕಾರರು ಚಿತ್ರಕಾರರಷ್ಟೇ ಅಲ್ಲ ಲಕ್ಷಣ ಶಾಸ್ತ್ರವನ್ನೂ ಬಲ್ಲವರಾಗಿದ್ದರು.[೨೮]

---

೨೮. ಪಿ.ಆರ್. ತಿಪ್ಪೇಸ್ವಾಮಿ ಪ್ರ.ಸಂ. : ಚಿತ್ರಕಲಾ ಪ್ರಪಂಚ, ಶ್ರೀ ಶಂಕರಗೌಡ ಬೆಟ್ಟದೂರು, ಪುಟ -೧೨೬.

ಯೋಗ,ಆಧ್ಯಾತ್ಮ, ತತ್ವ ಜ್ಞಾನದಿಂದ ಭಗವಂತನನ್ನು ಕಂಡು ಕೊಂಡ ಭಾರತೀಯ ಋಷಿಮುನಿಗಳಿಗೆ ಅವರು ಕಂಡು ಮಂತ್ರ ಸ್ವರೂಪದಲ್ಲಿ ಉಳಿದುಕೊಂಡಿರುವ ದೇವರನ್ನು ಜನ ಸಾಮಾನ್ಯರಿಗೆ ತಲುಪಿಸುವಲ್ಲಿ ಸಾಮೂಹಿಕ ಪಾಠೋಪಕರಣಗಳಾಗಿ ದೇವರ ಸ್ವರೂಪವನ್ನು ಚಿತ್ರಿಸಲು ಕಲಾವಿದರೂ, ಋಷಿಗಳು ಮುಟ್ಟಿದ ಅಂತರ್ಯದ ಹತ್ತಿರಕ್ಕೆ ಏರಿ ಸಾಧಿಸಿದ ಎತ್ತರವನ್ನು ಶ್ರೀ ಆಗಮಿಕ ಕೃಷ್ಣ ದೀಕ್ಷಿತರು ಈ ರೀತಿ ವಿವರಿಸುತ್ತಾರೆ.

'ಭಗವಂತನು ಜಗತ್ ವ್ಯಾಪಿ, ಸರ್ವಾಂತರ್ಯಾಮಿ, ವಿಶ್ವಾತೀತ ಅವನು, ಅಣುರಣೀಯಾನ್ ಮಹತೋ ಮಹೀಯಾನ್ ಆಗಿದ್ದಾನೆ ' ಎಂದ ವೇದಗಳು ಉಸುರಿದಾಗ ಅದರ ಅಂತರಾರ್ಥ ಜನತೆಗೆ ಅರ್ಥವಾಗಲಿಲ್ಲ, ಗಹನವಾದ ಅದೇ ವಿಷಯಗಳನ್ನು ಸುಂದರವಾದ ಸಾಧಾರಣವಾದ ಬಿಡಿ ಮಾತಿನಲ್ಲಿ ಉದಾಹರಣೆಯೊಡನೆ ಆಗಮಗಳು ವಿವರಿಸಿದಾಗ ವಿರಾಡ್ರೂಪಿಯ ವಿಶ್ವದೇಹವು ದೇವಸ್ಥಾನವಾಗಿ ತೆರೆದಿಟ್ಟ ಆಗಮದ ರೂಪ ತಾಳಿ ಎಂಬುದು ಅರ್ಥವಾಯಿತು.[೨೯]

ಈ ರೀತಿ ಹಸ್ತಪ್ರತಿಯೊಳಗಿನ ಆಗಮನದ ವಿಷಯ ರೂಪತಾಳಲು ಕಲಾವಿದರು ದುಡಿದ ಪರಿಶ್ರಮ ಅವರು ಅಧ್ಯಯನಶೀಲರಾದ ಕಾರಣ ಶಾಸ್ತ್ರವೇದಾಗಮಗಳನ್ನು ಸಾಕಾರಗೊಳಿಸಿ ಸಾಮಾನ್ಯರಿಗೆ ದೇವರ ಪರಿಕಲ್ಪನೆಯನ್ನು ಸಕಾರಾತ್ಮಕವಾಗಿ ತಲುಪಿಸಿದರು.

ಹಸ್ತಪ್ರತಿ ಚಿತ್ರಕಲಾವಿದರ ಪ್ರಾವಿಣ್ಯತೆಗಳು :

ಕರ್ನಾಟಕದ ಹಸ್ತಪ್ರತಿ ಚಿತ್ರಕಲಾವಿದರು ಕಲೆಗಾಗಿಯೇ ತಮ್ಮ ಬದುಕನ್ನು ಮೀಸಲಾಗಿಟ್ಟು ಗಂಧದಂತೆ ತೇಯ್ದುಕೊಂಡರಲ್ಲದೆ ಹಣ, ಅಂತಸ್ತು ಯಾವುದನ್ನೂ ಅವರು ವ್ಯವಹಾರಿಕವಾಗಿ ಎಂದೂ ಯೋಚಿಸಲಿಲ್ಲ, ಹಸ್ತಪ್ರತಿಯ ಕವಿಯು ತನ್ನ ಸಾಹಿತ್ಯ ಕೃತಿಯಲ್ಲಿ ಕಂಡಂತಹ ಮಾನಸಿಕ ಕಲ್ಪನೆಗಳಿಗೆ ರೂಪ,ಆಕಾರ ನೀಡಿದರಲ್ಲದೆ ಹಸ್ತಪ್ರತಿಯೊಳಗಿನ ವಿಷಯಗಳನ್ನು ಅರಿಯಲಾರದವನೂ ಹಸ್ತಪ್ರತಿಯೊಳಗಿನ ಚಿತ್ರಗಳ ಸಹಾಯದಿಂದ ಹಸ್ತಪ್ರತಿಯೊಳಗಿನ ವಿಷಯವನ್ನು , ಸ್ವರೂಪವನ್ನೂ ಅರ್ಥ ಮಾಡಿಕೊಂಡನಲ್ಲದೆ ಕೃತಿಯೊಳಗೆ ಬರುವ ಭೀಮ, ದುರ್ಯೋಧನ, ಕೃಷ್ಣರ ಸ್ವರೂಪ, ಅವರ ಗಧಾಯುದ್ಧದ ರೀತಿ, ದುಶ್ಯಾಸನನ ದುರುಳುತನ, ಕೌರವನ ಕುಟಿಲತನ, ಶ್ರೀ ಕೃಷ್ಣನ ಮಹಾತ್ವಾಕಾಂಕ್ಷೆಯನ್ನು , ಸಾಮಾನ್ಯ ಮನುಷ್ಯನು ಗುರುತಿಸಿ ವಿವರಿಸಬಲ್ಲನಲ್ಲದೆ ಶಿವನ ಕೈಲಾಸ, ಮಹಾ ವಿಷ್ಣುವಿನ ಕ್ಷೀರಸಾಗರ, ಅವರವರ ವಾಹನ, ಅವರವರ ಆಭರಣಗಳನ್ನು ಗುರುತಿಸಬಲ್ಲರು. ಅಲ್ಲದೆ ಈ ಕಲ್ಪನೆಯ ಎತ್ತರದವರೆಗೂ, ಜನರನ್ನು ಎತ್ತರಿಸಬಲ್ಲ ಭವನಾತ್ಮಕ ಶಕ್ತಿ ಈ ಹಸ್ತಪ್ರತಿ ಚಿತ್ರಗಳಲ್ಲಿ ಇದೇ ಎಂಬುದನ್ನು ಹಿರಿಯ ಚಿತ್ರಕಲಾವಿದರಾಗಿರುವ ಶ್ರೀ ಅ.ನ. ಸುಬ್ಬರಾವ್ ಅವರ ಮಾತುಗಳಲ್ಲಿ ಕೇಳೋಣ.

---

೨೯. ಅ.ನ. ಕೃಷ್ಣ ರಾಯ ಸಂ.- ೧. ಭಾರತೀಯ ಸಂಸ್ಕೃತಿ ದರ್ಶನ, ಶ್ರೀ ಆಗಮಿಕ ಕೃಷ್ಣ ದೀಕ್ಷಿತರು , ಪುಟ-೮೦.

ಭಾರತೀಯ ಕವಿಗಳಂತೆ ಕಲಾವಿದರ ಊಹೆಗೂ ಪರಿಮಿತಿಯೇ ಇಲ್ಲ. ಆ ಕಲ್ಪನೆಯು ಹಿಮವತ್ಪರ್ವತವನ್ನು ಪರ ಶಿವನ ಆವಾಸ ಸ್ಥಾನವನ್ನಾಗಿ ಮಾಡಿದೆ. ಜಗದ್ರಕ್ಷಕ ಮಹಾ ವಿಷ್ಣುವನ್ನು ಕ್ಷೀರ ಸಮುದ್ರದಲ್ಲಿ ಆದಿಶೇಷನ ಸುಪ್ಪತ್ತಿಗೆಯ ಮೇಲೆ ಪವಡಿಸುವಂತೆ ಮಾಡಿದೆ. ಭವ್ಯ ಕಲ್ಪನಾತ್ಮಕ ಭಾವನೆಗಳಿಗೆ ನಮ್ಮ ಕಲಾವಿದರಿಗೆ ಮಿತಿಯೇ ಇಲ್ಲ. ವಿಶ್ವ ಕಲ್ಯಾಣಕ್ಕಾಗಿ ಸಕಲ ಸುಖ ವನ್ನು ತ್ಯಾಗ ಮಾಡಬಲ್ಲವರು ಭಾರತೀಯ ಕಲಾವಿದರು ಮಾತ್ರ. ಮಹೋನ್ನತ ಧ್ಯೇಯಗಳ ಗುರಿಯೊಂದಿಗೆ ಭಾವನಾ ಪರವಶನಾಗಿ ಕೃತಿ ನಿರ್ಮಾಣ ಮಾಡುವ ಕಲಾವಿದನ ಶೈಲಿಯೇ ವಿಶೇಷವಾದದು. ತಾನು ರೂಪಿಸುವ ಚಿತ್ರದಲ್ಲಿ ಅಂಗಾಂಗಳ ರೂಪ ರಚನೆಯ ಕಡೆ ಹೆಚ್ಚು ಲಕ್ಷ್ಯವಿಡದೆ ಆಂತರ್ಯದ ಭಾವ, ಪ್ರಚೋದನೆಯತ್ತ ಹೆಚ್ಚು ಗಮನವೀಯುವ ಕಲಾವಿದನ ಶೈಲಿಯನ್ನು ಗಮನಿಸಬೇಕಾದುದದಾಗಿದೆ. ಇಂದ್ರಿಯ ತೃಪ್ತಿಗಾಗಿ ಯತ್ನಿಸುವ ಭೋಗಿಯ ದೇಹದ ರಚನೆ ಒಂದುವಿಧವಾದರೆ, ಯೋಗಿಯ ದೇಹದ ಕಾಂತಿ ಮತ್ತೊಂದು ವಿಧವಾಗಿರುತ್ತದೆ. ಆದುದರಿಂದಲೇ ಭಗವಾನ್ ಬುದ್ಧ ದೇವನ ಮೂರ್ತಿಯಲ್ಲಾಗಲಿ, ಭಗವಾನ್ ಮಹಾವೀರನ ಮೂರ್ತಿಯಲ್ಲಾಗಲಿ ನಾವು ಕಾಣುವ ಅಂಗಾಂಗಗಳ ರೀತಿಯೇ ಬೇರೆಯಾಗಿರುತ್ತದೆ. ಮೈಕಲ್ ಆಂಜಲೊ ನಿರ್ಮಿತ ಕೃತಿಗಳಲ್ಲಿ ಕಂಡು ಬರುವ ದೇಹದ ಬಗೆ ಬಗೆಯ ಮಾಂಸಖಂಡಗಳಿಂದ ಮೆರೆಯುವ ಶಾರೀರಕ ಸೊಬಗನ್ನು ಬುದ್ಧದೇವನ ಅಂಗರಚನೆಯಲ್ಲಿ ಕಾಣಲಾರೆವು. ಬುದ್ಧ ದೇವನ ಕೃತಿಯನ್ನು ನಾವು ಕಾಣುವುದು ಪ್ರಕೃತಿಯೊಡನೆ ಸಾಮರಸ್ಯ ಪಡೆದ ಸರಳ ಸುಂದರ ಕಾಂತಿಯುಕ್ತ ದೇಹವನ್ನು ಮಾತ್ರ.[೩೦]

ಚಿತ್ರ ಸೃಷ್ಟಿಯಲ್ಲಿ ತಮ್ಮ ಪ್ರಧಾನ ಗುರಿ ಮರೆಯದೆ, ಸನ್ನಿವೇಶಕ್ಕೆ ಹೊಂದಿಕೊಂಡಿರುವ ಪ್ರತಿಯೊಂದಂಶಕ್ಕೂ ಅವುಗಳ ಪ್ರಾಮುಖ್ಯತೆಗನುಗುಣವಾದ ಸ್ಥಾನವನ್ನಿತ್ತಿದ್ದವರು. ಪ್ರಾಚೀನ ಕಾಲದ ಭಾರತೀಯ ಕಲಾವಿದರು. ಕಲೆಯೇ ತಮ್ಮ ಜೀವನ ಸರ್ವಸ್ವವೆಂಬ ದೃಢ ನಂಬಿಕೆಯಿಂದ ವಂಶ ಪಾರಂಪರ್ಯವಾಗಿ ಕಲೆಯನ್ನುವಲಂಬಿಸಿ ಕಲೆಯಲ್ಲಿ ವಿಪುಲ ಪ್ರಗತಿ ಸಾಧಿಸಿದರು.[೩೧]

ಇಂದಿನ ಆಧುನಿಕ ವಿಜ್ಞಾನ ಯುಗದಲ್ಲಿ ಮಾನವನು ಬೌದ್ಧಿಕವಾಗಿ ವಿಶಾಲವಾಗಿ ಬೆಳೆಯುತ್ತಿದ್ದರೂ ಜಾತೀಯತೆಯಿಂದ ಚಿಕ್ಕವನಾಗುತ್ತಿದ್ದಾನೆ. ಆದರೆ ಕರ್ನಾಟಕದ ಹಸ್ತಪ್ರತಿ ಚಿತ್ರಕಲಾವಿದರ ಬದುಕನ್ನು ಅವಲೋಕಿಸಿದರೆ ಅವರು ಯಾರೂ ಜಾತಿಯ ಪೀಡೆಗೆ ಬಲಿಯಾಗದೇ ಜಾತ್ಯಾತೀತರಾಗಿ ಬೆಳೆದುನಿಂತಿದ್ದಾರೆ.

ಕರ್ನಾಟಕದಲ್ಲಿ ಹಸ್ತಪ್ರತಿಗಳು ಅಧಿಕವಾಗಿ ಧಾರ್ಮಿಕತೆಯ ಹಿನ್ನೆಲೆ ಯೊಂದಿಗೆಯೇ ಸೃಷ್ಟಿಗೊಂಡಿರುವಂತಹವುಗಳಾಗಿವೆ. ಹಸ್ತಪ್ರತಿಗಳಲ್ಲಿ ಕಾವ್ಯ, ಕಾವ್ಯಪಾಠ ರಚಿಸಿದ ಕವಿ

---

೩೦. ಅ.ನ.ಸುಬ್ಬಾರಾವ್ : ಮೈಸೂರು ರಾಜ್ಯ , ಕರ್ನಾಟಕ ಸರಕಾರ.
೩೧. ಅ.ನ.ಸುಬ್ಬಾರಾವ್ : ಮೈಸೂರು ರಾಜ್ಯ, ಕರ್ನಾಟಕ ಸರಕಾರ.

ಮತ್ತು ಬಹಳ ಜನ ಲಿಪಿಕಾರರು ಕೆಲವು ಸಲ ಒಂದೇ ಜಾತಿ, ಒಂದೇ ಧರ್ಮದ ಪಾತಳಿಯೊಳಗೆ ಬೆಳದಿರುವುದನ್ನು, ಬದಕುವುದನ್ನು ಕಾಣುತ್ತೇವೆ. ಸನಾತನರು ವರ್ಣಾಶ್ರಮಗಳಲ್ಲಿ ಬದುಕಿದಂತೆ ಸನಾತರೇತರರು ಮತ್ತೊಂದು ವರ್ಣದ ಹುತ್ತಗಳಲ್ಲಿ ಬದುಕುತ್ತಿರುವುದನ್ನು ಕಾಣುತ್ತೇವೆ. ಆದರೆ ಕರ್ನಾಟಕದ ಹಸ್ತಪ್ರತಿಯ ಚಿತ್ರಕಲಾವಿದರು ಜಾತೀಯತೆಯನ್ನು ಮೀರಿ ಎಲ್ಲ ಜಾತಿ, ಧರ್ಮಗಳ ಹಸ್ತಪ್ರತಿಗಳಿಗೆ ಚಿತ್ರ ರಚಿಸಿರುವುದು ಅವರು ವಿಶ್ವಮಾನವ ನೀತಿಯನ್ನು ಸಾರುತ್ತದೆ.

ಮೈಸೂರು ಅರಸರ ಆಸರೆಯಲ್ಲಿ ಚಿತ್ರಕಲಾವಿದರಾದವರೆಲ್ಲರೂ ಒಂದೇ ಜಾತಿ, ಕೋಮಿನವರಾಗಿರಲಿಲ್ಲ ಮತ್ತು ಅರಸು ಜಾತಿಯವರೂ ಆಗಿರಲಿಲ್ಲ. ಇದರಂತೆ ಬಿಜಾಪುರದ ದಖನಿ ಕಲಾ ಪರಂಪರೆಯ ಹಸ್ತಪ್ರತಿ ಚಿತ್ರಕಲಾವಿದರಲ್ಲಿ ವಿಜಯನಗರದಿಂದ ನಿರಾಕರಣೆಗೆ ಒಳಪಟ್ಟ ಕಲಾವಿದರಲ್ಲದೆ, ಅರಸರ ಧಾರ್ಮಿಕ ಸಹಿಷ್ಣುತೆಗಾಗಿಯೂ ಪರ್ಶಿಯಾ, ಪೋರ್ಚಗಲ್‌ಗಳಿಂದ ಬಂದ ಕಲಾವಿದರು ಹಿಂದೂ-ಮುಸ್ಲಿಂ ಭಾವೈಕ್ಯತೆಯ ಸಮ್ಮಿಶ್ರ ಶೈಲಿಗೂ ಕಾರಣರಾದರೆಂದು ಹಿರಿಯ ವಿದ್ವಾಂಸರಾಗಿರುವ ಡಾ.ಮೋತಿ ಚಂದ್ರ ಅಭಿಪ್ರಾಯಪಡುತ್ತಾರೆ. [೨೨]

ಹಸ್ತಪ್ರತಿ ಚಿತ್ರಕಲಾವಿದರಲ್ಲಿ ವಿಶಾಲ ಮನೋಭಾವವಿರುವ ಕಾರಣಕ್ಕಾಗಿಯೇ ಕರ್ನಾಟಕದಲ್ಲಿ ಪ್ರಾಚೀನ ಕಾಲದಿಂದ ಅರ್ವಾಚೀನ ಕಾಲದವರೆಗಿನ ಕಲಾವಿದರು ಜಾತಿಯ ಗಡಿರೇಖೆಗಳನ್ನು ದಾಟಿ ಕಲಾಕೃತಿಗಳನ್ನು ರಚಿಸಿದ್ದಾರೆ.

ಕರ್ನಾಟಕದ ಹಸ್ತ ಪ್ರತಿ ಕಲಾವಿದರು ಮಿತವಾದ ಬದುಕಿನಲ್ಲೂ ಸದಾ ಸಂತೃಪ್ತರಾದವರು. ಕವಿಗಳಂತೆ ಅವರೂ ಭಾವಮಯ ಆಕಾಶದಲ್ಲಿಯ ಬಿಳಿ ಮೋಡಗಳನ್ನು ಕುದುರೆಗಳನ್ನಾಗಿ ಮಾಡಿಕೊಂಡು, ಸೂರ್ಯ, ಚಂದ್ರರೊಂದಿಗೆ ನಕ್ಷತ್ರಲೋಕವನ್ನೆಲ್ಲ ಸುತ್ತಿ ಬರುವ ಭಾವುಕರಾದರೂ, ಪ್ರಾಯೋಗಿಕ ಬದುಕಿನಲ್ಲಿ ಬರುವ ಬಹು ಪುಟ್ಟ ಆದಾಯವನ್ನೇ ಶಿವನ ಪ್ರಸಾದವೆಂದು ಭಾವಿಸಿಕೊಂಡು ಅದರಲ್ಲಿಯೇ ಸಂತೃಪ್ತರಾದ ಮಹಾನುಭಾವರುಗಳಾಗಿದ್ದಾರೆ.

ಕವಿಗಳಿಗೆ, ಲಿಪಿಕಾರರಿಗೆ, ಆಸ್ಥಾನದ ವಿದ್ವಾಂಸರಿಗೆ ಹಣದ ಹಮ್ಮಿಣೆ ನೀಡಿ ಸನ್ಮಾನಿಸುವ ಪ್ರಸಂಗಗಳು ಸಾಮಾನ್ಯವಾಗಿದ್ದರೂ ಹಸ್ತಪ್ರತಿ ಚಿತ್ರಕಲಾವಿದರಿಗೆ ಸನ್ಮಾನಿಸಿದ ದಾಖಲಾತಿಗಳು ದೊರೆಯುವುದಿಲ್ಲ. ಇವು ಯಾವವೂ ಬಹುಶಃ ಅಂದಿನ ಕಲಾವಿದರಾದವರಿಗೆ ಅನ್ವಯಿಸುತ್ತಿರಲಿಕ್ಕಿಲ್ಲ. ಅಲ್ಲದೆ ಸಾಮಾಜಿಕ ಜೀವನದಲ್ಲಿ ಧ್ವನಿಯುಳ್ಳ ಕವಿ, ಸಾಹಿತಿಗಳನ್ನು ಗುರುತಿಸುವಷ್ಟು ನಾವು ಕಲಾವಿದರನ್ನು ಗುರುತಿಸಲಾರೆವು. 'ಮಾತು' ಕಲಿಸುವ ಸಾಹಿತ್ಯವು ನಮಗೆ ಅರ್ಥವಾದಂತೆ ಸಂಸ್ಕೃತಿಯನ್ನು ಕಲಿಸುವಂತಹ ಮಾತಿರದ 'ಕಲೆ ' ಬಹುಶಃ ಅರ್ಥವೇ ಆಗುವದಿಲ್ಲ. ಈ ಕಾರಣಕ್ಕಾಗಿಯೇ ಸಾಮಾಜಿಕ ಜೀವನದಲ್ಲಿ ಕಲೆಗೆ ದುಡಿದ ಕಂದಾಚಾರ, ಧರ್ಮಾಂಧತೆ ಮತ್ತು ಅಜ್ಞಾನಗಳು ನಮ್ಮನ್ನು ಆಳಿದಂತೆ ಕಲೆ, ಸಾಹಿತ್ಯ, ಶಿಲ್ಪ ಸಂಗೀತಗಳು ನಮ್ಮನ್ನು ಆಳಲಾರವು

೨೨. Khandalavala: Marg. Vol. VII, Page No. 26-27

ಎನಿಸುತ್ತದೆ. ಈ ಎಲ್ಲ ವೈವಿದ್ಯತೆ ನಡುವೆ ಮಿತ ಆದಾಯದಲ್ಲಿ ಬದುಕುವ ಕನ್ನಡ ನಾಡಿನ ಹಸ್ತಪ್ರತಿ ಚಿತ್ರಕಲಾವಿದರು ನಿತ್ಯ ತೃಪ್ತರು ಸದಾ ಸಂತೋಷಿಗಳಾಗಿಯೇ ಬದುಕಿದ್ದರು.

ಕರ್ನಾಟಕದ ಹಸ್ತಪ್ರತಿಯ ಚಿತ್ರಕಲಾವಿದರು ಚಿತ್ರಕಲೆಗೆ ಮಾತ್ರ ಸಂಬಂಧಿಸಿದವರು. ಅವರನ್ನು ಆಹ್ವಾನಿಸಿ ಕೊಡುವ ಯಾವುದೇ ಕಲಾತ್ಮಕ ಕೆಲಸಗಳನ್ನು ಮಾಡುವವರಾಗಿದ್ದಾರೆ. ಕಾವ್ಯ,ಶಾಸ್ತ್ರಪುರಾಣ ರಚನೆಯ ಕಾರ್ಯ ನಡೆಯುವ ಎಡೆಯಲೆಲ್ಲಾ ಹೋಗಿ ತಮಗೆ ಕೊಟ್ಟ ಅವಕಾಶವನ್ನು ಸಾರ್ಥಕ ಮಾಡಿಕೊಂಡು ಪಠ್ಯಕ್ಕೆ ಅನುಸರಿಸಿ ಮಾಡಬೇಕಾದ ಕಾರ್ಯವನ್ನು ಕವಿ/ಲಿಪಿಕಾರರೊಂದಿಗೆ ಚರ್ಚಿಸಿ ಹಿಡಿದ ಕಾರ್ಯ ಮಾಡಿಕೊಡುವವರಾಗಿದ್ದಾರೆ.

ಕಲೆಯ ಕಾಯಕಕ್ಕೆ ಯಾವುದೇ ಧರ್ಮ,ಜಾತಿ,ಪಂಗಡ,ಗುಂಪುಗಳನ್ನು ಆಶ್ರಯಿಸದೆ ಕರೆದ ಕೆಲಸ ಪೂರೈಸುವವರಾಗಿದ್ದಾರೆ. ಹಸ್ತಪ್ರತಿಯ ಕಾರ್ಯ ನಡೆಯದಾದಾಗ ಕಲೆಗೆ ಪೂರಕವಾದ ಭಿತ್ತಿ ಚಿತ್ರ, ಭಾವಚಿತ್ರ, ರೇಖಾ ಚಿತ್ರಗಳಂತಹ ಅನೇಕ ಕರಕುಶಲ ಕಾರ್ಯ ಮಾಡಿ ತಮ್ಮ ಬದುಕನ್ನು ನಿರ್ವಹಿಸುವಂತಹ ಕರ್ನಾಟಕದ ಹಸ್ತಪ್ರತಿಯ ಚಿತ್ರಕಲಾವಿದರು ಹಣ ಬಂದಾಗ ಹಿಗ್ಗದೆ, ಹಣ ವಿಲ್ಲದಾಗ ಕುಗ್ಗದೆ ಸರ್ವ ಕಾಲದಲ್ಲೂ ಸಮಭಾವದಿಂದ ಬದುಕವಂತಹ ಇವರು ಎತ್ತಿಕ್ಕೊಳ್ಳುವವರ ಮಡಿಲಲ್ಲಿ ಬಾಳುವ ಕೈಗೂಸಿನಂತಿದ್ದಾರೆ.

ಹಸ್ತಪ್ರತಿ ಚಿತ್ರಕಲಾವಿದರ ಸ್ಥಿತಿ-ಗತಿ :

ಬದಲಾವಣೆ, ಸ್ಥಿತ್ಯಂತರಗಳು 'ಕಾಲನ' ಕಠಿಣ ಕಾನೂನುಗಳಾದ ಕಾರಣ ಸಾಮಾಜಿಕ ಜೀವನದಲ್ಲಿಯ ಬದುಕು ಏರಾ-ಪೇರು ಆಗುವದು ಅತ್ಯಂತ ಸಹಜ. ಒಂದು ಕಾಲ ಹಸ್ತಪ್ರತಿ ಕಾರ್ಯವೀಗ ಕಾಗದ, ಮುದ್ರಣ, ಗಣಕ ಯಂತ್ರಗಳಿಂದ ತುಂಬಾ ರೂಪಾಂತರಗೊಂಡಿದೆ. ಸಾಮಾಜಿಕ ಜೀವನದಲ್ಲಿ ಅರಸುಗಳ ಪ್ರಭುತ್ವದಿಂದ ನಡೆಯುತ್ತಿದ್ದ ಅಗ್ರಹಾರಗಳು, ಓದುಸೋಮಠ, ಸಾಲಿಮಠ, ಪುರಾಣದ ಮಠಗಳು ಮಂಕಾಗಿವೆ. ಕಾವ್ಯಕ್ಕೂ, ಪುರಾಣ ಕಥನಗಳ ರಚನೆಗೆ ಆಯ್ದು ತರುತ್ತಿದ್ದ ತಾಳೆಮರದ ಎಲೆಗಳು ಈಗಿನ ಪ್ಲಾಸ್ಟಿಕಿನ, ಪೈಬರಿನ ಸ್ಪರ್ಧೆಯಿಂದ ಅವು ಮೂಕಯಾತನೆಯನ್ನು ಅನುಭವಿಸುತ್ತಿವೆ. ಕವಿಯಾದವನು ಕಣ್ಮರೆಯಾದರೂ ಲಿಪಿಕಾರ ಲೆಕ್ಕಬರಿಯುವ ಕರಣಿಕನಾಗಿದ್ದಾನೆ. ಎಲ್ಲವೂ ತಿರುವೂ ಮುರುವು ಆಗಿರುವಂತೆ ಕರ್ನಾಟಕದ ಹಸ್ತಪ್ರತಿ ಚಿತ್ರಕಲಾವಿದ ಅನಾಥನಾಗಿದ್ದಾನೆ. ಹಿಂದೆ ತನ್ನ ಪರಿವಾರದ ಪರಂಪರೆಯಲ್ಲಿ ಅಜ್ಜ ಮುತ್ತಜ್ಜ ಹೇಳಿ ತಿದ್ದಿಸುತ್ತಿದ್ದ ರೇಖಾ ಚಿತ್ರ, ವರ್ಣ ಸಂಯೋಜನೆ ಭಾವ-ಬಂಧನದೊಂದಿಗೆ ಮಾತನಾಡುವಂತಿದ್ದ ಚಿತ್ರಗಳನ್ನು ಹಿಂದೆಲ್ಲಾ ಜನ ಮೆಚ್ಚಿ ಉಘೆ ಉಘೆ ಎಂದು ಉಪಚರಿಸಿತ್ತಿದ್ದುದು ಇಂದು ಕೇವಲ ಕನಸಾಗಿ ಉಳಿದುಕೊಂಡಿದೆ.

ಈಗ ಎಲ್ಲವೂ ತಲೆಯ ಕೆಳಗಾಗಿವೆ. ಚಿತ್ರ ಚಿತ್ರದಂತೇ ಇರಬಾರದು. ಅದರ ಕಣ್ಣುಮೂಗು ಇನ್ನೆಲ್ಲೊ ಇದ್ದು, ಇನ್ನು ಎಂತಹುದೂ ಚಿತ್ರ ಆದಾಗಿರಬೇಕು. ಅದರೆ ತಲೆ ಎಲ್ಲಿಯೇ ಇರಲಿ ಅದಕ್ಕೊಂದು ಸಾಮಾನ್ಯರಿಗೆ ತಿಳಿಯ ಬಾರದ ತಲೆ ಬರಹವಿರಬೇಕು. ಚಿತ್ರ ಹೇಗಾದರೂ

ಇರಲಿ ಚಿತ್ರದ ಚೌಕಟ್ಟು ಬಹು ಬೆಲೆಯುಳ್ಳದ್ದಾಗಿರಬೇಕು. ಇಂಥಹ ಅಘಾತಕಾರಿ ಬದಲಾವಣೆಯಿಂದ ಸ್ಥಂಭೀಭೂತನಾಗಿರುವ ಕಲಾವಿದ 'ಕಾಲಾಯ ತಸ್ಮೈ ನಮಃ' ಎಂದು ತನ್ನ ಹಿಂದಿನ ದಿನಗಳನ್ನು ನೆನಸಿಕೊಳ್ಳುತ್ತ ಬದುಕುವದೊಂದೆ ಆತನಿಗಿರುವ ದಾರಿಯಾಗಿದೆ.

ದಾಖಲೆಗೊಳ್ಳದ ಹಸ್ತ ಪ್ರತಿ ಚಿತ್ರಕಲಾವಿದರು.

ಕರ್ನಾಟಕದ ಹಸ್ತಪ್ರತಿಯು ಕನ್ನಡ ನಾಡಿನ ಸಾಂಸ್ಕೃತಿಕ ಬದುಕನ್ನು ಸಮಗ್ರವಾಗಿ ದಾಖಲಿಸಿರುವ ಕಾಲಕೋಶಗಳಂತಿದೆ. ಅನೇಕ ಲಿಪಿಕಾರರು, ಕವಿಗಳನ್ನು ಕಾವ್ಯಗಳನ್ನು ಕಾವ್ಯಕ್ಕೆ ಪ್ರೋತ್ಸಾಹ ನೀಡಿದ ದಾನಿಗಳನ್ನು ಆಪತ್ತು ಬಂದಾಗ ಸಹಾಯ ನೀಡಿದ ಸಹೃದಯರನ್ನು ತಮ್ಮ ಹಸ್ತಪ್ರತಿಗಳಲ್ಲಿ ಪುಷ್ಪಿಕೆಗಳಲ್ಲಿ ದಾಖಲಿಸಿದ್ದಾರೆ. ಅನೇಕ ಲಿಪಿಕಾರರು ಸಾಲಪಡೆದ ತಮ್ಮ ಭವಣೆಯನ್ನು ದಾಖಲಿಸಿದ್ದಾರೆ. ಕವಿಪುಂಗವ ಚಿಕ್ಕಯ್ಯನವರು ತಾಳದ ಮರವನ್ನು ಈ ರೀತಿಯ ಮೋಹಕ ಕವಿತೆಯೊಂದನ್ನು ಬರೆದು ದಾಖಲಿಸಿದ್ದಾರೆ. ಕವಿತೆ ಹೀಗಿದೆ.

ಪಡುವಣ ದೆಸೆಯಿಂದೊಪ್ಪುತ್ತಿರ್ದ ಲವಣಾಂಬುಧಿಗೆ
ಪ್ರಬ್ಬಿರ್ಣಿಂ ಹುಟ್ಟಿದ ಹಾಂಗಿರ್ದ ಘಟ್ಟದ ಸರೋವರಂಗಳಲ್ಲೇ
ಕಪಾದಚರ ಕೆದವಿದ ಮುಂಡೆ ಮೌನ ವ್ರತದಿಂದೊಪ್ಪುತಿರ್ದ
ದಿವ್ಯತಾಳ ಪತ್ರಮಂ ತಂದು ದ್ವಿತೀಯ ರಂಧ್ರವಂ ಮಾಡಿ ಬಂಗದ
ಹೊರೆಯಂತೊಂದು ಪೊಂದಿಸಲಿಕ್ಕೆ [೩೩]

ಎಂದು ಹಿರಿಯ ಕವಿಗಳಾದ ಚಿಕ್ಕಯ್ಯನವರು ಕೆದರಿದ ಕೂದಲಿನ ಮಹಿಳೆಯಂತಿರು ತಾಳೆಯ ಮರವನ್ನು ವರ್ಣಿಸಿರುವಂತೆಯೇ ಕವಿ ಮತ್ತು ಲಿಪಿಕಾರರಿಂದ ರಚಿಸಲ್ಪಟ್ಟ ತಾಳೆಯ ಗ್ರಂಥವು

ತೈಲಾದ್ರಕ್ಷೇಜ್ಜಲಾದ್ರ ಕ್ಷೇತ್ ರಕ್ಷೇಚ್ಛಿಥಿಲ ಬಂಧನಾತ್
ಮೂರ್ಖ ಹಸ್ತೇ ನದಾತವ್ಯ ಮೇವಂ ವದತಿ ಪುಸ್ತಕಾ ॥

ನನ್ನನ್ನು ಎಣ್ಣೆಯಿಂದ ನೀರಿನಿಂದ ಸಡಿಲು ಕಟ್ಟು ಕಟ್ಟುವುದರಿಂದ ಹುಟ್ಟುವ ಕ್ರಿಮಿಕೀಟಗಳಿಂದ ರಕ್ಷಿಸಿರುವಂತೇ ಮೂರ್ಖರ ಕೈಗಳಿಗೂ ನನ್ನನ್ನು ಕೊಡಬೇಡಾ ಎಂದು ಪುಸ್ತಕವು ಆಪತ್ತುಗಳಿಂದ ತನಗಾಗುವ ನೋವಿನ ಅಳಲನ್ನು ತೋಡಿಕೊಂಡಂತೆ ಕವಿಯರೇ ಲಿಪಿಕಾರನೋ ? ಅಥವಾ ಲೋಕ ಬಲ್ಲ ಅನುಭವಿಯು

ಪುಸ್ತಕಂ ವನಿತಾ ವಿತ್ತಂ ಪರ ಹಸ್ತಗತಂ ಗತಂ।
ಅಥವಾ ಪುನರಾಯಾತಂ ಜೀರ್ಣಂ ಭ್ರಷ್ಟಾಚ ಗತಂ ।

ಪುಸ್ತಕವನ್ನು, ವನಿತೆಯನ್ನು, ಹಣವನ್ನು ಬೇರೊಬ್ಬರ ಕೈಗೆ ಒಪ್ಪಿಸಿದರೆ ಅವು ಮರಳಲಾರವು, ಮರಳಿದರೂ ಅವು ಭಾಗಶಃ ಹಾಳಾಗಿಯೇ ಹೋಗಿರುತ್ತವೆ ಎಂಬ ಮಾತನಾಡದ ಪುಸ್ತಕದ ಮನೋ ವೇದನೆಯನ್ನು ಅರ್ಥ ಮಾಡಿಕೊಂಡ ಲಿಪಿಕಾರ ತನ್ನದೊಂದು ಎರಡು ಸಾಲಿನ ಪಂಕ್ತಿಯ ಮುಖಾಂತರ ಹೇಳಿಕೊಂಡಂತೆ ತನ್ನ ನೋವುಗಳನ್ನು ಈ ರೀತಿ ದಾಖಲಿಸಿಕೊಂಡಿದ್ದಾನೆ.

---

೩೩. ಡಾ. ಸಿದ್ಧಯ್ಯ ಪುರಾಣಿಕ ಸಂ. : ಮಣಿಹ, ಚಿಕ್ಕಯ್ಯ, ಪುಟ -೨೩೫

ತಪ್ಪಂ ಬರದಂ ಕಡು ಜಡ
ನಪ್ಪಾತಂ ತಾಂ ಗಡೆಂದು ಬಯ್ಯಲ್ವೇಡಿಂ
ತಪ್ಪು ಶುದ್ಧ ಮುಮಕ್ಕಾಂ
ತಪ್ಪಿಲ್ಲದೆ ಪ್ರತಿ ಸಮಾನವಾಗಿ ಬರೆದಂ
ಎಂದು ಹಸ್ತಪ್ರತಿಯ ಪುಷ್ಟಿಕೆಯಲ್ಲಿ ಬರೆದು ಕೊಂಡ ಹಿರಿಯ ಲಿಪಿಕಾರ
ಯೆಪ್ಪತ್ತು ನಾಲ್ಕು ವರುಷದ
ಮುಪ್ಪಿನವಂ ಬರದ ಬರಹವಿದರೊಳಗಂದರೆ
ತಪ್ಪುತಡೆಯಿದ್ದರೆಲ್ಲವ
ನೊಪ್ಪದಿ ತಿದ್ದುವುದು ನೋಡಿ ವಿದ್ಯಾವಂತರು

ಎಂದು ತನ್ನ ನೋವಿನೊಂದಿಗೆ ತನಗಿರುವ ಕಷ್ಟವನ್ನು ಈ ರೀತಿ ಹೇಳುತ್ತಾನೆ.

ಯಾದೃಶಂ ಪುಸ್ತಕಂ ದೃಷ್ಟ್ವಾತಾದೃಶಂ ಲಿಖಿತಂ ಮಯಾ ।
ಅಭದ್ರೋ ವಾ ಸುಬದ್ರೋ ವಾ ಮಮ ದೋಷೂಈನ ವಿದ್ಯತೇ ॥

ಎಂದು ಹಲವು ರೀತಿ ತನ್ನ ತೊಂದರೆ, ತಾಪತ್ರಯ, ಕಷ್ಟ ಎಲ್ಲವನ್ನೂ ತೋಡಿಕೊಂಡಿರುವ ಲಿಪಿಕಾರರು ಕವಿಗಳು ಹಸ್ತಪ್ರತಿ ಚಿತ್ರಕಲಾವಿದರಿಗೆ ಇರಬಹುದಾದ ಯಾವ ತೊಂದರೆ, ತಾಪ, ನೋವು ಸಂಕಟ ಕುರಿತಾಗಲಿ. ಚಿತ್ರದ ಹಿರಿಮೆ ಗರಿಮೆ, ಕಲಾವಿದನ ಚಮತ್ಕಾರಕ ರೇಖೆ, ವರ್ಣ ಸಂಯೋಜನ, ಬಣ್ಣಗಳ ತೂಕಗಳ ಬಗ್ಗೆ ಕಲಾವಿದರ ಬಗ್ಗೆ ಮಾತನಾಡಿರುವ ದಾಖಲಾತಿಯೂ ಬಹುಶಃ ಎಲ್ಲೂ ದೊರೆಯಲಿಕ್ಕಿಲ್ಲ. ಹಸ್ತಪ್ರತಿಯ ಕಲಾವಿದರೆಂದರೆ ಇಂದಿಗೂ ಇರುವ ಉದಾಸೀನತೆಯ ಭಾವನೆ ಆಗಲೂ ವ್ಯಾಪಿಸಿಕೊಂಡಿರುವ ಕಾರಣಕ್ಕಾಗಿಯೇ ಕಲಾವಿದರನ್ನು ಕುರಿತು ಯಾವ ದಾಖಲಾತಿಯನ್ನು ದಾಖಲಿಸಿರುವದಿಲ್ಲ. ಕರ್ನಾಟಕದ ಹಸ್ತಪ್ರತಿಯ ಚಿತ್ರಗಳಲ್ಲೇ ಶ್ರೇಷ್ಟವೆಂದು ಪರಿಗಣಿಸಿರುವ ಸಿದ್ದನಂಜೇಶನ ರಾಘವಾಂಕ ಚರಿತೆ, ಭೀಮ ಕವಿಯ ಬಸವ ಪುರಾಣ ಅಪರಾಳ ತಮ್ಮಣ್ಣನವರ ಶ್ರೀ ಕೃಷ್ಣ ಪಾರಿಜಾತ, ಜೈನ ಆಗಮನದ ತ್ರಿಲೋಕ ಸಾರ, ಷಡಕ್ಷರ ಕವಿಯ ಶಬರಶಂಕರ ವಿಲಾಸ ಮತ್ತು ಅದ್ವಿತೀಯ ಉದ್ದರಣೆಗಳನ್ನು ರಚಿಸಿರುವ ಅಮಾಯಕ ಕಲಾವಿದರು ಇಂದಿಗೂ ಅನಾಮಿಕರಾಗಿಯೇ ಉಳಿದಿದ್ದಾರೆ. ಸಂಶೋಧಕರಿಗೆ, ಸಾಹಿತ್ಯ ವಲಯದಲ್ಲಿ ದುಡಿಯುತ್ತಿರುವ ಅನೇಕ ಮಹಾನೀಯರಿಗೆ ಬಹುಶಃ ಕಲೆ ವಿಚಾರವು ತಿಳಿಯದೇ ಇರುವ ಕಾರಣ ಹಸ್ತಪ್ರತಿಯೊಳಗಿನ ಚಿತ್ರಗಳು ಮತ್ತು ಚಿತ್ರಕಲಾವಿದರು ಅಧ್ಯಯನಕ್ಕೆ ಒಳಪಡದೇ ಉಳಿದುಕೊಂಡಿದ್ದಾರೆ.

ಪದವನ್ನು ಸೀಳಿ, ಹೊಸ ಪದವನ್ನು ಹುಡುಕಿ ಅರ್ಥಾಂತರ್ಗತವನ್ನು ದೂರನ್ವಯಗೊಳಿಸುತ್ತ ಶಬ್ದಗಳ ಜಾಲದಲ್ಲಿಯೇ ಬದುಕುವ ಸಾಹಿತ್ಯ ಸಂಶೋಧನೆಯ ವಿದ್ವಾಂಸರು ಇನ್ನೂ ಮುಂದಾದರು ಹಸ್ತಪ್ರತಿಯೊಳಗಿನ ಚಿತ್ರವೂ ಸಾಹಿತ್ಯದಂತೆ ಕನ್ನಡ ನಾಡಿನ ಸಂಸ್ಕೃತಿ ಎಂಬುದನ್ನು ಮನಗಾಣಿಸಬೇಕಾಗಿದೆ. ಕಲೆಯನ್ನು ಕಲಾವಿದರ ಬದುಕನ್ನು ದಾಖಲಿಸಬೇಕಾಗಿದೆ. ಕರ್ನಾಟಕದ ಹಸ್ತಪ್ರತಿಯೊಳಗೆ ಲಿಪಿಕಾರನು ಕಲಾಕೃತಿಯ ರಚನೆಗಾಗಿ ಕಲಾವಿದನಿಗಾಗಿ ಬಿಡುವುದು ಬಹು ಚಿಕ್ಕ ಅಳತೆಯ ಸ್ಥಳ. ಆ ಸ್ಥಳದಲ್ಲಿಯೇ ಕಲಾವಿದನಾದವನೂ ಕವಿ ಪಾಠಕ್ಕೆ ತಕ್ಕುದಾದ ಭಾವವನ್ನು ಮೂರ್ತಗೊಳಿಸಬೇಕು. ಇದು ಕಲಾವಿದನ ಸತ್ವಪರೀಕ್ಷೆಯೂ ಹೌದು. ಅವನಿಗೊಂದು ಸವಾಲು ಹೌದು. ಇದನ್ನು ಗ್ರಹಿಸಿದ್ದ ಡಾ. ಬಿ.ಕೆ.ಹಿರೇಮಠರು ಚಿತ್ರಕಾರನ ಕೆಲವು ಸಮಸ್ಯೆಗಳು ಎಂದು ಈ ರೀತಿ ಹೇಳುತ್ತಾರೆ. ಚಿತ್ರ, ವರ್ಣಚಿತ್ರದ ವಿಷಯ ಯಾವುದೇ ಧಾರ್ಮಿಕ ಹಿನ್ನೆಲೆಯಲ್ಲಿ

ಆಯ್ಕೆಯಾದುದಿರಲಿ ಅದನ್ನು ದೃಶ್ಯ ರೂಪಕ್ಕೆ ಅಳವಡಿಸುವಾಗ ಚಿತ್ರಕಾರನಿಗೆ ಎದುರಾಗುವ ಮೊದಲ ಸಮಸ್ಯೆ ಸ್ಥಳಾವಕಾಶದ್ದು. ತನ್ನ ಎದುರಿಗೆ ಇರುವ ಸ್ಥಳಾವಕಾಶದಲ್ಲಿ ಆಯ್ಕೆ ಮಾಡಿಕೊಂಡು ಚಿತ್ರದ ವಸ್ತುವನ್ನು ಹೇಗೆ ಚಿತ್ರಿಸಬೇಕು? ಸ್ಥಳಾವಕಾಶವನ್ನು ಹೇಗೆ ವಿಭಜಿಸಿಕೊಳ್ಳಬೇಕು ? ಇದ್ದ ಅವಕಾಶದಲ್ಲಿ ಒಟ್ಟು ಚಿತ್ರದ ಸಮುದಾಯ ಶೋಭೆ ತರುವುದು ಹೇಗೆ? ಈ ಮುಂತಾದ ಸಮಸ್ಯೆಗಳು ಎದುರಾಗುತ್ತವೆ. ಈ ದೃಷ್ಟಿಯಿಂದ ಭಿತ್ತಿ ಚಿತ್ರಕಾರನಿಗೆ ಎದುರಾಗುವ ಸಮಸ್ಯೆಗಳಿಗಿಂತ ಹಸ್ತಪ್ರತಿ ಚಿತ್ರಕಾರನಿಗೆ ಅಥವಾ ಚಿಕಣಿ ಚಿತ್ರರಚನಕಾರನಿಗೆ ಎದುರಾಗುವ ಸಮಸ್ಯೆಗಳು ಅಧಿಕ.

ಹಸ್ತಪ್ರತಿಗಳ ಆಕಾರಧಿಗಳನ್ನು ಲಕ್ಷಿಸಿ ಹೇಳುವುದಾದರೆ ಈ ಚಿತ್ರಕಾರನಿಗೆ ಒದಗಿದ ಅವಕಾಶ ಎಂದರೆ ತಾಳೆಯೋಲೆ ಗ್ರಂಥಗಳ ಪತ್ರ, ಫಲಕಗಳ ಮೇಲಿನ ಚಿತ್ರಣಕ್ಕೆ ದೊರೆತ ಗರಿಷ್ಠ ಸ್ಥಳವಕಾಶ ಅಗಲಕ್ಕೆ ಮೂರು ಅಂಗುಲವನ್ನು ದಾಟದು. ಉದ್ದಕ್ಕೆ ಎರಡೂವರೆ ಇಂದ ಮೂರು ಅಂಗುಲ ದಾಟದು. ಈವರೆಗೆ ಇದಕ್ಕಿಂತ ಸ್ವಲ್ಪ ಹೆಚ್ಚಿನ ಅವಕಾಶ ದೊರೆತುದು, ಕಾಗದ ಹಸ್ತಪ್ರತಿಗಳಲ್ಲಿ. [೩೪] ಈ ಎಲ್ಲಾ ತಾಂತ್ರಿಕ ತೊಂದರೆಗಳಿದ್ದರೆ ಹಸ್ತಪ್ರತಿಯ ವಿಶೇಷವಾಗಿ ಅತಿ ಕಡಿಮೆ ಅವಕಾಶದ ತಾಳೆಯ ಗರಿಗಳ ಮೇಲೆ ಲೋಕೋತ್ತರವಾದ ಚಿತ್ರಗಳನ್ನು ರಚಿಸಿದರು. ಧವಳ,ಜಯ ಧವಳ, ಮಹಾ ಧವಳ, ಶಖರ ಶಂಕರ, ವಿಳಾಸ, ತ್ರಿಲೋಕಸಾರ, ಗಿರಿಜಾ ಕಲ್ಯಾಣ, ಮನೋವಿಜಯ, ವೀರಶೈವಾಮೃತ ಪುರಾಣ,ಅನೇಕ ಉದ್ದರಣೆ ಚಿತ್ರಗಳು ಅದರಲ್ಲೂ ಜಂಗಮೋದ್ಧಾರಣೆ ಅನಾದಿ ಜಂಗಮೋದ್ಧಾರಣೆ, ಗೋಮುಖ ಉದ್ಧರಣೆಯಂತಹ ಜಟಿಲ ಉದ್ಧರಣೆಗಳನ್ನು ಎರಡು ಅಂಗುಲಗಳ ಕಿರಿದಾದ ಸ್ಥಳದಲ್ಲಿ ಚಿತ್ರಗಳನ್ನು ರಚಿಸಿ ದಾಖಲೆಯೊಂದನ್ನು ನಿರ್ಮಿಸಿದ್ದಾರೆ. ಇಂತಹ ಜಟಿಲ ಕಾರ್ಯವನ್ನು ಮಾಡಿರುವಂತಹ ಕಲಾವಿದರು ಬಹು ದೊಡ್ಡ ಸಾಧನೆಯ ಸಿದ್ದರು ಎಂಬುದನ್ನು ಅರಿಯಬೇಕು.

ಕರ್ನಾಟಕದ 64 ಕಲೆಗಳಲ್ಲಿ ನಾಲ್ಕನೇಯದು ಚಿತ್ರಕಲೆ. ಇದನ್ನು ಆಲೇಖ್ಯಾ ಎಂದೂ ಹೇಳುತ್ತಾರೆ. ಭಾವಾತೀತಾವಾಗಿ ಇರುವುದನ್ನು ಬರಿ ಶಬ್ದಗಳ ಜಾಲದಲ್ಲಿ ಹೇಳುವುದು ಆಗುವುದಿಲ್ಲ. ಅದನ್ನು ವಿಸ್ತೃತ ಚಿತ್ರವೇ ಹೇಳಬಲ್ಲುದು. ಚಿತ್ರದಲ್ಲಿ ಇರುವುದನ್ನೆಲ್ಲಾ ಸಾಹಿತ್ಯವೂ ಗ್ರಹಿಸಲಾರದು. ಒಂದು ಚಿತ್ರ ಎಂಬುದು ನೂರು ಸಾಲಿನ ಕೃತಿಗೆ ಸಮವಾಗಿರುತ್ತದೆ.

ಕರ್ನಾಟಕದ ಹಸ್ತಪ್ರತಿ ಚಿತ್ರಕಲೆಯಲ್ಲಿ ಹಸ್ತಪ್ರತಿ ಚಿತ್ರಕಲಾವಿದರ ಪಾತ್ರ ಬಹು ಮುಖ್ಯವಾದುದು ಇವರು ಕಣ್ಣಿಗೆ ಕಾಣುವ ಕವಿಗಳಂತೆ, ಕವಿಪಾತದ ಲಿಪಿಕಾರರಂತೆ; ಕಣ್ಣಿಗೆ ಕಾಣದೇ ದಾಖಲುಗೊಳ್ಳದೇ ಎಲೆ ಮರೆಯ ಕಾಯಿಯಂತೆ ತೆರೆಯಲ್ಲಿಯೇ ಉಳಿದವರು ಇಂತಹ ಕಲಾವಿದರ ಪಾತ್ರವೂ ತುಂಬಾ ಹಿರಿದಾದುದು. ಅದರಲ್ಲೂ ಕನ್ನಡ ನಾಡಿನ ಕರ್ನಾಟಕದ ಹಸ್ತಪ್ರತಿ ಚಿತ್ರಕಲಾವಿದರ ಚರಿತ್ರೆಯಂತೂ ಅನುಪಮವಾದುದು. ಅವರು ಕನ್ನಡ ನಾಡಿನ ಕಲೆಯನ್ನು ಕಲೆಗಾಗಿ ಕಲೆ ಎಂದು ಸೀಮಿತಗೊಳಿಸದೆ ಈ ನಾಡಿನ ಸಂಸ್ಕೃತಿಯಂತೆ ಧರ್ಮಕ್ಕಾಗಿ ಚಿತ್ರಕಲೆ, ಜೀವನಕ್ಕಾಗಿ ಚಿತ್ರಕಲೆ. ಬದುಕೇ ಒಂದು ಕಲೆ ಎಂದು ಭಾವಿಸಿಕೊಂಡಿರುವ ಈ ಮಹಾನುಭಾವರುಗಳಾಗಿದ್ದಾರೆ. ಇವರ ಕುರಿತು ಇನ್ನೂ ಹೆಚ್ಚಿನ ಅಧ್ಯಯನಗಳಾಗಬೇಕಾದ ಅವಶ್ಯಕತೆ ಇದೆ. ಈ ದಿಸೆಯಲ್ಲಿ ಇದೊಂದು ಸಣ್ಣ ಪ್ರಯತ್ನ.

---

೩೪. ಡಾ. ಬಿ.ಕೆ. ಹಿರೇಮಠ : ಕನ್ನಡ ಹಸ್ತಪ್ರತಿಗಳು ಒಂದು ಅಧ್ಯಯನ, ಪುಟ -೧೮೮



ಅಧ್ಯಾಯ : ಆರು

ಹಸ್ತಪ್ರತಿ ಚಿತ್ರಕಲೆಯ ಸೌಂದರ್ಯ ಸಮೀಕ್ಷೆ.

ಸೌಂದರ್ಯವೆಂಬುದು ಕಣ್ಣಿನ ತುತ್ತಲ್ಲ ಕಣ್ಣಿಗೂ ಕಣ್ಣಾಗಿ
ಒಳಗಿಹುದು ರೂಪ ಲಾವಣ್ಯಕೆ ಅಳೆಯಲು ಬಾರದು ಅವುಗಳೆ
ಇದರೊಂದು ಕಾಣವಿಹವು ಇದಿರಿಗೆ ಚುಲುವಾಗಿ ಇದುವೆ
ತಾನೆನುವಾಗ, ಒಲವಾಗಿ ಒಳಗಿಂದ ಹೊಮ್ಮುತಿದೆ. ಅಲ್ಲಿತ್ತು
ಸ್ವಾನಂದ, ಇಲ್ಲಿದೆ ರಸರಂಗ ಎಲ್ಲೇನು ಒಂದೆಂದೆ ಚಿಮ್ಮುತಿದೆ. [೧]

ಧರ್ಮಾರ್ಥ ಕಾಮಮೋಕ್ಷೇಷು ವೈಚಕ್ಷಣ್ಯಂ ಕಲಾಸುಚ ।
ಕರೋತಿ ಕೀರ್ತಿಂ ಪ್ರೀತಿಂಚ ಸಾಧು ಕಾವ್ಯ ನಿಷೇವಣಮ್
- ಬಾಮಹ [೨]

ಪೀಠಿಕೆ :

ಮಮ್ಮಟನ ಕಾವ್ಯ ಪ್ರಕಾಶದಲ್ಲಾಗಲಿ, ಭಾಮಾಹನ ಕಾವ್ಯಾಲಂಕಾರ ದಲ್ಲಾಗಲಿ, ನಾಗವರ್ಮನ ಕಾವ್ಯಲೋಕನ, ವಾಮನನ ಕಾವ್ಯಲಂಕಾರ ಸೂತ್ರ ವೃತ್ತಿಯಿಂದ ಹಿಡಿದು ಶ್ರೀ ತಿನಂ ಶ್ರೀ ಕಂಠಯ್ಯನವರ ಭಾರತೀಯ ಕಾವ್ಯ ಮೀಮಾಂಸೆಯವರೆಗೂ ಕಾವ್ಯದೊಳಗಿನ ರಸಾನುಭೂತಿ, ಅಲಂಕಾರ ಅನುಭೂತಿಗಳ ಬಗ್ಗೆ ಚರ್ಚಿಸಿರುವಂತೆ ಒಂದೇ ಕಾವ್ಯ ಸ್ವರೂಪದ ಕಲಾಭಿವ್ಯಕ್ತಿತ್ವದ ಕುರಿತು ಚರ್ಚಿಸಿರುವದನ್ನು ಕಾಣುವುದಿಲ್ಲ. ಭಾರತದಲ್ಲಿ ಕನ್ನಡೇತರ ಸಾಹಿತ್ಯದಲ್ಲಿ, ಆಂಗ್ಲ ಸಾಹಿತ್ಯ ಮಾಧ್ಯಮದಲ್ಲಿ ವಿಫುಲವಾದ ಕಲಾತ್ಮಕ ಸಾಹಿತ್ಯ ಲಭ್ಯವಾಗುತ್ತದೆ. ರೆ॥ ಫರ್ಡಿನಾಂಡ ಕಿಟ್ಟಲ್, ಬಿ.ಎಲ್. ರೈಸ್ ರಂತಹ ಅನೇಕ ಮಹನೀಯರು ಕನ್ನಡ ಸಾಹಿತ್ಯದಲ್ಲಿ ಚರ್ಚಿಸಿ ಅಮೂಲ್ಯವಾದ ಸಾಹಿತ್ಯ ಕೃತಿಗಳೊಂದಿಗೆ ಕನ್ನಡ ಸಾರಸ್ವತ ಹಿರಿಮೆಯನ್ನು ಹೆಚ್ಚಿಸಿದರು. ಇವರಂತೆ ಅನ್ಯದೇಶಗಳಿಂದ ಬಂದು ಕಲಾ ಪುನರುಥ್ಥಾನ ಕ್ರಿಯೆಯನ್ನು ಬಂಗಾಲದ ಶಾಂತಿನಿಕೇತನ ಕಲಾ ಶಾಲೆಯ ಮೂಲಕ ಭಾರತೀಯ ಕಲಾಲೋಕಕ್ಕೆ ದುಡಿದು ಅದರ ಘನತೆಗೆ ಕಾರಣವಾಗಿರುವ ಕೆ.ಆನಂದಕುಮಾರ ಸ್ವಾಮಿ, ಮಾನ್ಯರಾದ ಇ.ಬಿ.ಹ್ಯಾವೆಲ್, ಪರ್ಸಿಬ್ರೌನ್, ಓ ಗಂಗೂಲಿ, ಹೆಚ್.ಜೆ.

---

೧. ದ. ರಾ. ಬೇಂದ್ರೆ : ಸಖೀಗೀತ, ಪುಟ ೮೪.
೨. ಅ.ನ. ಕೃಷ್ಣರಾಯ ಸಂ.: ಭಾರತ ಸಂಸ್ಕೃತಿ ದರ್ಶನ, ಪುಟ-೧೪೮.

ಕಜಿನ್ಸ್ ಗ್ರಿಪಿತ್ಸ್ ಸಹೋದರಿ ನಿವೇದಿತಾರನ್ನು ಹಾಗೂ ಅನೇಕ ಮಹಾನೀಯರನ್ನು ನಾನು ಕೃತಜ್ಞತೆಯೊಂದಿಗೆ ಸ್ಮರಿಸಬೇಕಾಗಿದೆ.

ಕಲೆಯು ಸಾಹಿತ್ಯದಂತೆ ಅಭಿವ್ಯಕ್ತಿ ಮಾಧ್ಯಮವಾಗಿದ್ದು ಸಾಹಿತ್ಯದಷ್ಟೇ ಪ್ರಾಶಸ್ತ್ಯವನ್ನು ಕಲಾಶಾಸ್ತ್ರಕ್ಕೂ ದೊರೆಯಲಿ ಎಂಬ ಮಹತ್ವಾಕಾಂಕ್ಷೆಯಿಂದ, ಕಲೆಗಾಗಿರುವ ಉದಾಸೀನತೆಯನ್ನು ನಿವಾರಿಸುವುದಕ್ಕಾಗಿಯೇ ಕಲೆ ಮತ್ತು ಸಾಹಿತ್ಯಗಳ ಸಾಮ್ಯತೆಯ ಚರ್ಚೆಯೊಂದನ್ನು ನ್ಯಾಯ ಕೇಳುವ ನ್ಯಾಯವಾದಿಯಂತೆ ಇಲ್ಲಿ ಪಸ್ತಾಪಿಸಿಕೊಂಡಿರುವೆ.

ಒಂದೇ ವಸ್ತುವನ್ನು ಕುರಿತು ಕಾವ್ಯ ಬರೆಯುವ ಕವಿಗೂ ಅದೇ ವಸ್ತುವನ್ನು ಕುರಿತು ಚಿತ್ರ ಬರೆಯುವ ಚಿತ್ರಕಲಾವಿದನಿಗೂ ಸಮಾನತೆ ಇದ್ದರೂ ಸಮಭಾವದಲ್ಲಿ ಚಿತ್ರವನ್ನು ಮತ್ತು ಕಾವ್ಯವನ್ನು ಸಮಾನವೆಂದು ಗ್ರಹಿಸುವ ಸ್ವೀಕರಿಸುವ ಭಾವ ನಮ್ಮಲ್ಲಿ ಇಂದಿಗೂ ತುಂಬಾ ಕಡಿಮೆಯೆಂದೇ ಹೇಳಬೇಕಾಗುತ್ತದೆ. ಏಕೆಂದರೆ ನಾವಿಂದು ಪ್ರಾಯೋಗಿಕವಾಗಿ ವರ್ಣಾಶ್ರಮಗಳನ್ನು ಪುರಸ್ಕರಿಸದಿದ್ದರೂ ಮಾನಸಿಕವಾಗಿ ಬೌದ್ಧಿಕವಾಗಿಯೂ ನಾವು ಇನ್ನೂ ತಾರತಮ್ಯದ ವರ್ಣಾಶ್ರಮಿಗಳಾಗಿಯೇ ಬದುಕುತ್ತಿದ್ದೇವೆ. ಸಾಹಿತಿಯಾದವರು ಚಿತ್ರಕಲೆಯನ್ನು ಕುರಿತು, ಚಿತ್ರಕಲಾವಿದರಾದವರು ಸಾಹಿತ್ಯ ಕೃತಿಗಳನ್ನು ಓದಲಾರದಂತಹ ಗೋಡೆಗಳ ಮಧ್ಯೆ ನಾವಿನ್ನೂ ಬದುಕುತ್ತಿರುವುದರಿಂದಲೇ ಹಸ್ತ ಪ್ರತಿಯೊಳಗಿನ ಚಿತ್ರಕಲೆ ಇಂದಿಗೂ ಅಧ್ಯಯನಕ್ಕೆ ಒಳಪಡದೆ ಉಳಿದುಕೊಂಡಿದೆ.

ಇದಕ್ಕೆ ನಿದರ್ಶನವಾಗಿ ಶ್ರೀ ತಿ.ನಂ. ಶ್ರೀಕಂಠಯ್ಯನವರು ತಮ್ಮ ಭಾರತೀಯ ಕಾವ್ಯ ಮಿಮಾಂಸೆ ಎಂಟನೇಯ ಅಧ್ಯಯನದ ವಿಷಯ ಪ್ರವೇಶದಲ್ಲಿ ಹೇಳಿರುವ ಮಹತ್ವ ಪೂರ್ಣವಾಗಿರುವ ಮಾತುಗಳನ್ನು ನಾವಿಲ್ಲಿ ಗಮನಿಸಬಹುದಾಗಿದೆ.... ನಮ್ಮ ಅಲಂಕಾರಿಕರು ಕಾವ್ಯಕ್ಕೂ ಇತರ ಕಲೆಗಳಿಗೂ ಇರುವ ಸಂಬಂಧವನ್ನು ಕ್ರಮವಾಗಿ ಎಲ್ಲಿಯೂ ವಿಚಾರ ಮಾಡಿಲ್ಲ. ಈ ಬಗೆಯ ಪ್ರವೇಶಿಕೆಯೇನೂ ಇಲ್ಲದೆ ಕಾವ್ಯ ಸ್ವರೂಪ ನಿರೂಪಣೇ ನೇರವಾಗಿ ತೊಡಗುವುದು ಅವರ ಪದ್ಧತಿ. ಆದರೂ ಮೇಲಿನ ವಿಷಯವನ್ನು ಕುರಿತು 'ಧ್ವನ್ಯಾಲೋಕ'ದಲ್ಲಿ ನಾಲ್ಕು ಮಾತು ಅಲ್ಲಲ್ಲಿ ಪ್ರಾಸಂಗಿಕವಾಗಿ ಬಂದಿದೆ . ಅದು ಲಲಿತ ಕಲೆಗಳ ಹೃದಯವನ್ನೇ ತೆರೆದಿಡತಕ್ಕದ್ದಾಗಿರುವುದರಿಂದ ಅದರ ಆಶಯವನ್ನೇ ಕೆಲವು ಮಟ್ಟಿಗೆ ಇಲ್ಲಿ ವಿವರಿಸುವುದು ಅವಶ್ಯಕ.

ಗಾನದ ಸ್ವರೂಪವನ್ನು ಮೊದಲು ನೋಡೋಣ. ಇಂಪಾದ ನಾದ ಪರಂಪರೆಯೇ ಅದರ ಶರೀರ. ಭಾಷೆಯ ಶಬ್ದಗಳಿರುವಂತೆ, ಗಾನದಲ್ಲಿ ಇಂತಹ ಸ್ವರಕ್ಕೆ ಅಥವಾ ಸ್ವರ ಸಮುಚ್ಛಯಕ್ಕೆ ಇಂತಹ ಅರ್ಥವೆಂದು ಯಾರೂ ಸಂಕೇತ ಮಾಡಿಲ್ಲ; ಎಂದರೆ ಇಲ್ಲಿ ವಾಚ್ಯಾರ್ಥವೇ ಇಲ್ಲ. ಆದರೂ ಗಾಯಕನ ಹೃದಯದಲ್ಲಿ ತುಮಲದ ಅರ್ಥವೊಂದನ್ನು ಈ ಗಾನವು ಹೊರ ಹೊಮ್ಮಿಸಿ ಶ್ರೋತೃವಿನ ಹೃದಯಕ್ಕೆ ನೇರವಾಗಿ ಮುಟ್ಟಿಸುತ್ತದೆ. ಈ ಅರ್ಥವು ಯಾವುದು ? ಚಿತ್ತವೃತ್ತಿ ವಿಶೇಷವೂ, ಅನುಭಾವವೇದ್ಯವೂ, ಆನಂದಮಯವೂ ಆದ ರಸವಿಲ್ಲದೆ ಬೇರೊಂದಿಲ್ಲ. ಭರತೇಶ

ವೈಭವದ ಈ ಪದ್ಯವನ್ನು ಜ್ಞಾಪಿಸಿಕೊಳ್ಳೋಣ.

ಒಳಗುಮ್ಮಿದಾನಂದರಸ ತನ್ನ ತನುತುಂಬಿ
ತುಳುಕಿ ಹೊರಗೆ ಸೂಸುವಂತೆ ।
ತೆಳುವಸು ಜಿುದ ಬಾಯ್ದೆರೆಯೋಳು ಸಾಸ್ವರ
ಹೊಳೆದು ಮೋಹಿಸು ತಿದ್ದುದಾಗ (ವೀಣಾ ಸಂಧಿ 12)

ಗಾನದ ಸ್ವರವಿನ್ಯಾಸವು ಈ ರಸವನ್ನು ಪ್ರಕಾಶ ಪಡಿಸುವ ಒಂದು ಸಾಧನ. ರಸಾನುಭವ ಮಾಡುವಾಗ ಈ ಸ್ವರ ಸಮುದಾಯದ ಅರಿವೂ ನಮಗೆ ಇರುತ್ತದೆ; ಅದು ನಿಂತ ಕೂಡಲೆ ರಸವೂ ವಿಚ್ಛೇದ ಹೊಂದುತ್ತದೆ. ಆದರೆ ಸ್ವರಗಳೇ ರಸವಲ್ಲ. ಎಂದರೆ ಗಾನವು ರಸಕ್ಕೆ ವ್ಯಂಜನ ಎಂದಾಯಿತು. ಇಲ್ಲಿ ನಾದ ವಿಶೇಷಕ್ಕೆ ನಿಯತವಾದ ಅರ್ಥ ಯಾವುದೂ ಇಲ್ಲದ್ದರಿಂದ ರಸ ಪ್ರಕಾಶವು ನಡೆಯುವುದು ಕೇವಲ ವ್ಯಂಜನ ವ್ಯಾಪಾರದಿಂದ ಮಾತ್ರ ಎಂದು ಬೇರೆಯಾಗಿ ಹೇಳಬೇಕಾಗಿಲ್ಲ.

ಗಾನದಲ್ಲಿ ಅವಾಚಕವಾದರೂ ಶಬ್ದವುಂಟು. ನೃತ್ಯದಲ್ಲಾದರೆ ಶಬ್ದ ಸಂಪರ್ಕವೇ ಅನಾವಶ್ಯಕ. ಸಮರ್ಥೆಯಾದ ನಟಿ ಕಣ್ಣನ್ನು ಅರಳಿಸುವುದು. ಹೊರಳಿಸುವುದು ಹುಬ್ಬನ್ನು ಬಿಗಿಯವದು, ತೋಳುಗಳನ್ನು ಆಡಿಸುವುದು ಇವೇ ಮೊದಲಾದ ಅನೇಕ ಅಂಗ ಚಾಲನೆಗಳಿಂದ ಉಲ್ಲಾಸ, ಔತ್ಸುಕ, ಕೋಪ ಮೊದಲಾದ ಚಿತ್ತ ವೃತ್ತಿಗಳನ್ನು ಸೂಚಿಸುತ್ತಾಳೆ. ಅವಳು ಹೀಗೆ ಅಭಿವ್ಯಕ್ತಪಡಿಸುವ ಭಾವ ಯಾವುದೇ ಆಗಿರಲಿ, ಅದರಿಂದ ನಮಗೆ ಆನಂದಾನುಭವವುಂಟಾಗುವುದು. ಸ್ವಯಂವೇದ್ಯ, ಮಾಲವಿಕೆಯ ನಾಟ್ಯವನ್ನೇ ಕಾಳಿದಾಸನು, ನೀಲಾಂಜನೇಯ ನಾಟ್ಯವನ್ನು ಪಂಪನೂ, ಭರತ ಚಕ್ರವರ್ತಿಯ ಆಸ್ಥಾನದಲ್ಲಿ ನಡೆಯುತ್ತಿದ್ದ ನೃತ್ಯಗಳನ್ನು ರತ್ನಾಕರನೂ ವರ್ಣನೆ ಮಾಡಿರುವುದನ್ನು ಓದಿದ ಮಾತ್ರಕ್ಕೆ ಹೃದಯವು ಆನಂದ ಪರಿಪೂರ್ಣವಾಗುತ್ತದೆ. ಆ ಬಗೆಯ ನೃತ್ಯವನ್ನೇ ಕಣ್ಣಾರೆ ನೋಡಿದಾಗ ನಾವು ರಸ ಪರವಶರಾಗುವುದರಲ್ಲಿ ಸಂದೇಹವೇ ಇಲ್ಲ. ಇಲ್ಲಿ ಚಿತ್ತ ವೃತ್ತಿ ವಿಶೇಷವನ್ನು ಸೂಚಿಸಲು ನೃತ್ಯಕಲೆ ಅನುಸರಿಸುವುದು. ವ್ಯಂಜನಮಾರ್ಗವೇ ಈ ವಿಷಯವನ್ನು ಸ್ಥಾಪಿಸಲು ಕಲೆಯ ತನಕ ಕೂಡ ನಾವು ಹೋಗಬೇಕಾಗಿಲ್ಲ. ಲೋಕ ವ್ಯವಹಾರದಲ್ಲೇ ಅಂಗ ಚೇಷ್ಟೆ ಚಿತ್ತವೃತ್ತಿಯನ್ನು ಚೆನ್ನಾಗಿ ಅಭಿವ್ಯಕ್ತ ಪಡಿಸುತ್ತೇವೆ. ಆದರೆ ಅಲ್ಲಿಯದು ಲೌಕಿಕ ಭಾವ ಇದಕ್ಕೂ ರಸಕ್ಕೂ ವ್ಯತ್ಯಾಸಬೇನೆಂಬುದನ್ನು ಮುಂದೆ ವಿಸ್ತಾರವಾಗಿ ಪ್ರತಿಪಾದನೆ ಮಾಡಬೇಕಾಗಿರುವುದರಿಂದ ಇಲ್ಲಿ ಅದರ ಪ್ರಸ್ತಾಪ ಅನವಶ್ಯಕ.[೩]

ಚಿತ್ರ-ಗೀತ-ನರ್ತನ ಇವುಗಳೆಲ್ಲ ಪರಸ್ಪರ ಪೂರಕವಾಗಿ ಬೆಳೆದು ಬಂದ ಕಲೆಗಳು. ಆಯಾ ಕಲೆಗಳಿಗೆ ಸಂಬಂಧಿಸಿದಂತೆ ವಿಪುಲವಾದ ಶಾಸ್ತ್ರ ಗ್ರಂಥಗಳು ಬೆಳೆದು ಬಂದಿವೆ. ಎಲ್ಲ ಕಲೆಗಳೂ ರಸಾಭಿವ್ಯಕ್ತಿಯನ್ನೇ ತಮ್ಮ ಗುರಿ ಎಂದು ಸಾರಿದವು. ಈ ಎಲ್ಲಕ್ಕೂ ಸಮಾನವಾದ

೩. ತಿ.ನಂ. ಶ್ರೀಕಂಠಯ್ಯ : ಭಾರತೀಯ ಕಾವ್ಯ ಮೀಮಾಂಸೆ , ವಿಶ್ವಕನ್ನಡ ಸಮ್ಮೇಳನ, ಬೆಂಗಳೂರು, ಪುಟ- ೯೯-೧೦೦

'ರಸ'ದ ವಿಷಯದಲ್ಲಿ ಭರತಮುನಿಯ ನಾಟ್ಯ ಶಾಸ್ತ್ರವೇ ಆಧಾರ. ವಿಷ್ಣುಧರ್ಮೋತ್ತರ ಪುರಾಣದಲ್ಲಿ ಯಾವ ಯಾವ ರಸಗಳು ಯಾವ ಯಾವ ವರ್ಣವುಳ್ಳವು ಎಂಬುದನ್ನು ಹೇಳಲಾಗಿದೆ. ಸಂಗೀತದಲ್ಲಿ ಯಾವ ಯಾವ ಸ್ವರಗಳಿವೆ.ಯಾವ ಯಾವ ರಸಾಭಿವ್ಯಂಜನ ಶಕ್ತಿ ಇದೆ ಎನ್ನುವುದನ್ನು ಹೇಳಿದೆ. ಚಿತ್ರದಲ್ಲಿಯೂ ಕೂಡ ಯಾವ ಯಾವ ವರ್ಣ ಯಾವ ಯಾವ ರಸವನ್ನು ವ್ಯಕ್ತಗೊಳಿಸಲು ಉಪಯೋಗಿಸಲ್ಪಡಬೇಕು ಎನ್ನುವ ವಿಷಯವನ್ನು ಹೇಳಲಾಗಿದೆ. ನೃತ್ಯದಂತೆ ಚಿತ್ರವು ಲೋಕತ್ರಯದ ಅನುಕರಣ ರೂಪವಾದುದರಿಂದ ಆಯಾ ಭಾವಾವೇಶಕ್ಕೆ ತಕ್ಕಂತೆ ಇರುವ ಆಕೃತಿ ವಿಶೇಷಗಳು ಸಮವಾಗಿರುವದರಿಂದ ನೃತ್ಯ ಸಹ ಉತ್ಕೃಷ್ಟವಾದ ಚಿತ್ರವೇ ಆಗಿರುತ್ತದೆ. ಹೀಗೆ ನಾದವಾಗಲೀ ವರ್ಣವಾಗಲೀ, ನರ್ತನವಾಗಲೀ ಎಲ್ಲವೂ ಚಿತ್ರದಲ್ಲಿ ನೆಲೆಯನ್ನು ಕಂಡು ಕೊಳ್ಳುತ್ತವೆ. ಈ ಕಲೆಗಳ ಉದ್ದೇಶ ರಸಾಭಿವ್ಯಂಜನೆ ಎಂದರೂ ಅವುಗಳ ಪರಮೋದ್ದೇಶ ಅಷ್ಟೇ ಅಲ್ಲ. ಅವು ಕೇವಲ ರಸಾನಂದದಲ್ಲಿ ನಿಲ್ಲಿಸಿದರೆ ಸಾಲದು; ಪುರುಷಾರ್ಥ ಸಾಧನವಾಗಬೇಕು. 'ಯಾವನು ನೃತ್ಯ, ಗೀತ, ವಾದ್ಯ ಇವುಗಳನ್ನು ಮಹಾವಿಷ್ಣುವಿನ ಪ್ರೀತಿಗಾಗಿ ಅರ್ಪಿಸುತ್ತಾನೋ ಆವರ ಸರ್ವ ವಸ್ತು ಸಮೃದ್ಧಿಯಿಂದ ಮಾಡಿದ ಯಜ್ಞದ ಫಲವನ್ನೇ ಹೊಂದುತ್ತಾನೆ'[೪]

ಲಲಿತ ಕಲೆಯೆಂದರೆ ಕಾವ್ಯ,ಗಾನ,ನೃತ್ಯ, ನಾಟ್ಯ, ಇವಿಷ್ಟೇ ಅಲ್ಲ, ಚಿತ್ರಶಿಲ್ಪ ವಾಸ್ತು ಈ ಮೊದಲಾದವು ಸೇರುತ್ತವೆ. ಆದರೆ ನಮ್ಮ ಅಲಂಕಾರಿಕರು ವಾಸ್ತು ಶಿಲ್ಪಾದಿಗಳು ಹೆಸರನ್ನೇ ಎತ್ತುವುದಿಲ್ಲ. ಚಿತ್ರವನ್ನು ಕುರಿತು ಪ್ರಾಸಂಗಿಕವಾಗಿ ಎರಡು ಮಾತನ್ನು ಆಡಿದ್ದರೂ ಅದು ಮುಖ್ಯ ವಸ್ತುವಿನ ಪ್ರತಿಕೃತಿ ಅಥವಾ ಅನುಕರಣ ಮಾತ್ರವೆಂದು ಅವರ ಭಾವನೆ ಅದರಲ್ಲಿ ಜೀವ ಭೂತವಾದ ರಸವುಂಟೆಂದು ಅವರು ಒಪ್ಪುವಂತೆ ತೋರುವುದಿಲ್ಲ. 'ಚಿತ್ರ' ಕಾವ್ಯ ಅಲೇಖ್ಯ ಪ್ರಖ್ಯವೆಂಬ ಕಾವ್ಯಾನುಕರಣ ಈ ಹೆಸರುಗಳು ಇವುಗಳ ಸ್ವರೂಪವೂ ಮೇಲಿನ ಮಾತಿಗೆ ನಿದರ್ಶನ ಆದರೆ ಚಿತ್ರಕಲೆಯನ್ನು ಕುರಿತ ನಿರೂಪಣೆಗಳಲ್ಲಿ ಭಾವಚಿತ್ರವೆಂಬ ಪ್ರಭೇದದ ಹೆಸರು ಬರುತ್ತದೆ. 'ಅಭಿಲಷಿತಾರ್ಥ ಚಿಂತಾಮಣಿ'ಯಲ್ಲಿ ಇದರ ಲಕ್ಷಣವನ್ನು ಹೀಗೆ ಕೊಟ್ಟಿದೆ.

ಶೃಂಗಾರಾದಿರಸೋ ಯತ್ರ ದರ್ಶನಾದೇವ ಗಮ್ಯತೇ ।
ಭಾವಚಿತ್ರಂ ತದಾಖ್ಯಾತಂ ಚಿ(ತ್ರ) ಕೌತರುಕಕಾರಕಂ ॥ (3-941-2)

ರಸಾಭಿವ್ಯಕ್ತಿಯನ್ನೇ ಗುರಿಯಾಗಿ ಉಳ್ಳ ಚಿತ್ರಗಳು ಉಂಟೆಂದು ಪ್ರಾಚೀನ ಶಾಸ್ತ್ರಕಾರರು ಅರಿತಿದ್ದದು ಇದರಿಂದ ಸ್ಫುಟವಾಗುತ್ತದೆ. ನಮ್ಮ ಪ್ರಾಚೀನ ಕವಿಗಳಂತೂ ಚಿತ್ರಕಲೆಗೆ ತುಂಬಾ ಪ್ರಾಶಸ್ತ್ಯ ಕೊಟ್ಟಿದ್ದರು. ನಾಯಕ ನಾಯಕಿಯರ ಭಾವಾಭಿವ್ಯಂಜನೆಗಳಿಗೆ ಚಿತ್ರವು ಉತ್ಕೃಷ್ಟ ಸಾಧನವೆಂದು ಭಾವಿಸಿದ್ದರೂ 'ಮಾಲವಿಕಾಗ್ನಿ ಮಿತ್ರ, ಶಾಕುಂತಲ, ರತ್ನಾವಳಿ' ಈ ಮೊದಲಾದ ನಾಟಕಗಳ ಸಂವಿಧಾನದಲ್ಲಿ ಚಿತ್ರಲೇಖನಕ್ಕಿರುವ ಪ್ರಾಮುಖ್ಯವನ್ನು ಗಮನಿಸಿ ಆದರಲ್ಲಿಯೂ 'ಶಾಕುಂತಲ'ದ

---

೪. ಡಾ. ಜಿ.ಎಸ್. ಶಿವರುದ್ರಪ್ಪ: ಸೌಂದರ್ಯ ಸಮೀಕ್ಷೆ, ಪುಟ - ೧೩೨, ೧೩೩.

ಆರನೆಯ ಅಂಕ ದುಷ್ಯಂತನು ರಚಿಸುತ್ತಿದ್ದ ಚಿತ್ರದ ವರ್ಣನೆಯನ್ನು ಓದಿದರೆ ಕಾಳಿದಾಸನು ಚಿತ್ರಕಲೆಯ ಹೃದಯವನ್ನು ಚೆನ್ನಾಗಿ ಅರಿತಿದ್ದನೆಂಬುದು ಸ್ಪಷ್ಟವಾಗುತ್ತದೆ. 'ಕಾರ್ಯಾ' ಸೈಕತಲೀಹಂಸ ಮಿಥನಾ ಎಂಬ ಒಂದು ಪದ್ಯವೇ ಸಾಕು.[೫]

ಭಾಷೆ ಪ್ರಮುಖವಾಗಿರುವುದರಿಂದ ಅದರ ವಿಸ್ತಾರ ವ್ಯಾಪಕವಾಗಿರುತ್ತದೆ. ಸಹಜತೆಯಿಂದ ಅದನ್ನು ಉಪಯೋಗಿಸಲು ಬರುವುದರಿಂದ ಹೆಚ್ಚು ಜನರಿಗೆ ಅದರ ಸಮಸ್ಯೆ ಪರಿಚಯವಿರುವುದರಿಂದ ಅಭಿವ್ಯಕ್ತಿ ಮಾಧ್ಯಮದಲ್ಲಿಯೇ ಅದು ತುಂಬಾ ಶಕ್ತಿಶಾಲಿಯಾಗಿ ಕಾಣುತ್ತದೆ. ಆದರೆ ಸಂಗೀತ, ಚಿತ್ರ ಮತ್ತು ಮೂರ್ತಿ ಶಿಲ್ಪ ಅಥವಾ ಬೇರೆ ಯಾವುದೇ ಕಲೆಯಾಗಿರಲಿ ಅದಕ್ಕೆ ಭಾಷೆಯಲ್ಲಿದ್ದಂತೆ ಸರಳತೆ ಇಲ್ಲ. ಆದರೆ ಸಂಪೂರ್ಣ ಅಭಿವ್ಯಕ್ತಿಯ ಸಾಮರ್ಥ್ಯದಿಂದ ಅವು ವಂಚಿತವಾಗಿಲ್ಲ. ಭಾಷೆಯಲ್ಲಿ ಕೇಳುವವನ ಜವಾಬ್ದಾರಿಯನ್ನು ತಕ್ಕ ಮಟ್ಟಿಗೆ ಕಡಿಮೆ ಮಾಡುವ ಶಕ್ತಿ ಇದೆ. ಆದರೆ ಅನ್ಯ ಕಲೆಗಳಲ್ಲಿ ಅಂದರೆ ದೃಕ್ ಕಲೆಗಳಲ್ಲಿ ಶ್ರವಣಕಲೆಯಲ್ಲಿ ನೋಡುವವನ ಮತ್ತು ಕೇಳುವವನ ಜವಾಬ್ದಾರಿ ಹೆಚ್ಚಾಗಿರುತ್ತದೆ. ಇಂತಹ ಕಲೆಗಳಲ್ಲಿ ರಸಿಕನಿಗೆ ಅಪಾರ ಸ್ವಾತಂತ್ರ್ಯ ಕೊಡುವ ಕ್ಷಮತೆ ಇದೆ. ರಸಿಕನ ಮಾನಸಿಕ ''ವಿಶ್ವ'' ಎಷ್ಟು ಸಮೃದ್ಧವಾಗಿರುತ್ತದೆ. ಅಷ್ಟು ಅರ್ಥ ಅವನಿಗಾಗುತ್ತದೆ. ಕಂಗಾಲಾದವನಿಗೆ ಕೃತಿಯಲ್ಲಿ ಕಲೆಕಾಣಿಸುವುದಿಲ್ಲ. ಕಲೆಯ ಮಾತಿನ ಅರ್ಥ ಅವನಿಗಾಗುವುದಿಲ್ಲ.[೫]

ಭಾಷೆ ಬದುಕಿಗೆ ಅನಿವಾರ್ಯವಾಗಿದೆ. ಭಾಷೆಗೆ ತತ್‌ಕ್ಷಣದ ಪರಿಸರವಿದೆ. ಭಾಷೆ ಗಾಳಿಯಂತೆ ವ್ಯಕ್ತಿಯ ಸತ್ತ ಸುತ್ತಿಕೊಂಡಿರುತ್ತದೆ. ಆದರೆ ಭಾಷೆ ಅನಿವಾರ್ಯವಾದಷ್ಟು ಕಲೆ ಇನ್ನೂ ಅನಿವಾರ್ಯವಾಗಿಲ್ಲ. ಸಾಮಾನ್ಯ ಸಂಪರ್ಕಕ್ಕಾದರೂ ಭಾಷೆ ಬೇಕಾಗುತ್ತದೆ. ದೈಹಿಕ ಅವಶ್ಯಕತೆಗಳನ್ನು ಪ್ರೇರೇಪಿಸಬೇಕಾದರೆ ಭಾಷೆಯ ಅವಶ್ಯಕತೆ ಇರುತ್ತದೆ. ಆದರೆ ಯಾವ ಜರೂರು ಪ್ರಸಂಗಕ್ಕೆ ಕಲೆಯ ಅವಶ್ಯಕತೆಯಿಲ್ಲ. ಬದುಕಿಗೆ ಕಲೆ ಬೇಕಾಗುವುದಿಲ್ಲ. ಆದರೆ ಬದುಕನ್ನು ಶ್ರೀಮಂತ ಗೊಳಿಸಬೇಕಾದರೆ ಕಲೆ ಬೇಕು. ಕಲೆ ಮತ್ತು ಸಾಹಿತ್ಯಗಳು ಭಿನ್ನವಲ್ಲ ಅವು ಅತ್ಯುತ್ತಮವಾಗಿರುವ ಎರಡು ಪ್ರಭಲ ಮಾಧ್ಯಮಗಳಾಗಿರುವುದರಿಂದ ಲಿನ್‌ಯುಟಾಂಗ (Linyutan) ಹೇಳುವ ಮಾತನ್ನು ನಾವು ಗಮನಿಸಬೇಕಾಗಿದೆ. Literature is Landscape on the Desk and the Landscape is literature on earth ಸಾಹಿತ್ಯವು ಬರಿಯುವ ಮೇಜಿನ ಮೇಲಿನ ಭೂದೃಶ್ಯವಾದರೆ ಭೂ ದೃಶ್ಯವೇ ಧರೆಯ ಮೇಲಿನ ಸಾಹಿತ್ಯವಾಗುತ್ತದೆ ಎಂಬ ಮಾತನ್ನು ಗಂಭೀರವಾಗಿ ಚಿಂತಿಸಬೇಕಾಗಿದೆ.[೬]

ಕನ್ನಡ ಕಾವ್ಯ ಪರಂಪರೆಯಲ್ಲಿ ಬರುವ ಜೈನ, ವೀರಶೈವ ವೈದಿಕ ಹಸ್ತಪ್ರತಿಗಳಲ್ಲಿ ಹಸ್ತಪ್ರತಿ ಚಿತ್ರಕಲೆಯನ್ನು ಕುರಿತು ಬಹಳಷ್ಟು ಉಲ್ಲೇಖಗಳು ದೊರೆಯುತ್ತಿದ್ದರೂ ಮೂಲ

---

೫. ಡಾ. ಜಿ.ಎಸ್. ಶಿವರುದ್ರಪ್ಪ: ಸೌಂದರ್ಯ ಸಮೀಕ್ಷೆ, ಪುಟ - ೧೩೨, ೧೩೩.

೬. ಶ್ರೀ ಚಂದರಕಾಂತ ಕುಸುನೂರು : ಸಾಹಿತ್ಯ ಮತ್ತು ಚಿತ್ರಕಲೆ, ಪುಟ - ೮.

ಹಸ್ತಪ್ರತಿಗಳೇ ನಿರ್ಲಕ್ಷ್ಯಕ್ಕೆ ಒಳಗಾದಂತೆ ಹಸ್ತಪ್ರತಿ ಚಿತ್ರಗಳು ಇಂದಿಗೂ ನಿರ್ಲಕ್ಷ್ಯಕ್ಕೆ ಒಳಗಾಗಿವೆ. ಶತಮಾನಗಳ ಗಣನೆಯಲ್ಲಿ ಕನ್ನಡ ಸಾಹಿತ್ಯದ ಬೆಳವಣಿಗೆಯಲ್ಲಿ ಹೊಸ ಪ್ರಯೋಗಗಳನ್ನು ನಾವು ಗುರುತಿಸುವಂತೆ ಸಾವಿರಾರು ವರ್ಷದ ಬೆಳವಣಿಗೆಯಲ್ಲಿ ಚಿತ್ರಕಲೆಯು ಬೆಳೆದಂತೆ ಹಸ್ತಪ್ರತಿ ಚಿತ್ರಕಲೆಯಲ್ಲಿ ಕಾಲಘಟ್ಟದ ಬೆಳವಣಿಗೆಯಲ್ಲಿ ವಿವಿಧ ಶೈಲಿ, ವರ್ಣ, ಸಂಯೋಜನೆಯ ಹಂತಗಳಲ್ಲಿ ಮುನ್ನಡೆದ ಕ್ರಮಗಳನ್ನು ಅಧ್ಯಯನಕ್ಕೆ ಒಳಪಡಿಸುವುದೇ ಈ ಅಧ್ಯಯನದ ಮುಖ್ಯ ಉದ್ದೇಶ.

ಹಸ್ತ ಪ್ರತಿಯ ಅಧ್ಯಯನದ ಕಾರ್ಯ ಸಂಶೋಧನಾತ್ಮಕವಾಗಿ ವ್ಯವಸ್ಥಿತವೆಂದು ಭಾವಿಸಿಕೊಂಡು ಅಧ್ಯಯನ ಶೀಲರಾಗಿ ಕಾರ್ಯ ನಿರ್ವಹಿಸಿದ ಸಂಶೋಧಕರು ಮೂಲ ಕೃತಿಯ ಕಾವ್ಯದ ವಾಕ್ಯ, ವಿಭಜಿಸಿ ವಿಗ್ರಹ ಗುರುತಿಸಿ ಪದ ಸೀಳುವುದರಲ್ಲೇ ಪರಮಜ್ಞಾನಿಗಳಾದ ಅವರು ತಾವು ಅಧ್ಯಯನಕ್ಕೆ ಒಳಪಡಿಸಿದ ವಿಷಯದಲ್ಲಿದ್ದ ರೇಖಾ ಚಿತ್ರಗಳನ್ನು, ವರ್ಣ ಚಿತ್ರಗಳನ್ನು, ರೂಪಕ ಪೂರಕ ಚಿತ್ರಗಳನ್ನು ತಮ್ಮ ಸಾಹಿತ್ಯದ ಸಂಶೋಧನೆಗಾಗಲಿ, ನಾಡ ಸಂಸ್ಕೃತಿಗೆ ಸಂಬಂಧವೇ ಇಲ್ಲವೆನ್ನುವಂತೆ ಉಪೇಕ್ಷಿಸಿರುವುದು ಅವುಗಳತ್ತ ದೃಷ್ಟಿಯನ್ನೇ ಹಾಯಿಸದೇ ಕಟ್ಟಿನ ಕವುಳಿಗೆಯಲ್ಲಿ ಬಿಗಿದು ಸುತ್ತಿಟ್ಟು ಪುಸ್ತಕ ಪ್ರಕಟಿಸಿದ ಖ್ಯಾತ ವಿದ್ವಾಂಸರೂ ನಮ್ಮಲ್ಲಿ ಇದ್ದಾರೆ.[೭]

ಈ ರೀತಿಯಲ್ಲಿ ನಿರಾಕರಣೆಗೆ ಒಳಗಾದ ಹಸ್ತಪ್ರತಿ ಚಿತ್ರಕಲೆಯ ಸ್ವರೂಪವನ್ನು ಗುರುತಿಸಿ ಧ್ವನಿ ಇರದ ಕೇವಲ ಆಲೇಖ್ಯವಾಗಿ ಉಳಿದಿರುವ ಚಿತ್ರಕಲೆಗೆ ಧ್ವನಿ ನೀಡಿ ಜನಪರ ಗೊಳಿಸುವುದೇ ಈ ಅಧ್ಯಯನದ ಮತ್ತೊಂದು ವಿಶೇಷ ಅದರ ಹಿತಾಸಕ್ತಿಗಳನ್ನು ಈ ಕೆಳಗಿನಂತೆ ನಿವೇದಿಸಿಕೊಂಡಿರುವೆ.

ಸೌಂದರ್ಯದ ಸೇವೆಯೇ ; ನೀ ಮಾಡುವ ಮಹದುಪಕಾರ।
ಸುಂದರವಾಗಿರು : ಸೌಂದರ್ಯದಿ ಸಿದ್ಧಿಪುದಾ ಭಗವತ್ ಸಾಕ್ಷಾತ್ಕಾರ
ಎಂದು 'ಚಂದ್ರಮಂಚಕೆ ಬಾ ಚಕೋರಿ '

ಕವನ ಸಂಕಲನದಲ್ಲಿ ಮನಸಾರೆ ಹಾಡಿದ, ಹಾರೈಸಿದ, ಹರಿಸಿದ, ರಾಷ್ಟ್ರಕವಿ ಕುವೆಂಪು ಅವರಂತೆ ಕನ್ನಡ, ಸಂಸ್ಕೃತದ ಅನೇಕ ಕವಿ ಪುಂಗವರು ನಾಡಿನ ಸಾಂಸ್ಕೃತಿಕ ರೂಪವಾಗಿರುವ ಚಿತ್ರ, ಶಿಲ್ಪ, ಸಂಗೀತ ಕಲೆಗಳನ್ನು ಕುರಿತು ತಮ್ಮ ಕಾವ್ಯಗಳಲ್ಲಿ ಹೇಳಿಕೊಂಡಿದ್ದಾರೆ. ಚಿತ್ರಕಲೆಯ ಪರಿಪೂರ್ಣ ಅರಿವನ್ನೂ, ಅರಹುವನ್ನೂ, ಆಳವನ್ನೂ, ಬಲ್ಲಂತಹ ಪಂಪ, ಪೊನ್ನ,ಜನ್ನ, ನಾಗಚಂದ್ರ, ರನ್ನ, ಕುಮಾರವ್ಯಾಸರಿಂದ ಹಿಡಿದು ಆಧುನಿಕದ ಕುವೆಂಪು, ಬೇಂದ್ರೆ, ಜಿ.ಎಸ್. ಶಿವರುದ್ರಪ್ಪ,ಪು.ತಿ.ನ., ಮಧುರಚೆನ್ನರಂತಹ ಅನೇಕರ ಕಲೆಯನ್ನು ಅರಗಿಸಿಕೊಂಡ ರೀತಿ ಅವಿಸ್ಮರಣೀಯವಾಗಿವೆ. ಅದು ಈ ರೀತಿಯಾಗಿದೆ.

ಕ್ಷಣೇ ಕ್ಷಣೇಯನ್ನವತಾಮುಪೈತಿ
ತದೇವ ರೂಪಂ ರಮಣೀಯತಾಯಾಃ

ಎಂದು ಸಂಸ್ಕೃತ ಕಾವ್ಯ ಜಗತ್ತಿನ ಮಾಘ ಕವಿಯು ಅತ್ಯಂತ ಹಿತಮಿತವಾಗಿ

---

೭. ಶ್ರೀ ಚಂದರಕಾಂತ ಕುಸುನೂರು : ಸಾಹಿತ್ಯ ಮತ್ತು ಚಿತ್ರಕಲೆ, ಪುಟ - ೮.

ಸೌಂದರ್ಯ ಸೂತ್ರವನ್ನು ಹೇಳುತ್ತಾ ಕ್ಷಣ ಕ್ಷಣವು ಯಾವುದು ನವ ನವತ್ವವನ್ನು ಹೊಂದುವುದು ಅದೇ ಸೌಂದರ್ಯ, ಕಲೆ,ರಮಣೀಯತೆ ಎಂದು ಉಲ್ಲೇಖಿಸಿದ್ದಾನೆ.

ರಸಭಾವಂಗಳೊಳಾದ ಚೆಲ್ವು ನುಡಿವಂತಾದಳ್ಕಿರಿಂ ನೋಡವಂ
ತುಸಿವತಿರ್ದುದು ರೇಖೆ ಕೋಮಳತೆಯುಂ ತಾಳ್ದಿತ್ತು ವರ್ಣಕ್ರಮಂ
ರಸಿಯತ್ ಕಾಂತಿಯ ಸಾಂತು ನಿಂದುದೆಸೇವೀ ನಿಮ್ನೋನ್ನತಂಗಳ್
ವಿರಾಜಿಸಿ ಚೆಲ್ವಿಂಗೆಡೆಗೊಂಡವು ಇಂತು ಬರೆಯಲ್ ಬ್ರಹ್ಮಂಗೆ ಮೇಂ ಬರ್ಕುಮೇ

(ಆದಿ ಪುರಾಣ: 4ನೇ ಸಂಧಿ, 4 ನೇ ಪದ್ಯ)

ಪಂಪ ಚಿತ್ರವೊಂದನ್ನು ಪರಾಮರ್ಶಿಸುತ್ತ ಚಿತ್ರಕಲೆಯನ್ನು ಕುರಿತು. ತನ್ನದೊಂದು ಕಲಾತ್ಮಕ ಪರಿಭಾಷೆಯನ್ನೇ ಬರೆಯುವಂತೆ ವಿವರಿಸಿದ್ದಾನೆ. ಚಿತ್ರಕಲೆಯು ಉಳಿದೆಲ್ಲಾ ಕಲೆಗಳಂತೆ ಹೃದಯದ ರಸ,ಭಾವ, ಅಭಿವ್ಯಕ್ತಿಯ ಪರಿಣಾಮಗಳಿಂದ ಕಲಾಕೃತಿಯು ಸಾದೃಶ್ಯಗೊಳ್ಳಬೇಕಲ್ಲದೆ. ಭಾವ,ಲಾವಣ್ಯ, ಯೋಜನೆ, ಕೋಮಲವಾದ ರಭಸವಾದ ರೇಖೆಗಳು ಕಲೆಯ ಮೆರಗನ್ನು ಹೆಚ್ಚಿಸುವ ವಿವರವನ್ನು ಹೇಳಿ ತನ್ನ ಕಲಾ ಪರಿಕಲ್ಪನೆಯನ್ನು ಅನುಸರಿಸಿ ಬ್ರಹ್ಮನೂ ಇಂತಹ ಚಿತ್ರ ಬರೆಯಬಲ್ಲನೇ ಎಂದು ವಜ್ರಜಂಘ'ನಿಂದ ಈ ಮಾತನ್ನು ಹೇಳಿಸುತ್ತಾನೆ. ಪಂಪನಂತೆ ಪೊನ್ನ ಕವಿಯು ತನ್ನ ಶಾಂತಿ ಪುರಾಣದ ಒಂದನೇ ಅಧ್ಯಾಯದ 64ನೇ ಅಸ್ವಾಸದಲ್ಲಿ 'ಭೃಂಗ ಕೋಟಿಯೊಳಸೆದಿರ್ದ ನೀಲಗಿರಿ ಮಲ್ಲಿಗೆಯೊಳ್ ಸಮನಾಗೇ ಚೀರ ಘಟ್ಟಿಯೇ ಬರೆದಿಟ್ಟ ಬನಕ್ಕೆಣೆಯಾಯ್ತು' ಎನ್ನುವ ಮಾತಿನಲ್ಲಿ ಕಲಾವಿದ ಚೀರ ಘಟ್ಟಿಯನ್ನು ಗುರುತಿಸುತ್ತಾನೆ. ಈತನಂತೆಯೇ ಜನಪ್ರಿಯ ಕವಿ ಕುಮಾರವ್ಯಾಸನು **'ಕಾಂತಾವಳಿಯ ಕಂಗಳ ಬೆಳಕಿನಲಿ ತನಿ ಮುಳಗಿತೋಲಗ ಲಲಿತರಸ ಲಾವಣ್ಯ ಲಹರಿಯಲಿ'** ಎಂದು ಕರ್ಣಾಟ ಭಾರತ ಕಥಾ ಮಂಜರಿಯ ಸಭಾ ಪರ್ವದ ಮೊದಲ ಸಂಧಿಯ 20ನೇ ಚರಣದಲ್ಲಿ ಸಭೆಯು ಹೇಗಿತ್ತು ಎಂಬುದನ್ನು ಕಾಂತ, ಲಲಿತ, ಲಾವಣ್ಯ,ರಶ್ಮಿ, ದೀಪ್ತಿ ಮಯದಂತಹ ಕಲಾತ್ಮಕ ಶಬ್ದಗಳಿಂದ ಕವಿ ಕಲೆಯನ್ನು ದುಡಿಸಿಕೊಂಡಂತೆ ಕಲಾವಿದ 'ಮಯ'ನ ಜಾಣ್ಮೆಯನ್ನು ಸೊಗಸು ಮತ್ತು ಸೊಬಗನ್ನು ವಿವರಿಸಿರುವುದು ಆತನಿಗಿರುವ ಕಲಾತ್ಮಕ ಕಣ್ಣನ್ನು ತೋರಿಸುತ್ತದೆ.[೮]

ಶಿವಶರಣರ ವಚನಗಳಲ್ಲಿ ಸೌಂದರ್ಯ ಪ್ರಜ್ಞೆ :

ಬಿಂದು ಮಧ್ಯಗತೋ ನಾದಃ ನಾದ ಮಧ್ಯಗತಾ ಕಲಾ।
ಕಲಾ ಮಧ್ಯಗತಂ ಶೂನ್ಯಂ, ಶೂನ್ಯ ಮಧ್ಯಗತಃ ಶಿವಾ ॥
ಪರಾತ್ಪರಂ ಪರಂ ನಾಸ್ತಿ ಪರಮಿಚ್ಛಂತಿ ಕೂಡಲ ಚೆನ್ನ ಸಂಗಯ್ಯ.[೯]

ಹನ್ನೆರಡನೇ ಶತಮಾನದ ಶಿವ ಶರಣರು ಇಹ ಪರಗಳಿಗೆ ನ್ಯಾಯ ಒದಗಿಸಿದಂತೆ ಕಲೆಯನ್ನು ಕಲಾವಿದರನ್ನು ಗುರುತಿಸಿ ತಮ್ಮ ವಚನಗಳಲ್ಲಿ ನೇರವಾಗಿಯೋ, ಪೂರಕವಾಗಿಯೋ ಅಥವಾ ಶ್ಲೇಷಯಾಗಿಯೋ, ಚಿತ್ರಕಲೆಯನ್ನು ಪ್ರಸ್ತಾಪಿಸಿದ್ದಾರೆ. ಈ ಮೇಲಿನ

೮.ಕುಮಾರವ್ಯಾಸ : ಕರ್ಣಾಟ ಭಾರತ ಕಥಾಮಂಜರಿ, ವಿಶ್ವಕನ್ನಡ ಸಾಹಿತ್ಯ ಸಮ್ಮೇಳನ

೯. ಬಿ.ವಿ.ಮಲ್ಲಾಪೂರು ಸಂ.: ಶ್ರೀ ಚೆನ್ನಬಸವಣ್ಣನವರ ವಚನ ಸಂಪುಟ – ೩.

ವಚನದಲ್ಲಿ ಅವಿರಳ ಜ್ಞಾನಿ ಚೆನ್ನಬಸವಣ್ಣನವರು ಬಿಂದುವಿನ ಮಧ್ಯದಿಂದ ನಾದದ ಸಂಗೀತದ ಮಟ್ಟಕೇರಿ ಅದರ ಮುಖಾಂತರ ಶೂನ್ಯ ಸ್ಥಿತಿಯನ್ನು ತಲುಪುವುದನ್ನು ಕಲಾತ್ಮಕವಾಗಿ ವಿವರಿಸಿದ್ದಾರೆ. ಇವರಂತೆ ಶ್ರೀ ಬಸವಣ್ಣನವರು ತಮ್ಮ ವಚನದಲ್ಲಿ ಎನ್ನ ಕಾಲೇ ಕಂಭ ದೇಹವೇ ದೇಗುಲ ಶಿರವೇ ಹೊನ್ನ ಕಲಶ ಎನ್ನುವ ಮಾತಿನಲ್ಲೂ ನೀರಿಂಗೆ ನೈದಿಲೆಯೇ ಶೃಂಗಾರ, ಕೂಡಲ ಸಂಗನ ಶರಣರ ನೊಸಲಿಗೆ ವಿಭೂತಿಯೇ ಶೃಂಗಾರ ಎನ್ನುವ ಮಾತನ್ನು ಮತ್ತು ಭಿತ್ತಿಯ ಚಿತ್ರದೊಳಿಗರುವ ಕಬ್ಬು ಮೆಲಲ್ಲ ರುಚಿಯಲಿಲ್ಲ ಎನ್ನುವ ಹಲವು ಮಾತುಗಳನ್ನು ಮಾರ್ಮಿಕವಾಗಿ ಹೇಳಿದ್ದಾರೆ. ಇವರಂತೆ ಅಕ್ಕಮಹಾದೇವಿ, ಅಲ್ಲಮಪ್ರಭು, ಜೇಡರ ದಾಸಿಮಯ್ಯಗಳಂತಹ ಅನೇಕ ವಚನಕಾರರು ವಚನಗಳಲ್ಲಿ ಚಿತ್ರಕಲೆಯ ಪ್ರಸ್ತಾಪವಿರುವುದನ್ನು ಗಮನಿಸಬಹುದಾಗಿದೆ. ಇವರಂತೆ.. 'ವರ್ಣನದಿಂದ್ರಿಯ ನಂದನವನು ದಾಂಟುತೆ ದರ್ಶನ ಮುಕ್ತಿಯ ಸೇರಿ ವ್ಯಕ್ತಿಯ ಮೈ ಮರೆವುದು ಸೌಂದರ್ಯ ಸಮಾಧಿ ಯೊಳಾನಂದವ ಹೀರಿ ಎಂದು ಪಕ್ಷಿಕಾಶಿಯಲ್ಲಿ ಹೇಳುವ ರಾಷ್ಟ್ರಕವಿ ಪುಟ್ಟಪ್ಪನವರ ಮಾತುಗಳಂತೆಯೇ' ಪಾರಿಜಾತ ಹುಟ್ಟಿಸಿದವ'ನ ಎದೆಯ ಹದವು, ಮನದ ಹದನ ಏನು ಮಾಟ ಎಂಥ ಆಟ ಇದರ ಕೂಟ ತಿಳಿಯದು ಎಂದು ದ.ರಾ.ಬೇಂದ್ರೆಯವರು ತಮ್ಮ ನಾದಲೀಲೆಯಲ್ಲಿ ಹೇಳಿದಂತೆ ಪು.ತಿ. ನರಸಿಂಹಾಚಾರ್ಯರು ಮಲೆದೇಗುಲ ನೋಡುತ..... ಕೆರೆ ಕೆರೆಯ ಹರಡಿನೊಳು ಜಲಹಾಸವನು ಮೆರೆಸಿ ತಿರೆ ಬಣ್ಣಗೊಳಿಸುವೀ ಬಿಸಿಲ ನಲವು ಅಲೆ ಕೆದರಿ ತರು ಬೆದರಿ ನೀಲದಿಂ ದುಮ್ಮಿಕ್ಕಿ ಎಂದು ಹೇಳುವ ಮಾತಿನಲ್ಲೂ ಕಲೆಯ ಸೊಗಡನ್ನು ಕಾಣಬಲ್ಲೆವು.

ನೋಡು ಇದೋ ಇಲ್ಲರಳಿ ನಗುತಿದೆ
ಏಳು ಸುತ್ತಿನ ಮಲ್ಲಿಗೆ
ಇಷ್ಟು ಹಚ್ಚನೆ ಹಸುರು ಗಿಡದಿಂ
ದೆಂತು ಮೂಡಿತೋ ಬೆಳ್ಳಗೆ[೧೦]

ಎಂದು ಪ್ರಕೃತಿಯ ಚೆಲುವ- ಒಲವುಗಳಲ್ಲಿ ಕಲೆಯನ್ನು ಹುಡಕಿ ಹೇಳುವ ಕಲೆಯ ದಾರ್ಶನಿಕ ಜಿ.ಎಸ್. ಶಿವರುದ್ರಪ್ಪನವರ ಕಾವ್ಯಗಳಲ್ಲಿ, ಹಿರಿಯ ಅನುಭಾವಿ ಡಿ.ವಿ.ಜಿ.ಯವರ ಕಗ್ಗಗಳಲ್ಲಿ, ಚೆಂಬೆಳಕಿನ ಚನವೀರಕಣವಿಯವರ ಆಕಾಶ ಬುಟ್ಟಿಯಲ್ಲಿ, ಮಧುರ ಚೆನ್ನರ ಕವಿತೆಗಳಲ್ಲೂ ಭಾವ ಭರಿತ ಕಲೆಯ, ಚಿತ್ರಕಲೆಯ ಸೆಳಕನ್ನು ನಾವು ಸಮೃದ್ಧವಾಗಿ ಗುರುತಿಸಬಹುದು.

ಸುಂದರವಾಗಿರು : ಸೌಂದರ್ಯದಿ ಸಿದ್ಧಿಪ್ರದಾ ಭಗವತ್ ಸಾಕ್ಷತ್ಕಾರ[೧೧]

ಅನುಕರಣೆ ಮತ್ತು ಕಲ್ಪನೆಗಳು ಮಾನವನ ಮೆದುಳಿನೊಳಗಿರುವ ಎರಡು ಕ್ರಿಯಾತ್ಮಕ ಚಟುವಟಿಕೆಗಳು. ಪ್ರಕೃತಿಯಿಂದ ಅನುಕರಣೆ ಗಳನ್ನು ಕಲ್ಪನೆಯಿಂದ ಭಾವೈಕ್ಯತೆಯನ್ನು ಕಲಿತ ಮಾನವನು ಕ್ರಿಯಾ ಶೀಲವಾದ ಕನಸುಗಾರನಾದ. ಮನುಷ್ಯನ ಮನಸ್ಸು ಕೂಡಾ ಸದಾ ಕಾಲ ಬುದ್ದಿ

---

೧೦. ಡಾ|| ಜಿ.ಎಸ್. ಶಿವರುದಪ್ಪ : ಸೌಂದರ್ಯ ಸಮೀಕ್ಷೆ.
೧೧. ಕುವೆಂಪು : ಕೊಳಲು ಕವನ ಸಂಕಲನದಿಂದ.

ಯನ್ನು ಮತ್ತು ಭಾವವನ್ನು ತನ್ನೊಳಗೆ ಇಟ್ಟುಕೊಂಡೆ ಕಾರ್ಯನಿರ್ವಹಿಸುತ್ತಿರುತ್ತದೆ. ಬುದ್ಧಿವಾದ ಲೆಕ್ಕಾಚಾರವಿಟ್ಟುಕೊಂಡು ಪ್ರಶ್ನೆಗಳ ಮೇಲೆ ಪ್ರಶ್ನೆಗಳನ್ನು ಮಾಡುತ್ತ ಸಾಗಿದರೆ ಭಾವುಕ ಮನಸ್ಸು ತನಗೆ ತಿಳಿದ ಅಕ್ಷರದ ಮೇಲೆ ತಿಳಿಯಲಾರದ ಪರಿಧಿಯಸುತ್ತಲು ಚಲಿಸುತ್ತಲೆ ಇರುತ್ತದೆ. ಬುದ್ಧಿ ಮತ್ತು ಕಲ್ಪನೆಗಳ ಚಲನೆಯನ್ನೇ ಖ್ಯಾತ ಚಿಂತರಕರಾಗಿರುವ ಪ್ರಸಿದ್ಧ ಕಾದಂಬರಿಕಾರರಾದ ಡಾ. ಸಂತೆಶಿವೂರ ಲಿಂ. ಭೈರಪ್ಪನವರು 'ಬುದ್ಧಿಯ ರಚನಾತ್ಮಕ ಶಕ್ತಿ ಇಲ್ಲದೆ ಸತ್ಯವಿಲ್ಲ; ಕಲ್ಪನೆಯ ರಚನಾತ್ಮಕ ಶಕ್ತಿ ಇಲ್ಲದೆ ಸೌಂದರ್ಯವಿಲ್ಲ'[೧೨] ಎಂದಿದ್ದಾರೆ.

ಮನುಷ್ಯನೊಳಗೆ ಅಡಗಿರುವ ಈ ಕ್ರಿಯಾ ಶಕ್ತಿ ಸರ್ವ ಸಾಮಾನ್ಯವೇ ಆಗಿದ್ದು, ಆ ಶಕ್ತಿಯ ಪ್ರೇರಣೆಯು ಕವಿಯಲ್ಲೂ, ಕಲಾವಿದನಲ್ಲೂ ತನ್ನ ಕೆಲಸವನ್ನು ನಿರ್ವಹಿಸುತ್ತಲೇ ಇರುತ್ತದೆ. ಈ ರೀತಿಯ ಕ್ರಿಯಾತ್ಮಕ ಚಟುವಟಿಕೆ ಮನುಷ್ಯನೊಳಗೆ ಅಡಗಿರುವುದರಿಂದಲೇ, ಅವನು ಅನುಕರಣೆಯಲ್ಲೂ ಯಥಾವತ್ತತೆಯನ್ನು ಕಾಪಾಡಿಕೊಳ್ಳದೆ ರೂಪದ ಅನುಕರಣೆಯಲ್ಲೂ ಭೇದದ ಭಾವವು ಅಡಗಿಕೊಂಡಿರುತ್ತದೆ. ಇದೇ ಮಾತನ್ನು ಹಿರಿಯ ವಿದ್ವಾಂಸರಾಗಿರುವ ಡಾ|| ವಿನಾಯಕ ಕೃಷ್ಣ ಗೋಕಾಕರು ತಮ್ಮ ಸೌಂದರ್ಯ ಮೀಮಾಂಸೆಯ ಕೃತಿಯಲ್ಲಿ ಈ ರೀತಿ ಹೇಳಿಕೊಂಡಿದ್ದಾರೆ.

.... ಹೀಗೆ ಸಾಹಿತ್ಯ ಪ್ರಕಾರದಿಂದ ಪ್ರಾರಂಭ ಮಾಡಿಕೊಂಡ ಕವಿದರ್ಶನದವರೆಗೆ ಕಲಾ ಕೃತಿಯು 'ಧ್ವನಿ' ವ್ಯಾಪಾರದಲ್ಲಿಯೇ ನಿರತವಾಗಿರುವದು ನಮಗೆ ಗೊತ್ತಾಗುತ್ತದೆ. ಭಾಷೆಯಿಂದ ಪ್ರಾರಂಭಿಸಿ ಕವಿ ದರ್ಶನವನ್ನು ಕಂಡು ಸಹೃದಯನು ತನ್ನ ಯಾತ್ರೆಯನ್ನೆ ಮುಗಿಸಿದರೆ. ಕವಿಯು ತನ್ನ ದರ್ಶನದಿಂದ ಪ್ರಾರಂಭಿಸಿ ಭಾಷೆಯಲ್ಲಿ ಅಭಿವ್ಯಕ್ತಿಯನ್ನು ಪಡೆಯುವವರೆಗೆ ಸೃಜನ ಕಾರ್ಯದಲ್ಲಿ ನಿರತನಾಗಿರುತ್ತಾನೆ. ರಸ-ಭಾವಗಳು ದರ್ಶನವನ್ನು ಪ್ರತಿ ಧ್ವನಿ (ECO) ಸುತ್ತವೆ. ರಸ-ಭಾವಗಳು ವ್ಯೆಂಗ್ಯಾರ್ಥದ ಕರಂಡಕದಲ್ಲಿವೆ. ವ್ಯೆಂಗ್ಯಾರ್ಥವು ಶೈಲಿಯ ಪ್ರತಿಮಾ ಸೃಷ್ಠಿಯಲ್ಲಿ ಅಡಗಿಕೊಂಡಿದೆ. ಪ್ರತಿಮಾ ಸೃಷ್ಠಿಗೆ ವಾಚ್ಯಾರ್ಥದ-ಅದರಲ್ಲಿ ವ್ಯಕ್ತವಾಗುವ ತತ್ವದ ಕವಚವಿದೆ. ವಾಚ್ಯ-ವ್ಯಂಗ್ಯರ್ಥಗಳೆರಡನ್ನು ಭಾಷೆಯ ಹಾಗೂ ಛಂದಸ್ಸಿನ ತಾಳ ಲಯವು ಸ್ಪುಟವಾಗಿಸುತ್ತದೆ. ಈ ತಾಳ ಲಯವು ಕವಿಯು ಬಳಸಿದ ಪದ ವಾಕ್ಯಾಗಳಿಂದ ಉದ್ಬವಿಸುತ್ತದೆ. ಹೀಗೆ ಕವಿದರ್ಶನವನ್ನು ಅಭಿವ್ಯಕ್ತಿಗೊಳಿಸಲು ಕವಿ ಅಣಿಗೊಳಿಸಿದ ಬಿಂಬ-ಪ್ರತಿಬಿಂಬದ ವ್ಯಾಪಾರವೆಂದರೆನೇ ಒಂದು ಕಲಾಕೃತಿಯೆನ್ನಬಹುದು.[೧೩] ಭಾಷೆಯಿಂದ ರಸದವರೆಗೆ ಪ್ರತಿಯೊಂದು ಕಲಾಂಶವೂ ಕವಿದರ್ಶನದ 'ಧ್ವನಿ' ಎನ್ನುಬಹುದು.

ಮನುಷ್ಯನೋರ್ವನ ಗ್ರಹಿಕೆಯಲ್ಲಿ ಸಮಾನತೆ ಇದ್ದು ಆಯಾ ವ್ಯಕ್ತಿಯ ಗ್ರಾಹ್ಯ

---

೧೨. ಡಾ|| ಎಸ್.ಎಲ್. ಭೈರಪ್ಪ : ಸತ್ಯ ಮತ್ತು ಸೌಂದರ್ಯ, ಪುಟ-೩೮.

೧೩. ಡಾ|| ವಿ.ಕೃ ಗೋಕಾಕ : ಸೌಂದರ್ಯ ಮಿಮಾಂಸೆ , ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, ಪುಟ-೪

ಗುಣದ ಶಕ್ತಿಯನ್ನು ಅನುಕರಣ ಶೀಲತೆಯೊಂದಿಗೆ ಅಭಿವ್ಯಕ್ತಿಯನ್ನೂ ಹೇಗೆ ಹೊರಹಾಕಬಲ್ಲ ಎಂಬುದನ್ನು ಹಿರಿಯ ವಿದ್ವಾಂಸರು, ಚಿತ್ರ, ಸಾಹಿತ್ಯ, ನಾಟಕ, ಯಕ್ಷಗಾನಗಳಂತಹ ಹಲವು ಕ್ಷೇತ್ರಗಳಲ್ಲಿ ದುಡಿದಿರುವ ಮತ್ತು ವಿಶೇಷವಾಗಿ ಸಾಹಿತ್ಯಿಕ ನೆಲೆಯೊಂದಿಗೆ ಚಿತ್ರಕಲೆಯನ್ನು ಅಧ್ಯಯನ ಮಾಡಿರುವ ಡಾ. ಕೆ. ಶಿವರಾಮ ಕಾರಂತರ ಮಾತುಗಳನ್ನಿಲ್ಲಿ ಗಮನಿಸೋಣ.

ಕಲಾ ಸೃಷ್ಟಿಯ ಗಳಿಗೆ ಹೇಗೆ ಬಂದೊದಗುತ್ತದೆ ಎಂದು ಪರಿಶೀಲಿಸೋಣ. ಮಾನವರ ಮನಸ್ಸು ನೂರಾರು ಕೆಲಸ,ಯೋಚನೆಗಳಿಂದ ತುಂಬಿಕೊಂಡು ಇರುತ್ತದೆ. ಆ ಗೊಂದಲದಿಂದ ತಪ್ಪಿ ಆತ ಯಾವುದಾದರೊಂದು ಅನುಭವವನ್ನು ಕುರಿತು ಧ್ಯಾನಮಾಡುವುದಕ್ಕೆ ತಕ್ಕ ಆವರಣ ಬೇಕಾಗುತ್ತದೆ. ಮನಸ್ಸಿಗೆ ತಕ್ಕ ನೆಮ್ಮದಿ ಬೇಕಾಗುತ್ತದೆ. ನಿಸರ್ಗದ ಶೋಭೆಯನ್ನು ನೋಡುವುದಾಗಲಿ, ಗಾನದ ಇಂಪಿನಲ್ಲಿ ತಲ್ಲೀನನಾಗಿರುವುದಾಗಲಿ, ಇನ್ನೊಂದು ಕಲಾ ಸೃಷ್ಟಿಯನ್ನು ಕಂಡು ಆನಂದ ಮುಖಿಯಾಗಿರುವಾಗಲೋ ಅಥವಾ ಕಟುವಾದ ಯಾವುದೊಂದು ಅನುಭವದಿಂದಲೋ ನಮ್ಮ ಮನಸ್ಸು ಏಕಾಗ್ರಗೊಳ್ಳುವುದುಂಟು. ಆಗ ತನ್ನ ಅನುಭವದ ಚಿತ್ರ ಎಷ್ಟು ಹಿಂದೆ ನಡೆದ ಘಟನೆಯಾದರೂ, ಒಮ್ಮೆಗೇ ಕಂಗೊಳಿಸುತ್ತದೆ. ಅದರ ಹಿಂದು ಮುಂದುಗಳೆಲ್ಲ ಚಿತ್ರ ಪಂಕ್ತಿಯಂತೆ ಕಣ್ಣೆದುರು ಕುಣಿದಾಡುತ್ತವೆ. ಇದನ್ನೇ ಕಲಾವಿದನ 'ದರ್ಶನ' ಎನ್ನಬಹುದು. ಆತ ಆಗ ಉದ್ದೇಶ ಪೂರ್ವಕವಾಗಿಯೇ ಒಂದು ಕವನ ಬರೆಯುವುದಕ್ಕೋ, ನಾಟಕ, ಕಾದಂಬರಿಗಳ ಸೃಷ್ಟಿಗೋ, ಚಿತ್ರ ನಿರ್ಮಾಣಕ್ಕೋ, ಸಂಗೀತ ರಚನೆಗೋ ಕುಳಿತುಕೊಳ್ಳುತ್ತಾನೆ. ಮನಸ್ಸನ್ನು ಆವರಿಸಿದಾಗ ಈ ದರ್ಶನ ಬಲವಾಗಿದ್ದರೆ ಸ್ವಾಭಾವಿಕವಾಗಿ ಆತ ಭಾವಾವೇಶದಲ್ಲಿ ತಲ್ಲೀನನಾಗುತ್ತಾನೆ. ತನ್ನ ದರ್ಶನದ ಸ್ಥೂಲರೂಪ ಅವನ ಕಣ್ಮುಂದೆ ಕುಣಿದಾಡುತ್ತದೆ. ಕಾವ್ಯವಾದರೆ ಕವನ ಸಂದೇಶ, ಚಿತ್ರವಾದರೆ ಚಿತ್ರ ವಸ್ತು, ಅದರ ಮುಖ್ಯ ರೇಖೆಗಳು, ಗೀತವಾದರೆ ಭಾವನಾ ಲಹರಿ, ಕಾದಂಬರಿಯಾದರೆ ಮುಖ್ಯ ಪಾತ್ರಗಳು ಸನ್ನಿವೇಶಗಳು, ಶಿಲ್ಪವಾದರೆ ಬಹಿರಾಕಾರ, ಅದರ ಅಂತರಂಗ ಇವೆಲ್ಲ ಅವನಿಗೆ ಗೋಚರವಾಗುತ್ತದೆ.[೧೪]

ಇಂತಹುದೇ ಒಂದು ಮಾತನ್ನು ಖ್ಯಾತ ಸಾಹಿತಿಗಳು, ಸೌಂದರ್ಯವನ್ನೇ ಕುರಿತು ಬಹು ಆಳದವರೆಗೆ ಅಧ್ಯಯನ ಮಾಡಿರುವ ಡಾ.ಜಿ.ಎಸ್. ಶಿವರುದ್ರಪ್ಪನವರ ಮಾತುಗಳನ್ನು ಗಮನಿಸಬಹುದು. ಅನುಕರಣೆ ಹೇಗೋ, ಹಾಗೆ ಕಲ್ಪನೆ ಕೂಡ ಮನುಷ್ಯನಿಗೆ ಸಹಜವಾದದ್ದು. ಅನುಕರಣೆ ಕಂಡದ್ದನ್ನು ಕಂಡಹಾಗೆ ಇಳಿಸುವುದಕ್ಕೆ ಪ್ರಯತ್ನಿಸುತ್ತದೆ, ಕಲ್ಪನೆ ಕಂಡದ್ದರ ಒಳಗನ್ನು ತಾನು ಕಾಣಬೇಕೆನ್ನುವದು ಹೇಗಿರಬೇಕೆಂದು ಬಯಸುವುದೋ ಅದನ್ನು ರೂಪಿಸುವುದರಲ್ಲಿ ಪ್ರವೃತ್ತವಾಗುತ್ತದೆ. ಅಜ್ಜಿ ಕತೆಯಿಂದ ಹಿಡಿದು ಮಹಾ ಕಾವ್ಯದ ತನಕ, ಸೋಮಾರಿಯ ಹಗಲು ಗನಸಿನಿಂದ ಹಿಡಿದು ಮಹಾ ಕವಿಯ 'ದರ್ಶನ'ದ ತನಕ ಈ ಕಲ್ಪನೆಯ ಮಜಲುಗಳನ್ನು ಗುರುತಿಸಬಹುದು.[೧೫]

---

೧೪ ಡಾ. ಶಿವರಾಮ ಕಾರಂತ : ಕಲೆಯ ದರ್ಶನ , ಪುಟ -೯೭

೧೫ ಡಾ. ಜಿ.ಎಸ್. ಶಿವರುದಪ್ಪ: ಕಾವ್ಯಾರ್ಥ ಚಿಂತನ, ಪ್ರಿಯದರ್ಶಿ ಪ್ರಕಾಶನ, ಬೆಂಗಳೂರು. ಪುಟ-೫.

ಈ ಮೇಲಿನ ಮಹಾನಿಯರೆಲ್ಲರೂ ಕನ್ನಡ ಸಾಹಿತ್ಯದ ದಿಗ್ಗಜರಾಗಿದ್ದು ಕಲೆಯನ್ನು, ಸಾಹಿತ್ಯವನ್ನು ಬಲ್ಲಂತಹ ಮಹಾನೀಯರಾಗಿದ್ದಾರೆ. ಇವರಂತೆ ಇನ್ನೂ ಅನೇಕ ಮಹನೀಯರಿಗೆ ಸ್ಮರಿಸಬೇಕಾಗಿದೆ.

ಕಲೆ ಮತ್ತು ಸಾಹಿತ್ಯಗಳು ಮಾನವನ ಅಭಿವ್ಯಕ್ತಿಯ ವಿಷಯಗಳಾಗಿದ್ದು ಕವಿ ಕಾಣುವುದನ್ನೇ ಕಲಾವಿದ ಕಾಣಬಲ್ಲ, ತನ್ನ ಮಾಧ್ಯಮದಲ್ಲಿ ಅಭಿವ್ಯಕ್ತಿಯನ್ನೂ ಮಾಡಬಲ್ಲ ಉಭಯತರಿಗೆ ಒಂದೇ ವಿಷಯವನ್ನು ಕೊಟ್ಟರೂ ತಮ್ಮ ಮಾಧ್ಯಮಗಳಲ್ಲಿ ವ್ಯಕ್ತಮಾಡಬಲ್ಲರು ಎಂಬುದು ಅನುಭವದ ಮಾತಾಗಿದೆ. ಅಲೇಖ್ಯಾ ಸ್ವರೂಪದ ಚಿತ್ರಕಲೆಯನ್ನು ಕುರಿತು ನಾವು ಇಂದಿಗೂ ಹೆಚ್ಚಾಗಿ ಚರ್ಚಿಸಿಲ್ಲ. ಧ್ವನಿಯುಳ್ಳ ಸಾಹಿತ್ಯ ಕೃತಿಯನ್ನು ಕುರಿತು ನಾವು ಮಾತಾಡುವಂತೆ ಧ್ವನಿಯೇ ಇರದ, ಮೌನವಾಗಿದ್ದು ಕೊಂಡು ನೋಡುಗರೊಂದಿಗೆ ಸಂಸ್ಕಾರದ ಆಳದೊಂದಿಗೆ ಅಂತರಾಳದವರೆಗೂ ಇಳಿಯಬಲ್ಲ ಕಲಾಕೃತಿಯನ್ನು ಕುರಿತು ನಾವು ಚಿಂತನೆಯನ್ನು ಮಾಡಿಲ್ಲ.

ಬಾಮಹ ನಂತಹ ಸಂಸ್ಕೃತ ಸಾಹಿತ್ಯದ ಲಾಕ್ಷಣಿಕ ವಿದ್ವಾಂಸ, ಕಾವ್ಯಾಲಂಕಾರ ಶಾಸ್ತ್ರದ ಕರ್ತೃ ಆದ ಆತ ಸತ್ಕಾವ್ಯವನ್ನು ಓದುವುದರಿಂದ ಧರ್ಮ, ಅರ್ಥ, ಕಾಮ, ಮೋಕ್ಷ ಎಂಬ ನಾಲ್ಕು ಪುರುಷಾರ್ಥಗಳ ಸಾಧನೆಯಲ್ಲ ಕಶಲತೆಯೂ ಕಲೆಗಳಲ್ಲಿ ಜಾಣತನವೂ ಕೀತಿಯೂ ಸಂತೋಷವೂ ಉಂಟಾಗುತ್ತದೆ ಎಂಬ ಮಾತನ್ನು ಮುಮ್ಮಟನು ಸತ್ಕಾವ್ಯದಿಂದ ಕೀರ್ತಿ, ಪರಮಾನಂದ, ಕಾಂತಾ ಸಮ್ಮಿತ್ತು ಲಭಿಸುವುದೆಂದು ಹೇಳಿಕೊಂಡಿದ್ದಾನೆ. ಹೀಗೆ ಸತ್ ಭಾವದಿಂದ ಕಾವ್ಯದಿಂದ ಮಾನಸಿಕ ಉಲ್ಲಾಸದಿಂದ ಕಾವ್ಯಲೋಕದ ಹಸ್ತಪ್ರತಿ ಚಿತ್ರಕಲೆಯನ್ನು ಲಿಪಿಕಾರನ ಅಲಂಕಾರಿಕ ಅಂಶವಾಗಿ ಸೇರಿದ ಹಸ್ತಪ್ರತಿ ಚಿತ್ರಕಲೆಯು ವೇದಗಳನ್ನು ಬರೆಯಬಾರದು, ವೇದಗಳನ್ನು ಮತ್ತೊಬ್ಬರಿಗೆ ಮಾರಬಾರದು, ತಪ್ಪಾಗಿ ಓದಬಾರದು ದಂತಹ ಹಲವು ಕಟ್ಟು ಪಾಡುಗಳೊಂದಿಗೆ ವೇದಗಳು ಶೃತಿ, ಸ್ಮೃತಿಗಳಾಗಿಯೇ ಇರಬೇಕು ಲಿಖಿತ ಮಾಧ್ಯಮಕ್ಕೆ ಸೇರಬಾರದು ಎಂಬುದು ಅಂದಿನ ನಿಯಮವಾದ ಕಾರಣ ಭಾರತದ ಹಸ್ತಪ್ರತಿ ಚಿತ್ರಕಲೆಯು ಪ್ರಾರಂಭವಾಗುವುದು ಬೌದ್ಧ ಮತ್ತು ಜೈನರ ಧರ್ಮಗ್ರಂಥಗಳಿಂದ ಈ ಕುರಿತು ಡಾ|| ಕೆ. ಶಿವರಾಮಕಾರಂತರು ಈ ರೀತಿ ಹೇಳುತ್ತಾರೆ.

ಗ್ರಂಥ ಚಿತ್ರಗಳ ಬಳಗ ಈ ದೇಶದ ಇನ್ನೊಂದು ಪದ್ಧತಿ, ಲಿಪಿಗಾರಿಕೆ ಬೆಳೆದ ಬಳಿಕ ಇಲ್ಲಿನ ಸಾಹಿತ್ಯವನ್ನು ಬರೆಯತೊಡಗಿದ್ದು ಭೂರ್ಜಪತ್ರ ಮತ್ತು ತಾಡವಾಲೆಗಳ ಮೇಲೆ ಇಲ್ಲಿಗೆ ಎಂಟನೆಯ ಶತಮಾನದೊಳಗಾಗಿ ಚೀನಿಪ್ರವಾಸಿಗಳು ಬಂದರಾದರೂ ಅವರಿಂದ ನಾವು ರೇಶ್ಮೆಯ ಮೇಲೆ ಚಿತ್ರ ಬರೆಯುವುದನ್ನು ಕಲಿತ ನಿದರ್ಶನಗಳಿಲ್ಲ. ತಾಡವಾಲೆಯನ್ನು ಮೂರು -ನಾಲ್ಕು ಅಂಗುಲ ಅಗಲದ ಹಾಳೆಗಳಾಗಿ ಹತ್ತು -ಇಪ್ಪತ್ತು ಇಂಚು ಉದ್ದಕ್ಕೆ ಕತ್ತರಿಸಿ. ಅದರ ಮೇಲೆ ಉಕ್ಕಿನ ಕಂಠದಿಂದ ಗೀರಿ ಬರೆಯುವ ಪದ್ಧತಿಗೆ ಚಿತ್ರಶೇಖರಗೆ ಅನುಕೂಲವಲ್ಲ ಹಾಗೆ ಬರೆದ ಚಿತ್ರಗಳಿವೆಯಾದರೂ, ಅವು ಲಕ್ಷಣ ಬದ್ಧವಾಗಿಲ್ಲ. ಅದರ ಬದಲು ಹನ್ನೊಂದನೇ ಶತಮಾನದಲ್ಲಿ ಪಾಲ ಅರಸುಗಳ ಕಾಲದಲ್ಲಿ ಈ ತಾಡವಾಲೆಗಳ ಮೇಲೆ ಅರಗಿನ ಶಾಯಿಯಿಂದ ಬರೆಯುವ ಪದ್ಧತಿ ಕಾಣಿಸಿತು. ಇದು ಚಿತ್ರರೇಖೆಗಳ

ಬರೆತಕ್ಕೂ ಒದಗಿತ್ತು. ಕೇವಲ ಮೂರು ನಾಲ್ಕು ಇಂಚು ಅಗಲದ ಓಲೆಗಳ ಮೇಲೆ ಬರೆದ ಕೆಲವೇ ಗ್ರಂಥಗಳಲ್ಲಿ ಬಣ್ಣ ಸವರಿದ ರೇಖಾ ಚಿತ್ರಗಳನ್ನು ಕಾಣುತ್ತೇವೆ. ಇವು ತೀರಾ ಚಿಕಣಿ ಚಿತ್ರಗಳು. ಇಂಥ ಕೆಲವು ಗ್ರಂಥಗಳಲ್ಲಿ ಬುದ್ಧ, ಬೋಧಿಸತ್ವದ ಚಿತ್ರಗಳನ್ನು ಅತಿ ಸೂಕ್ಷ್ಮವಾಗಿ ಬರೆದ ನಿದರ್ಶನಗಳಿವೆ.[೧೭]

ಹಸ್ತಪ್ರತಿಗಳಲ್ಲಿ ಚಿತ್ರಗಳನ್ನು ರಚಿಸುವಾಗ ತೆಗೆದುಕೊಳ್ಳಬಹುದು ಲಕ್ಷಣಗಳ ಕುರಿತು ಹಿರಿಯ ಕಲಾ ಪೋಷಕರು, ವಿಮರ್ಶಕರು ಆಗಿದ್ದ ಪರ್ಸಿ ಬ್ರೌನರು, ಮಹಾಭಾರತದಲ್ಲಿಯ ಹಸ್ತಪ್ರತಿಗೆ ಪತಿವ್ರತಾ ಮಹಾತ್ಮೆ ವಿಷಯ ಆಯ್ದುಕೊಂಡು ಚಿತ್ರಿಸುವ ವಿಷಯಕುರಿತು ಹೀಗೆ ವಿವರಣೆಯನ್ನು ಕೊಡುತ್ತಾರೆ. '' ಶ್ರೀರಾಮ ಸೀತೆಯನ್ನು ಅಗ್ನಿಪರೀಕ್ಷೆಗೆ ಒಳಪಡಿಸಿದಾಗ ಕಿಚ್ಚು ಮತ್ತು ಅಗ್ನಿ ಜ್ವಾಲೆಗಳ ನಡುವೆ ಇರುವ ಸೀತೆಯ ಕಲಾಕೃತಿಯನ್ನು ಲಕ್ಷಿಸುತ್ತಾ ಈ ಕಲಾವಿದ ಬಹುಪ್ರಯಾಸ ಪಟ್ಟು ಬೆಳಕಿನ ಪ್ರಭಾವವನ್ನು ನಿರ್ವಹಿಸಿದ್ದಾನೆ. ಒಂದು ದಿನದ ಬೆಳಕು, ಎರಡನೆಯದು ಚಿತೆಯಬೆಳಕು ಎರಡು ಬೆಳಕನ್ನು ಸಮರ್ಥವಾಗಿ ಸಮ್ಮಿಶ್ರಗೊಳಿಸಿದ್ದಾನೆ. ಚಿತ್ರಕ್ಕೆ ಬೆಳ್ಳಿ'', ಬಂಗಾರದ ರೇಖಿನ ಕುಸುರಿನ ಕಾರ್ಯಮಾಡಿದರೂ ವರ್ಣಗಳ ಕ್ರಮ ಬದ್ಧತೆಯಿಂದ ಚಿತ್ರಕ್ಕೆ ಯಾವ ಊನೂ ಉಂಟಾಗುವುದಿಲ್ಲ.[೧೮] ಭಾವವಿಲ್ಲದ ಚಿತ್ರವು ನಿರ್ಭಾವದ ಶಿಲೆಯಂತೆಯೇ ಇರುತ್ತದೆ. ಭಾವ ಬಂಧನದಿಂದ ಶಿಲೆ ಶಿಲ್ಪವಾಗುವಂತೆ ಚಿತ್ರವು ಚಿತ್ರಕಲಾಕೃತಿಯಾಗುತ್ತದೆ. ನಯ ಮತ್ತು ನವಿರುಗಾರಿಕೆಯನ್ನು ಕೃತಿಯ ಒಳಗೊಳ್ಳುವುದರಿಂದ ಕೃತಿಪೂರ್ಣಗೊಳ್ಳಬಲ್ಲದು.

ಶಿವಮೊಗ್ಗದ ಮೈಸೂರ ಕಲಾವಿದರ ಕೃತಿಗಳಲ್ಲಿ , ಶಿಕಾರಿಪುರದ ತಿಪ್ಪಾಜಪ್ಪ ಅವರ ರೇಖಾ ಚಿತ್ರಗಳಲ್ಲಿ ಅನಾಮಿಕರಾಗಿಯೇ ಉಳಿದಿರುವ ಅನೇಕ ಕೃತಿಗಳನ್ನು ರಚಿಸಿರುವ ಅಸಂಖ್ಯಾತ ಕರ್ನಾಟಕದ ಕಲಾವಿದರ ಕೃತಿಗಳಲ್ಲೂ ಈ ಭಾವ ಬೆಡಗನ್ನು ಕಾಣುತ್ತೇವೆ. ಮಿಣಜಗಿಯವರ ಕಿರುರೂಪದ ರಾಗಮಾಲಾ ಚಿತ್ರಗಳಲ್ಲಿ , ವಿ.ಟಿ.ಕಾಳೆಯವರ ಅಭಿಸಾರಿಕೆಯ ಚಿತ್ರದಲ್ಲಿ ನವಿರಾದ ಭಾವ, ಬಳ್ಳಿಯಂತೆ ಬಳುಕುವ ಭಂಗಿಯನ್ನು ಕಾಣುವಂತೆ ತುಟಿಗಳಿಂದ ಮಂದಸ್ಮಿತವನ್ನು ಕಣ್ಣುಗಳಿಂದ ಕಾಂತಿಯ ಸೊಬಗನ್ನು ಗುರುತಿಸಬಹುದು. ಹೀಗೆ ಚಿತ್ರಕ್ಕೆ ಬಣ್ಣ ದೇಹವಾದರೆ ಭಾವವು ಪ್ರಾಣವಾಗಿರುತ್ತದೆ. ಆಗ ಪರಿಪೂರ್ಣವಾದ ಕಲಾಕೃತಿಯಾಗಿ ನಿಲ್ಲಬಲ್ಲದು.

ಹಸ್ತಪ್ರತಿಗಳಲ್ಲಿ ಚಿತ್ರಗಳ ಪ್ರಾಮುಖ್ಯತೆ :

ಬರವಣಿಗೆಯ ಮಾಧ್ಯಮವಾಗಿರುವ ಭೂರ್ಜ, ತಾಳೆ, ಕಾಗದ ಪ್ರತಿಗಳಲ್ಲಿ ಆಯಾ ಕಾಲದ ಬೆಳವಣಿಗೆಯನ್ನು ಅನುಸರಿಸಿ ಚಿತ್ರಗಳು ಪ್ರಮುಖ ಸ್ಥಾನಗಳನ್ನು ಹೊಂದಿರುವುದನ್ನು ಕಾಣುತ್ತೇವೆ. ಲಿಪಿಯ ಮಾಧ್ಯಮವೆಂದೆ ತಿಳಿದಿರುವ ಹಸ್ತಪ್ರತಿಗಳಲ್ಲಿ ಚಿತ್ರಗಳು ಪ್ರವೇಶಿಸಲು ಕಾರಣವೇನಿರಬಹುದು ? ಎಂಬ ಜಿಜ್ಞಾಸೆಗೆ ತೊಡಗಿದರೆ ದೃಶ್ಯಮಾಧ್ಯಮ ಲಿಪಿಮಾಧ್ಯಮಕ್ಕಿಂತಲೂ ಸುಲಭ ಎಂಬ ಸತ್ಯ ತಿಳಿಯುತ್ತದೆ. ಲಿಪಿಯು ಸಾಮಾನ್ಯವಾಗಿ ದೇಸಿಯ ಸಾಹಿತ್ಯದಲ್ಲಿರುತ್ತದೆ. ಆ ಲಿಪಿ

೧೭. ಡಾ. ಶಿವರಾಮ ಕಾರಂತ : ಕಲಾಪ್ರಪಂಚ, ಪುಟ -೪೦೬, ೪೦೭

೧೮. ಡಾ. ಶಿವರಾಮ ಕಾರಂತ : ಕಲಾಪ್ರಪಂಚ, ಪುಟ -೪೦೬, ೪೦೭

ತಿಳಿಯದ ಅನ್ಯಭಾಷಿಗನಾದ ವಿದ್ವಾಂಸನೂ ಇಲ್ಲಿ ಅನಕ್ಷರಸ್ಥನಂತಾಗುತ್ತಾನೆ. ಆದರೆ ಚಿತ್ರಮಾಧ್ಯಮದ ಭಾಷೆಯು ದೇಸಿಯ ಸಾಹಿತ್ಯದ ಭಾಷಾ ಗಡಿಯನ್ನು ದಾಟನಿಂತಿರುವುದಲ್ಲದೆ ಅದಕ್ಕೆ ಭಾಷಾತೀತವಾದ ಜಗದ ಮಾಧ್ಯಮವು ಕಾರಣ. ಚಿತ್ರವು ಸಾಮನ್ಯರನ್ನು ನೇರವಾಗಿ ತಲುಪುವ ಸರಳಮಾಧ್ಯಮವಲ್ಲದೆ ಈ ಭಾಷೆಯೆಂಬುದು ದೇಶೀಯ ಬದುಕಿಗೇ ಅವಲಂಬಿತವಾದ ಕಾರಣ ಭಾಷೆಯ ಜ್ಞಾನವು ದೇಸಿಗಡಿಗೆ ಕೊನೆಗೊಳ್ಳುತ್ತದೆ. ಕೆಳಗೆ ತೋರಿಸಿದ ಈ ಎಲ್ಲಾ ಕಾರಣಗಳು ಚಿತ್ರಗಳ ಅತ್ಯವಶ್ಯಕತೆಯನ್ನು ಗಟ್ಟಿಗೊಳಿಸಿವೆ. ಆ ಕಾರಣಗಳ ಇಂತಿವೆ.

1) ಸೌಂದರ್ಯದ ರಸಾನುಭೂತಿಗಾಗಿ : ಮಾನವನು ಹುಟ್ಟನಿಂದಲೂ ಅವನು ಸೌಂದರ್ಯದ ಉಪಾಸಕ. ಈ ಕಾರಣಕ್ಕಾಗಿಯೇ ಬಹುಶಃ ಆತ ಆದಿವಾಸದ ತನ್ನ ಗುಹಾಂತರ ಬದುಕಿನಲ್ಲೂ ತನ್ನ ಅಭಿವ್ಯಕ್ತಿಗೆ ಚಿತ್ರಕಲೆಯನ್ನು ಆಯ್ದುಕೊಂಡಿದ್ದಾನೆ. ಸೌಂದರ್ಯದ ಪ್ರಜ್ಞೆಯನ್ನು ಕುರಿತು ಮಹರ್ಷಿ ಅರವಿಂದರು ಕಲಾಯೋಗಿ ಕೆಂಟಸ್. ಆನಂದಕುಮಾರ ಸ್ವಾಮಿಯಂತಹ ಮಹನೀಯರು ಈ.ಬಿ. ಹ್ಯಾವೆಲ್ ಪರ್ಸಿ ಬ್ರೌನ್, ನಂದಲಾಲ್ ಬಸು, ಸಹೋದರಿ ನಿವೇದಿತಾರಂತಹ ಅನೇಕ ಮಹನೀಯರು ಅಂತರಾಷ್ಟ್ರೀಯ ಮಟ್ಟದಲ್ಲಿ, ಆದಿಕವಿ ಪಂಪ, ನಾಗಚಂದ್ರರಿಂದ ಹಿಡಿದು ರಾಷ್ಟ್ರಕವಿ ಕುವೆಂಪು ಮತ್ತು ಡಾ|| ಜಿ.ಎಸ್. ಶಿವರುದ್ರಪ್ಪನಂತಹ ಅನೇಕ ಮಹನೀಯರು ಹೊಸ ಸ್ವರೂಪವನ್ನು ನೀಡಿದ್ದಾರೆ. ಮತ್ತು ಈ ಕುರಿತು ಅಧ್ಯಯನ ಮಾಡಿದ ಮಹಾನುಭಾವರಾಗಿದ್ದಾರೆ.

ಭಾರತೀಯರು ಸೌಂದರ್ಯ ರಸಗಳ ಕುರಿತು ಅನೇಕರು ಚಿಂತಿಸಿರುವಂತೆ ಭರತ, ಭಟ್ಟಲೊಲ್ಲಟ, ಶ್ರೀ ಶಂಕುಕ, ಭಟ್ಟನಾಯಕ, ಅಭಿನವಗುಪ್ತ, ಆದಿಶಂಕರರಂತವರು ಸೌಂದರ್ಯ ಮತ್ತು ರಸಾನುಭವ ಕುರಿತು ಮಾತನಾಡಿದ್ದಾರೆ. ಈ ವಿಷಯ ಕುರಿತು ಡಾ.ಕೆ.ಬಿ. ರಾಮಕೃಷ್ಣರಾವ್ ಅವರು ಈ ರೀತಿ ವಿವರಿಸಿದ್ದಾರೆ. ''.....ಕಲೆಯು ಕಲ್ಪನಾತ್ಮಕವಾಗಿದ್ದಲ್ಲಿ, ಅದು ಕ್ರಿಯಾತ್ಮಕವಾಗಿದ್ದು ಚೈತನ್ಯದಿಂದ ತುಂಬಿರುತ್ತದೆ. ಇಂತಹ ಕಲೆಯಲ್ಲಿ ನಮ್ಮ ಅನುಭವಗಳನ್ನು ಸಮಮಟ್ಟದ ಕನ್ನಡಿಯು ಪ್ರತಿಬಿಂಬಿಸುವ ರೀತಿಯಲ್ಲಿ ಪ್ರತ್ಯಕ್ಷ ಲಕ್ಷಣಗಳಿಂದ ಪ್ರತಿಬಿಂಬಿಸುವುದಿಲ್ಲ. ಆದರೆ ಅಪ್ರತ್ಯಕ್ಷವಾಗಿ, ಸೂಚ್ಯವಾಗಿ, ಗುಹ್ಯವಾಗಿ, ಪ್ರತಿಬಿಂಬಿಸುತ್ತವೆ.[೧೯]

ಈ ಕುರಿತು ಹಿರಿಯ ಅನುಭಾವಿಗಳು, ಕಲೆಯ ಕಣ್ಣುಗಳುಳ್ಳ ಡಾ|| ಜಿ.ಎಸ್. ಶಿವರುದ್ರಪ್ಪನವರು ಈ ರೀತಿ ಹೇಳಿಕೊಂಡಿದ್ದಾರೆ....'' ಕವಿ ನಿರ್ಮಿತವಾದ ಕಲಾವಸ್ತುವಿನಿಂದ ಸಹೃದಯರು ಆನಂದವನ್ನು ಪಡೆಯಲು ಕಾರಣ ಅದು ಕವಿಯ ಆನಂದದ ಮೂರ್ತರೂಪ ಎನ್ನುವ ಅಂಶದಿಂದ. ನಾವು ಇಡೀ ಸೃಷ್ಟಿಯ ಸೌಂದರ್ಯವು ನೀಡುವ ಆನಂದದ ರಹಸ್ಯವನ್ನು ಊಹಿಸಬಹುದು. ನಮ್ಮ ಋಷಿಗಳು ಈ ಸೃಷ್ಟಿ ಆನಂದದಿಂದ ಮೂಡಿದೆ, ಆನಂದದಲ್ಲೇ ಬದುಕಿದೆ ಆನಂದದಲ್ಲೇ ಮುಳುಗುತ್ತಿದೆ ಎಂಬ ಅಮೋಘ ತತ್ವವನ್ನು ಹೇಳಿದರು.[೨೦] ಈ ಸೌಂದರ್ಯದ

---

೧೯. ಡಾ. ಕೆ.ಬಿ. ರಾಮಕೃಷ್ಣರಾವ್: ಸೌಂದರ್ಯ ಮತ್ತು ಕಲೆ, ಪುಟ-೧೩೮

೨೦. ಡಾ. ಜಿ.ಎಸ್. ಶಿವರುದ್ರಪ್ಪ: ಸೌಂದರ್ಯ ಸಮೀಕ್ಷೆ, ಪುಟ-೧೭

ಅನುಭೂತಿ ಬರಿ ಭಾಷಿಕ ರೂಪದಲ್ಲಿ ಉಳಿದರೆ ಸಾಕೆ ? ಅದರ ಭಾವ ಸ್ವರೂಪ ಮೂರ್ತರೂಪವಾಗದ ಹೊರತು ಲಿಪಿಯೊಳಗಿನ ಆನಂದ ಬರಿ ಭಾಷಾ ಸ್ವರೂಪದಲ್ಲಿಯೇ ಉಳಿದೀತು ಎಂದು ಎಚ್ಚರಿಸುವ ನಿಟ್ಟಿನಲ್ಲಿ ಉಪನಿಷತ್ಕಾರರು " ನಮ್ಮನ್ನು ಎಚ್ಚರಿಸಿದ್ದಾರೆ.

ಭಾವದ ಅಮೂರ್ತ ರೂಪವನ್ನು ಮೂರ್ತಗೊಳಿಸುವುದಕ್ಕಾಗಿ :

ಕಾವ್ಯಗಳಲ್ಲಿಯ ಸಂಚಾರಿಭಾವ, ಸಂಗೀತದಂತಹ ಅಮೂರ್ತ ಪ್ರಾಕಾರಗಳು ಮೂರ್ತಗೊಳ್ಳದೆ ಅಮೂರ್ತವಾಗಿಯೇ ಉಳಿದುಕೊಂಡು ಅಪಾರವಾದ ಅರ್ಥವನ್ನು ಹೊಂದಿರುತ್ತವೆ. ಇಂತಹ ಸೂಕ್ಷ್ಮ ಮತ್ತು ಜಟಿಲವಾದ ಸಾಹಿತ್ಯಕ್ಕೆ, ಭಾವ ಸ್ವರೂಪವೇ ಮೂಲವಾಗಿರುವಂತಹ ಕೃತಿಗಳಿಗೆ ಭಕ್ತಿ ಶಕ್ತಿ ಹಾಸ್ಯ, ವೈರಾಗ್ಯ, ಭೀಬತ್ಸತೆ, ಶಾಂತ, ಪ್ರಸನ್ನ, ದುಃಖದಂತಹ ಮಾನವನ ಸಂಚಾರಿ ಭಾವಗಳಿಗೆ ವ್ಯಾಪಕತೆಯನ್ನು ನೀಡುವುದಕ್ಕಾಗಿ ಕೃತಿಯನ್ನು ಸಾದೃಶ್ಯಗೊಳಿಸಲು ಹಸ್ತಪ್ರತಿ ಚಿತ್ರಕಲಾವಿದರು ಪ್ರಾಯೋಗಿಕವಾಗಿ ಅನೇಕ ಚಿತ್ರಗಳನ್ನು ಚಿತ್ರಿಸಿದ್ದಾರೆ.

ಸಾಹಿತ್ಯ, ಸಂಗೀತ ಮತ್ತು ಚಿತ್ರಗಳು ಒಂದಕ್ಕೊಂದು ಎಷ್ಟೊಂದು ಹತ್ತಿರದಲ್ಲಿವೆ ಎಂಬುದನ್ನು ಖ್ಯಾತ ವಿದೂಷಿಯಾಗಿರುವ ಸುಶೀಲಾ ಮಿಶ್ರಾ ಅವರ ಮಾತುಗಳಿಂದ ನಾವು ಗಮನಿಸಬಹುದಾಗಿದೆ.... ಮನಮೋಹಕವಾದ ರಾಗಮಾಲಾ ಚಿತ್ರಗಳು ಸಾಹಿತ್ಯ, ಸಂಗೀತ ಮತ್ತು ಚಿತ್ರಕಲೆಗಳ ಸಂಗಮವಾಗಿದ್ದು ಅವು ನಮ್ಮ ದೇಶದ ಆಂತರಿಕ ಜೀವನವನ್ನು ಅರಿಯಲು ಸಾಧನವಾಗಿರುವಂತೆ ಸಾಹಿತ್ಯ, ತತ್ತ್ವಜ್ಞಾನ ಕಲೆಗಳು ಜನಸಾಮಾನ್ಯ ಕನಸಾಗಿರುವಂತೆ ಜನಜೀವನದ ಪರಿಕಲ್ಪನೆಯೂ ಆಗಿದೆ.[೨೧] ಮುಂದುವರಿದು ವಿವರಿಸುವ ಅವರ ವಿವರಣೆ ಹೀಗಿದೆ : ರಾಗಮಾಲಾ ಚಿತ್ರಗಳ ಗುರಿ ಕೇವಲ ಕಾವ್ಯಕ್ಕೆ ಚಿತ್ರ' ಬರೆಯುವದಕಷ್ಟೇ ಅಲ್ಲ. ಚಿತ್ರದ ಮುಖಾಂತರ ಕವಿಯ ಮನೋಧರ್ಮ, ಭಾವುಕತೆ, ಋತುಮಾನ, ಸಂಗೀತದ ಪರಿಭಾಷೆಯಲ್ಲಿ ಸೂಕ್ತವಾದ ವರ್ಣವಿನ್ಯಾಸದೊಂದಿಗೆ ಹೇಳುವುದಾಗಿದೆ. ಸಾಮಾನ್ಯವಾಗಿ ರಾಗಮಾಲಾ ಚಿತ್ರಗಳ ಹಿನ್ನೆಲೆಗೆ ತಿಳಿಹಳದಿಯನ್ನು, ಆಕಾಶಕ್ಕೆ ತಿಳಿನೀಲಿಯನ್ನು ಬಳಸಿದರೆ ಬಿಳಿಯನ್ನು ಗೋಡೆ, ಅಂತಸ್ತುಗಳ ಕಟ್ಟಡಗಳಿಗೆ, ತಿಳಿಗೆಂಪನ್ನು ಕಂಭಗಳಿಗೆ, ಕಡುಗೆಂಪನ್ನು ಬಾಗಿಲು ಮತ್ತು ಮುಂಚಾಚು(Canopies)ಗಳಿಗೆ ತಿಳಿಹಸಿರನ್ನು ಮಾಳಿಗೆಗಳಿಗೆ , ಕೇಸರಿ, ಕೆಂಪು, ಧೂಮ(Mavre) ಮತ್ತು ಹಳದಿಯನ್ನು ಮೇಲುಡುಗೆ, ಧಾವಣಿ ಮತ್ತು ದೇಹದ ವರ್ಣಗಳಿಗೆ ಬಳಸುತ್ತಾರೆ. ಕಪ್ಪು ಮತ್ತು ಬಂಗಾರದ ವರ್ಣಗಳನ್ನು ಕಿಟಿಕಿಯ ಚೌಕಟ್ಟುಗಳಿಗೆ, ತಿರುಗಣೆಗಳಿಗೆ ಬಳಸಿದರೆ, ಬೂದಿಕಪ್ಪನ್ನು ನದಿಗಳಿಗಾಗಿ ಬಳಸುವಂತೆ ನಾಯಕ, ನಾಯಕಿಯರಿಗಾಗಿ ವಿಶೇಷ ಅದ್ಯತೆಯನ್ನು ಒದಗಿಸಲಾಗಿರುತ್ತದೆ.[೨೨]

ಈ ರೀತಿಯಲ್ಲದೆ ಅನೇಕ ಹಾವ, ಭಾವ, ಭಂಗಿಗಳಿಂದ ಸಾಂಕೇತಿಕತೆಗಳಿಂದ ಭಾವದ ಅಂತಃಸ್ವರೂಪವನ್ನು ಸಾದೃಶ್ಯಗೊಳಿಸಲಾಗುವುದು ಅನೇಕ ಮಂತ್ರಪುರುಷರ ಆಕಾರಗಳನ್ನು

---

೨೧. Susheela Misra: Indian Paintings through the ages, Page-35
೨೨. Susheela Misra: Indian Paintings through the ages, Page-35

ಆಕೃತಿಗೊಳಿಸಿದ ಕೀರ್ತಿ ಚಿತ್ರಕಲೆಗೆ ಇದೆ. ಈ ರೀತಿಯಲ್ಲಿ ಚಿತ್ರಕಲೆಯು ಅಮೂರ್ತವಾದ ಭಾವವನ್ನು ಮೂರ್ತಗೊಳಿಸಬಲ್ಲದು.

ಕಳಚಿದ ಇತಿಹಾಸವನ್ನು, ಇತಿಹಾಸಪುರಷರನ್ನು ಕಟ್ಟಿಕೊಡುವ ಕಾರ್ಯ :

ಕಳೆದ ಇತಿಹಾಸ ಬರಲಿರುವ ಭವಿಷ್ಯತ್ತಿಗೆ ಒಂದು ಮಾರ್ಗದರ್ಶಿಯಾಗಿರುತ್ತದೆ. ಇತಿಹಾಸ ಬಲ್ಲವನು ವರ್ತಮಾನವನ್ನು ರೂಪಿಸಬಲ್ಲ ಎಂಬುದು ಪರಿಚಿತ ನಾಣ್ನುಡಿಯಾಗಿರುತ್ತದೆ. ಇತಿಹಾಸವನ್ನು ಕಾಯ್ದಿಡುವ, ಕಟ್ಟುವ ಕಾರ್ಯವನ್ನು ಚಿತ್ರಕಲೆ ಮಾಡುತ್ತಾ ಬಂದಿದೆ. ಇತಿಹಾಸವು ಕಳೆದುಕೊಂಡ ಅನೇಕ ಮಹಾನುಭಾವರ ಚಿತ್ರಗಳನ್ನು ನಾವು ಹಸ್ತಪ್ರತಿಗಳಲ್ಲೇ ಗುರುತಿಸಬಲ್ಲೆವು ಸಿದ್ಧನಂಜೇಶನ ರಾಘವಾಂಕ ಚರಿತೆಯ ಕಾಗದದ ಪ್ರತಿಯಲ್ಲಿ(ನಂ. 1174) ನಾವು ಅನೇಕ ಶಿವಶರಣರ ಭಾವ ಚಿತ್ರಗಳನ್ನು ಕಾಣಬಲ್ಲೆವು[೨೩] ಅದೇ ರೀತಿ ಮದಕರಿ ನಾಯಕರು ಹೇಗಿದ್ದರು ಎಂಬುದನ್ನು(ಕೆ.ಬಿ. 482) ರ ಕಾಗದದ ಪ್ರತಿ[೨೪] ಯಿಂದ ಆತನ ನಿಲುವು, ಭಾವ, ಭಂಗಿ, ರೂಪ, ಆಕೃತಿಗಳಿಂದ ರೂಪಿಸಬಹುದು. ತಲೆಮಾರಿನಿಂದ ತಲೆಮಾರುಗಳವರೆಗೆ ಸಾಗುವ ಸಾಹಿತ್ಯ ಕೃತಿಯಂತೆ ಚಿತ್ರಕಲೆಯೂ ಮುಂದುವರೆಯುತ್ತದೆ. ಇದೇ ರೀತಿ ನಮ್ಮ ಮಹಾಕಾವ್ಯಗಳಿಂದ ರಾಮ, ಕೃಷ್ಣರ ಕಲ್ಪಿತ ಆಕಾರಗಳಿಗೆ ರೂಪಕೊಡಬಹುದು. ಮೈಸೂರು ಕನ್ನಡ ಅಧ್ಯಯನ ಸಂಸ್ಥೆಯಲ್ಲಿರುವ (1260) ಚಿತ್ರರಾಮಾಯಣ ಗ್ರಂಥದೊಳಗಣ ಚಿತ್ರಗಳು ರಾಮ, ಸೀತ, ಲಕ್ಷ್ಮಣ, ಸುಗ್ರೀವ, ಆಂಜನೇಯರ ಬಗೆಗೆ ಪುಷ್ಪಕ ವಿಮಾನದ ಬಗೆಗೆ, ಇರುವ ಖಚಿತ ಪರಿಕಲ್ಪನೆಯನ್ನು ಸಾದೃಶ್ಯಗೊಳಿಸಬಲ್ಲವು. ಈ ಗ್ರಂಥಕ್ಕೆ ದಿ. 1-4-1916 ರಂದು ಪ್ರಸ್ತಾವನೆಯನ್ನು ಬರೆದಿರುವ ಶ್ರೀ ರಾಮಚಂದ್ರ ಮಧ್ವಮಹಿಷಿ ಅವರು ಗ್ರಂಥಕುರಿತು ಈ ರೀತಿ ವಿವರಿಸುತ್ತಾರೆ. .....'' ವಾಲ್ಮಿಕಿ ಮುನಿಗಳು ಈ ರೀತಿಯಾಗಿ ತಮ್ಮ ಅಸಾಧಾರಣವಾದ ವೈಖರಿವಾಣಿಯಿಂದ ಚಿತ್ರಿಸಿದ ಮಹಾ ಕಾವ್ಯವನ್ನೇ ನಮ್ಮ ಔಂದ ಸಂಸ್ಥಾನದ ಪಂತ ಪ್ರತಿನಿಧಿಗಳಾದ ಶ್ರೀಮಂತ ಬಾಳಾ ಸಾಹೇಬರವರು ಅಷ್ಟೇ ಮನೋಹರವಾಗಿ ಒಂದು ರೀತಿಯಿಂದ ಅದಕ್ಕೂ ಹೆಚ್ಚು ಮನೋಹರವಾಗಿ -ವಾಲ್ಮೀಕಿ ಮುನಿಗಳ ಶಬ್ದ ಚಿತ್ರಕ್ಕೆ ಮೂರ್ತ ಸ್ವರೂಪವನ್ನು ಕೊಟ್ಟು, ಆಸ್ತಿಕ ಹಿಂದೂ ಸಮಾಜಕ್ಕೆ ಅಪೂರ್ವವಾದ ಉಪಕಾರವನ್ನು ಮಾಡಿರುವರೆಂದು ಹೇಳಲಿಕ್ಕೆ ನಮಗೆ ಅತ್ಯಾನಂದವೆನಿಸುವುದು. ಚಿತ್ರದಲ್ಲಿ ಚಿತ್ರಿಸಿದ ಸಂಗತಿಗಳನ್ನು ನೋಡುವಂತಹ ಇಲ್ಲವೆ ಶಬ್ದಗಳಿಂದ ವರ್ಣಿಸಲ್ಪಟ್ಟ ಸಂಗತಿಗಳನ್ನು ಓದುವಂಥ ಪ್ರೇಕ್ಷಕರು ಹಾಗೂ ಪಾಠಕರು ಆಯಾ ವಿಷಯಗಳಲ್ಲಿ ತಲ್ಲೀನರಾಗುವಂತೆ ಮಾಡುವುದೇ ಚಿತ್ರಕಾರರ ಹಾಗೂ ಕವಿಗಳ ಮುಖ್ಯ ಉದ್ದೇಶವು. ವಾಲ್ಮಿಕಿ ಮುನಿಗಳು ತಮ್ಮ ರಾಮಾಯಣದ ರಹಸ್ಯವು ಹಾಗೂ ಸ್ವಾರಸ್ಯವು ಸರ್ವೋತ್ಕೃಷ್ಟವಾಗಿ ಶ್ರವಣೇಂದ್ರಿಯಕ್ಕೆ ಗೋಚರವಾಗುವಂತೆ ಶಬ್ದಗಳಿಂದ ಚಿತ್ರಿಸಿರುವರು. ಆ ರಾಮಾಯಣದ ವಿಷಯಗಳನ್ನೇ ಅಪ್ರತಿಮ ಚಿತ್ರಕಾರರಾದ ಶ್ರೀಮಂತ ಬಾಳಾಸಾಹೇಬರವರು ನಮ್ಮ ಮನೇಂದ್ರಿಯಕ್ಕೆ ಗೋಚರವಾಗುವಂತೆ

---

೨೩. ಕನ್ನಡ ಅಧ್ಯಯನ ಸಂಸ್ಥೆ : ಹಸ್ತಪ್ರತಿ ಭಂಡಾರ, ಧಾರವಾಡ

೨೪. ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ : ಮಾನಸಗಂಗೋತ್ರಿ, ಮೈಸೂರ ವಿ.ವಿ. ಮೈಸೂರ.

ಚಿತ್ರಿಸಿರುವರು. ಇವೆರಡು ಪ್ರಕಾರಗಳು ಬಿಂಬ -ಪ್ರತಿ ಬಿಂಬದಂತೆ ಇರುವವು ಪಂತ ಪ್ರತಿನಿಧಿಗಳವರ ಚಿತ್ರಕಲಾಕೌಶಲ್ಯತೆಯ ವಿಷಯವಾಗಿ ಮಾರ್ಮಿಕ ರೀತಿಯಲ್ಲಿ ಬರೆಯಬೇಕಾದರೆ ಚಿತ್ರಕಲೆಯಲ್ಲಿ ಪಾರಂಗತನಾದ ಮನುಷ್ಯನೇಬೇಕು.[೨೫]

ಈ ರೀತಿಯಾಗಿ ಚಿತ್ರಕಲೆಯ ಕರ್ವುರ್ ಕ್ರಿಯೆಯಿಂದ ಗತಿಸಿಹೋದ ಮಹಾನುಭಾವರನ್ನು, ಗತಿಸಿದ ಇತಿಹಾಸವನ್ನು, ಐತಿಹಾಸಿಕವಾಗಿ ಕಳಚಿದ ಕೊಂಡಿಯನ್ನು ಕಟ್ಟಿಕೊಡಬಹುದು ಇಂತಹ ಕಾರ್ಯವನ್ನು ನಮ್ಮ ಅಸಂಖ್ಯಾತ ಹಸ್ತಪ್ರತಿಗಳು ಮಾಡಿಕೊಟ್ಟಿವೆ. ಧವಲ, ಜಯಧವಲ, ಮಹಾಧವಲಗಳು ಜೈನ ಧರ್ಮದ ಬದುಕನ್ನು, ಪುರುಷೋತ್ತಮರನ್ನು ಸಾದೃಶ್ಯಗೊಳಿಸಿದಂತೆ ನಂಜುಂಡ ಕವಿಯ ವೃಷಭೇಂದ್ರ ವಿಲಾಸ ಮತ್ತು ರಾಮಾಯಣ ಮಹಾಭಾರತ ಚರಿತೆಗಳು ಹನ್ನೆರಡನೇ ಶತಮಾನದ ಶಿವಶರಣರ ಬದುಕನ್ನು ಉದ್ಧರಣೆ, ಕರುಣ ಹಸುಗೆ, ಸಕೀಲಗಳಿಂದ ವೀರಶೈವ ಧರ್ಮದ' ಸೂಕ್ಷ್ಮ ವಿವರಗಳನ್ನು ಸಚಿತ್ರಗೊಳಿಸಬಲ್ಲದು. ಜಾತಕ ಕಥೆಗಳಿಂದ, ಕಲ್ಪಾಜಿ ಕಥೆಗಳಿಂದಲೂ ಬುದ್ಧ -ಮಹಾವೀರರ ಸ್ವರೂಪಗಳನ್ನು ಕಾಣಬಹುದು.

ಪ್ರತಿಯೊಂದು ಆ ದಿವ್ಯಾನಂದದ ಮೂರ್ತರೂಪವಾಗದ ಪಕ್ಷದಲ್ಲಿ ಆ ವಸ್ತುಗಳು ನಮಗೆ ಆನಂದವನ್ನು ಕೊಡಲು ಹೇಗೆ ಸಾಧ್ಯ ? ಆದರೆ ಆ ಆನಂದ ಅಕಾಮಹತವಾದ ಚೇತನಗಳಿಗೆ ಅನುಭವಕ್ಕೆ ಬರುವಂತೆ ಕಾಮಹತವಾದ ಚೇತನಗಳಿಗೆ ಲಭಿಸದು[೨೬] ತೈತ್ತಿರೀಯ ಉಪನಿಷತ್ತನ್ನು ಉಲ್ಲೇಖಿಸುವ ಶಿವರುದ್ರಪ್ಪನವರು ಕವಿಯಾದವನಿಗೆ ಕಲಾ ಪ್ರಜ್ಞೆಬೇಕು ಎಂಬುದನ್ನು ಸೂಚಿಸಿದ್ದಾರೆ.

ಈ ಕಾರಣಗಳಿಂದ ಮತ್ತು ಕವಿಯಾದವನಿಗೆ ಕಾವ್ಯ ಶಕ್ತಿ ಇರುವಂತೆ ಕಲಾ ಪ್ರಜ್ಞೆಯೂ ಇರುವ ಕಾರಣಕ್ಕಾಗಿಯೇ ನಮ್ಮ ಪ್ರಾಚೀನ ಹಸ್ತ ಪ್ರತಿಗಳಲ್ಲಿ ಚಿತ್ರಗಳು ರೂಪತಾಳಿದವು. ರಾಮನ ಸಾತ್ವಿಕ ಸ್ವರೂಪ ರಾವಣನ ದಾನವ ಸ್ವರೂಪಗಳನ್ನು ಸ್ಪಷ್ಟೀಕರಿಸುವ ಕಾರಣಕ್ಕಾಗಿಯೇ ಪರೋಪಕರಣಗಳಾಗಿ, ಖಚಿತ ಸ್ವರೂಪ ಅರಿಯುವುದಕ್ಕಾಗಿ, ಕವಿಕಂಡ ಪರಿಕಲ್ಪನೆಯ ಮಾನಸಿಕ ಹಂತವನ್ನು ತಲುಪುವ ಕಾರಣಗಳಿಗಾಗಿ ಹಸ್ತಪ್ರತಿಗಳಲ್ಲಿ ಚಿತ್ರಗಳು ಮೂಡಿಬಂದವು ಮತ್ತು ಇತಿಹಾಸ ಅರಿಯಲು ಸಹಾಯಕವಾಗಿವೆ.



ಸಾಹಿತ್ಯ ಕೃತಿಯ ಸಾದೃಶ್ಯಕೆಯಾಗಿ :

ಕವಿಯ ಕಲ್ಪನೆ ಅಥವಾ ಆತನ ಕಾವ್ಯದ ಪರಿಕಲ್ಪನೆಯಿಂದ ಕಲಾಕೃತಿಯೊಂದನ್ನು ಸಾದೃಶ್ಯಗೊಳಿಸಬಲ್ಲದು. ಇಂದು ನಾವು ಹನ್ನೆರಡನೇ ಶತಮಾನದ ಶಿವಶರಣರನ್ನು ಕಂಡಿಲ್ಲ ಆದರೂ ಸತ್ಯಕ್ಕೆ ಸಮೀಪವಾಗಿ ಪರಿಕಲ್ಪಿಸಿಕೊಳ್ಳಲು ಸಾಧ್ಯವಾಗುತ್ತದೆ. ಉದಾಹರಣೆಗೆ ಉಲ್ಲೇಖಿಸುವುದಾದರೆ ಸಿದ್ಧನಂಜೇಶನ ರಾಘವಾಂಕ ಚರಿತೆಯ ಕಾಗದದ ಪ್ರತಿ (ನಂ. 1174)[೨೭] ಯನ್ನು ಉಲ್ಲೇಖಿಸಬಹುದು. ಈ

೨೫. ಶ್ರೀರಾಮಚಂದ್ರ ಮಧ್ವ ಮಹಿಪಿ : ಸಚಿತ್ರ ರಾಮಾಯಣ ಪ್ರಸ್ತಾವನೆ ಪುಟದಿಂದ.
೨೬. ತೈತ್ತರೀಯ ಉಪನಿಷತ್ತು : ಎಂಟನೆಯ ಅನುವಾದ (ಸೌಂದರ್ಯ ಸಮೀಕ್ಷೆ)
೨೭. ಕನ್ನಡ ಅಧ್ಯಯನ ಪೀಠ, ಧಾರವಾಡ


ಪ್ರತಿಯಲ್ಲಿ ಪ್ರಭುದೇವ, ಸಿದ್ಧರಾಮ, ರಾಘವಾಂಕ, ಹರಿಹರಗಳಂತಹ ಮೂವತ್ತೈದು ಜನರ ಚಿತ್ರಗಳಿದ್ದು ಶಿವಶರಣರ ಕಲಾತ್ಮಕ ವಿವರಣೆ ದೊರೆಯುವುದು. ಈ ಕೃತಿಯ ಮತ್ತೊಂದು ಹಸ್ತಪ್ರತಿಯು ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಯ ಮಾನಸ ಗಂಗೋತ್ರಿಯ ಹಸ್ತಪ್ರತಿ ಭಂಡಾರದಲ್ಲಿದೆ (ಗ್ರಂಥ ಸಂಖ್ಯೆ 1404 ಕೆ. 150) ಆದರೆ ಅದರಲ್ಲಿ ಯಾವುದೇ ಚಿತ್ರಗಳಿರುವುದಿಲ್ಲ ಎಂಬುದನ್ನು ಗಮನಿಸಬೇಕು ಅದೇ ಮೈಸೂರು ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಸಂಸ್ಥೆಯ ಹಸ್ತಪ್ರತಿ ಭಂಡಾರ ಕಾಗದದ ಪ್ರತಿ (ಕೆ.ಎ.572 ಮತ್ತು ಕೆ.ಎ. 571) ಗಳಲ್ಲಿ ಅಶ್ವಶಾಸ್ತ್ರದ ಲಕ್ಷಣಗಳೊಂದಿಗೆ ವೈದ್ಯೋಪಚಾರವಿದೆ. ವೈದ್ಯಕೀಯ ಉಪಚಾರದ ವಿವರಣೆಗೆ ಚಿತ್ರಗಳನ್ನು ಬಳಸಿಕೊಂಡ ಕಾರಣ ಸಾಮಾನ್ಯ ಓದುಗನಿಗೂ ಆ ಮಾಹಿತಿ ಸಿಗಬಲ್ಲದು.

ಈ ರೀತಿಯಾಗಿ ಸಾಹಿತ್ಯದ ವೈದ್ಯಸಾಹಿತ್ಯ, ಖಗೋಲ ಶಾಸ್ತ್ರವಿವರಗಳನ್ನು ಚಿತ್ರಗಳ ವಿವರದೊಂದಿಗೆ ವಿವರಿಸುವುದರೊಂದಿಗೆ ಸಾಮಾನ್ಯರನ್ನು ತಲುಪಬಲ್ಲದು. ವಿಶ್ವವ್ಯಾಪಕತೆಯನ್ನು ಹೊಂದಿರುವ ಖಗೋಳ ಶಾಸ್ತ್ರದಲ್ಲಿಯ ಮೇಷ, ವೃಷಭ, ಮಿಥುನ, ಕರ್ಕಗಳಂತಹ ಹನ್ನೆರಡು ರಾಶಿಗಳನ್ನು ಅನೇಕ ಆಕಾಶ ಕಾಯಗಳನ್ನು ಸಪ್ತರ್ಷಿ ಮಂಡಲಗಳನ್ನು ಚಿತ್ರಗಳ ಹಿನ್ನೆಲೆಯಲ್ಲಿ ಹಿಡಿದಿಟ್ಟುಕೊಂಡ ಕಾರಣ ಅವುಗಳ ಬಗೆಗೆ ಸ್ಪಷ್ಟವಾದ ಅಭಿಪ್ರಾಯಪಡಬಹುದಾಗಿದೆ ಅಲ್ಲದೆ ಜೈನ ಸಾಹಿತ್ಯದ ಅರವತ್ಮೂರು ಶಲಾಕ ಪುರಷರ ಮತ್ತು ಇತರ ತೀರ್ಥಂಕರರನ್ನು ಚಿತ್ರಗಳ ಹಿನ್ನೆಲೆಯನ್ನಾಗಿ ಗುರುತಿಸಿರುವುದನ್ನು ಕಾಣುತ್ತೇವೆ. ಈ ಕುರಿತು ಜೈನ ಸಾಹಿತ್ಯದ ಹಿರಿಯ ವಿಧ್ವಾಂಸರಾಗಿರುವ ಡಾ|| ಹಂಪನಾಗರಾಜಯ್ಯನವರು ಈ ರೀತಿ ವಿವರಣೆ ನೀಡುತ್ತಾರೆ.[೨೮]

ಕ್ರ.ಸಂ.	ತೀರ್ಥಂಕರು	ಹೆಸರುಗಳು	ಚಿತ್ರಗಳು
01.	ಆದಿನಾಥ (ವೃಷಭದೇವ)	ಎತ್ತು	
02.	ಅಜಿತ	ಆನೆ	
03.	ಶಂಭವ	ಕುದುರೆ	
04.	ಅಭಿನಂದನ	ಕಪಿ	
05.	ಸುಮತಿ	ಚಕ್ರವಾಕ	
06.	ಪದ್ಮಪ್ರಭ	ಕಮಲ	

೨೮. ಡಾ. ಹಂಪಾ ನಾಗರಾಜಯ್ಯ : ಜೈನಕಥಾ ಕೋಶ, ಅನುಬಂಧ -9

07. ಸುಪಾರ್ಶ್ವ ನಂಧ್ಯಾವರ್ತ ಪರ್ವತ 


08. ಚಂದ್ರಪ್ರಭ ಅರ್ಧ ಚಂದ್ರ 

09. ಪುಷ್ಪದಂತ ಮೊಸಳೆ 

10. ಶೀತಲ ಸ್ವಸ್ತಿಕ 

11. ಶ್ರೇಯಾಂಸ ಘೇಂಡಾಮೃಗ 

12. ವಾಸುಪೂಜ್ಯ ಕೋಣ 

13. ವಿಮಲನಾಥ ಹಂದಿ 

14. ಅನಂತ ಮುಳ್ಳುಹಂದಿ 

15. ಧರ್ಮನಾಥ ವಜ್ರ 


16. ಶಾಂತಿನಾಥ ಜಿಂಕೆ 

17. ಕುಂಥುನಾಥ ಹೋತ 

18. ಅರನಾಥ ಮೀನು 

19. ಮಲ್ಲಿನಾಥ ಕಲಶ 

20. ಮುನಿಸುವ್ರತ ಆಮೆ 

21. ನಮಿನಾಥ ನೀಲಕಮಲ 

22. ನೇಮಿನಾಥ ಶಂಖ 

23. ಪಾರ್ಶ್ವನಾಥ ಸರ್ಪ 

24. ಮಹಾವೀರ ಸಿಂಹ 

ಧಾರ್ಮಿಕ ಸಾಂಕೇತಿಕತೆ, ತಾತ್ವಿಕ ಅರ್ಥಗಳ ಹಿನ್ನೆಲೆಯೊಂದಿಗೆ ಜೈನ ಸಾಹಿತ್ಯ ಜನ ಸಾಮಾನ್ಯರಿಗೆ ತಲುಪುವ ಉದ್ದೇಶಗಳಿಂದ ಜನಸಾಮಾನ್ಯರು ಅರ್ಥಮಾಡಿಕೊಳ್ಳಬಹುದಾದ ಅನುಕೂಲತೆಗಳನ್ನುಗಮನಿಸಿ, ಆಯಾ ಯತಿಗಳನ್ನುಆಯಾ ಪ್ರಾಣಿ, ವಸ್ತುಗಳ ಸಾಂಕೇತಿಕ ಚಿತ್ರಗಳೊಂದಿಗೆ ಹೋಲಿಕೆ ನೀಡಲಾಗಿದೆ ಮತ್ತು ಆಯಾ ತೀರ್ಥಂಕರನ್ನು ಆಯಾ ಪ್ರಾಣಿಗಳ ಚಿತ್ರಗಳ ಮೂಲಕವೆ ಗುರುತಿಸುತ್ತಾರೆ.

ಕಾಂತಿಯುತ ಕಲಾತ್ಮಕ ಹಸ್ತಪ್ರತಿಗಳು :

ಭಾರತೀಯ ಧಾರ್ಮಿಕತೆಯ ಸಂಪ್ರದಾಯಗಳ (Heterodox) ವಿರುದ್ಧ **ಸ್ಥಾಪನೆಗೊಂಡಿರುವ ಬೌದ್ಧ ಮತ್ತು ಜೈನ ಧರ್ಮಗಳ ಪ್ರಾಚೀನ ಕಾಂತಿಯುತ ಕಲಾತ್ಮಕ ಹಸ್ತಪ್ರತಿಗಳು** ಪವಿತ್ರವಾದಂತಹ ಎರಡು ಪ್ರಾಚೀನ ಸಚರ ಹಸ್ತಪ್ರತಿಯ ಗ್ರಂಥಗಳಾಗಿವೆ. ಕೆಲವು ಸಲ ಹಸ್ತಪ್ರತಿಯೊಳಗಿನ ಪುಷ್ಪಿಕೆ (Colophons) ಗಳು ಸಂಗ್ರಹಕಾರನ ಬಗ್ಗೆ ವಿವರಿಸಿದಂತೆ. ಪುಣ್ಯಗಳಿಕೆಗಾಗಿ ಸೇವೆಗೈದಿರುವಂತಹ ಭಕ್ತನೋರ್ವನ ವಿವರವನ್ನು ಅವು ಒದಗಿಸುತ್ತವೆ. ಹಸ್ತಪ್ರತಿಗಳನ್ನು ಬೌದ್ಧ ಅಥವಾ ಜೈನ ಧಾರ್ಮಿಕ ಅನುಯಾಯಿಗಳು ಹಸ್ತಪ್ರತಿಗಳನ್ನು ತಾವೇ ಚೈತ್ಯಾಲಯಗಳಲ್ಲಿ (Monastery)ದ್ದುಕೊಂಡು ಬರೆಯುತ್ತಿದ್ದರಲ್ಲದೆ ಅವುಗಳಿಗೆ ಬೇಕಾದಂತಹ ಚಿತ್ರಗಳನ್ನು ಅವರೇ ಬರೆಯುತ್ತಿದ್ದರು. ಈ ಗ್ರಂಥಗಳನ್ನು ತಮ್ಮ ಚೈತ್ಯಾಲಯ ಅಥವಾ ದೇವಾಲಯಗಳ ವಾಚನಾಲಯಗಳಲ್ಲಿ ಸಂಗ್ರಹಿಸುತ್ತಿದ್ದರು. ಮುಂದಿನ ಪುನರ್ಜನ್ಮದಲ್ಲಿ ಸತ್ಕರ್ಮದ ಫಲಕ್ಕಾಗಿ ಹಸ್ತಪ್ರತಿಗಳನ್ನು ಕಲಾತ್ಮಕವಾಗಿ ಕಾಂತಿಗೊಳಿಸಬೇಕಲ್ಲದೆ ಅವುಗಳ ಸುರಕ್ಷತೆ ಮತ್ತು ಸುಂದರಗೊಳಿಸುವುದಕ್ಕಾಗಿಯೂ ಹಸ್ತಪ್ರತಿಗಳನ್ನು ಅಲಂಕಾರಗೊಳಿಸಬೇಕು ಈ ಗ್ರಂಥಗಳ ಪವಿತ್ರತೆಗಾಗಿ, ದೈವಿಕ ಮೂಲಕ್ಕಾಗಿ ಇವುಗಳನ್ನು ಸುಂದರಗೊಳಿಸುತ್ತಿದ್ದರು. ಈ ರೀತಿ ಸುಂದರಗೊಳಿಸುವುದು ಅನ್ಯ ದೇಶದ ವಿಚಾರವಾದರೂ ಅದು ಈ ಬೌದ್ಧ , ಜೈನರ ಗ್ರಂಥ ಸಂರಕ್ಷಣೆಯ ಮತ್ತು ಸಂಗ್ರಹ ರೂಪದಲ್ಲಿ ಭಾರತದಲ್ಲಿ ನೆಲೆಯೂರಿತು. ಹಿಂದೂಗಳು ಈ ರೀತಿಯಂತೆ ಕಲಾತ್ಮಕಗೊಳಿಸುವ, ಕಾಂತಿಯುತವಾಗಿ ಸಚಿತ್ರ ಹಸ್ತಪ್ರತಿಗಳನ್ನು ತಯಾರಿಸುವ ಕ್ರಮವನ್ನು ಬೌದ್ಧ, ಜೈನರಂತೆ ಇವರಲ್ಲಿ ಕಾಣಲಾರೆವು.

ಡಾ|| ಎಂ. ಎಂ. ಕಲಬುರ್ಗಿಯವರು ಹಸ್ತಪ್ರತಿಗಳಲ್ಲಿ ಚಿತ್ರಕಲೆಯ ಕುರಿತು ಅಧ್ಯಯನ ಪೂರ್ಣವಾದ ತಮ್ಮ ವಿಚಾರವನ್ನು ಹೀಗೆ ಹೇಳುತ್ತಾರೆ..... '' ಗ್ರಂಥ ರಚನೆ ಸಂದರ್ಭದಲ್ಲಿ ಚಿತ್ರಕಲಾವಿದನ ಪಾತ್ರ ಮಿಗಿಲಾದದು. ತಾಳೆ ಪ್ರತಿಗೆ ಸಂಬಂಧಪಟ್ಟಂತೆ ಹೇಳುವುದಾದರೆ ಅವುಗಳ ಗರಿಗಳ ಮೇಲೆ ಈ ಹಿಂದೆ ಹೇಳಿದಂತೆ ಸುಳುಹು, ರೇಖಾ ಚಿತ್ರ, ತ್ರಿಜ್ಯ ಚಿತ್ರ ಬಿಡಿಸುತ್ತಿದ್ದರೆ ಹೊರತು ಬಣ್ಣ ಬಣ್ಣದ ಚಿತ್ರಗಳನ್ನು ಸಾಮಾನ್ಯವಾಗಿ ಬಿಡಿಸುತ್ತಿರಲಿಲ್ಲ. ಇದಕ್ಕೆ ಅಪವಾದವೆಂಬಂತೆ ತಾಳೆಪ್ರತಿಗಳಾದ ಧವಲ, ಜಯಧವಲ, ಮಹಾಧವಲದಂತಹ ಕೆಲವೇ ಪ್ರತಿಗಳಲ್ಲಿ ಬಣ್ಣದ ಚಿತ್ರಗಳನ್ನು

ಬಿಡಿಸಿದ್ದಾರೆ. ಕಾಗದ ಪ್ರತಿಯು ಪುಟಗಳ ಮೇಲೆ ಮತ್ತು ತಾಳೆ ಕಾಗದ ಪ್ರತಿಗಳ ಫಲಕಗಳ ಮೇಲೆ ಬಣ್ಣದ ಚಿತ್ರ ಬಿಡಿಸುವುದು ಸಾಮಾನ್ಯವಾಗಿದ್ದಿತು. ಒಟ್ಟಿನಲ್ಲಿ ಹಸ್ತಪ್ರತಿ ಜಗತ್ತಿನ ಈ ಚಿತ್ರಗಳನ್ನು ತ್ರಿಜ್ಯಚಿತ್ರ, ಸುಳುಹು ಚಿತ್ರ, ಸಾಂದರ್ಭಿಕ ಚಿತ್ರಗಳೆಂದು ವರ್ಗೀಕರಿಸಬಹುದು.'' [೨೯]

ಕರ್ನಾಟಕದ ಹಸ್ತಪ್ರತಿಗಳಲ್ಲಿಯ ಚಿತ್ರವಿನ್ಯಾಸ, ಕಲಾತ್ಮಕ ಅಂಶಗಳ ಬಗ್ಗೆ ಉಲ್ಲೇಖಿಸಿರುವ ವಿ.ಟಿ.ಎಸ್. ರಾವ್ ಅವರು, ಕನ್ನಡ ನಾಡನ್ನು ಆಳಿದ ಅನೇಕ ಅರಸರಂತೆ ಅವರ ಮನೋಭಾವಗಳಂತೆ ಭಿನ್ನ ಭಿನ್ನ ಶೈಲಿಗಳ ಚಿತ್ರ ಶಿಲ್ಪಗಳಂತೆ ಹಸ್ತಪ್ರತಿಯ ಚಿತ್ರಕಲೆಯೂ ವಿನೂತನ ವಾದುದಾಗಿದೆ. ಅಜಂತೆಯೊಳಗೆ ಚಾಲುಕ್ಯರ ಕಲಾಶೈಲಿಯೊಂದಿಗೆ ಪ್ರಾರಂಭವಾಗುವ ಕರ್ನಾಟಕದ ಚಿತ್ರ ಕಲೆಯಂತೆಯೇ ಕರ್ನಾಟಕದ ಹಸ್ತಪ್ರತಿ ಚಿತ್ರಕಲೆಯೂ ಅರಸರಿಂದ ಅರಸರವರೆಗೂ ಭಿನ್ನವಾಗುತ್ತಾ ಸಾಗುವುದನ್ನು ನಾವು ಕಾಣುತ್ತೇವೆ. ಬದಾಮಿ, ಕಾರ್ಲೆ, ಕಾನ್ಹೇರಿ, ಅಜಂತೆಯ, ಎಲ್ಲೋರಗಳ ಗುಹಾಂತರಗಳಲ್ಲಿ ಲೇಪಾಕ್ಷಿ , ವಿಜಯನಗರದ ಭಿತ್ತಿಗಳಲ್ಲಿ ಚಾಲಕ್ಯ ಹೊಯ್ಸಳರ ದೇವಾಲಯ ಶಿಲ್ಪಗಳಲ್ಲಿ ಕಾಣುವ ಕಲಾತ್ಮಕ ಅಂಶಗಳನ್ನು ಗಮನಿಸಿದರೆ ಕರ್ನಾಟಕದ ಹಸ್ತಪ್ರತಿಗಳಿಗೆ ಚಿತ್ರಗಾರಿಕೆ ಇಲ್ಲ ಎನ್ನಲಾದೀತೆ ? ಭಿತ್ತಿ ಶಿಲ್ಪ, ಕಾಷ್ಠ ಮೃತ್ಯುಕೆಗಳಲ್ಲಿ ಸಿದ್ಧ ಹಸ್ತರಾಗಿದ್ದ ಕಲಾವಿದರು ಬಹಳಷ್ಟು ಹಸ್ತಪ್ರತಿಗಳ ಚಿತ್ರಗಳನ್ನು ರಚಿಸಿರಲೇಬೇಕು. ಸಂಶೋಧಕರಿಗೆ ಕಲೆಯ ಕಣ್ಣು ಕಲಾತ್ಮಕ ಭಾಷೆಯಲ್ಲಿಯ ಅಭಿವ್ಯಕ್ತಿ ಕಲಾ ಅಭ್ಯಾಸದ ಕೊರತೆಗಳ ಕಾರಣಗಳಿಂದಲೇ ಕರ್ನಾಟಕದ ಹಸ್ತಪ್ರತಿ ಇನ್ನೂ ಬೆಳಕಿಗೆ ಬಂದಿಲ್ಲ ಎಂದೆನಿಸುವುದು ಎಂಬ ಹಿನ್ನೆಲೆಯಲ್ಲಿ ತಾಳೆಗರಿ ಗ್ರಂಥಗಳಲ್ಲಿ ಚಿತ್ರವಿನ್ಯಾಸಗಳ ಹೆಚ್ಚಿನ ವಿವರವನ್ನು ಶ್ರೀ ವಿ.ಟಿ.ಎಸ್.ರಾವ್ ಅವರು ಈ ರೀತಿಯಾಗಿ ವಿವರಿಸುತ್ತಾರೆ.

.....ಅತ್ಯಂತ ಪರಾಕಷ್ಠೆಯ ಕಲಾ ಪ್ರಕಾರಗಳಾದ ದೇವಾಲಯಗಳು ಹೊಯ್ಸಳ ಕಲೆಯ ಅನರ್ಘ್ಯ ರತ್ನಗಳು. ಈಗಲೂ ಹೊಯ್ಸಳರ ಶಿಲ್ಪಕಲಾ ವೈಭವವು ಅವರ ಅದ್ವಿತೀಯ ಸೌಂದರ್ಯದ ದೇವಾಲಯಗಳಿಂದಲೇ ಅಚ್ಚಳಿಯದೆ ಉಳಿದಿದೆ. ಇಂತಹ ಕಲಾವಿದರು, ಕಲಾಪ್ರೇಮಿಗಳು ಬಾಳಿ ಬದುಕಿದ ಕಾಲದಲ್ಲಿ ಚಿತ್ರಕಲೆ ಅನೂರ್ಜಿತವಾಗಿದ್ದಿತೆ ! ಶಿಲ್ಪಕಲೆಯ ಅಂಗವಾಗಿ ಪ್ರಸಿದ್ಧಿಗೆ ಬಾರದಾಗಿ ಇದ್ದಿತೇ ಅಥವಾ ಮೂರ್ತಿ ಶಿಲ್ಪಕ್ಕೆ ಸಿಕ್ಕಿದ ಪ್ರಾಧಾನ್ಯ ವರ್ಣಚಿತ್ರಕಲೆಗೆ ಸಿಕ್ಕದೆ ಮೂಲೆಗುಂಪಾಯಿತೆ ? ಚಿತ್ರಕಲಾ ಪ್ರಪಂಚಕ್ಕೆ ಹೊಯ್ಸಳರ ಕೊಡುಗೆ ಏನೂ ಇಲ್ಲವೇ ? ಈ ಮುಂತಾದ ಸಂದೇಹಗಳು ನಮಗೆ ಬರಬಹುದು. [೩೦]

ಹಸ್ತಪ್ರತಿ ಚಿತ್ರಕಲೆಗೆ ವ್ಯಾಪಕವಾದ ಹಿನ್ನೆಲೆಯಲ್ಲಿ ಚಿಂತನೆಗೈದಿರುವ ಶ್ರೀ ರಾವ್ ಅವರು ಇದೇ ನಿಟ್ಟಿನಲ್ಲಿ ಮುಂದುವರೆದು ಈ ರೀತಿಯಾಗಿ ಹೇಳುತ್ತಾರೆ. .... ಹೊಯ್ಸಳರ ಭವ್ಯ ಶಿಲ್ಪ ಕಲಾವೈಭವದಂತೆಯೇ ಅವರ ವರ್ಣ ಚಿತ್ರಕಲೆಯು ಅಚ್ಚಳಿಯದೆ ಸುಸ್ಥಿತಿಯಲ್ಲಿ ಕನ್ನಡ ನಾಡಿನ ಜಿನಮಂದಿರ, ಮಠಗಳಲ್ಲಿ ಈಗಲೂ ಉಳಿದು ಶೋಭಿಸುತ್ತಿರುವ ಸಂಗತಿಯನ್ನು ಅನೇಕರು ಅಷ್ಟಾಗಿ

---

೨೯. ಡಾ. ಎಂ.ಎಂ.ಕಲಬುರ್ಗಿ : ಕನ್ನಡ ಹಸ್ತಪ್ರತಿ ಶಾಸ್ತ್ರ, ಪುಟ -೩೫

೩೦. ಡಾ. ಸಿದ್ಧಯ್ಯ ಪುರಾನಿಕ ಸಂ.: ಮಣಿಹ , ಶ್ರೀ ವಿ.ಟಿ.ಎಸ್.ರಾವ್ , ಪುಟ -೪೧೨-೪೧೩

ಗಮನಿಸಿಲ್ಲ. ಹೊಯ್ಸಳರ ಕಾಲದ ಉತ್ತಮ ಚಿತ್ರಕಲಾವಿದರು ಜೈನ ಪುರಾಣೋಕ್ತ ಕಥಾಚಿತ್ರಗಳನ್ನು ಶ್ರವಣ ಬೆಳಗೊಳದ ಜೈನ ಮಠದ ಗೋಡೆಗಳ ಮಾಡಗಳ ಮೇಲೆ ಭಿತ್ತಿ ಚಿತ್ರಗಳಾಗಿ ಚಿತ್ರಿಸಿ ಹೊಯ್ಸಳರ ಚಿತ್ರಕಲಾ ವೈಭವವನ್ನು ಪ್ರದರ್ಶಿಸಿರುವರು. ಇದೆಲ್ಲಕ್ಕಿಂತಲೂ ಹೆಚ್ಚಿನ ಅವರ ಕಾಣಿಕೆ ಅವರೆಗಿನ ಚಿತ್ರೀಕರಣದ ಮಾಧ್ಯಮಗಳಾದ ಭಿತ್ತಿ ಫಲಕ, ದುಕುಳ ಪಟ(ಬಟ್ಟೆ) ಇವನ್ನು ಬಿಟ್ಟು ಪ್ರಪ್ರಥಮವಾಗಿ ಆಗಿನ ಲೇಖನ ಸಾಮಗ್ರಿಯಾದ ತಾಳಪತ್ರಗಳ ಮೇಲೆ ಚಿತ್ರಗಳನ್ನು ಬಿಡಿಸಿ, ಪ್ರಾಚೀನ ಹಸ್ತಪ್ರತಿಗಳಿಗೆ ಅಪೂರ್ವ ಶೋಭೆಯನ್ನು ತಂದು, ಈಗಲೂ ಸುಸ್ಥಿತಿಯಲ್ಲಿ ಅವು ಕಲೋಪಾಸಕರ ಮನತಣಿಯುವಂತೆ ಬಿಟ್ಟು ಹೋಗಿರುವುದು. ಆಗಿನ ಲೇಖನ ಸಾಮಗ್ರಿಗಳು, ಉತ್ತರ ಭಾರತದಲ್ಲಿ ಭೂರ್ಜ ವೃಕ್ಷದ ಒಳ ತೊಗಟೆಯಾದರೆ, ದಕ್ಷಿಣದಲ್ಲಿ ಹತ್ತಿಯ ಬಟ್ಟೆಯಿಂದ ವಿಶೇಷ ರೀತಿಯಲ್ಲಿ ತಯಾರಿಸಿದ ''ಕಡತ'' ಹಾಗೂ ರೇಷ್ಮೆ ವಸ್ತ್ರಗಳನ್ನು ಬಿಟ್ಟರೆ ತಾಳ ಪತ್ರಗಳೇ ಪ್ರಾಧಾನ್ಯವನ್ನು ಪಡೆದಿದ್ದವು. ಇವುಗಳ ಬಳಕೆ ಕ್ರಿ.ಶ. 7ನೇ ಶತಮಾನದ ಹ್ಯುಯನ್‌ತ್ಸಾಂಗ್‌ನ ಕಾಲಕ್ಕೂ ಹಿಂದಿನಿಂದ ಇದ್ದುದಾಗಿ ತಿಳಿದು ಬರುತ್ತದೆ. ಭಾರತದಲ್ಲಿ ಅದರಲ್ಲೂ ದಕ್ಷಿಣ ಭಾರತದಲ್ಲಿ ತಾಳ ಪತ್ರಗಳು '' ಕೋರೀಫ್ ಅಂಬ್ರಾಕ್ಯುಲಿ ಫೆರ'' ಅಥವಾ ''ಬೋಸಾಸಸ್ ಪ್ಲಾಬೆಲಿ ಪೆರ '' ಎಂಬ ಮರದ ಎಲೆಗಳಿಂದ ಮಾಡಲ್ಪಟ್ಟುದ್ದಾಗಿರುತ್ತದೆ.[೩೧] ....ಈ ರೀತಿಯ ಗ್ರಂಥಗಳಲ್ಲಿ ಲಿಪಿಕಾರನು ಅಂಚುಗಳನ್ನು ರೇಖಾವಿನ್ಯಾಸದಿಂದ ಅಲಂಕರಿಸುತ್ತಿದ್ದನಾದರೂ, ಅದನ್ನೇ ಮಾಧ್ಯಮವಾಗಿ ಉಪಯೋಗಿಸಿ ಧರ್ಮಗ್ರಂಥಕ್ಕೆ ವಸ್ತುವಿಷಯವನ್ನು ನಿರೂಪಿಸಲು ಚಿತ್ರಮಾಧ್ಯಮವನ್ನು ಉಪಯೋಗಿಸಿ ಗ್ರಂಥದ ಮಹತ್ವವನ್ನು ಮೊತ್ತ ಮೊದಲಿಗೆ ಹೆಚ್ಚಿಸಿದವರು ಹೊಯ್ಸಳ ಚಿತ್ರಕಲಾವಿದರು. ಈ ರೀತಿಯ ಧರ್ಮಗ್ರಂಥಗಳು ಅಪರೂಪವಾಗಿ ದಕ್ಷಿಣಕಾಶಿ, ಜೈನಕಾಶಿಯೆಂದು ಪ್ರಸಿದ್ಧವಾದ ಮೂಡಬಿದ್ರಿಯ ಜೈನ ಮಠದ ಸಿದ್ಧಾಂತ ಬಸದಿಯಲ್ಲಿ ಈಗಲೂ ಸುಸ್ಥಿತಿಯಲ್ಲಿ ಪೂಜೆಗೊಳ್ಳುತ್ತಲಿವೆ. ಈ ಗ್ರಂಥಗಳ ಚಿತ್ರ ನೈಪುಣ್ಯವನ್ನು ಅರಿಯುವ ಮೊದಲು ಗ್ರಂಥಗಳ ಬಗ್ಗೆ ಸ್ವಲ್ಪ ತಿಳಿದುಕೊಳ್ಳುವುದು ಒಳಿತು.

ಕರ್ನಾಟಕದ ಹಸ್ತಪ್ರತಿ ಚಿತ್ರಗಳ ಕುರಿತು ಮತ್ತು ಕನ್ನಡ ನಾಡಿನ ಜನರ ಕಲಾತ್ಮಕ ಬದುಕನ್ನು ಕುರಿತು ಹಸ್ತಪ್ರತಿ ಮತ್ತು ಚಿತ್ರಕಲೆಯ ವಿದ್ವಾಂಸರಾಗಿರುವ ಡಾ॥ ಬಿ.ಕೆ. ಹಿರೇಮಠರು ಈ ರೀತಿ ಹೇಳುತ್ತಾರೆ. ''ಪ್ರಾಚೀನ ಕನ್ನಡಿಗರ ಜೀವನ - ಜೀವನ ದೃಷ್ಟಿಗಳನ್ನು ಗಮನಿಸಿದಾಗ ಜ್ಞಾನ ಸಮೃದ್ಧವಾದ ಜೀವನ ನಡೆಸಿದವರು ಎಂಬುದಕ್ಕೆ ಅಸಂಖ್ಯಾತರಾಗಿ ದೊರೆಯುವ ಕಾವ್ಯಶಾಸ್ತ್ರಗಳ ಹಸ್ತಪ್ರತಿಗಳೇ ಸಾಕ್ಷಿ ನುಡಿಯುತ್ತವೆ. ಅದರಂತೆ ರಸಿಕತೆಯಿಂದೊಡಗೂಡಿದ, ಕಲಾಪೂರ್ಣವಾದ ಬದುಕು ಕನ್ನಡಿಗರದು ಎಂಬುದನ್ನು ಕಾಣಲು ನಾಡಿನ ಸಂಗೀತ, ನೃತ್ಯ, ನಾಟ್ಯ, ಶಿಲ್ಪ -ವಾಸ್ತುಶಿಲ್ಪ ಮೂರ್ತಿ ಶಿಲ್ಪ, ಭಿತ್ತಿ ಚಿತ್ರಗಳು ಒಟ್ಟನಲ್ಲಿ ನಾಡಿನ ಲಲಿತಕಲಾ ಪರಂಪರೆಯತ್ತ ದೃಷ್ಟಿಯನ್ನು ಹೊರಳಿಸಬೇಕಾಗುತ್ತದೆ. ಹಸ್ತಪ್ರತಿಗಳ ವಿನ್ಯಾಸ -ಸೌಂದರ್ಯಕ್ಕೆ ಸಂಬಂಧಪಟ್ಟ ಸಂಗತಿಗಳು ನಾಡವರ

---

೩೧. ಡಾ. ಸಿದ್ದಯ್ಯ ಪುರಾನಿಕ (ಸಂ.) ಮಣಿಹ : ಶ್ರೀ ವಿ.ಟಿ.ಎಸ್.ರಾವ್ , ಪುಟ -೪೧೨

೩೨. ಡಾ. ಬಿ.ಕೆ.ಹಿರೇಮಠ : ಹಸ್ತಪ್ರತಿಗಳ ವಿನ್ಯಾಸ, ಸೌಂದರ್ಯ: ಸೃಷ್ಟಿ, ಪುಟ -೧೧೧

ಕಲಾಭಿರುಚಿಗಳ, ನಾಡಿನ ಚಿತ್ರಕಲಾ ಪರಂಪರೆಯ ಮಹತ್ವದ ಮುಖವನ್ನು ತೋರುವುದಾಗಿದೆ. [೩೧]

ಈ ರೀತಿಯಾಗಿ ಕರ್ನಾಟಕದ ಹಸ್ತಪ್ರತಿಗಳಿಗೆ ಸಾಹಿತ್ಯಿಕವಾದ ಏಕಮಾತ್ರವೇ ಮುಖವಿರದೆ ಕಲೆ, ಸಂಸ್ಕೃತಿ, ಸಾಮಾಜಿಕ ಬದುಕಿನ ವೈವಿದ್ಯತೆಗಳನ್ನು ಕಟ್ಟಿಕೊಡುವ ಹರವು, ಆಳ, ಸತ್ವಗಳು ಕನ್ನಡ ಸಾಹಿತ್ಯ ಇರುವುದರಿಂದಲೇ ಅದು ಸಹಸ್ರಾರು ವರುಷಗಳಿಂದಲೂ ಚಿರನೂತನವಾಗಿ ಬೆಳೆಯುತ್ತಲಿದೆ.

ಹಸ್ತಪ್ರತಿ ಚಿತ್ರಕಲಾ ರಚನೆಯ ಕಾರಣಗಳು :

ಅಲಂಕೃತ ಹಸ್ತಪ್ರತಿಯ ಗ್ರಂಥಗಳು ಕೆಲವು ಸಲ ಬಣ್ಣ , ಚಿನ್ನ ಆಗಾಗ ರಜತದಿಂದ ಸಿಂಗಾರಗೊಂಡಿರುತ್ತವೆ ಕೆಲವು ಸಲ ವಿಷಯದನುಗುಣವಾಗಿ ಸಂಬಂಧಿಸಿದ (Pertinent) ಚಿತ್ರಗಳಿಂದಲೂ ಇನ್ನೂ ಕೆಲವು ಸಲ ಚಿತ್ರಗಳೇ ಇರದೇ ಚಿನ್ನ-ಬೆಳ್ಳಿಗಳ ಮೆರಗಿನಿಂದ ತಯಾರಿಸಿದ ಚರ್ಮದ ಪತ್ರ (Parchment) ಕಟ್ಟು ಎಂದು ಕೂಡಾ ಹೇಳಬಹುದು ಎಂದು ಹಸ್ತಪ್ರತಿಯ ಕಟ್ಟುಗಳಿಗೊಂದು ಅರ್ಥನೀಡುವ ಅಮೇರಿಕೆಯ ವಿಶ್ವಜ್ಞಾನಕೋಶವು (Encyclopedia) ಮುಂದುವರಿದು ಹಸ್ತಪ್ರತಿ ಚಿತ್ರಗಳಿಗೆ ಮತ್ತು ಚಿತ್ರರಚನೆಯ ಕಾರಣ ಮತ್ತು ಅವುಗಳ ಮಹತ್ವಕುರಿತು ಈ ವಿಶ್ವ ಕೋಶವು ವಿಶಾಲವಾದ ವಿವರವನ್ನು ಈ ರೀತಿ ನೀಡುತ್ತದೆ.

ಒಂದು ಗ್ರಂಥದ ಅಂದ ಚಂದ, ಸಿಂಗಾರವೆಂದರೆ ಅದರೊಳಗಿನ ವಿಚಾರಗಳನ್ನು ಜನಪ್ರೀಯಗೊಳಿಸುವುದು ಸಂಪರ್ಕದ ವಿಚಾರಗಳನ್ನು ದಾಖಲೀಕರಣಗೊಳಿಸುವುದು ಅಲ್ಲದೆ ಗ್ರಂಥದೊಳಗಿನ ಪವಿತ್ರ ಜ್ಞಾನವನ್ನು ಜಗದ ಹಿತಕ್ಕಾಗಿ ಬಳಸುವುದೇ ಆಗಿರುತ್ತದೆ. ಇವುಗಳೊಂದಿಗೆ ಹಸ್ತಪ್ರತಿಯು ಅಲಂಕಾರವು ಅವಶ್ಯಕ ಎಂಬುದಕ್ಕೆ ಈ ಕೆಳಗಿನ ಮೂರು ಐತಿಹಾಸಿಕ ಕಾರಣಗಳನ್ನು ಈ ರೀತಿಯಾಗಿ ವಿವರಿಸಬಹುದು.

★ ಇದೊಂದು ಐತಿಹಾಸಿಕವಾದ ಹಲವಾರು ಅಂಶಗಳಿರುವ ಗ್ರಂಥ
★ ಮಾನವನ ನಿರಂತರದ ಬಯಕೆಯಾಗಿರುವ ತನ್ನ ಅನುಭಾವಗಳನ್ನು ಹೊರ ಹಾಕುವುದು ಮತ್ತು ಅನ್ಯರೊಂದಿಗೆ ಹಂಚಿಕೊಳ್ಳುವದು ಅಲ್ಲದೆ ಇದು ಜಾರಿಯಲ್ಲಿ ಇಲ್ಲದ ಐತಿಹಾಸಿಕ ಆಭರಣ ಮತ್ತು ನಕ್ಷೆಯನ್ನು ವಿಸ್ತೃತ ರೀತಿಯಲ್ಲಿ, ವೈಭವಯುತವಾಗಿ ಹೇಳುವುದು ಆಗಿರುತ್ತದೆ.
★ ಇಡೀ ಗ್ರಂಥವೇ ಒಂದು ಬೃಹದಾಕಾರದ ಶರೀರದಂತೆ ಇದ್ದು, ಅದು ಬಹು ಕಾಲೀನ ಬದುಕಿನ ರೀತಿಯನ್ನು ಬಿಂಬಿಸುವ ಕಲಾಕೃತಿಯನ್ನು ಹೊಂದಿರುವಂತಹದ್ದು ಆಗಿರುವುದಲ್ಲದೆ. ಕತ್ತಲೆಯ ಗರ್ಭದಲ್ಲಿ ಹೂತುಕೊಂಡಿರುವ ಜ್ಞಾನವನ್ನು ಬಯಲಿಗೆ ತಂದು ಬೆಳಕಿನೊಂದಿಗೆ ಎಲ್ಲರಿಗೆ ವಿತರಿಸುವುದು ಗ್ರಂಥದ ಉದ್ದೇಶವಾಗಿರುತ್ತದೆ. [೩೨]

ಈ ರೀತಿ ಹಲವು ಅತ್ಯುತ್ತಮ ಅಂಶಗಳನ್ನು ಹೊಂದಿದ ಹಸ್ತಪ್ರತಿ ಗ್ರಂಥಗಳಾಗಲಿ, ಗ್ರಂಥದೊಳಗಿನ ಚಿತ್ರಗಳಾಗಲಿ ಅಥವಾ ಚಿತ್ರದೊಳಗಿರುವ ಬೇರೆ ಬೇರೆ ಪಾತ್ರಗಳೇ ಆಗಲಿ, ಪ್ರಾಣಿ, ಪಕ್ಷಿ, ವಸತಿ, ಆಯುಧ, ಉಪಕರಣ, ಜನ ಜೀವನ, ಗಿಡ ಮತ್ತು ಮರಗಳು ಒಂದು ಕಾಲದ ಸ್ಥಿತಿಯನ್ನೋ, ಪಂಥವನ್ನೋ, ಭಾವುಕತೆಯನ್ನೋ ಸಾರಲು ಜನಸಮುದಾಯದ

೩೨. Mannual manuscripts : Encyclopedia of American Vol:5, XVIII, Page 242

ಕಾಲಕೋಶಗಳಾಗಿರುತ್ತವೆ. ಇಂತಹ ಕೋಶಗಳನ್ನು ಮುಚ್ಚಿಡದೆ, ಬಿಚ್ಚಿಟ್ಟು ಜನಪರಗೊಳಿಸುವುದು ಮಹತ್ವದ ಅಂಶವಾಗಿರುತ್ತದೆ.

ಹಸ್ತಪ್ರತಿ ಚಿತ್ರಕಲೆಯ ವೈಶಿಷ್ಟ್ಯಗಳು ಮತ್ತು ಅವಶ್ಯಕತೆಯ ಕಾರಣಗಳು :

ಜ್ಞಾನದಾಗರಗಳು, ಕಾಲಘಟ್ಟದ ಕೋಶಗಳಂತಿರುವ ಹಸ್ತಪ್ರತಿಯೊಳಗಿನ ಚಿತ್ರಗಳು ಕೇವಲ ಅಲಂಕಾರಕ್ಕಾಗಿ, ಅಂದಕ್ಕಾಗಿ ಬರೆದ ಅಥವಾ ಕಾಲಕ್ಷೇಪಕ್ಕಾಗಿ ಬರೆದ ಸಾಹಿತ್ಯ ಕೃತಿಗಳಂತಲ್ಲ. ಕನ್ನಡದ ಸಾಹಿತ್ಯಕವಲಯದಲ್ಲಿ ಸಂಶೋಧನಾ ವಲಯದಲ್ಲಿ ಕಲೆಯನ್ನು ಕುರಿತು ಚಿಂತನೆ ಮಾಡಿದ ಸಾಹಿತ್ಯಕೃತಿಯಾಗಲಿ ಸಾಹಿತಿಗಳಾಗಲಿ ಬೆರಳೆಣಿಕೆಯ ಮೇಲೆ ದೊರೆಯುತ್ತಾರೆ. ಆದರೆ ಕರ್ನಾಟಕದ ಸಾಹಿತ್ಯ ವಲಯದ ಸಾರಸ್ವತ ಲೋಕದಲ್ಲಿ ಕಲೆಯನ್ನೇ ಕುರಿತು ಚಿಂತಿಸಿಯೇ ಇಲ್ಲ ಎನ್ನುವಂತಹ ವ್ಯಸನವೂ ಇಲ್ಲ. ಜನಪದರ ಜಾನಪದ ಬದುಕಿನಿಂದ ಶಿಷ್ಟದವರೆಗೂ ಬೆಳೆದು ನಿಂತಿರುವ ಕಲೆಯನ್ನು, ಚಿತ್ರಕಲೆಯನ್ನು ಕುರಿತು ಸಾಹಿತ್ಯ ವಲಯದಲ್ಲಿರುವ ಅಧ್ಯಯನಶೀಲರು, ಸಂಶೋಧಕರು ಈ ನಿಟ್ಟಿನತ್ತ ಗಮನ ಹರಿಸಬೇಕಾಗಿದೆ. ಕುರಿತೋದದೆಯುಂ ಕಾವ್ಯ ಪ್ರಯೋಗ ಪರಿಣಿತ ಮತಿಗಳ್ ಈನಾಡ ಜನವರ್ಗಳ್ ಎನ್ನುವ ಕವಿರಾಜ ಮಾರ್ಗದ ಕವಿಯ ವಾಣಿಯಂತೆಯೇ ಈ ನಾಡ ಜನರು ಕಲಿಯದೆಯೇ ಕಾವ್ಯ ಪರಿಣಿತಿಯ ಪ್ರಯೋಗಶೀಲರಾಗಿರುವಂತೆ ತಮ್ಮ ಬದುಕಿನಲ್ಲಿ ಕಾವ್ಯ, ಕಲೆ, ಸಂಗೀತಗಳ ರಾಜಮಾರ್ಗದಲ್ಲಷ್ಟೇ ಅಲ್ಲ, ಕಲೆ ಸಾಹಿತ್ಯದ ಮಹಾಮಾರ್ಗದಲ್ಲೂ ತಮ್ಮ ಬದುಕು ಸಾಗಿಸಿದ ಮಹಾನುಭಾವರಾಗಿದ್ದಾರೆ.

ಡಾ. ಜಿ.ಎಸ್.ಶಿವರುದ್ರಪ್ಪನವರು ಕಾವ್ಯ ಅಥವಾ ಸಾಹಿತ್ಯದ ಲಾಕ್ಷಣಿಕರು, ಚಿತ್ರವನ್ನು ಒಳಗೊಂಡಂತೆ ಇನ್ನಿತರ ಕಲೆಗಳ ಬಗೆಗೆ ಒಂದು ರೀತಿಯ ಉಪೇಕ್ಷೆಯನ್ನು ತಾಳಿದಂತೆ ಕಾವ್ಯ ಅಥವಾ ಸಾಹಿತ್ಯದ ಬಗೆಗೆ, ಇನ್ನಿತರ ಕಲಾ ಶಾಸ್ತ್ರಕಾರರೂ ಅದೇ ರೀತಿಯ ಉಪೇಕ್ಷೆಯನ್ನು ತಾಳಿದ್ದಾರೆ. ಭಾರತೀಯ ಕಲಾ ಮೀಮಾಂಸೆಯ ಪ್ರಕಾರ ಸಮಸ್ತ ಕಲೆಗಳನ್ನೂ ಒಟ್ಟಾರೆಯಾಗಿ ಶಿಲ್ಪ ಎಂದು ಕರೆಯಲಾಗಿದೆ. ಗೀತ, ಚಿತ್ರ, ನೃತ್ಯ ಈ ಮೂರನ್ನು ಪರಸ್ಪರ ಪೂರಕವಾದ ಕಲೆಗಳೆಂದು ತಿಳಿಯಲಾಗಿದೆ ಎನ್ನುತ್ತಾರೆ. [೩೪]

ಈ ಹಿನ್ನೆಲೆಯಿಂದ ನೋಡಿದರೆ ಈ ಹೊತ್ತಿಗೂ ನಮ್ಮ ಎಷ್ಟೋ ಶ್ರೇಷ್ಠ ಸಾಹಿತಿಗಳಿಗೆ ಚಿತ್ರಕಲೆಯ ಪರಿಜ್ಞಾನವಿರುವುದಿಲ್ಲ ಸಂಗೀತ, ಶಿಲ್ಪದ ಪರಿಚಯವಿರುವುದಿಲ್ಲ. ಹಾಗೆಯೇ ಎಷ್ಟೋ ಶ್ರೇಷ್ಠ ಸಂಗೀತಗಾರರಿಗೆ ಸಾಹಿತ್ಯದ ಗಂಧವಿರುವುದಿಲ್ಲ. ಹಾಗೆಯೇ ಚಿತ್ರಕಲಾವಿದರಿಗೂ ಅಷ್ಟೇ ಇನ್ನಿತರ ಪರಿಜ್ಞಾನ ಅಷ್ಟೇನೂ ಅಗತ್ಯವಿಲ್ಲವೆಂಬ ನಿಲುವು ಪ್ರಧಾನವಾಗಿದೆ. ಈ ಮಾತಿಗೆ ಅಪವಾದಗಳಿಲ್ಲವೆಂದೇನೂ ಅರ್ಥವಲ್ಲ. ಅಪರೂಪಕ್ಕೆ ಸಮೃದ್ಧವಾದ ಸೃಜನ ಪ್ರತಿಭೆಯುಳ್ಳವರು ಒಂದಕ್ಕಿಂತ ಹೆಚ್ಚು ಕಲಾ ಪ್ರಕಾರಗಳಲ್ಲಿ ತಮ್ಮನ್ನು ಅಭಿವ್ಯಕ್ತಪಡಿಸಿಕೊಂಡ ನಿದರ್ಶನಗಳಿವೆ. [೩೫]

*****

೩೪ ಡಾ. ಜಿ.ಎಸ್.ಶಿವರುದ್ರಪ್ಪ: ಸೌಂದರ್ಯ ಸಮೀಕ್ಷೆ, ಪುಟ -೧೩೧

೩೫. ಡಾ. ಎಸ್.ಸಿ.ಪಾಟೀಲ್, ಸತ್ಯಾನಂದ ಪಾತ್ರೋಟ (ಸಂ.) ಡಾ. ಜಿ.ಎಸ್.ಶಿವರುದ್ರಪ್ಪ: ನಿಜದ ನೆಲೆ,ಪುಟ -೩೫೬



ಅಧ್ಯಾಯ : ಏಳು

ಹಸ್ತಪ್ರತಿ ಚಿತ್ರಕಲೆಯ ಆಪತ್ತುಗಳು

ಯಂ ಶೈವಾ ಸಮುಪಾಸತೇ ಶಿವ ಇತಿ
ಬ್ರಹ್ಮೇತಿ ವೇದಾಂತಿನೋ ಬೌದ್ಧಾ ಬುದ್ದ ಇತಿ ಪ್ರಮಾಣ ಪಟವ :
ಕರ್ತೇತಿ ನೈಯ್ಯಾಯಿಕಾ : ಅರ್ಹಂಶ್ಚೇತಿಹ ಜೈನ ಶಾಸನ ಮತಿಃ
ಕರ್ಮೇವ ಮೀಮಾಂಸಕಾ ಃ ಸೋಯಂ ವೋ ವಿದಧಾತು
ವಾಂಛಿತ ಫಲಂ ಶ್ರೀ ಕೇಶವ ಃ ಸರ್ವದಾ.

ಕರ್ನಾಟಕದ ಕಲೆ, ಸಾಹಿತ್ಯ, ಸಂಸ್ಕೃತಿಗಳ ಕಣಜವಾಗಿರುವ ಕನ್ನಡ ನಾಡಿನ ಹಸ್ತಪ್ರತಿಗಳು ಈ ನೆಲದ ವರ್ಣಮಯ ಬದುಕನ್ನು ಪ್ರತಿನಿಧಿಸುತ್ತವೆ. ಅವು ನಮ್ಮ ಸಾರಸ್ವತಲೋಕದ ಸಂಕೀರ್ಣಮಯ ಬದುಕಿನ ಕನ್ನಡಿಯಂತಿವೆ. ಅವು ನಮ್ಮ ಬದುಕಿನ ಹಲವು ಗೊಂದಲಗಳ ನಿವಾರಣೆಗೆ ಮಾರ್ಗಸೂಚಿ ನಿರ್ದೇಶನಗಳನ್ನು ನೀಡಿದರೂ ಕರ್ನಾಟಕದ ಹಸ್ತಪ್ರತಿ ಚಿತ್ರಕಲೆಗೆ ಹಲವಾರು ಆಪತ್ತುಗಳಿವೆ. ಅಂತಹ ಆಪತ್ತುಗಳನ್ನು ಅಧ್ಯಯನಕ್ಕಾಗಿ ಈ ಕೆಳಗಿನಂತೆ ವರ್ಗೀಕರಣ ಮಾಡಿಕೊಳ್ಳಬಹುದು. ಅವುಗಳ ಸ್ಥೂಲ ವಿವರಣೆ ಈ ರೀತಿಯಾಗಿದೆ.

ಹಸ್ತಪ್ರತಿಗಳ ಆಪತ್ತುಗಳು :

ಐ ನೈಸರ್ಗಿಕ ಆಪತ್ತು
1) ಗಾಳಿ 2) ಮಳೆ 3) ಬೆಂಕಿ 4) ಕೀಟ 5) ಧೂಳು 6) ಭೂಕಂಪನ

ಐಐ ಮಾನವ ನಿರ್ಮಿತ ಆಪತ್ತು
1) ಧಾರ್ಮಿಕ 2) ರಾಜಕೀಯ 3) ಸಾಮಾಜಿಕ 4) ಗಲಭೆ 5) ಕಂದಾಚಾರ 6) ಅಪಾತ್ರರಿಗೆದಾನ 7) ನಿರ್ಲಕ್ಷತೆ

I ನೈಸರ್ಗಿಕ ಆಪತ್ತುಗಳು :

ಮಾನವನು ನಿಸರ್ಗದ ಮಡಿಲಜೀವಿ. ನಿಸರ್ಗವೇ ಅವನನ್ನು ಉಳಿಸಿ, ಬೆಳೆಸಿ, ಹಲವು ಆಪತ್ತುಗಳಿಂದ ಕಾದು ಕಾಪಿಟ್ಟು ಸಂರಕ್ಷಣೆ ಮಾಡಿದರೂ. ಮಾನವನ ಅಳಿವಿಗೆ, ವಿನಾಶಕ್ಕೆ ನಿಸರ್ಗದ ವಿಕೋಪವೂ ಹಲವು ಕಾರಣಗಳಲ್ಲಿ ಪ್ರಮುಖವಾದ ಕಾರಣಗಳಲ್ಲಿ ಒಂದಾಗಿರುತ್ತದೆ. ನೈಸರ್ಗಿಕವಾಗಿ ಪ್ರಕೃತಿ ಹೇಗೆ ನಾಶಪಡಿಸಬಲ್ಲದು ಎಂಬುದನ್ನು ನಾವು ಈ ರೀತಿಯಾಗಿ ಕಾಣಬಹುದು. ಅವುಗಳಲ್ಲಿ

ಗಾಳಿ : ಪ್ರಕೃತಿಯೊಳಗಿನ ಮೂಲ ಶಕ್ತಿಯಲ್ಲಿ ಗಾಳಿಯೂ ಒಂದಾಗಿದೆ. ಗಾಳಿಯ ಸಂಪತ್ತು ಮತ್ತು ಆಪತ್ತುಗಳನ್ನು ಪರಿಗಣಿಸಿಯೇ ಗಾಳಿಯನ್ನು ನಮ್ಮ ಪ್ರಾಚೀನರು '' ಪ್ರಾಣ '' ಎಂದು ಕರೆದಿದ್ದಾರೆ ವೇದಕಾಲದ ದೇವತೆಗಳಲ್ಲಿ ಮರುತನು ಓರ್ವ ಶಕ್ತಿಶಾಲಿಯಾದ ದೇವತೆ ಎಂದು ಕರೆದಿದ್ದಾರೆ. ಈ ದೇವತೆಯ ಶಕ್ತಿಯನ್ನು ಪರಿಗಣಿಸಿರುವ ಶ್ರೀ ಮಾದ್ವರೂ ಗಾಳಿಯನ್ನು '' ವಾಯು ಜೀವೋತ್ತಮ '' ಎಂದಿದ್ದಾರೆ. ಈ ಗಾಳಿಗೆ ಧಾರ್ಮಿಕವಾದ ಸಾತ್ವಿಕ ಶಕ್ತಿ ಇರುವಂತೆ ಸರ್ವನಾಶಮಾಡಬಲ್ಲ ರಾಕ್ಷಸಿಯ ಪ್ರವೃತ್ತಿಯೂ ಈ ವಾಯುವಿಗಿದೆ.

ಗಾಳಿ ಆಕಾರವಿಲ್ಲದೆಯೇ ಅಧಮ್ಯ ಶಕ್ತಿಯ ಸ್ವರೂಪದ್ದಾಗಿದೆ. ಗಾಳಿಗೆ ಸಿಕ್ಕ ಹಡುಗು, ಸೊಡರು, ಮೋಡಗಳನ್ನು ದೇವರೆ ಕಾಪಾಡಬೇಕು ಎನ್ನುವ ಅನೇಕ ಪ್ರಾರ್ಥನಾಗೀತೆಗಳು ವೇದಗಳಲ್ಲಿವೆ. ಇಂತಹ ಗಾಳಿಯೂ ನಾಶದ ಕಾರ್ಯ ಆತನಿಗೆ ಸಹಾಯಕರಾಗುವ ಅನೇಕ ದುಷ್ಟ ಮಿತ್ರರೂ ಉಂಟು. ಮುಖ್ಯವಾಗಿ ತೇವಾಂಶ, ಉಪ್ಪಿನಾಂಶ, ಬೆಂಕಿಯಕಿಡಿ, ಸೂಕ್ಷ್ಮಾಣುಗಳು ಇವುಗಳಲ್ಲಿ ಕೇವಲ ಒಂದೇ ಒಂದು ಅಂಶವಾದರೂ ಸಾಕು ಮಾನವನ ಮತ್ತು ಮಾನವ ನಿರ್ಮಿತ ಅನೇಕ ವಸ್ತುಗಳ ನಾಶಕ್ಕೆ ಗಾಳಿ ಅತ್ಯುತ್ತಮ ವಾಹಕವಾಗಿದೆ.

ಗಾಳಿಯಿಂದ ಹರಡಿಕೊಳ್ಳುವ ಧೂಳು ಪ್ರಥಮಹಂತವಾದರೆ ಅದರೊಂದಿಗೆ ಬೀಸುವ ತೇವಾಂಶವು ಗಾಳಿಯಿಂದ ಬಂದ ಧೂಳನ್ನು ಹಸ್ತಪ್ರತಿಗಳ ಮೇಲೆ ಗಟ್ಟಿಗೊಳಿಸುತ್ತದೆ. ಇದರೊಂದಿಗೆ ಉಪ್ಪಿನ ಅಂಶವೂ ಸೇರಿದರೆ ಯಾವುದೇ ವಸ್ತುವಾಗಲಿ, ಹಸ್ತಪ್ರತಿಯಾಗಲಿ ಅವುಗಳ ಅವನತಿ ಶಾಶ್ವತ. ಇವೆಲ್ಲವೂಗಳಿಗೆ ಕೀರಿಟವಿಟ್ಟಂತೆ ಗಾಳಿಯೊಂದಿಗೆ ತೇಲಿಬಂದ ಬೆಂಕಿಯ ಕಿಡಿಯು ಕ್ಷಣಾರ್ಧದಲ್ಲೇ ಗ್ರಂಥಾಲಯವನ್ನು ಸರ್ವನಾಶ ಮಾಡಬಲ್ಲದು. ಗಾಳಿಗೆ ಸಿಕ್ಕು ಹಾಳಾದ ಅನೇಕ ಹಸ್ತಪ್ರತಿಗಳಂತೆ ಗಾಳಿಯೊಳಗಿನ ಉಪ್ಪು ಇರುವ ಸಮುದ್ರ ತಟದ ಪರಿಸರದಲ್ಲಿಯ ಅನೇಕ ಹಸ್ತಪ್ರತಿಗಳು ನಾಶವಾದ ಉದಾಹರಣೆಗಳಿವೆ. ಈ ಉಪ್ಪಿನ ಅಂಶದಿಂದ ಹಸ್ತಪ್ರತಿಯೊಳಗಿನ ಚಿತ್ರಗಳು, ಬಣ್ಣಗಳು ಗಾಳಿಗೆ ಅಂದಗೆಡಲು ಬಹುಕಾರಣವಾಗಿವೆ. ಆದ್ದರಿಂದ ಗಾಳಿಗೆ ಉಸಿರಾಡಿಸುತ್ತ ಜೀವಿಗಳನ್ನು ಬದುಕಿಸುವ ಶಕ್ತಿಯಿರುವಂತೆ ಉಸಿರುಕಟ್ಟಿ ಕೊಲ್ಲುವ ಉಭಯ ಶಕ್ತಿಯನ್ನು ಹೊಂದಿದ ಪ್ರಕೃತಿ ಜನ್ಯ ವಿಚಿತ್ರ ವಸ್ತುವಾಗಿದೆ.

2. ಮಳೆ : ಗಾಳಿಯ ಗೆಳೆಯರಲ್ಲಿ ಮಳೆಯು ಪ್ರಮುಖನಾದವನು ಸಮುದ್ರದ ಒಡಲಲ್ಲಿ ಹುಟ್ಟಿ

ಮೋಡಗಳಂತಹ ಕೊಡಗಳಲ್ಲಿ ಸಂಗ್ರಹಿತನಾಗಿರುವ ಪರ್ಜನ್ಯನನ್ನು ಕಾಡಿಗೆ, ಕಾಡಿನಿಂದ ನಾಡಿಗೆ ಎಳೆದು ತರುವವನೆ ಗಾಳಿ. ವೇದಕಾಲದ ಋಕ್ಕಿನಲ್ಲಿ ಮಳೆಗೆ ತುಂಬ ಪ್ರಾಶಸ್ತ್ಯವಿದೆ. ಪ್ರಾಥಮಿಕವಾಗಿ ವೇದಕಾಲದ ಋಷಿಗಳು ಕೃಷಿಕರೂ ಆಗಿದ್ದ ಕಾರಣ ಅವರು ಮಳೆಯನ್ನು ''ವರುಣ ದೇವರೆಂದು'' ಪೂಜಿಸುವಂತೆ ಅನೇಕ ಕವನಗಳನ್ನು ಕಟ್ಟಿ ಹಾಡಿರುವ ಅನೇಕ ಸೂಕ್ತಗಳ ಉದಾಹರಣೆಗಳು ಇವೆ. ಇಂತಹ ಮಳೆ ಧಾರಾಕಾರವಾಗಿ ಸುರಿದು ಅಗ್ರಹಾರವನ್ನು ಅಗ್ರಹಾರದಲ್ಲಿ ಸಂಗ್ರಹಿತ ಹಸ್ತಪ್ರತಿಗಳು ನಾಶವಾಗಲು ಕಾರಣಭೂತವಾಗಿದೆ. ಇಂದಿನ ದಿನಗಳಿಗಿಂತ ಹಿಂದಿನ ಕಾಲದ ಮನೆಗಳು ಸಾಮಾನ್ಯವಾಗಿ ಹೆಚ್ಚಿನ ಗಾಳಿ ಬೆಳಕಿರದೆ ಗುಹೆಯ ಪ್ರತಿರೂಪದಂತಿದ್ದವು. ಎಲ್ಲಿ ಮಳೆಯಿಂದ ಮನೆ ಸೋರುತಿದೆ ? ಹಾಳಾಗುತ್ತಿದೆ ? ಎಂಬ ವಿಷಯವೇ ಬೇಗ ತಿಳಿಯುತ್ತಿರಲಿಲ್ಲ. ಪ್ರತಿಮನೆಯಲ್ಲೂ ಪ್ರತ್ಯೇಕವಾದ ಹಸ್ತಪ್ರತಿಗಳ ಕೋಣೆಯೂ ಇರಲಿಲ್ಲ. ನಾಗವಂದಿಗೆ, ಜಂತಿ, ಹೋಗೆಯ ಕಿಂಡಿಗಳು ಹಸ್ತಪ್ರತಿಗಳ ನೆಲೆಗಳಾಗಿದ್ದವು. ಹೊಗೆ ಕಿಂಡಿಯಲ್ಲಿ ಕೆಳಗಿನಿಂದ ಹೊಗೆ, ಬೂದಿ, ಬೆಂಕಿಯ ಜಳ ಬರುವಂತೆ ಮೇಲಿನಿಂದ ಗಾಳಿ, ಧೂಳು, ಮಳೆನೀರು ಮನೆಯೊಳಗೆ ನುಗ್ಗುತ್ತಿತ್ತು. ಹೀಗಾಗಿ ಮಳೆಯ ನೀರು, ಜಿನುಗುವ ಹನಿ, ಪ್ರವಾಹಗಳು ಬೇರೆ ಬೇರೆ ಹಂತಗಳಲ್ಲಿ ಹಸ್ತಪ್ರತಿಗಳ ಅವನತಿಗೆ ಕಾರಣವಾಗಿವೆ. ಹಸ್ತಪ್ರತಿ ಬರೆಯಲು ಬೇಕಾಗುವ ತಾಳೆ ಮರಗಳ ಹುಟ್ಟಿಗೆ ಮಳೆಯೇ ಕಾರಣವಾಗುವಂತೆ ಬರೆದ ಗರಿಗಳ ಹಸ್ತಪ್ರತಿಗಳು ಹಾಳಾಗಲು ಮಳೆಯೂ ಒಂದು ಕಾರಣವಾಗಿದೆ.

3. ಬೆಂಕಿ :ಪ್ರಕೃತಿಯು ನೀಡಿದ ವರ ಮತ್ತು ಶಾಪರೂಪದ ಮೂಲ ವಸ್ತುಗಳಲ್ಲಿ ಪ್ರಕೃತಿ ಜನ್ಯವಾದ ಮತ್ತೊಂದು ಮೂಲವಸ್ತು ಈ ಬೆಂಕಿಯೂ ಒಂದು. ಬೆಳಕು, ಶಾಖ ಮತ್ತು ಹವಿಸ್ಸನ್ನು ಸ್ವೀಕರಿಸುವ ಯಜ್ಞೇಶ್ವರನೆಂದೆ ಪರಿಚಿತನಾದ ಅಗ್ನಿಯು ಜ್ಞಾನದರ್ಶಕನೂ ಹೌದು, ಭಸ್ಮಾಶೂರನೂ ಹೌದು. ನಮ್ಮ ಬಹಳ ಹಸ್ತಪ್ರತಿಗಳು ಮತ, ಕಂದಾಚಾರ ಮತ್ತು ರಾಜಕೀಯ ಕಾರಣಗಳಿಂದ ಹಾಳಾದಂತೆ ಅನೇಕ ಹಸ್ತಪ್ರತಿಗಳು ಅಗ್ನಿಯ ದೆಶೆಯಿಂದ ಹಾಳಾಗಿರುವ ಉದಾಹರಣೆಗಳೂ ಉಂಟು. ಬೆಂಕಿಯ ಅಪಘಾತದ ಬಗ್ಗೆ ಹೆಚ್.ದೇವಿರಪ್ಪನವರು ಈ ರೀತಿ ಅಭಿಪ್ರಾಯ ಪಡುತ್ತಾರೆ.... ನೀರಿನಂತೆ ಬೆಂಕಿಯೂ ಹಸ್ತಪ್ರತಿಗಳ ಶತ್ರು ಎಂಬುದನ್ನು ಬೇರೆ ಹೇಳಬೇಕಾಗಿಲ್ಲ ಬಂಗಾಳದ ಸೋಮಾಪುರಿ ವಿಶ್ವವಿದ್ಯಾಲಯ (800-1100)ವು ಒಂದು ಸಲ ಯಜ್ಞೇಶ್ವರನಿಗೆ ಆಹುತಿಯಾದುದು ಮತ್ತೇ ಚೇತರಿಸಿಕೊಳ್ಳಲೇ ಇಲ್ಲವಂತೆ. ಮೈಸೂರಿನ ಹಳೆಯ ಅರಮನೆಗೆ ಬೆಂಕಿ ಬಿದ್ದಾಗ ಸಹಸ್ರಾರು ಅತ್ಯಮೂಲ್ಯ ಹಸ್ತಪ್ರತಿಗಳೂ, ದಾಖಲೆಗಳೂ ಸುಟ್ಟುಹೋದವೆಂದು ಗೋತ್ತಾಗುತ್ತದೆ. ನದಿಗಳ ದಂಡೆಗಳಲ್ಲಿರುವ ಊರುಗಳಿಗೆ ಹುಚ್ಚುಹೊನಲು ನುಗ್ಗಿ ಅಲ್ಲಿದ್ದ ಚರಾಸ್ತಿಗಳನ್ನು ಹಸ್ತಪ್ರತಿಗಳನ್ನು ಕೊಚ್ಚಿಕೊಂಡು ಹೋಗಿರುವುದು ನಾವರಿಯದ ಸಂಗತಿಯೇನಲ್ಲ.[೧]

ಬೆಂಕಿಯ ಅನಾಹುತದ ಬಗ್ಗೆ ಪ್ರೊ|| ಎಂ.ವಿ.ಸೀತಾರಾಮಯ್ಯನವರು ತಮ್ಮ

೧. ಹೆಚ್.ದೇವಿರಪ್ಪ: ಕನ್ನಡ ಹಸ್ತಪ್ರತಿಗಳ ಇತಿಹಾಸ , ಪುಟ -೬೨.

ಅನುಭವವನ್ನು ಹೀಗೆ ವಿವರಿಸಿಕೊಳ್ಳುತ್ತಾರೆ.... ಗ್ರಂಥಸ್ಥ ಸರಸ್ವತಿಯನ್ನು ಯಾಥಾವಿಧಿಯಾಗಿ ಧೂಪ ದೀಪ ನೈವೇದ್ಯಾ ನಿರಾಜ ನಾದಿಗಳಿಂದ ಪೂಜೆಮಾಡುತ್ತಿದ್ದರು. ಇಂಥ ಪೂಜೆಯ ವೇಳೆಯಲ್ಲೇ ಗ್ರಂಥಗಳಿಗೆ ಎಣ್ಣೆ ಬೆಂಕಿಗಳಿಂದ ಹಾನಿ ತಟ್ಟುವ ಭಯದ ಶಂಕೆ ಇದ್ದದ್ದು. ಬಿಚ್ಚಿದ ಕಟ್ಟುಗಳನ್ನು ಮತ್ತೆ ಕಟ್ಟುವಾಗ ಸಡಿಲವಾಗಿ ಕಟ್ಟುವುದರಿಂದ ಹುಳುಹುಪ್ಪಟ್ಟೆ ಸೇರಿಕೊಳ್ಳುವ ಸಂಭವ ಇರುತ್ತಿತ್ತು ಆದಕ್ಕಾಗಿಯೇ ಎಂದೇ ''ತೈಲಾದ್ರಕ್ಷೇಜ್ಜಲಾದ್ರಕ್ಷೇತ್ ರಕ್ಷೇತ್ '' ಶಿಥಿಲ ಬಂಧನಾತ್ ಎಂದು ಲಿಪಿಕಾರರು ಮೊರೆ ಇಟ್ಟಿರುವರು.[೨]

ಬೆಂಕಿಯ ಆಪತ್ತನ್ನು ಕುರಿತು ಡಾ॥ಬಿ.ಕೆ.ಹಿರೇಮಠರು ಉದಾಹರಣೆಯೊಂದನ್ನು ಈ ರೀತಿಯಾಗಿ ಕೊಡುತ್ತಾರೆ. ''ಅಗ್ನಿ-ಜಲಗಳಿಂದ ಒದಗುವ ವಿಪತ್ತನ್ನು ಇನ್ನಷ್ಟು ವ್ಯಾಪಕವಾಗಿ ಅರ್ಥಯಿಸುವ ಅಗತ್ಯವಿದೆ ಎನಿಸುತ್ತದೆ. ಹಸ್ತ ಪ್ರತಿಗಳನ್ನು ತುಂಬಿದ ಬುಟ್ಟಿಯನ್ನೋ ಪೆಟ್ಟಿಗೆಯನ್ನೋ ಹೊಗೆ ಕಿಂಡಿಯಲ್ಲಿ ಇಡುತಿದ್ದದು ಅವುಗಳ ರಕ್ಷಣೆಯ ಒಂದು ವಿಧಾನವಾಗಿತ್ತು. ಇಂಥ ಸಂದರ್ಭದಲ್ಲಿ ಹಸ್ತಪ್ರತಿಗಳು ಅಗ್ನಿ ಗಂಡಾಂತರಕ್ಕೆ ತುತ್ತಾಗಬಹುದಿತ್ತು. ಅದರಂತೆ ಹಿಂದಿನ ವಾಸದ ಕಟ್ಟಡಗಳಿಗೆ ಅನಾಯಸವಾಗಿ ಬೆಂಕಿ ವ್ಯಾಪಿಸಬಹುದಾಗಿತ್ತು. ಕಟ್ಟಿಗೆ, ಹುಲ್ಲು ಮುಂತಾದವುಗಳಿಂದ ಆಚ್ಛಾದಿತವಾದವು ಅಡುಗೆಯೋ, ಪೂಜೆಯೋ ಎಂತಹುದೇ ಒಂದುಗಳಿಗೆಯಲ್ಲಿನ ಅಲಕ್ಷ್ಯ ಅಗ್ನಿಗೆ ಆಹ್ವಾನವನ್ನಿತ್ತಂತೆ. ಆಗ ವಾಸದ ಕಟ್ಟಡ, ಅಲ್ಲಿನ ಹಸ್ತಪ್ರತಿಗಳಿಗೆ ಬಹುಶಃ ಉಳಿಗಾಲ ವಿರುತ್ತಿರಲಿಲ್ಲ, ಅಡುಗೆ ಪೂಜೆಯ ಸಂದರ್ಭಗಳು ದಿನನಿತ್ಯದ ಕಲಾಪಗಳು, ಹಸ್ತಪ್ರತಿಕಾರರು ಇಂಥ ಘಟನೆಗಳನ್ನು ಕಂಡೆ ''ಅಗ್ನಿ ''ಯಿಂದ ಹಸ್ತಪ್ರತಿಗಳನ್ನು ರಕ್ಷಿಸಿಕೊಳ್ಳಿ ಎಂದು ಹೇಳಿರಬೇಕು.[೩]




4. ಕೀಟಗಳು : ಎಲ್ಲೆಡೆಯಲ್ಲಿಯೂ ಇರುವ ಕೀಟಗಳ ಕುರಿತು ಕೆ.ಎಸ್.ರವಿಕುಮಾರ್ ಹೀಗೆ ಹೇಳುತ್ತಾರೆ. ಜಗತ್ತಿನಲ್ಲಿರುವ ಎಲ್ಲಾ ಜೀವ ಸಂಕುಲಗಳನ್ನು ಶೇಕಡಾ ವಾರು ಲೆಕ್ಕದಲ್ಲಿ ವರ್ಗೀಕರಿಸಿದರೆ ಕೀಟಗಳ ಸಂಖ್ಯೆಯ ಪ್ರಮಾಣ ಶೇಕಡಾ 50 ಕ್ಕಿಂತ ತುಸು ಜಾಸ್ತಿ ಪ್ರಾಣಿಸಂಕುಲನವನ್ನಷ್ಟೇ ಪರಿಗಣಿಸಿದರೆ ಅವುಗಳ ಸಂಖ್ಯೆ ಶೇಕಡಾ 85 ರಷ್ಟು ಕೀಲುಗಳಿಂದ ಜೋಡಿಸಲ್ಪಟ್ಟ ಕಾಲುಗಳನ್ನು ಪಡೆದ ಸಂಧೀ ಪದಿಗಳ ವಿಭಾಗದಲ್ಲಿ ಕೀಟಗಳದೂ ಒಂದು ವರ್ಗ. ಏಡಿ, ಸಿಗಡಿ ಮುಂತಾದ ಸಂಧಿಪದಿಗಳನ್ನೊಳಗಂಡ ವಲ್ಕವಂತ ಜೇಡ, ಚೇಳು, ಉಣ್ಣೆ ಮುಂತಾದವುಗಳಿರುವ ಅರಾಕ್ಕಿಡ, ಶತಪದಿ, ಸಹಸ್ರ ಪದಿಗಳಿರುವ ಮಿರಿಯಾಪೋಡಾ, ಮುಂತಾದ ವರ್ಗಗಳು ಸಂಧಿ ೯ಪದಿಗಳ ವಿಭಾಗದಲ್ಲಿವೆ. ಕೇವಲ ಸಂಧೀಪದಿಗಳ ವಿಭಾಗಳನ್ನಷ್ಟೇ ಪರಿಗಣಿಸದರೆ ಕೀಟಗಳ ಸಂಖ್ಯೆ ಶೇಕಡಾ 97 ರಷ್ಟು . ಕೆಲವಡೆ ಅವುಗಳ ಸಾಂದ್ರತೆಯಂತೂ ನಮ್ಮನ್ನು ಬೆಚ್ಚಿಬೀಳಿಸುತ್ತದೆ. ಒಂದು ಹೆಕ್ಟೇರ್, ಅರಣ್ಯಪ್ರದೇಶದಲ್ಲಿ ವಾಸಿಸುವ ಕೀಟಗಳ ಸಂಖ್ಯೆ. ಇಡೀ ಭೂಮಿಯಲ್ಲಿ ವಾಸಿಸುವ

---

೨. ಡಾ. ಸಿದ್ದಯ್ಯ ಪುರಾಣಿಕ(ಸಂ.) : ಮಣಿಹ, ಪ್ರೊ. ಎಂ. ವಿ. ಸೀತಾರಾಮಯ್ಯ : ಪುಟ -೨೨೦.
೩. ಡಾ॥ ಬಿ.ಕೆ. ಹಿರೇಮಠ : ಕನ್ನಡ ಹಸ್ತಪ್ರತಿಗಳು ಒಂದು ಅಧ್ಯಯನ, ಪುಟ -೨೩೭.
೪. ಕೆ.ಎಸ್. ರವಿಕುಮಾರ : ಕೀಟ ಜಗತ್ತಿಗೊಂದು ಕಿರು ನೋಟ.

ಸಂಖ್ಯೆಗಳಿಗಿಂತ ಯಾವತ್ತೂ ಜಾಸ್ತಿ.[೪]

ಹಸ್ತಪ್ರತಿಗಳಾಗಿರುವ ಭೂರ್ಜ, ತಾಳ ಮತ್ತು ಕಾಗದದ ಪ್ರತಿಗಳಿಗೆ ಪ್ರಾದೇಶಿಕವಾಗಿ ಕೆಲವು ಕೀಟಗಳು ಶಾಶ್ವತ ಅಪಾಯಕಾರಿಗಳಾಗಿವೆ. ಇನ್ನೂ ಕೆಲವು ಕೀಟಗಳು ರಾಜ್ಯದಾದ್ಯಾಂತ ಮತ್ತು ದೇಶದಾದ್ಯಂತ ಎಲ್ಲ ವಿಧದ ಹಸ್ತಪ್ರತಿಗಳಿಗೆ ಗ್ರಂಥಗಳಿಗೆ ನಿರಂತರದ ಬಾಧೆಯನ್ನುಂಟುಮಾಡುವಂತಹ ಕೀಟಗಳಿದ್ದು ಅವುಗಳನ್ನು ಕುರಿತು ನಾವೀಗ ಅಧ್ಯಯನ ಮಾಡುವ. ಹಸ್ತಪ್ರತಿಗಳು ಹಾಳಾಗಲು ಕಣ್ಣಿಗೆ ಕಾಣುವ ಮತ್ತು ಕಾಣದೆ ಕಾಡುವಂತಹವುಗಳಲ್ಲಿ ಅನೇಕ ಕೀಟಗಳೂ ಇವೆ. ವಾಚಕರ ಪುಸ್ತಕ ಪಾಲಕರ ಅರಿವಿಗೆ ಬಾರದಂತಯೇ ಕೀಟಗಳು ಗ್ರಂಥಗಳನ್ನು ಹಾಳುಗೆಡವಿದ ಅನೇಕ ಉದಾಹರಣೆಗಳಿವೆ. ಅಂತಹವುಗಳಲ್ಲಿ ಒಂದು ಉದಾಹರಣೆ ಹೀಗೆದೆ. ಹಸ್ತಪ್ರತಿಗಳೆಂದರೆ ಅವು ದೈವಸ್ವರೂಪದವು ಹಬ್ಬಗಳ ಆಚರಣೆಗಳ ವಿಶೇಷಸಂದರ್ಭದಲ್ಲಿ ಮಾತ್ರ ಹಸ್ತಪ್ರತಿಗಳಿರುವ ಪೆಟ್ಟಿಗೆಯನ್ನು, ಸಂಧೂಕವನ್ನೋ, ಪುಟ್ಟಿಯನ್ನೋ ಹೊರತೆಗೆದು ಬಿಸಿಲಲ್ಲಿ ಒಣಗಿಸಿ ತುಂಬಿ ಮತ್ತೊಂದು ಪೂಜಾ ಸಂದರ್ಭ ಬರುವವರೆಗೂ ನಾವು ಹಸ್ತಪ್ರತಿಗಳ ಬಗ್ಗೆ ಯಾವ ಲಕ್ಷ್ಯವಹಿಸುವುದಿಲ್ಲ. ಈ ಸಂದರ್ಭದಲ್ಲಿ ಮನುಷ್ಯನ ಒಡನಾಟದಲ್ಲಿ ಬದುಕುವ ಇಲಿ, ಜಿರಲೆ, ಜೊಂಡಿಗೆಗಳಂತಹ ಕೀಟಗಳು ಜನರಿಂದ ಕೈಗೆ ಎಟಕದ ಎತ್ತರದಲ್ಲಿ ದೂರ ಉಳಿದಿರುವ ಹಸ್ತಪ್ರತಿಗಳನ್ನು ನಿರಾತಂಕವಾಗಿ ತಮ್ಮ ವಸತಿಕೇಂದ್ರಗಳನ್ನಾಗಿ ಮಾಡಿಕೊಂಡು ಹಾಳುಗೆಡುವುತ್ತವೆ. ಇಂತಹ ಹುಳು ಹುಪ್ಪಟೆಗಳಿಂದ ರಕ್ಷಣೆಪಡಿಯುವುದಕ್ಕೆ ಮಾಡಿದ ಪ್ರಯತ್ನಗಳು ಅನೇಕ ಇವೆ. ಗೆದ್ದಲು ಮುಂತಾದ ಕೀಟಾದಿಗಳಿಂದ ಹಸ್ತಪ್ರತಿಗಳನ್ನು ರಕ್ಷಿಸಿಕೊಳ್ಳುವ ಪ್ರಯತ್ನಗಳು ಪುರಾತನ ಕಾಲದಿಂದಲೂ ವಿಶ್ವದಲ್ಲಿ ಪ್ರಯೋಗಗಳ ರೂಪದಲ್ಲಿ ನಡಿದೆ ಇವೆ. ಮೆಸಿಡೋನಿಯದ ಆಂಟಿಫೇನ್ಸ್, ಅಸರೇನಿಯಸ್ ಮುಂತಾದವರು ಕೀಟಾದಿಗಳಿಂದ ಒದಗುವ ಅಪಾಯದಬಗ್ಗೆ ಆತಂಕ ವ್ಯಕ್ತಪಡಿಸಿದ್ದಾರೆ. ಅರಿಸ್ಟಾಟಲ್ ಮುಂತಾದವರು ಇಂಥ ಕೆಲವು ಕೀಟಾದಿಗಳನ್ನು ಕಂಡುದಾಗಿ ಹೇಳುತ್ತಾರೆ. 18 ಮತ್ತು 19 ನೆಯ ಶತಮಾನಗಳಿಂದ ಈ ನಿಟ್ಟಿನಲ್ಲಿ ಅನೇಕ ಪ್ರಯೋಗಗಳನ್ನು ಬೇರೆ ಬೇರೆ ದೇಶಗಳು, ಸಂಸ್ಥೆಗಳು ನಡೆಸಿದ್ದು ಕಟ್ಟಡಗಳ ಅಡಿಪಾಯದಲ್ಲಿ ವಿಷ ಪದಾರ್ಥ ರಾಸಾಯಿನಿಕಗಳನ್ನು ಬಳಸುತ್ತಾ ಬಂದಿರುವುದು ಕಂಡು ಬರುತ್ತದೆ.[೫]




ಗದ್ದಲುಗಳ

ಅ) ಗೆದ್ದಲು : (Termites) ಇದೊಂದು

೫. ಗ್ರಂಥ ಸಂರಕ್ಷಣೆಯ ನಿವಾರಣೋಪಾಯಗಳು : ಪುಟ-೪೫ ರಿಂದ ೫೩.

ಇರುವೆ ಜಾತಿಯ ಕೀಟವಾಗಿದ್ದು ಭಾರತ ದೇಶದಾದ್ಯಂತ ಕಾಣುವ ಜೀವಿಯಾಗಿದೆ. ಹೂವಿನ ಪರಾಗರೇಣುವಿಗೆ ತನ್ನ ಬಾಯಿಯೊಳಗಿನ ರಾಸಾಯನಿಕ ದ್ರವಬೆರಸಿ ಮಕರಂಧವನ್ನು ಜೇನನ್ನಾಗಿ ಪರಿವರ್ತಿಸುವ ಜೇನುಹುಳುವಿನಂತೆ ಈ ಗೆದ್ದಲು ಕೀಟವು ಸಾಮಾನ್ಯವಾದ ಮಣ್ಣಿನ ಕಣಗಳಿಗೆ ತನ್ನ ಬಾಯಿಯೊಳಗಿನ ರಸಬೆರಸಿ ಮಣ್ಣನ್ನು ಬಳಸಿಕೊಂಡು ಹುತ್ತವನ್ನಾಗಿ ಕಟ್ಟುತ್ತದೆ. ಅದರ ಬಾಯಿಯಿಂದ ಸ್ರವಿಸುವ ಜೊಲ್ಲುರಸಕ್ಕೆ ಕಾಗದ, ಕಟ್ಟಿಗೆ, ಗಟ್ಟಿಯಾದ ಮಣ್ಣನ್ನು ಮಿದುಗೊಳಿಸಬಲ್ಲ ಶಕ್ತಿಯನ್ನು ಹೊಂದಿದೆ. ಅದರ ಬಾಯಿಯೊಳಗಿನ ಹಲ್ಲುಗಳ ರಚನೆಯು ಕಟ್ಟಿಗೆ, ರಟ್ಟು ಹಸ್ತಪ್ರತಿಗಳನ್ನು ಧ್ವಂಸಗೊಳಿಸಬಲ್ಲ ಶಕ್ತಿಯುತವಾಗಿದೆ. ಸಮೂಹ ಬದುಕಿನ ಈ ಕೀಟವು ನಮಗೆ ಅರಿವಿರದೆ ಕೆಳಗಿನ ಅಂತಸ್ತಿನವರ ಗಮನಕ್ಕೂ ಬಾರದೆ ಮೂರನೇ ಅಂತಸ್ತಿನ ಕೋಣೆಯೊಳಗಿರುವ ಗ್ರಂಥ ಭಂಡಾರವನ್ನು ನಿತ್ಯನೋಡುವವರು, ಓದುವವರು ಗ್ರಂಥಗಳ ಪರಿಪಾಲಕರು ಇರದಿದ್ದರೆ ಸಮಗ್ರ ಗ್ರಂಥ ಭಂಢಾರವನ್ನೇ ಈ ಕೀಟಗಳ ಸಮೂಹವು ಹಾಳು ಗೆಡವಿ ವಲ್ಮಿಕವನ್ನು ನಿರ್ಮಿಸಬಲ್ಲವು. ಈ ರೀತಿಯಾಗಿ ಈ ಗೆದ್ದಲುಗಳು ಗ್ರಂಥಗಳನ್ನು ಗ್ರಹಗಳನ್ನು ಒಟ್ಟಿಗೆ ಹಾಳುಮಾಡಬಲ್ಲವು. ಈ ಬಾಧೆಯ ನಿವಾರಣೆಗಾಗಿ ಬಿ.ಎಸ್.ಸಣ್ಣಯ್ಯನವರು ತಮ್ಮ ಉಪಾಯವೊಂದನ್ನು ಈ ರೀತಿಯಾಗಿ ಸೂಚಿಸಿದ್ದಾರೆ. ಹಸ್ತಪ್ರತಿಗಳನ್ನಿಡುವ ಕಟ್ಟಡವನ್ನು ಕಟ್ಟುವಾಗಲೇ ಗೆದ್ದಲಿನಿಂದ ರಕ್ಷಣೆಯನ್ನು ಪಡೆಯುವ ಮುಂಜಾಗ್ರತೆಯನ್ನು ವಹಿಸಬಹುದು, ಕಟ್ಟಡದ ತಳಭಾಗದಲ್ಲಿ ಗೆದ್ದಲನ್ನು ತಡೆಗಟ್ಟುವ ಅನೇಕ ವಿಧ ವಿಷಪದಾರ್ಥಗಳನ್ನು ಉಪಯೋಗಿಸುತ್ತಿದ್ದರೂ ಈಚೆಗೆ ಡೈಲ್ಡ್ರಿನ್ ಎಂಬ ವಸ್ತುವನ್ನು ಉಪಯೋಗಿಸುವುದು ಸಾಮಾನ್ಯವಾಗಿದೆ. ಈ ಡೈಲ್ಡ್ರಿನ್ ತಯಾರಕರು ತಾವು ಕ್ಲುಪ್ತ ಪ್ರಮಾಣದಲ್ಲಿ ಒದಗಿಸುವ ಈ ದ್ರಾವಣದ ಶೇಕಡ 30 ರಷ್ಟು ಭಾಗವನ್ನು ಒಂದು ಗ್ಯಾಲನ್ ನೀರನ್ನು ಬೆರಸಿ ತರುವಾಯ ಆ ದ್ರಾವಣಕ್ಕೆ 80 - 100 ಗ್ಯಾಲನ್ ನೀರನ್ನು ಬೆರಸಿ ಕಟ್ಟಡ ನಿವೇಶನದ ತಳಪಾಯಕ್ಕೆ ಸಿಂಪಡಿಸಬೇಕೆಂದು ಸೂಚಿಸುತ್ತಾರೆ. ಈಗಾಗಲೇ ಕಟ್ಟಿದ ಕಟ್ಟಡಗಳಿಗೆ ದ್ರಾವಣವನ್ನು ಹೊರಗಣ ಗೋಡೆಗಳ ಸಂದುಗಳಲ್ಲಿಯೂ, ನೆಲದಲ್ಲಿರುವ ಗುಳಿಗಳ ಮೂಲಕವೂ ಉಪಯೋಗಿಸಿದರೇ ಉತ್ತಮ. ಈ ದ್ರಾವಣವನ್ನು ಮರದ ಕಿಟಕಿ ಮತ್ತು ಬಾಗಿಲುಗಳ ಮೇಲೆಯೂ, ಅವು ಜೋಡಣೆಯಾಗಿರುವ ಗೋಡೆಗಳ ಅಂಚಿನ ಮೇಲೆಯೂ ಸಿಂಪಡಿಸಬಹುದು.[೬]


'ಗೆದ್ದಲು ಆಪತ್ತು ನಿವಾರಣಾ ಕ್ರಮ : ಕೀಟಾದಿಗಳ ನಿಯಂತ್ರಣಕ್ಕೆ ನಮ್ಮ ಪೂರ್ವಜರು ಅನುಸರಿಸುತ್ತಿದ್ದ ವಿಧಾನ ಕುರಿತು ಕನ್ನಡ ಸಾಹಿತ್ಯ ಚರಿತ್ರೆಯು ವಿವರವಾದ ಮಾಹಿತಿಯೊಂದನ್ನು ನೀಡಿದ್ದು ಅದು ಇಂತಿದೆ.... ಬೀದರಿನಲ್ಲಿ ಮಹಮ್ಮದ ಗವಾನನು " ಮದರಸಾ " ಎಂಬ ಉನ್ನತ ವಿದ್ಯಾಭ್ಯಾಸದ ಕೇಂದ್ರವನ್ನು ನಿರ್ಮಾಣ ಮಾಡಿಸಿದ ಹಾಗೂ ಅದರಲ್ಲಿ 3000 ಹಸ್ತಪ್ರತಿಗಳಿದ್ದ ಸಂಗತಿ ಇತಿಹಾಸ ಪ್ರಸಿದ್ಧ. ಇಲ್ಲಿನ ಹಸ್ತಪ್ರತಿಗಳನ್ನು



೬ ನಿರಂಜನ (ಸಂ.) ಜ್ಞಾನಗಮಗೋತ್ರಿ : ಸಂಪುಟ -೫ , ಪುಟ -೨೨೦.

ಗೆದ್ದಲುಗಳಿಂದ ರಕ್ಷಿಸಲು ಈ ಕಟ್ಟಡದ ಗೋಡೆಗಳ ಪಾಯದ ಮೇಲುಗಡೆ ದಪ್ಪವಾದ ಸೀಸದ ಹಲಗೆಗಳನ್ನು ಇಟ್ಟು ಕಟ್ಟಿಸಿದ ಸಂಗತಿಯು ದೊಡ್ಡ ಪ್ರಮಾಣದಲ್ಲಿ ಸಂಗ್ರಹಿತವಾದ ಹಸಪ್ರತಿಗಳನ್ನು ರಕ್ಷಿಸುವ ವಿಧಾನದ ದೃಷ್ಟಿಯಿಂದ ಗಮನಾರ್ಹವಾಗುತ್ತದೆ.[೭]

ಜಿರಳೆ : (Cockroach) ಇದೊಂದು ಸಮಗ್ರ ಬಾಧೆಯ ಕೀಟವಾಗಿದೆ. ಇದು



ಜಿರಳೆಯ ಜೀವನ ಕ್ರಮ

ಬರೀ ಭಾರತ ನಿವಾಸಿಯಲ್ಲ, ವಿಶ್ವವ್ಯಾಪಿ ಕೀಟವಾಗಿದೆ. ಜಗತ್ತಿನಾದ್ಯಂತದ ಜನರಿಗೆ, ಗ್ರಂಥಗಳಿಗೆ, ಖಾದ್ಯಗಳಿಗೆ ಸಾಮಾನ್ಯವಾಗಿ ಎಲ್ಲ ಪದಾರ್ಥಗಳಿಗೆ ಪೀಡೆಯಾಗಿ ಜನಿಸಿರುವ ಕೀಟವಾಗಿದೆ. ಈ ಕೀಟವು 60^0 ಉಷ್ಣಾಂಶದಲ್ಲೂ 0^0 ಶೀತವಲಯದಲ್ಲೂ ಬದುಕಬಲ್ಲ ಜೀವಿಯಾಗಿದೆ. ಬೆಳಕು ಮತ್ತು ಜನಸಂದಣಿಯಿಂದ ದೂರವಿರುವ ಈ ಕೀಟ ಕತ್ತಲೆಯ ವಾಸಿಯಾಗಿದೆ. ಗೋಡೆ, ಕಂಬ, ಬಿರುಕುಗಳಲ್ಲಿ ವಾಸಿಸುವ ಈ ಕೀಟವು ರಾತ್ರಿಯಾದಂತೆ ತನ್ನ ರಾಜ್ಯಭಾರ ಪ್ರಾರಂಭ ಮಾಡುತ್ತದೆ. ಅಡುಗೆ ಮನೆಯ ಮುಸುರೆ, ಉಗ್ರಾಣ ಕೇಂದ್ರ, ಗ್ರಂಥಾಲಯ, ಕಿರಾಣಿ ಅಂಗಡಿಯ ಕತ್ತಲೆಯ ಭಾಗಗಳು ಜಿರಳೆಯ ಮೂಲ ಸ್ಥಾನಗಳಾಗಿವೆ.

ಇವು ಹಸ್ತಪ್ರತಿಗಳಿಗೂ ಮಾರಕವಾಗಿದ್ದು ತಾಳೆಗರಿಯ, ಕಾಗದ ಪ್ರತಿಗಳನ್ನು ತಿಂದು. ಈ ಜಿರಳೆಗಳು ಹಾಳು ಮಾಡಬಲ್ಲವು ಈ ಜಿರಳೆಗಳಿಂದ ಗ್ರಂಥಗಳನ್ನು ನಮ್ಮ ಪೂರ್ವಿಕರು ಹೇಗೆ ಸಂರಕ್ಷಿಸುತ್ತಿದ್ದರು ಎಂಬುದನ್ನು ಪ್ರೊ॥ ಎಂ.ವಿ.ಸೀ.ಯವರ ಮಾತುಗಳಲ್ಲಿ ಗಮನಿಸೋಣ... ನಮ್ಮ ಪೂರ್ವಿಕರ ಗ್ರಂಥ ಭಕ್ತಿ ಮೂಢಭಕ್ತಿಯಾಗಿರಲಿಲ್ಲ ಬಹಳ ಅರ್ಥಪೂರ್ಣವಾಗಿದ್ದು ಅತ್ಯಂತ ಜಾಗರೂಕವಾದ ಸಂರಕ್ಷಣೆಯಲ್ಲಿ ವ್ಯಕ್ತಪಡುತ್ತಿತ್ತು ತಾಳೆಗರಿಯ ಕಟ್ಟುಗಳ ಗರಿಗಳು ಮುರಿದು ಹೋಗದಂತೆ ಎರಡು ಕಡೆಯಾ ಮರದ ಫಲಕಗಳು ರಕ್ಷಣೆ ನೀಡುತ್ತಿದ್ದವು, ಗರಿಗಳಿಗೂ ಫಲಕಗಳಿಗೂ ಒಂದೇ ಕಡೆ ಎರಡು ರಂಧ್ರಗಳಿದ್ದು ಈ ರಂಧ್ರಗಳ ಮೂಲಕ ದಪ್ಪದಾರಗಳನ್ನು ಉಪಯೋಗಿಸಿ, ಗರಿಗಳನ್ನು ಮುಗುಚಿ ಮುಗುಚಿ ಓದುವುದಕ್ಕೂ ಗ್ರಂಥವನ್ನು ಕಟ್ಟುವುದಕ್ಕೂ ಅವಕಾಶ ಕಲ್ಪಿಸಿದ್ದರು. ಜಿರಲೆಗಳು, ಇಲಿಗಳು ಪ್ರವೇಶ ಮಾಡದಂತಹ, ಸಂದು ಬಿಡದ ಮುಚ್ಚಳ ಇರುವ ಮರದ ಪೇಟಾರಿಗಳಲ್ಲಿ ಗ್ರಂಥಗಳನ್ನು ಓರಣವಾಗಿ ಇಡುತ್ತಿದ್ದರು. ಪ್ರತಿಯೊಂದು ಗ್ರಂಥದ ಕಟ್ಟನ್ನು ಕೆಂಪು ಇಲ್ಲವೆ ಹಳದಿ ಬಣ್ಣದ ರೇಶಿಮೆ ವಸ್ತ್ರಗಳಿಂದ ಸುತ್ತಿಡುತ್ತಿದ್ದರು. ಈ ಬಣ್ಣಗಳ ಬಟ್ಟೆ ನುಸಿ ಹುಳು

---

೭. ಬಿ.ಎಸ್. ಸಣ್ಣಯ್ಯ : ಹಸ್ತಪ್ರತಿ ಶಾಸ್ತ್ರಪರಿಚಯ , ಪುಟ -58.

ಮುಂತಾದ ಕ್ರಿಮಿ ಕೀಟಗಳನ್ನು ದೂರವಿಡುತ್ತದೆ. ಎಂದು ಅನುಭವದಿಂದ ಕಂಡುಕೊಂಡಿದ್ದರು. ಬಟ್ಟೆಯ ಒಳಗಡೆ ಕಟ್ಟುಗ್ಗಳ ಸುತ್ತಲೂ ಒಣಗಿದ ಹೊಂಗೆಯ ಮತ್ತು ಬೇವಿನ ಎಲೆಯ ಪುಡಿಯನ್ನು ಉದರಿಸುತ್ತಿದ್ದರು ಪ್ರತಿವರ್ಷವೂ ಸರಸ್ವತಿ ಹಬ್ಬದ ದಿವಸ ಓಲೆಯ ಗರಿಯ ಕಟ್ಟುಗಳನ್ನು ಪೇಠಾರಿಯಿಂದ ಹೊರಕೆ ತೆಗೆದು ಪ್ರತಿಗರಿಯನ್ನೂ ಆಗತಾನೆ ಹುಟ್ಟಿದ ಮಗುವನ್ನು ಎತ್ತಿಕೊಳ್ಳುವಂತೆ ಎಚ್ಚರಿಕೆಯಿಂದ ಸರಿಸಿ, ಶುಭ್ರವಾದ, ಮೃದುವಾದ, ಬಟ್ಟೆಯಿಂದಲೋ, ಕೂರ್ಚದಿಂದಲೋ ಒರೆಸಿ ಕ್ರಿಮಿನಾಶಕ ತೈಲ ಲೇಪನಮಾಡಿ ಕಟ್ಟುಗಳನ್ನು ಯಥಾಸ್ಥಾನದಲ್ಲಿರಿಸಿ, ಗ್ರಂಥಸ್ಥ ಸರಸ್ವತಿಯನ್ನು ಯಥಾವಿಧಿಯಾಗಿ ಧೂಪ ದೀಪ ನೈವೇದ್ಯಾ ನಿರಾಜನಗಳಿಂದ ಪೂಜೆ ಮಾಡುತ್ತಿದ್ದರು.[೮]

ಜಿರಲೆಯು ಕಂಟಕ ಚರ್ಮಿಗಳ (Arthropoda) ವರ್ಗದ ಬ್ಲಾಟಾರಿಯಾ (Blattaria) ಗುಂಪಿನ ಜಾತಿಗೆ ಸೇರಿರುವ ಕೀಟವಾಗಿದೆ. ಸಾಮಾನ್ಯವಾಗಿ ಮನುಷ್ಯ ನೊಂದಿಗೆ ವಾಸಿಸುತ್ತದೆ. ಸ್ವಭಾವ ದಿಂದ ಇದು ನಿಶಾಚರಿ (Nocturnal) ಆಗಿರುತ್ತದೆ. ರಾತ್ರಿಯ ಕತ್ತಲೆಯೊಂದಿಗೆ ನಿಶ್ಶಬ್ದತೆಯ ಸಮಯದಲ್ಲಿ ಆಹಾರದ ಅನ್ವೇಷಣೆಗಾಗಿ ತನ್ನ ಅಡಗುದಾಣಗಳಿಂದ ಈ ಜಿರಲೆಗಳು ಹೊರಬರುತ್ತವೆ. ಇದು ಸಸ್ಯ, ಪ್ರಾಣಿ : ಪ್ರಾಣಿಜನ್ಯ ಮತ್ತು ಅಜೈವಿಕ ವಸ್ತುಗಳನ್ನು ತಿನ್ನುವ ಬಹು ಭಕ್ಷಕ (Omnivorous) ಜರ್ಮನ್ ಪೆರಿಪ್ಲೇನೀಟಾ (Periplaneta) ಕಪ್ಪು ಜಿರಳೆ (Biltta Orientalis) ಜರ್ಮನ್ ಜಿರಳೆ (Blatella) ಎಂದು ಮೂರು ವಿದದಲ್ಲಿ ಗಂಡು ಜಿರಳೆಗಳಿದ್ದು ಅವುಗಳದ್ದೇ ಗುಂಪುಗಳು ಹೆಣ್ಣು ಜಿರಳೆಗಳು ಇರುತ್ತವೆ. ಜಿರಳೆಗಳ ದೇಹರಚನೆಯನ್ನು ಶಿರ (Head) ಎದೆ (Thorax) ಮತ್ತು ಉದರ (Abdomen) ಗಳೆಂದು ಮೂರು ಭಾಗಗಳಿರುತ್ತವೆ. ವಯಸ್ಕ ಜಿರಳೆಗಳಿಗೆ ಸಾಮಾನ್ಯವಾಗಿ ತಲೆಯ ಭಾಗವೇ ಪ್ರತ್ಯೇಕವಾಗಿ ಇರುವುದಿಲ್ಲ. ಎದೆ, ತಲೆಯೊಂದಿಗೆ ಹೊಯ್ದಾಡುತ್ತಿರುತ್ತದೆ. ತಲೆಯೊಳಗೆ ಉದ್ದವಾದ ಹಲವು ಜೋಡಣೆಗಳ ಸ್ಪರ್ಶ ಜ್ಞಾನಾಂಗ (Antenna) ಗಳಿರುತ್ತವೆ. ಅದೇ ರೀತಿ ಸಂಯುಕ್ತವಾದ ಕಣ್ಣುಗಳೂ ಇರುತ್ತವೆ. ಇದರ ಕೆಳಗಡೆಯ ಲಂಭಾಕೃತಿಯ ಬಾಯಿ ಇರುತ್ತದೆ. ಬಾಯಿಯ ರಚನೆಯಲ್ಲಿ ಕಚ್ಚುವುದಕ್ಕಾಗಿ ಮತ್ತು ನುರಿಸುವುದಕ್ಕಾಗಿ ಹಲ್ಲುಗಳಿರುವಂತೆ ಒಂದು ಜೊತೆಯಾದ ಪ್ರಬಲ ದವಡೆ (Mandibles)ಗಳಿರುತ್ತವೆ. ಮೆಲ್ದವಡೆ (Maxillae)ಯಲ್ಲೂ ಹಲ್ಲುಗಳಂತಹ ರಚನೆಗಳಿರುತ್ತವೆ.

ಬೆಳವಣಿಗೆಯ ರೂಪಾಂತರ (Metamorphosis) :

ಬಾಲ್ಯಾವಸ್ಥೆಯಲ್ಲಿರುವ ಜಿರಳೆಯ ಮರಿಗಳು (Nymphs) ಹೋಲಿಕೆಯಲ್ಲಿ ಆದರ ಪಾಲಕರಂತೆ ಇರುತ್ತವೆ. ಅವುಗಳ ದೇಹ ರಚನೆ, ತಿನ್ನುವ ಹವ್ಯಾಸಗಳು ಕೂಡಾ ಪೋಷಕರಂತೆ ಇರುತ್ತವೆ. ದೇಹದ ಬಣ್ಣದಲ್ಲಿ ತಿಳಿಕಂದು ಇದ್ದು ಅಳತೆಯಲ್ಲಿ ಮರಿಗಳು ಚಿಕ್ಕವಾಗಿ ಅನಅನುಭವಿಯಾಗಿಯೇ ಇರುತ್ತವೆ. ಪೋಷಣೆಯಿಂದ ಜಿರಳೆ ಮರಿಗಳು ಬೆಳೆದಂತೆ ಅವುಗಳ ದೇಹದ


---

೮. ಡಾ॥ ಸಿದ್ಧಯ್ಯ ಪುರಾಣಿಕ (ಸಂ.) : ಮಣಿಹ , ಪ್ರೊ. ಎಂ.ವಿ. ಸೀತಾರಾಮಯ್ಯ, ಪುಟ - ೨೧೯. ೨೨೦.

ಹೊರ ರಚನೆ ಬದಲಾಗುತ್ತಾ ಸಾಗುತ್ತದೆ. ಕಿರುವಯಸ್ಸಿನಿಂದ ಹಿಂದಾಗುತ್ತಾ ಸಾಗಿದಂತೆ ಜಿರಳೆಯ ಮೇಲೆ ಪೊರೆಕಟ್ಟಿಕೊಳ್ಳುತ್ತದೆ. (Ecdysis) ಈ ಪೊ'ರೆಕಳೆದಂತೆ ಕಿರಿಯ ಜಿರಳೆ ಯುವಾವಸ್ಥೆಯನ್ನು ಸೇರುತ್ತದೆ.

ವಂಶಾಭಿವೃದ್ಧಿ (Copulation) :

ಸಾಮಾನ್ಯವಾಗಿ ಜಿರಳೆಗಳು ಪ್ರತಿ ವರ್ಷದ ಮಾರ್ಚ ತಿಂಗಳಿನಿಂದ ಸೆಪ್ಟೆಂಬರ್ ಮಾಸದ ಅವಧಿಯಲ್ಲಿ ಗಂಡು - ಹೆಣ್ಣು ಸೇರಿ ವಂಶಾಭಿವೃದ್ಧಿ ಕಾರ್ಯದಲ್ಲಿ ನಿರತವಾಗುತ್ತವೆ. ಗರ್ಭಧರಿಸಿದ ಹೆಣ್ಣು ಹದಿನಾರು ಫಲಿತ ತತ್ತಿಗಳಿರುವ ಅಂಡಕೋಶ (Ootheca)ವನ್ನು ಕತ್ತಲೆಯ, ಒಣ, ಸುರಕ್ಷಿತ ಪ್ರದೇಶದಲ್ಲಿ ಹಾಕುತ್ತದೆ. ಇಂತಹ ಕೋಶಗಳನ್ನು ತನ್ನ ಜೀವಿತಾವಧಿ ಎರಡು ವರ್ಷಗಳಲ್ಲಿ ಹದಿನೈದು ರಿಂದ ನಲವತ್ತು ಕೋಶಗಳನ್ನು ಹಾಕುತ್ತವೆ. ಐದರಿಂದ ಹದಿಮೂರು ವಾರಗಳಲ್ಲಿ ಅಂಡಕೋಶವನ್ನು ಒಡೆದು ಜಿರಳೆ ಮರಿಗಳು ಹೊರಬರುತ್ತವೆ. ಆ ಮರಿಗಳು ಆಕಾರದಲ್ಲಿ ಚಿಕ್ಕ ಆಳತೆ ಹೊರತು ಪಡಿಸಿದರೆ ತಮ್ಮ ಪಾಲಕರನ್ನೇ ಹೋಲುತ್ತಿರುತ್ತವೆ.[೯]



ಬೆಳ್ಳಿ ಮೀನು

ಜಿರಳೆಯ ನಿವಾರಣೋಪಾಯಕ್ಕಾಗಿ ಬಿ.ಎಸ್.ಸಣ್ಣಯ್ಯನವರು ತಮ್ಮ ವಿಚಾರವನ್ನು ಈ ರಿತಿಯಾಗಿ ವಿವರಿಸುತ್ತಾರೆ... ಪ್ರಪಂಚದ ಎಲ್ಲ ಕಡೆಯೂ ಜಿರಲೆಗಳ ಕಾಟವನ್ನು ಡೈಲ್ಡಿನ್‌ನಿಂದ ತಡಗಟ್ಟಬಹುದು. ಕೆಲವು ಕೀಟಗಳಿಗೆ ಡೈಲ್ಡಿನ್‌ಗೆ ಬದಲಾಗಿ ಡಿ.ಡಿ.ಟಿ. (Dicloro - Diphenyl Tri Chloro Ethane) ಬೆಂಜೀನ್ ಹೆಕ್ಸಾಕ್ಲೋರೈಡ್, ಆಲ್ಡ್ರಿನ್ ಮತ್ತು ಇತೀಚಿನವುಗಳಾದ ಎಂಡ್ರಿನ್ ಐಸೊಡ್ರಿನ್ ಮೊದಲಾದ ಕ್ರಿಮಿನಾಶಗಳನ್ನು ಉಪಯೋಗಿಸುವುದು ಅವಶ್ಯಕ. ಹೀಗೆ ಅವುಗಳನ್ನು ಉಪಯೋಗಿಸುವಾಗ ಕೀಟಗಳು ಬರಬಹುದಾದ ಕಡೆಗಳಲ್ಲಿ ಮತ್ತು ಅವು ಅಡಗಿಕೊಳ್ಳಬಹುದಾದ ಸ್ಥಳಗಳಲ್ಲಿ ಎಂದರೆ ನೆಲ ಮತ್ತು ಗೋಡೆಯ ಬಿರುಕುಗಳಲ್ಲಿ, ಸಂದಗೊಂದುಗಳಲ್ಲಿ, ಕಾಪಾಟುಗಳ ಕೆಳಭಾಗ, ಕಿಟಕಿಯ, ಅಂಚು, ಪಟ್ಟಿಗಳು ಮೊದಲಾದೆಡೆಗಲಲ್ಲಿ ಕುಂಚದಿಂದ ಸವರಬೇಕು. ಇಲ್ಲವೆ ಪಿಚಕಾರಿಗಳಿಂದ ಸಿಂಪಡಿಸಬೇಕು. ಹೀಗೆ ಮಾಡುವುದರಿಂದ ಜಿರಲೆ ಬೆಳ್ಳಿಮೀನು ಗ್ರಂಥಹುಳುಗಳ ಮೊದಲಾದವನ್ನು ತಡೆಗಟ್ಟಬಹುದು.[೧೦]

ಬೆಳ್ಳಿ ಮೀನು : (Silver fish)

ನಸು ಕಪ್ಪು ಬಿಳಿ ಮಿಶ್ರಿತ ಬಣ್ಣದ ಈ ಕೀಟ ಬೆಳ್ಳಿಯಂತೆ ಕಾಣಿಸುತ್ತದೆ. ಕ್ಯಾರೆಟ್ ಆಕೃತಿಯ ದೇಹ ರಚನೆ ಹೊಂದಿರುವ ಈ ಕೀಟ ಕಾಗದದ ಹಸಪ್ರತಿ ಮತ್ತು ತೇವಾಂಶದೊಂದಿಗೆ ಕತ್ತಲೆಯಲ್ಲಿರುವ ತಾಳೆಯಗರಿಯ ಹಸಪ್ರತಿಗಳನ್ನೂ ಕಾಗದದ ನಾಶಪಡಿಸಬಲ್ಲದು, ನಿಶಾಚರಿಯಾದ

೯. Nair, Achar, Hegde, Prabhu : A text book of Biology : Part- I, Page No.

ಈ ಕೀಟವು ಕಾಗದ ಮತ್ತು ತಾಳೆಗರಿ ಪ್ರತಿಗಳ ಪೋಷಣೆ, ಪಾಲನೆ ಆರೈಕೆಯಲ್ಲಿ ನಿರ್ಲಕ್ಷತೆ ತೋರಿದರೆ ಸಮಗ್ರ ಭಂಡಾರವನ್ನೇ ಈ ಕೀಟ ಕುಟುಂಬ, ಸಮೂಹವು ಧ್ವಂಸಗೊಳಿ ಬಲ್ಲವು.

ಪುಸ್ತಕದೊಂದಿಗೆ ಇದ್ದು ಪುಸ್ತಕದ ಜ್ಞಾನಪಡೆಯದೆ ; ಹಸುವಿನ ಕೆಚ್ಚಲಿನಲ್ಲಿ ಇದ್ದು ಹಾಲುಕುಡಿಯದೇ ಬದುಕುವ ಉಣ್ಣೆಯಂತೆ ಇರುವ ಇದೊಂದು ಗ್ರಂಥ ವಿಧ್ವಂಸಕ ಕೀಟವಾಗಿದೆ. ಒಂದು ಸೆಂಟಿಮೀಟರ್ ಉದ್ದ ಎರಡು ಮಿಲಿಮೀಟರ್‌ನಷ್ಟು ಅಗಲವಾಗಿರಬಹುದಾದ ಈ ಚಿಕ್ಕಹುಳು ರಂಧ್ರಕೊರೆದು, ಹೊಲಿಗೆಹಾಳುಗೆಡವಿ ಗ್ರಂಥದ ಅಸ್ತಿತ್ವನ್ನೇ ಹಾಳಮಾಡಬಹುದಾದ ಚಿಕ್ಕ ಕೀಟ. ನಸುಬೂದಿ, ಬಿಳಿಮಿಶ್ರಿತ ಬೆಳ್ಳಿಯಂತೆ ಇರುವ ಈ ಕೀಟಕ್ಕೆ ಮುಂದೆ ಮತ್ತು ಹಿಂಭಾಗಗಳಲ್ಲಿ ಎರಡೆರಡು ಸ್ಪರ್ಶಕ ಜ್ಞಾನಾದಾಕರಗಳಿವೆ. ನೂರಾರು ಮೊಟ್ಟೆಗಳನ್ನಿಡುವ ಈ ಕೀಟ ಗ್ರಂಥದಲ್ಲೇ ಸಂಸಾರಹೂಡಿ ಬಾಳಬಲ್ಲದು. ಕೀಟ ಪೀಡಿತ ಹಸ್ತಪ್ರತಿಯನ್ನಾಗಲಿ, ಗ್ರಂಥವನ್ನಾಗಲಿ ಬೇಗ ಗುರುತಿಸಿ ಸರಿಯಾದ ಆರೈಕೆ, ಚಿಕಿತ್ಸೆಯನ್ನು ಕೈಗೊಳ್ಳದಿದ್ದರೇ ಈ ಕೀಟದ ನಯಾ-ನಾಜೂಕಿನ ಪ್ರಭಾವದಿಂದ ಗ್ರಂಥವೇ ಹಾಳಾಗಬಲ್ಲದು. ಒಂದು ಗ್ರಂಥ ಹಾಳಾದನಂತರ ಪಕ್ಕದ ಗ್ರಂಥದತ್ತ ಮುಂದುವರಿಸಿ ಗ್ರಂಥನಾಶದಕಾರ್ಯವನ್ನು ಮುಂದುವರೆಸಿಕೊಂಡು ಹೋಗಬಲ್ಲದು.

ಬೆಳ್ಳಿಮೀನು ವಂಶಾವಳಿ :

ಬೆಳ್ಳಿಯ ಮೀನು ತಳಿಗಳನ್ನು ಟೆನೋಲಿಪಿಸನ್, ಅರ್ಬನ್ ಸಿಲ್ವರ್‌ಫಿಶ್, ಲೆಪ್ಸಿನಾ ಸಖಾರಿನಾ ಮತ್ತು ಬೆಳ್ಳಿಮೀನುಗಳೆಂದು ವರ್ಗೀಕರಿಸಲಾಗಿದೆ.

1. Ctenolepsina Urbana, Urbana Silver Fish
2. Lepisna saccharina, silverfish

ಬೆಳ್ಳಿಮೀನು ಮುಖ್ಯವಾಗಿ ಕಾಗದ ಹಾಗೂ ಕಾಗದದ ಉತ್ಪನ್ನಗಳನ್ನು ಆಕ್ರಮಿಸುವ ಕೀಟ. ವಿಶೇಷವಾಗಿ ಗಂಜಿ, ಪಿಷ್ಟ Dextrin, Casein ಗಳ ಪ್ರಮಾಣ ಅಧಿಕವಾಗಿರುವ ಕಾಗದದ ಉತ್ಪನ್ನಗಳು ಸುಲಭವಾಗಿ ಅವುಗಳ ದಾಳಿಗೆ ತುತ್ತಾಗುವವು. ಅನೇಕ ಪ್ರಯೋಗಗಳಿಂದ ಬೆಳ್ಳಿಮೀನು ಪರಿಷ್ಕೃತ ಕಾಗದ. ಕೃತಕ ರೇಷ್ಮೆ, ಕಾಟನ್ ಮುಂತಾದ ವಸ್ತುಗಳನ್ನು ಆಹಾರವಾಗಿ ಸ್ವೀಕರಿಸುವುದು ಎಂದು ತಿಳಿದುಬಂದಿದೆ. ಅವುಗಳು Carbohydrate ಹಾಗೂ ಘಟಕ ಭಿಜ್ಜ ಗಳಿಂದ ಕೂಡಿದ ವಸ್ತುಗಳನ್ನು ಮುಖ್ಯವಾಗಿ ಆಧರಿಸಿವೆ. ಅದರಲ್ಲೂ ಕಾಗದ ಹಸ್ತಪ್ರತಿಗಳಲ್ಲಿ ಸಮೃದ್ಧವಾಗಿರುವಂತೆ ಚರ್ಮ, ಸತ್ತ ಹಾಗೂ ಗಾಯಗೊಂಡ ಜೀವಿಗಳು ಅವುಗಳಿಗೆ ಪ್ರೀತಿಯ ಭೋಜನದ ತಾಣಗಳಾಗಿವೆ. ಆಸ್ಟ್ರೇಲಿಯಾ, ಜಪಾನ, ಯುರೋಪ, ಏಶಿಯಾ, ಅಮೇರಿಕಾ ಖಂಡಗಳ ಕೆಲ ಭಾಗಗಳಲ್ಲಿ ಹರಡಿಕೊಂಡಿರುವುದನ್ನು ಕಾಣಬಹುದು.

---


೧೦. ಬಿ.ಎಸ್. ಸಣ್ಣಯ್ಯ : ಹಸ್ತಪ್ರತಿ ಶಾಸ್ತ್ರಪರಿಚಯ, ಪುಟ -೬೦.

ದಾಳಿಯ ಕ್ರಮ :

ಬೆಳ್ಳಿಮೀನು ನಿಧಾನವಾಗಿ ತನ್ನ ದಾಳಿಯನ್ನು ಪ್ರಾರಂಭಿಸುತ್ತದೆ. ಕೆಲವು ಸಲ ಕಾಗದ ಹಾಗೂ ಕಾಗದದ ವಸ್ತುಗಳಿಗೆ ಅವುಗಳಿಂದ ಪೂರ್ಣ ಪ್ರಮಾಣದ ಹಾನಿಯಾದ ಮೇಲೆಯೇ ಓದುಗರಿಗೆ ಅದರ ಇರುವಿನ, ಗ್ರಂಥ ಧ್ವಂಸದ ಅರಿವಾಗುತ್ತದೆ. ಬೆಳ್ಳಿಮೀನಿನ ದಾಳಿಗೆ ತುತ್ತಾದ ಕಾಗದ ಪುಸ್ತಕದ ಅಂಚುಗಳು ಅಂಕುಡೊಂಕಾಗಿ ಹಲ್ಲುಗಳಿಂದ ಕತ್ತರಿಸಿದಂತಾಗಿರುತ್ತವೆ. ಕೀಟಗಳು ಹೆಚ್ಚಿನ ಪ್ರಮಾಣದಲ್ಲಿದ್ದರೆ, ಹಲವಾರು ರಂಧ್ರಗಳ ರೂಪದಲ್ಲಿ ಬಹಳಷ್ಟು ಪುಟಗಳನ್ನು ಆಳದವರೆಗೂ ನಾಶಪಡಿಸಿರುವುದನ್ನು ಕಾಣಬಹುದು. ಬೆಳ್ಳಿಮೀನಿನ ವಿಸರ್ಜಿತ ಮಲ ಚಿಕ್ಕ ಕಪ್ಪು ಚುಕ್ಕೆಗಳಂತೆ ಬಿಡಿ ಬಿಡಿಯಾಗಿ ಕಾಣುತ್ತವೆ.

ಮೊಟ್ಟೆ:

ಬೆಳ್ಳಿ ಮೀನಿನ ಮೊಟ್ಟೆಯ ಆಕಾರ ಉದ್ದದ ಅಂಡಾಕೃತಿ ಹೊಂದಿರುತ್ತದೆ. ಅವುಗಳು ಬಿಳಿ ಅಥವಾ ತಿಳಿ ಹಳದಿ ಬಣ್ಣದ್ದಾಗಿರುತ್ತವೆ. ಪೂರ್ಣ ಪ್ರಮಾಣದಲ್ಲಿ ಬೆಳೆದಿರುವ ಬೆಳ್ಳಿಮೀನು ಪ್ರತಿ ಎರಡು ವರ್ಷಗಳಿಗೆ ಒಮ್ಮೆಯಂತೆ ಸಂತಾನೋತ್ಪತ್ತಿ ಕಾರ್ಯದಲ್ಲಿ ತೊಡಗುತ್ತವೆ. ಒಂದು ಹೆಣ್ಣು ಬೆಳ್ಳಿ ಮೀನು ತನ್ನ ಜೀವಿತಾವಧಿಯಲ್ಲಿ ಸಾವಿರಾರು ಮೊಟ್ಟೆಗಳನ್ನಿಡುವುದರ ಜೊತೆಗೆ ಪ್ರತಿ ಸಾರಿ ಪೊರೆ ಕಳಚಿ ಬೆಳವಣಿಗೆ ಹೊಂದುತ್ತದೆ. ವಯಸ್ಕ ಬೆಳ್ಳಿಮೀನು ಸುಮಾರು 12-19 ಎಂ.ಎಂ. ಉದ್ದವಾಗಿರುತ್ತದೆ.



ಚಲನವಲನ : ಬೆಳ್ಳಿ ಮೀನು ದಿನದ ವೇಳೆಯಲ್ಲಿ ಅವಿತುಕೊಂಡಿರುತ್ತದೆ. ಅವುಗಳು ಕತ್ತಲೆಯ ಬಿರುಕು, ಸಂದಿ ಗೊಂದಿಗಳನ್ನು ತಮ್ಮ ವಿಶ್ರಾಂತಿಗಾಗಿ ಅಥವಾ ರಕ್ಷಣೆಗಾಗಿ ಆಯ್ಕೆ ಮಾಡುತ್ತವೆ. ಆಹಾರಕ್ಕಾಗಿ ಸ್ವಲ್ಪ ದೂರಗಳನ್ನು ಅವು ಕ್ರಮಿಸಬಲ್ಲವು ಆದರೆ ಒಮ್ಮೆ ಸಾಕಾಗುವಷ್ಟು ಆಹಾರ ದೊರಕಿದಾಗ ಅವು ಅದರ ಹತ್ತಿರದಲ್ಲಿ ಬೀಡು ಬೀಡುತ್ತವೆ. ಅವುಗಳು ಸಾಕಷ್ಟು ತೇವಾಂಶ ವಿರುವ ಜಾಗಗಳನ್ನು ತಮ್ಮ ನೆಲೆಗಳನ್ನಾಗಿ ಆರಿಸಿಕೊಳ್ಳುತ್ತವೆ.

ನಿರ್ವಾಹಣೆ : ಬೆಳ್ಳಿಮೀನು ದಾಳಿಯಿಂದ ಪರಿಹಾರ ಕಾಣಲು ಮೊದಲು ಮಳೆಯಿರದ ಮಾರ್ಚ್, ಏಪ್ರಿಲ್ ಮಾಸದ ಕಡುಬಿಸಿಲಿಗೆ ಹಸ್ತಪ್ರತಿಗಳನ್ನು ಕ್ರಮವಾಗಿ ಶುಚಿಗೊಳಿಸಿ ಹರಡಬೇಕು. ಸುರಕ್ಷತೆಯ ಕಡೆಗೆ ಗಮನವಿರಬೇಕು. ನಂತರ ಭದ್ರವಾದ ಬಿರುಕಿರದ ಪೆಟ್ಟಿಗೆಯಲ್ಲಿ ಇರಿಸಿ ಭದ್ರಗೊಳಿಸಬೇಕು.

2) ಪೆಟ್ಟಿಗೆಯ ಬಿರಕು, ಸಂದುಗಳನ್ನು ಮೇಣಗಳಿಂದ ಮುಚ್ಚಬೇಕು.

--- John P. Friel : Edt. Dorlands Illustrated Medical Dictionary.

3) ಕೀಟನಾಶಕಗಳ ಬಳಕೆಯಿಂದ ಬೆಳ್ಳಿ ಮೀನಿನ ದಾಳಿಯನ್ನು ಸಂಪೂರ್ಣವಾಗಿ ನಿಯಂತ್ರಿಸಬಹುದು.

4) ಲಾ-ವಂಚ, ಗಜನಿಂಬೆಯಂತಹ ತೀಕ್ಷ್ಣ ಹುಳಿರಸದ ರಾಸಾಯಿನಿಕಗಳಿಂದ ಇವುಗಳನ್ನು ನಾಶಪಡಿಸಲಾಗುತ್ತದೆ.[೧೧]

ಬೂಷ್ಟು: (Fungus) ಪತ್ರಹರಿತ್ತು ಇಲ್ಲದ ಸಸ್ಯ. ಇದನ್ನು ಶಿಲೀಂದ್ರ (Fungus) ಎಂದುಕೂಡ ಹೇಳುತ್ತಾರೆ. ಇದ್ದಕ್ಕಿದ್ದಂತೆ ಸ್ಪಂಜಿನಂತೆ ಥಟ್ಟನೆ ಬೆಳೆದು ಬರುವ ಒಂದು ವಸ್ತು ಶಿಲೀಂಧ್ರ ಒಂದು ಪರೋಪಜೀವಿ. ಅದು ಕೊಳೆತ ಜೈವಿಕ ಪದಾರ್ಥದಿಂದ ಬೆಳೆಯುವ ಸಸ್ಯ. ಸಾಮಾನ್ಯವಾಗಿ (Mucor) ಮ್ಯೂಕರ Penicillinum, Rhizopus & Aspergillus ಎಂಬ ಶಿಲೀಂದ್ರಗಳನ್ನು ಕಾಣಬಹುದು.[೧೨] (A Chlorophyllous Thallophytes) ಇದೊಂದು ಸಜೀವ ಅಥವಾ ನಿರ್ಜಿವ ವಸ್ತುಗಳನ್ನು ಆಶ್ರಯಿಸಿ ಬೆಳೆಯುವಂತಹ ಪರಾನ್ನ ಜೀವಿ. ಇದು ಗಾಳಿಯಮುಖಾಂತರ ತೇವಾಂಶವಿರುವ ಪ್ರದೇಶವನ್ನು ಆಶ್ರಯಿಸಿ ಆ ಪ್ರದೇಶವನ್ನು ಆಕ್ರಮಿಸಿಕೊಳ್ಳುವ ಈ ಸೂಕ್ಷ್ಮ ಪರಾವಲಂಬಿ (Parasite) ಯು ಕಾಗದ, ತಾಳೆಗರಿ, ಭೂರ್ಜಪತ್ರಗಳನ್ನು ಆಶ್ರಯಸಿ ಹಾಳುಮಾಡಬಲ್ಲವು. ವಂಶಾಭಿವೃದ್ಧಿಗಾಗಿ ಗಾಳಿಯಲ್ಲಿ ಹರಡಿಕೊಳ್ಳುವ ಸೂಕ್ಷ್ಮಶರೀರದ ತಂತುಗಳನ್ನು ನಾವು ಬರಿಗಣ್ಣಿನಿಂದ ಗುರುತಿಸಲಾರೆವು. ಬ್ರೆಡ್ಡು ಆಹಾರ, ಮೊಸರು,ಗಂಜಿಯುಕ್ತ (Starch) ಬಟ್ಟೆಗಳ ಮೇಲೂ ಇದು ಪ್ರಭಾವಕಾರಿ ಪರಿಣಾಮ ಬೀರಬಲ್ಲುದು.

ಬೂಷ್ಟು ನಿವಾರಣೆಯ ಕ್ರಮ : ಬೂಷ್ಟುನಿವಾರಣೆಯ ಕ್ರಮದ ಬಗೆಗೆ ಬಿ.ಎಸ್.ಸಣ್ಣಯ್ಯನವರು ಈ ರೀತಿ ಹೇಳುತ್ತಾರೆ.... ಇದು ಹೆಚ್ಚು ತೇವಾಂಶದಿಂದ ಬರುವುದಾದುರಿಂದ ಹವಾನಿಯಂತ್ರಣ ಉತ್ತಮವಿಧಾನವೆಂದು ಪರಿಗಣಿಸಲಾಗಿದೆ. ಹವಾನಿಯಂತ್ರಣ ಇಲ್ಲದೆಡೆಗಳಲ್ಲಿ ಚೆನ್ನಾಗಿ ಗಾಳಿ, ಬೆಳಕು ಬರುವಂತೆ ವ್ಯವಸ್ಥೆಮಾಡಬೇಕು. ಗ್ರಂಥಗಳಿರುವ ಕಪಾಟುಗಳಿಗೆ ಅರಗಿನಿಂದ ತಯಾರಿಸಿದವುನ್ನೂ ಮರಗಣ್ಣೆಯನ್ನು ಸಿಂಪಡಿಸುವುದು ಉತ್ತಮ ಇದು ಬೂಷ್ಟ ಬರದಂತೆ ಮಾಡುವುದಲ್ಲದೇ ಹರಡುವುದನ್ನು ತಡೆಗಟ್ಟುತ್ತದೆ. ಹಸ್ತಪ್ರತಿಗಳನ್ನು ಕಪ್ಪುಗಾಢ ನೀಲಿ, ಮತ್ತು ಕೆಂಪು ಬಟ್ಟೆಗಳಿಂದ ಕಟ್ಟಿಟ್ಟರೆ ಬೂಷ್ಟು ಸುಲಭವಾಗಿ ಬರುವುದಿಲ್ಲ; ಹಸುರು, ಹಳದಿ, ಬಟ್ಟೆಗಳಿಗೆ ಈ ನಿರೋಧಕಶಕ್ತಿ ಇಲ್ಲವೆಂದು ತಿಳಿದು ಬರುತ್ತದೆ.[೧೩]

ಗ್ರಂಥ ಹುಳು :

(Book Warm)ಇದೂ ಒಂದು ಪುಸ್ತಕ ದೊಳಗಿನ ವಿಷಯಕ್ಕಿಂತ ಕಾಗದ ಪ್ರೇಮಿಯಾದ ಹುಳು. ಆದರೆ ಪುಸ್ತಕದ ಜ್ಞಾನವನ್ನು ಪಡೆಯದೆ ಪುಸ್ತಕದ ಕಾಗದ, ರಟ್ಟು ಅರಿವೆಗಳನ್ನು ತಿಂದು ಬದುಕುವ ಕೀಟ.

---

೧೧. Julian R. Yates Extension Urban Entomoligist, College of Tropical Agriculture and Human Resources University of Hawai at Manoa.

೧೨. ಬಿ.ಎಸ್. ಸಣ್ಣಯ್ಯ : ಹಸ್ತಪ್ರತಿ ಶಾಸ್ತ್ರಪರಿಚಯ, ಪುಟ -೬೦.

೧೩. ಬಿ.ಎಸ್. ಸಣ್ಣಯ್ಯ : ಹಸ್ತಪ್ರತಿ ಶಾಸ್ತ್ರಪರಿಚಯ , ಪುಟ -೬೦.

ಈ ಕೀಟಗಳು ಓಲೆ ಕಾಗದ, ಓಲೆಗರಿ, ರಟ್ಟು, ಕಡತ, ಬಖೈರು, ನಿರೂಪ, ದಿನಚರಿ, ಸ್ಥಳಪುರಾಣ, ಪುರಾಣ, ಕೈಫಿಯತ್ತು ಗಳಂತಹ ಕನ್ನಡದ ದಾಖಲು ಸಾಹಿತ್ಯದ ಅನೇಕ ಪ್ರಕಾರಗಳಲ್ಲಿ ವಾಸಿಸುವುದಲ್ಲದೇ ಸಾರಸ್ವತ ಲೋಕದ ಎಲ್ಲಾ ಪ್ರಕಾರಗಳ ರುಚಿಯನ್ನು ಈ ಕೀಟ ಗಮನಿಸಿದೆ. ಇದು ಹೊಕ್ಕ ಗ್ರಂಥ ಸತ್ವಹೀನವಾಗಿ ಪುಡಿಪುಡಿಯಾಗಿ ಹೋಗುತ್ತದೆ. ಈ ಹುಳು ಹಸ್ತಪ್ರತಿಗಳಲ್ಲಿ ನೇರವಾದ ಅಥವಾ ಚಿತ್ರ, ವಿಚಿತ್ರವಾದ ರಂಧ್ರಗಳನ್ನು ಮಾಡುತ್ತದೆ. ಇದಕ್ಕಾಗಿ ಈ ಹುಳುಹೊರತಾಗಿ ಉಳಿದವುಗಳು ಸಾಮಾನ್ಯ ಹಸ್ತಪ್ರತಿಗಳ ಧ್ವಂಸಕವಾದರೆ. ಈ ಗ್ರಂಥಹುಳು ಹಸ್ತಪ್ರತಿಗಳನ್ನು ವಿಚಿತ್ರ ಆಕಾರದ ಧ್ವಂಸಕವಾಗಿದೆ. ಕಾರಣ ಇದನ್ನು ಹಸ್ತಪ್ರತಿ ಚಿತ್ರರೂಪದ ಧ್ವಂಸಕ ಎಂದು ಹೇಳಬಹುದು. ಇಂತಹ ವಿಚಿತ್ರ ಕೀಟದ ಪ್ರಭಾವ ಕುರಿತು ಸಣ್ಣಯ್ಯನವರು ಇದನ್ನು "ಘುಣಾಕ್ಷರ ಪ್ರಾಯ" ಎಂಬ ರೂಢಿಗತ ಪದವನ್ನು ಸ್ಮರಿಸಿಕೊಳ್ಳುತ್ತಾರೆ. [೧೪]

ಸೋಸಿಡ್ಸ್:

(Psocids) ಈ ಕೀಟಗಳನ್ನು ಸಾಮಾನ್ಯವಾಗಿ ಪುಸ್ತಕದ ಹೇನು (Book Lice) ಎಂದು ಕರೆಯುತ್ತಾರೆ. ಈ ಕೀಟವು ಬೂದಿಯಂತೆ ಅಥವಾ ನಸುಬಿಳಿ ಬಣ್ಣವನ್ನು ಹೊಂದಿರುತ್ತದೆ. ಬೆಳ್ಳಿಮೀನಿನಂತೆ ಈ ಕೀಟಗಳಿಗೆ ಮೃದುವಾದಂತಹ ದೇಹವೂ ಪ್ರಬಲವಾದ ದವಡೆಗಳಿರುತ್ತವೆ. ಬೆಳ್ಳಿಮೀನಿನ ದೂರದ ಸಂಬಂಧಿಯಂತಿರುವ ಈ ಕೀಟವು ಹೆಚ್ಚಾಗಿ ವಾತಾವರನದಲ್ಲಿ ಶೀತವು ಅಧಿಕವಾದಾಗ ಆಗಾಗ ಉಪಯೋಗಿಸದೆ ಇರುವ ಹಳೆಯ ಕಡತ, ಬಖೈರು, ಗ್ರಂಥಗಳಲ್ಲಿ ಇರುತ್ತದೆ. ಈ ಹೊಟ್ಟೆಬಾಕ ಕೀಟವು ಕಾಗದ, ರಟ್ಟು, ಕಠಿಣಹಲಗೆ ಮತ್ತು ಹಲಗೆಗಳ ಜೋಡಣೆಗಾಗಿ ಬಳಸಿರುವ ಅಂಟನ್ನು ತಿಂದು ತನ್ನ ಗ್ರಂಥದ್ವೇಷವನ್ನು ಪೂರೈಸಿಕೊಳ್ಳುತ್ತದೆ. ಈ ಕೀಟಗಳೊಂದಿಗೆ ಕಂದು ಬಣ್ಣದ ಹಾರು ಕೀಟ, ಮಣ್ಣಿನ ಕಣಗಳು, ಗ್ರಂಥ ಚೇಳುಗಳಿಂದ ಮತ್ತು ನುಸಿ ಜಾತಿಯ ಫೈರ್‌ಬ್ಯಾಟ್ಸ್ (Firebats)ಗಳು, ಕೂಡ ಗ್ರಂಥ ಧ್ವಂಸಕವಾಗಿವೆ. ನಿರಂತರ ಪುಸ್ತಕದ ಆರೈಕೆ, ಶೂಶ್ರುಷೆಗಳು ಈ ಕೀಟಗಳ ಬಾಧೆಯನ್ನು ನಿವಾರಿಸಬಲ್ಲವು.

ಕೀಟಗಳು ಸಾಮಾನ್ಯವಾಗಿ ಈಜಿಪ್ಟ್‌ದೇಶದಲ್ಲಿ ಪಪ್ಪೆರಿಗೂ ಭಾರತದಲ್ಲಿ ಓಲೆಗಳಿಗೂ ಹಾನಿಯನುಂಟುಮಾಡಿವೆ. ಈಗಲೂ ಎಲಾ ವಿಧವಾದ ಗ್ರಂಥಗಳಿಗೂ ಕೆಡಕನ್ನುಂಟು ಮಾಡುತ್ತವೆ. ಇವುಗಳ ಪೀಡೆ ಸಮಶೀತೋಷ್ಣ ವಲಯದಲ್ಲಿ ಅಲ್ಪವಾಗಿದ್ದರೂ ಉಷ್ಣವಲಯದಲ್ಲಿ ಮತ್ತು ಅದರ ಪರಿಸರ ಪ್ರದೇಶಗಳಲ್ಲಿ ಹೆಚ್ಚಾಗಿ ಕಂಡುಬರುತ್ತವೆ. ತತ್ವಜ್ಞಾನಿಯಾದ ಅರಿಸ್ಟಾಟಲ್‌ನು ಇದನ್ನು "ಉಪದ್ರವಕಾರಿ" ಎಂದು ಕರೆದಿದ್ದಾನೆ. ಡಾ॥ಪಿ.ಬ್ರೂಕ್ಸ್ ಎಂಬಾತನು ತನ್ನ ಲೇಖನದಲ್ಲಿ ಪುಸ್ತಕಗಳಿಗೆ ಕಾಲ ಗಾಳಿ ಹವಾಮಾನ ಬೆಂಕಿ ಮತ್ತು ಪ್ರವಾಹಗಳಿಂದ ಆಗುವ ಅನಾಹುತವನ್ನು ಈ ಪುಸ್ತಕ ಕ್ರಿಮಿಯಿಂದ ಆಗುವ ಅನಾಹುತಕ್ಕೆ ಹೋಲಿಸಿದರೆ ಮೊದಲನೆಯದರಿಂದ ಆಗುವ ಹಾನಿ ಅಲ್ಪವೆಂದೇ ಹೇಳಬೇಕಾಗುತ್ತದೆ.[೧೫] ಎಂದಿದ್ದಾನೆ.

---

೧೪. ಬಿ.ಎಸ್. ಸಣ್ಣಯ್ಯ : ಹಸ್ತಪ್ರತಿ ಶಾಸ್ತ್ರ ಪರಿಚಯ, ಪುಟ -೬೦.

೧೫. New York Times : Book Review Section : Jan. 1933.

ಕೀಟಗಳ ನಿವಾರಣೆಗಾಗಿ ಹಲವಾರು ಪ್ರಯತ್ನಗಳು ಗ್ರಂಥರಚನೆಯ ಪ್ರಾರಂಭಿಕ ದಿನಗಳಿಂದಲೇ ನಡಿಯುತ್ತಾ ಬಂದಿವೆ. ನಿವಾರಣೆಯ ಉಪಾಯಗಳು ನಡೆಯುತ್ತಿದ್ದಂತೆಯೇ ಅವುಗಳಿಗೊಂದು ಸವಾಲಿನಂತೆ ಬೇರೆ ವಿಧದ ಕೀಟಗಳು, ಹವಾಮಾನದ ಬದಲಾವಣೆಗಳು ನಡೆಯುತ್ತಲೆ ಸಾಗಿವೆ.

ಧೂಳು :

ಕಣ್ಣಿಗೆ ಕಾಣಲಾರದ ಸೂಕ್ಷ್ಮ ಕಣಗಳನ್ನು ಧೂಳು ಎನ್ನುತ್ತಾರೆ. ಇದು ಮಾನವನ ಮತ್ತು ಗ್ರಂಥಗಳ ಧ್ವಂಸಕವಾಗಿದೆ ಧೂಳು, ಸುಳಿಗಾಳಿ, ಸುಂಟರಗಾಳಿ, ಬಿರುಗಾಳಿಯ ಮಾಧ್ಯಮಗಳಲ್ಲಿ ಬರುವ ಧೂಳು ಕೇವಲ ಮಣ್ಣಿನ ಕಣವಲ್ಲ ಅದು ಅಸಂಖ್ಯಾತ ರೋಗಾಣುಗಳ ಸಂಕಲನವೇ ಆಗಿರುತ್ತದೆ. ಇದ್ದಕ್ಕಿದ್ದಂತೆ ಮೇಲೆದ್ದು ಬೀಸುವ ಗಾಳಿಯೊಂದಿಗೆ ಮನುಷ್ಯನ ದೇಹ ಮತ್ತು ಮನುಷ್ಯನ ಮನೆಯನ್ನು ಮುತ್ತುವ ಧೂಳು ಹಲವು ಕ್ರಿಮಿ ಕೀಟಾಣುಗಳ ಕೂಟವೇ ಆಗಿರುತ್ತದೆ. ಕಿಟಕಿ ಬಾಗಿಲುಗಳಿಗೆ ಅರಿವೆ ಅಥವಾ ತಂತಿಯ ಜಾಲರಿಗಳು, ಧೂಳು ನಿರೋಧಕ ವಸ್ತ್ರಗಳಿರದಿದ್ದರೆ ಧೂಳು ಗೂಳಿಯಂತೆ ಎಲ್ಲಿಬೇಕೆಂದಲ್ಲಿ ನುಗ್ಗಬಲ್ಲುದು. ಅದು ಆಹಾರ ನೀರುಗಳನ್ನು ಕಲುಷಿತಗೊಳಿಸ ಬಲ್ಲದು. ಗಾಳಿಯೊಂದಿಗೆ ಬರುವ ಧೂಳು ಹುಡಿಯಾಗಿ ಪತ್ರದ ಮೇಲೆ ಹರಡಿಕೊಳ್ಳುತ್ತದೆ. ತೇವಾಂಶದ ಗಾಳಿಯ ಈ ಹುಡಿಯನ್ನು ಹಸ್ತಪ್ರತಿಗಳ ಮೇಲೆ ಗಟ್ಟಿಯಾಗಿ ಕೆಸರಿನಂತೆ ಅಂಟಿಸ ಬಲ್ಲುದು. ಇದನ್ನು ಬಿ. ಎಸ್. ಸಣ್ಣಯ್ಯನವರು ಈ ರೀತಿ ಹೇಳುತ್ತಾರೆ. 'ಧೂಳು ನೋಡಲು ಅಲ್ಪವಾದರೂ ಇದರಿಂದ ಆಗುವ ಅನಾಹುತ ಅಲ್ಪವಲ್ಲ'. ಈ ಧೂಳಿನ ಕಣಗಳ ಮೂಲಕವಾಗಿಯೇ ಕ್ರಿಮಿ ಕೀಟಗಳ ಅಂಡಾಣುಗಳು ಬಂದು ಹಸ್ತಪ್ರತಿಗಳಲ್ಲಿ ಸೇರುತ್ತದೆ. ಮುಂದೆ ಈ ಅಂಡಾಣುಗಳಿಂದ ಹುಳುಗಳು ಹೆಚ್ಚುತ್ತಾ ಹೋಗಿ ಗ್ರಂಥಾಲಯವನ್ನೇ ಆಕ್ರಮಿಸಿಕೊಳ್ಳುತ್ತದೆ.[೧೬]

ಭೂ ಕಂಪನ :

ಪ್ರಕೃತಿ ವಿಕೋಪದ ಮಾದರಿಯಂತಿರುವ ಈ ಭೂಕಂಪನವು ಮನುಕುಲ, ಜೀವ ಜಂತುಗಳೊಂದಿಗೆ ಇದ್ದುದ್ದೆಲವನ್ನು ನಾಶಗೊಳಿಸಬಲ್ಲದು. ಅಪಾರ ಶಕ್ತಿಶಾಲಿಯಾದ ಇದು ಸುರಕ್ಷಿತವಾಗಿ ಇರುವ ಜನಸಮುದಾಯವನ್ನು, ಕಾಯ್ದಿರಿಸಿರುವ ಹಸ್ತಪ್ರತಿಗಳ ಸಂಗ್ರಹವನ್ನೇ ಸರ್ವನಾಶಗೊಳಿಸಬಲ್ಲ ಶಕ್ತಿ ಈ ಭೂಕಂಪನಕ್ಕಿದೆ. ಮಾನವ ಕುಲಕ್ಕೆ ಮಾರಕವಾಗಿರುವ ಈ ಪ್ರಕೃತಿಯ ವಿಕೋಪವು ಮನುಷ್ಯತನಗಾಗಿ ಏನನ್ನೇಲ್ಲಾ ಮಾಡಿಕೊಂಡಿದ್ದಾನೋ ಅದೆಲ್ಲವನ್ನು ಕ್ಷಣಾರ್ಧದಲ್ಲೇ ಮಣ್ಣುಗೂಡಿಸುವ ಶಕ್ತಿ ಈ ನೈಸರ್ಗಿಕ ಶಕ್ತಿಗೆ ಇದೆ. ಎಷ್ಟೋ ಸಲ ನೀರಿನ ಅಣೆಕಟ್ಟು, ಸೇತುವೆಗಳಂತಹ ಸ್ಥಳದಲ್ಲು ಭೂಕಂಪನವಾಗಿ ನೆರೆಹಾವಳಿಗೆ ತುತ್ತಾಗಿ ಹಾಳಾದ ಉದಾಹರಣೆಗಳು ಸಾಕಷ್ಟು ಇವೆ. ಈ ರೀತಿಯಾಗಿ ಪ್ರಕೃತಿ ಜನ್ಯವಾದ ಕಾರಣಗಳಿಂದ ಅನೇಕ ಹಸ್ತಪ್ರತಿಗಳು ನಾಶವಾಗುತ್ತಲೇ ಸಾಗಿದ್ದು ಅವುಗಳನ್ನು ನಿಯಂತ್ರಿಸುವುದು ಮತ್ತು ಹಸ್ತಪ್ರತಿಗಳನ್ನು ಸಂರಕ್ಷಿಸುವುದು ತುಂಬಾ

೧೬. ಬಿ.ಎಸ್. ಸಣ್ಣಯ್ಯ : ಹಸ್ತಪ್ರತಿ ಶಾಸ್ತ್ರಪರಿಚಯ, ಪುಟ -51.

ಅತ್ಯಾವಶ್ಯಕವಾಗಿರುವಂತೆ ಇಂದಿನ ಆಧುನಿಕ ವಿಜ್ಞಾನ ಈ ಕುರಿತು ಅಧ್ಯಯನ ಕೈಗೊಳ್ಳುವುದು ತುಂಬಾ ಅವಶ್ಯಕವಾಗಿದೆ.

II ಮಾನವ ನಿರ್ಮಿತ ಆಪತ್ತುಗಳು :

1) ಧಾರ್ಮಿಕ
2) ರಾಜಕೀಯ
3) ಸಾಮಾಜಿಕ
4) ಗಲಭೆ
5) ಕಂದಾಚಾರ
6) ಅಪಾತ್ರರಿಗೆದಾನ
7) ನಿರ್ಲಕ್ಷತೆ

ಮಾನವ ನಿರ್ಮಿತ ಆಪತ್ತುಗಳು :

ಪ್ರಾಚೀನ ಜ್ಞಾನಕೋಶಗಳು, ಸಾಂಸ್ಕೃತಿಕ ವಿಚಾರದ ಆಗರಗಳಾಗಿರುವ ಹಸ್ತಪ್ರತಿಗಳು ನೈಸರ್ಗಿಕ ಕಾರಣಗಳಿಂದ ಹಾಳಾಗುವಂತೆ ಮಾನವನು ನಿರ್ಮಿಸಿಕೊಂಡಿರುವ ಜಾತಿ, ಧರ್ಮ, ಕುಲ, ಸಂಪ್ರದಾಯಗಳ ವೈಷಮ್ಯಗಳಿಂದ ರಾಜಕೀಯ ಸಣ್ಣ ತನಗಳಿಂದಲೂ ಅಮೂಲ್ಯ ಹಸ್ತಪ್ರತಿಗಳು ನಾಶವಾಗಿವೆ. ಜಗತ್ತಿನಲ್ಲಿ ತಾನು ತನ್ನೊದೊಂದೆ ಸರ್ವಶ್ರೇಷ್ಠ ಧರ್ಮ ಎನ್ನುವ ಧರ್ಮಾಂಧತೆಯಿಂದಲೂ ಶಾಂತಿ, ಪ್ರೀತಿ, ಮಾನವ ಬಂಧುತ್ವವನ್ನು ಭೋಧಿಸುವ ಹಸ್ತಪ್ರತಿಗಳು ಗಣನೀಯ ಸಂಖ್ಯೆಯಲ್ಲಿ ಹಾಳಾಗಿ ದುರ್ಗತಿಯನ್ನು ಕಂಡಿವೆ. ಇದು ಕೇವಲ ಇತಿಹಾಸವಾಗಿರದೆ ಇಂದಿಗೂ ಈ ರೀತಿ ಮಾನವ ಮಾನವರ ನಡುವೆ ನಡೆಯುತ್ತಿರುವ ಈ ಅಮಾನವೀಯ ಘಟನೆಗಳು ಮಾನವ ಪ್ರಪಂದಲ್ಲಿ ನಿರಂತರವಾಗಿ ಸಾಗಿವೆ. ಅಧ್ಯಯನಕ್ಕಾಗಿ ಅವುಗಳನ್ನು ಈ ರೀತಿ ವರ್ಗೀಕರಣ ಮಾಡಿಕೊಳ್ಳಲಾಗಿದೆ.

1) ಧಾರ್ಮಿಕ ಆಪತ್ತುಗಳು :

ಮಾನವನ ಬದುಕನ್ನು ಹಸನುಗೊಳಿಸಿ, ಭವದ ಬಾಧೆ ನಿವಾರಿಸಿ ಪರ ತತ್ವದ ದಾರಿಯನ್ನು, ಮಾನವೀಯತೆಯನ್ನು ಭೋದಿಸುವುದಕ್ಕೆ ' ಧರ್ಮ ' ಎನ್ನುತ್ತಾರೆ. ಆಪತ್ಕಾಲಕ್ಕೆ ಬರುವ ಧರ್ಮವು ಬಂಧುವಿನಂತೆ ಬಂದು ಭಾರತೀಯರ ಬದುಕಿನಲ್ಲಿ ಹಲವು ಸಲ ಮನುಷ್ಯ ಮನುಷ್ಯರ ನಡುವೆ ಮನುಷ್ಯತ್ವದ ಕೊಂಡಿಯಾಗುವ ಬದಲು ರಕ್ತಹರಿಯುವ ಕೋಡಿಯಾದ ಅಸಂಖ್ಯಾತ ಉದಾಹರಣೆಗಳು ನಮ್ಮ ನಾಡಿನಲ್ಲಿ ಆಗಿ ಹೋಗಿವೆ. ಮಾನವೀಯತೆ ಭೋಧಿಸುವ ಕೈಯೊಳಗಿನ ತಾಳಗ್ರಂಥವೋ, ಧರ್ಮಗ್ರಂಥವೋ, ಇದ್ದೂ ಸಣ್ಣ ತನದಿಂದ ನಡೆದುಕೊಂಡಿರುವ ಅನೇಕ ಉದಾಹರಣೆಗಳು ನಮ್ಮ ಇತಿಹಾಸದ ಕಣಜದಲ್ಲಿವೆ. ಈ ಕುರಿತು ಡಾ॥ಬಿ.ಕೆ.ಹಿರೇಮಠರ

ಮಾತುಗಳನ್ನು ಗಮನಿಸಿ... 'ಯಾವುದೇ ನಾಡಿನ ಧಾರ್ಮಿಕ ಚರಿತ್ರೆಯಲ್ಲಿನಂತೆ ಕರ್ನಾಟಕದ ಧಾರ್ಮಿಕ ಚರಿತ್ರೆಯಲ್ಲಿಯೂ ಮತ ಪ್ರಾಬಲ್ಯದ ಸಂದರ್ಭ, ಮತ ಮತಗಳ ತಾಕಲಾಟಗಳು ಇವೆ. ಇಂಥ ಸಂದರ್ಭಗಳಲ್ಲಿ ಮತಾಂತರ ಜರುಗಿ ವಿಹಾರ, ಬಸದಿ, ಮಠ,ದೇವಾಲಯಗಳು ನೆಲಸಮಗೊಂಡು ಒಂದೊಂದು ಕಾಲಕ್ಕೆ ಒಂದೊಂದು ಮತದ ಪ್ರಾಬಲ್ಯ ನೆಲೆಗೊಂಡಿರಬೇಕು. ಈ ಬಗೆಯ ಸಂಘರ್ಷಗಳು ಸಂಭವಿಸಿದಾಗಲೆಲ್ಲಾ ಆಯಾ ಮತದ ಹಸ್ತಪ್ರತಿ ಸಂಗ್ರಹಗಳಿಗೆ, ಭಂಡಾರಗಳಿಗೆ ದೊಡ್ಡ ಆಪತ್ತು ಎದುರಾಗುತ್ತಿತ್ತು ಅದೊಂದು ಮತಾಭಿಮಾನಿಗಳು ಪ್ರಾಣತೆತ್ತು ಅವುಗಳನ್ನು ರಕ್ಷಿಸಿಕೊಳ್ಳುವ ಪ್ರಯತ್ನ ಮಾಡಿರಬೇಕು. ಕೆಲವು ಸಂದರ್ಭಗಳಲ್ಲಿ ಯಶಸ್ಸನ್ನು ಗಳಿಸಿರಬಹುದು. ಇನ್ನೂ ಕೆಲವು ಸಂದರ್ಭಗಳಲ್ಲಿ ಆಗಬಹುದಾದ ನಷ್ಟದ ಪ್ರಮಾಣವನ್ನು ಕಡಿಮೆಗೊಳಿಸಿರಬಹುದು. ಮತ್ತೆ ಕೆಲವು ಸಲ ಅಸಹಾಯಕರಾಗಬೇಕಾದ ಸಂದರ್ಭಗಳು ಒದಗಿ ಬಂದಿರಲೂ ಸಾಕು. ಬೌದ್ಧ, ಜೈನ, ಶೈವ ವೀರಶೈವ, ವೈಷ್ಣವ ಮುಂತಾದ ಪ್ರಮುಖ ಧರ್ಮಗಳಿಗೆಲ್ಲ ಈ ಮಾತು ಅನ್ವಯವಾಗುತ್ತದೆ. ಆಯಾ ಮತಗಳ ಪ್ರಾಬಲ್ಯದ ಕಾಲದಲ್ಲಿ ಆಯಾ ಮತಗಳ ಹಸ್ತಪ್ರತಿಗಳು ಮಾತ್ರ ಹೆಚ್ಚು ಸುರಕ್ಷಿತವಾಗಿ ಇನ್ನೂಳಿದವುಗಳು ಅವಜ್ಞೆಗೆ ಒಳಗಾಗಿ ಅಳಿವಿನ ದಾರಿ ಹಿಡಿಯುತ್ತಿದ್ದಿರಬೇಕು.[೧೭]

ಈ ರೀತಿಯ ಮತೀಯಗೊಂದಲಕ್ಕೆ ಸಿಕ್ಕು ಹಾಳಾಗಿರುವ ಅನೇಕ ಹಸ್ತಪ್ರತಿಗಳಿವೆ. ಈ ವಿಷಯ ಕುರಿತು ವಿದ್ವಾಂಸರಾಗಿರುವ ಎಚ್.ದೇವೀರಪ್ಪನವರು ಈ ರೀತಿ ಅಭಿಪ್ರಾಯಪಡುತ್ತಾರೆ. '' ಕ್ರಿಸ್ತಪೂರ್ವದಷ್ಟು ಹಿಂದಿನಿಂದ 11ನೇಯ ಶತಮಾನದ ವರೆಗೆ ಕರ್ನಾಟಕದ ಬನವಾಸಿ, ಡಂಬಳ,ಮಹಿಷಮಂಡಳಗಳಲ್ಲಿ ಬೌದ್ಧ ವಿಹಾರಗಳಿದ್ದವೆಂದು ಗೊತ್ತಾಗುತ್ತದೆ. ಬೌದ್ಧ ಭಿಕ್ಷುಗಳ, ಪಾಳಿ ಭಾಷೆಯಲ್ಲಲ್ಲದೆ ಕನ್ನಡದಲ್ಲಿಯೂ ಗ್ರಂಥರಚನೆ ಮಾಡಿರಬೇಕೆಂದು ಊಹಿಸಲು ಸಾಕಷ್ಟು ಪ್ರಮಾಣಗಳಿವೆ.'' ಕವಿರಾಜ ಮಾರ್ಗ ರಚನೆಯಾಗುವ ಹೊತ್ತಿಗೆ ಆ ಗ್ರಂಥಗಳಲ್ಲಿ ನಾಶವಾಗಿ ಆ ಗ್ರಂಥಕರ್ತರುಗಳು ಹೆಸರುಗಳು ಮಾತ್ರ ಪ್ರಚಾರದಲ್ಲಿದ್ದಿರಬೇಕು. ಆ ಗ್ರಂಥಗಳನ್ನು ವಿಧರ್ಮಿಯರು ನಾಶಪಡಿಸಿರಬೇಕು, ಇಲ್ಲವೇ ಕರ್ನಾಟಕದ ಬೌದ್ಧ ಧರ್ಮಾನುಯಾಯಿಗಳು ಬೇರೆ ಮತಗಳನ್ನು ಪ್ರಾಯಶಃ ಶೈವ, ಜೈನ, ಮತಗಳನ್ನು ಅವಲಂಭಿಸಿ, ತಮ್ಮಲ್ಲಿ ಬೌದ್ಧಗ್ರಂಥಗಳನ್ನು ಉದಾಸೀನ ಮಾಡಿ ಅವೆಲ್ಲವೂ ಕಾಲಕ್ರಮೇಣ ಅಳಿದುಹೋಗಿರಬೇಕು.[೧೮]

ಇಂತಹುದೇ ಮತ್ತೊಂದು ಹಸ್ತಪ್ರತಿ ನಾಶದ ವಿವರವನ್ನು ಶ್ರೀದೇವೀರಪ್ಪನವರು ನೀಡುತ್ತಾರೆ. ಹನೊಂದನೇಯ ಶತಮಾನದ ಅಂತ್ಯದಲ್ಲಿ 12 ನೇಯ ಶತಮಾನದಲ್ಲಿ ಸಾವಿರಾರು ಜೈನ ಮನೆತನಗಳು ಶೈವ ಮತವನ್ನೋ ಲಿಂಗಾಯಿತ ಮತವನ್ನೋ ಅಂಗೀಕರಿಸಿದವು. ದೇವರದಾಸಿಮಯ್ಯ, ಆದಯ್ಯ, ಏಕಾಂತದ ರಾಮಯ್ಯ, ಗೋಗ್ಗಿದೇವ,

---

೧೭. ಡಾ. ಬಿ.ಕೆ. ಹಿರೇಮಠ : ಕನ್ನಡ ಹಸ್ತಪ್ರತಿಗಳು ಒಂದು ಅಧ್ಯಯನ, ಪುಟ -೨೩೫.
೧೮. ಹೆಚ್. ದೇವೀರಪ್ಪ: ಕನ್ನಡ ಹಸ್ತಪ್ರತಿಗಳು ಒಂದು ಇತಿಹಾಸ, ಪುಟ -೬೩.

ವಿರುಪದೇವರಸ ಮುಂತಾದವರು ಜೈನ ಮತವನ್ನು ಪ್ರಬಲವಾಗಿ ವಿರೋಧಿಸಿದರು. ಗೊಗ್ಗಿದೇವರಿಗೆ - '' ಜೈನ ಮೃಗ ಬೇಂಟೆಕಾರ, ಜೈನ - ಕುಠಾರ, ಎಂಬ ಬಿರುದುಗಳಿದ್ದವು. ವಿರುಪದೇವರಸನು ಜೈನ ಸಮಯವನ್ನು ದಹನ ದಾವಾನಲ ನಾಗಿದ್ದ. ಈ ಹಿನ್ನಲೆಯಲ್ಲಿ ಆ ಕಾಲದಲ್ಲಿದ್ದ ಜೈನ ಹಸಪ್ರತಿಗಳೇನಾದವೆಂಬುದನ್ನು ಊಹಿಸಿಕೊಳ್ಳಬಹುದು ಜೈನ ಮತವನ್ನು ತ್ಯಜಿಸಿ ಶೈವ ಮತವನ್ನಂಗೀಕರಿಸಿದವರು ತಮ್ಮಲ್ಲಿದ್ದ ಹಸ್ತಪ್ರತಿಗಳನ್ನು ಸಂರಕ್ಷಿಸಿಯಾರೆ? ಜೈನ ವಿರೋಧಿಗಳಂತು ಆ ಧರ್ಮಕ್ಕೆ ಸಂಬಂಧಪಟ್ಟ ಗ್ರಂಥಗಳನ್ನು ನಾಶಮಾಡಲು ಪಣತೊಟ್ಟಿದ್ದರು.''[೧೯]

ತುಷಾರಕಾಂತಿ ಮಹಾಪಾತ್ರ ಅವರು ಹಸ್ತಪ್ರತಿಗಳು ನಡೆದು ಬಂದ ದಾರಿಯನ್ನು ಹೇಳುತ್ತಾ ಅವುಗಳಿಗಿರುವ ಆಪತ್ತನ್ನು ಈ ರೀತಿ ಹೇಳುತ್ತಾರೆ. ''ಬಂಗಾಳಿಗಳಿಗೆ ಕಾಗದವು ಬೇಗನೆ ಪರಿಚಿತವಾದದು ಚೈನಾ ಮತ್ತು ನೇಪಾಳಗಳ ಸಾಂಸ್ಕೃತಿಕ ಸಂಬಂಧಗಳ ಮೂಲಕ ಕ್ರಿ.ಶ. 1105ರ ಕಾಲದಲ್ಲಿ ಪ್ರತಿಮಾಡಿದ ಬುದ್ಧನ ಪಂಚರಕ್ಷಾ ತಾಂತ್ರಿಕ ಪಠ್ಯವು ಅತ್ಯಂತ ಪ್ರಾಚೀನವಾದುದಾಗಿದ್ದು, ಅದು ಭಾರತದ ಪೂರ್ವದಿಕ್ಕಿನ ತುತ್ತ ತುದಿಯಲ್ಲಿ ದೊರಕಿದ ಒಂದು ವಿಶೇಷಕಾಗದದ ಪ್ರತಿಯಾಗಿತ್ತು. ಸಂಪ್ರದಾಯವಾದಿ ಹಿಂದುಗಳು ಅದು ವಿದೇಶಿಯ ಕಾಗದದ ಮೂಲದ್ದು ಎನ್ನುವ ಕಾರಣಕ್ಕಾಗಿ ಅಂದಿನ ದಿನಗಳಲ್ಲಿ ವಿಶೇಷಕಾಗದ ಪ್ರತಿಯಾದ ಆ ಗ್ರಂಥವನ್ನು ತಡೆಹಿಡಿಯುವ ಪ್ರಯತ್ನಮಾಡಲಾಗಿತ್ತು.''[೨೦]

ಈ ರೀತಿಯಾಗಿ ಜಗತ್ತಿಗೆ ನ್ಯಾಯ, ನೀತಿ, ಧರ್ಮ ಮತ್ತು ದಾರಿತೋರಿಸುವ ಧಾರ್ಮಿಕ ವಲಯವೆ ಮತಾಂಧತೆ ರಕ್ಕಸತನದ ದುರಾಚಾರಕ್ಕೆ ಕಾರಣಭೂತವಾಗಿದೆ. ಇಂತಹ ಧರ್ಮಾಂಧರು ಇನ್ನೂ ನಮ್ಮಲ್ಲಿ ಸಾಕಷ್ಟು ಜನ ಇದ್ದಾರೆ.

2. ರಾಜಕೀಯ ಆಪತ್ತು:

ಮುಖವಾಡದಿಂದ ಮಾಡುವ ಕೆಲಸವನ್ನು ರಾಜಕೀಯ ರಂಗ ಎಂದು ಕರೆಯುತ್ತಾರೆ. ಇತ್ತೀಚೆಗೆ ಧರ್ಮ ಮತ್ತು ರಾಜಕಾರಣವನ್ನು ಗಾಳಿ ಮತ್ತು ಬೆಂಕಿ ಎನ್ನುತ್ತಾರೆ. ಮೇಲುನೋಟದಲ್ಲಿ ಇವೆರಡು ಜನುಪಯುಕ್ತ ಮತ್ತು ಜೀವನಕ್ಕಾಧಾರದ ಕ್ಷೇತ್ರಾಗಳಾದರೂ ಸಾಮಾಜಿಕವಾಗಿ ಬೇಡವಾದವರನ್ನು ''ಬೇಟೆ'' ಯಾಡಲು ಅತ್ಯಪಯುಕ್ತ ಅಸ್ತ್ರಗಳಾಗಿವೆ. ಈ ಬೇಟೆ ಮಾನವನ ಬದುಕಿನ ನಿರಂತರದ ಅಂಗ ಎಂಬುದರ ಕುರಿತು ಡಾ|| ಪುರಾಷೋತ್ತಮ, ಬಿಳಿಮಲೆಯವರ ಅಭಿಪ್ರಾಯವನ್ನು ನೋಡೋಣ....

ಕಾಡಿನಲ್ಲಿದ್ದ ಮನುಷ್ಯ ಪ್ರಾಣಿಗಳ ಜೊತೆ ಬದುಕುತ್ತಾ ಕೆಲವನ್ನು ಸಾಕುತ್ತ ಕೆಲವನ್ನು ಕೊಲ್ಲುತ್ತ ಇದ್ದ ವೈರುದ್ಯ ವಿಶೇಷವಾದುದು, ಕೊಲ್ಲುವ ಕ್ರಿಯೆಯನ್ನು ಒಂದು ಅನಿವಾರ್ಯ ಆಹಾರೋತ್ಪಾದನಾ ವಿಧಾನ ಎಂದು ಭಾವಿಸಿದ್ದರಿಂದ ಅಂದು ಹಿಂಸೆಯ ಕಲ್ಪನೆ ಇರಲು ಸಾಧ್ಯವಿಲ್ಲ.

---

೧೯. ಹೆಚ್. ದೇವೀರಪ್ಪ: ಕನ್ನಡ ಹಸ್ತಪ್ರತಿಗಳು ಒಂದು ಇತಿಹಾಸ, ಪುಟ -೬೩.

೨೦. Tushar Kanti Maha Patra : Palmleaf & Other Manuscripts. in Indian Languages. Pg.-29.

ಊರುಗಳು ಹುಟ್ಟಿ ಬೆಳೆಯುತ್ತ ಬಂದಂತೆ ಹಿಂಸೆ - ಅಹಿಂಸೆಗಳ ಕಲ್ಪನೆಗಳು ಬಲಿಯುತ್ತ ಬಂದಿದೆ. ಇದಕ್ಕೆ ಮುಂಚೆಯೇ ಆಹಾರೋತ್ಪಾದನೆಯ ವಿವಿಧ ವಿಧಾನಗಳು ಬೆಳೆದು "ಬೇಟೆ " ಅನಿವಾರ್ಯವಾಗಿಲ್ಲ, ಹೀಗಾಗಿ "ಬೇಟೆ " ಎಂಬುದು ಹಿಂಸೆಯಾಗಿ ಕಾಣಿಸತೊಡಗಿದೆ ಕಾಡಿನ ಸಂಸ್ಕೃತಿ ಸಂಬಂಧವುಳ್ಳ "ಬೇಟೆ" ಎಂಬುದು ಹಿಂಸೆಯಾಗಿ ಕಾಣಿಸತೋಡಗಿದೆ, ಕಾಡಿನ ಸಂಸ್ಕೃತಿಯ ಸಂಬಂಧವುಳ್ಳ ಬೇಟೆಯು ರಾಜರಿಗೆ ಹವ್ಯಾಸವಾಗಿ ಜನರಿಗೆ ಆಚರಣೆಯಾಗಿ ಉಳಿದು ಈಗ ಬೇರೆ ಬೇರೆ ಅರ್ಥಗಳನ್ನು ಪಡೆದಿದೆ. ಈ ಪ್ರತಿಕ್ರಿಯೆಯಲ್ಲ ಕಾಡಿನಿಂದ ಊರಿಗೆ ವಿಕಾಸಹೊಂದಿದ ಸಂಸ್ಕೃತಿಯು ಹಿಂಸೆಯಿಂದ ಅಹಿಂಸೆಯ ಕಡೆಗೆ ಸಾಗುತ್ತಾ ಬಂದುದನ್ನು ಕಾಣಬಹುದು. ಆದರೆ ಊರಿನ ಸಂಸ್ಕೃತಿಯಲ್ಲಿ ಮೂರ್ತ "ಹಿಂಸೆ "ಕಡಿಮೆಯಾದಂತೆ ಕಂಡರೂ ಅಮೂರ್ತ ಹಿಂಸೆ ಜಾಸ್ತಿಯಾಗಿದೆ. ಊರುಗಳ ಒಕ್ಕೂಟದಲ್ಲಿ ಹುಟ್ಟಿದ ರಾಜವ್ಯವಸ್ಥೆ ಮತ್ತು ಇಂದಿನ ಪ್ರಜಾಪ್ರಭುತ್ವ ವ್ಯವಸ್ಥೆಗಳು ತಮ್ಮದೇ ರೀತಿಯಲ್ಲಿ ಹಿಂಸೆಯನ್ನು ಅಂತರ್ಗತ ಮಾಡಿಕೊಂಡು ಜನರಿಗೆ ಹಿಂಸೆ ಕೊಡುತ್ತಿರುವ ಸಂದರ್ಭಗಳು ಸಾಕಷ್ಟಿವೆ. ಒಂದು ಸಹಜ ಉತ್ಪಾದನಾ ವಿದಾನವಾಗಿದ್ದ "ಭೇಟೆ"ಯು ಆಚರಣೆಯ ಮಟ್ಟಕ್ಕೆ ಬಂದಾಗ, ಬೇಟೆಯೊಳಗಿನ ಹಿಂಸೆಯ ಕಲ್ಪನೆಯು ಸಾಮಾಜಿಕ-ರಾಜಕೀಯ ವ್ಯವಸ್ಥೆಯ ಒಳಸೇರಿದ್ದು ಒಂದು ವಿಪರ್ಯಾಸವೇ ಸರಿ !. ಈಗ ಮನುಷ್ಯ ಮನುಷ್ಯನನ್ನೇ ಹಿಂಸಿಸುವ ಬೇಟೆಯಾಡುವ ವಾತಾವಾರಣವಿದೆ ; ಪ್ರಾಣಿ ದಯೆಗೆ ಧರ್ಮದ ಲೇಪನವೂ ಸಿಕ್ಕಿ ಹಸುವಿನಂಥ ಪ್ರಾಣಿಗಳಿಗೆ ದೈವಸ್ಥಾನದ ಪುಣ್ಯ ಲಭ್ಯವಾಗಿದೆ. ಮನುಷ್ಯ ಮಾತ್ರ ಹಿಂಸಾ ರಭಸಮತಿಯಾಗಿ ವರ್ತಿಸುತ್ತಿದ್ದಾನೆ. ಹೇಗೆ ಕಾಡಿನಲ್ಲಿ ಹೊರಗಡೆಗೆ ಗೊತ್ತಾಗುತ್ತಿದ್ದ ಹಿಂಸೆ ಊರಿನಲ್ಲಿ ಒಳಗಿಳಿಯುತ್ತ ಬಂದಿದೆ ; ಪ್ರಾಣಿಗಳಿಗೆ " ಪುಣ್ಯ" ಕೊಟ್ಟು ಮನುಷ್ಯರಿಗೆ ಪಾಪದ ಪಟ್ಟಕಟ್ಟುವ ಕ್ರಿಯೆ ವ್ಯವಸ್ಥಿತವಾಗಿ ನಡೆಯುತ್ತಿದೆ.[೨೧]

ವ್ಯಯುಕ್ತಿಕ ಬೇಟೆಯಹಂತದಿಂದ ಸಾಮೂಹಿಕ ಕೊಲೆಯ ಪಾಳೆಗಾರಿಕೆಯ ಪಟ್ಟದ ನಂತರ ಬರುವುದೇ ರಾಜ ಮತ್ತು ಆತನದೇ ವ್ಯವಸ್ಥೆ. ಈ ವ್ಯವಸ್ಥೆಯಲ್ಲಿ ಅರಸನ ಆಕಾಂಕ್ಷೆಯೊಂದನ್ನು ಬಿಟ್ಟರೆ ಉಳಿದೆಲ್ಲವು ರಕ್ತಪಾತ, ರಾಜರದಾಳಿ ರಾಜ್ಯ ವಿಸ್ತರಣದ ದಾಹದಿಂದ ಕೂಡಿದ್ದರೂ ಅಂತಹ ಸಂದರ್ಭದಲ್ಲಿ ನಡೆಯುವ ಕೊಲೆ, ಸುಲಿಗೆ, ಅಪಹರಣಾದಿಗಳಿಂದ ಜೀವ ಉಳಿದರೆ ಸಾಕೆಂದು ಕೈಯಲ್ಲಿ ಜೀವಹಿಡಿದುಕೊಂಡು ಓಡುವ ಮಾನವ ದೇಶ, ನಾಡ, ಜಗದ ಸಂಸ್ಕೃತಿ, ಜ್ಞಾನಭಂಡಾರದ ಹಸ್ತಪ್ರತಿಗಳ ಭಂಡಾರದ ಬಗ್ಗೆ ಲಕ್ಷ್ಯವಹಿಸಬಲ್ಲನೇ ? ಸಾಮಾನ್ಯ ಓದಗನಿರಲಿ ಗ್ರಂಥ ಭಂಡಾರಿಯೇ ಮೊದಲು ಪಲಾಯನ ಮಾಡಬಲ್ಲ.

ವೈಷ್ಣವ ಮತಾವಲಂಭಿಯೂ, ಲಿಂಗಾಯತ ವಿರೋಧಿಯೂ ಆಗಿದ್ದ ಮೈಸೂರಿನ ಚಿಕ್ಕದೇವರಾಯನು (ಕ್ರಿ.ಶ.1672-1704) ಕಾಲದಲ್ಲಿ ಸುಮಾರು 400 ಜಂಗಮರ ಕೊಲೆಗೂ, 700 ಮಠಗಳನ್ನು ನೆಲಸಮ ಮಾಡಿಸುವುದಕ್ಕೂ ಕಾರಣವಾದುದು ತಿಳಿದುಬರುತ್ತದೆ.[೨೨]

---

೨೧. ಡಾ|| ಪುರುಷೋತ್ತಮ ಬಿಳಿಮಲೆ : ಕೊರಗರು - ಸಂಸ್ಕೃತಿ, ಪುಟ -೩೬.
೨೨. Historical Sketches of South India : Page No. 220, 21.

ಹಿಂಸೆ, ಪಲಾಯನ, ಜೀವಭೀತಿಯ ಬಗೆಗೆ ಡಾ|| ಬಿ.ಕೆ.ಹೀರೆಮಠ ಮಾತು ಇಂತಿದೆ. ಆಗ ಆ ಮಠಗಳಲ್ಲಿನ ಸಾವಿರಾರು ಹಸ್ತಪ್ರತಿಗಳು ಧ್ವಂಸವಾಗಿರಬೇಕೆಂಬುದನ್ನು ಹೇಳಬೇಕಾಗಿಲ್ಲ. ಇಕ್ಕೇರಿಯ ಅರಸರಿಗೂ ಬಾಳೆಹಳ್ಳಿಯ ವೀರಶೈವ ಮಠದವರಿಗೂ ಮನಸ್ತಾಪವಾಗಿತ್ತು. ತತ್ಪರಿಣಾಮವಾಗಿ ದೊರೆಗಳು ಮಠವನ್ನು ಸುಡಿಸಿದಾಗ ಅಲ್ಲಿದ್ದ ಗ್ರಂಥ ಭಂಡಾರವೂನಾಶವಾಯಿತು ಎನ್ನಲಾಗುತ್ತದೆ. ಜೈನ, ವೀರಶೈವ, ವೈಷ್ಣವ, ಯಾವುದೇ ಧರ್ಮದ ಚರಿತ್ರೆಯಲ್ಲಿಯೂ ಇಂಥ ಘಟನೆಗಳು ನಡೆದುದು ಕಂಡು ಬರುತ್ತದೆ[೨೩]

ಧಾರ್ಮಿಕ ಮತಾಂಧತೆ ಮತ್ತು ಅವುಗಳಿಂದ ಹಸ್ತಪ್ರತಿಗಳು ನಾಶವಾದ ಕಾರಣಗಳನ್ನು ಹಸ್ತಪ್ರತಿ ತಜ್ಞರಾಗಿರುವ ಶ್ರೀ ಎಚ್.ದೇವಿರಪ್ಪನವರು ಈ ರೀತಿಯಾಗಿಕೊಡುತ್ತಾರೆ.........12 ಮತ್ತು 13ನೇ ಶತಮಾನದಲ್ಲಿ ಉತ್ತರ ಭಾರತದ ಅನೇಕ ಗ್ರಂಥಭಂಡಾರಗಳು ತುರಷ್ಕರ ದಾಳಿಕಾರರಿಂದ ವಿನಾಶ ಹೊಂದಿದವು. ಹಿಂದೂಗಳ ದೇವಮಂದಿರಗಳನ್ನು ಜ್ಞಾನಭಂಡಾರಗಳನ್ನು ನಾಶಮಾಡುವುದು ಅಂದಿನ ತುರುಕ ದಾಳಿಕಾರರ ನೀತಿಯಾಗಿದ್ದಿತು. ದಕ್ಷಿಣ ದೇಶಕ್ಕೆ ಪ್ರಪ್ರಥಮವಾಗಿ ದಾಳಿಯಿಟ್ಟವನು ಅಲ್ಲಾವುದ್ದಿನ್ ಖಿಲ್ಜಿಯ ಆಜ್ಞಾಧಾರಕನಾಗಿದ್ದ ಮಲ್ಲಿಕ್‌ಕಾಫ್‌ರ್‌ನೆಂಬ ದಂಡನಾಯಕ. ಆತನು ಕ್ರಿ.ಶ.1311 ರಲ್ಲಿ ಸಂಸ್ಕೃತಿಯ ಸಮುದ್ರದಂತಿದ್ದ ಧ್ವಾರಸಮುದ್ರಕ್ಕೆ ದಾಳಿಯಿಟ್ಟು ಅದನ್ನು ಹಾಳುಗೆಡಹಿದನು. ಹೊಯ್ಸಳೇಶ್ವರ ದೇವಾಲಯವು ದೇಗುಲವಾದುದು ಅವನಿಂದಲೇ ಅವನ ಸಿಪಾಯಿಗಳು ತಮಗೆ ಸಿಕ್ಕಿದ ತಾಳೆಯೋಲೆಯ ಗ್ರಂಥಗಳನ್ನು ಕುದೆರೆಗಳಿಗೆ ಹುರಳಿಬೇಯಿಸುವುದಕ್ಕಾಗಿ ಬಳಸಿಕೊಂಡರೆಂದು ಹೇಳಿಕೆ.[೨೪]

ಬಹಮನಿ ಸುಲ್ತಾನರ ಸೈನ್ಯವು 1565ರಲ್ಲಿ ವಿಜಯನಗರ ರಾಜಧಾನಿಯನ್ನು ಧ್ವಂಸಗೊಳಿಸಿದ ದಾರುಣಕಥೆ ಎಲ್ಲರಿಗೂ ತಿಳಿದೇ ಇದೆ. ಅವರು ವಿಜಯ ವಿಠ್ಠಲನ ಗುಡಿಗೆ ಬೆಂಕಿಯಿಟ್ಟು ಸಿಡಿಸಿದಂತೆ ತಮ್ಮ ಕೈಗೆ ಸಿಕ್ಕಿದ ಗ್ರಂಥಭಂಡಾರವನ್ನು ಸುಟ್ಟಿರಬೇಕು.[೨೫] ವಿಜಯನಗರ ಲೂಟಿಕುರಿತು ಕಾಟೋ ಹೇಳುತ್ತಾನೆ. ನಗರವನ್ನು ಭಯಂಕರಗಾಬರಿ ಆವರಿಸಿತ್ತು ಸತ್ಯ ಕೊನೆಗೆ ಸ್ಪಷ್ಟವಾಯಿತು. ಇದು ಕೇವಲ ಸೋಲಾಗಿರಲಿಲ್ಲ. ವಿಪ್ಲವವಾಗಿತ್ತು (Cataclysm) ಎಲ್ಲ ಆಸೆ ತೊಲಗಿತ್ತು. ನಗರದಲ್ಲಿನ ಅಸಂಖ್ಯ ನಿವಾಸಿಗಳು ರಕ್ಷಣೆ ಇಲ್ಲದವರಾಗಿ ಉಳಿದರು ಮೂರುದಿನ ನೆರೆಯ ದರೋಡೆ ಪಂಗಡಗಳು ಮತ್ತು ಅರಣ್ಯಮಾನವರಿಗೆ ಊರು ಬಲಿಯಾಯಿತು. ಬಂಜಾರಿಗಳು, ಲಂಭಾಡಿಗಳು, ಕಾಡಕುರುಬರು ಮುಂತಾದವರ ತಂಡಗಳು ಹತಭಾಗ್ಯ ನಗರದ ಮೇಲೆ ದಾಳಿಯಿಟ್ಟು ಉಗ್ರಾಣಗಳನ್ನು , ಅಂಗಡಿಗಳನ್ನು ಲೂಟಿ ಮಾಡಿ ದೊಡ್ಡ ಪ್ರಮಾಣದಲ್ಲಿ ಸಂಪತ್ತನ್ನು ದೋಚಿಕೊಂಡು ಒಯ್ದರು. ಆ ದಿನ ಈ ಜನರಿಂದ ಆರು ನಿಶ್ಚಿತ ದಾಳಿಗಳಾದವೆಂದು ಕೌಟೋ ಹೇಳುತ್ತಾನೆ.[೨೬]

---

೨೩. ಡಾ. ಬಿ.ಕೆ. ಹಿರೇಮಠ : ಕನ್ನಡ ಹಸ್ತಪ್ರತಿಗಳು ಒಂದು ಅಧ್ಯಯನ, ಪುಟ -೨೩೫.

೨೪. ಹೆಚ್.ದೇವೀರಪ್ಪ : ಕನ್ನಡ ಹಸ್ತಪ್ರತಿಗಳ ಇತಿಹಾಸ ಪುಟ-೬೦.

೨೫. ಹೆಚ್.ದೇವೀರಪ್ಪ : ಕನ್ನಡ ಹಸ್ತಪ್ರತಿಗಳ ಇತಿಹಾಸ ಪುಟ-೬೦.

೨೬. Robert B. Sewell : A forgoton empire of Vijayanagar : Pg. 207

ವಿಜಯನಗರದ ಅಂತ್ಯಾವಸ್ಥೆಯ ಮೂರನೇ ದಿನವನ್ನು ಈ ರೀತಿಯಾಗಿ ವರ್ಣಿಸಲಾಗಿದೆ. ಐದು ತಿಂಗಳ ಕಾಲ ವಿಜಯನಗರಕ್ಕೆ ವಿಶ್ರಾಂತಿ ಇಲ್ಲದಾಯಿತು. ವೈರಿಗಳು ನಾಶಮಾಡಲು ಬಂದಿದ್ದರು ಮತ್ತು ಅವರು ತಮ್ಮ ಉದ್ದೇಶವನ್ನು ನಿರ್ದಯವಾಗಿ ಈಡೇರಿಸಿದರು, ಅವರು ಜನರನ್ನು ಕರುಣೆ ಇಲ್ಲದೇ ಸಂಹರಿಸಿದರು ; ದೇವಾಲಯಗಳನ್ನು, ಅರಮನೆಗಳನ್ನು ಕೆಡವಿದರು ಮತ್ತು ಬೃಹತ್ ನರಸಿಂಹನ ಅಖಂಡ ಶಿಲಾಕೃತಿಯ ಅಂಗಾಂಗಳನ್ನು ಒಡೆಯುವಲ್ಲಿ ಯಶಸ್ವಿಯಾದರು. ವಿಠ್ಠಲಸ್ವಾಮಿಯ ದೇವಾಲಯದಲ್ಲಿ ಭವ್ಯವಾಗಿ ಅಲಂಕೃತವಾದ ಕಟ್ಟಡಗಳಲ್ಲಿ ಅವರು ದೊಡ್ಡ ಉರಿಗಳನ್ನು ಹೊತ್ತಿಸಿದ್ದರು. ಅದರ ಉತ್ಕೃಷ್ಟ ಶಿಲ್ಪಗಳನ್ನು ಒಡೆದು ಹಾಕಿದರು. ಬೆಂಕಿ ಮತ್ತು ಕತ್ತಿ, ಹಾರೆ, ಕೊಡಲೆಗಳಿಂದ ಅವರು ದಿನೇ ದಿನೇ ತಮ್ಮ ವಿನಾಶ ಕಾರ್ಯವನ್ನು ಮುಂದುವರಿಸಿದರು. ಬಹುಶಃ ಪ್ರಪಂಚದ ಇತಿಹಾಸದಲ್ಲಿಯೇ ಇಂಥ ಭವ್ಯ ನಗರದ ಮೇಲೆ ಇಂಥ ಹಾವಳಿ ಮತ್ತು ಇಷ್ಟು ಒಮ್ಮಿಂದಮ್ಮೊಲೇ ಮಾಡಿರಲಿಕ್ಕಿಲ್ಲ. ಒಂದು ದಿನ ಅದು ಹೇರಳ ಸಮೃದ್ಧಿಭರಿತ ಶ್ರೀಮಂತ ಹಾಗೂ ಪರಿಶ್ರಮಿ ಜನಸಂಖ್ಯೆಯಿಂದ ತುಂಬಿತ್ತು. ಮರುದಿನ ವರ್ಣಾನಾತೀತವಾದ ಅಮಾನುಷ ಕಗ್ಗೊಲೆ ಮತ್ತು ಭಯ ಬ್ರಾಂತಿಯ ದೃಶ್ಯಗಳ ಮಧ್ಯೆ ಅದನ್ನು ವಶಪಡಿಸಿಕೊಳ್ಳಲಾಯಿತು. ಕೊಳ್ಳೆ ಹೊಡೆಯಲಾಯಿತು ಮತ್ತು ಭಗ್ನ ಸ್ಥಿತಿಗೆ ಇಳಿಸಲಾಯಿತು.[೨೭]

ಈ ರೀತಿ ಪೂರ್ಣಧರ್ಮವನ್ನರಿಯಲಾರದ ಮತಾಂಧರಿಂದ ಸಮೃದ್ಧವಾಗಿದ್ದ ವಿಜಯನಗರವನ್ನೇ ಧ್ವಂಸಮಾಡಿದವರು ಹಸ್ತಪ್ರತಿಗಳನ್ನು ಲಕ್ಷಿಸಿಯಾರೆ ? ಇಂತಹುದೇ ಮತ್ತೊಂದು ಮತಾಂಧತೆಯ ವಿವರವನ್ನು ಶ್ರೀ ಎಚ್.ದೇವಿರಪ್ಪನವರು ಈ ರೀತಿ ಕೋಡುತ್ತಾರೆ. 'ಟಿಪ್ಪು ಸುಲ್ತಾನನು' ಕ್ರಿ.ಶ.1786ನೆಯ ವರ್ಷದ ನವೆಂಬರ್ ತಿಂಗಳಲ್ಲಿ ಮೈಸೂರಿನ ಕೋಟೆ ಮತ್ತು ಪೇಟೆಗಳಲ್ಲಿ ವಾಸಿಸುವರು ತತ್‌ಕ್ಷಣವೇ ಅಲ್ಲಿಂದ ಹೊರಡಬೇಕೆಂಬ ಆಜ್ಞೆ ಹೊರಡಿಸಿದ ಪೇಟೆ, ಕೋಟೆಗಳನ್ನು ಕೆಡಯಿಸಿ ನೆಲಸಮ ಮಾಡಿಸಿದ. ಮೈಸೂರಿನ ಅರಮನೆಯಲ್ಲಿಯೂ ವಿದ್ವಾಂಸರ ಮನೆಗಳಲ್ಲಿಯೂ ಇದ್ದ ಹಸ್ತಪ್ರತಿಗಳ ಪಾಡು ತಿಳಿದೇ ಇದೆ, ಓಡಿಹೋಗುವವರು ಓಲೆಗರಿಗಳನ್ನೇಕೆ ಒಯ್ದಾರು ? ಅವು ಇದ್ದಲ್ಲಿಯೇ ಮಣ್ಣು ತಿಂದು,ಧೂಳು ತಿಂದು ಇಲ್ಲವಾಗಿರಬೇಕು.[೨೮]ಇದರೊಂದಿಗೆ ಬಿಮಲ್ ಕುಮಾರದತ್ತ ಅವರು Chikkadevdas Library of rarest Sanskrit Philosphical and historical works were destroyed by Tippu Sultan.[೨೯] ಎಂದು ಉದ್ಗಾರ ತೆಗೆದಿರುವುದು ಬರೀ ಊಹೆಯಿಂದಲ್ಲ.

ದೇವೀರಪ್ಪನವರದೆ ಕೆಲವು ವಿಚಾರಗಳನ್ನು ಗಮನಿಸೋಣ.... ಗೋವಾ ಪ್ರಾಂತ್ಯಾದಲ್ಲಿದ್ದ ಸಂಸ್ಕೃತ ಕನ್ನಡ ಗ್ರಂಥಗಳ ಕಥೆಯೇ ಬೇರೆ, ಅಲ್ಲಿಯ ಮೂಲ ನಿವಾಸಿಗಳಲ್ಲಿ ಬಹುಮಂದಿ ಕನ್ನಡಿಗರು ಲೆಕ್ಕ ಪತ್ರಗಳನ್ನು ಕೊಂಕಣಿ ಭಾಷೆಯಲ್ಲಿ ಕನ್ನಡ ಲಿಪಿಯಲ್ಲಿ ಇಡುತ್ತಿದ್ದುದೇ

---

೨೭. ಸದಾನಂದ ಕನವಳ್ಳಿ : (ಅನುವಾದಕರು) A forgoton empire of Vijayanagar : Pg. 223

೨೮. ಹೆಚ್. ದೇವೀರಪ್ಪ: ಕನ್ನಡ ಹಸ್ತಪ್ರತಿಗಳ ಇತಿಹಾಸ : ಪುಟ -೬೦.

೨೯. Bimal Kumar Datt : Libraries & Librarianship in ancient & Medival India. Pg.75.

ಅಲ್ಲಿಯ ಬಹುಜನ ಸಮಾಜದ ಭಾಷೆ, ಕನ್ನಡ, ಸಂಸ್ಕೃತಿ ಕನ್ನಡ ಎಂಬುದಕ್ಕೆ ಹಿರಿಯ ಪ್ರಮಾಣ. ಪೋರ್ಚುಗೀಸರು ಗೋವಾ ಪ್ರಾಂತವನ್ನು ಆಕ್ರಮಿಸಿ ಕೊಂಡ ಮೇಲೆ ಆ ನಾಡಿನ ಹಿಂದೂಗಳ ಸ್ಥಿತಿ ಹೇಳತೀರದು. ಇವರಾಗಲಿ ಉತ್ತರದಿಂದ ಬಂದು ಇಲ್ಲಿಯೇ ನೆಲೆಸಿದ್ದ, ಇಲ್ಲಿಯವರೆಗೆ ಆಗಿದ್ದ ಗೌಡ ಸಾರಸ್ವತರಾಗಲಿ, ತಮ್ಮ ಇಷ್ಟ ದೈವವನ್ನು ಆರಾಧಿಸುವಂತಿರಲಿಲ್ಲ ; ತಮ್ಮ ಧರ್ಮ ಗ್ರಂಥಗಳನ್ನು ಪಠನಮಾಡುವಂತಿರಲಿಲ್ಲ. ಇಷ್ಟೇ ಅಲ್ಲ ನಡೆ ನುಡಿ ಉಡಿಗೆ ತೊಡಿಗೆ ಎಲ್ಲದರಲ್ಲಿಯೂ ಪೋರ್ಚುಗೀಸ ಕ್ರಿಶ್ಚಿಯನ್ನರನ್ನೇ ಇವರು ಅನುಸರಿಸ ಬೇಕಾಗಿದ್ದಿತು. ಹಾಗಿಲ್ಲದಿದ್ದರೆ ಇವರನ್ನು ಅಕ್ಷರಶಃ ಸಿಡಿ ಆಡಿ ಬಿಡುತ್ತಿದ್ದರು. ಪೋರ್ಚಗೀಸ್ ಪಾದ್ರಿಗಳು ಮತ್ತು ಅವರ ಅಂಕೆಯಲ್ಲಿದ್ದ ಪೋರ್ಚುಗೀಸ್ ಅಧಿಕಾರಿಗಳು ಇವರು ಕೂಡುತ್ತಿದ್ದ ಹಿಂಸೆ, ಕೊಲ್ಲುತ್ತಿದ್ದ ಅಮಾನುಷ ರೀತಿ, ವರ್ಣನಾತೀತ. ಆ ಹಿಂಸೆಯನ್ನು ತಡೆದುಕೊಳ್ಳಲಾರದೆ ಅನೇಕ ಕ್ರಿಶ್ಚಿಯನ್ನರೂ ಹಿಂದೂಗಳು ಆ ದೇಶವನ್ನೇ ಬಿಟ್ಟು ಬಿದನೂರು ರಾಜ್ಯಕ್ಕೊ ಸೊದೇ ರಾಜ್ಯಕ್ಕೂ ಬಂದರು. ಜನರ ಪರಿಸ್ಥಿತಿ ಹೀಗಿದ್ದಾಗ ಆ ನಾಡಿನಲ್ಲಿದ್ದ ಸಂಸ್ಕೃತ ಮತ್ತು ಕನ್ನಡ ಗ್ರಂಥಗಳ ಪರಿಸ್ಥಿತಿ ಹೇಳಬೇಕೆ ?[೩೦]

ಹಸ್ತಪ್ರತಿಗಳ ಜನಪ್ರಿಯತೆಗಾಗಿ ಹಣಮಾಡುತ್ತಿರುವ ಧನದಾಹಿಗಳ ಕತೆಯ ಕುರಿತು ಹಸ್ತಪ್ರತಿಗಳ ಅಧ್ಯಯನಶೀಲರಾಗಿರುವ ಈ ನಿಟ್ಟಿನಲ್ಲಿ ಸಾಕಷ್ಟು ದುಡಿದಿರುವ ಹಿರಿಯ ಸಂಶೋಧಕರಾಗಿರುವ ಶ್ರೀ ಎಂ.ಶಿವಣ್ಣನವರ ಅನುಭವವನ್ನು ಶ್ರೀ ಹೆಚ್.ದೇವಿರಪ್ಪ ನವರು ಈ ರೀತಿಯಾಗಿ ವಿವರಿಸುತ್ತಾರೆ. ಈ ಶತಮಾನದ ಆರಂಭದ ಕಾಲದಲ್ಲಿಯೇ, ಓರಿಸ್ಸಾ ದೇಶದ ಪ್ರಾಚ್ಯವಸ್ತು ವ್ಯಾಪಾರಿಗಳೊಬ್ಬರಿಂದ ಈ ಸಂಗತಿ ತಿಳಿದು ಬಂದಿದೆ. ಮಧ್ಯ ಏಷ್ಯಾದ ಕೋಟಾನ್ ಪ್ರಾಂತದ ನಿವಾಸಿಯೊಬ್ಬನಿಗೆ ಒಂದು ಬಹುಪ್ರಾಚೀನವಾದ ಭೂರ್ಜ ಪತ್ರದ ಪ್ರತಿ ಸಿಕ್ಕಿತಂತೆ. ಆತನು ಆ ಪ್ರತಿಯನ್ನು ಎರಡು ಭಾಗಮಾಡಿ ಮೊದಲಾರ್ಧವನ್ನು ಫ್ರೆಂಚ್ ದೇಶದ ಕ್ರೈಸ್ತ ಮತಪ್ರಚಾರ ಸಂಸ್ಥೆಗೂ, ಉಳಿದಾರ್ಧವನ್ನು ಕೆಲವು ದಿವಸಗಳ ಮೇಲೆ ಕಾಸ್‌ಗರ್‌ನಲ್ಲಿಯ ರಷ್ಯನ್ ಕಾನ್ಸಲ್ ಆಗಿದ್ದ ಪೆಟ್ರೋವ್‌ಸ್ಕಿಗೂ ಮಾರಿದನಂತೆ. ಯೂರೋಪ್ ಅಮೇರಿಕಾಗಳ ಪುಸ್ತಕ ಭಂಡಾರಗಳಲ್ಲಿ ಭಾರತೀಯ ಹಸ್ತಪ್ರತಿಗಳು ಸೇರಿದ್ದು ಹೀಗೆಯೇ ಇರಬಹುದು. ಕೆಲವು ಕನ್ನಡ ಹಸ್ತಪ್ರತಿಗಳು ಶ್ರವಣಬೆಳಗೊಳದಿಂದ ಹೊರಟು ಜರ್ಮನಿಯ ಸ್ಟ್ರಾಟ್‌ಬರ್ಗ್ ಪುಸ್ತಕ ಭಂಡಾರವನ್ನು ಸೇರಿವೆಯೆಂದು ಗೊತ್ತಾಗುತ್ತದೆ.[೩೧]

ಇಂತಹುದೇ ಕಹಿ ನೆನಪು ಇಕ್ಕೇರಿಯ ಅರಸರಿಗೂ ಬಾಳೆಹಳ್ಳಿಯ ವೀರಶೈವರ ಮಠದವರಿಗೂ ಅದಾವಕಾರಣವೋ ಮನಸ್ತಾಪವುಂಟಾಗಿತ್ತು. ದೊರೆಗಳು ಮಠವನ್ನು ಸುಡಿಸಿ ನಾಶಮಾಡಿದರು. ಅಲ್ಲಿದ್ದ ಗ್ರಂಥಭಂಡಾರವು ನಾಶವಾಯಿತು. ಇಂತಹುದೇ ಮತ್ತೊಂದು ಉದಾಹರಣೆಯೆಂದರೆ ಬಿದನೂರಿನ ರಾಣಿ ವೀರಮ್ಮಾಜಿಯು ಇನ್ನೇನು, ತಾನು ಹೈದರನಿಂದ

---

೩೦. ಹೆಚ್. ದೇವೀರಪ್ಪ : ಕನ್ನಡ ಹಸ್ತಪ್ರತಿಗಳ ಇತಿಹಾಸ, ಪುಟ -೬೪, ೬೫

೩೧. ಹೆಚ್. ದೇವೀರಪ್ಪ : ಕನ್ನಡ ಹಸ್ತಪ್ರತಿಗಳ ಇತಿಹಾಸ, ಪುಟ -೬೪, ೬೫

ಪರಾಜಿತಾಳದಂತೆಯೇ ಎಂದು ಭ್ರಮಿಸಿ ತನಗೆ ಬೇಕಾದ ಅಮೂಲ್ಯ ವಸ್ತುಗಳನ್ನೂ, ಐಶ್ವರ್ಯವನ್ನು ತೆಗೆದುಕೊಂಡು ಅರಮನೆಗೆ ಬೆಂಕಿಯಿಡಿಸಿ ಭುವನಗಿರಿ ದುರ್ಗಕ್ಕೆ ಓಡಿಹೋದಳೆಂದು ಇತಿಹಾಸ ಹೇಳುತ್ತದೆ. ಅರಮನೆಯ ಗ್ರಂಥಭಂಡಾರ ಸುಡದಿರುತ್ತದೆಯೇ ?[೩೨]

35 ವರ್ಷಗಳ ಕಾಲ ಬಹುಮನಿ ರಾಜ್ಯಕ್ಕೆ ಸೇವೆಸಲ್ಲಿಸಿದ ಮಹಮೂದ್ ಗವಾನ್ ರಾಜನೀತಿಜ್ಞನೆಂದೂ ವಿದ್ವಾಂಸನೆಂದೂ ಹೆಸರಾದವನು. ಗವಾನನು ಬಹಮನಿ ಅರಸರ ಕಾಲದಲ್ಲಿ ಕ್ರಿ.ಶ. 1458-81 ವರೆಗೆ ಮಂತ್ರಿಯಾಗಿದ್ದ. ಈತ 1453ರಲ್ಲಿ ತನ್ನ 42ನೊಯ ವಯಸ್ಸಿನಲ್ಲಿ ಅರೇಬಿಯದ ಗಿಲಾನ್‌ನಿಂದ ವ್ಯಾಪಾರಕ್ಕೊಸ್ಕರ ಬಂದವನು ಬೀದರಿಗೆ ಹೋದ. ಬಹುಮನಿ ರಾಜ್ಯದಲ್ಲಿ ಹಿರಿಯ ಹುದ್ದೆ ಕೈಗೊಂಡ ಅರ್ಥಶಾಖೆಯನ್ನು ಸುವ್ಯವಸ್ಥಿತ ಗೊಳಿಸಿದ. ಭ್ರಷ್ಟಾಚಾರವನ್ನು ನಿರ್ಮೂಲನೆಮಾಡಿದ. ಜನರ ವಿದ್ಯಾಭ್ಯಾಸಕ್ಕೆ ವಿಶೇಷ ಪ್ರೋತ್ಸಾಹಕೊಟ್ಟ ಆತನು 1472 ರಲ್ಲಿ ತನ್ನ ಸ್ವಂತ ಹಣದಿಂದ ಒಂದು ವಿದ್ಯಾಲಯವನ್ನು ಕಟ್ಟಿಸಿದ. ಆ ವಿದ್ಯಾಲಯದಲ್ಲಿ ದಕ್ಷರಾದ ತತ್ತ್ವಶಾಸ್ತ್ರಜ್ಞರಲ್ಲದೆ, ವಿಜ್ಞಾನಿಗಳನ್ನು ಗವಾನ್ ನೇಮಿಸಿದ್ದ. ಸ್ವತಃ ತಾನೂ ಭೋಧಿಸಿದ ಆ ವಿದ್ಯಾ ಸಂಸ್ಥೆಯಲ್ಲಿ ವಿದ್ಯಾರ್ಥಿಗಳೂ, ಅಧ್ಯಾಪಕರೂ ಬೇರೆ ಬೇರೆಯಾಗಿ ವಾಸಿಸುತ್ತಿದ್ದರು ಆಕಸ್ಮಾತ್ ಎರಗಿ ಬಂದ ಆಕ್ರಮಣಕಾರರ ದಾಳಿಗೆ ತುತ್ತಾಗಿ ಅಸಂಖ್ಯಾತ ಹಸ್ತ ಪ್ರತಿಗಳು, ಗ್ರಂಥಗಳು ತತ್ತರಿಸಿ ಕಣ್ಮರೆಯಾಗಿವೆ.[೩೩]

ಹಿಂದೊಮ್ಮೆ ಜೈನ ಕಾಶೀಯೆಂದೇ ಹೆಸರಾಗಿದ್ದ ಕೊಪಣ ನಗರ ಇಂದು ರಾಜಕೀಯ, ಧಾರ್ಮಿಕ ಸಂಚಿಗೆ ಬಲಿಯಾದುದನ್ನು ಈ ಉದಾಹರಣೆಗಳಿಂದ ಗಮನಿಸಬಹುದು. ಕವಿರಾಜಮಾರ್ಗಕಾರನು ಕೊಪಣ ನಗರವನ್ನು ''ವಿದಿತ ಮಹಾಕೊಪಣನಗರ'' ಎಂದಿರುವುದರಿಂದ ಇದು ಆಗಲೇ ಬಹಳ ಪ್ರಸಿದ್ಧಿಯನ್ನು ಪಡೆದ ಮಹಾನಗರವಾಗಿತ್ತೆಂದು ಊಹಿಸಬಹುದು. ಕುಪಣ, ಕೊಪಣ, ಕುಪಿಣ ತೀರ್ಥ ಎಂಬ ಹೆಸರುಗಳಿಂದ ಶಾಸನಗಳಲ್ಲಿ ಕಾಣಿಸಿಕೊಳ್ಳುವ ಈ ಊರು ಅಥವಾ ನಗರ ಕೋಪಣಾದ್ರಿಯನ್ನು ಹೊಂದಿದೆ. ರನ್ನಕವಿಯ ಅಜಿತಪುರಾಣದಲ್ಲಿ ''ನೆಗಳ್ದ ಕೊಪಣಾಚಳದಂತೆ ಪವಿತ್ರಮತ್ತಿಮಬ್ಬೆಯ ಚರಿತಂ'' ಎಂದಿರುವುದು ಕೊಪ್ಪಳದ ಪರ್ವತದ ಮಹತ್ವವನ್ನು ಎತ್ತಿ ಹಿಡಿಯುತ್ತದೆ. ಶಿಕಾರಿಪುರದ ಶಾಸನದಲ್ಲಿ

ಊರೊಳ್ಪದೆ ಬಸದಿಯ । ನೋರಂತಿರೆ ಮಾಡಿ ಬೆಳವಗವತ್ತಿಯ ನಾಡಂ ॥
ಧಾರಣಿ ನೆಗಳ್ದ ಕೊಪಣ । ಕೋರಗೆ ಮಾಡಿದನುದಾರ ನಿಧಿಯೇಚರಸಂ ॥

ಎಂದು ವಿವರಿಸಲಾಗಿದೆ. ಅದೇ ರೀತಿ ಕೊಪ್ಪಳದಲ್ಲಿ ಪ್ರಾಚೀನ ಕಾಲದಲ್ಲಿ 772 ಜೈನ ಬಸದಿಗಳಿದ್ದವೆಂಬ ಐತಿಹ್ಯವಿದೆ. ಹೀಗಿರುವ ಕೊಪಣನಗರ ಪ್ರಾಚೀನ ಕಾಲದಲ್ಲಿ ಯಾವ ನಾಡಿಗೆ ಸಂಬಂಧಿಸಿದ ಪಟ್ಟಣವಾಗಿತ್ತೆಂಬುದು ಇನ್ನೂ ಖಚಿತಪಡಬೇಕಾಗಿದೆ. ಡಾ॥ಪಿ.ಬಿ.ದೇಸಾಯಿ ಯವರು ಎಡತೊರೆ - 2000 ನಾಡನ್ನು ಕುರಿತು ಬರೆಯುತ್ತಾ "Modern Koppal was probably included in this

---

೩೨. ಹೆಚ್. ದೇವೀರಪ್ಪ: ಕನ್ನಡ ಹಸ್ತಪ್ರತಿಗಳ ಇತಿಹಾಸ, ಪುಟ -೬೪. ೬೫
೩೩. ನಿರಂಜನ (ಸಂ.) ಜ್ಞಾನ ಗಂಗೋತ್ರಿ : ಸಂಪುಟ -೭. ಪುಟ -೪೯೦.

tract" ಉಪ್ಪಿನ ಬೆಟಗೇರಿ ಶಾಸನದಲ್ಲಿ ಶಂಕರಗಂಡನು ತಾನು ಕಟ್ಟಿಸಿದ ಕೊಪ್ಪಳದ ಜಯಧೀರ ಜಿನಾಲಯಕ್ಕೆ ಕುಕ್ಕನೂರು 30ಕ್ಕೆ ಸೇರಿರಬೇಕೆಂದು ಡಾ|| ಎಂ.ಎಂ.ಕಲಬುರ್ಗಿಯವರು ಊಹಿಸುತ್ತಾರೆ.[೩೪]

ಇಷ್ಟೆಲ್ಲ ದಾಖಲಾತಿ, ಜೈನಮಂದಿರ, ಬಸದಿಗಳನ್ನು ಕೊಪಣನಗರ ಹೊಂದಿದ್ದರೆ. ಅಲ್ಲಿ ಜೈನಮತಾವಲಂಬಿ ಹಸ್ತಪ್ರತಿಗಳು, ಗ್ರಂ.ಥಗಳು, ಕಟ್ಟು, ಕವುಳಿಗೆಗಳು ಪ್ರಾಕೃತ ಸಾಹಿತ್ಯದ ಹಸ್ತಪ್ರತಿಗಳು ಇದ್ದಿರಲೇ ಬೇಕು ಇಂದಿನ ಕೊಪಣ ನಗರದಲ್ಲಿ ಜೈನರ ಜಿನಾಲಯಗಳು, ರನ್ನಕವಿ ಹೊಗಳಿದ ರಜತಗಿರಿ ಜೈನ ಅವಶೇಷಗಳು ಯಾವ ರೀತಿ ಉಳಿದುಕೊಂಡಿವೆ ಎಂಬುದು ಎಲ್ಲರಿಗೂ ತಿಳಿದ ವಿಷಯವಾಗಿದೆ. ಎಲ್ಲವನ್ನು ನುಂಗಿ ನೀರು ಕುಡಿದ ಇತಿಹಾಸವೂ ಹೆಬ್ಬಾವಿನಂತೆ ಬೆಟ್ಟವನ್ನು ಸತ್ಯವನ್ನು ಸುತ್ತಿಕೊಂಡು ಕಣ್ಣುಮುಚ್ಚಿ ಮಲಗಿಕೊಂಡಂತಿದೆ.

ಇಂದಿಗೂ ಕರ್ನಾಟಕ ಅನೇಕ ಮಠಗಳು ಜನಸಾಮಾನ್ಯರಿಂದ ಸಂಗ್ರಹಿಸಿದ ಅನೇಕ ತಾಡೋಲೆಗಳನ್ನು ಸಂದೂಕಕ್ಕೇರಿಸಿ ಕ್ರಿಮಿಕೀಟಾದಿಗಳಿಗೆ ಆಹಾರವನ್ನೊದಗಿಸುವ ಪರಿಯಂತಿವೆ. ತಾವು ತಂದ ಗ್ರಂಥಗಳ ಆರೈಕೆ, ಸಂಗೋಪನ, ಸಂರಕ್ಷಣೆ, ಸೂಚಿಯನ್ನಾದರೂ ಮಾಡದೇ ಮಾಡುವವರಿಗೂ ಕೊಡದೇ ಅಪೂರ್ವ ಗ್ರಂಥಗಳು ಹಾಳಾಗಲೂ ಧಾರ್ಮಿಕ ಮಠಗಳು ಕಾರಣವಾಗುತ್ತಿರುವುದು ಅತೀ ಶೋಚನೀಯ ಸಂಗತಿಯಾಗಿದೆ. ಚತುರತನದ ವರ್ಣಾಶ್ರಮ ಪದ್ದತಿ ನಮ್ಮ ಧಾರ್ಮಿಕ ಕೇಂದ್ರಗಳಲ್ಲಿ ಇನ್ನೂ ಜೀವಂತ ವಾಗಿರುವುದರಿಂದ ಮತ್ತು ಅನ್ಯರು ಧಾರ್ಮಿಕ ಹಸ್ತಪ್ರತಿಗಳನ್ನು ಮುಟ್ಟಿನೋಡಬಾರದು ಎಂಬ ಧಾರ್ಮಿಕ ಕಟ್ಟಳೆ ಇಂದಿಗೂ ಜಾರಿಯಲ್ಲಿದೆ. ಅನೇಕ ಹಸ್ತಪ್ರತಿಗಳು ಅಧ್ಯಯನಕ್ಕೂ ಸಿಗದೆ ವಿದ್ವಾಂಸರ ಕರಗಳಿಗೂ ನಿಲುಕದೆ ಸಕಾಲಿಕ ಆರೈಕೆ ಉಪಚಾರಗಳಿಲ್ಲದೆ ತಮ್ಮಷ್ಟಕ್ಕೆ ತಾವೇ ಹಾಳಾಗುತ್ತಿರುವುದು ನಮ್ಮ ಸಾಂಸ್ಕೃತಿಕ ಜಗತ್ತಿಗೆ ಒಂದು ದೊಡ್ಡ ಆಪತ್ತಾಗಿದೆ.

ಸಾಮಾಜಿಕ ಆಪತ್ತುಗಳು :

ವಿವಿದ ಜನಾಂಗಗಳ ಸಮೂಹವನ್ನು ಸಮಾಜ ಎಂದು ಕರೆಯುವುದು ರೂಢಿ, ಈ ಕೂಟದಲ್ಲಿ ವಿದ್ಯೆ,ಅಧಿಕಾರ, ಅಂತಸ್ತು ಪಡೆದದ್ದು ಒಂದು ಗುಂಪಾದರೆ ಅದನ್ನು ಪಡೆಯಲು ಹಗಲಿರಳು ಸೆಣಸುತ್ತಿರುವುದು ಮತ್ತೊಂದು ಇದು ಯಾವ ಗೊತ್ತುಗುರಿಗಳು ಇರದೆ ಪ್ರತಿಷ್ಠಿತರೊಂದಿಗೆ ಸಮಾನತೆ ಸಾಧಿಸಲು ಹೆಣಗುತ್ತಿರುವುದು ಮಧ್ಯಮ ಮತ್ತು ಕೆಳವರ್ಗದವರ ಹೋರಾಟವನ್ನು , ಆರ್ಥಿಕ, ಸಾಮಾಜಿಕ,ರಾಜಕೀಯ ಘನತೆಗೆ ನಡೆಯುವ ಶೀತಲ ಸಮರ ಎನ್ನಬಹುದು. ಈ ಸಮೂಹ ಬದುಕನ್ನು ಸಾಮಾಜಿಕ ಬದುಕಿನ ಕನ್ನಡಿಯೂ ಅನ್ನಬಹುದು. ಇಂತಹ ಸಾಮಾಜಿಕ ಬದುಕಿನ ಕೆಲಮನೆಗಳಲ್ಲಿ ಪ್ರಾಚೀನಕಾಲದ ಕೆಲವು ನಾಣ್ಯಗಳೋ, ಖಡ್ಗಗಳೋ, ಗ್ರಂಥಗಳೋ, ಹಸ್ತಪ್ರತಿಗಳ

---

೩೪. ಅಲ್ಲಮ ಪ್ರಭು ಬೆಟ್ಟದೂರು : ತಿರುಳಗನ್ನಡ ನಾಡು : ಸವಿಸಂಚಿಕೆ : ಗುರುಲಿಂಗ ಕಾಪ್ಸೆ ಪುಟ-೧.

ಎಸಳುಗಳೋ ಇದ್ದರಂತೂ ಆ ಮನೆತನದ ಘನತೆ ಗಾಂಭಿರ್ಯ ಹೇಳಲುಸರಳವಾದುದು. ಸಾಮಾಜಿಕ ಬದುಕಿನಲ್ಲಿ ಇಂತಹ ಅನುಭವ ಗಳನ್ನು ಗಳಿಸಿರುವ ಶ್ರೀ ಎಚ್.ದೇವಿರಪ್ಪನವರ ಕೆಲವು ಅನುಭವಗಳು ಇಂತಿವೆ.

''ಹಸ್ತಪ್ರತಿಗಳಿದ್ದ ಮನೆಯವರು ಅವುಗಳ ಮಹತ್ವವನ್ನು ಅರಿಯದೇ ಅವನ್ನು ಏನುಮಾಡಬೇಕೆಂಬುದರ ತಿಳಿವಳಿಕೆಯಿಲ್ಲದೆ, ಸರಿಯಾಗಿ ಸಂರಕ್ಷಣೆ ಮಾಡದಿದ್ದರೆ ತಮ್ಮ ಮನೆತನಕ್ಕೆ ಕೇಡಾಗಬಹುದೆಂದು ಹೆದರಿ ಹಸ್ತಪ್ರತಿಗಳ ಹೊರೆಗಳನ್ನು ಹೊಳೆಗೋ ಕೆರೆಗೋ ಎಸೆದು ಕೆತೊಳೆದುಕೊಳ್ಳುವುದು ಸಾಮಾನ್ಯ ಇನ್ನೂ ಕೆಲವರಲ್ಲಿ ಕೈ ಬರಹಗಳಿಂದ ತುಂಬಿದ ಅರಪೆಟ್ಟಿಗೆಯ ಬಾಯಿ ತೆರೆಯದೆ ಪುಸ್ತಕಗಳನ್ನು ಸೆರೆಯಲ್ಲಿಟ್ಟು ಅವಕ್ಕ ಅವೇ ಇಲ್ಲವಾಗುವಂತೆ ಮಾಡುವರು.[೨೫]

ಪಂಡಿತರು, ಪುರೋಹಿತರು ಜೋಯಿಸರು, ವೈದ್ಯರು ಮುಂತಾದವರು ಮುಂದಿನ ಪೀಳಿಗೆಯವರು, ಇಂದಿನ ಅರ್ಥದಲ್ಲಿ ವಿದ್ಯಾವಂತರಾಗಿ ದೊಡ್ಡ ದೊಡ್ಡ ಹುದ್ದೆಗಳನ್ನು ಹಿಡಿದು ತಮ್ಮ ಪೂರ್ವಿಕರು ಗಳಿಸಿದ ವಿದ್ಯೆಯನ್ನು ಗ್ರಂಥ ಸಂಪತ್ತನ್ನು ಹಳೆಯ ಸರಕಿನ ಕೋಣೆಯಲ್ಲಿ ಎಸೆದಿದ್ದು ಅವು ಇಲಿ ಹೆಗ್ಗಣ ಗೆದ್ದಲುಗಳಿಗೆ ಆಹಾರವಾಗಿ ಸಂಪೂರ್ಣವಾಗಿ ನಾಶವಾದ ಮೇಲೆ ಆ ಹಸ್ತಪ್ರತಿಗಳ ಪುಡಿಯನ್ನು ನಿರ್ದಾಕ್ಷಿಣ್ಯದಿಂದ ತಿಪ್ಪೆಗೊ, ಹೊಳೆಗೋ, ಕೆರೆಗೋ ಎಸೆಯಿಸಿ ಮನೆಯನ್ನು ಚೊಕ್ಕಟಗೊಳಿಸಿವುದು ಉಂಟು''[೨೬]

ಪದಪುಗಾತಿಯರಾದ ಕಡು ಜಾಣೆಯರು ತಮ್ಮ ಮನೆಯಲ್ಲಿದ್ದ ಓಲೆಯುಗರಿಯ ಕಟ್ಟುಗಳನ್ನು ಬಿಚ್ಚಿ ಅವುಗಳಲ್ಲಿ ಚೆನ್ನಾಗಿರುವುದನ್ನು ಆರಿಸಿಕೊಂಡು ಮಸಿಹೋಗುವಂತೆ ತೊಳೆದು ಅವುಗಳಿಂದ ಹೂಬುಟ್ಟಿ ಮಾಡಿಕೊಳ್ಳುವುದು, ಚೆನ್ನಾಗಿಲ್ಲದವನ್ನು ಕಸದಗುಂಡಿಗೆ ಎಸೆಯುವುದು. ಮಳೆಗಾಲದಲ್ಲಿ ಒಲೆ ಉರಿಯದಿದ್ದಾಗ ಓಲೆಯ ಗರಿಗಳನ್ನು ಕಾಗದದ ಹಸ್ತಪ್ರತಿಗಳನ್ನು ಒಲೆಗೆ ಒಟ್ಟಿ ಬೆಂಕಿಯನ್ನು ಪುಟಗೊಳಿಸುವುದು ನಡೆದಿದೆ. ಹಸ್ತಪ್ರತಿಗಳು ಎಲ್ಲರಿಂದಲೂ ಓದಲಾಗದ ಲಿಪಿಯಲ್ಲಿರುವುದು ಉಂಟು. ಉತ್ತರಕನ್ನಡ, ದಕ್ಷಿಣ ಕನ್ನಡ ಜಿಲ್ಲೆಗಳಲ್ಲಿ ಶಿವಮೊಗ್ಗೆ ಜಿಲ್ಲೆಯ ಕೆಲವು ಭಾಗಗಳಲ್ಲಿ ಇರುವ ಹವ್ಯಕ ಬ್ರಾಹ್ಮಣರ ಮನೆತನಗಳಲ್ಲಿ ತಿಗಳಾರಿ ಲಿಪಿಯಲ್ಲಿ ಬರೆದ ಸಹಸ್ರಾರು ಗ್ರಂಥಗಳಿವೆ. ಅವನ್ನು ಓದಲು ಬಾರದೆ, ಅವನ್ನು ಹಾಗೆಯೇ ಇಟ್ಟಿದ್ದು ಅಥವಾ ಹಾಳುಮಾಡಿದ್ದು ಇದೆ.[೨೭]

ಸಾಮಾಜಿಕ ಬದುಕಿನಲ್ಲಿ ಅವಜ್ಞೆ, ಉದಾಸೀನ ಮತ್ತು ಕಾರಣಾಂತರಗಳಿಂದ ಗ್ರಂಥರೂಪದ ಸಾಹಿತ್ಯ ಮೌಖಿಕ ರೂಪದಲ್ಲಿ ಉಳಿದಿರುತ್ತದೆ. ಅದನ್ನು ಹಾಡುವವರು, ಅನುಸರಿಸುವವರು ಇರುತ್ತಾರೆ. ಇಂತಹವುಗಳ ಕಡೆಗೂ ಲಕ್ಷವಹಿಸಬೇಕೆಂದು ಹಿರಿಯ ಹಸ್ತಪ್ರತಿಗಳ

---

೨೫. ೨೬, ೨೭ : ಹೆಚ್. ದೇವೀರಪ್ಪ: ಕನ್ನಡ ಹಸ್ತಪ್ರತಿಗಳ ಇತಿಹಾಸ : ಪುಟ -೬೪. ೬೫. ೬೧. ೬೨.

ತಜ್ಞರಾಗಿರುವ ಡಾ|| ಎಂ.ಎಂ.ಕಲಬುರ್ಗಿಯವರು ತಮ್ಮ ವಿಚಾರಗಳನ್ನು ಈ ರಿತಿಯಾಗಿ ಕೊಡುತ್ತಾರೆ. ''ಕೃತಿಯೊಂದನ್ನು ಹಸ್ತಪ್ರತಿರೂಪದ ಜೊತೆ, ಪಾರಂಪರಿಕವಾಗಿ ಮೌಖಿಕ ರೂಪದಲ್ಲಿಯೂ ಕೆಲವಡೆ ಉಳಿಸಿಕೊಂಡು ಬಂದಿರುತ್ತಾರೆ ಸಾಲೋಟಗಿಯಲ್ಲಿ ಡಂಗುರ ಪದಗಳನ್ನು, ಕೋಡೆಕಲ್ಲುದಲ್ಲಿ ಕಾಲಜ್ಞಾನ ವಚನಗಳನ್ನು ವಿಶಿಷ್ಟ ಬಗೆಯಲ್ಲಿ ವಿಶಿಷ್ಟವಾದ್ಯಗಳೊಂದಿಗೆ ಹಾಡುತ್ತಿದ್ದು ಇಂಥಲ್ಲಿ ಹಸಪ್ತ್ರತಿ ಸಂಗ್ರಹದೊಂದಿಗೆ ಧ್ವನಿಯ ಮುದ್ರಣ ಕಾರ್ಯವನ್ನು ಪೂರೈಸಿಕೊಳ್ಳಬೇಕು, ಕೆಲವಡೆ ಹಸ್ತಪ್ರತಿ ಎಂದೋ ಹಾಳಾಗಿ ಕೇವಲ ಅದರ ಪದ್ಯಗಳನ್ನು ಪರಂಪರಾಗತವಾಗಿ ಹಾಡುತ್ತಿರಬಹುದು. ರಾಘವಾಂಕನ 'ಅನಪಲಬ್ದ ಶರಭಚಾರಿತ್ರ'ದ ಬಿಡಿಪದ್ಯಗಳನ್ನು ಬಳ್ಳಾರಿ ಜಿಲ್ಲೆಯಲ್ಲಿ ಹಾಡುವುದಾಗಿ ತಿಳಿದು ಬಂದಿದೆ. ಉಳಿದು ನಿಂತ ಇಂಥ ಸಂಪತ್ತನ್ನು ಕಷ್ಟ ಪಟ್ಟು ರಕ್ಷಿಸಿಕೊಳ್ಳಬೇಕು.'' [೩೮]

ಕಂದಾಚಾರ :

ನಾವೀಗ ಸಾಹಿತ್ಯಕವಾಗಿ, ಸಾಂಸ್ಕೃತಿಕವಾಗಿ ಮತ್ತು ವೈಜ್ಞಾನಿಕವಾಗಿ ತುಂಬಾ ಮುಂದುವರೆದಿದ್ದೇವೆ. ಮೀನಿನಂತೆ ಈಜಬಲ್ಲೇವು, ಹಕ್ಕಿಯಂತೆ ಹಾರಬಲ್ಲೆವು, ಆದರೂ ಕಂದಾಚಾರದ ಭೂತಮಾತ್ರ ನಮ್ಮ ಬೆನ್ನುಬಿಟ್ಟಿಲ್ಲ. ಧನಬಲ, ಜನಬಲ, ಹಲವಾರು ವಿಧದ ಅಂತರಿಕ ಬಲಗಳನ್ನು ನಾವು ಮೈಗೂಡಿಸಿಕೊಂಡಿದ್ದರೂ ಮಾನಸಿಕಬಲ ನಮಗಿನ್ನು ಸಿಕ್ಕಿಲ್ಲ. ಮಾನಸಿಕ ಬಲವಿಲ್ಲದ ಕಾರಣ ನಮ್ಮ ಎಲ್ಲಾ ಬಲಗಳು ದುರ್ಬಲವಾಗಿವೆ. ನಾವು ವಾಸಿಸುವ ಮನೆಯಿಂದ ಹಿಡಿದು ಎಲ್ಲದರಲ್ಲೂ ನಮಗೆ ವಾಸ್ತು, ಯಮ, ಗುಳಿಕಾಲಗಳು ಇಂದಿಗೂ ಕಾಡುತ್ತಲೆ ಇರುತ್ತವೆ. ಈ ರೋಗ ಹಿಂದಿನಿಂದ ಬಂದಿದ್ದೂ ಹಸ್ತಪ್ರತಿ ಸಂಗ್ರಹಕ್ಕೂ ಈ ರೋಗ ಅಂಟಿಕೊಂಡಿದೆ ಈ ಕುರಿತು ಶ್ರೀ ದೇವೀರಪ್ಪನವರು ಹೀಗೆ ಹೇಳುತ್ತಾರೆ.

ಅಣ್ಣ ತಮ್ಮಂದಿರು ಚರಾಸ್ತಿಯನ್ನು ಪಾಲು ಮಾಡಿಕೊಳ್ಳುವಾಗ ತಮ್ಮ ಹಿರಿಯರು ಸಂಪಾದಿಸಿದ ಕೈಬರಹಗಳನ್ನು ಹಂಚಿಕೊಂಡಿದ್ದಾರೆ. ಈ ಪರಿಯ ಹಂಚಿಕೆಯ ಕಾರ್ಯ ಎರಡು-ಮೂರು ತಲೆಮಾರುಗಳವರೆಗೆ ನಡೆದು ಹಸ್ತಪ್ರತಿಗಳು ಛಿದ್ರಛಿದ್ರವಾಗಿ ಉದಾಸೀನಕ್ಕೆ ಪಕ್ಕಾಗಿ ನಾಶವಾಗಿರುವುದುಂಟು. ಮನೆಯಲ್ಲಿ ಒಂದೇ ಒಂದು ಓಲೆಯ ಪ್ರತಿಯದ್ದರೂ ಆದರ ಗರಿಗಳನ್ನು ಎಣಿಸಿಕೊಂಡು ಹಂಚಿಕೊಂಡಿರುವುದಕ್ಕೆ ನಿದರ್ಶನಗಳಿವೆ. ಈ ಪಾಲುಗಾರಿಕೆ ಮತ್ತೊಂದು ಸಲ ಮಗದೊಂದು ಸಲ ನಡೆದು ಮೂಲಗ್ರಂಥವೇ ನಾಶವಾಗದಿರುತ್ತದೆಯೇ ? ಮೈಸೂರು ಮಹಾರಾಜರು ಮರ್ಯಾದೆಗೆಂದು ಕೊಟ್ಟ ಬಣ್ಣದ ಪಲ್ಲಕ್ಕಿಯನ್ನೇ ಒಡೆದು ಮುರಿದು ಹಂಚಿಕೊಂಡ ಅಣ್ಣ ತಮ್ಮಂದಿರಿದ್ದಾರೆ ![೩೯] ಅಂದರೆ ಹಸ್ತಪ್ರತಿ ಎಂದರೆ ಮನೆಯ ಲಕ್ಷ್ಮೀಯಂತಿದ್ದು ಅದನ್ನು ಮತ್ತೊಬ್ಬರಿಗೆ ಕೊಟ್ಟರೆ ಮನೆಲಕ್ಷ್ಮೀ ಹೋಗದೆ ಇರುತ್ತಾಳೆಯೇ ? ಎನ್ನುವ ಕಂದಾಚಾರದಿಂದ ನಾವಿನ್ನೂ ಹೊರಗೆಬಂದಿಲ್ಲ ! ಪಂಡಿತರಲ್ಲಿ ಕೆಲವರು ವಿಚಿತ್ರ ಸ್ವಭಾವದವರಿರುತ್ತಾರಂತೆ. ಜೀವಮಾನ

೩೮. ಹೆಚ್. ದೇವೀರಪ್ಪ: ಕನ್ನಡ ಹಸಪ್ತ್ರತಿಗಳ ಇತಿಹಾಸ , ಪುಟ -೬೪. ೬೫. ೬೧. ೬೨.
೩೯. ಸಿದ್ಧಯ್ಯ ಪುರಾಣಿಕ (ಸಂ.) : ಮಣಿಹ ತದ್ದಲಸೆ ವಿಜ್ಞೇಶ್ವಶರ್ಮಾ, ತಿಗಳಾಗಿರ ಪಡುವಣ , ಪುಟ- ೯೭. ೯೮.

ಪರ್ಯಂತ ತಮ್ಮಲ್ಲಿದ್ದ ಹಸ್ತಪ್ರತಿಗಳ ಉಪಯೋಗ ಪಡೆದು, ತಾವು ಸತ್ತಮೇಲೆ ಅದನ್ನು ಅಪವಿತ್ರಗೊಳಿಸಬಹುದೆಂಬ ಶಂಕೆಯಿಂದ ಪುಣ್ಯನದಿಗಳಲ್ಲಿ ತೇಲಿಬೀಡುತ್ತಿದ್ದರಂತೆ.[೪೦]

ಹಸ್ತಪ್ರತಿಗಳನ್ನು ರಾಷ್ಟ್ರೀಯ ಆಸ್ತಿ ಎಂದು ಕೇಂದ್ರ ಸರ್ಕಾರ ಸಾರಿದ್ದರೂ, (ಹಾಗೆ ಸಾರಿದ್ದನ್ನೂ ಸರ್ಕಾರ ಬಳಿಕ ಹಿಂತೆಗೆದುಕೊಂಡಿತು) ಅದನ್ನು ಹೊಂದಿರುವವರು ಹೆಚ್ಚು ಗಮನ ನೀಡುತ್ತಿದ್ದಂತೆ ಕಾಣುತ್ತಿಲ್ಲ. ಸಂಸ್ಥೆಗಳಲ್ಲೊ, ಮಠಗಳಲ್ಲೋ, ಬಸ್ತಿಗಳಲ್ಲೋ ಅಂತಹ ಗ್ರಂಥಗಳು ಸಂಗ್ರಹವಾಗಿದ್ದು ಸುರಕ್ಷಿತವಾಗಿರುವಂತೆ ನೋಡಿಕೊಂಡು ಬರುತ್ತಿದ್ದರೆ, ಎಂದಾದರೊಂದು ಸಮಯದಲ್ಲಿ ಅವುಗಳನ್ನು ಬಳಸಿಕೊಳ್ಳಬಹುದು. ಆದರೆ ವೈಯಕ್ತಿಕವಾಗಿ ಅವುಗಳನ್ನು ಉಳಿಸಿಕೊಂಡಿದ್ದರೆ, ಅಂತಹವರಿಗೆ ಅವನ್ನು ಕಾಪಾಡಿಕೊಂಡು ಬರುವುದು ದುಸ್ತರದ ಸಂಗತಿ. ಅವರು ಅದನ್ನು ಪೂರ್ವಜರು ಸ್ವತ್ತೆಂದು ಹೆಮ್ಮೆಯಿಂದ ಬೀಗುತ್ತಾ ಸೂರಿನ ಅಡಿಯಲ್ಲಿಯೇ, ಪೆಟ್ಟಿಗೆಯಲ್ಲಿಯೋ ಬಚ್ಚಿಡುತ್ತಾರೆ. ಆ ಗ್ರಂಥಗಳಿಗೆ ಅವರು ನೀಡುವ ಉಪಚಾರವಾದರೂ ಎಂತಹುದು ? ''ನವರಾತ್ರಿಯಂದು ಬೆಳಕು ಕಂಡು ಪೂಜಾರ್ಹವಾಗಿ, ಹಾಲುಂಡು ಮತ್ತೆ ಅವು ಕತ್ತಲ ಕೋಣೆಯ ಮೂಲೆ ಸೇರಬೇಕಾದ ದುಸ್ಥಿತಿ ಒದಗಿ ಹಲವಾರು ಅಮೂಲ್ಯ ಪ್ರತಿಗಳು ತ್ರುಟಿತವಾಗಿ ಹೋಗಿವೆ.''[೪೧]

ಹಸ್ತಪ್ರತಿಗಳನ್ನು ''ತಾನೂ ತಿನ್ನ ಪರರಿಗೂ ಕೊಡ '' ಎಂಬ ಗಾದೆಯಂತೆ ಅವುಗಳಲ್ಲಿ ಏನಡಗಿದೆ ? ಎಂಬುದನ್ನು ತಿಳಿಯಲಿಚ್ಛಿಸದೆ ಅಥವಾ ತಿಳಿಯಲಾಗದೆ ಅವು ತಮ್ಮ ಪೂರ್ವಿಕರ ಆಸ್ತಿಯೆಂದು ಭಾವಿಸಿ ಬಚ್ಚಿಡುತ್ತಾರೆ. ಕಾಲಕ್ರಮೇಣ ಅವು ನಶಿಸಿ ಹೋಗುತ್ತಾ, ಅಪ್ರಯೋಜಕವಾಗುತ್ತವೆ. ಒಮ್ಮೆ ಗುಬ್ಬಿಯ ಸಮೀಪದಲ್ಲಿರುವ ಚೇಳೂರಿಗೆ ಹೋಗಿ ಪ್ರತಿಗಳ ಶೋಧನೆ ನಡೆಸುತ್ತಿದ್ದಾಗ ಒಬ್ಬರು ಹೇಳಿದ ಮಾತಿವು '' ಸ್ವಾಮಿ ಇನ್ನೂ ಆರು ತಿಂಗಳ ಮುಂಚೆ ಬಂದಿದ್ದರೆ ನಿಮಗೆ ಕೊನೆ ಪಕ್ಷ ಒಂದು ನೂರು ಹಸ್ತಪ್ರತಿಗಳಾದರೂ ದೊರೆಯುತ್ತಿತ್ತು; ಆದರೆ ಅವರು ಸ್ವರ್ಗಸ್ಥರಾದಾಗ ಅವರೊಡನೆ ಆ ಗ್ರಂಥಗಳನ್ನೆಲ್ಲಾ ಸಮಾಧಿ ಮಾಡಿಬಿಟ್ಟರು'' ಇಂತಹ ಮೌಢ್ಯಕ್ಕೆ ಏನನ್ನಬೇಕು ತಿಳಿಯದು. ಸಂಸ್ಥೆಯವತಿಯಿಂದ ಅವರ ಮನೆ-ಮನೆಗಳ ಮುಂದೆ ಹೋಗಿ ಬೇಡಿದಾಗ ಕೊಡಲು ನಿರಾಕರಿಸುವವರೂ, ಹೋಗಲಿ ಒಮ್ಮೆ ಯಾದರೂ ನೋಡಿಕೊಡುತ್ತೇವೆಂದು ಕೋರಿದರೂ ಒಪ್ಪದವರೂ ಇನ್ನೂ ಅಲ್ಲಲ್ಲಿ ಇದ್ದಾರೆ.[೪೨]

ಇಂತಹುದೇ ಮತ್ತೊಂದು ಉದಾಹರಣೆ ಎಂದರೇ ಕೆಲವರ ಮನೆಯಲ್ಲಿ ಹಸ್ತಪ್ರತಿ ಇದೆ. ಅವರು ಬೇರೆ ಊರಿಗೆ ಹೋಗುತ್ತಿದ್ದಾರೆ ಎಂಬ ಸುದ್ದಿ ತಿಳಿದು ಅವರು ಇರುವ ಮನೆಯ ಹತ್ತಿರ ಹೋದೆ. ಆ ವೇಳೆಗೆ ಆ ಮನೆಯವರು ಮನೆ ಖಾಲಿಮಾಡಿ ಲಾರಿಯಲ್ಲಿ ಸಾಮಾನು ಭರ್ತಿಮಾಡಿಕೊಂಡು ಆಗತಾನೆ ಹೋಗಿಬಿಟ್ಟಿದ್ದರು. ಬೇರೆ ಊರಿಗೆ, ಮನೆ ಪೂರ್ತಿಖಾಲಿಯಾಗಿತ್ತು, ಎಂಥ ಕೆಲಸವಾಯಿತು ! ಎಂದು ಚಿಂತಿಸುತ್ತಾ ಅಲ್ಲೇ ನಿಂತಿದ್ದಾಗ ಆ ಮನೆಯಿಂದ ಒಬ್ಬ ಹೆಂಗಸ್ಸು ಮನೆ

---

೪೦. ಸಿದ್ಧಯ್ಯ ಪುರಾಣಿಕ (ಸಂ.) : ಮಣಿಹ ಕೆ. ಆರ್.ಶೇಷಗಿರಿ, ಪುಟ ೧೦೪.
೪೧. ಸಿದ್ಧಯ್ಯ ಪುರಾಣಿಕ (ಸಂ.) : ಮಣಿಹ ಜಿ. ಅಶ್ವತ್ಥ ನಾರಾಯಣ , ಪುಟ ೮೮.
೪೨. ಹೆಚ್. ದೇವೀರಪ್ಪ : ಕನ್ನಡ ಹಸ್ತಪ್ರತಿಗಳ ಇತಿಹಾಸ , ಪುಟ -೬೨

ಕಸಗುಡಿಸಿ ಒಂದು ಗೋಣಿ ಚೀಲದಲ್ಲಿ ತುರಕಿಕೊಂಡು ಕಸದತೊಟ್ಟಿಗೆ ಎಸೆಯಲು ಹೊರ ಬಂದಳು. ಆ ಗೋಣಿಚೀಲದಿಂದ ಒಂದೆರೆಡು ತಾಳೆಗರಿಗಳು ಕೆಳಗೆ ಉದರಿದ್ದು ನನ್ನ ಕಣ್ಣಿಗೆ ಬಿತ್ತು. ಕೂಡಲೇ ಆ ಹೆಂಗಸ್ಸಿನ ಹಿಂದೆ ಹೋಗಿ '' ಆ ಚೀಲವನ್ನು ಸ್ವಲ್ಪ ನೋಡುತ್ತೇನೆ ಎಂದಾಗ ಕನ್ನಡ ತಿಳಿಯದ ಆ ತಮಿಳು ಹೆಂಗಸು ಅವನ್ನೆಲ್ಲಾ ಅಲ್ಲೆ ಇದ್ದ ಕಚಡಾದ ರಾಶಿ ತಿಪ್ಪೆ ಬಿದ್ದಿದ್ದ ಕಾರ್ಪೋರೇಶನ್ ತೊಟ್ಟಿಗೆ ಸುರಿದು ನಡೆದಳು. ನಾನು ಒಂದು ನಿಮಿಷ ಚಿಂತಿಸಿ ಆಕಡೆ- ಈಕಡೆ ನೋಡಿ ಯಾರು ನೋಡಿದರೂ ಸರಿ ಎಂದುಕೊಂಡು, ತೊಟ್ಟಿ ಬಳಿ ಇದ್ದ ಕಜ್ಜಿ ನಾಯಿಗಳನ್ನು ದೂರ ಓಡಿಸಿ, ತೊಟ್ಟಿ ಬಳಿ ಎಂಜಲೆಲೆಗಳಲ್ಲಿ ಅನ್ನ ಹುಡುಕುವ ಭಿಕ್ಷುಕ ಹುಡುಗರಂತೆ ಆ ತೊಟ್ಟಿ ಯಲ್ಲಿ ಇಳಿದು ಕಸ ವಿಂಗಡಿಸಿದಾಗ ಮೇಲೆ ತಿಳಿಸಿದ ಎರಡು ಮನೆ ಲೆಕ್ಕಗಳನ್ನು ಬರೆದಿಟ್ಟ ಕೆಲವು ಖಾಲಿಗರಿಗಳಿದ್ದ ತಾಳೆಗರಿ ಗ್ರಂಥಗಳು ಸಿಕ್ಕವು.''[೪೩]

ಗಲಭೆ :

ಭಾರತೀಯರಿಗೆ ಗಲಭೆ, ದೊಂಬಿ, ಮುಷ್ಕರ, ಸಾರ್ವಜನಿಕ ಆಸ್ತಿ ಹಾನಿ, ನ್ಯಾಯಕ್ಕಾಗಿ ಹೋರಾಟ ಮಾಡುತ್ತಲೆ ರಸ್ತೆ ದೀಪಗಳಿಗೆ, ಸರ್ಕಾರಿ ವಾಹನಗಳಿಗೆ ಬೆಂಕಿಹಚ್ಚಿ ಆನಂದ ಪಡುವ ವಿಕೃತ ಸಂತಸ ಇತ್ತೀಚೆಗೆ ಹೆಚ್ಚುತ್ತಿದೆ. ಗಲಭೆ, ಮುಷ್ಕರ ಮಾಡುವುದನ್ನು , ಶ್ರಮವಹಿಸಿ ದುಡಿಯುವುದನ್ನು ಆಂಗ್ಲರು ನಮಗೆ ಬೂಟು, ಲಾಠಿ ಏಟುಗಳ ಮುಖಾಂತರ ಕಲಿಸಿದ್ದರೂ ನಮಗೀಗ ನೆನಪಿನಲ್ಲಿದ್ದು ಚಾಲನೆಯಲ್ಲಿರುವ ಒಂದಂಶದ ಕಾರ್ಯಕ್ರಮವೆಂದರೆ ಸಾರ್ವಜನಿಕರಿಗೆ ಸಂಬಂದಿಸಿದ ಆಸ್ತಿ ಪಾಸ್ತಿಗಳನ್ನು ಹಾನಿಮಾಡುವುದೊಂದೆ.

ಇದೇ ವರ್ಷದ (2004) ಬಹುಶಃ ಮೇ-ಜೂನ್ ಮಾಸಗಳ ಮಧ್ಯದಲ್ಲಿ ಮಹಾರಾಷ್ಟ್ರದ ಪೂನಾಃನಗರದ ಭಂಢಾರಕರ ವಸ್ತುಪ್ರದರ್ಶನವು ಎಲ್ಲ ಸುದ್ದಿಮಾಧ್ಯಮಗಳಿಗೆ ಕೇಂದ್ರವಾಗಿತ್ತು ಏಕೆಂದರೇ ಮಹಾರಾಷ್ಟ್ರದ ಕೆಲ ಯುವಕರ ಗುಂಪು ಪ್ರದರ್ಶನಾಲಯದೊಳಕ್ಕೆ ನುಗ್ಗಿ ದಾಂಧಲೇ ಮಾಡಿದುದುದಲ್ಲದೇ ಅನೇಕ ಪೀಠೋಪಕರಣ, ಗ್ರಂಥಗಳಲ್ಲಿ ಪ್ರಾಚೀನ ಹಸ್ತಪ್ರತಿಗಳನ್ನು ಹಾಳುಗೆಡವಿದರು ಕಾರಣವೇನೆಂದರೇ ಮಹಾರಾಷ್ಟ್ರದ ನಾಯಕ ಛತ್ರಪತಿ ಶಿವಾಜಿಯವರ ಜೀವನ ಚರಿತ್ರೆಗೆ ಊನ ಬಂತು ಎನ್ನುವ ಕಾರಣಕ್ಕಾಗಿ ಕಾನೂನನ್ನು ಕೈಗೆ ತೆಗೆದುಕೊಂಡು ಸಾಮನ್ಯ ಜನರು ಇತಿಹಾಸವ 'ನ್ನು ಹಾಳುಗೆಡುವುದರೊಂದಿಗೆ ಅನೇಕ ಮೌಲ್ಯಯುತ ಗ್ರಂಥಗಳನ್ನು, ತಾಳೆಗರಿಗಳಿಗೆ ಹಾನಿಯುನ್ನುಂಟು ಮಾಡಿರುವುದು. ಈಗ ಇತಿಹಾಸವಾಗಿದ್ದರೂ. ಇಂತಹ ಘಟನೆಗಳು ನಿರಂತರ ನಡೆಯುತ್ತಿರುವುದರಿಂದ ಅನೇಕ ಗ್ರಂಥಗಳು ಹಾನಿಗೆ ಒಳಗಾಗುತ್ತಲೇ ಇರುತ್ತವೆ.

ಅಪಾತ್ರರಿಗೆ ಗ್ರಂಥದಾನ :

ಗ್ರಂಥವು ಜ್ಞಾನದ ಆಗರವಾಗಿದ್ದು ಭಗವದ್ ಸಾಕ್ಷಾತ್ಕಾರಕ್ಕೆ ಮಾರ್ಗದರ್ಶಕವಾಗಿದೆ. ಭಗವಂತನ ಪಾದತಲದಲ್ಲಿ ಮುಕ್ತಿಯನ್ನು ಹೊಂದಬೇಕಾದರೆ ಸಾಧಕನ

---

೪೩. ಸಿದ್ದಯ್ಯ ಪುರಾಣಿಕ (ಸಂ.) : ಮಣಿಪ ಶ್ರೀ ಯದುಗಿರಿ ಯತಿರಾಜ ಸಂಪತ್ಕುಮಾರ ರಾಮಾನುಜ ಜಿಯರ್ , ಪುಟ ೧೭೨. ೭೮

ಸಾಧನೆಯ ವಿವರ ತಿಳಿಸುವುದೆ ಗ್ರಂಥವಾಗಿದೆ. ಇಂತಹ ಗ್ರಂಥವನ್ನು ನಮ್ಮ ಪ್ರಾಚೀನರು ಈ ರೀತಿ ವರ್ಣಿಸಿದ್ದಾರೆ.

ತ್ರಿದೇವಂ ಪುಸ್ತಕಂ ವಿದ್ಯಾತ್ತೂತ್ರಂ ವಾಸುಕೀರುಚ್ಯತೇ ।
ಅಮಾನಕರಣೇ ದೋಷ : ತಸ್ಮಾತ್ತಚ್ಚ ನ ಹಾಪಯೇತ್ ? ॥7-54॥

ಪುಸ್ತಕವು ತ್ರಿಮೂರ್ತಿಗಳ ಸ್ವರೂಪ ಉಳ್ಳದ್ದಾಗಿರುತ್ತದೆ. ಅದಕ್ಕೆ ದಾರವು ಆದಿಶೇಷನ ಅವತಾರವಾಗಿರುವ ವಾಸುಕೀ ಸ್ವರೂಪವೆಂದೂ ಹೇಳುತ್ತಾರೆ. ಇಂತಹ ಗ್ರಂಥವು ಕೇವಲ ವಾಚನೆಗಲ್ಲ ಸದ್ಗತಿ ಮತ್ತು ಆತ್ಮಾ ಜ್ಞಾನಕ್ಕೂ ಕಾರಣಿಭೂತವಾಗಿರುತ್ತದೆ. ಇಂತಹ ಪುಸ್ತಕವು ಪೂಜ್ಯನೀಯವಾಗಿರುತ್ತದೆ. ಇದನ್ನು ಸಾಧಕನು ಅಥವಾ ವಾಚಕನು ಜ್ಞಾನಪ್ರಸಾರಣೆಗಾಗಿ ಮತ್ತೊಬ್ಬರಿಗೆ ದಾನ ಮಾಡುತ್ತಿರಬೇಕು. ನ ಶಸ್ಯ : ಪೂಜ್ಯನೀಯಶ್ಚ ಗೃಹೇ ಸ್ಥಾಪ್ಯೇತೆ ಮಾನವ : ॥ ಎಂದು ಪ್ರಾಜ್ಞರು ಹೇಳುತ್ತಾ ಇಂತಹ ಪುಸ್ತಕ ತನ್ನಿಂದ ಓದಲು ಆಗದಿದ್ದರೆ ಅದನ್ನು ದಾನ ಮಾಡಬೇಕು. ಇಲ್ಲವೆ ಸಾರ್ವಜನಿಕ ಸ್ಥಳದಲ್ಲಿ ಇಡಬೇಕು ; ಇದರಿಂದ ಅನೇಕ ಜನರು ಓದುವುದರೊಂದಿಗೆ ಸಜ್ಜನರಾಗುವುದಲ್ಲದೆ ಸಮಾಜವು ಸನ್ಮಾರ್ಗದತ್ತ ಸಾಗಬಲ್ಲದು ಎಂಬುದು ಪ್ರಾಚೀನ ಅಭಿಮತ ಅವರೇ ಮುಂದುವರೆದು ಮಾತನಾಡುತ್ತಾ ಇಂತಹ ಗ್ರಂಥವು ಸಾರ್ಥಕವಾಗಬೇಕಾದರೇ ಸಜ್ಜನನು, ನಿಷ್ಠಾವಂತನಾದವನು ಇರಬೇಕು ಎಂಬ ಸಂಸ್ಕೃತದ ಮಾತು ಇಂತಿದೆ.

ಸಂಪೂಜಯಿತ್ವಾತಚ್ಚಸ್ತ್ರಂ ದೇಯಂ ಗುಣವತೇ ತದಾ ।
ಶಾಸ್ತ್ರಸದ್ಭಾವ ವಿದುಷೇ ವಾಚಕೇ ಚಾ ಪ್ರಿಯಂವದೇ ॥10॥

ಗ್ರಂಥವನ್ನು ಪೂಜೆಮಾಡಿ ಆ ಪುಸ್ತಕವನ್ನು ಗುಣವಂತನೂ ಪ್ರೀತಿಯಿಂದ ಓದುವವನು ಶಾಸ್ತ್ರದಲ್ಲಿ ನಂಬಿಕೆಯಿರುವವನೂ ಆದ ವಿದ್ವಾಂಸನಿಗೆ ದಾನಮಾಡಬೇಕು. ಸಮಸ್ತರಿಗೂ ಉಪ ಯೋಗವಾಗಬೇಕೆಂಬ ಅಭಿಲಾಷೆಯಿದ್ದರೆ ಮಠದಲ್ಲಿಯೇ ಇಡಬೇಕು. ಪ್ರಾಚೀನ ಕರ್ನಾಟಕದ ವಿದ್ಯಾಕೇಂದ್ರಗಳಾಗಿದ್ದ ಮಠಗಳಲ್ಲಿ ಇಂದಿಗೂ ಹಸ್ತಪ್ರತಿ ಭಂಡಾರಗಳಿರುವುದನ್ನು ನಾವು ಇಲ್ಲಿ ಸ್ಮರಿಸಬಹುದು. ಹಾಗೆಯೇ ಹಸ್ತಪ್ರತಿಗಳು ವಿವಿಧ ರೀತಿಯ ವಸ್ತ್ರಗಳಿಂದ ಸುತ್ತಲ್ಪಟ್ಟಿರುವುದನ್ನು ನಾವು ಗಮನಿಸಬಹುದಾಗಿದೆ.

ಅಶೌಚೇಽಽಪಿ ದರಿದ್ರ : ಸ್ಯಾಜ್ಜನ್ಮಾಹೇ ಚಾಯುಷ : ಕ್ಷಯ :
ಲಿಪಿಶ್ಛಂದಃ ಪದಜ್ಞಶ್ಚ ಯುವಾ ಧೀಮಾನ್ ಜಿತಾಸನಃ ॥ 7-92 ॥

ಎಂದರೆ ಬರಹಗಾರನು ಶುಚಿಯಾಗಿರಬೇಕು.ಅಶೌಚ ಪ್ರಾಪ್ತವಾದ ಕಾಲದಲ್ಲಿ ಯಾವುದೇ ಗ್ರಂಥವನ್ನು ಬರೆದರೆ ದರಿದ್ರನಾಗುವನು. ಜನ್ಮದಿನ ತಿಥ್ಯಾದಿಗಳಲ್ಲಿ ಬರೆದರೆ ಆಯುಸ್ಸು ಕ್ಷೀಣವಾಗುವುದು. ಲೇಖಕನಾದವನು ಲಿಪಿ, ಛಂದಸ್ಸು, ವ್ಯಾಕರಣಗಳನ್ನು ತಿಳಿದವನೂ, ಪ್ರಾಯದವನೂ, ಬುದ್ಧಿಶಾಲಿಯೂ, ದೃಢನಾಗಿ ಕುಳಿತು ಕೆಲಸಮಾಡುವ ಸ್ವಭಾವದವನೂ ಆಗಿರಬೇಕು.

ಕುಟುಂಬ ಭರಣಾರ್ಥಂ ತು ಗೃಹ್ಣೀ ಯಾದ್ವಾಪಿ ವೇತನಂ ॥

ನ ಜೀವತಿ ಸ ದುಷ್ಪಾತ್ಮಾ ಧನ ವಸ್ತ್ರ ಫಲಾನ್ವಿತ : ॥ 7-98 ॥

ಎಂದರೆ ಕುಟುಂಬ ಪೋಷಣೆಗಾಗಿ ಬರೆಯುವವನು, ವೇತನವನ್ನು ತೆಗೆದುಕೊಂಡು ಬರೆಯುವವನು, ಇಂಥ ದುಷ್ಪಾತ್ರರಿಗೆ ಅವರ ಜೀವಮಾನದಲ್ಲಿ ಧನ, ವಸ್ತ್ರ ಮುಂತಾದ ಅನನೂಕುಲವು ಉಂಟಾಗುವುದಿಲ್ಲ.[೪೪]

ಅಪಾತ್ರರಿಗೆ ಅನರ್ಹರಿಗೆ ಕೊಡುವ ಯಾವುದೇ ರೂಪದ ದಾನವು ಅನಿಷ್ಟಕ್ಕೆ ಅಶಿವಕ್ಕೆ ಕಾರಣವಾಗಬಲ್ಲದು. ಹಸ್ತಪ್ರತಿಗಳ ದಾನವು ಇದಕ್ಕೆ ಹೊರತಾಗದು. ಅಶ್ರದ್ಧಾವಂತರಿಗೆ ವಿಶ್ವಾಸ ಹೀನರಿಗೆ, ಕುಪಂಡಿತರಿಗೆ ನೀಡುವ ಹಸ್ತಪ್ರತಿಗಳ ದಾನವು ಕುಹಕ, ಕುಟೀಲಗಳಿಗೆ ಆಸ್ಪದವಾಗಿ ಜ್ಞಾನದ್ರೋಹ ಆಗಬಹುದು. ಅಲ್ಲದೆ ಕೂಟ ಹಸ್ತಪ್ರತಿಗಳು ನಿರ್ಮಿತವಾಗಬಹುದು. ಕೆಲವು ಹಸ್ತಪ್ರತಿಗಳಲ್ಲಿ ಕಂಡು ಬರುವ ಪ್ರಕ್ಷಿಪ್ತಗಳು ಇಂತಹದರ ಪರಿಣಾಮಗಳೂ ಆಗಿರಬಹುದು. ಇನ್ನೂ ''ಅಲ್ಪಾಯಸ್ಸು'' ಎಂಬುದನ್ನು ಬಹುಶಃ ಮೂಲ ಲೇಖಕ ಅಥವಾ ಜೀರ್ಣಗೊಳ್ಳುತ್ತಿರುವ ಕೃತಿಯೊಂದರ ಪ್ರತಿಕಾರನು ಅಸ್ವಾಸ್ಥ್ಯದಿಂದ ಬಳಲುತಿದ್ದರೆ ಅಂಥವರನ್ನುಲಕ್ಷಿಸಿ ಈ ಮಾತನ್ನು ಹೇಳಿರಬಹುದುನೆಸುತ್ತದೆ. ಯಾವುದೋ ಗಳಿಗೆಯಲ್ಲಿ ಆವರಿಸುವ ಮೃತ್ಯು ಅವರ ಭವಿಷ್ಯವನ್ನು ಮೊಟಕುಗೊಳಿಸಿ ಲೇಖನಾಕಾರ್ಯ ಅಲ್ಲಿಗೆ ನಿಂತು ಕವಿಯಾಗಿದ್ದರೆ ಕಾವ್ಯ ಪ್ರಪಂಚಕ್ಕೆ ಶಾಶ್ವತ ಹಾನಿಯನ್ನು, ಪ್ರತಿಕಾರನಾಗಿದ್ದರೆ ಇನ್ನೊಬ್ಬ ಪ್ರತಿಕಾರ ಸಿಕ್ಕುವವರೆಗೆ ತಾತ್ಕಾಲಿಕ ನಷ್ಟವನ್ನು ಉಂಟುಮಾಡಬಹುದು. ಅಪರೂಪದ ಹಸ್ತಪ್ರತಿಯ ನಕಲು ಮಾಡುತ್ತಿದ್ದರೆ, ಸಕಾಲಕ್ಕೆ ಮತ್ತೊಬ್ಬ ಪ್ರತಿಕಾರ ಸಿಕ್ಕದಾದರೆ ಜೀರ್ಣಗೊಂಡ ಹಸ್ತಪ್ರತಿ ಇನ್ನಷ್ಟು ಜೀರ್ಣವಾಗಿ ಪೂರ್ಣಕೃತಿಯನ್ನು ಉಳಿಸಿಕೊಳ್ಳಲಾಗದ ನಷ್ಟವನ್ನು ಅನುಭವಿಬೇಕಾಗುತ್ತಿರಬಹುದು.[೪೫]

ಈ ರೀತಿ ಬಹುತೊಂದರೆ, ಜವಾಬ್ದಾರಿಯಿಂದ ನಿರ್ವಹಿಸಿ ಸಿದ್ಧಗೊಳಿಸಿದ ಗ್ರಂಥವನ್ನು ಗಾಳಿ, ನೀರು, ಜಲ ಮತ್ತು ಸಡಿಲ ಬಂಧಗಳಿಂದ ಹಾಳಾಗುವಂತೆ ಅಯೋಗ್ಯನು, ನೀತಿ ಹೀನನು ಆದವನಿಗೆ ಹಸ್ತಪ್ರತಿ ನೀಡಿದರೆ ಹಸ್ತಪ್ರತಿ ನೀಡಿದವನೇ ನೇರ ನರಕಕ್ಕೆ ಪಾಲುದಾರರನಾಗುತ್ತಾನೆ.ಜ್ಞಾನವು ಸದ್ಬಳಕೆ ಯಾಗುವ ಬದಲು ದುರ್ಬಳಕೆಗೆ, ದುಶ್ಶೀಲತೆಗೆ ಬಳಕೆಯಾಗುತ್ತದೆ.ಇದೇ ರೀತಿ ಚಿತ್ರಗಾರಿಕೆ ಬಲ್ಲ ಹಸ್ತಪ್ರತಿ ಕಲಾವಿದನು ಅಕ್ಷರಬಲ್ಲ ಲಿಪಿಕಾರನಂತೆ ಜವಾಬ್ದಾರನಾಗಿರಬೇಕು. ಲಿಪಿ ಬರಹಗಾರ ತಿಳಿದುದೆಲ್ಲವು ಗೀಚಿದಂತೆ ಚಿತ್ರಬಲ್ಲವ,ಅಶ್ಲೀಲಕ್ಕೆ ಅಪಹಾಸ್ಯಕ್ಕೆ, ತೇಜೋವಧೆಗೆ ಕಾರಣವಾಗುವ ಚಿತ್ರಗಳನ್ನು ರಚಿಸಿ ಚಿತ್ರಕಲಾ ಪಂಥಕ್ಕೆ, ಪ್ರಪಂಚಕ್ಕೆ ಶ್ರೇಷ್ಠ ಗ್ರಂಥಕ್ಕೆ ಮಾರಕನಾಗಬಾರದು ಎಂದು ಅನೇಕ ನೀತಿವಾಕ್ಯಗಳು ಎಚ್ಚರಿಸುತ್ತವೆ.

ನಿರ್ಲಕ್ಷತೆ :

ದೇವರು ಕೊಟ್ಟಿರುವಂತಹ ಪ್ರಾಕೃತಿಕ ವರಯುಕ್ತ ಶಾಪವೆಂದರೆ ಮರೆವು.

---

೪೪. ಡಾ. ಬಿ.ಕೆ. ಹಿರೇಮಠ : ಕನ್ನಡ ಹಸ್ತಪ್ರತಿಗಳು ಒಂದು ಅಧ್ಯಯನ, ಪುಟ -೨೩೫.

೪೫. ಡಾ. ಎಂ.ಎಂ. ಕಲಬುರ್ಗಿ : ಕನ್ನಡ ಹಸ್ತಪ್ರತಿ ಶಾಸ್ತ್ರ, ಪುಟ -೭೪.

ಮರೆವು ಸಂತತಿಯ ಸಂಬಂಧಿಕರೆಂದರೆ ಅವಜ್ಞೆ, ಉದಾಸೀನತೆ, ನಿರ್ಲಕ್ಷ, ಉಪೇಕ್ಷೆ ಎಂಬ ಹಲವು ಹೆಸರುಗಳಿಂದ ಚಿರಪರಿಚಿತವಾಗಿರುವ ನಿರ್ಲಕ್ಷತೆಯು ನಮ್ಮ ಕ್ರಿಯಾಶಕ್ತಿಯನ್ನು ಅಣಕಿಸುವ, ವಿಡಂಬಿಸುವ ಶಕ್ತಿಯಂತಿದೆ. ಹಸ್ತಪ್ರತಿಗಳನ್ನು ಕುರಿತು ಇರುವ ನಿರ್ಲಕ್ಷತೆಯನ್ನು ನಾವು ಎರಡು ಭಾಗಗಳಲ್ಲಿ ವಿಂಗಡಿಸಬಹುದು. ಅವು ಈ ರೀತಿಯಾಗಿವೆ.

- ನಿರ್ಲಕ್ಷಿತ ಹಸ್ತಪ್ರತಿಗಳು
  - ಸಾಹಿತ್ಯಿಕ ಹಸ್ತಪ್ರತಿಗಳು
    - ಸಂಗ್ರಹಿತ ಹಸ್ತಪ್ರತಿಗಳು
    - ಅಸಂಗ್ರಹಿತ ಹಸ್ತಪ್ರತಿಗಳು
  - ಸಚಿತ್ರ ಹಸ್ತಪ್ರತಿಗಳು
    - ಚಿತ್ರಕಲಾ ಶಾಸ್ತ್ರ ಅಧ್ಯಯನ ಮಾಡದವರಿಂದ

ಸಂಗ್ರಹಿತ ಸಾಹಿತ್ಯಿಕ ಹಸ್ತಪ್ರತಿಗಳು :

ಸಾಹಿತ್ಯಿಕ ವಲಯದಲ್ಲಿ ಸಂಶೋಧನಾ ವಿಧಾನದಲ್ಲಿ ಬೇಕಾದ ಭಾಗಕ್ಕೆ ಮಾತ್ರ ಪ್ರಾಶಸ್ತ್ಯನೀಡಿ, ಬೆಳಕಿಗೆ ತಂದು ಮಿಕ್ಕಿದನ್ನು ಉಲ್ಲೇಖಿಸುವ ಕನಿಷ್ಠ ಔದರ್ಯವೂ ಇಲ್ಲದೆ ಅವಜ್ಞೆಗೆ ಒಳಪಡಿಸುವುದು ಸಾಮಾನ್ಯವಾಗಿದೆ. ಇತ್ತೀಚಿನ ಸಂಶೋಧನೆಯ ಕ್ರಮ ಈ ರೀತಿ ಇರುವುದು ಒಂದಾದರೆ ನಿರ್ಲಕ್ಷತೆ ಮತ್ತೊಂದು ಕ್ರಮವಾಗಿದೆ. ಈ ಕಾರಣದಿಂದಲೇ ಕರ್ನಾಟಕದ ಹಸ್ತಪ್ರತಿಗಳು ಸಮಗ್ರ ಅಧ್ಯಯನಕ್ಕೆ ಒಳಪಡದೆ ಉಳಿದುಕೊಂಡಿವೆ. ಈ ಕುರಿತು ಹಿರಿಯರು, ಹಸ್ತಪ್ರತಿ ಡಾ. ಎಂ.ಎಂ.ಕಲಬುರ್ಗಿಯವರು ನೀಡುವ ಸೂಚನೆ ಗಮನಾರ್ಹವಾಗಿದ್ದು ಅದು ಇಂತಿದೆ... ಹಸ್ತಪ್ರತಿ ಸಣ್ಣದಿರಲಿ, ದೊಡ್ಡದಿರಲಿ, ಉಪಯುಕ್ತವಿರಲಿ, ನಿರುಪಯುಕ್ತವಿರಲಿ ಆಲಕ್ಷಿಸದೇ ಅವೆಲ್ಲವನ್ನೂ ಸಂಗ್ರಹಿಸಬೇಕು. ಏಕೆಂದರೇ, ಒಂದು ದೃಷ್ಟಿಯಿಂದ ನಿರುಪಯುಕ್ತವೆನಿಸಿದರೆ ಇನ್ನೊಂದು ದೃಷ್ಠಿಯಿಂದ ಅದು ತುಂಬ ಉಪಯುಕ್ತ ವಾಗಿರುತ್ತದೆ.''ಆರಾ'' ಹಸ್ತಪ್ರತಿ ಭಂಡಾರದಲ್ಲಿಯ ಆಚಣ್ಣನ ವರ್ಧಮಾನ ಪುರಾಣದ ಗರಿಯ ಮೇಲಿನ ಒಂದು ಕಂದಪದ್ಯ, ನಾಗವರ್ಮನ ವರ್ಧಮಾನ ಪುರಾಣ ಶೋಧನೆಗೆ ಎಂಥ ಬೆಲೆಯುಳ್ಳ ಸೂಚನೆ ನೀಡಿತೆಂಬುದನ್ನು ಇಲ್ಲಿ ನೆನೆಯಬಹುದು.[೪೬]

ಎಂ. ವಿ. ಸೀತಾರಾಮಯ್ಯನವರು ಸಾಹಿತ್ಯಕ ಹಸ್ತಪ್ರತಿ ನಿರ್ಲಕ್ಷ್ಯದಿಂದಾದ ಹಾನಿಯನ್ನು ಕುರಿತು ಈ ರೀತಿಯಾಗಿ ಬರೆದುಕೊಂಡಿದ್ದಾರೆ... ''ನಮ್ಮ ಪೂರ್ವಿಕರು ಶತಮಾನಗಳ ಹಿಂದಿನಿಂದಲೂ ಇಷ್ಟೆಲ್ಲಾ ಎಚ್ಚರಿಕೆ ವಹಿಸುತ್ತಿದ್ದರೂ ಲೆಕ್ಕವಿಲ್ಲದಷ್ಟು ಗ್ರಂಥಗಳು ನಾಶವಾಗಿ ಹೋಗಿವೆ. ಒಂಬತ್ತನೇಯ ಶತಮಾನದ ಕವಿರಾಜ ಮಾರ್ಗದಲ್ಲಿ ವಿಮಲೋದಯ, ನಾಗರ್ಜುನ, ಜಯಬಂಧು ಇತ್ಯಾದಿ ಅನೇಕ ಗದ್ಯಪದ್ಯಗ್ರಂಥಕರ್ತರ ಹೆಸರುಗಳು ಉಕ್ತವಾಗಿವೆ. ಆದರೆ ಇವರ ಯಾವ

೪೬. ಸಿದ್ದಯ್ಯ ಪುರಾಣಿಕ (ಸಂ.) : ಮಣಿಹ ಎಂ. ವಿ. ಸಿತಾರಾಮಯ್ಯ, ಪುಟ ೨೨೦.

ಗ್ರಂಥಗಳೂ ಸಿಕ್ಕಿಲ್ಲ ಇವು ಎಲ್ಲವೂ ನಷ್ಟವಾಗಿವೆ. ಎಂದೂ ಹೇಳಬರುವುದಿಲ್ಲಾ ಎಲ್ಲೋ ಯಾರ ಬಳಿಯೋ ಅಡಗಿಕೊಂಡಿರಬಹುದು'' ''ಕಾವ್ಯಾವಲೋಕನ ವನ್ನು'' ಬರೆದ ನಾಗವರ್ಮನು ಒಂದು ಜೈನ ಪುರಾಣವನ್ನು ಬರೆದಿರಬಹುದು ಎಂಬ ಸಂಗತಿ ನಮಗೆ ತಿಳಿದಿತ್ತು. ಆದರೆ ಅವನ ಪುರಾಣ ಗ್ರಂಥ ಯಾವುದೂ ಸಿಕ್ಕಿರಲಿಲ್ಲ. ಈಚೇಗೆ ಅನಿರೀಕ್ಷಿತವಾಗಿ ಅವನ 'ವರ್ಧಮಾನ ಪುರಾಣ' ಸಿಕ್ಕಿದೆ. ಮೈಸೂರು ವಿಶ್ವವಿದ್ಯಾಲಯ ಅದನ್ನು ಅಚ್ಚುಮಾಡಿಸಿದೆ. ಈ ಗ್ರಂಥ ದೊರೆತ ಮೇಲೆ ಈ ನಾಗವರ್ಮನ ಕಾಲ ಅದರಲ್ಲಿಯ ಕಾಲಸೂಚಕ ಪದ್ಯದಿಂದ ಕ್ರಿ.ಶ.1042 ಎಂದು ಖಚಿತವಾಗಿ ತಿಳಿಯಿತು., 1150 ಎಂಬ ಕವಿಚರಿತೆಕಾರರ ನಿರ್ಣಯ ಬಿದ್ದು ಹೋಯಿತು. ಈ ಗ್ರಂಥದಲ್ಲಿ ಕವಿರಾಜಮಾರ್ಗಕಾರ ಶ್ರೀವಿಜಯನು 'ರಘುವಂಶ - ಮಹಾಪುರಾಣ'ವನ್ನು ಬರೆದಿರುವುದಾಗಿ ತಿಳಿದು ಬರುತ್ತದೆ. ಅವನು 'ಚಂದ್ರಪ್ರಭ ಪುರಾಣ'ವನ್ನು ಬರೆದಿರುವವನೆಂದು ಊಹಿಸಲು ಅವಕಾಶವಿದೆ.ಆದರೆ 'ಚಂದ್ರಪ್ರಭಾ ಪುರಾಣ' ಬರೆಗಿದ್ದಾನೆಂದು ಹೇಳಲು 16ನೇಯ ಶತಕದ ದೊಡ್ಡಯ್ಯ ಮುಂತಾದವರ ಹೇಳಿಕೆ ಅಷ್ಟು ವಿಶ್ವಸನೀಯವಲ್ಲ ಈ ಎರಡೂ ನಷ್ಟವಾಗಿವೆಯೋ ಎಲ್ಲಾದರೂ ಅಡಗಿಕೊಂಡಿವೆಯೋ ಯಾರು ಬಲ್ಲರು ? ''ನೃಪತುಂಗಾಭ್ಯುದಯ'' ಎಂಬ ಗ್ರಂಥವೂ ಆತನಿಂದ ರಚಿತವಾಗಿರುವಂತಿದೆ. ಪ್ರತಿ ಸಿಕ್ಕಿಲ್ಲ ಎಂದು ಊಹಿಸಲು ಒಂದು ಆಧಾರ ದೊರಕಿದೆ. ಕರ್ನಾಟಕ ವಿಶ್ವವಿದ್ಯಾಲಯ ಕೆಲಕಾಲದ ಹಿಂದೆ ಕಂಡು ಹಿಡಿದ ''ನೃಪತುಂಗಾಭ್ಯುದಯ'' ಎಂಬ ಹೆಸರನ್ನುಳ್ಳ 'ಕವಿರಾಜ ಮಾರ್ಗ'ದಹಸ್ತಪ್ರತಿ ಈ ಊಹೆಗೆ ಆಧಾರ ಕವಿರಾಜಮಾರ್ಗಕ್ಕೆ ನೃಪತುಂಗಾಭ್ಯುದಯ ಎಂಬ ಹೆಸರಿರುವದನ್ನು ಡಾ.ಎಂ.ಎಂ.ಕಲಬುರ್ಗಿ ಯವರು ಸೂಚಿಸುತ್ತಾರೆ.[೪೭]

ಬಿ.ಎಂ.ಶ್ರೀ ಪ್ರತಿಷ್ಠಾನದ ಜೀವಾಳು ಆಗಿರುವ ಡಾ|| ನಾ.ಗೀತಾಚಾರ್ಯರು ಉಪೇಕ್ಷಿತ ಹಸ್ತಪ್ರತಿಗಳು ಎಂಬ ತಮ್ಮ ಅಮೂಲ್ಯ ಲೇಖನದಲ್ಲಿ ಹಸ್ತಪ್ರತಿಗಳ ನಿರ್ಲಕ್ಷ್ಯ, ಸಂಶೋಧಕರ ಅವಜ್ಞೆ ಕುರಿತು ಈ ಅಭಿಪ್ರಾಯ ಪಡುತ್ತಾರೆ..... ಸಂಪಾದಿಸುವಂಥ ಮುಖ್ಯವಾದ ಗ್ರಂಥಗಳಾವವೂ ಇಲ್ಲ ಎಂಬ ನಂಬಿಕೆಯ ಹತ್ತಿರಕ್ಕೆ ಈ ಶಾಸ್ತ್ರ ಬಂದು ನಿಂತಿರುವಂತೆ ಕಾಣುತ್ತದೆ. ಆದರೆ ಈ ನಂಬಿಕೆ ಎಷ್ಟು ನಿಜ ? ಎಂಬುದರ ಜೊತೆಗೆ ಮುಖ್ಯ-ಅಮುಖ್ಯ ಎಂದು ವರ್ಗಿಕರಿಸುವಲ್ಲಿ ಇರುವ ದೃಷ್ಠಿ ಎಂತಹುದು? ಈ ದೃಷ್ಠಿಯನ್ನೇ ನಂಬುವುದಾದರೆ ಈಗಾಗಲೇ ಸಂಗ್ರಹಿಸಿರುವ ಉಳಿದ ಹಸ್ತಪ್ರತಿಗಳನ್ನು ಏನು ಮಾಡಬೇಕು ? ಇಂಥ ಪ್ರಶ್ನೆಗಳನ್ನು ಇಂದು ಆಲೋಚಿಸಬೇಕಾಗಿದೆ. ಹಸ್ತಪ್ರತಿ ಭಂಡಾರಗಳಲ್ಲಿ ಹಸ್ತಪ್ರತಿಗಳ ಸಂಖ್ಯೆ ದಿನೇ ದಿನೇ ಬೆಳೆಯುತ್ತಿದೆ. ಓದಲಾಗದ ಭಾಷೆಗೊತ್ತಿಲ್ಲದ, ಅರ್ಥಮಾಡಿಕೊಳ್ಳಲು ಆಗದ ಶೀರ್ಷಿಕೆ ಅಥವಾ ಮೊದಲು ವಿವರಗಳಿಂದಲೇ 'ಅಪ್ರಯೋಜಕ ' ಎಂದು ಕರೆಸಿಕೊಳ್ಳುವ ಎಷ್ಟೋ ಹಸ್ತಪ್ರತಿಗಳು ಉಪೇಕ್ಷೆಗೊಳಪಟ್ಟು ಶೆಲ್ಫ್‌ಗಳನ್ನು ಅಲಂಕರಿಸಿವೆ. ಇವುಗಳನ್ನು ಇಷ್ಟು ಮಾತ್ರಕ್ಕೆ ಸೀಮಿತವಾಗಿರಸ ಬೇಕೆ ? ಅಥವಾ ಇವುಗಳಿಂದಲೂ ಏನನ್ನಾದರೂ

---

೪೭. ಡಾ. ನಾ. ಗೀತಾಚಾರ್ಯ : ಹಸ್ತಪ್ರತಿ ವಿವೇಚನೆ ಪುಟ -೨.

ಪಡೆಯಬಹುದು? ಎಂಬುದತ್ತ ಸಂಶೋಧಕರು ಗಮನ ಹರಿಸದೇ ತಟಸ್ಥವಾಗಿರುವದು ವಿಷಾದನೀಯ. ವಡ್ಡರಾಧನೆಯಂಥ ಎಷ್ಟೋ ಕೃತಿಗಳು ಇಂಥ ಹಸ್ತಪ್ರತಿಗಳ ನಡುವೆ ಕಣ್ಮರೆಯಾಗಿರಬಹುದು. ಈ ಕುತೂಹಲಕ್ಕಾದರೂ ಸಂಬಂಧಪಟ್ಟವರು ಇನ್ನು ವರ್ಗಿಕರಿಸದೇ ಇರುವ ಉಪೇಕ್ಷಿತ ಹಸ್ತಪ್ರತಿಗಳನ್ನು ವರ್ಗಿಕರಿಸಿ ಅವುಗಳ ಸೂಚಿಗಳನ್ನು ಪ್ರಕಟಿಸಬೇಕು.[೪೮]

ಡಾ|| ಎಂ.ಎಂ.ಕಲಬುರ್ಗಿಯವರು ಕೊಡುತ್ತಾರೆ. ಹಸ್ತ ಪ್ರತಿಯನ್ನು ಆವಲೋಕಿಸುವಲ್ಲಿ ಅವಸರ ಎಷ್ಟೊ ಸಲ್ಲದು. ಇದರಿಂದಾಗಿ ಕೃತಿಗಳು ಕಣ್ತಪ್ಪಿ ಮರೆಯಲುಳಿಯ ಬಹುದು. ಶ್ರೀ ಭುಜಬಲಿಶಾಸ್ತ್ರಿಗಳ ಕಣ್ತಪ್ಪಿಸಿ ಮೂಡಬಿದರೆಯಲ್ಲಿ ಉಳಿದಿದ್ದ ನಾಗವರ್ಮನ ವರ್ಧಮಾನ ಪುರಾಣ ಶ್ರೀ ಸಣ್ಣಯ್ಯನವರಿಂದ ಬೆಳಕಿಗೆ ಬಂದುದನ್ನು ಇಲ್ಲಿ ನೆನೆಯಬಹುದು. ಹಳಕಟ್ಟಿಯವರು 'ವಿಜಾಪೂರ ಜಿಲ್ಲೆಯಲ್ಲಿದ್ದಾಗ ನಾನು ಹೋದ ಗ್ರಾಮಗಳಲ್ಲಿ ಅವುಗಳ (ವಚನಗಳ) ವಿಷಯವಾಗಿ ನಾನು ಶೋಧ ಮಾಡುತ್ತಿದ್ದು. ನನಗೆ ದೊರೆತ ವಚನಗಳಲ್ಲಿನನಗೆ ಮಹತ್ವವೆಂದು ಕಂಡ ವಚನಗಳನ್ನಷ್ಟೇ ನಾನು ಬರೆದುಕೊಳ್ಳುತ್ತ ಬಂದೆನು' ಎಂದೂ ಆರ್.ನರಸಿಂಹಚಾರ್ ಅವರು 'ಹಿಂದೆ ಮದರಾಸು ಪ್ರಾಚ್ಯಕೋಶಾಲಯ ಮುಂತಾದ ಸ್ಥಳಗಳಲ್ಲಿ ಪುಸ್ತಕಗಳನ್ನು ಪರೀಶಿಲಿಸಿದಾಗ ಪ್ರಥಮ ಸಂಪುಟಕ್ಕೆ ಬೇಕಾದ ವಿಷಯಗಳನ್ನು ಮಾತ್ರ ವಿಸ್ತಾರವಾಗಿ ಗುರುತುಹಾಕಿಕೊಂಡು ಅವಶ್ಯಕತೆ ಬಿದ್ದಾಗ ಪುನಃ ಹೋಗಿ ಮಿಕ್ಕ ವಿಷಯಗಳನ್ನು ಬಹಳ ಸಂಗ್ರಹವಾಗಿ ಗುರುತು ಹಾಕಿದ್ದೆನೆ. ಮತ್ತೊಂದಾವೃತ್ತಿ ಹೋಗಿ ನೋಡಿದಾಗ ಹಿಂದೆ ನೋಡಿದ್ದ ಪುಸ್ತಕಗಳಲ್ಲಿ ಹಲವು ನನ್ನ ದುರಾದೃಷ್ಟದಿಂದ ಹುಳುಗಳ ಬಾಯಿಗೆ ತುತ್ತಾಗಿ ನಾಶವಾಗಿ ಹೋಗಿದ್ದವು.' ಹೀಗೆ ನಷ್ಟವಾದ ಪುಸ್ತಕಗಳ ಪರ್ಯಂತರಗಳು ಬೇರೆ ಕಡೆ ಎಷ್ಟು ಹುಡುಕಿದರೂ ದೊರೆಯದೆ ಹೋದವೆಂದೂ ಹೇಳಿದ ಮಾತುಗಳಿಂದ ಕ್ಷೇತ್ರಕಾರ್ಯದಲ್ಲಿ ಇವರು ತೋರಿಸಿದ ಉದಾಸೀನತೆ ಕಾರಣವಾಗಿ ನಮಗಾದ ನಷ್ಟವನ್ನು ಊಹಿಸಿಕೊಳ್ಳಬಹುದು.[೪೯]

ಇಂತಹ ಉಪೇಕ್ಷಿತ, ನಿರ್ಲಕ್ಷಕ್ಕೆ ಒಳಗಾದ ಹಸ್ತಪ್ರತಿಗಳನ್ನ ಇತಿಹಾಸ, ಸಂಸ್ಕೃತಿ, ವಾಸ್ತು ಮತ್ತು ಲೋಹಶಾಸ್ತ್ರ, ಪದ್ದತಿ, ಜನಪದ ಎಂಬ ವಿಷಯಗಳ ವಿಂಗಡಣೆಯಿಂದ ಅಧ್ಯಯನಕ್ಕೆ ಒಳಪಡಿಸಿದರೆ ಇನ್ನೂ ಅಧಿಕವಾದ ಸಾಹಿತ್ಯಲಭ್ಯವಾಗುವುದಲ್ಲವೇ ಕನ್ನಡ ಸಾರಸ್ವತದ ಪ್ರಪಂಚದ ಗಡಿಗಳು ವಿಸ್ತಾರಗೊಳ್ಳಬಹುದೆಂದು ಡಾ||ನಾ.ಗೀತಾಚಾರ್ಯರಾ 'ಹಸ್ತಪ್ರತಿ ವಿವೇಚನೆ' ಯಲ್ಲಿ ಅಭಿಪ್ರಾಯಪಡುತ್ತಾರೆ. ಇದೇ ರೀತಿ ಡಾ|| ಕಲಬುರ್ಗಿಯವರು ಕೂಡ 'ಕರ್ನಾಟಕದಲ್ಲಿ ಹಸ್ತಪ್ರತಿಗಳು ಹಾಳಾಗಿ ಹೋದುದು ಹೇರಳ ಉಳಿದು ಬಂದುದೂ ಹೇರಳ. ನಮ್ಮ ನಾಡಿನಲ್ಲಿ ಇವುಗಳ ಪರೀವಿಕ್ಷಣೆ ನೂರು ವರ್ಷಗಳಿಂದ ನಡೆದರೂ ಸರಕಾರವಾಗಲೀ, ವಿಶ್ವವಿದ್ಯಾಲಯದಂಥ ಸಂಸ್ಥೆಗಳಾಗಲೀ ವ್ಯವಸ್ಥಿತವಾಗಿ, ಕ್ರಮವತ್ತಾಗಿ ಈ ಕಾರ್ಯವನ್ನು ಮಾಡುವ ಗೋಜಿಗೆ ಹೋಗದೆ, ಮನಸ್ಸು ಬಂದಾಗ ಆಗಿಷ್ಟು ಈಗಿಷ್ಟು ಮಾಡಿ ಮುಗಿಸುತ್ತಿವೆ. ಹೀಗಾಗಿ ಹಸ್ತಪ್ರತಿಗಳನ್ನು ಮನೆಯಲ್ಲಿ ಮಡಗಿಕೊಳ್ಳುವ

೪೮. ಡಾ. ಎಂ.ಎಂ. ಕಲಬುರ್ಗಿ : ಕನ್ನಡ ಹಸ್ತಪ್ರತಿ ಶಾಸ್ತ್ರ, ಪುಟ -೭೪.
೪೯. ಡಾ. ಎಂ.ಎಂ. ಕಲಬುರ್ಗಿ : ಕನ್ನಡ ಹಸ್ತಪ್ರತಿ ಶಾಸ್ತ್ರ, ಪುಟ -೭೪.

ಸಾಮಾನ್ಯರು ಹಸಪ್ರತಿ ಭಂಡಾರಗಳಲ್ಲಿ ರಕ್ಷಿಸಬೇಕಾದ ಅಧಿಕಾರಿಗಳು ಈ ಇಬ್ಬರಿಂದಲೂ ಹಸ್ತಪ್ರತಿಗಳಿಗೆ ಅನ್ಯಾಯ ವಾಗುತ್ತಲಿದೆ ಎನ್ನಬೇಕು ಎಂದು ಅಭಿಪ್ರಾಯ ಪಡುತ್ತಾರೆ.

ಅಸಂಗ್ರಹಿತ ಅಜ್ಞಾತ ಹಸ್ತಪ್ರತಿಗಳು :

ಅಜ್ಞಾತವಾಗಿ ಇನ್ನೂ ಹಸ್ತಪ್ರತಿಗಳು ಜನಸಾಮಾನ್ಯರ ಮನೆಗಳಲ್ಲಿ, ಮಠಗಳಲ್ಲಿ ಶಿಕ್ಷಣ ಸಂಸ್ಥೆಗಳಲ್ಲೂ ಉಳಿದು ಕೊಂಡಿವೆ. ಅವುಗಳನ್ನು ಸಂಗ್ರಹಿಸುವ, ಸಂರಕ್ಷಿಸುವ ಕಾರ್ಯವನ್ನು ಕೈಗೊಳ್ಳುವ ಯೋಜನೆಯನ್ನು ಆ ಕ್ಷೇತ್ರದಲ್ಲಿ ದುಡಿಯುವವರು ಇನ್ನೂ ವ್ಯವಸ್ಥಿತವಾಗಿ ಮಾಡಬೇಕಾಗಿದೆ.

ಕವಿರಾಜಮಾರ್ಗದ ಈ ಪರಿಸರದಲ್ಲಿ ಇನ್ನೂ ಬಹಳಷ್ಟು ಹಸ್ತಪ್ರತಿಗಳು ಜನರ ಮಧ್ಯದಲ್ಲಿ ಇವೆ ಎಂದು ಹಸ್ತಪ್ರತಿ ಕ್ಷೇತ್ರಕೆ ದುಡಿದಿರುವ ಅನೇಕ ಹಿರಿಯ ವಿದ್ವಾಂಸರು ಅಭಿಪ್ರಾಯ ಪಡುತ್ತಾರೆ. ಹಿರಿಯ ವಿದ್ವಾಂಸರಾಗಿರುವ ಡಾ॥ಬಿ.ಟಿ.ವಿ.ವೆಂಕಟಾಚಲಾ ಶಾಸ್ತ್ರಿಗಳವರು ರಾಯಚೂರು ಜಿಲ್ಲೆಯ ಪರಿಸರದಲ್ಲಿ ಹಸ್ತಪ್ರತಿಗಳು ಸಂಗ್ರಹಿತವಾಗಿರುವುದನ್ನು ಉಲ್ಲೇಖಿಸುತ್ತಾರೆ. ಆ ಪ್ರದೇಶಗಳು ಇಂತಿವೆ. ಕನಕಗಿರಿಯ, ಸುವರ್ಣಗಿರಿಕಲ್ಲುಮಠ, (ಗಂಗಾವತಿ ತಾಲೂಕು) ಮೊಹರೆ ಹನುಮಂತಾರಾಯರ ಸಂಗ್ರಹ ಲಿಂಗಸೂಗೂರು ಎಂದು ಹೇಳಿಕೊಂಡಿರುವಂತೆ.[೫೧]

ಬಿ.ಎಸ್.ಸಣ್ಣಯ್ಯನವರೂ ಕೂಡಾ ಹೈದರಾಬಾದ ಪರಿಸರದಲ್ಲಿ ಇನ್ನೂ ಹಸ್ತಪ್ರತಿಗಳು ಇರುವುದನ್ನು ಈ ರೀತಿ ಸೂಚಿಸಿದ್ದಾರೆ. ನಾನು ನೋಡಲಾಗದಿರುವ ಇನ್ನೂ ಅನೇಕ ಕಡೆಗಳಲ್ಲಿ ಕನ್ನಡ ಹಸ್ತಪ್ರತಿಗಳು ದೊರೆಯುತ್ತವೆಂದು ತಿಳಿದುಬರುತ್ತದೆ. ಅವೆಂದರೇ ಮಹಾರಾಷ್ಟ್ರದ ಕರಂಜಾ, ಮುಂಬಯಿಯ ಐಲಕಲಾಲ್ ಪನ್ನಲಾಲ್ ದಿಗಂಬರ ಜೈನ್ ಸರಸ್ವತಿ ಭಂಡಾರ, ಆಂಧ್ರಪ್ರದೇಶದ ಮಹಬೂಬ್ ನಗರದ ಒಬ್ಬ ಖಾಸಗಿ ವ್ಯಕ್ತಿಯ ಮನೆಯಲ್ಲಿ ಹಸ್ತಪ್ರತಿ ಸಂಗ್ರಹವಿದೆಯೆಂದು ತಿಳಿದುಬರುತ್ತದೆ. ಮತ್ತು ಸಣ್ಣಯ್ಯನವರಿಗೆ ಈ ಕುರಿತು ವಿಚಾರಿಸಿ ಪತ್ರಬರಿಯಲಾಗಿ ಮಹಬೂಬ್ ನಗರದೊಳಗಿರುವ ಹಳೆಯ ಚಲನಚಿತ್ರ ಮಂದಿರದ ಹತ್ತಿರವಿರುವ ಜಂಗಮರ ಮನೆತನದವರಲ್ಲಿ ಇದೇ ಎಂದು ತಿಳಿಸಿದ್ದಾರೆ. ಇದೇ ರೀತಿ ರಾಯಚೂರು ಜಿಲ್ಲೆಯ ಮಾನವಿ ತಾಲೂಕಿನ ಕವಿತಾಳ ಗ್ರಾಮದ ಶ್ರೀ ಮ.ನಿ.ಪ್ರ.ಲಿಂ॥ಸಿದ್ಧಲಿಂಗ ಸ್ವಾಮಿಗಳು ಕಲ್ಲುಮಠ, ಕವಿತಾಳ ಅವರು ದಿನಾಂಕ : 18-12-1957ರಲ್ಲಿ ಪ್ರಕಟಿಸಿರುವ 'ಚಿದೈಶ್ವರ್ಯ ಚಿದಾಭರಣ ಶಿವಾನುಭವವು ಉದ್ಧರಣೆ ' ಗ್ರಂಥವನ್ನು ಪ್ರಕಟಿಸಿದ್ದು ಲಿಂ.ವಿದ್ವಾನ್ ಬಿ.ಎಂ.ವೀರೇಶ್ವರ ಶಾಸ್ತ್ರಿಗಳು, ಅಮರವಾಣಿ ಮುದ್ರಣಾಲಯ, ರಾಯಚೂರು ಅವರು ಸಂಪಾದಕರಾಗಿ ಸಂಕ್ಷಿಪ್ತ ಚರಿತ್ರೆ ಬರೆದು ಮೇಲಿನ ದಿನಾಂಕವನ್ನು ಉಲ್ಲೇಖಿಸಿದ್ದಾರೆ. ಕ್ಷೇತ್ರಕಾರ್ಯದಲ್ಲಿ ಈ ಗ್ರಂಥವನ್ನು ಬೆಳಗಾವಿಯ ಶ್ರೀ ನಾಗನೂರು ರುದ್ರಾಕ್ಷಿಮಠದ ಶ್ರೀಗಳವರ ಮಾರ್ಗದರ್ಶನದಲ್ಲಿ ಡಾ॥ ಎಸ್.ಆರ್.ಗುಂಜಾಳರ

---

೫೧. ಡಾ. ಟಿ.ವಿ. ವೆಂಕಟಾಚಲ ಶಾಸ್ತ್ರಿ: ಹಸಪ್ರತಿ ವಿವೇಚನೆ , ಪುಟ- XI

ವ್ಯವಸ್ಥಾಪನಾ ನಿರ್ದೇಶನದಲ್ಲಿ ಲಿಂಗಾಯತ ಸಂಶೋಧನಾ ಕೇಂದ್ರದಲ್ಲಿ ಕಾಯ್ದಿರಿಸಲಾಗಿದೆ. ಇಂತಹ ಅನೇಕ ಗ್ರಂಥಗಳ ಶೋಧನಾಕಾರ್ಯ, ಸಂಸ್ಕರಣ ಕಾರ್ಯ, ಸೂಚಿಕಾರ್ಯದೊಂದಿಗೆ ಸಂರಕ್ಷಣಾ ಕಾರ್ಯವೂ ಕಲ್ಯಾಣ ನಾಡಿನ, ಕವಿರಾಜಮಾರ್ಗ ಪರಿಸರದ ಹೈದರಾಬಾದ ಕರ್ನಾಟಕದಲ್ಲಿ ತುರ್ತಾಗಿ ನಡೆಯಬೇಕಾಗಿದೆ.

ಹಸ್ತಪ್ರತಿಯ ನಿರ್ಲಕ್ಷ್ಯ :

ಜ್ಞಾನದಾಗರ, ದೇಶದ ಅತ್ಯಮೂಲ್ಯ ಆಸ್ತಿಯಂದೆ ಪರಿಗಣಿಸಿರುವ ಹಸ್ತ ಪ್ರತಿಗಳು ಅವಜ್ಞೆಗೆ ಒಳಗಾಗಿರುವಂತೆ ಸಂಶೋಧನಾ ಶಾಸ್ತ್ರಬಲ್ಲ ವಿದ್ವಾಂಸರಿಂದಲೂ ಹಸ್ತಪ್ರತಿಯೊಳಗಿನ ಚಿತ್ರಗಳು ಅವಜ್ಞೆಗೆ ಒಳಗಾಗಿವೆ. ಚಿತ್ರಕಲೆಯನ್ನು ಕುರಿತು ಅಧ್ಯಯನ ಮಾಡದೆ ತಮ್ಮ ಮೂಗಿನ ನೇರಕ್ಕೆ ಅಭಿಪ್ರಾಯ ಪಡುವ ಇಂತಹ ವಿದ್ವಾಂಸರಿಂದಲೂ ಕರ್ನಾಟಕದ ಹಸ್ತಪ್ರತಿ ಚಿತ್ರಗಳಿಗೆ ಅನ್ಯಾಯವಾಗಿದೆ.

ಸಚಿತ್ರ ಹಸ್ತಪ್ರತಿಗಳಿಗೆ ಸಹ ಕರ್ನಾಟಕದಲ್ಲಿ ಸಾಕಷ್ಟು ದೀರ್ಘವಾದಂತಹ ಇತಿಹಾಸವೇ ಇದೆ. ಪ್ರಸಿದ್ಧವಾದ ಪ್ರಾಕೃತ ಭಾಷೆಯ ಜೈನ ಧಾರ್ಮಿಕ ಗ್ರಂಥಗಳಾದ ಧವಳ, ಜಯಧವಳ, ಮಹಾಧವಳಾದಂಹ ಗ್ರಂಥಗಳಲ್ಲಿ ಅರ್ಧನೇಮಿ ಪುರಾಣದಲ್ಲಿ , ಭೀಮಕವಿಯ ಬಸವಪುರಾಣದಲ್ಲಿ, ವೃಷಭೇಂದ್ರ ವಿಲಾಸದಂತಹ ಯಕ್ಷಗಾನ ಪ್ರಾಕಾರದಲ್ಲೂ, ಸಿದ್ಧನಂಜೇಶನ ರಾಘವಾಂಕ ಚರಿತ್ರೆಯಲ್ಲಿ, ಷಡಕ್ಷರ ಕವಿಯ ಶಬರ ಶಂಕರವಿಲಾಸದಲ್ಲಿ, ತ್ರಿಲೋಕಸಾರ ಮುಮ್ಮಡಿ ಕೃಷ್ಣರಾಜ ಒಡೆಯರ ಶ್ರೀ ತತ್ವನಿಧಿಯಲ್ಲೂ, ಅಪರಾಳ ತಮ್ಮಣ್ಣನ ಶ್ರೀ ಕೃಷ್ಣಪಾರಿಜಾತದಲ್ಲಿ, ಪದ್ಮಪುರಾಣಸ್ಥ ಶಿವಗೀತೆಯಲ್ಲಿ, ಉದ್ಧರಣೆ ಪಟಲಗಳಲ್ಲಿ, ಸೌಗಂಧಿಕಾ ಪರಿಣಯದಂತಹ ಅನೇಕ ಗ್ರಂಥಗಳಲ್ಲಿ ಸಾಕಷ್ಟು ರೇಖಾಚಿತ್ರಗಳಿವೆ. ವರ್ಣಚಿತ್ರಗಳಿವೆ, ಫಲಕದ ಮೇಲಿನ ಚಿತ್ರಗಳಿವೆ, ಸಂದರ್ಭಕ್ಕೆ, ಕತೆಗೆ, ಪುರಾಣಕ್ಕೆ ತಕ್ಕಂತೆ. ಸಮಗ್ರ ಸಾಹಿತ್ಯವೇ ಸಾದೃಶ್ಯಗೊಳ್ಳುವಂತಹ ಚಿತ್ರಗಳಿದ್ದರೂ ಚಿತ್ರಕಲೆ, ಭಾವ,ಭಂಗಿ, ವರ್ಣಸಂಯೋಜನೆ, ದೃಶ್ಯ ಸಂಯೋಜನೆ, ರೇಖೆಗಳ ಓಟ ಕುರಿತು ಅಧ್ಯಯನ ಮಾಡಿದವರು ತುಂಬಾ ಕಡಿಮೆ.ಆದರಲ್ಲೂ ಚಿತ್ರಕಲೆಯದೇ ಪಾರಿಭಾಷಿಕ ಪದಗಳಿಂದ, ಕಲಾತ್ಮಾಕ ವಿಧಾನವನ್ನು ಅನುಸರಿಸಿ ಅಧ್ಯಯನ ಮಾಡಿದವರಂತೂ ತುಂಬಾ ವಿರಳ ಸಂಖ್ಯೆಯಲ್ಲಿ ಇದ್ದಾರೆ. ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ಕನ್ನಡದ ಕಲೆ ಶಿಲ್ಪ ಸಂಗೀತ ಮತ್ತು ಚಿತ್ರಕಲೆಯನ್ನು ಕುರಿತು ಅಭ್ಯಾಸ ಮಾಡಲಾರದ ಕಾರಣಕ್ಕಾಗಿಯೇ ಕರ್ನಾಟಕದ ಅಜಂತಾ, ಎಲ್ಲೋರಾಗಳಂತಹ ಪ್ರದೇಶಗಳು ಕನ್ನಡಿಗರ ಇತಿಹಾಸದಿಂದ ದೂರ ಉಳಿದುಕೊಂಡಿವೆ.



ಅಧ್ಯಾಯ : ಎಂಟು

ಹಸ್ತಪ್ರತಿ ಚಿತ್ರಕಲೆಯ ಸಂರಕ್ಷಣೆಯ ವೈಜ್ಞಾನಿಕ ಕ್ರಮಗಳು

ಪರಮ ಜಿನೇಂದ್ರ ವಾಣಿಯೆ ಸರಸ್ವತಿ ಬೇಱದು ಪೆಣ್ಣುರೂಪಮಂ
ಧರಿಯಿಸಿ ನಿಂದುದಲ್ತದುವೆ ಭಾವಿಸಿಯೋದುವ ಕೇಳ್ವ ಪೂಜಿಪಾ
ದರಿಸುವ ಭವ್ಯಕೋಟಿಗೆ ನಿರಂತರ ಸೌಖ್ಯಮ ನೀವುದಾನದ
ರ್ಕೆರೆದಪೆನಾ ಸರಸ್ವತಿಯೇ ಮಾಳ್ಕೆಮಗಿಲ್ಲಿಯೆ ವಾಗ್ವಿಳಾಸಮಂ

- ಕುವೆಂಪು [೧]

ಕರ್ನಾಟಕದ ಹಸ್ತಪ್ರತಿಗಳು ವಾಗ್ದೇವಿ, ವೀಣಾಪಾಣಿ, ಜ್ಞಾನದಾಯಿ ಶಾರದೆಯು ನೆಲೆಸಿರುವ ತಾಣಗಳಾಗಿವೆ. ಜ್ಞಾನದ ಆಗರಗಳಾಗಿ ಅರಸರ ಸಪ್ತ ಸಂತಾನಗಳಲ್ಲಿ ಒಂದೆಂದು ಪರಿಗಣಿಸಿರುವ ಹಸ್ತಪ್ರತಿಗಳನ್ನು, ಹಸ್ತಪ್ರತಿ ಚಿತ್ರಗಳು ಸಾರಸ್ವತ ಲೋಕದ ಸಾರ್ವತ್ರಿಕ ಆಸ್ತಿಗಳಾಗಿವೆ. ಕಾಲಘಟ್ಟದ ಕೆಲವೇ ವರ್ಷಗಳ ಹಿಂದೆ ಬಾಳಿ ಬದುಕಿದ ನಮ್ಮ ಪ್ರಾಚೀನರ ಜ್ಞಾನದ ಆಗರಗಳು ಈ ಹಸ್ತಪ್ರತಿಗಳಾಗಿವೆ. ತಾನು ಅನುಭವಿಸಿದ ಅಥವಾ ವ್ಯಕ್ತಪಡಿಸಿದ ವಿಚಾರದ ಕಾವ್ಯ,ಸಾಹಿತ್ಯ, ಚಿತ್ರ, ವೈದ್ಯ ವಚನ, ಗೀತೆ, ಕ್ರೀಡೆ, ಯಂತ್ರ, ತಂತ್ರಗಳಂತಹ ಅಸಂಖ್ಯಾತ ರೂಪದಿಂದ ದಾಖಲು ಗೊಂಡಿರುವಂತಹ ಹಸ್ತಪ್ರತಿಗಳು ಶೇಖರಿಸಿಟ್ಟು ಕೊಂಡಿರುವ ವ್ಯಕ್ತಿಯ ಅಥವಾ ಸಂಸ್ಥೆಯ ಸ್ವತ್ತಾಗದೆ ಅವು ನಾಡಿನ, ದೇಶದ, ಜಗತ್ತಿನ ಸಾರಸ್ವತ ಲೋಕದ ಆಸ್ತಿಯಾಗಿವೆ. [೨]

ಅಭಿವ್ಯಕ್ತಿಗೆ ಮಾಧ್ಯಮವಾಗಿ ಅಂದು ಪ್ರಾರಂಭದಲ್ಲಿ ದೊರೆತ ಮರದ ತೊಗಟೆ, ಭೂರ್ಜ, ಚರ್ಮ, ಮಣ್ಣಿನ ಹಲಗೆಗಳಲ್ಲಿ ಪ್ರಾಯೋಗಿಕವಾಗಿ ಸ್ಥಾನಪಡೆಯುತ್ತಾ ಬಹು ಪ್ರಯೋಗಗಳ ನಂತರ ಕರಗತವಾಗಿರುವ ಈ ತಾಳೆಗರಿಗಳನ್ನು ಭಾರತದಲ್ಲಿ ವಿಶೇಷವಾಗಿ ಕನ್ನಡನಾಡಿನಲ್ಲಿ ನಡೆದುಹೋದ ಅದ್ವಿತೀಯ ಸಾಹಿತ್ಯ, ಕಲೆ, ಸಂಸ್ಕೃತಿಗಳ ಘಟ್ಟವನ್ನು ಕಾಯ್ದಿಡುವ ಕೋಶಗಳಂತಿವೆ. ಕಲೆ,

ಇಂತಹ ಜ್ಞಾನದ ಆಗರಗಳಾಗಿರುವ ಹಸ್ತಪ್ರತಿಗಳು ದೊರೆತಿರುವುದರಕ್ಕಿಂತ

೧. ಕುವೆಂಪು : ಅವರ ಕೊಳಲು ಸಂಗ್ರಹದಿಂದ.

೨. ಪ್ರೊ. ಎಸ್. ಬಸವರಾಧ್ಯರು : ಅಖಿಲ ಭಾರತ ಹಸ್ತಪ್ರತಿ ಶಿಬಿರ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

ದೊರಕಲಾರದ್ದೆ ಹೆಚ್ಚು. ಹಾಳಾದುದು ಇದಕ್ಕಿಂತ ಇನ್ನೂ ಹೆಚ್ಚು ಸಾರಸ್ವತ ಲೋಕದ ಆಸ್ತಿಯಾಗಿರುವ ಈ ಹಸ್ತಪ್ರತಿಗಳನ್ನು ಸಂರಕ್ಷಿಸುವ, ಸುಚೀಕರಣಗೊಳಿಸುವ, ಒಂದು ಹಸ್ತಪ್ರತಿ ವಿಶ್ವವಿದ್ಯಾಲಯವೇ ಸ್ಥಾಪನೆಯಾಗಬೇಕೆಂದು ಅಭಿಪ್ರಾಯ ಪಡುತ್ತಿರುವ ಹಿರಿಯ ವಿದ್ವಾಂಸರಾದ ಶ್ರೀ ಎನ್. ಬಸವರಾಧ್ಯರ ವಿಚಾರವು ಸಕಾಲಿಕವಾಗಿದೆ.

ಹಸ್ತಪ್ರತಿಗಳನ್ನು ಅತ್ಯಂತ ಜತನದಿಂದ ಕಾಪಾಡಿಕೊಂಡು ಬರಬೇಕೆಂಬುದು ಪ್ರತಿಕಾರರ, ಕಳಕಳಿಯ ಬಿನ್ನಹ[3] ಆದರೆ ಇಂತಹ ಬಿನ್ನಹ, ಬಯಕೆ, ಹಾರೈಕೆಗಳು ಸಂಪೂರ್ಣವಾಗಿ ಈಡೇರುವಂತಹುವಲ್ಲ. ಈಡೇರುವುದು ಸಾಧ್ಯವೂ ಇಲ್ಲ. ಒಂದು ಕಡೆ ಹಸ್ತಪ್ರತಿಗಳು ನಾಶವಾಗುತ್ತಿದ್ದರೆ ಇನ್ನೊಂದುಕಡೆ ಬೆಳೆಯುತ್ತಿರುತ್ತದೆ. ಇದು ಪ್ರಕೃತಿ ನಿಯಮ[4] ಎಂದು ಹಸ್ತಪ್ರತಿಗಳ ಹಿರಿಯ ವಿದ್ವಾಂಸರರಾಗಿರುವ ಶ್ರೀ ಎಚ್.ದೇವಿರಪ್ಪ ನವರು ಈ ರೀತಿ ಅಭಿಪ್ರಾಯ ಪಡುತ್ತಾರೆ.

ಸಾಹಿತ್ಯಕವಾಗಿ ಈ ಮಾತು ಸರಿ ಎನಿಸಿದರೂ ಹಸ್ತಪ್ರತಿ ಚಿತ್ರಕಲೆಯ ಆಪತ್ತು ಮತ್ತು ಸಂರಕ್ಷಣೆಯ ಕಾರ್ಯವು ಇದಕ್ಕಿಂತಲೂ ಗಂಭೀರವಾಗಿದೆ. ಹಸ್ತಪ್ರತಿಗಳೊಳಗಿನ ಚಿತ್ರಗಳು ಸಾಹಿತ್ಯದೊಂದಿಗೆ ಸುರಕ್ಷಿತವಾಗಿದ್ದರೂ. ಹಸ್ತಪ್ರತಿಗಳ ಸಂರಕ್ಷಣೆಯಲ್ಲಿ ಬಳಸುವ ಕಟ್ಟಿಗೆಯ ಫಲಕಗಳ ಮೇಲಿರುವ ಚಿತ್ರಗಳು ಗಟಿಕಾಯುವ ಸೈನಿಕರಂತೆ ಕಾರ್ಯ ನಿರ್ವಹಿಸುತ್ತಿವೆ. ಚಿತ್ರಕಲೆಯನ್ನು ಅರಿಯುವ ತಿಳಿವಳಿಕೆಯು ಸಾಲದಕಾರಣ ಸಂಶೋಧನಾ ವಿದ್ಯಾರ್ಥಿಗಳು ಸಾಹಿತ್ಯದ ಪಠ್ಯದೊಂದಿಗೆ ಸಂತೃಪ್ತರಾಗಿ ಫಲಕಗಳ ಮೇಲಿರುವ ಚಿತ್ರಗಳನ್ನು ನಿರ್ಲಕ್ಷಿಸಿ ಟಿಪ್ಪುಗಳ ಮೇಲೆ ಹಸ್ತಪ್ರತಿಗಳ ಅಂಕಿ-ಸಂಖ್ಯೆ ವಿಷಯ ವಿವರ ನೀಡುವ ಚೀಟಿಯನ್ನು ಹಚ್ಚಿ ಫಲಕಗಳ ಮೇಲಿನ ಚಿತ್ರಗಳನ್ನು ಹಾಳುಗೆಡವಿದ ಉದಾಹರಣೆಗಳು ಇವೆ. ಕೆಲವು ಚಿತ್ರಗಳು ಅಲಕ್ಷ್ಯ ಸೂಕ್ತ ಪರಿಪಾಲನೆ ಮತ್ತು ಪ್ರಾಕೃತಿಕ ಕಾರಣಗಳಿಂದಲೂ ಫಲಕಗಳ ಮೇಲೆ ಇರುವ ಚಿತ್ರಕಲೆ ಮತ್ತು ವರ್ಣಗಾರಿಕೆಯು ಹಾಳಾಗಿ ಹೋಗಿದೆ.[5]

ಇಂದು ಯುದ್ಧೋಪಾದಿಯಲ್ಲಿ ಹಸ್ತಪ್ರತಿಗಳನ್ನು ಮತ್ತು ಹಸ್ತಪ್ರತಿ ಚಿತ್ರಗಳನ್ನು ಕಾಪಾಡುವ ಕಾರ್ಯವು ತುರ್ತಾಗಿ ನಡೆಯಬೇಕಾಗಿದೆ. ಇಲ್ಲವಾದಲ್ಲಿ ಕರ್ನಾಟಕ ಸಾರಸ್ವತ ಲೋಕಕ್ಕೆ ಎಲ್ಲೆ ಇಲ್ಲದ ಹಾನಿಯ ತಟ್ಟಬಲ್ಲದು. ನಿವಾರಣೋಪಾಯಗಳನ್ನು ಈ ರೀತಿಯಲ್ಲಿ ಯೋಜಿಸಬಹುದು.

ಹಸ್ತಪ್ರತಿ ಕಾಯಕಲ್ಪ ವಿಧಾನಗಳು

I ಸಂಗ್ರಹಣಾ ಕಾರ್ಯ	II ಸಂರಕ್ಷಣಾ ಕಾರ್ಯ	III ವೈಜ್ಞಾನಿಕ ಸೂಚಿಕರಣ
1) ಗ್ರಂಥ ಭಂಡಾರಕ್ಕೆ ಮರಳಿ ತರುವುದು	1) ನೈಸರ್ಗಿಕ ಆಪತ್ತು	1) ಸಮಗ್ರ ಸೂಚಿ
2) ಗ್ರಂಥ ಭಂಡಾರಕ್ಕೆ ಹೊಸ ಸೇರ್ಪಡೆ	2) ಕೀಟ ನಿವಾರಣ	2) ಸಂರಕ್ಷಣೆ
3) ಗ್ರಂಥಗಳ ಕುರಿತು ಸಾರ್ವಜನಿಕ ಆಂದೋಲನ	3) ಆಧುನಿಕ ಕ್ರಮ	3)ಹೊಸ ವೈಜ್ಞಾನಿಕ ಕ್ರಮ
4) ಗ್ರಂಥ ದಾಸಿಗಳ ಓತಕಾಯುವುದು	4) ತೈಲ ಲೇಪನ	4) ಕುಶಲಕೇಂದ್ರ ಪ್ರಾರಂಭ
	5) ಪುನರ್ ನಿರ್ಮಾಣ	

೩. ೪ ಮತ್ತು ೫ : ಹೆಚ್.ದೇವೀರಪ್ಪ: ಕನ್ನಡ ಹಸ್ತಪ್ರತಿ ಇತಿಹಾಸ ಪುಟ -೬೦.

I. ಹಸ್ತಪ್ರತಿ ಸಂಗ್ರಹಣಾ ಕಾರ್ಯ :

ರಾಷ್ಟ್ರದ ಅತ್ಯಮೂಲ್ಯ ನಿಧಿಯಾಗಿರುವ ಹಸ್ತಪ್ರತಿಗಳ ಸಂಗ್ರಹಣಾ ಕಾರ್ಯ ಪ್ರತಿ ವಿಶ್ವವಿದ್ಯಾಲಯಗಳ ಪ್ರತಿ ಶೈಕ್ಷಣಿಕ ಅವಧಿಯ ಕಾರ್ಯಸೂಚಿಯಾಗಿರಬೇಕು. ರಾಷ್ಟ್ರೀಯ ವಿಭಾಗ ಮಟ್ಟದ ಕೇಂದ್ರಗಳಂತೆ ಕಾರ್ಯನಿರ್ವಹಿಸುತ್ತಿರುವ ವಿಶ್ವವಿದ್ಯಾಲಯಗಳು ತಮ್ಮ ಕ್ಷೇತ್ರ ವ್ಯಾಪ್ತಿಯಲ್ಲಿ ಹಸ್ತಪ್ರತಿಗಳ ಸಂಶೋಧನಾ ಸೂಚಿ ನಿರ್ಮಿಸ ಬೇಕು. ಸಂಶೋಧಕರು ಮತ್ತು ಸಂಶೋಧನಾ ವಿದ್ಯಾರ್ಥಿಗಳು ಕ್ಷೇತ್ರಕಾರ್ಯದಲ್ಲಿ ನಿರತರಾದಾಗ ಹಸ್ತಪ್ರತಿ ಅನ್ವೇಷಣಾ ಕಾರ್ಯವನ್ನು ಪರಿಶೀಲಿಸಬೇಕು. ವಿಶ್ವವಿದ್ಯಾಲಯಗಳ ಜನ ಸಂಪರ್ಕ ಸಭೆಗಳಲ್ಲಿ, ವಿದ್ಯಾರ್ಥಿ ಸಮುದಾಯದಲ್ಲಿ ಹಸ್ತಪ್ರತಿಗಳ ಕುರಿತು ಅರಿವು ಮೂಡಿಸಬೇಕು. ಎಲ್ಲ ವಿಭಾಗಗಳ ವಿದ್ಯಾರ್ಥಿಗಳು, ರಾಷ್ಟ್ರೀಯ ಸ್ವಯಂ ಸೇವಾ ನಿರತ ಅಧಿಕಾರಿಗಳು ಹಸ್ತಪ್ರತಿಗಳ ನೆಲೆಯನ್ನು ಶೋಧಿಸುವ ಕಾರ್ಯ ಮಾಡಿದರೆ ಸಂಶೋಧಕರು ಸೂಚಿಕರಣ ಸಂರಕ್ಷಣದಂತಹ ಕಾರ್ಯವು ಮುಂದುವರೆಸಬಹುದು. ಪ್ರತಿವರ್ಷದ ವಾರ್ಷಿಕ ವರದಿಯಲ್ಲಿ ಹೊಸದಾಗಿ ಸಂಗ್ರಹಿತವಾದ ಹಸ್ತಪ್ರತಿಗಳ ವಿವರ ಆರೈಕೆಗೊಂಡ ಲೆಕ್ಕದ ವಿವರವು ಇರತಕ್ಕದ್ದು ಇದರೊಂದಿಗೆ ಚಿತ್ರ, ಚಿತ್ರಕಲೆಯನ್ನು ನೋಡುವುದನ್ನು, ಅಭ್ಯಾಸ ಮಾಡುವುದನ್ನು ಸಂಶೋಧಕರಿಗೆ ಒದಗಿಸಿಕೊಡಬೇಕು. ಚಿತ್ರವಿರಲಿ, ಸಾಹಿತ್ಯವಿರಲಿ ತಾಂತ್ರಿಕಕತೆಯ ಮಾತ್ರಾವುದೇ ಪ್ರಾಕಾರವಿರಲಿ ಅದು ಹಸ್ತಪ್ರತಿ ಅದು ನಮ್ಮ ರಾಷ್ಟ್ರೀಯ ಸೊತ್ತು, ಅದು ಎಲ್ಲರಿಗೂ ಸೇರಿರುವ ಸೊತ್ತು ಎಂಬ ಭಾವ, ಅರಿವು ಎಲ್ಲರಿಗೂ ಇರಬೇಕು.

1. ಗ್ರಂಥ ಭಂಡಾರಕ್ಕೆ ಮರಳಿ ಗ್ರಂಥಗಳನ್ನು ತರುವ ಕಾರ್ಯ :

ಬಹುಜನರ ಪರಿಶ್ರಮದ ಸಂಗ್ರಹಣೆ, ಜನರು ವಿಶ್ವಾಸವಿಟ್ಟು ಉದಾರತೆಯಿಂದ ದಾನಕೊಟ್ಟ ಕಾರಣಗಳಿಂದ ಪ್ರತಿ ವಿಶ್ವವಿದ್ಯಾಲಯದಲ್ಲಿ ಅಥವಾ ಮಠ-ಮಂದಿರಗಳಲ್ಲಿ ಹಸ್ತಪ್ರತಿಗಳ ಸಂಗ್ರಹ ಗೊಂಡಿರುತ್ತದೆ. ಈ ಸಂಗ್ರಹಣೆಯ ಹಿನ್ನಲೆಗೆ ಬಹಳಷ್ಟು ಮಹತ್ವಾಕಾಂಕ್ಷಿ ಕಾರಣಗಳೂ ಇರುತ್ತವೆ. ಈ ಎಲ್ಲಾ ಕಾರಣಗಳಿಂದ ಸಂಗ್ರಹಿತ ಹಸ್ತಪ್ರತಿಗಳು ಜೇನುಗೂಡಿನಲ್ಲಿ ಸಿದ್ಧಗೊಂಡಿರುವ ಜೇನುತುಪ್ಪದಂತಿರುತ್ತದೆ. ಜೇನು ಗೂಡಿನಲ್ಲಿ ಸಂಗ್ರಹಗೊಂಡ ಕೂಡಲೇ ಗೂಡಿಗೆ ದಾಳಿ ಮಾಡುವ ಜನರಂತೆ, ಕರಡಿಗಳಂತೆ, ಕಲ್ಲುಬೀರುವ ಉಡಾಳರಂತೆ ಜೇನುಗೂಡು ಅನುಭವಿಸುವ ಆಪತ್ತನ್ನೇ ಹಸ್ತಪ್ರತಿಗಳ ಸಂಗ್ರಹಾಲಯಗಳು ಅನುಭವಿಸುತ್ತವೆ.

ಹೈದರಾಬಾದ್ ಪರಿಸರದಲ್ಲಿ ಬರುವ ವಿಶ್ವವಿದ್ಯಾಲಯದಲ್ಲಿ ಸಂಗ್ರಹಿತಗೊಂಡ ಹಸ್ತಪ್ರತಿಯ ತಾಳೇಗರಿಗಳು ಸೂಚಿ ಕಾಣದೇ ಆರೈಕೆ ಕಾಣದೆ ಹಾಳಾಗುತ್ತಿರುವಂತೆ ಸಂಗ್ರಹಿತ ಪ್ರತಿಗಳಲ್ಲಿ ಅರ್ಧಕ್ಕಿಂತ ಅಧಿಕವಾಗಿ ಕಣ್ಮರೆಯಾಗಿವೆ ! ಕಾರಣ ಅಧ್ಯಯನಕ್ಕಾಗಿ ಮನೆಗೆ ತೆಗೆದುಕೊಂಡು ಹೋದ ವಿಶ್ವವಿದ್ಯಾಲಯದ ಹಿರಿಯ ಪ್ರೋಫೇಸರವರು, ವಿದ್ವಾಂಸರು, ಭಾಷಾ ಪಂಡಿತರು, ಪ್ರಖ್ಯಾತ ಸಂಶೋಧಕರು. ಹಸ್ತಪ್ರತಿಯನ್ನು ಪಡೆದವರ ಯಾದಿಯಲ್ಲಿದ್ದಾರೆ. ವಿಭಾಗದ ಮುಖ್ಯಸ್ಥರು, ವಿದ್ಯಾಲಯದ ಮುಖ್ಯಸ್ಥರು ಹತ್ತಾರು ಮೌಖಿಕ ಲಿಖಿತ ಆದೇಶಗಳನ್ನು ನೀಡಿದರೂ

ಗ್ರಂಥಭಂಡಾರದಿಂದ ಪಡೆದಿದ್ದ ಹಸ್ತಪ್ರತಿಗಳನ್ನು ಗ್ರಂಥ ಭಂಡಾರಕ್ಕೆ ಮರಳಿಸಿಲ್ಲ. ಆದರೆ ಅವರ ಮನೆಯ ಅಟ್ಟವನ್ನು ಅವರ ಅಧ್ಯಯನ ಕೋಣೆಯ ಮಂಚದ ಬುಡವನ್ನು ಸೇರಿ ಬೂಷ್ಟು ಹಿಡಿದು ನರಳುತ್ತಿರುವ ಹಸ್ತಪ್ರತಿಯು ಭೀಕರ ರೋಗಪೀಡಿತ ವ್ಯಕ್ತಿಯು ಕೊನೆಯ ಕಾಲಗಣನೆ ಮಾಡುತ್ತಿವೆಯಂತೆ. ಇಂತಹ ಸೂಕ್ತ ಸಂದರ್ಭಗಳಲ್ಲಿ ವಿಭಾಗದ ಮುಖ್ಯಸ್ಥರು ಅಥವಾ ಕುಲಪತಿಗಳು ಗ್ರಂಥಾಲಯ ಬಿಟ್ಟು ಹೋದ ಹಸ್ತಪ್ರತಿಯನ್ನು ಗ್ರಂಥಾಲಯಕ್ಕೆ ಸೇರಿಸುವ ಕಾರ್ಯವನ್ನು ಮಾಡಬೇಕು. ಯಾವುದೇ ಕಾರಣದಿಂದ ಗ್ರಂಥ ಭಂಡಾರದಿಂದ ಹೊರಹೋಗಿರುವ ಹಸ್ತಪ್ರತಿಯ ಗ್ರಂಥವನ್ನು ನಿರ್ದಿಷ್ಟ ಸಮಯದ ಅವಧಿಯಲ್ಲಿಯೇ ಗ್ರಂಥ ಭಂಡಾರವನ್ನು ಸೇರಬೇಕು.

ಹಸ್ತಪ್ರತಿ ಭಂಡಾರಕ್ಕೆ ಹೊಸ ಗ್ರಂಥಗಳ ಸೇರ್ಪಡೆ :

ಹೊಸ ಚಿಗುರು ಹಳೇ ಬೇರು ಕೂಡಿರಲು
ಮರಸೊಬಗು । ಹೊಸಯುಕ್ತಿ ಹಳೆತತ್ತ್ವದೊಡಗೂಡೆ ಧರ್ಮ ॥
ಋಷಿ ವಾಕ್ಯದೊಡನೆ ವಿಜ್ಞಾನ ಕಲೆ ಮೇಳವಿಸೆ
ಜಸವು ಜನ ಜೀವನಕ್ಕೆ - ಮಂಕುತಿಮ್ಮ ॥ [೬]

ಹಳತು - ಹೊಸತುಗಳ ಸಮ್ಮಿಲನವೆ ಹೊಸ ಬದುಕಿನ ನಾಂದಿಯಾಗುವಂತೆ ಹಿಂದೆ ಸಂಗ್ರಹಿತ ಹಸ್ತಪ್ರತಿಗಳಿಗೆ ಸಂತೃಪ್ತರಾಗದೆ, ವಿಶ್ವವಿದ್ಯಾಲಯವು ತನ್ನ ಆವರಣವನ್ನು ದಾಟಿಕೊಂಡು ಜನ ಸಾಮಾನ್ಯರೊಂದಿಗೆ ಬೆರೆಯುವುದರಿಂದಲೂ ಜನರ ವಿಶ್ವಾಸ ಗಳಿಸುವುದರಿಂದಲೂ ಜನರ ಮಧ್ಯದಲ್ಲಿರುವ ಹಸ್ತಪ್ರತಿಗಳು ಹಸ್ತಪ್ರತಿ ಭಂಡಾರವನ್ನು ಸೇರುವಂತಾಗಬೇಕು. ಈ ಕುರಿತು ಆಗಿರುವ ಡಾ॥ಎಫ್.ಟಿ. ಹಳ್ಳಿಕೇರಿಯವರ ಮಾತನ್ನು ಇಲ್ಲಿ ಗಮನಿಸುವದು ಅವಶ್ಯ...' ಕ್ಷೇತ್ರ ಕಾರ್ಯಕರ್ತ ಅಪರೂಪದ ಅನುಪಲಬ್ಧ ಹಸ್ತಪ್ರತಿಗಳ ಶೋಧದತ್ತ ಸದಾ ಪ್ರವೃತ್ತನಾಗಿರಬೇಕು. ಹರಿವಂಶ, ಶೂದ್ರಕ, ರಘುವಂಶ ಪುರಾಣ, ಭುವನೈಕ ರಾಮಾಭ್ಯುದಯ ಮುಂತಾದ ಅನುಪಲಬ್ಧ ಹಸ್ತಪ್ರತಿಗಳನ್ನು ನಿರಂತರ ಬೆನ್ನಟ್ಟಿ ನಡೆಯಬೇಕು. ರಾಘವಾಂಕನ "ಹರಿಹರ ಮಹತ್ವ" ಕೃತಿಯು ಇಂದಿಗೂ ಸಿಕ್ಕಿಲ್ಲ ಹರಿಹರ ರಾಘವಾಂಕರ ಕಾರ್ಯಕ್ಷೇತ್ರವಾದ ಹಂಪಿಯ ಸುತ್ತಮುತ್ತಲ ಪ್ರದೇಶದಲ್ಲಿ ಹರಿಹರ ಮಹತ್ವ ಕೃತಿಯ ಶೋಧನೆ ತೀವ್ರಗತಿಯಲ್ಲಿ ನಡೆಯಬೇಕಾಗಿದೆ. ಕವಿರಾಜಮಾರ್ಗ ಹಸ್ತಪ್ರತಿಯ ಸುಳುಹು ಹಿಡಿದು ಬೀದರ ಜಿಲ್ಲೆಯಲ್ಲಿ ಅದನ್ನು ಪತ್ತೆ ಹಚ್ಚಲು ಡಾ॥ ಎಂ.ಎಂ.ಕಲಬುರ್ಗಿಯವರು ಹತ್ತು ವರುಷ ನಿರಂತರ ಪ್ರಯತ್ನ ಮಾಡಬೇಕಾಯಿತು. ಧಾರವಾಡ ಪ್ರದೇಶದಲ್ಲಿ "ಗಂಧಹಸ್ತಿ ಮಹಾಭಾಷ್ಯ" ಹಸ್ತಪ್ರತಿಯಿದೆಂಬ ವದಂತಿಯನ್ನು ಹಿಂಬಾಲಿಸುವ ಪ್ರಯತ್ನ ಇಂದು ನಡೆಯಬೇಕಾಗಿದೆ.[೭]

"ಬೀದರ, ಗುಲಬರ್ಗಾ, ರಾಯಚೂರು, ಕೊಪ್ಪಳ, ಬಳ್ಳಾರಿ ಜಿಲ್ಲೆಗಳು ಹೈದರಾಬಾದ್ ಕರ್ನಾಟಕದ ವ್ಯಾಪ್ತಿಗೆ ಬರುವಂಥವುಗಳು ಹಿಂದುಳಿದ ಪ್ರದೇಶವೆಂದು

---

೬. ಡಿ.ವಿ.ಜಿ. : ಮಂಕುತಿಮ್ಮನ ಕಗ್ಗ, ಸಂಖ್ಯೆ, ೫೨೨, ಪುಟ -೧೦೪.
೭. ಡಾ. ಎಫ್.ಟಿ. ಹಳ್ಳಿಕೇರಿ : ಹಸ್ತಪ್ರತಿ ಕ್ಷೇತ್ರ ಕಾರ್ಯ, ಪುಟ -೧೪. ೧೫.

ಗುರುತಿಸಲ್ಪಡುವ ಈ ಜಿಲ್ಲೆಗಳಲ್ಲಿ ಹಸ್ತಪ್ರತಿಗಳ ಸರ್ವೇಕ್ಷಣೆ ಸಂಗ್ರಹ ಕಾರ್ಯವೂ ತುಂಬಾ ಹಿಂದೆ ಬಿದ್ದಿದೆ. 1970 ಕ್ಕಿಂತ ಪೂರ್ವದಲ್ಲಿ ಗುಲ್ಬರ್ಗಾ ವಿಶ್ವ ವಿದ್ಯಾಲಯದ ಕನ್ನಡ ಅಧ್ಯಯನ ಸಂಸ್ಥೆಯು ಅಸ್ತಿತ್ವಕ್ಕೆ ಬಂದರೂ, ಹಸ್ತಪ್ರತಿಗಳ ಸಂಗ್ರಹ ಕಾರ್ಯ ಪ್ರಾರಂಭವಾದುದು 1985ರಲ್ಲಿ, ಸುಮಾರು 2000 ಹಸ್ತಪ್ರತಿಗಳನ್ನು ಈ ಸಂಸ್ಥೆ ಸಂಗ್ರಹಿಸಿದ್ದು, ಇವುಗಳ ಸೂಚಿ ಸಂಪುಟ ಪ್ರಕಟವಾಗಬೇಕಿದೆ ಜೊತೆಗೆ ಈ ಭಾಗದಲ್ಲಿರುವ ಹಸ್ತಪ್ರತಿಗಳ ಸಂಗ್ರಹಕ್ಕಾಗಿ ವ್ಯಾಪಕ ಕ್ಷೇತ್ರಕಾರ್ಯವನ್ನು ಕೈಕೊಳ್ಳಬೇಕಾಗಿದೆ''.[೮]

ಬಿ.ಎಸ್.ಸಣ್ಣಯ್ಯ ರವರು ಹೇಳುವಂತೆ ಹೈದ್ರಾಬಾದ -ಕರ್ನಾಟಕದ ಪರಿಸರದಲ್ಲಿ ಮತ್ತು ಹೈದ್ರಾಬಾದ್‌ಗೆ ಸಮೀಪದ ಮೆಹಬೂಬನಗರದಲ್ಲಿ ಹಸ್ತಪ್ರತಿಗಳು ಲಭ್ಯವಾಗಿದ್ದು ಈ ನಿಟ್ಟಿನತ್ತ ಕ್ಷೇತ್ರ ಕಾರ್ಯವು ಆಗಬೇಕಾಗಿದೆ.[೯]

3. ಹಸ್ತಪ್ರತಿಗಳ ಗ್ರಂಥಗಳ ಕುರಿತು ಸಾಮಾಜಿಕ ಆಂದೋಲನ :

ಭಾರತವು ಹಳ್ಳಿಗಳ ಬೀಡು ಆಗಿದ್ದು ಇಂದಿಗೂ ಗ್ರಾಮೀಣ ಪರಿಸರದಲ್ಲಿ ಸಾಕ್ಷರತೆಯ ಮಟ್ಟ ಇನ್ನೂ ಕೆಳಹಂತದಲ್ಲಿದೆ. ನಗರಗಳಲ್ಲಿ ವಾಸಿಸುವಂತಹ ವಿದ್ಯಾವಂತ ನಾಗರೀಕರೇ ಅನೇಕ ಕಂದಾಚಾರಗಳಿಗೆ ಬಲಿಯಾಗಿರುವಾಗ ಗ್ರಾಮೀಣ ಪರಿಸರದ ಜನ ಕಂದಾಚಾರಿಗಳಾಗುವುದರಲ್ಲಿ ತಪ್ಪೇನಿದೆ ? ಕಾಗದ, ತಾಳೆಯ ಪ್ರತಿ ಅರ್ಥ. ಅವುಗಳ ಒಳಗಿರುವ ಸಾಹಿತ್ಯವನ್ನು ತಿಳಿಯಲಾರದ ಮುಗ್ಧರು ಇಂದಿಗೂ ಹಸ್ತ ಪ್ರತಿಗಳ ಮೇಲೆ ನೀರೆರೆದು ಭಸ್ಮ ಲೇಪಿಸಿ ಕುಂಕಮವಿಟ್ಟು ಮಲ್ಲಿಗೆಯ ಅರಳಸ್ನಿಟ್ಟು ಅಂಧಶ್ರದ್ಧೆಯಿಂದ ಪೂಜಿಸುತ್ತಿರುವುದು ಸಹಜವಾಗಿದೆ. ಇಂತಹ ಸಾಮಾನ್ಯ ಜನರಿಗಾಗಿ, ಮಧ್ಯಮ ವರ್ಗದ ಜನರಿಗಾಗಿ ಅನೇಕ ಕಾರ್ಯಕ್ರಮಗಳನ್ನು ಕೈಕೊಂಡ ಅವರನ್ನು ಅಂಧಾನುಕರಣೆ ಮತ್ತು ಗ್ರಂಥನಾಶಗಳ ವಿರುದ್ಧ ತಿಳಿ ಹೇಳಿ ಗ್ರಂಥಗಳನ್ನು ಸಂಗ್ರಹಿಸಬೇಕಾಗಿದೆ.

ಗರಿಯಕಟ್ಟು ಕವುಳಿಗೆ, ಗ್ರಂಥಶಾಸ್ತ್ರ ಹೋದರೆ ಮನೆಯ ಮಹಾಲಕ್ಷ್ಮೀಯೇ ಹೋಗಿ ಬಿಟ್ಟಾಳು ಎಂಬ ಭಯ ಸಾಮಾನ್ಯ ಜನವರ್ಗಕ್ಕೆ ಇರುತ್ತದೆ. ತಿಳಿಯದ ಜಗತ್ತಿನ ನಿಧಿ ಶಾಸ್ತ್ರ ಗಾವುಟಟ್ಟಿನ ಶಾಸ್ತ್ರ ಗ್ರಹಣ ಪಿಶಾಚಿಗಳ ಶಾಸ್ತ್ರ ಮತ್ತು ಮಂತ್ರಶಕ್ತಿ ಈ ಗ್ರಂಥದೊಳಗಿದ್ದು ಗ್ರಂಥದಾನಮಾಡುವುದರಿಂದ ಆ ಪೀಡೆ, ಭೂತ,ಪಿಶಾಚಿ ಅವರಿಗೆ ಅಂಟಿಕೊಳ್ಳಬಹುದೆಂಬ ಭಯವೂ ಅವರಿಗೆ ಇರುತ್ತೆ ಇಂತಹ ಹತ್ತಾರು ಶಂಕೆ, ಊಹೆಗಳು ನಿವಾರಿಸಿ ಗ್ರಂಥ ಭಂಡಾರ ಮಾಡುವ ಗ್ರಂಥ ಜೀರ್ಣೋದ್ಧಾರದ ವಿವರವನ್ನು ಜನರಿಗೆ ನೀಡುವುದರಿಂದ ಹೊಸ ಅರಿವು, ವಿಚಾರಗಳಿಂದಲೂ ಜನರು ಬದಲಾಗಿ. ಹೊಸ ರೀತಿಯಂತೆ ಸ್ಪಂದಿಸಬಲ್ಲರು.ಹೈದರಾಬಾದ್ ಪರಿಸರದಲ್ಲಿ ಪೂರ್ವಕ್ಕೆ ಆದಿಕವಿ, ನಾಡೋಜ, ಪಂಪನ ಕಾರ್ಯಸ್ಥಾನವಾಗಿದ್ದ ಅಂದಿನ ವೆಂಗಿಪಳು (ಇಂದಿನ ಆಂದ್ರಪ್ರದೇಶದ ಕರಿಮನಗರ ಜಿಲ್ಲೆ) ಇದ್ದರೆ ಪಶ್ಚಿಮಕ್ಕೆ ರಾಷ್ಟ್ರಕೂಟರ ರಾಷ್ಟ್ರಕವಿ ವಿಜಯನ ''ಕವಿರಾಜಮಾರ್ಗ''ದ ಪರಿಸರವಿದೆ. ಸಮೃದ್ಧ ಪರಿಸರದ ನಡುವೆ ಶೋಧನೆಕಾರ್ಯ ''ಕಡಿಮೆ'' ಹಂತದಲ್ಲಿ ನಡೆದಿದೆ. ಈ

---

೮. ಡಾ. ನಾ. ಗೀತಾಚಾರ್ಯ : ಹಸ್ತಪ್ರತಿ ಶಾಸ್ತ್ರವಿವೇಚನೆ , ಡಾ. ಟಿ.ವಿ. ವೆಂಕಟಾಚಲ ಶಾಸ್ತ್ರಿ. ಪುಟ -IX

೯. ಬಿ.ಎಸ್. ಸಣ್ಣಯ್ಯ : ಹಸ್ತಪ್ರತಿ ಶಾಸ್ತ್ರಪರಿಚಯ, ಪುಟ -೩೬.

ನಿಟ್ಟಿನಲ್ಲಿ ಸಂಶೋಧಕರು ಕ್ಷೇತ್ರಕಾರ್ಯ ಮಾಡಿ ಹೊಸತಾದ ಇತಿಹಾಸ ನಿರ್ಮಿಸಬೇಕಾಗಿದೆ. ಇಂತಹುದೇ ಕ್ಷೇತ್ರ ಕಾರ್ಯ ಎಲ್ಲಕಡೆ ನಡೆಯಬೇಕಾಗಿದೆ.

4. ಗ್ರಂಥದಾನಿಗಳ ಹಿತ ಕಾಯುವುದು :

ಪ್ರಾಚೀನ ಗ್ರಂಥಗಳು ಸಾಮಾನ್ಯವಾಗಿ ಇರುವುದೇ ಮಧ್ಯಮ ವರ್ಗದ ಸುಶಿಕ್ಷಿತರ ಕುಟುಂಬಗಳಲ್ಲಿ ವಚನ ಸಾಹಿತ್ಯ ಏರಬಹುದು. ನಿಜಗುಣರ ಕೈವಲ್ಯವಿರಬಹುದು ಕುಮಾರವ್ಯಾಸನ "ಕರ್ಣಾಟ ಭಾರತ ಕಥಾಮಂಜರಿಯೋ "ಅಥವಾ ಮತ್ತಾವುದೋ ಹೊಸತಾದುದು ಈ ಪರಿಸರವನ್ನು ಪ್ರತಿನಿಧಿಸುವ ಕೃತಿಯೋ ಆಗಿರಬಹುದು. ತಮ್ಮ ಕೃತಿಯ ಬಗೆಗೆ ಆಗಾಧ ಪ್ರೀತಿ , ಗೌರವ, ಪೂಜ್ಯ ಭಾವನೆಯನ್ನು ಗ್ರಂಥದಾನಿಗಳು ಮಾನಸಿಕವಾಗಿ ಹೊಂದಿರುತ್ತಾರೆ. ಇಂಥ ಸಂದರ್ಭದಲ್ಲಿ ಅವರ ಇಚ್ಛೆಯನ್ನು ಕಾಯ್ದಿಡುವ ಭರವಸೆಯೊಂದಿಗೆ, ಭಾಷೆಯೊಂದಿಗೆ ಕೃತಿಯನ್ನು ಸಂಗ್ರಹಿಸಬೇಕು. ಅಂತಿಮ ಕ್ಷಣದಲ್ಲಿ ಏರುಪೇರಾದರೆ ಕೃತಿಯ ದಾನಿಗಳು 'ಗಂಗೇಚ, ಯಮನೇಚ, ಗೋದಾವರಿ' ಶ್ಲೋಕದೊಂದಿಗೆ ಪ್ರಾಚೀನ ಕೃತಿ ಜಲಾವಸಾನ ಹೊಂದಬಹುದು. ಹಿರಿಯ ವಿದ್ವಾಂಸರಾದ ಕೆ.ಆರ್. ಶೇಷಗಿರಿಯವರ ಅನುಭವವನ್ನು ಇಲ್ಲಿ ಸ್ಮರಿಸಿಕೊಳ್ಳಬಹುದು... ಒಮ್ಮೆ ಗುಬ್ಬಿಯ ಸಮೀಪದಲ್ಲಿರುವ ಚೇಳೂರಿಗೆ ಹೋಗಿ ಹಸ್ತಪ್ರತಿಗಳ ಶೋಧನೆ ನಡೆಸುತ್ತಿದ್ದಾಗ ಒಬ್ಬರು ಹೇಳಿದ ಮಾತಿವು. "ಸ್ವಾಮಿ, ಇನ್ನು ಆರು ತಿಂಗಳು ಮುಂಚೆ ಬಂದಿದ್ದರೆ ನಿಮಗೆ ಕೊನೆಪಕ್ಷ ಒಂದು ನೂರು ಹಸ್ತಪ್ರತಿಗಳಾದರೂ ದೊರೆಯುತ್ತಿತ್ತು ಆದರೆ ಅವರು ಸ್ವರ್ಗಸ್ಥರಾದಾಗ ಅವರೊಡನೆ ಆ ಗ್ರಂಥಗಳನ್ನೆಲ್ಲ ಸಮಾಧಿ ಮಾಡಿ ಬಿಟ್ಟರು ಇಂತಹ ಮೌಢ್ಯತೆಯನ್ನು ಏನೆನ್ನ ಬೇಕು ? ತಿಳಿಯದು. ಸಂಸ್ಥೆಯ ವತಿಯಿಂದ ಅವರ ಮನೆ-ಮನೆಗಳ ಮುಂದೆ ಹೋಗಿ ಬೇಡಿದಾಗ ಕೊಡಲು ನಿರಾಕರಿಸುವವರೂ, ಹೊಗಲಿ ಒಮ್ಮೆಯಾದರೂ ನೋಡಿಕೊಡುತ್ತೇವೆಂದು ಕೋರಿದರೂ ಒಪ್ಪದವರೂ ಇನ್ನೂ ಅಲ್ಲಲ್ಲಿ ಇದ್ದಾರೆ". ಅಂತಹವರು ಈಗಲಾದರೂ ಮನಸ್ಸು ಬದಲಾಯಿಸಿ ಪ್ರಾಚೀನ ಕನ್ನಡ ಸಾಹಿತ್ಯದ ಪ್ರಕಟಣೆಗೆ ನೆರವಾಗಬೇಕು.[೧೦]

ಈ ರೀತಿಯಲ್ಲಿ ಜನರ ಮಧ್ಯದಲ್ಲಿರುವ ಹಸ್ತಪ್ರತಿಗಳು ಧರ್ಮ, ಶಾಸ್ತ್ರ , ಅಜ್ಞಾನ, ಕಂದಾಚಾರಗಳಿಂದ ಬಳಲುವ ಸಮಾಜದ ಜನರಿಗೆ ತಿಳಿಹೇಳಿ ಹಳಕಟ್ಟಿಯವರು, ಕೆ.ಜಿ.ಕುಂದಣಗಾರರು ಅವರ ಸಮಕಾಲೀನ ವಿದ್ವಾಂಸರು ಸಂಗ್ರಹಿಸಿದಂತೆ ಗ್ರಂಥಗಳ ದಾನಿಗಳಿಂದ ಪ್ರತಿ ಸಂಗ್ರಹಿಸಿ ದಾನಿಗಳ ಹಿತಕಾಯುವ ಕೆಲಸ ಹಸಪ್ರತಿ ಸಂಗ್ರಹಕಾರರಿಂದ ನಡೆಯಬೇಕಾಗಿದೆ.

II. ಸಂರಕ್ಷಣಾ ಕಾರ್ಯಗಳು :

ಹಸ್ತಪ್ರತಿಗಳ ಸಂರಕ್ಷಣಾ ಕಾರ್ಯವೆಂದರೆ ನಾಡಿನ ಪರಂಪರೆಯನ್ನು ಪರಿಸರವನ್ನು ಕಾಯ್ದಿಟ್ಟುಕೊಳ್ಳವಂತಹ ಕಾರ್ಯವಾಗಿದೆ. ಇದು ಅತ್ಯಂತ ಜವಾಬ್ದಾರಿಯ ಕಾರ್ಯ ವಾಗಿದೆ. ಹಸ್ತಪ್ರತಿ ಸಂಸ್ಕರಣ ಕಾರ್ಯದ ಬೌದ್ಧಿಕ ಕಾರ್ಯದಂತೆ ಹಸ್ತಪ್ರತಿಯ ಸಂರಕ್ಷಣೆಯ

೧೦. ಡಾ. ಸಿದ್ದಯ್ಯ ಪುರಾಣಿಕ ಸಂ.: ಮಣಿಹ. ಕೆ.ಆರ್. ಶೇಷ ಶಾಸ್ತ್ರಿ, ಪುಟ -೧೦೪.

ಕಾರ್ಯವು ದೇಶ ಕಾಯುವ ಸೈನಿಕನಂತೆ ಕಟ್ಟೆಚ್ಚರದ ದೈಹಿಕ ಕಾರ್ಯವೂ ಆಗಿದೆ.[೧೧] ''ಅಗ್ನಿ ಮೂಷಿಕ ಚೋರೇಭ್ಯೋ ಶಿವೋರಕ್ಷಂತ ಪುಸ್ತಕಂ'' ಎಂಬಂತೆ ಹಸ್ತಪ್ರತಿಯ ಕಾರ್ಯವೆಂದರೆ ಕೇವಲ ಬೆಂಕಿ, ಇಲಿ, ಹೆಗ್ಗಣ-ಕಳ್ಳಕಾಕರ ಮತ್ತು ಕೃತಿಯನ್ನು ಮಂಗಳಕರವಾದ ಶಿವ ಕಾರ್ಯಕ್ಕೆ ಬಳಸುವ ಬದಲು ಅಮಂಗಳಕರವಾಗಿರುವ ಅಶಿವ ಕಾರ್ಯಗಳಿಗೆ ಬಳಸದೇ ಅದರ ಅಸ್ತಿತ್ವವನ್ನು ಹಾಳುಗೆಡುವವರ ಬಗೆಗೂ ನಾವು ಲಕ್ಷ್ಯವಹಿಸಬೇಕಾಗಿದೆ. ಹಸ್ತಪ್ರತಿಕಾರ್ಯ ವೆಂದರೆ ಸಂಗ್ರಹಿತ ಪ್ರತಿಗಳ ಗರಿಗಳನ್ನು ಒರೆಸಿ ತೈಲ ಲೇಪಿಸಿ ಭದ್ರವಾದ ಸಂದೂಕದಲ್ಲಿ ಹಾಕಿ ದೊಡ್ಡದೊಂದು ಬೀಗ ಜಡಿದರೆ ಮುಗಿಯಿತೆ ? ಹಸ್ತಪ್ರತಿಗಳ ಪಾಲನೆಯ ಕಾರ್ಯವು ಶಿಶು ಪಾಲನೆಯ ಕಾರ್ಯದಂತೆ ವ್ಯಾಪಕವಾಗಿದ್ದು ಅದಕ್ಕೆ ತಗಲುಬಹುದಾದ ಎಲ್ಲ ವಿಧವಾದ ಆಪತ್ತುಗಳಿಂದ ಸಂರಕ್ಷಣೆಯನ್ನು ಒದಗಿಸುವಂತಾಹುದಾಗಿದೆ. ಅವುಗಳನ್ನು ಒಂದೊಂದಾಗಿ ಈ ರೀತಿ ಅಧ್ಯಯನ ಮಾಡಬಹುದು.

1. ನೈಸರ್ಗಿಕ ಆಪತ್ತು:

ಹಸ್ತಪ್ರತಿಗಳನ್ನು ಮಾನವ ನಿರ್ಮಿತ ಆಪತ್ತುಗಳಿಂದ ಭಿನ್ನವಾಗಿರುವ ನೈಸರ್ಗಿಕ ವಿಪತ್ತುಗಳಿಂದ ಬೆಂಕಿ, ಗಾಳಿ, ಮಳೆ, ಭೂಕಂಪ ಮತ್ತು ಕ್ರಿಮಿಕೀಟಗಳಲ್ಲದೆ ಹೆಗ್ಗಣ ಇಲಿಗಳಿಂದಲೂ, ಮನೆಯ ಗುಬ್ಬಿ ಗಳಿಂದಲೂ ಹಸ್ತಪ್ರತಿಗಳಿಗೆ ಗ್ರಂಥಗಳಿಗೆ ವ್ಯಾಪಕವಾಗಿರುವ ರಕ್ಷಣೆಯ ಕಾರ್ಯವನ್ನು ಒದಗಿಸಬೇಕಾಗಿದೆ.ಈ ಕುರಿತು ಶ್ರೀ ಬಿ.ಎಸ್.ಸಣ್ಣಯ್ಯನವರು ಕ್ರಿಮಿ ಕೀಟಗಳಿಂದ ಹಸ್ತಪ್ರತಿಗಳನ್ನು ಹೇಗೆ ರಕ್ಷಿಸಬೇಕು ಎಂಬುದನ್ನು ಈ ರೀತಿಯಲ್ಲಿ ವಿವರಿಸುತ್ತಾರೆ...''ರಾಸಾಯನಿಕ ವಸ್ತುಗಳ ಹಬೆ ಅಥವಾ ಧೂಪದಿಂದ ಹಸ್ತಪ್ರತಿಗಳಿಗೆ ಬಂದ ಕ್ರಿಮಿ ಕೀಟಗಳು, ಬೂಷ್ಟು ಮೊದಲಾದವನ್ನು ನಾಶಪಡಿಸಬಹುದು. ಹೊರಗಣಿಂದ ಬಂದ ಹಸ್ತಪ್ರತಿಗಳನ್ನು ಪ್ರಧೂಮನ ಉಪಚಾರಕ್ಕೆ (Fumigation Treatment) ಒಳಪಡಿಸಿದಾಗ ಅವುಗಳಲ್ಲಿರಬಹುದಾದ ಹುಳುಗಳೂ,ಅವುಗಳ ಮೊಟ್ಟೆಗಳು ಸಹ ನಾಶವಾಗಿ ಕ್ರಿಮಿಕೀಟಗಳು ಕೋಶಾಗಾರವನ್ನು ಸೇರಲು ಸಾಧ್ಯಾವಾಗುವುದಿಲ್ಲ. ಒಟ್ಟು ಕೋಶಾಗಾರವನ್ನೇ ಈ ಒತ್ತಡಕ್ಕೆ ಒಳಪಡಿಸಿ ಕೆಲವು ದಿನಗಳವರೆಗೆ ತೆರೆಯದಿರುವುದು ಸೂಕ್ತ. ಇದಕ್ಕೆ ಹೈಡ್ರೋಜನ್ ಸೈನೆಡ್, ಕಾರ್ಬನ್ ಡೈಸಲ್ಫೈಡ್ ಅಥವಾ ಮಥಿರ್ ಭ್ರೂಮೈಡ್ ಉಪಯೋಗಿಸಬಹುದು. ಕೆಲವು ಹಸ್ತಪ್ರತಿಗಳು ಮಾತ್ರ ಕೀಟಗಳ ಬಾಧೆಗೆ ತುತ್ತಾದಾಗ ಅವುಗಳನ್ನು ಬೇರೆ ತೆಗೆದು ವಾಯುರೇಚನ ಹಬೆಯ ಒತ್ತಡದಲ್ಲಿಟ್ಟು ಕೀಟಗಳನ್ನು ನಾಶಪಡಿಸಬಹುದು''.[೧೨]

ವಾಯುಶೂನ್ಯವಾದ ಕೊಠಡಿಯಲ್ಲಿ ಅಥವಾ ಕಪಾಟಿನಲ್ಲಿ ಹಸ್ತಪ್ರತಿಗಳನ್ನಿಟ್ಟು ಕ್ರಿಮಿನಾಶಕ ರಾಸಾಯಿನಿಕ ವಸ್ತುಗಳ ಹಬೆಯ ಒತ್ತಡಕ್ಕೊಳಪಡಿಸಬಹುದು. ಇದಕ್ಕೆ ಫ್ಯಾರ ಡೈಕ್ಲೋರೋಬೆಂಜಿನ್ ಗಟ್ಟಿಗಳನ್ನು ಅಥವಾ ಟರಕ್ಲೋರೈಡ್ ಮತ್ತು ಎಥೀಲಿನ್ ಡೈಕ್ಲೋರೈಡ್ ಮಿಶ್ರಿತ ಕಿಲ್ಲೋಫ್ಟೈರ್ ದ್ರಾವಣವನ್ನು ಉಪಯೋಗಿಬಹುದು, ಕಿರೊಲ್ಫೈರ್ ಗಾಳಿಗಿಂತ ತೂಕವಾಗಿರುವುದರಿಂದ ಅದನ್ನು ಕಪಾಟಿನ ಮೇಲ್ಭಾಗದ ಅರೆಯಲ್ಲಿ ಅಥವಾ ಪುಸ್ತಕದ ಸಾಲಿನಲ್ಲಿ ಇಡಬೇಕಾಗುತ್ತದೆ.

---

೧೧. ಮತ್ತು ೧೨. ಬಿ.ಎಸ್. ಸಣ್ಣಯ್ಯ : ಹಸ್ತಪ್ರತಿ ಶಾಸ್ತ್ರಪರಿಚಯ, ಪುಟ -೫೮. ೫೯. ೬೦.

ಉಳಿದವನ್ನು ಕಪಾಟಿನ ಕೆಳಗಿನ ಹಂತದಲ್ಲಿಡ ಬೇಕಾಗುತ್ತದೆ. ಹೀಗೆ ಇಡುವಾಗ ಕಪಾಟಿಗೆ ಅಳವಡಿಸಿದ ಉಕ್ಕಿನ ಬಟ್ಟಲಿನಲ್ಲಿ ರಾಸಾಯಿನಿಕ ವಸ್ತುವನ್ನು ಹಾಕಿ ಅದು ವಿದ್ಯುಚ್ಛಕ್ತಿ ದೀಪದಿಂದ ಕಾಯುವಂತಿರಬೇಕು, ನವದೆಹಲಿಯಲ್ಲಿರುವ ಭಾರತ ರಾಷ್ಟ್ರೀಯ ಪತ್ರಾಗಾರ ಥೈಮಾರ್ ಪ್ರಧೂಮನವನ್ನೇ ಹೆಚ್ಚಾಗಿ ಬಳಸುತ್ತದೆ.[೧೩]

ನ್ಯಾಪ್ತಲೀನ್ ಬಿಲ್ಲೆಗಳನ್ನು ಕೋಶಾಗಾರದ ಕಪಾಟುಗಳಲ್ಲಿ ಅಲ್ಲಲ್ಲಿಯೇ ಇಡುವುದರಿಂದಲೂ ಕೆಲಮಟ್ಟಿನ ರಕ್ಷಣೆ ದೊರೆಯುತ್ತದೆ. ಇದಲ್ಲದೇ ಪೈರಾತ್ರಮ್ ಪುಡಿಯನ್ನು ಉಪಯೋಗಿಸಬಹುದು. ಇದು ಮನುಷ್ಯರಿಗೆ ಅಪಾಯಕಾರಿಯಾದುದರಿಂದ ಬಹಳ ಜಾಗರೂಕತೆ ಯಿಂದ ಉಪಯೋಗಿಸಬೇಕು. ಸೋಡಿಯಂ ಫ್ಲೋರೈಡ್‌ನ್ನು ಗೋಧಿಯ ಹಿಟ್ಟಿನೊಡನೆ 12 :100 ಪ್ರಮಾಣದಲ್ಲಿ ಬೆರಸಿ ಕಪಾಟುಗಳಲ್ಲಿ ಅಥವಾ ಕತ್ತಲೆ ಮೂಲೆಗಳಲ್ಲಿಟ್ಟರೆ ಜಿರಲೆಗಳನ್ನು ನಾಶ ಮಾಡಬಹುದು. ಹೀಗೆ ಕ್ರಿಮಿ ಕೀಟಗಳನ್ನು ತಡೆಗಟ್ಟಲು ಭಾರತದಲ್ಲಿ ಹಲವಾರು ಪ್ರಯತ್ನಗಳು ನಡೆದಿವೆ. ಕೆಲವಡೆ ಪಂಡ್ರಿ ಎಂಬ ಒಂದು ವಿಧವಾದ ಹುಲ್ಲು ಮತ್ತು ಘೋರಬಾಚ್ (Ghora Bach:Achorus Calamus)ಇವುಗಳ ಪುಡಿಯನ್ನು ಹಸ್ತಪ್ರತಿಗಳೊಡನೆ ಇಟ್ಟಿದ್ದುದ್ದು ಕಂಡು ಬರುತ್ತದೆ. ಈ ಪುಡಿಯಲ್ಲಿರುವ ಎಣ್ಣೆಯು ಕ್ರಿಮಿಕೀಟಗಳನ್ನು ದೂರವಿಡಲು ಸಹಾಯಕ ವಾಗುವುದೆಂದು ತೋರುತ್ತದೆ. [೧೪]

2. ಅ. ಕೀಟನಾಶಕಗಳು :

ದೇವದಾರು ಎಣ್ಣೆಯೇ ಗ್ರಂಥಗಳಿಗೆ ಮೊದಲು ಉಪಯೋಗಿಸಿದ ಕೀಟನಾಶಕ ಎಣ್ಣೆಯಾಗಿದೆ. ಅನಂತರ ವಾರ್ಕ್ಯುರಿಕ್ ಕ್ಲೋರೈಡ್, ಡೈಲ್ಡ್ರಿನ್ ಮತ್ತು ಯುರಿಯ ಫಾರ್ಮಲ್‌ಡಿ ಹೈಡ್ ಮೊದಲಾದ ಎಣ್ಣೆಗಳು ಬಳಕೆಗೆ ಬಂದವು. ಪ್ರಪಂಚದ ಎಲ್ಲ ಕಡೆಯೂ ಜಿರಲೆಗಳ ಕಾಟವನ್ನು ಡೈಲ್ಡ್ರಿನಿಂದ ತಡೆಗಟ್ಟಬಹುದು. ಕೆಲವು ಕೀಟಗಳಿಗೆ ಡೈಲ್ಡ್ರಿನ್‌ಗೆ ಬದಲಾಗಿ ಡಿ.ಡಿ.ಟಿ. ಬೆಂಜನ್ ಹೈಕ್ಸಾಕ್ಲೋರೈಡ್, ಆಲ್ಡ್ರಿನ್ ಮತ್ತು ಇತ್ತೀಚಿನವುಗಳಾದ ಎಂಡ್ರಿನ್, ಐಸೊಡ್ರಿನ್ ಮೊದಲಾದ ಕ್ರಿಮಿನಾಶಕಗಳನ್ನು ಉಪಯೋಗಿಸುವುದು ಅವಶ್ಯಕ ಹೀಗೆ ಅವುಗಳನ್ನು ಉಪಯೋಗಿಸುವಾಗ ಕೀಟಗಳು ಬರಬಹುದಾದ ಕಡೆಗಳಲ್ಲಿ ಮತ್ತು ಅವು ಅಡಗಿ ಕೊಳ್ಳಬಹುದಾದ ಸ್ಥಳಗಳಲ್ಲಿ ಎಂದರೆ ನೆಲ ಮತ್ತು ಗೋಡೆಯ ಬಿರುಕುಗಳು, ಸಂದಗೋಂದಿಗಳು, ಕಪಾಟುಗಳ ಕೆಳಭಾಗ, ಕಿಟಕಿಯ ಅಂಚು-ಪಟ್ಟಿಗಳು, ಮೊದಲಾದೆಡೆಗಳಲ್ಲಿ ಕುಂಚದಿಂದ ಸವರಬೇಕು, ಇಲ್ಲದ ಪಿಚಕಾರಿಗಳಿಂದ ಸಿಂಪಡಿಸಬೇಕು. ಹೀಗೆ ಮಾಡುವುದರಿಂದ ಜಿರಲೆ, ಬೆಳ್ಳಿ ಮೀನು, ಗ್ರಂಥ ಹುಳುಗಳು ಮೊದಲಾದವುಗಳನ್ನು ತಡೆಗಟ್ಟಬಹುದು.[೧೫] ಹಸ್ತಪ್ರತಿಗಳ ಸಂಗ್ರಹ, ಸಂರಕ್ಷಣೆ ಕುರಿತು ವಿಘ್ನರಾಜ ಎಸ್.ಆರ್ ಅವರು ಈ ರೀತಿಯ ವಿಧಾನವನ್ನು ಅನುಸರಿಸುತ್ತಾರೆ.... '' ಭಾರತದ ಪ್ರಥಮ ಸರ್ವೇಯರ್ ಜನರಲ್ ಆಗಿ

---

೧೩. ೧೪ ಮತ್ತು ೧೫ : ಬಿ.ಎಸ್. ಸಣ್ಣಯ್ಯ : ಹಸ್ತಪ್ರತಿ ಶಾಸ್ತ್ರಪರಿಚಯ , ಪುಟ -೬೨.

1812 ರಲ್ಲಿ ಬಂದ ಕರ್ನಲ್ ಮೆಕುಂಜಿಯೇ ಕನ್ನಡ ಹಸ್ತಪ್ರತಿಗಳ ಸಂಗ್ರಹಿಸಿದವರಲ್ಲಿ ಮೊದಲಿ, 1858 ರಲ್ಲಿ ಮದ್ರಾಸಿನಲ್ಲಿ ಸ್ಥಾಪಿತವಾದ ಸರ್ಕಾರಿ ಹಸ್ತಪ್ರತಿ ಭಂಡಾರಕ್ಕೆ ಸೇರ್ಪಡೆಯಾದ ಮೆಕೆಂಜಿ ಸಂಗ್ರಹವೇ ಪ್ರಥಮ ಸಾರ್ವಜನಿಕ ಕನ್ನಡ ಹಸ್ತಪ್ರತಿ ಭಂಡಾರ ಎಂದು ಶ್ರೀ ಎಚ್.ದೇವಿರಪ್ಪ ಅವರು ತಿಳಿಸಿದಾಗ ಇಂತಹ ಗ್ರಂಥ ಭಂಡಾರಗಳಲ್ಲಿ ರಕ್ಷಣೆಯ ವಿಚಾರವನ್ನು ಹೀಗೆ ಹೇಳುತ್ತಾರೆ.''

ಗ್ರಂಥ ಸಂರಕ್ಷಣೆಯ ವಿಚಾರದಲ್ಲಿ ನಾವು ಆದಮ್ಯ ಸುಲಭವಿದಾನಗಳನ್ನು ಅನುಸರಿವಿಕೆಯು ಯೋಗ್ಯ, ಹಸ್ತಪ್ರತಿ ಭಂಡಾರ ಕತ್ತಲಿನಿಂದ ಹೊರತಾಗಿರಲಿ, ಆದಕ್ಕೆ ಬೇಕಾದಷ್ಟು ಮಾತ್ರ ಬೆಳಕನ್ನು ಹೊಂದಿದ್ದು. ಸೂರ್ಯರಶ್ಮಿ ನೇರವಾಗಿ ಬೀಳ'ದಂತೆ ವ್ಯವಸ್ಥೆ ಇರಲಿ. ಕೃತಕ ಬೆಳಕು ತುಂಬಾ ಉಪಯೋಗ, ಆದರೆ ಶಾಖವನ್ನುಂಟು ಮಾಡಬಾರದು. ಗಾಳಿಯ ಸರಾಗವಾಗಿ ಚಲಿಸುವಂತೆ ಸ್ವಲ್ಪ ದೂರವಾಗಿ ಜೋಡಿಸುವ ವ್ಯೆವೆಸ್ಥೆ ಇರಲಿ, ಹಸ್ತಪ್ರತಿಗಳನ್ನು ಕೀಟಗಳು ಹಾಗೂ ಬೂಷ್ಟುಬಾರದಂತೆ ಆಗಾಗ ಪರಿಶೀಲಿಸುತ್ತಿರಬೇಕು. ಕೀಟಗಳಾದ ಸಿಲ್ವರ್ ಪಿಶ್, ಗ್ರಂಥಹುಳು, ಜಿರಲೆಗಳು ಬಾರದಂತೆ ರಾಸಾಯಿನಿಕ ವಸ್ತುಗಳನ್ನು ಉಪಯೋಗಿಸಿ ಹತೋಟಿಯಲ್ಲಿರಿಸ ಬೇಕು. ನೆಪ್ತಲಿನ್ ಗುಳಿಗೆ ಕಾಗದದ ಹಸ್ತಪ್ರತಿಗಳಿಗೆ ಸಿಲ್ವರ್‌ಫಿಶ್ ಬಾರದಂತೆ ಕೆಲಸಮಾಡುತ್ತದೆ. ''ಸಂಸ್ಕೃತ ಸಂಶೋಧನ ಸಂಸತ್'' ಮೇಲುಕೋಟೆ ಇಲ್ಲಿ ತಾಡೋಲೆಗಳಿಗೆ ಸಿಂಟ್ರನಲ್ ಎಂಬ ವೈಜ್ಞಾನಿಕ ರೀತ್ಯಾ ತಯಾರಾಗಿರುವ ಎಣ್ಣೆಯನ್ನು ಸವರುತ್ತಾರೆ. ಈ ಎಣ್ಣೆ ಅತ್ಯಂತ ಪರಿಮಳವಾಗಿದ್ದು, ಅದರ ಲೇಪನದಿಂದ ಗ್ರಂಥಗಳು ಶುದ್ಧವಾಗಿಸಿ, ಅಕ್ಷರಗಳನ್ನು ಸ್ಪಷ್ಟವಾಗಿ ಕಾಣುವಲ್ಲಿ ನೆರವಾಗುತ್ತವೆ.[೧೬]

ಹಸ್ತಪ್ರತಿ ಭಂಡಾರಗಳಲ್ಲಿ ಹಸ್ತಪ್ರತಿಗಳಿಗೆ ಸೋಂಕಿದ ಕೀಟಗಳು ಬೂಸ್ಟ್ ಮೊದಲಾದವುಗಳನ್ನು ನಾಶಪಡಿಸಲು ಥೈಮಾಲ್ ಅನಿಲ ಅಥವಾ ಸಿಟ್ರಿನಲ್ ಎಣ್ಣೆ ಅನಿಲ ತುಂಬಿದ ಪ್ರಧೂಮನ ಕವಾಟ ಹೆಚ್ಚು ಅನುಕೂಲ, ಮುದ್ರಿತ ಗ್ರಂಥಗಳ ರಕ್ಷಣೆಗಾಗಿ 2.5 ಗ್ರಾಂ ಬಾಲಿಸ್ಟರ್ (ಖಿಞ ಚಿಟಟು ಟ್ಬುಓಬ್ಬಿಞುಖುಜಿಟ್ಲ ಔಜಿಟ್ಟಜಿಥ) ಎಂಬ ರಾಸಾಯಿನಿಕವನ್ನು 5 ಲೀಟರ್ ಕೆರೋಸಿನ್ ಎಣ್ಣೆಯಲ್ಲಿ ಬೆರೆಸಿ ಪುಸ್ತಕಗಳ ಮೇಲೆ ಹಾಯಿಸಿ, ಕವಾಟಗಳನ್ನು ಮುಚ್ಚಿ 24 ಗಂಟೆಗಳ ಕಾಲ ಇರಿಸಬೇಕು. ಇದು ಹೆಚ್ಚು ಪರಿಣಾಮಕಾರಿ. ಈ ವಿದಾನವನ್ನು ಪ್ರಾಚ್ಯ ಸಂಶೋಧನ ಸಂಸ್ಥೆ ಮತ್ತು ಧರ್ಮಸ್ಥಳಗಳಲ್ಲಿ ಅನುಸರಿಲಾಗುವುದು .

ಈ ಅಮೂಲ್ಯವಾದ ಹಸ್ತಪ್ರತಿಗಳು, ದಾಖಲೆ ಪತ್ರಗಳನ್ನು ದುರಸ್ತಿ ಪಡಿಸುವುದರಲ್ಲಿ ಎಲ್ಲಕ್ಕಿಂತಲೂ ಹೆಚ್ಚು ಯಶಸನ್ನು ಪಡೆದಿರುವುದೆಂದರೇ ಲ್ಯಾಮಿನೇಶನ್ ಹಾಗೂ ಭಾರತದ ರಾಷ್ಟ್ರೀಯ ಪತ್ರಾಗಾರದ ಸಂಶೋಧನ ಪ್ರಯೋಗಾಲಯದಲ್ಲಿ ಓ.ಪಿ.ಗೋಯಲ್ ಅವರು 1952 ರಲ್ಲಿ ''ಹ್ಯಾಂಡ್ ಲ್ಯಾಮಿನೇಶನ್ ಕ್ರಮವನ್ನು ರೂಡಿಗೆ ತಂದರು. ಈ ಲ್ಯಾಮಿನೇಶನ್ ದುರಸ್ತಿಯು ಬರವಣಿಗೆಗೆ ಮತ್ತು ಚಿತ್ರದ ಹಾಳೆಗಳಿಗೂ ತುಂಬಾ ಉಪಯುಕ್ತ.''[೧೭]

---

೧೬. ಡಾ. ವಿರೇಶ ಬಡಿಗೇರ, ಚನ್ನವೀರಪ್ಪ ಸಂ : ಹಸ್ತಪ್ರತಿ ವ್ಯಾಸಂಗ -೨. ವಿಘ್ನರಾಜ ಎಸ್. ಆರ್. ಪುಟ -೨೦. ೨೧.
೧೭. ಡಾ. ವಿರೇಶ ಬಡಿಗೇರ, ಚನ್ನವೀರಪ್ಪ ಸಂ : ಹಸ್ತಪ್ರತಿ ವ್ಯಾಸಂಗ -೨. ವಿಘ್ನರಾಜ ಎಸ್. ಆರ್. ಪುಟ -೨೦. ೨೧.

ತಾಳೆಗರಿಯ ಸಂರಕ್ಷಣೆ ಕುರಿತು ಜಿ.ಅಶ್ವಥ ನಾರಾಯಣರು ಈ ರೀತಿ ಹೇಳುತ್ತಾರೆ. ಗ್ರಂಥ ಸಂಪಾದನೆಯ ಅಡಿಪಾಯದ ಕೆಲಸ ಎಂದರೆ ತಾಳೆಗರಿ ಗ್ರಂಥಗಳ ಸಂಗ್ರಹ ಈ ಸಂಗ್ರಹ ಕಾರ್ಯವು ಇಂದು ಜಾನಪದ ಸಾಹಿತ್ಯ ಮತ್ತು ಜಾನಪದ ವಸ್ತುಗಳ ಸಂಗ್ರಹದಷ್ಟು ಮಹತ್ವದ ಮತ್ತು ಪುಣ್ಯದ ಹಾಗೂ ಅಗತ್ಯ ಕಾರ್ಯವಾಗಿದೆ. ಒಂದು ತಾಳೆ ಗರಿಯ ಗ್ರಂಥನಾಶವಾದರೆ ಒಬ್ಬ ಲೇಖಕ ಸಾರಸ್ವತ ಲೋಕಕ್ಕೆ ಇಲ್ಲವಾದಂತೆ ; ನಮ್ಮ ಹೃದಯ ದೇಗುಲವನ್ನು ಬೆಳಗುವ ಬೆಳಕಿನ ಕುಡಿಗಳಲ್ಲಿ ನಂದಿಹೋದಂತೆ. ಹಿಟ್ಟಿನ ಗಿರಣಿಗಳು ಬಂದಂತೆಲ್ಲಾ ನಗರದ ರಾಗಿಕಲ್ಲಿನ ಹಾಡುಗಳು ಮಾಯವಾಗುತ್ತಿರುವಂತೆ, ಅಚ್ಚಿನ ಪುಸ್ತಕಗಳೂ ಬಂದಂತೆಲ್ಲಾ- ನಗರದ ಗಾಳಿ ಬೀಸಿದಂತೆಲ್ಲಾ - ತಾಳೆಗರಿ ಗ್ರಂಥಗಳು ಒಲೆಗಳ ಪಾಲಾಗುತ್ತಲಿವೆ ; ಗೆದ್ದಲಿಗೆ ಆಹಾರ ವಾಗುತ್ತಿವೆ ; ಕಸದ ತೊಟ್ಟಿ ಸೇರುತ್ತಿವೆ. ದೇವರ ಮನೆಗಳ ಮುಖಾಂತರ ಯಮಲೋಕ ಸೇರುತ್ತಿವೆ. ಇದ್ದ ಕಡೆಯೇ ನಾನಾ ರಿತಿಗಳಲ್ಲಿ ದುರಂತಾವಸ್ಥೆಗೆ ಒಳಗಾಗುತ್ತಿವೆ. ತಾಳೆಗರಿ ಗ್ರಂಥ ಸಂಗ್ರಹಗಳಿದ್ದ ಪಂಡಿತರ ಮನೆಗಳಲ್ಲಿ ನವೀನ ಕ್ರಾಪುಯುಗದ ಯುವಕರ ಕೈಯಲ್ಲಿ ಅವುದಿಕ್ಕಾಪಾಲಾಗುತ್ತಿವೆ. ಅರಣ್ಯನಾಶ ಆಗುತ್ತಿದೆ. ಅದನ್ನು ತಡೆಗಟ್ಟಬೇಕು- ಎನ್ನುವ ಸರ್ಕಾರ ಇಂದು ನಶಿಸುತ್ತಿರುವ ಜ್ಞಾನಾರಣ್ಯಗಳಾದ ತಾಳೆಗಳು ಸಂಗ್ರಹಗಳನ್ನು ಉಳಿಸಬೇಕಾಗುತ್ತದೆ ; ಜ್ಞಾನದ ಸವೆತವನ್ನು ತಡೆಗಟ್ಟ ಬೇಕಾಗಿದೆ. ಈ ಕೆಲಸಕ್ಕೆ ಸರ್ಕಾರ ಈ ಕಾರ್ಯದಲ್ಲಿ ನಿರತರಾದ ವ್ಯಕ್ತಿಗಳಿಗೆ ಸಂಸ್ಥೆಗಳಿಗೆ ಉದಾರ ಪ್ರೋತ್ಸಾಹ ನೀಡಿ ಅಧಿಕಾಸಕ್ತಿ ವಹಿಸಬೇಕಾಗಿದೆ.[೧೮]

ಆ. ಕೀಟ ನಿಯಂತ್ರಣ :

ಹಸ್ತಪ್ರತಿಗಳ ಸಂರಕ್ಷಣೆ, ಸಂಗೋಪನದಲ್ಲಾಗುವ ಕೊರತೆ,ಅಶಿಸ್ತಿನ ಕಾರಣವೆ ಹಸ್ತಾಪ್ರತಿಗಳಲ್ಲಿ ಕೀಟಗಳ ಪ್ರವೇಶ, ಅವುಗಳ ಅಭಿವೃದ್ಧಿಗೆ ಕಾರಣಗಳು ಕೀಟಗಳ ನಿಯಂತ್ರಣವೆಂದರೆ ಗ್ರಂಥಪಾಲಕರಿಗೆ ಮಾತ್ರ ಸಂಬಂದಿತ ಕಾರ್ಯವೆಂದು ಅರ್ಥಮಾಡಿಕೊಳ್ಳಬಾರದು. ಭಾಷಾ ಪಂಡಿತರು, ವಿದ್ವಾಂಸರು ಬಳಸದೆ ಇರುವುದು, ಗ್ರಂಥಗಳ ವಿಷಯಗಳ ಮೇಲೆ ಸದಾ ಕೈ ಆಡಿಸದೆ ಇರುವುದು ಕೂಡಾ ಕೀಟಾಭಿವೃದ್ಧಿಗೆ ಕಾರಣ. ಯಾವ ಗ್ರಂಥಗಳಲ್ಲಿ ಕೀಟಗೂಡು ಕಟ್ಟಿದೆ ಎಂದರೆ ಆ ವಿಭಾಗದವರ ಅಧ್ಯಯನ ತುಂಬ ತಳಹಂತದಲ್ಲಿದೆ ಎಂಬುದು ಅರ್ಥ. ಈ ಕೀಟನಿವಾರಣೆಯಲ್ಲಿ ಹವಾಮಾನ ವೈಪರಿತ್ಯವೂ ಒಂದು ಕಾರಣ ಎಂದು ಈ ಕುರಿತು ಶ್ರೀ ಸಣ್ಣಯ್ಯನವರು ಈ ರೀತಿ ವಿವರಿಸುತ್ತಾರೆ.

ಕೀಟಗಳನ್ನು ತಡೆಗಟ್ಟುವುದರಲ್ಲಿ, ಹವಾಮಾನ ವೈಪರಿತ್ಯಗಳಿಂದ ಹಸ್ತಪ್ರತಿಗಳ ಸಂರಕ್ಷಣೆಯಲ್ಲಿ ಅತ್ಯಂತ ಪರಿಣಾಮಕಾರಿಯಾದ ಕ್ರಮವೆಂದರೇ ಹವಾನಿಯಂತ್ರಣ. ಈ ಕ್ರಮವು ಒಂದು ಕಾಲಕ್ಕೆ ಭೋಗವೆಂದು ಪರಿಗಣಿತವಾಗಿದ್ದಿತು ; ಆದರೆ ಗ್ರಂಥ ಮೌಲ್ಯದೊಡನೆ ಇದರ ವೆಚ್ಚವನ್ನು ಹೋಲಿಸಿ ನೋಡಿದಾಗ ಇದು ಅತ್ಯಂತ ಅವಶ್ಯಕ ಕ್ರಮವೆಂದು ಹೇಳಬಹುದು. ಹವಾ

---

೧೮. ಡಾ. ಸಿದ್ಧಯ್ಯ ಪುರಾಣಿಕ ಸಂ.: ಮಣಿಹ : ಅಶ್ವತ್ಥ ನಾರಾಯಣ, ಪುಟ -೮೭.

ನಿಯಂತ್ರಣ ಸಾಧ್ಯವಿಲ್ಲದಾಗ ನೀರನ್ನಾಗಲಿ, ಕ್ಯಾಲ್ಸಿಯಂ ಕ್ಲೋರೈಡ್‌ನ್ನಾಗಲಿ ಋತುಮಾನಕ್ಕೆ ತಕ್ಕಂತೆ ಉಪಯೋಗಿಸಿ ಹವಾನಿಯಂತ್ರಣವನ್ನು ಸ್ವಲ್ಪ ಮಟ್ಟಿಗೆ ಸಾಧಿಸಬಹುದಾದರೂ, ಇದರಿಂದ ಗಾಳಿಯ ಶುದ್ಧತೆಯನ್ನು ಕಾಪಾಡಲು ಸಾಧ್ಯವಾಗುವುದಿಲ್ಲ. ಇವೇ ಅಲ್ಲದೇ ಮತ್ತೂ ಸುಲಭವಾಗಿ ಮಾಡಬಹುದಾದ ಕೆಲಸವೆಂದರೆ ಹಸ್ತಪ್ರತಿಗಳಿಗೆ ಧೂಳು ಸೇರದಂತೆ ನೋಡಿಕೊಳ್ಳುವುದು. ತಿಂಗಳಿಗೊಮ್ಮೆಯಾದರೂ ಇವುಗಳನ್ನು ಶುದ್ದೀಕರಿಸಿದರೆ ಇದರಿಂದ ಬಹುಮಟ್ಟಿನ ರಕ್ಷಣೆ ಸಾಧ್ಯವಾಗುತ್ತದೆ. ಜೊತೆಗೆ ಸೊಂಡೆ ಇಲಿ ಹೆಗ್ಗಣಗಳು, ಕೋಶಾಗಾರವನ್ನು ಸೇರದಂತೆ ನೋಡಿಕೊಳ್ಳುವುದು ಅತ್ಯಂತ ಅವಶ್ಯಕವಾಗಿದೆ.[೧೯]

3. ಆಧುನಿಕ ಕ್ರಮ ಅಳವಡಿಕೆ :

ಹಸ್ತಪ್ರತಿ ವಿಜ್ಞಾನವು ವಿಜ್ಞಾನದ ಹಲವಾರು ಸಾಧನ ಸಂಪತ್ತುಗಳನ್ನು ಇಲ್ಲಿ ಬಳಸಿಕೊಳ್ಳಬಹುದಾಗಿದೆ. ತುಂಬ ಶಿಥಿಲವಾಗಿರುವ ಹಸ್ತಪ್ರತಿಯ ಸಂರಕ್ಷಣೆಗಾಗಿ ಹಸ್ತಪ್ರತಿಯನ್ನು ಪೋಟೋ ತೆಗೆಯುವ, ಜೆರಾಕ್ಸ್ ತೆಗೆಯುವ, ಮೈಕ್ರೋಫಿಲಂ ಮಾಡುವ ವಿದಾನಗಳಿವೆ, ಹಸ್ತಪ್ರತಿಗಳಿಗೆ ಪದೆ ಪದೇ ಧೂಳು ತೆಗೆದು ಸ್ವಚ್ಛಗೊಳಿಸಿ ಸಿಟ್ರೋನಲ್ಲ ರಾಸಾಯಿನಿಕ ಅಥವಾ ಮೇಲುಕೋಟೆಯಲ್ಲಿ ಸಿಗುವ ದೇಶಿಯ ತೈಲ ಅಥವಾ ಇತರೆ ಯಾವುದೇ ಸೂಕ್ತ ರಾಸಾಯಿನಿಕ ತೈಲವನ್ನು ಲೇಪಿಸಿ ನೆರಳಿನಲ್ಲಿ, ಗಾಳಿಯಲ್ಲಿ ಒಣಗಿಸಿ ಇಡಬಹುದು. ಕೀಟ ರಕ್ಷಣೆಗಾಗಿ ಪ್ರಧೂಮನ ಕಪಾಟನ್ನು (Fumigation Chamber) ಬಳಸಬಹುದು. ವಿಶಾಲವಾದ ಕೊಠಡಿಯಲ್ಲಿ ಗಾಳಿಬೆಳಕು ಒಂದೇ ಸವನೆ ಇರುವಂತೆ ಕಪಾಟುಗಳಿಗೂ ಪ್ರವೇಶಿಸುವಂತೆ ಮಾಡಿರಬೇಕು. ಸದಾ ಒಂದೇ ರೀತಿಯ ಉಷ್ಣಾಂಶವಿರುವಂತೆ ಹವಾ ನಿಯಂತ್ರಿತ ಕೊಠಡಿಗಳನ್ನು ಬಳಸಬಹುದು. ಜಿರಲೆ, ಬೆಳ್ಳಿಮೀನು, ಪುಸ್ತಕ ಕ್ರಿಮಿ, ಬೂಷ್ಟ ಗೆದ್ದಲು ಬಾರದಂತೆ ಕೀಟನಾಶಕಗಳನ್ನು ಬಳಸಬೇಕು. ಹಸ್ತಪ್ರತಿಗಳ ಸಂರಕ್ಷಕ ''ಮೂರ್ಖಹಸ್ತನಾಗಿರಬಾರದು. ಈ ಕ್ಷೇತ್ರದ ಬಗ್ಗೆ, ಕೆಲಸ ಬಗ್ಗೆ ಆಸಕ್ತಿ , ಶ್ರದ್ದೆ ಇರುವಂಥವನಾಗಿಬೇಕು, ಜೀರ್ಣವಾದ ಗರಿಗಳನ್ನು ಸೂಕ್ತ ಅಂಟು ಟೇಪುಗಳ ಸಹಾಯದಿಂದ ಅಂಟಿಸಿ ಯಥಾಸ್ಥಿತಿಗೆ ತರಬೇಕು, ಎಷ್ಟು ಎಚ್ಚರ ವಹಿಸಿದರೂ ಸಾಲದೆನಿಸುವ ಮಟ್ಟಿಗೆ ತುಂಬ ಜತನದಿಂದ ಇವುಗಳನ್ನು ಕಾಪಾಡಬೇಕು.''[೨೦]

4. ತೈಲಲೇಪನ :

ತಾಳೇಗರಿಯ ಹಸ್ತಪ್ರತಿಗಳಿಗೆ ತೈಲ ಲೇಪನವೆಂದರೆ ಅದೊಂದು ತರಹದಲ್ಲಿ ಮಾನವ ದೇಹಕ್ಕೆ ಎಣ್ಣೆಯ ಲೇಪನಮಾಡಿ ಮಸಾಜು ಮಾಡಿದಂತೆ ಅಥವಾ ತ್ರಾಣಿಕ (Tonic)ವನ್ನು ದುರ್ಬಲ ದೇಹದ ವ್ಯಕ್ತಿಗೆ ನೀಡಿದಂತೆ, ತಾಳೆಯ ಹಸ್ತಪ್ರತಿಗಳಿಗೆ ಸಂಪ್ರದಾಯಕವಾಗಿ ಒಂದೊಂದು ವಿಧದಲ್ಲಿ ಒಂದೊಂದು ಪ್ರದೇಶದಲ್ಲಿ ಬಳಸುತ್ತಾರೆ. ಮೇಲುಕೋಟೆಯಲ್ಲಿ ಒಂದು ವಿಧವಾದ ತೈಲ

---

೧೯. ಬಿ.ಎಸ್. ಸಣ್ಣಯ್ಯ : ಹಸಪ್ರತಿ ಶಾಸ್ತ್ರಪರಿಚಯ, ಪುಟ -೬೧.
೨೦. ಡಾ. ನಾ. ಗೀತಾಚಾರ್ಯ : ಹಸ್ತಪ್ರತಿ ಶಾಸ್ತ್ರವಿವೇಚನೆ , ಪುಟ -೨೨.

ಬಳಸಿದರೆ ಶ್ರೀಕ್ಷೇತ್ರಧರ್ಮಸ್ಥಳದಲ್ಲಿ ಮತ್ತೊಂದು ವಿಧದಲ್ಲಿ ಬಳಸುತ್ತಾರೆ. ಭಾರತದ ಆಯುರ್ವೇದ ಮತ್ತು ಗ್ರಾಮೀಣ ಪ್ರದೇಶದ ನಾಟಿವಿದ್ಯೆಗಳನ್ನು, ವಿಧಾನಗಳನ್ನು ಮತ್ತೊಬ್ಬರಿಗೆ ಗುಟ್ಟು ಬಿಟ್ಟು ಕೊಡಲಾರದೆ ಸಾಮಾನ್ಯವಾಗಿ ಸಾಯುವ ಆರ್ಯುವೇದ, ನಾಟಿವೈದ್ಯ ಮತ್ತು ಅಳಲೆಕಾಯಿ ಪಂಡಿತರಂತೆ ಹಸ್ತಪ್ರತಿಯ ತೈಲಲೇಪನವು ಪ್ರಾದೇಶಿಕವಾದರೂ ಶ್ರೀ ವಿಘ್ನರಾಜ ಎಸ್.ಆರ್ ಅವರು ತೈಲಲೇಪನ ಕುರಿತು ವಿಪುಲವಾದಂತಹ ಮಾಹಿತಿಯನ್ನು ಈ ರೀತಿಯಾಗಿ ಕೊಡುತ್ತಾರೆ.

"ಸಂಸ್ಕೃತ ಸಂಶೋಧನ ಸಂಸತ್" ಮೇಲುಕೋಟೆ. ಇಲ್ಲಿ ತಾಡೋಲೆಗಳಿಗೆ "ಸಿಂಟ್ರನಲ್" ಎಂಬ ವೈಜ್ಞಾನಿಕ ರೀತ್ಯಾ ತಯಾರಾಗಿರುವ ಎಣ್ಣೆಯನ್ನು ಸವರುತ್ತಾರೆ. ಈ ಎಣ್ಣೆ ಅತ್ಯಂತ ಪರಿಮಳ ಉಳ್ಳದ್ದಾಗಿದ್ದು ಅದರ ಲೇಪನದಿಂದ ಗ್ರಂಥಗಳು ಶುದ್ಧವಾಗಿಸಿ ಅಕ್ಷರಗಳು ಸ್ಪಷ್ಟವಾಗಿ ಕಾಣುವಲ್ಲಿ ನೆರವಾಗುತ್ತವೆ. ಮೈಸೂರು ವಿಶ್ವವಿದ್ಯಾಲಯದ ಪ್ರಾಚ್ಯಾ ವಿದ್ಯಾ ಸಂಶೋಧನಾಲಯ, ಕನ್ನಡ ಅಧ್ಯಯನ ಸಂಸ್ಥೆ ಮೈಸೂರು, ಶ್ರೀ ಮಂಜುನಾಥೇಶ್ವರ ಸಂಸ್ಕೃತಿ ಸಂಶೋಧನ ಪ್ರತಿಷ್ಠಾನ, ಧರ್ಮಸ್ಥಳ. ಇಲ್ಲಿ ಸ್ಥಳೀಯವಾಗಿ ತಯಾರಾಗುವ ಎಣ್ಣೆಗಿಡ ಮೂಲಿಕೆಗಳಿಂದ ತಯಾರಾಗುತ್ತವೆ. ಅಲ್ಲದೆ ಕೀಟಗಳು ಗರಿಗೆ ಸೇರದಂತೆ ರಕ್ಷಿಸುವುದರಲ್ಲಿ ಪರಿಣಾಮಕಾರಿಯಾಗಿವೆ. ಹಸ್ತಪ್ರತಿ ಭಂಡಾರಗಳಲ್ಲಿ ಹಸ್ತಪ್ರತಿಗಳಿಗೆ ಸೋಂಕಿದ ಕೀಟಗಳು, ಬೂಸ್ಟ್ ಮೊದಲಾದವುಗಳನ್ನು ನಾಶಪಡಿಸಲು ಥೈಮಾಲ್ ಅನಿಲ ಅಥವಾ ಸಿಟ್ರನಲ್ ಎಣ್ಣೆ ಅನಿಲವನ್ನು ಬಳಸುತ್ತಾರೆ.[೨೧]

ತಾಳೆಗರಿಯ ಸ್ಥಾಪಕ ಶಕ್ತಿಯನ್ನು ವರ್ಧಿಸಲು ಮತ್ತು ಕಾಲನದಾಳಿಯನ್ನು ತಡೆಯುವುದಕ್ಕಾಗಿ ತಾಳೆಗರಿಗೆ ವಿಧವಿಧವಾದ ಉಪಚಾರಗಳು ನಡೆಯುತ್ತಲೇ ಇರುತ್ತವೆ. ಇತ್ತೀಚಿನ ದಿನಗಳಲ್ಲಿ ಗಜನಿಂಬೆ ರಸ ಅಥವಾ ಜಾವಾ ಸಿಟ್ರೇನಿಲ್ಲಾ ತೈಲ (Citronella Oil)ವನ್ನು ಬಳಸುವುದರಿಂದಲೂ ಗರಿಗಳಿಗೆ ಹೊಸ ಹೊಳಪು ಮತ್ತು ಗಡಸುತನವೂ ಬರುತ್ತದೆ.[೨೨]

5. ಪುನರ್ ನಿರ್ಮಾಣ :

ಹಸ್ತಪ್ರತಿಯ ಪುನರ ನಿರ್ಮಾಣ ವೆಂದರೆ ಇತಿಹಾಸದ ನಿರ್ಮಾಣವೆಂದೆ ಹೇಳಬೇಕು. ಪ್ರಾಚೀನ ಕಾಲದಲ್ಲಿಯ ರಾಜಕೀಯ ಸ್ಥಿತ್ಯಂತರ, ರಾಜಕೀಯ,ಧಾರ್ಮಿಕ ಹಗೆತನಗಳಿಂದಲೂ ಅನೇಕ ಹಸ್ತಪ್ರತಿಗಳು ಕಣ್ಮರೆಯಾಗುವುದು. ಸಾಮನ್ಯಾವಾಗಿದ್ದಿತು. ಕಾರಾಣಾಂತರಗಳಿಂದ ರಾಜ್ಯವನ್ನೋ ? ನಾಡನ್ನೋ ? ಬಿಟ್ಟು ಹೋಗುತ್ತಿರುವಾಗ ಉಳಿದ ಗ್ರಂಥಗಳು ವೈರಿಗಳ ಕೈಗೆ ಸಿಕ್ಕಾಗ ಅಥವಾ ಕಾರಾಣಾಂತರಗಳಿಂದ ಇವರೇ ಮತಾಂತಾರಗೊಂಡಾಗ ಇಂತಹ ಆಪತ್ತುಗಳು ಉಂಟಾಗುತ್ತಿದ್ದವು. ಕೆಲವು ಸಲ ಉಪಯುಕ್ತ ಕೃತಿಗಳು ಕಣ್ಮರೆಯಾಗುವ ಸಂಬವವಿರುತ್ತದೆ.

ಇಂತಹ ಸಂದರ್ಭಗಳಲ್ಲಿ ಅನೇಕ ಮೌಲಿಕ ಕೃತಿಗಳು ಕಣ್ಮರೆಯಾಗುತ್ತಿವೆ, ಹಾಳಾದ, ಕಣ್ಮರೆಯಾದಂತಹ ಕೃತಿಗಳನ್ನು ಪುನರ್ ನಿರ್ಮಿಸುವುದು ಮುಂದಿನ ತಲೆಮಾರಿನವರ

---

೨೧. ಡಾ. ವಿರೇಶ ಬಡಿಗೇರ, ಚನ್ನವೀರಪ್ಪ ಸಂ : ಹಸ್ತಪ್ರತಿ ವ್ಯಾಸಂಗ -೩.ವಿಘ್ನರಾಜ ಎಸ್. ಆರ್. ಪುಟ -೨೦. ೨೧.

೨೨. Dr. Hikosaka & Dr. G. John Samuel. : A Descriptive Catelogue of Palm leaf manuscripts in Tamil. -XIV

ಆದ್ಯಕರ್ತವ್ಯವಾಗಿರುತ್ತದೆ. ಈ ಕುರಿತು ರಾಜಶೇಖರನು ತನ್ನ ವಿಚಾರವನ್ನು ಈ ರೀರಿಯಾಗಿ ವಿವರಿಸುತ್ತಾನೆ. '' ಯಾವುದೇ ಗ್ರಂಥದ ಒಂದಕ್ಕಿಂತ ಹೆಚ್ಚು ಪ್ರತಿಗಳನ್ನು ಬರೆಯಿಸಿಡಬೇಕು ಎಂಬುದಾಗಿ ಸೂಚಿಸುವ ರಾಜಶೇಖರನು ತನ್ನ ಕಾವ್ಯ ಮಿಮಾಂಸೆ '' ಯಲ್ಲಿ ಹಸ್ತಪ್ರತಿಗಳಿಗೆ ಒದಗುವ ಇನ್ನು ಕೆಲವು ಆಪತ್ತುಗಳ ಬಗ್ಗೆ ಹೇಳುವಂತಿದೆ. ಒತ್ತಿ ಇಡುವುದು, ಮಾರಾಟ, ದಾನ, ದೇಶತ್ಯಾಗ ಅಲ್ಪಾಯುಷ್ಯಾ, ಗೆದ್ದಲು, ಬೆಂಕಿ, ನೀರು, ಈ ಎಂಟು ಕಾವ್ಯವನ್ನು ಹಾಳು ಮಾಡುವ ನಿಮಿತ್ಯಗಳು ಎನ್ನುತ್ತಾನೆ.[೨೩]

ಈ ಕುರಿತು ಹಸಪ್ರತಿ ವಿದ್ವಾಂಸರಾಗಿರುವ ಶ್ರೀ ಬಿ.ಎಸ್.ಸಣ್ಣಯ್ಯನವರು ಈ ರಿಈತಿ ವಿವರಿಸುತ್ತಾರೆ. ಶೇಖರವಾಗಿರುವ ಹಸ್ತಾಪ್ರತಿಗಳ ರಕ್ಷಣೆಯ ಜೊತೆಗೆ ನಶಿಸಿ ಹೋಗಿರುವವನ್ನು ಜೀರ್ಣೋದ್ಧಾರ ಮಾಡುವುದೂ ಮುಖ್ಯ ಕರ್ತವ್ಯವಾಗಿದೆ. ಕಾಗದದ ಹಸ್ತಪ್ರತಿಗಳಾಗಿದ್ದರೆ ಅವುಗಳಲ್ಲಿ ಮಡಿಸಿಕೊಂಡಿರಬಹುದಾದ ಹಾಳೆಗಳನ್ನು ಬಿಚ್ಚಿ ಒತ್ತು ಕಾಗದದೊಳಗಿಟ್ಟು ಒದ್ದೆಯ ಸ್ಪಂಜಿನ ಸಹಾಯದಿಂದ ತೇವಮಾಡಬೇಕು.ಅನಂತರ ಇಸ್ತ್ರಿಪೆಟ್ಟಿಗೆಯ ಸಹಾಯದಿಂದ ತಕ್ಕಷ್ಟು ಶಾಖದಿಂದ ಇಸ್ತ್ರಿ ಮಾಡಬೇಕು. ಆಗ ಅದರ ಮಡಿಕೆಯು ಅಳಿದು ನೇರವಾಗುತ್ತದೆ.

ಹಾಗೆಯೇ ಬಿಡಿಹಾಳೆಗಳು ಮತ್ತು ನಶಿಸಿದ ಹಾಳೆಗಳ ದುರಸ್ತಿ ಕಾರ್ಯವನ್ನು ಕೆಲವು ನಿಯಮಗಳೊಡನೆ ಕೆಗೊಳ್ಳಬೇಕು.ಅದರಲ್ಲಿರುವ ಯಾವ ಅಕ್ಷರವೂ ಅಳಿಸಿ ಹೋಗದಂತೆ ಎಚ್ಚರಿಕೆ ವಹಿಸಬೇಕು. ಇದಕ್ಕೆ ಉಪಯೋಗಿಸುವ ಕಾಗದ ಕೈಯಿಂದ ಮಾಡಿದ್ದು ಆಗಿರಬೇಕು. ದಾರ,ಅಂಟು ಮೊದಲಾದವುಗಳ ಗುಣಮಟ್ಟ ಚೆನ್ನಾಗಿರಬೇಕು. ಟಿಸ್ಯೂ ಚಿಫನ್ ಮೊದಲಾದವನ್ನು ಉಪಯೋಗಿಸಿ ಈ ಕಾರ್ಯ ಮಾಡಬಹುದು.

ಓಲೆಗರಿ ಮತ್ತು ಭೂರ್ಜಪತ್ರಗಳ ಮಸಿ ಅಳಿಸದಂತಿದ್ದರೆ ಪ್ರತಿ ಎಲೆಯನ್ನು ಗ್ಲಿಸರಿನ್ ಮತ್ತು ನೀರನ್ನು 1 : 1 ಪ್ರಮಾಣದಲ್ಲಿ ಸೇರಿಸಿ ಅದರಿಂದ ಶುದ್ಧಗೊಳಿಸಬಹುದು. ಮಸಿಯು ಅಳಿಸುವಂತಿದ್ದರೆ ಕಾರ್ಬನ್ ಟೆಟ್ರಕ್ಲೋರೈಡ್ ಅಥವಾ ಅಸಿಟೋನ್ ಹಾಳೆಗಳಿಂದ ಸ್ವಚ್ಛಗೊಳಿಸಬೇಕು. ಕಂಠದಿಂದ ಅಕ್ಷರಗಳನ್ನು ಕೊರೆದಿರುವ ಓಲೆಗಳಿಗೆ ಗ್ರಾಫೈಟ್‌ಪುಡಿಯನ್ನು ಹಚ್ಚಿ ಅಕ್ಷರಗಳು ಚೆನ್ನಾಗಿ ಕಾಣುವಂತೆ ಮಾಡಬಹುದು. ಕೆಲವು ಸಲ ಶೀತದಿಂದಲೂ ಅಥವಾ ಮತ್ತ್ಯಾವ ಕಾರಣದಿಂದಲೋ ಓಲೆಗಳು ಒಂದಕ್ಕೊಂದು ಅಂಟಿಕೊಂಡಿರುತ್ತವೆ. ಇವುಗಳನ್ನು ಪ್ಯಾರಫಿನ್ ದ್ರಾವಣದಲ್ಲಿ ನೆನೆಯಿಸಿ ಬಿಡಿಸಲು ಪ್ರಯತ್ನಿಸಬೇಕು. ಪತ್ರಗಳು ಮುರಿದು ತುಂಡಾಗಿದ್ದರೆ ಅಥವಾ ಅವುಗಳ ಯಾವುದೇ ಭಾಗ ಹರಿದಿದ್ದರೆ ಆ ಭಾಗಕ್ಕೆ ಕ್ವಿಕ್‌ಫಿಕ್ಸ್ (Quickfix) ಮೊದಲಾದ ಅಂಟುಗಳನ್ನು ಉಪಯೋಗಿಸಿ ಸರಿಪಡಿಸಬಹುದು., ಹೀಗೆ ಹೊಂದಿಸುವಾಗ ಪತ್ರದ ಒಂದು ಮಗ್ಗಲಲ್ಲಿ ಹೊಂದಿಸಿದುದನ್ನು ಮತ್ತೊಂದು ಮಗ್ಗುಲಿಗೆ ಮುಂದುವರೆಸಿ ಮೊದಲ ಪುಟದಿಂದ ಕೊನೆಯನ್ನು ಸೇರುವಂತೆ ಮಾಡಿದರೆ ಉತ್ತಮ ಇದರಿಂದ ಪತ್ರದ ಎರಡು ಅಂಚುಗಳೂ ರಕ್ಷಿತವಾಗುತ್ತವೆ.[೨೪]

---

೨೩. ಕೆ. ಕೃಷ್ಣಮೂರ್ತಿ : ಕನ್ನಡ ಕಾವ್ಯ ಮೀಮಾಂಸೆ, ಪುಟ - ೧೧೩.
೨೪. ಬಿ.ಎಸ್. ಸಣ್ಣಯ್ಯ : ಹಸ್ತಪ್ರತಿ ಶಾಸ್ತ್ರಪರಿಚಯ, ಪುಟ -೬೨. ೩೬.

ಅ. ನೀರಿನಲ್ಲಿ ನೆನೆದ ಹಾಳೆಗಳ ದುರಸ್ತಿ :

ಹಸ್ತಪ್ರತಿಗಳು ನೀರಿನಲ್ಲಿ ನೆನೆದಾಗ ಅದರಲ್ಲಿರುವ ನೀರನ್ನು ಸೋಧಿಸಿ ಹಾಳೆಗಳನ್ನು ನೆರಳಿನಲ್ಲಿ ಹರಡಿ ಒಣಗಿಸಬೇಕು. ಸಾಕಷ್ಟು ಗಾಳಿ ಬೆಳಕುಗಳಿದ್ದರೆ ಉತ್ತಮ. ಹಾಳೆಗಳು ಒಂದಕ್ಕೊಂದು ಅಂಟಿಕೊಂಡಿದ್ದರೆ ಕಾಗದದ ಚಾಕುವನ್ನು ಉಪಯೋಗಿಸಿ ಜೋಪಾನವಾಗಿ ಬಿಡಿಸಬೇಕು. ಹಾಳೆಗಳನ್ನು ಆಗಾಗ ಮಗುಚಿ ಹಾಕುತ್ತಿರಬೇಕು. ಒಣಗಿದ ನಂತರ ಅದಕ್ಕೆ ಯಾವ ರೀತಿಯ ದುರಸ್ತಿಯು ಅವಶ್ಯಕವೂ ಅದನ್ನೆ ಮಾಡಬೇಕು.

ಆ. ಸುಟ್ಟ ಹಾಳೆಗಳು :

ಹಾಳೆಗಳು ಸುಟ್ಟು ಹೋದರೆ ಅಲ್ಲಿಗೆ ಅವು ನಾಶವಾದುವೆಂದೆ ಭಾವಿಸುತ್ತೇವೆ. ಆದರೆ ಆ ಭಾವನೆ ಸರಿಯಲ್ಲ. ಇವುಗಳನ್ನು ಕದಲಿಸದೆ ಹಾಗೆಯೇ ಇನ್‌ಫ್ರಾ-ರೆಡ್. ಬೆಳಕಿನಲ್ಲಿಟ್ಟು ಓದಬಹುದಾಗಿದೆ. ಇವುಗಳ ದುರಸ್ತಿ ಅವುಗಳ ಸ್ಥಿತಿಯನ್ನು ಅವಲಂಭಿಸಿದೆ.[೨೫]

ಹೀಗೆ ಹಲವು ವಿಧಾನಗಳಿಂದ ಹಸ್ತಪ್ರತಿಗಳನ್ನು ರಕ್ಷಿಸುವುದಲ್ಲದೆ ಅವುಗಳ ಮರು ಪ್ರತಿಗಳನ್ನು ಕಾಗದದ ಮೇಲೆ ಬರೆದಿಡಬಹುದು ; ಇಲ್ಲವೆ ಮೈಕ್ರೋಫಿಲಂ ಮೂಲಕ ನಕಲು ಮಾಡಬಹುದು. ಕೈಯಿಂದ ಬರೆದ ಮರು ಪ್ರತಿ ಮೂಲದ ಮೌಲ್ಯವನ್ನು ಕಳೆದುಕೊಂಡರೆ ಮೈಕ್ರೋಫಿಲಂ ಪ್ರತಿಯೂ ಮೂಲದ ಬೆಲೆಯನ್ನು ಉಳಿಸಕೊಳ್ಳುತ್ತದೆ. ಮೈಕ್ರೊಫಿಲಂನಿಂದ ಮೂಲವನ್ನು ಶಾಶ್ವತವಾಗಿ ರಕ್ಷಿಸಿದಂತಾಗುವುದಲ್ಲದೆ ಹಲವಾರು ಪ್ರತಿಗಳನ್ನು ಮಾಡಿ ಎಲ್ಲಿಗೆ ಬೇಕಾದರೂ ಕಳುಹಿಸಬಹುದು, ಯಾವುದೇ ಮೂಲ ಪ್ರತಿ ಹಾಳಾದರೂ ಮೈಕ್ರೋಫಿಲಂನಿಂದ ಎಂದಾದರೂ ಪ್ರತಿಯನ್ನು ಮಾಡಿಕೊಳ್ಳಬಹುದು. ಈ ಮೈಕ್ರೊಫಿಲಂನ್ನು ಇದನ್ನು ಓದಲಾಗಿಯೆ ನಿರ್ಮಿಸಲಾಗಿರುವ ಮೈಕ್ರೋಫಿಲಂ ರೀಡರಿನಲ್ಲಿ ಅಳವಡಿಸಿ ಓದಬಹುದು ; ಇಲ್ಲವೆ ಫೋಟು ಕಾಗದದ ಮೇಲೆ ಪ್ರತಿ ಮಾಡಿಕೊಳ್ಳಬಹುದು. ಕೇಂದ್ರ ಹಸ್ತಪ್ರತಿ ಭಂಡಾರ ಮಾಡಲು ಮೈಕ್ರೊಫೀಲಂ ಅತ್ಯಂತ ಉತ್ತಮ ಸಾಧನವಾಗಿದೆ. ಎಲ್ಲೆಲ್ಲಿಯೇ ಸಂಗ್ರಹವಾಗಿರುವ ಹಸ್ತಪ್ರತಿಗಳನ್ನು ಈ ಮೂಲಕ ಒಂದು ಗೂಡಿಸಬಹುದು. ಕೈಯಿಂದ ಬರೆದು ಪ್ರತಿ ಮಾಡುವ ಕೆಲಸಕ್ಕೆ ಹೋಲಿಸಿದರೆ ಕಾಲ ಮತ್ತು ಖರ್ಚು ಎರಡರಿಂದಲೂ ಮೈಕ್ರೋಫಿಲಂ ಬಹಳ ಸರಳ ಮತ್ತು ಸುಲಭವಾಗಿದೆ.[೨೬]

5. ದಾಖಲೆ ಮತ್ತು ಗಣಕಿಕರಣ :

ಹಸ್ತಪ್ರತಿಯ ಚಿಂತಕರೂ, ಯುವ ಸಂಶೋಧಕರು ಆಗಿರುವ ಡಾ॥ ವೀರೇಶ ಬಡಿಗೇರ ಅವರು ಹಸ್ತಾಪ್ರತಿಗಳ ದಾಖಲಿಕರಣ ಮತ್ತು ಗಣಕಿಕರಣವನ್ನು ಮಾಡಿರುವುದರ ಕುರಿತು ವಿವರವಾದ ಮಾಹಿತಿಯೊಂದನ್ನು ನೀಡುತ್ತಾರೆ. ಆ ವಿವರ ಹೀಗಿದೆ.... ಇಂದು ಗಣಕಯಂತ್ರ (Computer)ದ ಆಗಮನವಂತೂ ಬರವಣಿಗೆಯಲ್ಲಿ ಅಭುತಪೂರ್ವ ಸಾಧ್ಯತೆಗಳನ್ನು ತೆರೆದಿಟ್ಟಿದೆ.

---

೨೫. ಬಿ.ಎಸ್. ಸಣ್ಣಯ್ಯ : ಹಸ್ತಪ್ರತಿ ಶಾಸ್ತ್ರಪರಿಚಯ, ಪುಟ -೬೩.

೨೬ ಬಿ.ಎಸ್. ಸಣ್ಣಯ್ಯ : ಹಸ್ತಪ್ರತಿ ಶಾಸ್ತ್ರಪರಿಚಯ, ಪುಟ -೬೩.

ಅಷ್ಟೇ ಅನಿಶ್ಚಿತತೆಯನ್ನು ಹಿಡಿದಿಟ್ಟಿದೆ. ಇಲ್ಲಿ ಪವಿತ್ರತೆಯು ಗೌಣವಾಗಿ ಪ್ರತಿಷ್ಠೆ ಪ್ರಧಾನವಾಗುತ್ತದೆ. ಪವಿತ್ರಪಾತಳಿಯ ಬರವಣಿಗೆಯನ್ನು ಪ್ರತಿಷ್ಠಿತ ಪಾತಳಿಗೆ ಜೋಡಿಸುವುದು ಕ್ರಮ ಸರಳವಾದದ್ದಲ್ಲ.

ದೃಷ್ಠಿ ನಡತೆಯ ಸೂಚಕ (Optical Character Recognizer) ವು ಕನ್ನಡದ ಸಂದರ್ಭದಲ್ಲಿ ಇದರ ಅಗತ್ಯ ಹೆಚ್ಚಾಗಿದೆ. ಇದು ಗ್ರಾಫಿಕ್ ಸಾಫ್ಟವೇರ್ ಕೆಲಸಕ್ಕಿಂತ ತುಸು ಭಿನ್ನವಾದುದ್ದ. ಇಂಗ್ಲಿಷನಲ್ಲಿ ಮಾತ್ರ ಸಾಧ್ಯವಾಗಿದ್ದ ಇದನ್ನು ಆರ್.ಶ್ರೀನಿವಾಸರಾವ್ ಕುಂಟೆ ಮತ್ತು ಆರ್.ಡಿ.ಸ್ಯಾಮ್ಯುವೆಲ್ ಎನ್ನುವ ಶಿವಮೊಗ್ಗದ ಇಂಜನಿಯರಿಂಗ್ ಕಾಲೇಜಿನ ಪ್ರಾಧ್ಯಾಪಕರು ಕನ್ನಡಕ್ಕೆ ತರುವ ಪ್ರಯತ್ನ ಮಾಡಿದ್ದಾರೆ. ಸ್ಕ್ಯಾನರ್ ಮೂಲಕ ಹಸ್ತಪ್ರತಿಯೊಂದನ್ನು ಉಣಿಸಿದಾಗ ಅದು ದರ್ಶಕದ ಮೇಲೆ ಮೂಡುವ ಹೊತ್ತಿಗೆ ಶುದ್ಧ ಪ್ರತಿಯಾಗಿರುತ್ತದೆ. ಅಂದರೆ ನಾವು ಬಳಸುವ ಹಲವಾರು ಪಾಂಟ್‌ಗಳಲ್ಲಿ ಟೈಪಿಂಗ್ ಶುದ್ಧ ಪ್ರತಿಯಾಗಿರುತ್ತದೆ.ಅಂದರೆ ನಾವು ಬಳಸುವ ಹಲವಾರು ಪಾಂಟ್‌ಗಳಲ್ಲಿ ಟೈಪಿಂಗ್ ಸಹಾಯವಿಲ್ಲದೇ ನೇರವಾಗಿ ನಮಗೆ ಬೇಕಾದ ಹಾಗೆ ಮುದ್ರಿಸಿಕೊಳ್ಳಬಹುದು ಹೀಗಿಗ ಬೇಕಾದರೆ ಕನ್ನಡದಲ್ಲಿ ಬಳಕೆಯಾಗುವ ಅಕ್ಷರಗಳ ಎಲ್ಲಾ ಗುಣ ಲಕ್ಷಣಗಳನ್ನು ಗಣಕಕ್ಕೆ ಮೊದಲೇ ಅಳವಡಿಸ ಬೇಕಾಗುತ್ತದೆ.

ಇದರಿಂದ ಹಸ್ತಪ್ರತಿಯೊಂದರ ಮುದ್ರಿತ ಸಮಯದ ಹಣ, ವೇಳೆ,ಶ್ರಮ ಎಲ್ಲವೂ ಉಳಿತಾಯವಾಗುತ್ತದೆ. ಇದುವರೆಗೂ ಸ್ಕ್ಯಾನಿಂಗ್‌ನಲ್ಲಿ ಪೋಟೊಗ್ರಾಫಿಯಂತೆ ಮೂಲ ಪ್ರತಿಯ ಯಥಾವತ್ತಾದ ನಕಲನ್ನು ಮಾತ್ರ ನೋಡುವ ಸಾಧ್ಯತೆ ಇತ್ತು. ಓ.ಸಿ.ಆರ್.ಸಹಾಯದಿಂದ ಹಸ್ತಾಪ್ರತಿಗಳಲ್ಲಿನ ಬರಹವನ್ನು ನಮಗೆ ಬೇಕಾದಂತೆ ಲೇ ಔಟ್ ಮಾಡಿಕೊಳ್ಳಬಹುದು. ಅಂದರೆ ಗಣಕಿಕೃತ ಪಠ್ಯದಲ್ಲಿನ ಅಕ್ಷರಗಳನ್ನು ಹಿಗ್ಗಿಸುವ, ಕುಗ್ಗಿಸುವ, ಬೋಲ್ಡಮಾಡುವ, ಪ್ಯಾರಾ ಮಾಡಿಕೊಳ್ಳುವ, ತಲೆಬರಹ ಕೊಡುವ ಸೌಲಭ್ಯಗಳೂ ಸನ್ನಿಹಿತವಾಗಿವೆ. ಇನ್ನೂ ಮುಂದುವರೆದು ನೋಡಿದಾಗ ಸ್ಕ್ಯಾನಿಂಗ್ ಸಹಾಯ ನಮಗೆ ಬೇಕಾದ ಲೇಖನವನ್ನು ಅಥವಾ ಯಾವುದೇ ಪಠ್ಯವೊಂದನ್ನು ಗಣಕದಲ್ಲಿ ಶುದ್ಧ ಪ್ರತಿರೂಪದಲ್ಲಿ ಪಡೆದುಕೊಳ್ಳುವ ಬಗೆಗಳು ರೂಪಗೊಳ್ಳುತ್ತಿವೆ. ಒಂದು ರೀತಿಯಲ್ಲಿ ಪೆನ್ನು, ಪೇಪರು ರಹಿತ ಅಷ್ಟೆ ಏಕೆ ಬರವಣಿಗೆ ರಹಿತ ಸಮಾಜ ಸೃಷ್ಠಿಯಾಗುತ್ತಿರುವುದು ರುಜುವಾತಾಗುತ್ತಿದೆ.[೨೭]

III ವೈಜ್ಞಾನಿಕ ವಿವರಣಾತ್ಮಕ ಸೂಚಿಕರಣ :

ಸೂಚಿಕರಣ ವೆಂದರೆ ಸಂಗ್ರಹಿತ ಹಸ್ತಪ್ರತಿಗಳ ಶುದ್ಧಿಕರಣದ ಮೊದಲ ಹಂತವೆಂದೆ ಹೇಳಬಹುದು. ಹಸ್ತಪ್ರತಿಗಳ ಕೃಷಿ ಸಂಗೋಪನೆಯಲ್ಲಿ ಸೂಚಿಕರಣವು ಬಹು ಮಹತ್ವದ್ದಾಗಿದೆ. ಸಂಗ್ರಹಿಸಿದ ಹಸ್ತಪ್ರತಿಗಳಿಗೆ ಮೊದಲು ಮಾಡಬೇಕಾದ ತುರ್ತಾದ ಕೆಲಸವೆಂದರೆ ಅವುಗಳನ್ನು ಚೊಕ್ಕಟಗೊಳಿಸುವುದು. ಪತ್ರದ ಅಥವಾ ಹಾಳೆಯ ಪ್ರತಿಯೊಂದು ಬದಿಯನ್ನು

---

೨೭. ಡಾ. ವೀರೇಶ ಬಡಿಗೇರ : ಹಸ್ತಪ್ರತಿ ವ್ಯಾಸಂಗ ಭಾಗ -೩. ಪುಟ-೨೧

ಕುಂಚದಿಂದ ಇಲ್ಲವೆ ಬಟ್ಟೆಯಿಂದ ನಯವಾಗಿ ಒರೆಸಿ ಅದರಲ್ಲಿರಬಹುದಾದ ಧೂಳನ್ನು ಮೊದಲು ಹೋಗಲಾಡಿಸಬೇಕು. ಅನಂತರ ಪತ್ರಸಂಖ್ಯೆಗನುಸಾರವಾಗಿ ಜೋಡಿಸಿ ಲೇಪ ಅಥವಾ ಹರಿದ ಪತ್ರ ಸಂಖ್ಯೆಗಳನ್ನು ಗುರುತಿಸಿಕೊಳ್ಳಬೇಕು. ಹಸ್ತಪ್ರತಿ ಸಂಖ್ಯೆ, ಕರ್ತೃ, ಕೃತಿ, ಭಾಷೆ, ಲಿಪಿ, ಪತ್ರಸಂಖ್ಯೆ ಗ್ರಂಥಸಂಖ್ಯೆ, ದಾನಿಗಳ ಇಲ್ಲವೆ ಮಾರಾಟಗಾರರ ವಿಳಾಸ ಸಮಗ್ರ ಅಥವಾ ಅಸಮಗ್ರ ಮೊದಲಾದ ಅಗತ್ಯವಾದ ವಿವರಗಳನ್ನು ಸೂಚೀ ಪಟ್ಟಿಕೆಯಲ್ಲಿ ಹಾಗೂ ದಾಖಲೆ ರಿಜಿಸ್ಟರಿನಲ್ಲಿ ನಮೂದಿಸಬೇಕು. ಜೊತೆಗೆ ಹಸ್ತಪ್ರತಿಗೆ ವರ್ಗೀಕರಣ ಸಂಖ್ಯೆಯನ್ನು ಕೊಟ್ಟು ಇದನ್ನು ದಾಖಲೆ ರಿಜಿಸ್ಟರಿನಲ್ಲಿಯೂ ಸೂಚೀಪಟ್ಟಿಕೆಯಲ್ಲಿಯೂ ಗ್ರಂಥ ಪಾಲನಾ ನಿಯಮಕ್ಕನುಸಾರವಾಗಿ ದಾಖಲಿಸಬೇಕು. ದಾಖಲೆ ರಿಜಿಸ್ಟರ್ ಹಸ್ತಪ್ರತಿ ಭಂಡಾರದಲ್ಲಿ ಶಾಶ್ವತವಾಗಿರಬೇಕಾದುದರಿಂದ ಉತ್ತಮ ದರ್ಜೆಯ ಕಾಗದಗಳಿರುವ ರಿಜಿಸ್ಟರನ್ನು ಉಪಯೋಗಿಸಬೇಕು.

ಈ ಮೇಲಿನ ವಿವರಣೆ ಕೇವಲ ಸೂಚಿಕರಣದ ವಿವರಣೆಯಾಗಿದೆ. ಆದರೆ ವರ್ಣಾನಾತ್ಮಕ ಸೂಚಿಯನ್ನು ತಯಾರಿಸುವಾಗ ಇದಕ್ಕಿಂತಲೂ ವಿವರವಾದ ಅಧ್ಯಯನದ ಅವಶ್ಯಕತೆ ಇದೆ. ವಿವರಣಾತ್ಮಾಕ ಸೂಚಿಗಳ ವಿವರದಲ್ಲಿ ನಮ್ಮ ಅನೇಕ ವಿದ್ವಾಂಸರು ತಮ್ಮದೇ ಆದ ವಿವರಣಾತ್ಮಕ ವಿವರಗಳನ್ನು ಬೇರೆ ಬೇರೆಯಾಗಿ ನೀಡಿದ್ದಾರೆ. ಡಾ. ಎಂ.ಎಂ. ಕಲಬುರ್ಗಿ ಯವರು ಈ ರೀತಿಯಾಗಿ ತಮ್ಮ ವಿವರಣೆಯನ್ನು ನೀಡುತ್ತಾರೆ.

" ಆಧುನಿಕ ಹಸ್ತಪ್ರತಿ ಭಂಡಾರಗಳು ಸೂಚೀ ರಚನೆಯನ್ನು ಒಂದು ಶಿಸ್ತನ್ನಾಗಿ ಬೆಳಸಿವೆ. ಇದು ಒಂದು ಶೈಕ್ಷಣಿಕ ಶಿಸ್ತಾಗಿದ್ದರೂ, ಓದುಗರ ಪ್ರಯೋಗ ದೃಷ್ಟಿಯಿಂದ ಸೂಚಿಯನ್ನು ರಚಿಸುವುದು ನಮ್ಮಲ್ಲಿ ಪ್ರಾಚೀನ ಕಾಲದಿಂದಲೂ ಬೆಳೆದು ಬಂದಿದೆ. ಅದು ಒಂದು ಕಟ್ಟಿನಲ್ಲಿ ಅಡಕವಾಗಿರುವ ಕೃತಿಗಳ ಪಟ್ಟಿಯನ್ನು ಮೊದಲಿನ ಇಲ್ಲವೆ ಕೊನೆಯ ಪುಟದಲ್ಲಿ ಬರೆಯುವ ರೂಪದ್ದಾಗಿರುತ್ತದೆ. ಕಟ್ಟು ಕಳೆದುಹೋಗಿ ಉಳಿದುಕೊಂಡಿರಬಹುದಾದ ಇಂಥ ಯಾದಿ ಕೆಲವೊಮ್ಮೆ ಅಪೂರ್ವ ಸಂಗತಿಯನ್ನು ಹೊರಗೆಡುವುದು ಸಹಜ. ಐನೂಲಿಯಲ್ಲಿ ಸಿಕ್ಕ ಇಂಥ ಒಂದು ಪುಟ ನನಗೆ ಕವಿರಾಜ ಮಾರ್ಗ ಹಸ್ತಪ್ರತಿಯ ಶೋಧಕ್ಕೆ ಸಹಾಯ ಮಾಡಿತೆಂಬುವನ್ನು ಇಲ್ಲಿ ನೆನೆಯಬಹುದು. (ನೃಪತುಂಗಾಭ್ಯುದಯ ಮಾರ್ಗ -1-12) ಬೆಂಗಳೂರು ವಿಶ್ವವಿದ್ಯಾಲಯದ ಕೆ.128 : 11 ಸಂಖ್ಯೆಯ ಕಟ್ಟಿನಲ್ಲಿ "ಶ್ರೀ ಶುಭಮಸ್ತು ! ಮಳವಳ್ಳಿ ಮಠದಲ್ಲಿಹ ಪುಸ್ತಕದ ವಿವರ " ಎಂದು ಹೇಳಿ. ಅಲ್ಲಿಯ ಪುಸ್ತಕಗಳ ಯಾದಿಯನ್ನು ಕೊಡಲಾಗಿದೆ. ಇದಲ್ಲದೇ ಜೈಮಿನಿ ಭಾರತದ ತಾಳೆಪತ್ರ (ಮೈ.ಹ.ಸೂ.5-956) ಯಲ್ಲಿ 600 ಗ್ರಂಥಗಳ ಹೆಸರಿರುವ ಸೂಚೀ ಪತ್ರವಿರುವ ವಿಷಯ ತಿಳಿದು ಬರುತ್ತದೆ."

ಆಧುನಿಕ ಕಾಲಕ್ಕೆ ಸೂಚಿ ರಚಿಸುವ ಕ್ರಿಯೆ ಭಾರತದಲ್ಲಿ ಸರ್ ವಿಲಯಂ ಜೋನ್ಸ್ (1807) ಅವರಿಂದ ಪ್ರಾರಂಭವಾಯಿತು. ಕನ್ನಡಕ್ಕೆ ಬಂದರೆ 1828 ರಲ್ಲಿ ಪ್ರಕಟವಾದ "ಮೆಕೆಂಝಿ ಕಲೆಕ್ಷನ್ : ಎ ಡಿಸ್ಕ್ರಿಪ್ಟಿವ್ ಕೆಟಲಾಗ್ ಆಫ್ ದಿ ಮ್ಯಾನ್ಯುಸ್ಕ್ರಿಪ್ಟ್ಸ್" ಎಂಬುದೇ ಪ್ರಥಮ

ಸೂಚಿಯಾಗಿದೆ. ಆ ಮೇಲೆ ಮೈಸೂರು, ಧಾರವಾಡ, ಬೆಂಗಳೂರು, ಹೈದರಾಬಾದ, ವಿಶ್ವವಿದ್ಯಾಲಯಗಳು, ಕರ್ನಾಟಕದ ಒಳ ಹೊರಗಿನ ವೈಯಕ್ತಿಕ ಸಂಸ್ಥೆಗಳು ಹಸ್ತಪ್ರತಿಸೂಚಿಗಳನ್ನು ಪ್ರಕಟಿಸಿವೆ. ಇವುಗಳನ್ನು ಯಾದಿರೂಪದ ಸೂಚಿ, ವಿವರಣಾತ್ಮಕ ಸೂಚಿ, ಲೇಖರೂಪದ ಸೂಚಿಯೆಂದು ವರ್ಗಿಕರಿಸಬಹುದು. ಕನ್ನಡ ಹಸ್ತಪ್ರತಿಗಳನ್ನು ಕುರಿತು ಈ ವರೆಗೆ ಪ್ರಕಟವಾದ ಈ ಎಲ್ಲ ಬಗೆಯ ಸೂಚಿಗಳನ್ನು ಅಭ್ಯಾಸದ ಅನುಕೂಲಕ್ಕಾಗಿ 1, ಮದ್ರಾಸ ಹಸ್ತಪ್ರತಿ ಸೂಚಿಗಳು 2, ಮೈಸೂರು ಹಸ್ತಪ್ರತಿ ಸೂಚಿಗಳು ಧಾರವಾಡ ಹಸ್ತಪ್ರತಿ ಸೂಚಿಗಳು 4, ಬೆಂಗಳೂರು ಮತ್ತು ಹೈದರಾಬಾದ್ ಹಸ್ತಪ್ರತಿ ಸೂಚಿಗಳು 5 ಇತರ ಸೂಚಿಗಳು 6, ಲೇಖನರೂಪದ ಸೂಚಿಗಳು ಎಂದು ವರ್ಗೀಕರಿಸಿ ಈ ಕೆಳಗಿನಂತೆ ಕೊಡಬಹುದು. [೨೮]

ಕನ್ನಡ ಹಸ್ತಪ್ರತಿ ಸೂಚಿಗಳು

ಕ್ರ.ಸಂ.	ಸೂಚಿಯ ಹೆಸರು	ಸಂಪಾದಕರು	ಪ್ರಕಟಣೆ ಇಸ್ವಿ	ಪ್ರತಿ ಸಂಖ್ಯೆ

ಈ ಹಸ್ತಪ್ರತಿಗಳ ಸೂಚಿಯ ವಿವರವನ್ನು ಹಿರಿಯ ವಿದ್ವಾಂಸರಾಗಿರುವ ಶ್ರೀ ಬಿ.ಎಸ್.ಸಣ್ಣಯ್ಯನವರು ಈ ರೀತಿಯಾಗಿ ವಿವರಿಸುತ್ತಾರೆ....''ಹಸ್ತಪ್ರತಿಗಳ ಸೂಚಿಕರಣ ಬಹುಹಿಂದಿನಿಂದಲೂ ನಡೆದುಬಂದಿದೆ. ಆಕ್ಸ್‌ಫರ್ಡ್ ವಿಶ್ವವಿದ್ಯಾಲಯದ ಬಾಡ್ಲೆಯನ್ ಗ್ರಂಥಾಲಯದಲ್ಲಿದ್ದ ಭಾರತೀಯ ಹಸ್ತಪ್ರತಿಗಳ ಸೂಚಿಯೊಂದನ್ನು ಥಿಯೋಡೋರ ಜಾಫ್ರೆಟ್ ಎಂಬ ಪಾಶ್ಚಾತ್ಯಾ ವಿದ್ವಾಂಸರು ಸಂಕಲಿಸಿ 1859ರಲ್ಲಿಯೇ ಪ್ರಕಟಿಸಿದ ; ತದನಂತರ ಪ್ರಾಂಝ ಕೀಲ್ ಹಾರ್ನ, ಜಾರ್ಜಬುಹ್ಲರ್, ಎ.ಸಿ.ಬರ್ನೆರ್ ಮುಂತಾದವರು ಈ ಕೆಲಸ ಮುಂದೆ ಸಾಗಿಸಿಕೊಂಡು ಬಂದು ಭಾರತದಲ್ಲಿನ ಕೆಲವೊಂದು ಗ್ರಂಥಲಯಗಳಲ್ಲಿನ ಹಸ್ತಪ್ರತಿಗಳ ಸೂಚಿಗಳನ್ನು ತಯಾರಿಸಿದರೆ. ಬ್ಲುಹ್ಲರ್ ಆವರು ಗುಜರಾತ್,ಸಿಂಧ್, ರಾಜಪುತಾನಾ ಮುಂತಾದವುಗಳಲ್ಲಿ ಸಂಗ್ರಹಿಸಿದ ಹಸ್ತಪ್ರತಿಗಳ ಸೂಚಿಗಳನ್ನು ಹಾಗೂ ಬರ್ನೆರ್ ಅವರು ತಂಜಾವೂರು ಅರಮನೆಯಲ್ಲಿದ್ದ ಹಸ್ತಪ್ರತಿಗಳ ಸೂಚಿಗಳನ್ನು ತಯಾರಿಸಿದರು. ಈ ದಿಸೆಯಲ್ಲಿ ಕೃಷಿ ಮಾಡಿದ ಪ್ರಪ್ರಥಮ ಭಾರತೀಯರೆಂದರೆ ರಾಮಕೃಷ್ಣ ಗೋಪಾಳ ಭಂಡಾರಕರ ಹರಿಪ್ರಸಾದ ಶಾಸ್ತ್ರಿ ನ್ಯಾಯ ಭೂಷಣ ಕುಂಜ ವಿಹಾರಿ ಮುಂತಾದವರು ಎಂದು ಹೆಸರಿಸಬಹುದು.[೨೯]

ಕನ್ನಡ ಹಸ್ತಪ್ರತಿಗಳ ಸೂಚೀ ಪಟ್ಟಿಕೆಗಳು ಸೇರಿರುವ ಮೊಟ್ಟಮೊದಲ ವರ್ಣನಾತ್ಮಕ ಹಸ್ತಪ್ರತಿ ಸೂಚಿಯೆಂದರೆ ಎಚ್.ಎಚ್.ವಿಲ್ಸನ್ ಆವರು ಸಂಪಾದಿಸಿರುವ A Descriptive Catalogue of the Oriental Manuscripts Vol.I 1828 ಎಂಬುದಾಗಿದೆ. ಇದರಲ್ಲಿ 152 ಕನ್ನಡ ಕೃತಿಗಳ ವಿವರವಿದೆಯೆಂದು ಶ್ರೀ ಎಚ್.ದೇವಿರಪ್ಪನವರು ತಿಳಿಸಿರುವುದನ್ನು ಶ್ರೀ

೨೮. ಎಂ. ಎಂ. ಕಲಬುರ್ಗಿ : ಕನ್ನಡ ಹಸ್ತಪ್ರತಿ ಶಾಸ್ತ್ರ, ಪುಟ -೮೮.
೨೯. ಬಿ.ಎಸ್. ಸಣ್ಣಯ್ಯ : ಹಸ್ತಪ್ರತಿ ಶಾಸ್ತ್ರಪರಿಚಯ, ಪುಟ -೪೮

ಎಸ್.ಶಿವಣ್ಣನವರು ಉಲ್ಲೇಖಿಸಿದ್ದಾರೆ (ಹಸ್ತಪ್ರತಿ ಶಾಸ್ತ್ರ)... ಇದು ಮೆಕೆಂಝಿ ಅವರು ಸಂಗ್ರಹಿಸಿದ ಹಸ್ತಪ್ರತಿಗಳ ಸೂಚಿಯಾಗಿದೆ. ಹೀಗೆ ಕನ್ನಡ ಹಸ್ತಪ್ರತಿಗಳ ಸೂಚೀ ಪಟ್ಟಿಕೆಗಳೊಳಗೊಂಡ ಮತ್ತು ಕೆಲವು ಸೂಚಿಗಳು ಪ್ರಕಟವಾದರೂ ಕನ್ನಡಕ್ಕೆ ಮೀಸಲಾಗಿ ಪ್ರಕಟಗೊಂಡ ವರ್ಣಾನಾತ್ಮಕ ಸೂಚಿಗಳೆಂದರೆ ಮದರಾಸು ಸರ್ಕಾರಿ ಪ್ರಾಚ್ಯಾಕೋಶಾಗಾರದಿಂದ ಸಿದ್ದವಾದವಾಗಿವೆ. ಈ ಸಂಸ್ಥೆಯು 1934 ರಷ್ಟು ಹಿಂದೆಯೇ ಪ್ರಕಟಿಸಿ ಉಳಿದ ವಿಶ್ವವಿದ್ಯಾನಿಲಯಗಳಿಗೆ, ಸಂಸ್ಥೆಗಳಿಗೆ ಮಾದರಿಯಾಯಿತು. ಈ ಸೂಚಿಗಳಲ್ಲಿ ಕ್ರಮಾಂಕ ಶಿರೋನಾಮೆ, ವಸ್ತು ಆಕಾರ, ಪತ್ರಸಂಖ್ಯೆ, ಸಾಲುಗಳು, ಲಿಪಿ,ಸ್ಥಿತಿ ಬರವಣಿಗೆಯ ಪೂರ್ಣವಿವರಣೆ, ಪ್ರಾರಂಭ, ಕೊನೆ ಸಮಾಪ್ತಿ ವಚನ ಇದಿಷ್ಟನ್ನೂ ಕೊಡುವುದಲ್ಲದೆ ಕೆಲವು ಪ್ರತಿಗಳಿಗೆ ಮೂಲ, ಬರೆಯಲು ಪ್ರೇರಣೆ ಮೊದಲಾದ ಮಾಹಿತಿಯನ್ನು ನೀಡಲಾಗಿದೆ.

ಈ ವಿವರಣಗಳಲ್ಲಿ ಕೆಲವನ್ನು ಬಿಟ್ಟು ಕೆಲವನ್ನು ಸೇರಿಸಿ ತಮಗೆ ಸರಿತೋರಿದ ರೀತಿಯಲ್ಲಿ ಮೈಸೂರು ಕರ್ಣಾಟಕ ಉಸ್ಮಾನಿಯಾ ಬೆಂಗಳೂರು, ಮೊದಲಾದ ವಿಶ್ವವಿದ್ಯಾನಿಲಯಗಳು ಹಸ್ತಪ್ರತಿಗಳು ವರ್ಣನಾತ್ಮಕ ಸೂಚಿಯನ್ನು ಪ್ರಕಟಿಸಿವೆ. ಯಾವ ವಿವರಣೆಯೂ ಇಲ್ಲದೆ ಕೃತಿ, ಕರ್ತೃ, ಪತ್ರ ಮೊದಲಾದ ಸಾಮಾನ್ಯ ವಿಷಯಗಳೊಡನೆ ಹಸ್ತಪ್ರತಿಗಳ ಪಟ್ಟಿಯನ್ನೇ ಮೈಸೂರು ಗೌರ್ನಮೆಂಟ್ ಓರಿಯಂಟಲ್ ಲೈಬ್ರರಿ 1921 ರಲ್ಲಿ ಪ್ರಕಟಿಸಿದೆ. ಇದರಲ್ಲಿ 1511 ಕೃತಿಗಳನ್ನು ನಮೂದಿಸಿದೆ. ಇದೇ ರೀತಿಯಲ್ಲಿ ಕೆ.ಜಿ.ಕುಂದಣಗಾರರು ತಾವು ಸ್ವಾದಿ, ಸಿರ್ಸಿ ಮೊದಲಾದೆಡೆಗಳಲ್ಲಿ ಪರೀಶಿಲಿಸಿದ ಹಸ್ತಪ್ರತಿಗಳ ಪಟ್ಟಿಯನ್ನು 1929 ರಲ್ಲಿ ಜಯಕರ್ನಾಟಕದಲ್ಲಿ ಪ್ರಕಟಿಸಿದ್ದಾರೆ. ಮದರಾಸು ಸರ್ಕಾರಿ ಪ್ರಾಚ್ಯಾ ಕೋಶಾಗಾರದಲ್ಲಿ ಸಂಗ್ರಹವಾಗಿದ್ದ ಕನ್ನಡ ಹಸ್ತಪ್ರತಿಗಳು. ಅಕಾರಾದಿ ಪಟ್ಟಿಯನ್ನು ಎನ್.ಕುಪುಸ್ವಾಮಿ ಶಾಸ್ತ್ರಿಯವರು ಸಂಪಾದಿಸಿದ್ದು 1929 ರಲ್ಲಿ ಪ್ರಟಕವಾಗಿದೆ. ಇದರಲ್ಲಿ 1540 ಕೃತಿಗಳ ವಿವರವಿದೆ. ಕೆ.ಭುಜಬಲ ಶಾಸ್ತ್ರಿಗಳಿಂದ ಸಂಪಾದೀತವಾಗಿ ದೇವನಾಗರಿ ಲಿಪಿಯಲ್ಲಿ 1948 ರಲ್ಲಿ ಪ್ರಕಟವಾಗಿರುವ ಕನ್ನಡ ಪ್ರಾಂಥೀಯ ತಾಡಪತ್ರಿಯ ಗ್ರಂಥಸೂಚಿಯು ತುಂಬಾ ಉಪಯುಕ್ತ ಮಾಹಿತಿಯನ್ನು ನೀಡುತ್ತದೆ. ಇದರಲ್ಲಿ ಸಂಸ್ಕೃತ ಪ್ರಾಕೃತ ಕನ್ನಡ ಗ್ರಂಥಗಳೆಲ್ಲವೂ ಸೇರ್ಪಡೆಯಾಗಿವೆ. ಇಂತಹ ಹಸ್ತಾಪ್ರತಿ ಸೂಚಿಗಳು ಚಿಕ್ಕವಾಗಿ ದೊಡ್ಡವಾಗಿ ಹಲವರಿಂದ ಸಿದ್ದಗೊಂಡು ವಿವಿಧ ನಿಯತಕಾಲಿಕೆಗಳಲ್ಲಿ ಪ್ರಕಟವಾಗಿವೆ [೨೦]

ಹಸ್ತಪ್ರತಿಗಳ ವರ್ಣಾನಾತ್ಮಕ ಸೂಚಿಯಲ್ಲಿ ಇರಬೇಕಾದ ಅಂಶಗಳನ್ನು ವಿವರಿಸುತ್ತಾ ಚಿಂತಾಹರಣ ಚಕ್ರವರ್ತಿ ಅವರು ಕೆಲವು ಉಪಯುಕ್ತ ಸಲಹೆಗಳನ್ನು ನೀಡಿದ್ದಾರೆ. ಇವುಗಳಲ್ಲಿ ಕೆಲವನ್ನು ನಾವು ಗಮನಿಸಬಹುದಾಗಿದೆ. ಅಚ್ಚಾದ ಗ್ರಂಥಗಳ ಬಗೆಗೆ ದೊರೆಯುವ ಹಸ್ತಪ್ರತಿಗಳ ವಿವರಣೆಗಳನ್ನು ಕೊಡುವಾಗ ಪ್ರಕಟವಾದ ಗ್ರಂಥಗಳಿಗಿಂತ ಹೆಚ್ಚಿನ ಅಂಶಗಳಿದ್ದರೆ ಅದನ್ನು ಮಾತ್ರ ಸೂಚಿಸಬೇಕು ; ಅಲ್ಲದೆ ಇಂತಹ ಪ್ರತಿಗಳ ಭಾಗಗಳನ್ನು ಉದ್ಧರಿಸಬೇಕಾದುದು ಅನಾವ್ಯಶ್ಯಕ.

---

೨೦. Chintaharan Chakravarthi : A Study of Manuscripts Page No. 80.

ಇವುಗಳಿಂದ ಸೂಚಿಗ್ರಂಥಗಳ ಗಾತ್ರ ಕಡಿಮೆಯಾಗಲು ಸಹಾಯವಾಗುತ್ತದೆ. ಎಂದು ಹೇಳಿರುವುದು ಸರಿಯೆಂದು ಒಪ್ಪಬೇಕಾಗುತ್ತದೆ. ಇಂತಹ ಪ್ರತಿಗಳ ಭಾಗಗಳನ್ನು ಉದ್ಧರಿಸುವುದರಿಂದ ಹಸ್ತಪ್ರತಿಗಳ ಸ್ವರೂಪವನ್ನು ತಿಳಿಯಬಹುದೆ ಹೊರತು ಬೇರೆ ಪ್ರಯೋಜನವಾಗುವುದಿಲ್ಲ. ಅಂತಹ ವಿಶೇಷಗಳೇನಾದರೂ ಇದ್ದರೆ ಅವುಗಳನ್ನು ಮಾತ್ರ ಸೂಚಿಸಿ ಮುಂದುವರಿಯಬಹುದು.

ಈ ಎಲ್ಲ ಪ್ರಕಟಿತ ಹಸ್ತಪ್ರತಿ ಸೂಚಿಗಳ ಸಹಾಯದಿಂದ ಹಸ್ತಪ್ರತಿಗಳ ಸಮಗ್ರ ಸೂಚಿ (Catalogue Catalogrum)ಯನ್ನು ತಯಾರಿಸಿ ಪ್ರಕಟಿಸಿದಲ್ಲಿ ವಿದ್ವಜ್ಜನರಿಗೆ ಬಹುಮಟ್ಟಿನ ಉಪಾರವಾದಂತಾಗುತ್ತದೆ. ಎಸ್.ಶಿವಣ್ಣನವರು ಈ ಸೂಚಿಯ ನಿರ್ಮಾಣದಲ್ಲಿ ಮಾದರಿಯಾಗಿ ಅಫ್ರೆಟ್ (Aufrecht catalogus Catalogorum 1891,1896,1903)ರಲ್ಲಿ 3 ಭಾಗಗಳಲ್ಲಿ ಪ್ರಕಟವಾಗಿದೆ. ಸೂಚಿಯಲ್ಲಿನ ಕೆಲವು ಅಂಶಗಳನ್ನು ಅನುಸರಿಸಬಹುದೆಂದು ಹೇಳಿ ಅದನ್ನು ಈ ರೀತಿಯಲ್ಲಿ ಸೂಚಿಸಿದ್ದಾರೆ.

1. ಸೂಚಿಯು ಅಕಾರಾದಿ ಕ್ರಮದಲ್ಲಿದೆ.
2. ಕವಿಯು ಉಲ್ಲೇಖದೊಡನೆ ಆತನ ಲಭ್ಯ ಹಾಗೂ ಅಲಭ್ಯ ಕೃತಿಗಳ ಪಟ್ಟಿ
3. ಕೃತಿಯ ಉಲ್ಲೇಖದೊಡನೆ ಇತರ ಪ್ರತಿಗಳು ದೊರೆಯುವ ಸ್ಥಳಗಳ ನಿರ್ದೇಶನ.
4. ಮುದ್ರಿತ ಹಸ್ತಪ್ರತಿಗಳ ಸೂಚಿ ಮತ್ತು ಪತ್ರಿಕೆಗಳಲ್ಲಿ ಪ್ರಕಟವಾಗಿರುವ ಉಲ್ಲೇಖ.
5. ಪ್ರಕಟವಾದ ಕೃತಿಯ ಬಗೆಗೆ ಪರಿಚಯಾತ್ಮಕ ಲೇಕನದ' ವಿವರ ವಿವಿಧ ಆವೃತ್ತಿಗಳು.
6. ಪ್ರಕಟವಾಗದಿರುವ ಕೃತಿಯ ಬಗೆಗೆ ಪರಿಚಯಾತ್ಮಕ ಲೇಖನದ ವಿವರ.
7. ಇತರ ಭಾಷೆಗಳಲ್ಲಿ ಕೃತಿಯ ಅನುವಾದ.
8. ಕವಿ ಕೃತಿಗಳ ಬಗೆಗೆ ದೊರೆಯುವ ಸಾಹಿತ್ಯ ಚರಿತ್ರೆಯ ಸಂಗತಿಗಳು.
9. ಕವಿ,ಕಾಲ, ಕೃತಿಗಳ ಬಗೆಗೆ ಸಮಕಾಲೀನ ಸಂಶೋಧನೆಯ ವಿವರ.

ಇನ್ನೂ ಸೂಚೀಕರಣವಾಗದಿರುವ ಹಸ್ತಪ್ರತಿಗಳ ವರ್ಣನಾತ್ಮಕ ಸೂಚಿಗಳಲ್ಲದಿದ್ದರೂ ಕೊನೆಯಪಕ್ಷ ಸೂಚಿಗಳಾದರೂ ಪ್ರಕಟವಾಗಿ ಮೇಲೆ ಹೇಳಿದ ಸಮಗ್ರ ಸೂಚಿ ಸಿದ್ಧವಾಗಿ ಎಲ್ಲರಿಗೂ ದೊರೆಯುವಂತಾದಲ್ಲಿ ತುಂಬಾ ಮಹತ್ವದ ಕೆಲಸ ಆದಂತಾಗುತ್ತದೆ. ಇದು ಆದಷ್ಟು ಬೇಗ ಆಗಲೆಂದು ಹಾರೈಸೋಣ[೩೧]

ಹಸ್ತಪ್ರತಿಗಳ ತಜ್ಞರು, ಹಿರಿಯ ವಿದ್ವಾಂಸರು, ಬೆಂಗಳೂರು ವಿಶ್ವವಿದ್ಯಾಲಯದ ಗೌರವ ನಿರ್ದೇಶಕರಾಗಿ ಇಂದಿಗೂ ಹಸ್ತಪ್ರತಿಗಳ ಆರೈಕೆ, ಸಂಗೋಪನ, ಸಂರಕ್ಷಣೆ, ಸಂಸ್ಕರಣಗಳಂತಹ ಕಾರ್ಯಗಳಲ್ಲಿ ಸದಾ ನಿರತರಾಗಿರುವ ಬೆಂಗಳೂರಿನ ಎಸ್.ಶಿವಣ್ಣನವರು ಹಸ್ತಪ್ರತಿ ಸೂಚಿಗಳ ಬಗೆಗೆ ತಮ್ಮದೇ ಆದ ವಿವರಣೆಯನ್ನು ಈ ರೀತಿಯಾಗಿ ಕೊಡುತ್ತಿದ್ದಾರೆ. ಭಾರತದಲ್ಲಿ ಆಂಗ್ಲೇಯ ವಿದ್ಯಾಭ್ಯಾಸ ಪ್ರಸಾರವಾದಂತೆ ಸರ್ಕಾರಗಳು ಹಸ್ತಪ್ರತಿಗಳ ಸಂಗ್ರಹ,

೩೧. ಬಿ.ಎಸ್. ಸಣ್ಣಯ್ಯ : ಹಸ್ತಪ್ರತಿ ಶಾಸ್ತ್ರಪರಿಚಯ, ಪುಟ -೪೮

ಸಂರಕ್ಷಣೆ, ಪ್ರಕಟಣೆಗಳಲ್ಲಿ ಆಸಕ್ತಿಯನ್ನು ವಹಿಸಲಾರಂಬಿಸಿದವು. ಪ್ರಾಚ್ಯ ಸಂಶೋಧನಾಲಯಗಳಲ್ಲಿ ಹಾಗೂ ಹಲವಾರು ವಿಶ್ವ ವಿದ್ಯಾಲಯಗಳಲ್ಲಿ ಹಸ್ತಪ್ರತಿಗಳನ್ನು ಸಂಗ್ರಹಿಸುವ ಕಾರ್ಯ ಪ್ರಾರಂಭವಾಯಿತು. ಇಲ್ಲಿ ವಿವಿಧ ಧರ್ಮಗಳ, ವಿವಿಧ ಭಾಷೆಗಳ, ವಿವಿಧ ಲಿಪಿಗಳ ಕೃತಿರಾಶಿ ಒಂದೆಡೆಯಲ್ಲಿಸಂಗ್ರಹಗೊಂಡು ಅಭ್ಯಾಸಿಗಳಿಗೆ ಸುಲಭವಾಗಿ ಪರೀಶೀಲನೆಗೆ ದೊರೆಯುವಂತಾಯಿತು. ಹತ್ತೊಂಬತ್ತನೆಯ ಶತಮಾನದ ಉತ್ತರಾರ್ಧದಲ್ಲಿ ಭಾರತದಲ್ಲಿನ ಪೂನಾ, ಮದ್ರಾಸ್,ತಂಜಾವೂರು, ಮೈಸೂರಿನಲ್ಲಿನ ಸಂಗ್ರಹಗಳು ತುಂಬ ಪ್ರಸಿದ್ಧಿ ಪಡೆದ ಕೇಂದ್ರಗಳಾಗಿ ಪರಿಣಮಿಸಿದವು, ಹೀಗೆ ಸಂಗ್ರಹಗೊಂಡ ಕೃತಿರಾಶಿಯ ವಿವರಗಳು ಕಾಲಾನುಕ್ರಮದಲ್ಲಿ ಸೂಚಿಗಳ ರೂಪದಲ್ಲಿ ಪ್ರಕಟಗೊಳ್ಳಲಾರಂಭಿಸಿದವು.

ಕನ್ನಡದಲ್ಲಿ ಕರ್ನಲ್ ಮೆಂಕಂಜಿಯೇ (1754 - 1821) ಹಸ್ತಪ್ರತಿಗಳನ್ನು ಸಂಗ್ರಹಿಸಿದವರಲ್ಲಿ ಮೊದಲಿಗ, 1858 ರಲ್ಲಿ ಮದ್ರಾಸಿನಲ್ಲಿ ಸ್ಥಾಪಿತವಾದ ಸರ್ಕಾರಿ ಹಸ್ತಪ್ರತಿ ಭಂಡಾರಕ್ಕೆ ಸೇರ್ಪಡೆಯಾದ ಮೆಕಂಜಿ ಸಂಗ್ರಹವೇ ಪ್ರಪ್ರಥಮ ಸಾರ್ವಜನಿಕ ಕನ್ನಡ ಹಸ್ತಪ್ರತಿ[೩೨]

ಹಸ್ತಪ್ರತಿಗಳ ಬಾಹ್ಯ ಹಾಗೂ ಆಂತರಿಕ ವಿವರಗಳನ್ನು ಒಳಗೊಂಡ ಸೂಚಿಗಳೇ ಹಸ್ತಪ್ರತಿ ಸೂಚಿಗಳು. ಬಾಹ್ಯ ವಿವರಗಳಲ್ಲಿ ಹಸ್ತಪ್ರತಿಗಳ ವಸ್ತು (ಓಲೆ, ಶ್ರೀತಾಳ, ಕಾಗದ ಇತ್ಯಾದಿ) ಪ್ರತಿಗಳ ಆಕರ ಅಂದರೆ ಉದ್ದ ಅಗಲಗಳು, ಗರಿಗಳ ಹಾಳೆಗಳ ಸಂಖ್ಯೆಗಳು, ಸೂಚಿತವಾಗುತ್ತವೆ. ಆಂತರಿಕ ವಿವರಗಳಲ್ಲಿ ಪ್ರತಿಗರಿಯ ಅಥವಾ ಹಾಳೆಯಲ್ಲಿನ ಒಂದು ಪಾರ್ಶ್ವದಲ್ಲಿನ ಸಾಲುಗಳ ಸಂಖ್ಯೆ ಪ್ರತಿಸಾಲಿನಲ್ಲಿ ಅಕ್ಷರಗಳ ಸಂಖ್ಯೆ, ಕೃತಿಯ ಆದಿ ಮತ್ತು ಅಂತ್ಯಗಳ ಉಲ್ಲೇಖಗಳು ಬರುತ್ತವೆ. ಇವಲ್ಲದೆ ಸೂಚಿಗಳಲ್ಲಿ ಕೃತಿಯ ಹೆಸರು, ಕರ್ತೃ, ಕಾಲಗಳನ್ನು ಸೂಚಿಸಿರುತ್ತದೆ. ಕನ್ನಡದಲ್ಲಿ ಪ್ರಕಟವಾಗಿರುವ ವರ್ಣನಾತ್ಮಕ ಹಸ್ತಾಪ್ರತಿ ಸೂಚಿಗಳಲ್ಲಿ ಮಾತ್ರ ಮೇಲಿನ ಬಾಹ್ಯ ಹಾಗೂ ಆಂತರಿಕ ವಿವರಗಳನ್ನು ಕಾಣಬಹುದಾಗಿದೆ. ಉಳಿದ ಹಸ್ತಪ್ರತಿ ಸೂಚಿಗಳಲ್ಲೂ ಇವುಗಳಲ್ಲಿನ ಕೆಲವಾರು ಅಂಶಗಳು ಮಾತ್ರ ಇರುತ್ತವೆ.

ಕನ್ನಡದಲ್ಲಿ ಪ್ರಕಟವಾದ ಮೊದಲ ಹಸ್ತಪ್ರತಿ ಸೂಚಿ ಮೆಕೆಂಜಿ ಸಂಗ್ರಹಕ್ಕೆ ಸಂಬಂದಿಸಿದುದಾಗಿದೆ. ಈ ಸೂಚಿ (Mackenzie Collection : A Descriptive Catelogue of the Oriental Manuscripts. Edited by H.H. Wilson - Vol-I 1828) ವರು ಹೆಸರಿನಲ್ಲಿದೆ. ಇದರಲ್ಲಿ ಕನ್ನಡಕ್ಕೆ ಸಂಬಂದಿಸಿದ 152 ಕೃತಿಗಳ ವಿವರವಿದೆ. [೩೩] ಹೀಗೆಯೇ ಕನ್ನಡದಲ್ಲಿ 1934 ರಲ್ಲಿ ಪ್ರಕಟವಾದ ಮೊದಲ ವರ್ಣಾನಾತ್ಮಕ ಹಸ್ತಪ್ರತಿ ಸೂಚಿಯ ಕೀರ್ತಿ ಮದ್ರಾಸ್ ಸರ್ಕಾರಕ್ಕೆ ಸಲ್ಲತಕ್ಕದ್ದಾಗಿದೆ.

---

೩೨. ಎಚ್.ದೇವಿರಪ್ಪ: ಕನ್ನಡ ಹಸ್ತಪ್ರತಿಗಳ ಇತಿಹಾಸ, ಬೆಂಗಳೂರು, ವಿ.ವಿ. ೧೯೭೭, ಪು-೧೦೧
೩೩. ಎಚ್.ದೇವಿರಪ್ಪ: ಕನ್ನಡ ಹಸ್ತಪ್ರತಿಗಳ ಇತಿಹಾಸ, ಬೆಂಗಳೂರು, ವಿ.ವಿ. ೧೯೭೭, ಪು-೧೦೧

ಕಾಲಘಟ್ಟದ ಬದಲಾವಣೆಯ ಹೊಸ್ತಿಲಿನಲ್ಲಿ ಅನಾಥವಾಗಿದ್ದ ಹಸ್ತಪ್ರತಿಗಳು ಸೂಚಿ ಸಂಗ್ರಹಗಳಿಗೆ ರೂಪತಾಳಿರುವ ವಿವರವನ್ನು ಹಸ್ತಪ್ರತಿಶಾಸ್ತ್ರದ ಹಿರಿಯ ವಿದ್ವಾಂಸರು, ಸಂಗ್ರಹಕಾರರು, ಸಂರಕ್ಷಣಾಕಾರರು ಆಗಿರುವ ತರೀಕೇರಿ ತಾಲೂಕಿನ ಗೌರಾಪುರದ ದೊಡ್ಡಮಲ್ಲಯ್ಯ ಮತ್ತು ಶ್ರೀಮತಿ ಮರುಳಮ್ಮನವರ ಮಗನಾಗಿ ಜನಿಸಿದ ಹಸ್ತಪ್ರತಿ ವಿದ್ವಾಂಸರಾಗಿರುವ ಗೌ.ಮ. ಉಮಾಪತಿ ಶಾಸ್ತ್ರಿಗಳು ಹಸ್ತಪ್ರತಿಗಳ ಸೂಚಿ ನಿರ್ಮಾಣದ ಉಷೆಯ ಕಾಲದ ವಿವರವನ್ನು ಹೀಗೆ ವಿವರಿಸುತ್ತಾರೆ.... ''ಹಿಂದಿನ ಕಾಲದಲ್ಲಿ ಹಿರಿಯರು ಹಸ್ತಪ್ರತಿಗಳನ್ನು ಸರಸ್ವತಿ ಭಂಡಾರವೆಂದು ಬಹಳ ಭಾವುಕತೆ ಮತ್ತು ಭಕ್ತಿಯಿಂದ ಕಂಡು ಅವನ್ನು ಕೈ ನೂಲಿನ ದಪ್ಪನ ಕೆಂಪು ಬಟ್ಟೆಗಳನ್ನು ಸುತ್ತಿ ಕಟ್ಟಿ ಇಡುತ್ತಿದ್ದರು. ವಿಜಯ ದಶಮಿಯ ಹಬ್ಬಕ್ಕೊಮ್ಮೆ ಸರಸ್ವತಿಯ ಪೂಜೆಯದಿನ ಅವುಗಳ ಧೂಳು ಹೊಡೆದು, ಹಳೆಯ ಹೊದಿಕೆ ತೆಗೆದು, ಹೊಸ ಬಟ್ಟೆ ಸುತ್ತಿ, ಕಟ್ಟು ಬಿಚ್ಚಿದ ಗರಿಗಳನ್ನು ಹೊಸ ದಾರಗಳಿಂದ ಪೋಣಿಸಿ ಕಟ್ಟಿಟ್ಟು ಪೂಜಿಸಿ ರಕ್ಷಿಸುತ್ತಿದ್ದರು. ಮುಂದೆ ಆಂಗ್ಲ ವಿದ್ಯೆ ಪ್ರಸಾರದಿಂದ ಕನ್ನಡದ ಓದು, ಹಳೆಯ ಕಾವ್ಯಗಳ ನಿಂತು ಹೋಯಿತು. ಹಸ್ತಪ್ರತಿಗಳ ಚೆತ್ತದ ಬುಟ್ಟಿಗಳು ಇಲಿಗಳ ಬೀಡಾದವು. ವರ್ಷಕ್ಕೊಮ್ಮೆ ಅಪ್ಪ, ಅಪ್ಪಿತಪ್ಪಿ ಹೊತ್ತಗೆಗಳ ಗಂಟನ್ನು ಹೂ ಪತ್ರೆ ಹಾಕಿ ಪೂಜಿಸಿದರೆ, ಮಗ ನಾನೇನು ಕಡಿಮೆಯೆಂದು ಅವುಗಳ ಮೇಲೆ ಹಾಲು, ನೀರಿನ ಅಭಿಷೇಕ ಮಾಡಿದೆ. ಇಡಿಯ ವರ್ಷ ಗಂಟು ಬಿಚ್ಚಿ ನೋಡಲಿಲ್ಲ. ಈ ಮೌಢ್ಯದಿಂದ ಹಸ್ತಪ್ರತಿಗಳೆಲ್ಲಾ ಕೊಳೆತು ಮಣ್ಣಾದವು. ಆಮೇಲೆ ಭಯಗೊಂಡ ಸುಪುತ್ರ ಅವನ್ನು ಹೊಳೆಯಲ್ಲಿ ಹರಿಯಬಿಟ್ಟೊ ? ಭಾವಿಯಲ್ಲಿ ವಿಸರ್ಜನೆ ಮಾಡಿಯೋ ಪೀಡೆ ತೊಲಗಿತೆಂದು ನಿಶ್ಚಿಂತನಾಗಿ ಮಲಗಿದ. ಹೀಗೆ ಆ ಅಮೂಲ್ಯ ಸಂಪತ್ತಿನ ಬಳುವಳಿಯನ್ನು ನಾವೇ ಹಾಳುಮಾಡಿದ ಪಾಪಿಗಳು.[೩೪]

ಆಂಗ್ಲರ ಆಡಳಿತದಲ್ಲಿ ಕ್ರೈಸ್ತ ಧರ್ಮಗುರುಗಳ ಆಗಮನವಾಯಿತು. ಫರ್ಡಿನಾಂಡ್ ಕಿಟ್ಟೆಲ್, ರೈಸ್‌ರಂತಹ ಧರ್ಮಪ್ರಸಾರವಾಗಿತ್ತು. ಅವರು ಬೈಬಲ್ಲಿನ ಅನುವಾದ ಮಾಡಲೆಂದು ಕನ್ನಡ ಕಲಿತರು ಆದರೆ ನಮ್ಮ ಕನ್ನಡ ಭಾಷೆಯ ಪ್ರಾಚೀನತೆ ಹಾಗೂ ಅದರ ವಾಙ್ಮಯತೆ, ಭಾಷಾ ಸಂಪದವನ್ನು ಕಂಡು ವಿಸ್ಮಯಗೊಂಡರು. ಧರ್ಮಪ್ರಸಾರ ಮರೆತು ಕನ್ನಡ ನುಡಿಯ ವ್ಯಾಕರಣ-ಕಾವ್ಯಗಳ ಅಧ್ಯಯನ ಮಾಡಿದರು. ಶಬ್ದಮಣಿ ದರ್ಪಣವನ್ನು ಹಸ್ತಪ್ರತಿಗಳಿಂದ ಪರಿಶುದ್ಧವಾಗಿ ಸಂಶೋಧಿಸಿ ಇಂಗ್ಲಿಷಿನಲ್ಲಿ ಟೀಕೆ-ಟಿಪ್ಪಣಿ ಬರೆದರು.ಆದರಿಂದ ಪ್ರೇರಿತರಾದ ಕನ್ನಡ ಪಂಡಿತರು ಕಣ್ಣಿಟ್ಟು ಹಸ್ತಪ್ರತಿಗಳನ್ನು ಹುಡಕಲು ಹೊರಟರು. ಅಷ್ಟುಹೊತ್ತಿಗಾಗಲೇ ಅಪಾರ ಭಂಡಾರ ನಷ್ಟವಾಗಿತ್ತು. ಅರಮನೆಯಲ್ಲಿ ಉಳಿದುದನ್ನೇ ಒಡೆಯ ರಾಜರು ಮೈಸೂರು ಪ್ರಾಚ್ಯವಿದ್ಯಾ ಸಂಶೋಧನ ಸಂಸ್ಥೆಯಲ್ಲಿಟ್ಟು ಅವುಗಳ ಅಧ್ಯಯನ, ಪರಿಷ್ಕಾರ ಪ್ರಕಾಶಕ್ಕೆ ಮಹಾದಾನ ನೀಡಿದರು. ಅದೊಂದು ಶುಭಾರಂಭ, ಆಮೇಲೆ ಕರ್ನಾಟಕ, ಬೆಂಗಳೂರು ವಿಶ್ವವಿದ್ಯಾಲಯಗಳಲ್ಲಿ ಅಧ್ಯಯನ

---

೩೪. ಸಿದ್ಧಯ್ಯ ಪುರಾಣಿ ಸಂ.: ಮಣಹ , ಗೌಮ ಉಮಾಪತಿ ಶಾಸ್ತ್ರಿ.

ಪೀಠ, ಕೇಂದ್ರಗಳು ಮೈದಾಳಿ ಕಾರ್ಯಪ್ರವೃತ್ತವಾದವು.[೩೫] ಈ ರೀತಿಯಾಗಿ ಅಸಂಖ್ಯಾತ ಹಸ್ತಪ್ರತಿಗಳ ಸೂಚಿಗಳು ಮೈತಾಳಿ ಇಂದಿಗೂ ಹೊರಬರುತ್ತದೆ.

ಶ್ರೀ ವಿಘ್ನರಾಜ ಎಸ್.ಆರ. ಅವರದು ಹಸ್ತಪ್ರತಿಯ ಆಸಕ್ತಿ ಕ್ಷೇತ್ರ ಅವರು ಹಸ್ತಪ್ರತಿಯ ಒಳಿತಿಗಾಗಿ ಹಲವು ಲೇಖನಗಳನ್ನು ಪ್ರಕಟಿಸಿದ್ದಾರೆ. ಹಸ್ತಪ್ರತಿ ಸೂಚಿ ನಿರ್ಮಾಣದ ಬಗ್ಗೆ ಅವರಿಗಿರುವ ಕಾಳಜಿಯನ್ನು ಈ ರೀತಿಯಾಗಿ ವಿವರಿಸುತ್ತಾರೆ..... ಕನ್ನಡದಲ್ಲಿನ ಲಭ್ಯ ಹಾಗೂ ಅಲಭ್ಯ ಕೃತಿಗಾರರ ಕೃತಿಗಳ ಉಲ್ಲೇಖಗಳನ್ನೆಲ್ಲಾ ಒಂದೆಡೆ ಸಮಗ್ರವಾಗಿ ಒಳಗೊಂಡಿರುವ ಸೂಚಿಯೇ ಕನ್ನಡ ಹಸ್ತಪ್ರತಿಗಳ ಸಮಗ್ರ ಗ್ರಂಥಸೂಚಿ. ಅಫ್ರೆಟಿನ್''ಕೆಟಲಾಗಸ್ ಕೆಟಲಾಗರಂ'' ರಿತ್ಯಾ ನಿರ್ಮಾಣ ಮಾಡಬಹುದಾಗಿದೆ. ಕರ್ನಾಟಕದಲ್ಲಿರುವ ಸೂಚಿಗಳಲ್ಲಿ ಹಾಗೂ ಪತ್ರಿಕೆಗಳಲ್ಲಿ ಪ್ರಕಟವಾಗಿರುವ ಹಸ್ತಪ್ರತಿಗಳ ಸಂಖ್ಯೆಗಿಂತ ಮಿಗಿಲಾದ ಹಸ್ತಪ್ರತಿಗಳು ಅಪ್ರಕಟರೂಪದಲ್ಲಿದೆ. ವಿಶ್ವವಿದ್ಯಾಲಯಗಳ ಸಂಗ್ರಹದಲ್ಲಿ ಸಂಘ,ಸಂಸ್ಥೆಗಳಲ್ಲಿ ವೈಯಕ್ತಿಕ ಸಂಗ್ರಹಗಳಲ್ಲಿ ಸಾವಿರಾರು ಹಸ್ತಪ್ರತಿಗಳು ಇಂದಿಗೂ ಹಾಗೆಯೇ ಇದೆ. ಕನ್ನಡ ಹಸ್ತಪ್ರತಿಗಳ ಸಮಗ್ರ ಗ್ರಂಥ ಸೂಚಿ ನಿರ್ಮಾಣದ ಕಾರ್ಯಕ್ಕೆ ಹಿನ್ನಲೆಯಾಗಿ ಉಪಲಬ್ದ ಹಸ್ತಪ್ರತಿಗಳ ವಿವರಗಳನ್ನೇಲ್ಲಾ ಮೊದಲು ಸಂಗ್ರಹಿಸಿ ಮುದ್ರಿಸುವುದು ಅತ್ಯಂತ ಅಗತ್ಯವಾದ ಕಾರ್ಯವಾಗಿದೆ.[೩೬]

1. ಸಮಗ್ರ ಸೂಚಿ :

★ ಅಕಾರಾದಿ ಕ್ರಮದಲ್ಲಿ ಜೋಡಿಸುವುದು

★ ಕವಿಯ ಉಲ್ಲೇಖದೊಡನೆ ಆತನ ಸಮಗ್ರ ಲಭ್ಯ,ಅಲಭ್ಯ, ಕೃತಿಗಳ ವಿವರ ನೀಡುವುದು

★ ಕೃತಿಯ ಪ್ರತಿಗಳು ಎಲ್ಲೆಲ್ಲಿ ದೊರೆಯುತ್ತವೆ ಎಂಬ ವಿವರ ನೀಡುವದು

★ ಮುದ್ರಿತ ಹಸ್ತಪ್ರತಿಗಳು ವರ್ಣನಾತ್ಮಕ ಸೂಚಿ ಇತ್ಯದಿ ವಿವರ ನೀಡುವುದು

★ ಕೃತಿ ಪ್ರಕಟವಾಗಿದ್ದರೆ ವಿವರಣೆ ನೀಡುವುದು

★ ಕೃತಿ ಪ್ರಕಟವಾಗದೆ ಪರಿಚಯಾತ್ಮಕ ಲೇಖನ ಪ್ರಕಟವಾಗಿದ್ದರೆ ವಿವರ

★ ಸಾಹಿತ್ಯ ಚರಿತ್ರೆ ಇತ್ಯಾದಿಗಳಲ್ಲಿ ಕೃತಿಯ ಬಗೆಗೆ ದೊರಕುವ ಮಾಹಿತಿ ವಿವರ

★ ಕವಿ,ಕಾಲ, ಕೃತಿಗಳ ವ್ಯಾಖ್ಯಾನ ಬಗೆಗೆ ಆದಷ್ಟು ಸಂಶೋಧನಾತ್ಮಕ ವಿವರ ನೀಡುವಿಕೆ

★ ಗ್ರಂಥ ದಾನಿಗಳ ವಿಳಾಸ ಇತ್ಯಾದಿ ವಿವರ

ಭಾರತೀಯ ಭಾಷೆಗಳಲ್ಲಿ ಯಾವ ಭಾಷೆಯದೇ ಆಗಲಿ ಹಸ್ತಪ್ರತಿಯೊಂದು ನಮ್ಮ ಕಡೆಗೆ ಬಂದರೆ ಅದು ನಮ್ಮ ಸ್ವತ್ತಾಗಿಯೇ ಉಳಿಯತಕ್ಕದ್ದು. ಸಂಸ್ಕೃತ ಭಾಷೆ ಒಂದಾದರೂ ಭಾರತದ ಆಯಾ ಪ್ರದೇಶಗಳವರು ಅದನ್ನು ಬರೆಯಲು ಬೇರೆ ಬೇರೆ ಲಿಪಿಗಳನ್ನು ಬಳಸಿದ್ದಾರೆ. ನೇಪಾಳದ ನೇಪಾಳಿ, ಬಂಗಾಳದ ಬಂಗಾಲ, ಕಾಶ್ಮೀರದ ಶಾರದಾ, ಉತ್ತರ ಭಾರತದ

---

೩೫. ಸಿದ್ಧಯ್ಯ ಪುರಾಣಿ ಸಂ.: ಮಣಹ, ಗೌಮ ಉಮಾಪತಿ ಶಾಸ್ತ್ರಿ.

೩೬. ಡಾ. ವಿರೇಶ ಬಡಿಗೇರ, ಚನ್ನವೀರಪ್ಪ ಸಂ : ಹಸ್ತಪ್ರತಿ ವ್ಯಾಸಂಗ -೩. ವಿಘ್ನರಾಜ ಎಸ್. ಆರ್. ಪುಟ -೨೦. ೨೧.

ನಾಗರಿ ಲಿಪಿ, ದಕ್ಷಿಣ ಭಾರತದಲ್ಲಿ ನಂದಿನಾಗರಿ, ಕನ್ನಡ, ತೆಲುಗು, ವಿಶಿಷ್ಟವಾದ ಗ್ರಂಥಾಕ್ಷರ, ತುಳು ಮಲೆಯಾಳ ಹೀಗೆ ಹಲವು ಲಿಪಿಗಳಿವೆ. ಇವನ್ನು ಶಾಸ್ತ್ರೀಯವಾಗಿ ಬಳಕೆಗೆ ತರುವ ವ್ಯವಸ್ಥೆ ಸರಿಯಾಗಿ ಇಂದು ನಡೆದಿಲ್ಲ.

2. ಹಸ್ತಪ್ರತಿ ಚಿತ್ರಕಲಾಕೃತಿಗಳ ಸಂರಕ್ಷಣೆ ಮತ್ತು ಸಂಗ್ರಹಣೆ :

ಮನುಷ್ಯ ನಿರ್ಮಿತ ಮತ್ತು ಮಾನವ ನಿರ್ಮಿತ ಕಾರಣಗಳಿಂದ ಹಸ್ತಪ್ರತಿಗಳು ಹಾಳಾಗಿರುವಂತೆ ಹಸ್ತಾಪ್ರತಿಯೊಳಗನ ಚಿತ್ರಗಳೂ ಹಾಳಾಗಿ ಹೋಗಿವೆ. ಇದ್ದ ಮುರಕಲು ಹಸ್ತಪ್ರತಿಯ ಗರಿಗಳಿಂದ ವೃತ್ತಿನಿರತ ಲಿಪಿಕಾರರೆ ಮಾಯವಾಗಿರುವ ಇಂದಿನ ದಿನಗಳಲ್ಲಿ ಕೃತಿಯನ್ನು ಪ್ರತಿಮಾಡಿಸುವುದು ಎಷ್ಟೊಂದು ತೊಂದರೆದಾಯಕವೋ. ಹಸ್ತಾಪ್ರತಿಯೊಳಗಿರುವ ಅರೆ ಬರೆ ಚಿತ್ರಗಳ ನಿರ್ಮಾಣವೂ ಅಷ್ಟೇ ತೊಂದರೆದಾಯಕವಾಗಿದೆ. ನಮ್ಮ ಪ್ರಾಚೀನ ಲಿಖಿತ ಸಂಸ್ಕೃತಿಗೆ ಇಂದಿನ ಗಣಕ ಯಂತ್ರವು ವರದಾನದಂತಿವೆ. ಅದು ನಿರ್ದೇಶಿತ ಆಯಾ ಪ್ರಾದೇಶಿಕ ಭಾಷಾ ಲಿಪಿಗಳನ್ನು ಒಳಗೊಂಡಿರುವಂತೆ ಆದರಿಂದ ಮಾಸಲು ಕಲಾಕೃತಿಗಳಿಗೆ ಜೀವವನ್ನು ಕೂಡಾ ತುಂಬಬಹುದು. ಆಯ್ದ ಬಣ್ಣಗಳು ಹೊರ ರೇಖೆಗಳು ಮತ್ತು ಇತರ ಪೂರಕವಾದಂತಹ ಬಳಸಿರುವ ವರ್ಣಗಳು ಕೂಡಾ ದೊರೆಯುತ್ತಿವೆಯಲ್ಲದೆ ಕಾಲಾನುಕ್ರಮದ ಕಾಲಗರ್ಭದ ಹಲವಾರು ಕಾರಣಗಳಿಂದ ದುರ್ಬಲಗೊಂಡ ಬಣ್ಣಗಳು ನವೀನ ರೀತಿಯಂತೆ ಕಂಗೊಳಿಸಬಲ್ಲವು.

ನಮ್ಮ ಬಳಿ ಅಪರೂಪದ ಕಲಾಕೃತಿಗಳಿವೆ ಇವು ಸಂಸ್ಕೃತಿಯು ಬಹು ಮುಖ್ಯ ಆಕರಗಳೆಂದು ತಿಳಿದಿದ್ದೂ ಸಂರಕ್ಷಿಸುವ ಮತ್ತು ಪ್ರಕಟಿಸುವ ಹಂತದಲ್ಲಿ ಓಂದಿದ್ದೇವೆ. ಅವುಗಳನ್ನು ಜಾಗತೀಕರಣಗೊಳಿಸುವ ನಿಟ್ಟಿನಲ್ಲಿ ಸೋತಿದ್ದೇವೆ. ಎಲೆಕ್ಟ್ರಾನಿಕ್ - ಕಾಮರ್ಸ್ ಅಥವಾ ಇ-ಮೇಲ್, ಇಂಟರ್‌ನೆಟ್‌ನಂತಹ ನವೀನ ಮಾಧ್ಯಮಗಳು ಇಂತಹ ನಿಸ್ಸಾಹಾಯಕ ಪ್ರವೃತ್ತಿಗಳಿಗೆ ಶಕ್ತಿಯನ್ನು ತಂದುಕೊಡುತ್ತಿವೆ. ಸಂಸ್ಕೃತಿ ಪ್ರಸಾರ ಮಾಧ್ಯಮಗಳೂ ಆಗುತ್ತಿವೆ.[೩೭]

3. ಹೊಸ ವೈಜ್ಞಾನಿಕ ಹಸ್ತಪ್ರತಿಯ ವರ್ಣನಾತ್ಮಕ ಸೂಚಿಬೇಕು :

ಇಂದು ಆಧುನಿಕ ರೀತಿಯ ವೈಜ್ಞಾನಿಕ ತಳಹದಿಯಲ್ಲಿ ವರ್ಣನಾತ್ಮಕ ಸೂಚಿಗಳು ವಿವಿಧ ವಿಶ್ವವಿದ್ಯಾಲಯಗಳಿಂದ, ಮಠ ಮಾನ್ಯಗಳಿಂದ ಪ್ರಕಟಗೊಳ್ಳುತ್ತಿವೆ. ಪಾಶ್ಚಾತ್ತ ತಜ್ಞರ ವಿಚಾರ ಸರಣಿಯಲ್ಲಿ ಕನ್ನಡ ಹಸ್ತಪ್ರತಿಗಳ ವರ್ಣನಾತ್ಮಕ ಸೂಚಿಗಳು ಬರುತಿದ್ದರೂ. ಕನ್ನಡದ ಹಸ್ತಪ್ರತಿ ಸೂಚಿಗಳಲ್ಲಿ ಇನ್ನೂ ಅನೇಕ ಸೇರ್ಪಡೆಗಳು ಸೇರಬೇಕಾಗಿವೆ.

ಪ್ರಾಚ್ಯವಿದ್ಯಾ ಸಂಶೋಧನಾಲಯದ ಕನ್ನಡ ಹಸ್ತಪ್ರತಿಗಳ ವರ್ಣನಾತ್ಮಕ ಸೂಚಿಗಳು ಮೈಸೂರು ವಿಶ್ವವಿದ್ಯಾಲಯದಿಂದ ಪ್ರದಾನ ಸಂಪಾದಕರು ಮತ್ತು ನಿರ್ದೇಶಕರಾಗಿ ಸೂಚಿ ತಯಾರಿಕೆಯಲ್ಲಿ ದುಡಿದಿರುವ ಎಚ್.ದೇವಿರಪ್ಪನವರು ಗಣನೀಯವಾದಂತಹ ಕಾರ್ಯವನ್ನು ನಾಲ್ಕು

೩೭. ವಿರೇಶ ಬಡಿಗೇರ್ : ಹಸ್ತಪ್ರತಿ ವ್ಯಾಸಂಗ, ಭಾಗ -೩. ಪುಟ -೨೨.

ದಶಕಗಳ ಹಿಂದೆಯೇ (1962) ಮಾಡಿದ್ದಾರೆ. ಇತ್ತೀಚೆಗೆ ಕೂಡಾ ಹಸ್ತಪ್ರತಿಗಳು ಬರುತ್ತಲಿವೆ. ಅನುಕೂಲತೆಯ ಇಂದಿನ ದಿನಗಳಲ್ಲಿ ಬರುವ ಹಸ್ತಪ್ರತಿಗಳಲ್ಲೂ ಶ್ರೀ ಎಚ್. ದೇವಿರಪ್ಪನವರು ನಿರ್ವಹಿಸಿದಂತಹ ಪರಿಶ್ರಮವೆಲ್ಲ 1954 ರಿಂದ ಸಂಗ್ರಹಿತವಾದ ಎಲ್ಲ ವಿಧದ ಹಸ್ತಪ್ರತಿಗಳನ್ನು ಅಕಾರಾದಿಗಳಲ್ಲಿ ವಿಂಗಡಿಸಿ ಅವುಗಳಿಗೆ ಕಾಗದ ಪ್ರತಿ, ತಾಳೆಗರಿಯ ಪ್ರತಿ, ಚಿಕ್ಕ ಪ್ರತಿ, ದೊಡ್ಡಪ್ರತಿ ಪ್ರತಿಗಳ ಅಳತೆ, ಕವಿ,ಕಾಲ, ವಿಷಯದೊಂದಿಗೆ ಅಕ್ಷರ ವಿವರ ನೀಡಿರುವ ಅವರು ಕೃತಿಯ ಪ್ರಾರಂಭಿಕ ಮತ್ತು ಕೊನೆಯ ಚರಣವನ್ನು ನೀಡಿದ್ದಾರೆ ಇವೆಲ್ಲವನ್ನೂ ಕಲಶಪ್ರಾಯವಾಗುವಂತೆ ವಿಶೇಷದಲ್ಲಿ ಕೃತಿಯೊಳಗಿನ ಚಿತ್ರಗಳನ್ನು ಗುರುತಿಸಿದವರಲ್ಲಿ ಮೊದಲಿಗರಾಗಿದ್ದಾರೆ.

ಚಿತ್ರದಲ್ಲಿ ರೇಖೆಯೇ, ವರ್ಣವೋ ಅಥವಾ ವರ್ಣಯುಕ್ತ ರೇಖಾ ಪ್ರಧಾನವೋ ಎಂಬುದನ್ನು ವಿವರಿಸಿದ್ದಾರೆ. ಈ ರೀತಿಯಲ್ಲಿ ಇನ್ನೂ ಮುಂದೆ ಬರುವ ಹಸ್ತಪ್ರತಿ ವರ್ಣನಾತ್ಮಕ ಸೂಚಿಗಳಲ್ಲಿ ಚಿತ್ರಗಳನ್ನು, ಚಿತ್ರಸ್ವರೂಪ ಮತ್ತು ಕಲಾವಿದರನ್ನು ಗುರುತಿಸುವ ಕಾರ್ಯವಾಗಬೇಕಾಗಿದೆ. ಹಸ್ತಾಪ್ರತಿಯೊಳಗಿನ ಚಿತ್ರಗಳನ್ನು ವಿದ್ವಾಂಸರು ನಿರ್ಲಕ್ಷಿಸಿದಂತೆ ಹಸ್ತಪ್ರತಿಗಳ ರಕ್ಷಣೆ ಇರುವ ಫಲಕಗಳನ್ನು ನಮ್ಮ ವಿದ್ವಾಂಸರು ಕಲಾಹೀನರಾಗಿ ಹಸ್ತಪ್ರತಿಗಳನ್ನು, ಫಲಕಗಳನ್ನು ಸಾಕಷ್ಟು ಅಂದಗೆಡಿಸಿದ್ದಾರೆ. ಫಲಕಗಳ ಮೇಲಿರುವ ಚಿತ್ರಗಳ ಮೇಲೂ ಲೇಬಲ್ ಅಂಟಿಸಿದ್ದಾರೆ, ಪರಿಷ್ಕರಣಕ್ಕಾಗಿ ಹಳೆಯದನ್ನು ಕಿತ್ತಿ ಹೊಸದನ್ನು ಹಚ್ಚಿದ್ದಾರೆ ಹಳೆಯದನ್ನು ಕಿತ್ತುವಾಗ ಚಿತ್ರಕೃತಿಯ ಬಣ್ಣ, ಕೃತಿ ರಚನೆಯನ್ನು ಯಾವ ಸಂಕೋಚವೂ ಇಲ್ಲದಂತೆ ಅಂದಗೆಡಿಸಿದ್ದಾರೆ. ಕಟ್ಟಿಗೆಗೆ ಹತ್ತಿದ ಗೆದ್ದಲು ಆ ಕಟ್ಟಿಗೆಯ ಉಳಿದ ಭಾಗಕ್ಕು ಮುಂದುವರೆದಂತೆ. ಈ ಹಸ್ತಪ್ರತಿ ಸಂರಕ್ಷಣೆಯ ರಕ್ಷಾ ಫಲಕಗಳ ತುಂಬಾ ವಿವರದ ಚೀಟಿ ಅಂಟಿಸಿದ್ದಾರೆ. ಮೇಲಿನ ಚಿತ್ರದ ಬಗೆಗೆ, ಒಳಗಿರುವ ಚಿತ್ರಗಳ ಬಗೆಗೆ ಯಾವುದೇ ವಿವರವನ್ನು ಅವರು ನೀಡಿರುವುದಿಲ್ಲ. ಇದು ನಮ್ಮ ಕನ್ನಡ ಹಸ್ತಪ್ರತಿ ತಜ್ಞರಿಗೆ ಮತ್ತು ಸಂಶೋಧಕರಿಗೆ ಇರುವ ಕಲೆಯ ಪರಿಜ್ಞಾನವನ್ನು ವಿವರಿಸುತ್ತದೆ.

4. ಕುಶಲ ಕಲಾಕೇಂದ್ರದ ಪ್ರಾರಂಭ :


ಹಸ್ತಪ್ರತಿಗಳ ಯುಗವು ಪ್ರಾಚೀನ ಮತ್ತು ಅರ್ವಾಚೀನ ಯುಗಗಳನ್ನು ಕೂಡಿಸುವಂತಹ ಕೊಂಡಿಯ ಯುಗದಂತಿದೆ. ತಾಳೆಯ ಗರಿಯಿಂದ ಕಾಗದದ ಪ್ರತಿಯ ಬೆಳವಣಿಗೆಯಲ್ಲಿ ಬಹಳಷ್ಟು ಬದಲಾವಣೆಗಳು ಕಂಡು ಬರುತ್ತಿವೆ. ಗಣಕ ಯಂತ್ರಗಳ ಪ್ರಯೋಗದಿಂದಲೂ ಹೊಸತನವು ಹಸ್ತಪ್ರತಿಗಳ ಜಗತ್ತಿನಲ್ಲಿ ಬೆಳೆಯ ಹತ್ತಿದೆ. ಆದರೂ ಮೂಲದ ತಾಯಿಬೇರಿನ ಭಾವನೆ ನಮ್ಮೊಂದಿಗೆ ಬಿಡಲಾಗದ ನಂಟಿನಂತಿದೆ. ವೈಜ್ಞಾನಿಕ ಅನುಕೂಲಗಳು, ಸೌಲಭ್ಯಗಳು ಇಂದು ಹೆಚ್ಚಿರಬಹುದು ಆದರೆ ಹಸ್ತಪ್ರತಿಗಳೊಂದಿಗಿನ ಮಾನಸಿಕ ಸಂಬಂಧವು ಯುಗಾಂತರಗಳ ಮೈಲುಗಲ್ಲುಗಳನ್ನು ದಾಟಿಕೊಂಡರು ಅದು ಹಾಗೆಯೇ ತಾಯಿ ಮಗುವಿನ ಸಂಬಂಧದಂತೆ ಉಳಿದುಕೊಂಡಿದೆ. ಈ ಭಾವುಕತೆಯನ್ನು ಕಾಯ್ದಿಟ್ಟು ಕೊಳ್ಳುವುದಕ್ಕೆ ಹಸ್ತಪ್ರತಿ ಸಂಗ್ರಹಾಲಯಗಳಿರುವಂತೆ ಹಸ್ತಪ್ರತಿ ಕುಶಲಕೇಂದ್ರಗಳು ಪ್ರಾರಂಭವಾಗಬೇಕು. ಕುಶಲತೆಯೆಂಬುದು

ಅಕ್ಷರಬರಹದಿಂದ ಚಿತ್ರಕಲಾತ್ಮಕ ಅಲಂಕಾರದವರೆಗೂ ವ್ಯಾಪಿಸಿಕೊಳ್ಳುತ್ತದೆ. ಆದ್ದರಿಂದ ಅಂತಹ ಕೇಂದ್ರಗಳಲ್ಲಿ ಬರೆಪ ಕಾರರಿಗೆ ಅಕ್ಷರ ಬರಹಗಳ ತರಬೇತಿ ನೀಡಿದಂತೆ ಚಿತ್ರ ರಚನೆಯ ತರಬೇತಿಯನ್ನು ಒದಗಿಸಬೇಕು.

ಬಳ್ಳಾರಿ ಜಿಲ್ಲೆಯ ಸೊಂಡೂರಿನಲ್ಲಿ ಕ್ರಿಯಾಶೀಲ ಕೆಲಸಗಾರರಾಗಿರುವ ಎಂ. ವೈ. ಘೋರ್ಪಡೆಯವರು 'ಸೊಂಡೂರು ಕುಶಲಕಲಾ ಕೇಂದ್ರ' ಎಂಬುವ ವಿನೂತನ ಕೇಂದ್ರವನ್ನು 1984 ರ ವೇಳೆಗೆ ಪ್ರಾರಂಭಿಸಿದರು. ಈ ಕೇಂದ್ರದಲ್ಲಿ ಕರ್ನಾಟಕದ ಪ್ರಾಚೀನ ಬಣ್ಣಗಾರಿಕೆಯಾದ ಕಿನ್ನಾಳ ಕಲಾವಂತಿಕೆಯನ್ನು, ಮಲೆನಾಡಿನ ಬಿದುರು ಬೆತ್ತಗಳ ಕುಶಲಗಾರಿಕೆಯನ್ನು ಮತ್ತು ಶಿಲ್ಪ ಮತ್ತು ಕಾಷ್ಠಗಳ ಕುಶಲಕಲೆಗಳನ್ನು ಹೊಲಿಗೆ ತರಬೇತಿಗಳನ್ನು ಸ್ಥಾಪಿಸಿ ಜನತೆಗೆ ಸ್ವಉದ್ಯೋಗ ಯೋಜನೆಗಳನ್ನು ಸ್ಥಾಪಿಸಿದಂತೆ ಕಣ್ಮರೆಯಾಗುತ್ತಿದ್ದ ಹಲವಾರು ಕಲಾಪ್ರಾಕಾರಗಳನ್ನು ಕಲಾವಿದರನ್ನು ಉಳಿಸಿಕೊಂಡ ಕೀರ್ತಿ ಈ ಸಂಸ್ಥೆಗೆ ಸಲ್ಲುತ್ತದೆ.

ಇಂತಹುದೇ ರೀತಿಯಲ್ಲಿ ಹಸ್ತಪ್ರತಿಯ ಹಿನ್ನೆಲೆಯೊಂದಿಗೆ ಕುಶಲಗಾರಿಕೆ ಕೇಂದ್ರವು ಪ್ರಾರಂಭವಾದಲ್ಲಿ ಗತಕಾಲದ ಕಲಾತ್ಮಕ ಯುಗವನ್ನು ಉಳಿಸಿಕೊಂಡಂತೆ ಬೆಳೆಸಿಕೊಳ್ಳುವ ಮಾರ್ಗದಲ್ಲೂ ನಾವು ಮುನ್ನಡೆಯಬಹುದು.

*****



ಅಧ್ಯಾಯ : ಒಂಭತ್ತು

ಸಮಾರೋಪ,

ಪರಮಾ ಪ್ರಕೃತೇರ್ಗುಹಂ ಸ್ಥಾನಂ ದೇವೈರ್ವಿನಿರ್ಮಿತಂ।
ಪೂರಯೇತ್ತಾಮ್ರಲಿಂಗೇನ ಅಥ ರೈತ ಮಯೇನ ವಾ ॥೭-೭೪॥
ಅಶಕ್ತೋವಾ ಬಿಲ್ವಕಾಷ್ಟತಥಾ ಶ್ರೀ ಪರ್ಣಕಸ್ಯ ಚ।
ನ ಕಾಷ್ಠನ ವಂಶಸ್ಯ ವ ಲೋಹಂ ಯೋಜನೇತ್ ಕ್ವಚಿತ್ ॥೭-೭೫॥[೧]

....

ಈ ಮಹಾಪ್ರಬಂಧದ ವಿಷಯವು ಒಟ್ಟು ಒಂಭತ್ತು ಅಧ್ಯಾಯಗಳಲ್ಲಿ ಹರಡಿಕೊಂಡಿದ್ದು ಅವುಗಳಲ್ಲಿ ಚರ್ಚಿತಗೊಂಡ ವಿಷಯಗಳ ಸಂಕ್ಷಿಪ್ತ ಸ್ವರೂಪದ ಫಲಿತಗಳನ್ನು ಇಲ್ಲಿ ಸಮೀಕ್ಷಿಸಲಾಗಿದೆ.

ಒಂದನೆಯ ಅಧ್ಯಾಯದಲ್ಲಿ ಅಧ್ಯಯನದ ಉದ್ದೇಶ, ಸ್ವರೂಪ ಮತ್ತು ವೈಧಾನಿಕತೆ ಇದುವರೆಗೆ ನಡೆದ ಈ ಕ್ಷೇತ್ರದ ಅಧ್ಯಯನಗಳನ್ನು ಪ್ರಮುಖವಾಗಿ ಚರ್ಚಿಸಲಾಗಿದೆ. ಮತ್ತು ಆಕರ ಸಾಮಗ್ರಿಗಳನ್ನು ಕುರಿತಾದ ಸಮೀಕ್ಷೆಯನ್ನು ಇಲ್ಲಿ ಮಾಡಲಾಗಿದೆ.

ಅಧ್ಯಯನಕ್ಕೆ ಈ ವಿಷಯವನ್ನು ತೆಗೆದುಕೊಳ್ಳುವ ಪ್ರಮುಖ ಉದ್ದೇಶಗಳನ್ನು ಮತ್ತು ಅಧ್ಯಯನದ ಸ್ವರೂಪಗಳನ್ನು ವಿಶೇಷವಾಗಿ ಚರ್ಚಿಸಲಾಗಿದೆ. ಇಲ್ಲಿ ಚಿತ್ರಕಲಾಕ್ಷೇತ್ರದಲ್ಲಿ ನಡೆದ ಸಂಶೋಧನಾ ಅಧ್ಯಯನಗಳನ್ನು ವಿಶೇಷವಾಗಿ ಹಸ್ತಪ್ರತಿ ಚಿತ್ರಕಲೆಯನ್ನು ಕುರಿತು ಇದುವರೆಗೆ ನಡೆದ ಅಧ್ಯಯನದ ಸಮೀಕ್ಷೆಯನ್ನು ಅನೇಕ ಅಧ್ಯಯನಕಾರರ ಗ್ರಂಥ, ಲೇಖನಗಳಲ್ಲದೇ ಸಂಶೋಧನಾ ಮಹಾಪ್ರಬಂಧ ಮುಂತಾದ ಆಕರಗಳಿಂದ ಈ ಕ್ಷೇತ್ರದ ಅಧ್ಯಯನದ ಪುನರಾವಲೋಕನವನ್ನು ಮಾಡುತ್ತ ಅಧ್ಯಯನಕ್ಕೆ ಈ ಹಿಂದೆ ನಡೆದ ಪ್ರಯತ್ನಗಳನ್ನು ಗುರುತಿಸಿ ಮುಂದೆ ಮಾಡಬಹುದಾದ ಅಧ್ಯಯನದ ರೂಪ ರೇಶೆಗಳಿಗೆ ಈ ಆಕರಸಾಮಗ್ರಿಗಳನ್ನು ಬಳಸಿಕೊಂಡು ಪ್ರಸ್ತುತ ಅಧ್ಯಯನವನ್ನು ಕೈಕೊಳ್ಳಲಾಗಿದೆ. ಈ ಅಧ್ಯಯನದಲ್ಲಿ ಹೊಂದಿದ ಪ್ರಮುಖ ಉದ್ದೇಶಗಳನ್ನು ಈಡೇರಿಸುವ ಹಿನ್ನಲೆಯಲ್ಲಿ ಅಧ್ಯಯನದ ಸ್ವರೂಪವನ್ನು ವಿವಿಧ ಅಧ್ಯಾಯಗಳಲ್ಲಿ ನಡೆಸಲಾಗಿದೆ. ಇಲ್ಲಿ ಅಧ್ಯಯನದ ವ್ಯಾಪ್ತಿ ಮತ್ತು ಅಧ್ಯಯನ ನಡೆಸಿದ ಸಂಶೋಧನಾ ವಿಧಿ ವಿಧಾನಗಳನ್ನು ಸ್ಥೂಲವಾಗಿ ಚರ್ಚಿಸಲಾಗಿದೆ.

ಎರಡನೆಯ ಅಧ್ಯಾಯದಲ್ಲಿ ಕರ್ನಾಟಕದ ಹಸ್ತಪ್ರತಿ ಚಿತ್ರಕಲೆಯ

೧. ಡಾ. ಬಿ.ಕೆ.ಹಿರೇಮಠ : ಕನ್ನಡ ಹಸ್ತಪ್ರತಿಗಳು ಒಂದು ಅಧ್ಯಯನ, ಪುಟ -೧೦೩.

ಚರಿತ್ರೆಯನ್ನು ಹಸ್ತಪ್ರತಿಗಳನ್ನು ಮುಖ್ಯ ಆಕರಗಳನ್ನಾಗಿ ಇಟ್ಟುಕೊಂಡು ಆಯಾ ಸಮಕಾಲೀನ ಸಂದರ್ಭದ ಭಿತ್ತಿಚಿತ್ರ ಮುಂತಾದ ಶಾಸ್ತ್ರಗ್ರಂಥಗಳು, ಶಾಸನಗಳನ್ನು ಬಳಸಿಕೊಂಡು ಹಸ್ತಪ್ರತಿ ಚಿತ್ರಕಲೆಯ ಇತಿಹಾಸವನ್ನು ಕಾಲಾನುಕ್ರಮವಾಗಿ ಕ್ರಮಬದ್ಧವಾಗಿ ಕಟ್ಟಿಕೊಡಲು ಪ್ರಯತ್ನಿಸಲಾಗಿದೆ. 1. ವೇದಕಾಲೀನ ಯುಗದ ಹಸ್ತಪ್ರತಿ ಚಿತ್ರಕಲೆ. (ಸು. ಕ್ರಿ.ಶ.ಪೂ.1500) 2.ಪ್ರಾಕೃತಯುಗದ ಹಸ್ತಪ್ರತಿ ಚಿತ್ರಕಲೆ. (ಸು.ಕ್ರಿ.ಶ.4ನೇ ಶತಮಾನ) 3. ಕವಿರಾಜ ಮಾರ್ಗ ಯುಗದ ಹಸ್ತಪ್ರತಿ ಚಿತ್ರಕಲೆ.(ಸು. ಕ್ರಿ.ಶ.8ನೇ ಶತಮಾನ)4. ಪಂಪಯುಗದ ಹಸ್ತಪ್ರತಿ ಚಿತ್ರಕಲೆ. (ಕ್ರಿ.ಶ. 10ನೇ ಶತಮಾನ) 5. ವಚನಯುಗದ ಹಸ್ತಪ್ರತಿ ಚಿತ್ರಕಲೆ. (ಕ್ರಿ.ಶ. 12ನೇ ಶತಮಾನ) 6. ದಾಸಯುಗದ ಹಸ್ತಪ್ರತಿ ಚಿತ್ರಕಲೆ. (ಕ್ರಿ.ಶ. 14ನೇ ಶತಮಾನ)7. ಮಹಮ್ಮದಿಯ ಯುಗದ ಹಸ್ತಪ್ರತಿ ಚಿತ್ರಕಲೆ.(ಕ್ರಿ.ಶ. 15ನೇ ಶತಮಾನ)8. ಆಧುನಿಕ ಯುಗದ ಹಸ್ತಪ್ರತಿ ಚಿತ್ರಕಲೆ. (ಕ್ರಿ.ಶ. 16ನೇ ಶತಮಾನದ ನಂತರ)

ಕರ್ನಾಟಕದ ಚಿತ್ರಕಲಾ ಇತಿಹಾಸ ಇನ್ನೂವರೆಗೆ ಸ್ಪಷ್ಟವಾಗಿ ರಚನೆ ಆಗಿಲ್ಲ. ಈ ಕೊರತೆಯನ್ನು ಪ್ರಸ್ತುತ ಅಧ್ಯಾಯದಲ್ಲಿ ತುಂಬಿಕೊಡುವ ಪ್ರಯತ್ನ ನಡೆದಿದೆ. ಇದೊಂದು ಮಹತ್ವದ ಕ್ರಮವೆಂದೇ ಹೇಳಬೇಕಾಗುತ್ತದೆ.

ಮೂರನೆಯ ಅಧ್ಯಾಯದಲ್ಲಿ ಹಸ್ತಪ್ರತಿ ಚಿತ್ರಕಲೆಯು ಸಿದ್ಧಗೊಳ್ಳುವ ಪೂರ್ವದಲ್ಲಿ ನಡೆಯುವ ಅದರ ಸಿದ್ಧತೆ ವಿವಿಧ ಹಂತಗಳನ್ನು ಚಿತ್ರರಚನೆಯ ಪರಿಕರಗಳನ್ನು ಮತ್ತು ಚಿತ್ರರಚನೆ ಪ್ರಕ್ರಿಯೆಗಳನ್ನು ವಿವಿಧ ಆಧಾರಗಳ ಹಿನ್ನಲೆಯಲ್ಲಿ ವಿವೇಚಿಯನ್ನು ಇಲ್ಲಿ ನಡೆಸಲಾಗಿದೆ. ಕನ್ನಡಿಗರು ಹಸ್ತಪ್ರತಿಗಳಿಂದ ಜ್ಞಾನರಕ್ಷಣೆಗಳಂತಹ ಪರಮ ಪ್ರಯೋಜನಗಳನ್ನು ಅವುಗಳನ್ನು ಕಲಾವಸ್ತುಗಳನ್ನಾಗಿ ರೂಪಿಸುತ್ತ ಆನಂದ ಅನುಭವಿಸುತ್ತಾ ಬಂದಿದ್ದಾರೆ. ಗ್ರಂಥ ಸಂಪಾದನೆ ಶಾಸ್ತ್ರವು ಪ್ರಚಾರವಾದಂದಿನಿಂದ ವಿಶೇಷವಾಗಿ, ಅದಕ್ಕೂ ಮೊದಲು ಕನ್ನಡ ಕೃತಿರತ್ನಗಳನ್ನು ಸಂಪಾದಿಸುವ ಕಾರ್ಯ ನಡಿದೇ ಇದೆ. ನಮ್ಮ ಪ್ರಾಚೀನರು ಹಸ್ತಪತಿಗಳನ್ನು ಕಲಾ ಪೂರ್ಣವಾಗಿ ಅಲಂಕರಿಸುತ್ತ ಬಂದಿದ್ದಾರೆ. ಕಲಾಭಿರುಚಿಯುಳ್ಳ ಹಸ್ತಪ್ರತಿ ಚಿತ್ರಕಲಾವಿದರು ತಮ್ಮ ಕಲಾಪ್ರದರ್ಶನಕ್ಕೊಂದು ಅವಕಾಶವನ್ನು ಹಸ್ತಪ್ರತಿಗಳ ಮೂಲಕ ಹೇಗೆ ಕಲ್ಪಿಸಿಕೊಟ್ಟಿದ್ದಾರೆ ಎಂಬುದರ ಕುರಿತಾಗಿ ಈ ಅಧ್ಯಯನದಲ್ಲಿ ಹಸ್ತಪ್ರತಿ ಚಿತ್ರರಚನಾ ಪೂರ್ವದ ಹಂತ ಮತ್ತು ಕಾರ್ಯನಿರ್ವಾಹಣಾ ಹಂತವೆಂದು ಪ್ರಮುಖವಾಗಿ ಎರಡು ವಿಭಾಗಗಳನ್ನು ಮಾಡಿಕೊಂಡು ಮತ್ತೆ ಅದರಲ್ಲಿ ಉಪವಿಭಾಗಗಳನ್ನು ಮಾಡಿಕೊಂಡು ಪ್ರತಿಯೊಂದನ್ನು ವಿವರವಾಗಿ ಚರ್ಚಿಸಲಾಗಿದೆ. ಹಸ್ತಪ್ರತಿ ಚಿತ್ರರಚನೆ ಪರಿಕರಗಳನ್ನು ಅವುಗಳನ್ನು ಸಂಗ್ರಹಿಸುವ, ಸಿದ್ಧಪಡಿಸಿಕೊಳ್ಳುವ ವಿಧಿ-ವಿಧಾನಗಳನ್ನು ಸಹ ಸ್ಥೂಲವಾಗಿ ಅಧ್ಯಯನ ಮಾಡಲಾಗಿದೆ.

ಈ ಅಧ್ಯಾಯದ ಮೂಲಕ ಚಿತ್ರಕಲಾ ಕ್ಷೇತ್ರದಲ್ಲಿ ವರ್ಣಗಳ ಕುರಿತು ನಮ್ಮ ಪ್ರಾಚೀನ ಹಸ್ತಪ್ರತಿ ಚಿತ್ರಕಾರರು ನಿಸರ್ಗಮೂಲದ ವಿವಿಧ ಪರಿಕರಗಳನ್ನು ಬಳಸಿಕೊಂಡು

ವರ್ಣಗಳನ್ನು ಸಿದ್ಧಗೊಳಿಸಿಕೊಂಡು ಅವುಗಳನ್ನು ಮಿಶ್ರಣ ಮಾಡುವ ಹಲವಾರು ಕುತೂಹಲಕಾರಿ ಅಂಶಗಳು ಇಲ್ಲಿ ಪ್ರಥಮ ಬಾರಿಗೆ ಬೆಳಕಿಗೆ ಬಂದಿವೆ. ಹಸ್ತಪ್ರತಿ ಚಿತ್ರರಚನೆಯ ವಿವಿಧ ಹಂತಗಳನ್ನು ಶಾಸ್ತ್ರ ಗ್ರಂಥಗಳ ಮೂಲಕ ಇನ್ನಿತರ ಭಿತ್ತಿಚಿತ್ರ, ಶಾಸನ ಸಾಹಿತ್ಯದ ಮೂಲಕ ಚರ್ಚಿಸಲಾಗಿದೆ. ಫಲಕಗಳ ಮೇಲಿನ ಚಿತ್ರ ರಚನಾ ವಿಧಾನವನ್ನು ಚರ್ಚಿಸಿದಂತೆ ಎರಡನೆಯ ಹಂತದಲ್ಲಿ ಹಸ್ತಪ್ರತಿಗಳಮೇಲೆ ಚಿತ್ರ ರಚಿಸುವಾಗಿನ ವಿವಿಧ ಹಂತಗಳನ್ನು ಚಿತ್ರಕಲಾವಿದರ ವೈವಿಧ್ಯಮಯ ಮನೋಭಾವನೆಯನ್ನು ಕುರಿತು ವಿವರಿಸಲಾಗಿದೆ.

ದೇಶಿಯವಾಗಿ ಸಿಗುವ ಬಣ್ಣ, ಕಾಡಿಗೆ, ಅರಗು, ಚಂದನಗಳನ್ನು ಶಂಖ, ಸುಣ್ಣಗಳನ್ನು ಬಳಸಿಕೊಮಡು ಚಿತ್ರರಚಿಸಿದ್ದಾರೆ. ಪ್ರಾರಂಭದಲ್ಲಿ ಕಂಠಕ್ಕೆ ಸೀಮಿತವಾಗಿದ್ದ ಹಸ್ತಪ್ರತಿಗಳು ಕುಂಚ, ವರ್ಣಗಳಿಗೂ ಸ್ಥಾನ ನೀಡಿ ಸಾಹಿತ್ಯದೊಂದಿಗೆ ಸಾಂಸ್ಕೃತಿಕವಾಗಿಯೂ ಸಮೃದ್ಧಗೊಂಡವು. ಹೀಗೆ ಹಸಪ್ರತಿ ಚಿತ್ರರಚನೆಯ ಹಲವಾರು ವಿಧಿ, ವಿಧಾನಗಳನ್ನು ಪ್ರಸ್ತುತ ಅಧ್ಯಾಯದಲ್ಲಿ ಚರ್ಚಿಸಲಾಗಿದೆ.

ನಾಲ್ಕನೆಯ ಅಧ್ಯಾಯದಲ್ಲಿ ಹಸ್ತಪ್ರತಿ ಚಿತ್ರಕಲೆಯನ್ನು ಮುಖ್ಯವಾಗಿ ಈ ಕೆಳಗಿನ ರೀತಿಯಲ್ಲಿ ವರ್ಗೀಕರಿಸಿಕೊಂಡು ವಿವರವಾದ ಅಧ್ಯಯನವನ್ನು ಮಾಡಲಾಗಿದೆ. ಜನಪದ ಮೂಲದ ಹಸ್ತಪ್ರತಿ ಚಿತ್ರಕಲೆ, ಶಿಷ್ಟಪದ ಮೂಲದ ಹಸ್ತಪ್ರತಿಚಿತ್ರಕಲೆಗಳೆಂದು ಮತ್ತು ಶಿಷ್ಟಜನಪದ ಮೂಲದ ಹಸ್ತಪ್ರತಿ ಚಿತ್ರಕಲೆಯೆಂದು ಮುಖ್ಯವಾಗಿ ವಿಂಗಡಿಸಿಕೊಂಡು ಅಧ್ಯಯನವನ್ನು ನಡೆಸಲಾಗಿದೆ. ಜನಪದ ಮೂಲದ ಹಸಪ್ರತಿ ಚಿತ್ರಕಲೆಯಲ್ಲಿ ಜನಪದ ಹಸ್ತಪ್ರತಿಗಳನ್ನು ಆಧಾರವಾಗಿಟ್ಟುಕೊಂಡು ಅಲ್ಲಿ ರಚನೆಯಾದ ರೇಖಾಚಿತ್ರ ಮತ್ತು ವರ್ಣಚಿತ್ರ ಅಲ್ಲದೆ ರೇಖಾವರ್ಣಚಿತ್ರಗಳನ್ನು ವಿಶೇಷವಾಗಿ ವರ್ಗೀಕರಿಸಿಕೊಂಡು ಚರ್ಚೆನಡೆಸಲಾಗಿದೆ. ಶಿಷ್ಟಪದ ಮೂಲದ ಹಸ್ತಪ್ರತಿಚಿತ್ರಕಲೆಯನ್ನು ಇಲ್ಲಿ ಗಂಭೀರವಾಗಿ ಅಧ್ಯಯನಕ್ಕೆ ಒಳಪಡಿಸಲಾಗಿದ್ದು, ಶಿಷ್ಟಪದ ಮೂಲದಲ್ಲಿ ಭಾಷಾ ಮೂಲದ ಹಸ್ತಪ್ರತಿಚಿತ್ರಗಳು ಧಾರ್ಮಿಕ ಮೂಲದ ಹಸ್ತಪ್ರತಿಚಿತ್ರಗಳು ಮತ್ತು ಧಾರ್ಮಿಕೇತರ ಮೂಲದ ಹಸ್ತಪ್ರತಿಚಿತ್ರಗಳೆಂದು ವರ್ಗೀಕರಣ ಮಾಡಿಕೊಳ್ಳಲಾಗಿದೆ. ಭಾಷಾ ಮೂಲದ ಹಸ್ತಪ್ರತಿಯಲ್ಲಿ ಇನ್ನು ಅಧ್ಯಯನಕ್ಕೆ ಒಳಪಡದ ಪ್ರಾಕೃತ, ಸಂಸ್ಕೃತ ಅನ್ಯ ದೇಶೀಯ ಹಸ್ತಪ್ರತಿಗಳನ್ನು ಅಧ್ಯಯನಕ್ಕೆ ಒಳಪಡಿಸಿಕೊಳ್ಳಲಾಗಿದೆ. ಧಾರ್ಮಿಕ ಮೂಲದ ಹಸ್ತಪ್ರತಿಗಳಲ್ಲಿ ಬೌದ್ಧ, ಜೈನ, ವೀರಶೈವ, ವೈದಿಕ ಮತ್ತು ಮೊಹ್ಮದೀಯ ಹಸಪ್ರತಿ ಚಿತ್ರಗಳನ್ನು ವಿಷಯಗಳೊಂದಿಗೆ ವರ್ಗೀಕರಣ ಮಾಡಿಕೊಂಡು ಅಧ್ಯಯನಕ್ಕೆ ಒಳಪಡಿಸಿಕೊಳ್ಳಲಾಗಿದೆ.

ಧಾರ್ಮಿಕೇತರ ವಿಭಾಗದಲ್ಲಿ ಆರೋಗ್ಯ ಅಲಂಕಾರ ಮನೋರಂಜನೆ, ಸಂಗೀತ ಮೂಲದ ರಾಗಮಾಲಾ ಚಿತ್ರಗಳನ್ನು ಅಧ್ಯಯನ ಮಾಡಲಾಗಿದೆ. ಉತ್ತರ ಭಾರತದ ಹಿನ್ನಲೆಯಲ್ಲಿ ಹುಟ್ಟಿಕೊಂಡ ರಾಗಮಾಲಾ ಚಿತ್ರಪರಂಪರೆಯಂತೆ ಕನ್ನಡದ ಹಸ್ತಪ್ರತಿಗಳಲ್ಲಿ ಸಹ ರಾಗಮಾಲಾ ಚಿತ್ರಪರಂಪರೆ ಹಾಗೂ ಚಿಕಣಿ ಚಿತ್ರಪರಂಪರೆ ಮುಂತಾದ ದೇಶಿ ಚಿತ್ರಕಲೆ ಪ್ರಭಾವಗಳು ಹಸ್ತಪ್ರತಿ

ಚಿತ್ರಕಲೆ ಮೇಲಾಗಿರುವದನ್ನು ಮತ್ತು ಅವುಗಳ ಪ್ರಮುಖ ಲಕ್ಷಣಗಳನ್ನು ಗುರುತಿಸುವ, ದಾಖಲುಗೊಳಿಸುವ ಪ್ರಯತ್ನವನ್ನು ಇಲ್ಲಿ ಮಾಡಲಾಗಿದೆ. ಈ ಅಧ್ಯಾಯದಲ್ಲಿ ಹಸ್ತಪ್ರತಿ ಚಿತ್ರಕಲೆ ವಿವಿಧ ರೀತಿಯಲ್ಲಿ ಅಧ್ಯಯನಕ್ಕೊಳಪಡಿಸಲಾಗಿದೆ. ಹಸ್ತಪ್ರತಿ ಚಿತ್ರಗಳ ವೈವಿಧ್ಯಮಯವಾದ ವಸ್ತು ವಿಷಯಗಳು ಮತ್ತು ಚಿತ್ರಗಳ ಆಂತರ್ಯ ತಾಂತ್ರಿಕ, ಸಂಯೋಜನೆ ಮುಂತಾದ ಚಿತ್ರಕಲೆಯ ಹಿನ್ನಲೆ ಅಧ್ಯಯನವನ್ನು ಸ್ಥೂಲವಾಗಿ ಮಾಡಲಾಗಿದೆ. ಇದು ಕಲಾಕ್ಷೇತ್ರದಲ್ಲಿ ಕೆಲಸಮಾಡುವವರಿಗೆ ಒಂದು ಹೊಸ ಅಧ್ಯಯನದ ಸಾಧ್ಯತೆಗಳನ್ನು ತೆರೆದಿಡುವ ಪ್ರಯತ್ನವಾಗಿದೆ.

ಐದನೆಯ ಅಧ್ಯಾಯದಲ್ಲಿ ಕರ್ನಾಟಕದ ಹಸ್ತಪ್ರತಿ ಚಿತ್ರಕಲೆಯಲ್ಲಿ ಹಸ್ತಪ್ರತಿ ಚಿತ್ರಕಲಾವಿದರ ಪಾತ್ರ ಬಹು ಮುಖ್ಯವಾದುದು ಇವರು ಕಣ್ಣಿಗೆ ಕಾಣುವ ಕವಿಗಳಂತೆ, ಕವಿಪಾಠದ ಲಿಪಿಕಾರರಂತೆ : ಕಣ್ಣಿಗೆ ಕಾಣದೇ ದಾಖಲುಗೊಳ್ಳದೇ ಎಲೆ ಮರೆಯ ಕಾಯಿಯಂತೆ ತೆರೆಯಲ್ಲಿಯೇ ಉಳಿದವರು ಇಂತಹ ಕಲಾವಿದರ ಪಾತ್ರವೂ ತುಂಬಾ ಹಿರಿದಾದುದು. ಅದರಲ್ಲೂ ಕನ್ನಡ ನಾಡಿನ ಕರ್ನಾಟಕದ ಹಸ್ತಪ್ರತಿ ಚಿತ್ರಕಲಾವಿದರ ಚರಿತ್ರೆಯಂತೂ ಅನುಪಮವಾದುದು. ಅವರು ಕನ್ನಡ ನಾಡಿನ ಕಲೆಯನ್ನು ಕಲೆಗಾಗಿ ಕಲೆ ಎಂದು ಸೀಮಿತಗೊಳಿಸದೆ ಈ ನಾಡಿನ ಸಂಸ್ಕೃತಿಯಂತೆ ಧರ್ಮಕ್ಕಾಗಿ ಚಿತ್ರಕಲೆ, ಜೀವನಕ್ಕಾಗಿ ಚಿತ್ರಕಲೆ, ಬದುಕೇ ಒಂದು ಕಲೆ ಎಂದು ಭಾವಿಸಿಕೊಂಡಿರುವ ಈ ಮಹಾನುಭಾವರುಗಳು. ಕರ್ನಾಟಕ ಹಸ್ತಪ್ರತಿಯಲ್ಲಿ ಚಿತ್ರಗಳ ಅಡಿಯಲ್ಲಿಯ ತಮ್ಮ ಹೆಸರು, ಉಲ್ಲೇಖ, ದಿನದ ಅಂಕದಂತಹ ಯಾವ ಕುರುಹಿನ ವಿವರವನ್ನು ನೀಡದೆ. ತಮ್ಮ ಕಲಾ ಸೇವೆಯನ್ನು ದೇವರದೇ ಸೇವೆ ಎಂದು ಭಾವಿಸಿಕೊಂಡಿರುವ ಹಿರಿಮೆ ಇವರದಾಗಿದೆ.

ಪ್ರಾಚೀನ ಸಾಹಿತ್ಯ ಶಾಸನಗಳಲ್ಲಿ ಉಲ್ಲೇಖಿತರಾದ ಚಿತ್ರಕಾರರ ಕುರಿತು ಅವರ ನೈಪುಣ್ಯತೆಗಳನ್ನು ಮತ್ತು ಮಧ್ಯಾದೀಯ ಅರಸರ ಕಾಲದಲ್ಲಿಯ ಚಿತ್ರಕಾರರು, ವಿಜಯನಗರದ ಅರಸರ ಕಾಲದಲ್ಲಿ ಚಿತ್ರಕಲಾವಿದರು ಮೈಸೂರ ಅರಸರ ಕಾಲದಲ್ಲಿ ವಿಶೇಷವಾಗಿ ಕಂಡುಬರುವ ಚಿತ್ರಕಲಾವಿದರು ಅಲ್ಲದೇ ಇನ್ನೂ ಜನಪದ ಮತ್ತು ಶಿಷ್ಟಪದ ಹಸ್ತಪ್ರತಿ ಚಿತ್ರಕಲೆಯನ್ನು ರಚಿಸುವ ಪರಂಪರೆಯನ್ನು ಉಳಿಸಿಕೊಂಡು ಬಂದಿರುವ ತಾಳಿಕೋಟೆಯ ಜಿನಗಾರರು, ಕಲಘಟಗಿಯ ಚಿತ್ರಕಾರರು, ಗೋಕಾಕ, ಕಂಪಲಿ, ಕನಕಗಿರಿ ಮುಂತಾದ ಚಿತ್ರಕಾರರ ಕುರಿತು ಸ್ಥೂಲವಾಗಿ ಚರ್ಚಿಸಲಾಗಿದೆ.

ಈ ಕಲಾವಿದರಿಗೆ ಆಯಾ ಪ್ರದೇಶದ ವಿವಿಧ ಶೈಲಿ ಮತ್ತು ಪ್ರಭಾವ, ಪ್ರೇರಣೆಗಳು ಸಹಜವಾಗಿ ಆಗಿವೆ. ಬೇರೆ ಬೇರೆ ಧರ್ಮದ ಬೇರೆ ಬೇರೆ ಕಾಲಮಾನದಲ್ಲಿ ರಚನೆಯಾದ ಹಸ್ತಪ್ರತಿಗಳ ಚಿತ್ರಗಳಲ್ಲಿ ಇಂತಹ ವೈವಿಧ್ಯತೆ ಇದ್ದು ಅಲ್ಲೆಲ್ಲಾ ಆಯಾ ಕಾಲಮಾನದಲ್ಲಿ ಬದುಕಿದ ಕಲಾವಿದರ ವಿಶಿಷ್ಟವಾದ ಕಲಾರಚನೆ, ತಂತ್ರಗಾರಿಕೆ ಇರುವದನ್ನು ಕಾಣುತ್ತೇವೆ.

ಈ ಅಧ್ಯಾಯದ ಮೂಲಕ ಅನೇಕ ಹಸ್ತಪ್ರತಿ ಚಿತ್ರಕಲೆಯ ಕಲಾವಿದರನ್ನು ವ್ಯವಸ್ಥಿತವಾಗಿ ವರ್ಗೀಕರಿಸಿಕೊಂಡು ಅಧ್ಯಯನಕ್ಕೆ ಒಳಪಡಿಸಲಾಗಿದೆ. ಚಿತ್ರಕಲಾವಿದರ ಪ್ರಮುಖ

ಎಂಟನೆಯ ಅಧ್ಯಾಯದಲ್ಲಿ ಕರ್ನಾಟಕದ ಹಸ್ತಪ್ರತಿ ಚಿತ್ರಕಲೆಗಳಿಗಿರುವ ಆಪತ್ತುಗಳನ್ನು ಅಧ್ಯಯನ ಮಾಡಿದ ನಂತರ ಅವುಗಳಿಗಿರುವ ಪ್ರಾಕೃತಿಕ ಮತ್ತು ಮಾನವನಿರ್ಮಿತ ಆಪತ್ತುಗಳನ್ನು ವೈಜ್ಞಾನಿಕ ವಿಧಾನದಿಂದ ಯಾವರೀತಿ ನಿವಾರಿಸಬಹುದು ಎಂಬುದನ್ನು ಈ ಅಧ್ಯಾಯದಲ್ಲಿ ಚರ್ಚಿಸಲಾಗಿದೆ. ಸಾಮಾನ್ಯವಾಗಿ ಹಸ್ತಪ್ರತಿಗಳಿಗೆ ಲೇಪಿಸುವ ತೈಲವನ್ನು ಈ ವರೆಗೂ ಆಯುರ್ವೇದ ತೈಲದಿಂದ ರಚಿಸಲಾಗಿತ್ತು. ಈ ತೈಲಕ್ಕೆ ನಿರ್ಧಿಷ್ಟವಾದ ರಾಸಾಯನಿಕ ಅಂಶ ತಿಳಿದಿರಲಿಲ್ಲ. ಮತ್ತು ತಿಳಿದ ವಿದ್ವಾಂಸರು ಅದರ ರಚನಾ ಕ್ರಮವನ್ನು ತಿಳಿಸಿರಲಿಲ್ಲ. ಈ ಕಾರಣದಿಂದಲೂ ಅಸಂಖ್ಯಾತ ಹಸ್ತಪ್ರತಿಗಳು ಹಾಳಾದ ಉದಾಹರಣೆಗಳು ನಮ್ಮಲ್ಲಿ ಇವೆ. ಇತ್ತೀಚೆಗೆ ಗಜಸಂಚೆರಸದ ತೈಲಲೇಪನ, ಧೂಮ ಕವಾಟ, ಶಿಲಿಂದ್ರಗಳ ನಿವಾರಣೆ, ಕೀಟಗಳ ನಿಯಂತ್ರಣ ಇವೆಲ್ಲ ಕ್ರಮಗಳನ್ನು ವೈಜ್ಞಾನಿಕ ತಳಹದಿಯಿಂದ ನಿರ್ವಹಿಸುವ ಮತ್ತು ವಿಶೇಷವಾಗಿ ಹಸ್ತಪ್ರತಿ ಚಿತ್ರಗಳನ್ನು ಅವುಗಳ ಮೂಲ, ವರ್ಣಗಳು ಹಾಳಾಗದಂತೆ ಯಥಾವತ್ತಾಗಿ ದಾಖಲಿಸುವ ವಿವಿಧ ರೀತಿಯ ಆಧುನಿಕ ಗಣಕಯಂತ್ರ ಮತ್ತು ಸಿ.ಡಿ.ಗಳ ಮೂಲಕ ಇತರ ಯಂತ್ರೋಪಕರಣಗಳನ್ನು ಬಳಸಿ ಅವುಗಳನ್ನು ಸಂರಕ್ಷಿಸುವ ವಿವಿಧ ವಿಧಿ ವಿಧಾನಗಳನ್ನು ಕುರಿತು ಇಲ್ಲಿ ಚರ್ಚಿಸಲಾಗಿದೆ.

ಅಧ್ಯಯನದ ಕೆಲವು ಪ್ರಮುಖ ಫಲಿತಗಳು

★ ಕರ್ನಾಟಕ ಹಸ್ತಪ್ರತಿ ಚಿತ್ರಕಲೆಯು ಕನ್ನಡ ಸಾಹಿತ್ಯ, ಇತಿಹಾಸ ಮತ್ತು ಚಿತ್ರಕಲೆಗಳಿಗಿರುವ ಸಂಬಂಧದ ಕೊಂಡಿಯಾಗಿ ಹೇಗೆ ಬೆಳೆದುಕೊಂಡು ಬಂದಿವೆ ಎಂಬುದನ್ನು ಅಧ್ಯಯನಕ್ಕೆ ಒಳಪಡಿಸಲಾಗಿದೆ.

★ ಕರ್ನಾಟಕ ಹಸ್ತಪ್ರತಿ ಚಿತ್ರಕಲೆಗೆ ಇರುವ ಐತಿಹಾಸಿಕ ಚರಿತ್ರೆಯನ್ನು ಕಟ್ಟಿಕೊಡುವದಲ್ಲದೆ ಕರ್ನಾಟಕದಲ್ಲಿ ಹಸ್ತಪ್ರತಿ ಚಿತ್ರಕಲೆಯೂ ಸಂಸ್ಕೃತ, ಪ್ರಾಕೃತ, ಕನ್ನಡ ಮತ್ತು ಮಹ್ಮದೀಯ ಭಾಷೆಗಳಲ್ಲಿ ಲಭ್ಯವಿರುವ ಹಸ್ತಪ್ರತಿಗಳನ್ನು ಅಧ್ಯಯನಕ್ಕೆ ಒಳಪಡಿಸಲಾಗಿದೆ.

★ ಕರ್ನಾಟಕ ಹಸ್ತಪ್ರತಿ ಚಿತ್ರಕಲೆಯು ಸಿದ್ದತೆಯ ವಿಧಿ-ವಿಧಾನಗಳನ್ನು ಸಮೀಕ್ಷಿಸಲಾಗಿದೆ. ಹಸ್ತಪ್ರತಿಯ ಪರಿಕರಗಳಾದ ಫಲಕದ ಗರಿಯ ಸಿದ್ದತೆಯನಂತರ ಬರುವ ಕಲಾವಿದನ ವರ್ಣಗಾರಿಕೆ ವಿಧಿ-ವಿಧಾನಗಳನ್ನು ಅಧ್ಯಯನಕ್ಕೆ ಒಳಪಡಿಸಲಾಗಿದೆ.

★ ಕರ್ನಾಟಕದ ಹಸ್ತಪ್ರತಿ ಚಿತ್ರಕಲೆಯಕಲಾವಿದರು ಚರಿತ್ರೆಯಲ್ಲಿ ದಾಖಲಾತಿಯನ್ನು ಕಾಣದವರಾಗಿದ್ದರು. ಹಸ್ತಪ್ರತಿಗಳಲ್ಲಿಯ ಲಿಪಿಕಾರ, ಆತನ ಕಂಠ, ಮಸಿ ಮತ್ತು ಯಾತನೆಯ ಬದುಕು ಹಸ್ತಪ್ರತಿಗಳಲ್ಲಿಯೋ, ಅಥವಾ ಪುಷ್ಪಿಕೆಗಳಲ್ಲಿಯೋ ದಾಖಲುಗೊಂಡಿವೆ. ಆದರೆ ಹಸ್ತಪ್ರತಿಚಿತ್ರಕಲಾವಿದರ ಕಲಾಕೌಶಲ್ಯ, ಬಣ್ಣಗಾರಿಕೆ, ಬೆಡಗು ಮತ್ತು ಅವರ ಬಡತನದ ಬದುಕು ಜೀವನ ಸಾರಸ್ವತ ಲೋಕದಲ್ಲಿ ದಾಖಲುಗೊಂಡಿದ್ದಿಲ್ಲ. ಅವುಗಳನ್ನು ಈ ಅಧ್ಯಯನದ ಮುಖಾಂತರ ದಾಖಲುಗೊಳಿಸಲಾಗಿದೆ.

★ ಕರ್ನಾಟಕದ ಹಸ್ತಪ್ರತಿ ಚಿತ್ರಕಲೆಯು ವಸ್ತು ವಿಷಯಗಳನ್ನು ವರ್ಗೀಕರಿಸಿಕೊಂಡು

ಅಧ್ಯಯನಮಾಡಲಾಗಿದೆ. ಜನಪದ ಶಿಷ್ಟರೊಂದಿಗೆ ಭಾಷೆ, ಧರ್ಮ ಮತ್ತು ಧಾರ್ಮಿಕೇತರ ಹಿನ್ನೆಲಯಲ್ಲಿ ಚಿತ್ರಕಲೆಯ ವಸ್ತುವಿಷಯಗಳೊಂದಿಗೆ ಚರ್ಚಿಸಲಾಗಿದೆ.

★ ಕರ್ನಾಟಕ ಹಸ್ತಪ್ರತಿ ಚಿತ್ರಕಲೆಯ ಕುರಿತು ಕನ್ನಡ ಸಾಹಿತ್ಯವಲಯ ಗುರುತಿಸಲಾಗದ ರಸವಿಷಯಗಳ ಬಗ್ಗೆ ಇಲ್ಲಿ ಚರ್ಚಿಸಲಾಗಿದೆ. ಕರ್ನಾಟಕದ ಹಸ್ತಪ್ರತಿಗಳಲ್ಲಿಯ ಸೌಂದರ್ಯ ಸಮೀಕ್ಷಾ ಕಾರ್ಯವನ್ನು ಇಲ್ಲಿ ಮಾಡಲಾಗಿದೆ.

★ ಕರ್ನಾಟಕದ ಹಸ್ತಪ್ರತಿ ಚಿತ್ರಗಳಲ್ಲಿರುವ ಆಪತ್ತುಗಳು ಅವುಗಳಲ್ಲಿ ನಿಸರ್ಗ, ಮತ್ತು ಮಾನವರ ಆಪತ್ತುಗಳು ಹೇಗಿವೆ ಎಂಬುದನ್ನು ಆಪತ್ತುಗಳ ಸ್ವರೂಪ ಮತ್ತು ಅವುಗಳ ಕುರಿತು ಅಧ್ಯಯನಮಾಡಲಾಗಿದೆ.

★ ಹಸ್ತಪ್ರತಿ ಆಪತ್ತುಗಳನ್ನು ನಿವಾರಿಸಿ ಅವುಗಳ ಸಂರಕ್ಷಣೆಗೆ ವೈಜ್ಞಾನಿಕ ಕ್ರಮಗಳನ್ನು ಹೇಗೆ ಅಳವಡಿಸಿಕೊಳ್ಳಬಹುದು ಎಂಬುದನ್ನು ಇಲ್ಲಿ ಚರ್ಚಿಸಲಾಗಿದೆ.

★ ಹಸ್ತಪ್ರತಿಗಳ ಕುರಿತು ಮುಂಬರಲಿರುವ ಅಧ್ಯಯನ ಶೀಲರಿಗೆ ಅನುಕೂಲವಾಗುವಂತೆ ಲಭ್ಯ ಹಸ್ತ ಪ್ರತಿ ಬಂಢಾರಗಳ ಕುರಿತು ವಿವರಗಳನ್ನು ಒದಗಿಸಲಾಗಿದೆ.

★ ಕರ್ನಾಟಕದ ಚರಿತ್ರೆಯಲ್ಲಿಯ ನಿರ್ಲಕ್ಷ್ಯಕ್ಕೊಳಗಾದ ವಾಸ್ತುಶಿಲ್ಪ, ಚಿತ್ರ, ಸಂಗೀತ ದಂತಹ ಹಸ್ತಪ್ರತಿ ಚಿತ್ರಗಳನ್ನು ಈ ಪ್ರಬಂಧದಲ್ಲಿ ದಾಖಲೀಕರಣಗೊಳಿಸುವದರೊಂದಿಗೆ ಅವುಗಳಕುರಿತು ಅವುಗಳ ವಸ್ತು ವಿಷಯ, ಸ್ವರೂಪ ಮತ್ತು ವರ್ಣಗಾರಿಕೆಯನ್ನು ಕುರಿತು ಚರ್ಚಿಸಲಾಗಿದೆ. ಹೊಯ್ಸಳರ ಶಿಲ್ಪಕಲೆಯಂತೆ ಅವರ ಚಿತ್ರಕಲೆಯೂ ಹೇಗೆ ಅಮೋಘವಾಗಿತ್ತೆಂಬುದನ್ನು ಅಧ್ಯಯನಕ್ಕೆ ಒಳಪಡಿಸಲಾಗಿದೆ.

★ ಕರ್ನಾಟಕದ ಹಸ್ತಪ್ರತಿಗಳಲ್ಲಿ ಯೋಗಶಾಸ್ತ್ರದ ನಾಡಿ, ಕುಂಡಿನಿ, ಬ್ರಹ್ಮಕಮಲದಳ, ಸಹಸ್ರಕಮಲದಳಗಳ ಕುರಿತು ನಮ್ಮ ಪ್ರಾಚೀನರು ವಿಷಯಗಳನ್ನು ಇಲ್ಲಿ ಚರ್ಚಿಸಲಾಗಿದೆ.

★ ವಚನಕಾರರು ಚಿತ್ರಕಲೆಯನ್ನು ಕುರಿತು ತಮ್ಮ ವಚನಗಳಲ್ಲಿ ಹೇಳಿಕೊಂಡಿರುವ ಅನೇಕ ವಿಷಯಗಳೊಂದಿಗೆ ವೀರಶೈವ ಹಸ್ತಪ್ರತಿಯ ಉದ್ದರಣೆ, ಕರಣಹಸಗೆ ಮತ್ತು ಸಕೀಲಗಳ ಕುರಿತು ಅಧ್ಯಯನವನ್ನು ಮಾಡಲಾಗಿದೆ.

★ ವಚನಕಾರರಂತೆ ಬರುವ ಹರಿದಾಸರ ಕುರಿತು ಮತ್ತು ಮಹ್ಮದೀಯ ಅರಸರು ಹಸ್ತಪ್ರತಿ ಚಿತ್ರಕಲೆಯ ಕುರಿತು ಅಧ್ಯಯನ ಕೈಗೊಂಡಿದ್ದು ಅದರ ವಿವರವನ್ನು ಈ ಪ್ರಬಂಧದಲ್ಲಿ ಅಳವಡಿಸಲಾಗಿದೆ.

ಕರ್ನಾಟಕದ ಹಸ್ತಪ್ರತಿ ಚಿತ್ರಕಲೆಯು ಕ್ರಿ.ಶ.ಪೂ.1500ರಿಂದ ಕ್ರಿ.ಶ.1800ರ ವರೆಗೂ ಸುಮಾರು 3200 ವರ್ಷಗಳಷ್ಟು ವ್ಯಾಪಕ ಅವಧಿಯ ಅಧ್ಯಯನವನ್ನು ಒಳಗೊಂಡಿದೆ. ವೇದಕಾಲದ ಪ್ರಾರಂಭದಿಂದ ಸಂಸ್ಕೃತಯುಗವಾಗಿ, ಪ್ರಾಕೃತಯುಗವಾಗಿ, ಕನ್ನಡದ ಯುಗವಾಗಿ ಕರ್ನಾಟಕದ ಬೌದ್ಧ ಜೈನ, ವೀರಶೈವ, ವೈದಿಕ ಹಾಗೂ ಮಹ್ಮದೀಯ ಧಾರ್ಮಿಕ ಹಿನ್ನೆಲೆಯಲ್ಲದೇ

ಧಾರ್ಮಿಕೇತರ ಹಿನ್ನೆಲೆಗಳಾದ ಸಂಗೀತ, ಕ್ರೀಡೆ, ಅಲಂಕಾರ ಮತ್ತು ಮನೋರಂಜನೆಗಳಲ್ಲದೇ ಆಯುರ್ವೇದ, ಯೋಗಶಾಸ್ತ್ರಗಳ ಹಿನ್ನೆಲೆಯಲ್ಲಿಯೂ ಲಭ್ಯ ಹಸ್ತಪ್ರತಿಗಳನ್ನು ಆಕರಗಳನ್ನಾಗಿಟ್ಟುಕೊಂಡು ಅಧ್ಯಯನಕ್ಕೆ ಒಳಪಡಿಸಲಾಗಿದೆ.

ಮೊಗಲ್ ಕಲಾಶೈಲಿಯ ಮತ್ತೊಂದು ರೂಪದಲ್ಲಿ ಕರ್ನಾಟಕದಲ್ಲಿ ಬೆಳೆದಿರುವ ದಖನಿ ಚಿತ್ರಕಲೆಯಲ್ಲಿರುವ ಚಿತ್ರಗಳನ್ನು ಅಧ್ಯಯನಕ್ಕೆ ಒಳಪಡಿಸಲಾಗಿದೆ. ತಾಳಪತ್ರಿಯಿಂದ ಕಾಗದ ಪತ್ರಕ್ಕೆ ಬದಲಾಗುವ ತಾಂತ್ರಿಕತೆಯನ್ನು ಬದಲಾದ ಕಾಲಘಟ್ಟ ವರ್ಣವಿನ್ಯಾಸವನ್ನು ಈ ಅಧ್ಯಯನಕ್ಕೆ ಒಳಪಡಿಸಲಾಗಿದೆ. ಅಕ್ಬರ್ ಬಾದಷಾಹನಂತೆ ಇಮ್ಮಡಿ ಆದಿಲ್‌ಶಾಹನು ಇಸ್ಲಾಂ ಧರ್ಮವನ್ನು ಕುರಿತು ಹೊಸಚೌಕಟ್ಟಿನಲ್ಲಿ ಚರ್ಚಿಸಿರುವ ವಿಷಯದಲ್ಲಿ ಅವರ ಹಸ್ತಪ್ರತಿಗಳಲ್ಲಿ ದೊರೆಯುವ ಸರಸ್ವತಿ, ಗಣೇಶ, ಶಿವನಂತಹ ಚಿತ್ರಗಳ ವಿಷಯಗಳನ್ನೇ ಕುರಿತು ಇಲ್ಲಿ ಚರ್ಚಿಸಲಾಗಿದೆ. ಇವುಗಳೆಲ್ಲವೂಗಳ ಜೊತೆಗೆ ಹಸ್ತಪ್ರತಿಗಳಲ್ಲಿ ಹುಟ್ಟಿಕೊಳ್ಳುವ ದಖನಿ ಶೈಲಿ, ಧಾರ್ಮಿಕವಿಚಾರ, ಸ್ತ್ರೀಯರವಸ್ತುವಿನ್ಯಾಸ, ಮತ್ತು ಹಿನ್ನೆಲೆ ಮತ್ತು ಮುನ್ನೆಲೆಗಳನ್ನು ಅಧ್ಯಯನಕ್ಕೆ ಒಳಪಡಿಸಲಾಗಿದೆ.

ಆಧುನಿಕ ಯುಗದಲ್ಲಿ ಬರುವ ಮೈಸೂರಿನ ಮುಮ್ಮಡಿ ಕೃಷ್ಣರಾಜ ಒಡೆಯರ ಕಾಲಘಟ್ಟದಲ್ಲಿ ವಿಜಯನಗರದ ಕಾಲವೇ ಪುರ್ಬವಿಸಿದಂತೆ ರೂಪಗೊಂಡಿರುವ ಅನೇಕ ಹಸ್ತಪ್ರತಿಗಳ ಅಧ್ಯಯನಕ್ಕೆ ಒಳಪಡಿಸಲಾಗಿದೆ. ಮುಮ್ಮಡಿ ಕೃಷ್ಣರಾಜರ ಒಂಭತ್ತು ತತ್ವನಿಧಿಗಳಲ್ಲಿ ಪ್ರಕಟಿತ ತತ್ವನಿಧಿ ಶ್ರೀತತ್ವನಿಧಿ, ವಿಷ್ಣುತತ್ವನಿಧಿ, ಶಕ್ತಿತತ್ವನಿಧಿ ಗಳಲ್ಲಿಯ ಸ್ವರಚೂಡಾಮಣಿ ಚಿತ್ರಗಳನ್ನು ಅಧ್ಯಯನಕ್ಕೆ ಒಳಪಡಿಸಲಾಗಿದೆ. ಇದರಂತೆ ಮನೋರಂಜನೆ, ಕ್ರೀಡೆಗಳಿಗಾಗಿ ದೊರೆಯುವ ಅನೇಕ ಮನರಂಜನೆ ಹಸ್ತಪ್ರತಿಗಳಲ್ಲಿಯ ವಿಷಯವನ್ನು ಆಯುದ್ಧಕೊಂಡು ಅಧ್ಯಯನಕ್ಕೆ ಒಳಪಡಿಸಿಕೊಳ್ಳಲಾಗಿದೆ. ಇದರಂತೆ ಕನ್ನಡ ಸಾಹಿತ್ಯದಲ್ಲಿ ಚಿತ್ರಗಳೊಂದಿಗೆ ರೂಪಗೊಂಡಿರುವ ಕನ್ನಡ ಚಿತ್ರಕಾವ್ಯದಂತಹ ಹಸ್ತಪ್ರತಿ ಚಿತ್ರಗಳನ್ನು ಅಧ್ಯಯನಕ್ಕೆ ಬಳಸಿಕೊಳ್ಳಲಾಗಿದೆ.

ಈ ಮೇಲಿನ ಅಧ್ಯಯನವು ಹಸ್ತಪ್ರತಿ ಚಿತ್ರಕಲೆಯ ಅತ್ಯಂತ ಸ್ಥೂಲವಾದ ಅಧ್ಯಯನವಾಗಿದ್ದು ಹಸ್ತಪ್ರತಿಯ ಕೆಲವು ನಮೂನೆಗಳನ್ನು ಮಾತ್ರ ಆದರಿಸಿ ಅಧ್ಯಯನ ನಡೆಸಲಾಗಿದೆ. ಇನ್ನೂ ನೂರಾರು ಜನರು ಈ ಕ್ಷೇತ್ರದಲ್ಲಿ ಅಧ್ಯಯನ ಮಾಡುವಷ್ಟು ವಿಷಯದ ವ್ಯಾಪಕತೆ ಇಲ್ಲಿ ಹೇರಳವಾಗಿದೆ. ಮುಂದಿನ ಅಧ್ಯಯನಕಾರರಿಗೆ ಪ್ರಸ್ತುತ ಅಧ್ಯಯನ ಆಕರಸಾಮಗ್ರಿಯಾಗಿ ಸಹಾಯಕವಾದರೆ ಈ ಶ್ರಮ ಸಾರ್ಥಕವಾದಂತೆ.

*****



ಅನುಬಂಧಗಳು


1. ಸಂಕ್ಷೇಪ ಸೂಚಿ

1.	ಕ.ವಿ.ವಿ.ಧಾ	:	ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.
2.	ಕ.ವಿ.ವಿ.ಹಂ.	:	ಕನ್ನಡ ವಿಶ್ವವಿದ್ಯಾಲಯ, ಹಂಪಿ
3.	ಕ.ಸಾ.ಪ	:	ಕನ್ನಡ ಸಾಹಿತ್ಯ ಪರಿಷತ್
4.	ಕ.ಲ.ಕ.ಅ.	:	ಕರ್ನಾಟಕ ಲಲಿತಕಲಾ ಅಕಾಡೆಮಿ
5.	ಕ್ರಿ.ಪೂ.	:	ಕ್ರಿಸ್ತಪೂರ್ವ
6.	ಗು.ವಿ.ಗು.	:	ಗುಲಬರ್ಗಾ ವಿಶ್ವವಿದ್ಯಾಲಯ, ಗುಲಬರ್ಗಾ
7.	ಚಿ.ಪ.ಬೆಂ.	:	ಚಿತ್ರಕಲಾ ಪರಿಷತ್, ಬೆಂಗಳೂರು.
8.	ಪು.	:	ಪುಟ
9.	ಮ.ಪ್ರ.	:	ಮಹಾಪ್ರಬಂಧ
10.	ಮೈ.ವಿ.ವಿ.	:	ಮೈಸೂರ ವಿಶ್ವವಿದ್ಯಾಲಯ
11.	ತೊ.ಚಿ.	:	ತೊಗಲುಗೊಂಬೆ ಚಿತ್ರಗಳು
12.	P	:	Page.

2. ಚಿತ್ರ ಋಣ / ನೆರವು

1. ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ
2. ಕನ್ನಡ ವಿಶ್ವವಿದ್ಯಾಲಯ, ಹಂಪಿ.
3. ಕುವೆಂಪು ವಿಶ್ವವಿದ್ಯಾಲಯ, ಶಿವಮೊಗ್ಗ
4. ಗುಲರ್ಗಾ ವಿಶ್ವವಿದ್ಯಾಲಯ, ಗುಲಬರ್ಗಾ
5. ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು.
6. ಮೈಸೂರು ವಿಶ್ವವಿದ್ಯಾಲಯ, ಮೈಸೂರು.
7. ಲಿಂಗಾಯತ ಅಧ್ಯಯನ ಕೇಂದ್ರ, ಜಗದ್ಗುರು ತೋಂಟದಾರ್ಯ ಮಠ, ಗದಗ.
8. ಶ್ರೀ ಮಂಜುನಾಥೇಶ್ವರ ಸಂಸ್ಕೃತಿ ಸಂಶೋಧನಾ ಕೇಂದ್ರ, ಧರ್ಮಸ್ಥಳ
9. ಲಿಂಗಾಯತ ಅಧ್ಯಯನ ಕೇಂದ್ರ, ರುದ್ರಾಕ್ಷಿಮಠ, ನಾಗನೂರ, ಬೆಳಗಾಂವ
10. ಶ್ರೀ. ಬಿ.ಎಂ.ಶ್ರೀ ಪ್ರತಿಷ್ಠಾನ, ಎನ್.ಆರ್.ಕಾಲನಿ, ಬೆಂಗಳೂರು.
11. ಇತಿಹಾಸ ಅನುಸಂಧಾನ ಪರಿಷತ್, ಬೆಂಗಳೂರು.
12. ಕನ್ನಡ ಸಾಹಿತ್ಯ ಪರಿಷತ್, ಬೆಂಗಳೂರು
13. ಕರ್ನಾಟಕ ಲಲಿತಕಲಾ ಅಕಾಡೆಮಿ,ಬೆಂಗಳೂರು.
14. ಕನ್ನಡ ಸಾಹಿತ್ಯ ಅಕಾಡೆಮಿ, ಬೆಂಗಳೂರು.
15. ಕೇಂದ್ರ ಲಲಿತಕಲಾ ಅಕಾಡೆಮಿ, ಹೊಸದೆಹಲಿ.

3. ಕರ್ನಾಟಕದ ಹಸ್ತಪ್ರತಿ ಚಿತ್ರಕಲೆಯ ನೆಲೆಗಳು



ನಕಾಶೆ ಅಳತೆಗೆ ಒಳಪಟ್ಟಿಲ್ಲ

4. ಕರ್ನಾಟಕದ ಪ್ರಮುಖ ಹಸ್ತಪ್ರತಿಗಳ ಸಂಗ್ರಹದ ನೆಲೆಗಳು

1. ಹಸ್ತಪ್ರತಿ ಗ್ರಂಥಾಲಯ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ ವಿದ್ಯಾರಣ್ಯ
ತಾ॥ಹೊಸಪೇಟ ಜಿ॥ ಬಳ್ಳಾರಿ.

2. ಕನ್ನಡ ಅಧ್ಯಯನ ಪೀಠ
ಕರ್ನಾಟಕ ವಿಶ್ವವಿದ್ಯಾಲಯ, ಪಾವಟೆನಗರ,
ಧಾರವಾಡ.

3. ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ
ಮಾನಸಗಂಗೋತ್ರಿ,
ಮೈಸೂರ ವಿಶ್ವವಿದ್ಯಾಲಯ, ಮೈಸೂರ.

4. ಹಸ್ತಪ್ರತಿ ವಿಭಾಗ
ಬೆಂಗಳೂರು ವಿಶ್ವವಿದ್ಯಾಲಯ,
ಬೆಂಗಳೂರು.

5. ಕನ್ನಡ ಅಧ್ಯಯನ ಸಂಸ್ಥೆ,
ಗುಲಬರ್ಗಾ ವಿಶ್ವವಿದ್ಯಾಲಯ,
ಗುಲಬರ್ಗಾ.

6. ಕನ್ನಡ ಸಾಹಿತ್ಯ ಪರಿಷತ್ತು
ಚಾಮರಾಜ ಪೇಟೆ,
ಬೆಂಗಳೂರು.

7. ಸರಕಾರಿ ವಸ್ತುಸಂಗ್ರಹಾಲಯ
ಗೋಲಗುಮ್ಮಜ ಆವರಣ,
ಬಿಜಾಪುರ.

8. ಪ್ರಾಚ್ಯ ಸಂಶೋಧನಾಲಯ
ಮೈಸೂರು ವಿಶ್ವವಿದ್ಯಾಲಯ, ಮೈಸೂರು.

9. ಲಿಂಗಾಯತ ಶಿಕ್ಷಣ ಸಂಶೋಧನಾ ಕೇಂದ್ರ
ನಾಗನೂರ ರುದ್ರಾಕ್ಷಿಮಠ, ಬೆಳಗಾಂವ

10. ವೀರಶೈವ ಅಧ್ಯಯನ ಸಂಸ್ಥೆ
ಜಗದ್ಗುರು ತೋಂಟದಾರ್ಯ ಸಂಸ್ಥಾನಮಠ
ಗದಗ.

11. ಶ್ರೀ ಜ. ಗುರುಸಿದ್ದೇಶ್ವರ ಸಂಸ್ಥಾನ
ಮೂರುಸಾವಿರ ಮಠ, ಹುಬ್ಬಳ್ಳಿ.

12. ಶ್ರೀ ಮಂಜುನಾಥೇಶ್ವರ ಸಂಸ್ಕೃತಿ
ಸಂಶೋಧನಾ ಕೇಂದ್ರ, ಧರ್ಮಸ್ಥಳ

13. ಸಂಸ್ಕೃತ ಸಂಶೋಧನಾ ಅಕಾಡೆಮಿ
ಮೇಲುಕೋಟೆ. ಜಿ॥ ಮಂಡ್ಯ

14. ಸ್ವಸ್ತಿಶ್ರೀ ಚಾರುಕೀರ್ತಿ ಭಟ್ಟಾರಕ ಸ್ವಾಮೀಜಿ
ಜೈನ ಮಠ, ಮೂಡಬಿದರೆ.

15. ಸ್ವಸ್ತಿಶ್ರೀ ಚಾರುಕೀರ್ತಿ ಭಟ್ಟಾರಕ ಸ್ವಾಮೀಜಿ
ಜೈನ ಮಠ, ಶ್ರವಣ ಬೆಳಗೊಳ.

16. ಬಿ.ಎಂ.ಶ್ರೀ ಪ್ರತಿಷ್ಠಾನ
ನರಸಿಂಹರಾಜ ಕಾಲನಿ,
ಬೆಂಗಳೂರು.

17. ಶಿವಯೋಗ ಮಂದಿರ
ಹಸ್ತಪ್ರತಿ ಕೇಂದ್ರ, ಶಿವಯೋಗಮಂದಿರ
ತಾ॥ ಬಾದಾಮಿ ಜಿ॥ ಬಾಗಲಕೋಟ.

18. ಶ್ರೀ ಕೆಳದಿ ಗುಂಡಾ ಜೋಯಿಸ್
ಕೆಳದಿ ಸಂಸ್ಥಾನ, ಕೆಳದಿ.
ಜಿ॥ ಶಿವಮೊಗ್ಗ.

19. ಶ್ರೀ ವ್ಯಾಸನಕೇರಿ ಪ್ರಭಂಜನಾಚಾರ್ಯ
ಹನಮಂತ ನಗರ, ಬೆಂಗಳೂರು.

ಗ್ರಂಥ ಋಣ

ಕನ್ನಡ ಗ್ರಂಥಗಳು

ಕ್ರ.ಸಂ.	ಗ್ರಂಥದ ಹೆಸರು	ಲೇಖಕರು / ಸಂಪದಾಕರು ಮತ್ತು ಪ್ರಕಾಶಕರು
1.	**ಅಪೂರ್ವ ಪಶ್ಚಿಮ** ರಾಜಲಕ್ಷ್ಮಿ ಪ್ರಕಾಶನ, ಬೆಂಗಳೂರು.1982	ಡಾ|| ಕೆ. ಶಿವರಾಮ ಕಾರಂತ
2.	**ಅವಲೋಕನ** ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ 1985	ಸಂ. ಎಚ್ಚೆಸ್ಕೆ
3.	**ಆನಂದ ಕುಮಾರ ಸ್ವಾಮಿ** ಅಕ್ಷರ ಪ್ರಕಾಶನ, ಹೆಗ್ಗೋಡು.1995	ಕೆ.ಎಸ್. ಶ್ರೀನಿವಾಸ ಮೂರ್ತಿ
4.	**ಆದಿಲ್‌ಷಾಹಿ ಆಸ್ಥಾನ ಸಾಹಿತಿ** ಕನ್ನಡ ವಿಶ್ವವಿದ್ಯಾಲಯ, ಹಂಪಿ.2000	ಡಾ|| ಕೃಷ್ಣ ಕೊಲ್ಹಾರ ಕುಲಕರ್ಣಿ
5.	**ಉದಯ ವಾಣಿ** (ದೀಪಾವಳಿ ವಿಶೇಷಾಂಕ) ಉದಯವಾಣಿ ಪ್ರೆಸ್, ಮಣಿಪಾಲ.1990	ಸಂ. ಸಂತೋಷಕುಮಾರ ಗುಲ್ವಾಡಿ
6.	**ಉರಿಯ ನಾಲಿಗೆ** ಮನೋಹರ ಗ್ರಂಥಮಾಲೆ, ಧಾರವಾಡ.1993	ಕೀರ್ತನಾಥ ಕುರ್ತಕೋಟಿ
7.	**ಉತ್ತರ ಕರ್ನಾಟಕದ ಜನಪದ ಸಾಹಿತ್ಯ**	ಡಾ|| ಎಂ. ಎಂ. ಕಲಬುರ್ಗಿ
8.	**ಕನ್ನಡ ಹಸ್ತಪ್ರತಿಗಳ ಇತಿಹಾಸ** ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.1977	ಎಚ್.ದೇವೀರಪ್ಪ
9.	**ಕನ್ನಡ ಹಸ್ತಪ್ರತಿ ಶಾಸ್ತ್ರ** ಸ್ನೇಹ ಪ್ರಕಾಶನ, ಬೆಂಗಳೂರು.1993	ಡಾ|| ಎಂ. ಎಂ. ಕಲಬುರ್ಗಿ
10.	**ಕನ್ನಡ ಜೈಮಿನಿ ಭಾರತ** ಕನ್ನಡ ಮತ್ತು ಸಂಸ್ಕೃತಿ, ನಿರ್ದೇಶನಾಲಯ, 1985	ಲಕ್ಷ್ಮೀಶ
11.	**ಕನ್ನಡ ಚಿತ್ರಕಾವ್ಯ** ಕನ್ನಡ ಅಧ್ಯಯನ ಸಂಸ್ಥೆ, ಮೈ.ವಿ.ವಿ., ಮೈಸೂರು. 1987	ಡಾ|| ಟಿ.ವಿ. ವೆಂಕಟಾಚಲ ಶಾಸ್ತ್ರಿ
12.	**ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ** ಪ್ರಸಾರಾಂಗ ಮೈಸೂರ ವಿಶ್ವವಿದ್ಯಾಲಯ, ಮೈಸೂರ. 1970	ಡಾ|| ಚಿದಾನಂದ ಮೂರ್ತಿ

14. **ಕನ್ನಡ ಹಸ್ತಪ್ರತಿಗಳು ಒಂದು ಅಧ್ಯಯನ** ಡಾ|| ಬಿ.ಕೆ. ಹಿರೇಮಠ
ವೀರಶೈವ ಅಧ್ಯಯನ ವೇದಿಕೆ ಕಸಬಾ ಜಂಬಗಿ, ಬಿಜಾಪೂರ. (ಜಿ)1992

15. **ಕರ್ನಾಟಕದಲ್ಲಿ ಚಿತ್ರಕಲೆ** ಡಾ|| ಕೆ. ಶಿವರಾಮ ಕಾರಂತ
ಪ್ರಸಾರಾಂಗ, ಮೈ.ವಿ.ವಿ., ಮೈಸೂರು.1972

16. **ಕರ್ನಾಟಕದಲ್ಲಿ ಚಿತ್ರಕಲೆ** ಡಾ|| ಕೆ. ಶಿವರಾಮ ಕಾರಂತ
ಐ.ಬಿ.ಹೆಚ್. ಪ್ರಕಾಶನ, ಬೆಂಗಳೂರು.1975

17. **ಕನ್ನಡ ಸಾಹಿತ್ಯಕೋಶ** (ಸಂ.) ರಾಜಪ್ಪ ದಳವಾಯಿ
ಕದಿರು ಪ್ರಕಾಶನ, ಮೈಸೂರು.1996

18. **ಕನ್ನಡ ದಾಖಲು ಸಾಹಿತ್ಯ** ಡಾ|| ಕೆ. ರವೀಂದ್ರನಾಥ
ಪ್ರಸಾರಂಗ ಕನ್ನಡ ವಿ.ವಿ., ಹಂಪಿ.2000

19. **ಕರ್ನಾಟ ಭಾರತ ಕಥಾಮಂಜರಿ** (ಸಂ) ಕುವೆಂಪು
ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು.1985

20. **ಕರ್ನಾಟಕ ಸಂಸ್ಕೃತಿ ಸಮೀಕ್ಷೆ** ಡಾ|| ಹೆಚ್. ತಿಪ್ಪೇರುದ್ರಸ್ವಾಮಿ
ಡಿ.ವಿ.ಕೆ. ಮೂರ್ತಿ, ಮೈಸೂರು.1968

21. **ಕರ್ನಾಟಕದ ಇತಿಹಾಸ ದರ್ಶನ** (ಸಂ) ಎಂ.ಕೃಷ್ಣರಾವ್ ಮತ್ತು ಕೇಶವ ಭಟ್ಟ
ಕರ್ನಾಟಕದ ಸಹಕಾರಿ ಪ್ರಕಾಶನ, ಮಂದಿರ. ಬೆಂಗಳೂರು 1970

22. **ಕರ್ನಾಟಕದ ಕಲೆಗಳು ಭೂಮಿಕೆ -1** ಪ್ರೊ|| ಎಸ್.ಕೆ. ರಾಮಚಂದ್ರರಾವ್
ಪ್ರಸಾರಾಂಗ, ಬೆಂಗಳೂರು ವಿ.ವಿ., ಬೆಂಗಳೂರು.1981

23. **ಕರ್ನಾಟಕದ ಜನಪದ ಚಿತ್ರಕಲೆ** ಡಾ||ಎಸ್.ಸಿ.ಪಾಟೀಲ್
ವೀರಶೈವ ಅಧ್ಯಯನ ಸಂಸ್ಥೆ ಜಗದ್ಗುರು ತೋಂಟದಾರ್ಯ ಸಂಸ್ಥಾನ ಮಠ, ಗದಗ.1993,

24. **ಕರ್ನಾಟಕದ ಪ್ರಾಗೈತಿಹಾಸಿಕ ಕಾಲದ ಕಲೆ** ಡಾ|| ಅ. ಸುಂದರ
ಕರ್ನಾಟಕ ಲಲಿತ ಕಲಾ ಅಕಾಡೆಮಿ, ಬೆಂಗಳೂರ.1994

25. **ಕಲೆಗಳು -64** ಎಂ. ಶ್ರೀಧರ ಮೂರ್ತಿ
ಪ್ರಸಾರಾಂಗ, ಬೆಂಗಳೂರು ವಿ.ವಿ., ಬೆಂಗಳೂರು.1974

27. **ಕಲಾನುಭವ** — ವಿ. ಸೀತಾರಾಮಯ್ಯ
ಪ್ರಸಾರಾಂಗ ಬೆಂ.ವಿ.ವಿ., ಬೆಂಗಳೂರು.1976

28. **ಕಲಾಪ್ರಪಂಚ** — ಡಾ|| ಕೆ. ಶಿವರಾಮ ಕಾರಂತ
ಪ್ರಸಾರಾಂಗ ಕರ್ನಾಟಕ.ವಿ.ವಿ., ಧಾರವಾಡ.1978

29. **ಕಲೆಯ ದರ್ಶನ** — ಡಾ|| ಕೆ. ಶಿವರಾಮ ಕಾರಂತ
ರಾಜಲಕ್ಷ್ಮಿ ಪ್ರಕಾಶನ, ಬೆಂಗಳೂರು.1982

30. **ಕಲೆ ಮತ್ತು ರಸಸ್ವಾಧನೆ** — ಪ್ರೊ|| ಎಂ.ಎಚ್. ಕೃಷ್ಣಯ್ಯ
ಕರ್ನಾಟಕ ಲಲಿತ ಕಲಾ ಅಕಾಡೆಮಿ, ಬೆಂಗಳೂರು.1989

31. **ಕಲೆ ಅನುಭಾವ ಮತ್ತು ಅನುಭವ** — ಚಂದ್ರಕಾಂತ ಕುಸನೂರು.
ಮಾಲಗಿತ್ತಿ ಪ್ರಿಂಟಿಂಗ್, ಪಬ್ಲಿಕೇಷನ್, ಬೆಳಗಾವಿ.1990

32. **ಕಲಾ ಸಂವೇದನೆಯ ಒಳ ನೋಟಗಳು** — ಕೆ. ವಿ. ಸುಬ್ರಹ್ಮಣ್ಯಂ
ಕರ್ನಾಟಕ ಲಲಿತಕಲಾ ಅಕಾಡೆಮಿ, ಬೆಂಗಳೂರು.1997

33. **ಕಲೆ ಎಂದರೇನು ?** — ಮೂಲ ಲಿಯೋಟಾಲ್ ಸ್ಟಾಯ್
ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು.2000

34. **ಕಲೆಯ ಗೊಂಚಲು** — ಬಿ.ವಿ.ಕೆ. ಶಾಸ್ತ್ರೀ
ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು.1994

35. **ಕಂಠಪತ್ರ** — ಡಾ|| ಎಫ್.ಟಿ. ಹಳ್ಳಿಕೇರಿ.
ವಿಕಾಸ ಪ್ರಕಾಶನ, ಹೊಸಪೇಟೆ.2003

36. **ಕಾವ್ಯಾರ್ಥ ಚಿಂತನ** — ಡಾ|| ಜಿ.ಎಸ್. ಶಿವರುದ್ರಪ್ಪ
ಪ್ರಿಯದರ್ಶಿನಿ ಪ್ರಕಾಶನ, ಬೆಂಗಳೂರು.1983

37. **ಕೀಟ ಜಗತ್ತಿಗೊಂದು ಕಿರುನೋಟ** — ಕೆ.ಎಸ್. ರವಿಕುಮಾರ
ಕೈಂತಜೆ ಪ್ರಕಾಶನ, ಪೆರುಮಗೆರಾ. (ದ.ಕ.)1998

38. **ಕೊಳಲು** — ಕುವೆಂಪು,
ಉದಯ ರವಿ ಪ್ರಕಾಶನ, ಮೈಸೂರು.1935

39. **ಗೌರವ** — (ಸಂ.) ಬಿ.ವಿ. ಶಿರೂರು
ವೀರಶೈವ ಅಧ್ಯಯನ ಸಂಸ್ಥೆ,ಶ್ರೀ ಜಗದ್ಗುರು ತೋಂಟದಾರ್ಯ ಸಂಸ್ಥಾನ ಮಠ,ಗದಗ 1986

41.	**ಗೊಂಬೆ ರಾಮರ ಸಂಸ್ಕೃತಿ** ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು. 1992	ಡಾ|| ಟಿ. ಗೋವಿಂದರಾಜು
42.	**ಚಿತ್ರಕಲೆ** ವಿದ್ಯಾನಿಧಿ ಬುಕ್‌ಡಿಪೋ ಮೈಸೂರು, 1970	ಅ.ನ. ಕೃಷ್ಣರಾವ್
43.	**ಚಿದೈಶ್ವರ್ಯ ಚಿದಾಭರಣ ಶಿವಾನುಬವ** ಕಲ್ಮಠ, ಕವಿತಾಳ, ಜಿ||ರಾಯಚೂರ 1952	ಶ್ರೀ ಮ.ನಿ. ಸಿದ್ದಲಿಂಗ ಸ್ವಾಮಿಗಳು.
44.	**ಚಿತ್ರಕಲಾ ಪ್ರಪಂಚ** ಕರ್ನಾಟಕ ಲಲಿತ ಕಲಾ ಅಕಾಡೆಮಿ ಬೆಂಗಳೂರು.1993	ಪ್ರ.ಸಂ. ಪಿ.ಆರ್.ತಿಪ್ಪೇಸ್ವಾಮಿ.
45.	**ಚಿತ್ರಕಲಾ ದರ್ಪಣ** ಕರ್ನಾಟಕ ಲಲಿತಕಲಾ ಅಕಾಡೆಮಿ ಬೆಂಗಳೂರು.1993	ವ್ಹಿ.ಟಿ. ಕಾಳೆ
46.	**ಚಿತ್ರಾಂತರಂಗ** ಪ್ರಗತಿ ಪ್ರಕಾಶನ ದಾವಣಗೇರಿ 1998	ಶಂಕರ ಪಾಟೀಲ
47.	**ತಿಪ್ಪಾಜಪ್ಪನವರ ರೇಖಾಚಿತ್ರಗಳು** ಕರ್ನಾಟಕದ ಶಿಲ್ಪಕಲಾ ಅಕಾಡೆಮಿ ಬೆಂಗಳೂರು. 2003	ಜ್ಞಾನೇಶ್ವರ ಮತ್ತು ಡಾ. ಅ.ಲ.ನರಸಿಂಹನ್
48.	**ತಿರುಳ್ಗನ್ನಡ (ಸವಿಸಂಚಯ)** 62ನೇ ಕನ್ನಡ ಸಾಹಿತ್ಯ ಸಮ್ಮೇಳನ, ಕೊಪ್ಪಳ	ಸಂ: ಎಚ್.ಎಸ್.ಪಾಟೀಲ ಅಲ್ಲಮ ಪ್ರಭು, ಬೆಟದೂರು
49.	**ದಖನಿ ಚಿತ್ರಕಲೆ** ಕರ್ನಾಟಕ ಲಲಿತಕಲಾ ಅಕಾಡೆಮಿ ಬೆಂಗಳೂರು.2001	ಡಾ| ಎಸ್.ಕೆ. ಅರುಣಿ
50.	**ದೀಪದ ಕಲಿಯರ ಕಾವ್ಯ** ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರ-1974	ಎಸ್.ವಿದ್ಯಾಶಂಕರ
51.	**ದಾರ್ಶನಿಕ ಕಾವ್ಯ ಮೀಮಾಂಸೆ** ವಿಶ್ವಕನ್ನಡ ಸಾಹಿತ್ಯ ಸಮ್ಮೇಳನ ಬೆಂಗಳೂರು, 1983	ಕುವೆಂಪು

52.	**ನಿಜದ ನೆಲೆ** ಡಾ। ಬಿ.ಕೆ.ಹಿರೇಮಠರ ಅಭಿನಂದನಾಗ್ರಂಥ ವೈರಾಗ್ಯ ಮಲ್ಲಣಾರ್ಯ ಪ್ರಕಾಶನ ಬ.ವಿ.ವಿ., ಸಂಘ ಬಾಗಲಕೋಟ.2003	ಸಂ: ಡಾ. ಎಸ್.ಸಿ.ಪಾಟೀಲ ಮತ್ತು ಸತ್ಯಾನಂದ ಪಾತ್ರೋಟ.
53.	**ಪ್ರವಾಸಿ ಕಂಡ ಇಂಡಿಯಾ (1-2)** ಪ್ರಸಾರಾಂಗ ಮೈಸೂರ ವಿ.ವಿ.ಮೈಸೂರು, 1964	ಎಚ್.ಎಲ್. ನಾಗೇಗೌಡ
54.	**ಬಸವಣ್ಣನವರ ಸಮಗ್ರ ವಚನ ಸಂಪುಟ -1** ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು.2002	ಡಾ। ಎಂ.ಎಂ.ಕಲಬುರ್ಗಿ
55.	**ಭಾರತೀಯ ಸಂಸ್ಕೃತಿ ದರ್ಶನ** ಸಾಹಿತ್ಯ ಮತ್ತು ಸಂಸ್ಕೃತಿ ಅಧ್ಯಯನ ಇಲಾಖೆ, ಮೈಸೂರು. 1962	ಡಾ। ಅ.ನ.ಕೃಷ್ಣರಾಯರು.
56.	**ಭಾರತೀಯ ಕಾವ್ಯ ಮೀಮಾಂಸೆ** ವಿಶ್ವಕನ್ನಡ ಸಮ್ಮೇಳನ 1983	ತಿ.ನಂ.ಶ್ರೀಕಂಠಯ್ಯ
57.	**ಭಾರತದ ಗ್ಯಾಜೆಟಿಯರ್ -2** ಕನ್ನಡ ಸಂಸ್ಕೃತಿ ಇಲಾಖೆ, ಬೆಂಗಳೂರು.1987	ವರದರಾಜ ಹೂಯಿಲಗೋಳ
58.	**ಭಾರತದ ದೃಶ್ಯಕಲಾವಿದರು** ಕರ್ನಾಟಕ ಲಲಿತಕಲಾ ಅಕಾಡೆಮಿ,ಬೆಂಗಳೂರು.1990	ಎನ್.ಮರಿಶಾಮಾಚಾರ್ಯ
59.	**ಮಣಿಹ** ಡಾ. ಫ.ಗು. ಹಳಕಟ್ಟಿ ಅಭಿನಂದನಾ ಗ್ರಂಥ ಬಿ.ಎಂ.ಶ್ರೀ ಸ್ಮಾರಕ ಪ್ರತಿಷ್ಠಾನ, ಬೆಂಗಳೂರು.1982	ಡಾ। ಸಿದ್ದಯ್ಯ ಪುರಾಣಿಕ
60.	**ಮಹಾಮಾರ್ಗ** (ಡಾ। ಎಂ.ಎಂ.ಕಲಬುರ್ಗಿ ಅಭಿನಂದನಾ ಗ್ರಂಥ) ವೀರಶೈವ ಅಧ್ಯಯನ ಅಕಾಡೆಮಿ ಶ್ರೀನಾಗನೂರ ರುದ್ರಾಕ್ಷಿಮಠ, ಬೆಳಗಾಂವ ಮತ್ತು ವೀರ ಶೈವ ಅಧ್ಯಯನ ಸಂಸ್ಥೆ ಜಗದ್ಗುರು ತೋಂಟದಾರ್ಯಮಠ, ಗದಗ. 1998.	ಸಂ: ಡಾ। ಸದಾನಂದ ಕನವಳ್ಳಿ ಡಾ. ವೀರಣ್ಣ ರಾಜೂರ.
61.	**ಮಾಧ್ಯಮಿಕ ಶಾಲಾ ಶಿಕ್ಷಣದಲ್ಲಿ ಚಿತ್ರಕಲಾ ಶಿಕ್ಷಣ** ಒಂದು ಅಧ್ಯಯನ. ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ -1983	ಎಸ್.ಸಿ.ಪಾಟೀಲ

62. **ಮೂರ್ತಿ ಶಿಲ್ಪದ ನೆಲೆ - ಹಿನ್ನೆಲೆ** ಪ್ರೊ: ಎಸ್.ಕೆ. ರಾಮಚಂದ್ರರಾವ್
ಪ್ರಸಾರಾಂಗ ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು. 1975

63. **ರಸೋ ವೈಸಃ** ಕುವೆಂಪು
ಉದಯರವಿ ಪ್ರಕಾಶನ, ಮೈಸೂರು.1962

64. **ರೇಖಾ ಚಿತ್ರ** ಬಿ.ಬಿ.ಕೆ.ಶಾಸ್ತ್ರಿ
ಕರ್ನಾಟಕ ಲಲಿತಕಲಾ ಅಕಾಡೆಮಿ, ಬೆಂಗಳೂರು.1991

65. **ಲಿಪಿಯ ಹುಟ್ಟು - ಬೆಳವಣಿಗೆ** ಡಾ। ದೇವರ ಕೊಂಡಾರೆಡ್ಡಿ
ಕನ್ನಡ ಪುಸ್ತಕ ಪ್ರಾಧಿಕಾರಿ ಬೆಂಗಳೂರು.2002

66. **ವಚನ ಶೋಧ -1** ಡಾ। ಎಂ. ಚಿದಾನಂದ ಮೂರ್ತಿ
ಕನ್ನಡ ಸಾಹಿತ್ಯ ಪರಿಷತ್ ಬೆಂಗಳೂರು.1998

67. **ವರ್ಣ ಸಂಚಯ** ಡಾ. ಎಸ್.ಸಿ.ಪಾಟೀಲ
ವಿಜಯ ಚಿತ್ರಕಲಾ ಮಹಾವಿದ್ಯಾಲಯ, ಇಲಕಲ್ಲ,2001

68. **ಶೃಂಗಾರ ಲಹರಿ** ಪ್ರೋ. ಎಂ.ಎಚ್.ಕೃಷ್ಣಯ್ಯ.
ಜಿ.ಎಂ.ಎನ್. ಪ್ರಕಾಶನ, ಬೆಂಗಳೂರು.1986

69. **ಶ್ರೀ ತತ್ವನಿಧಿ** ಡಾ। ಸಾಲಿಗ್ರಾಮ ಕೃಷ್ಣ ರಾಮಚಂದ್ರರಾವ್
ಕನ್ನಡ ವಿಶ್ವವಿದ್ಯಾಲಯ, ಹಂಪಿ, 1992

70. **ಶ್ರೀ ಕೃಷ್ಣ ಪಾರಿಜಾತ** ಕೃಷ್ಣ ಕಟ್ಟಿ
ಕನ್ನಡ ವಿಶ್ವವಿದ್ಯಾಲಯ, ಹಂಪಿ. 1997

71. **ಕಾಶ್ಯಪ ಶಿಲ್ಪ ಶಾಸ್ತ್ರ** ಡಾ। ಜಿ. ಜ್ಞಾನಾನಂದ
ಕರ್ನಾಟಕ ಶಿಲ್ಪಕಲಾ ಅಕಾಡೆಮಿ, ಬೆಂಗಳೂರು.1998

72. **ಸಚಿತ್ರ ರಾಮಾಯಣ** ರಾಮಚಂದ್ರ ಮಧ್ವಮಹಿಷಿ.
ಮೈಸೂರು ವಿಶ್ವವಿದ್ಯಾಲಯ, ಮೈಸೂರು.

73. **ಸತ್ಯ ಮತ್ತು ಸೌಂದರ್ಯ** ಡಾ। ಎಸ್.ಎಲ್.ಭೈರಪ್ಪ
ಸಾಹಿತ್ಯ ಭಂಡಾರ ಬೆಂಗಳೂರು. 1966

74. **ಸೌಂದರ್ಯ ಸಮೀಕ್ಷೆ** ಡಾ। ಜಿ.ಶಿವರುದ್ರಪ್ಪ
ತ.ವೆಂ. ಸ್ಮಾರಕ ಗ್ರಂಥಮಾಲೆ, ಮೈಸೂರು.1965

75. **ಸೌಂದರ್ಯ ಮತ್ತು ಕಲೆ** ಡಾ.ಕೆ.ಬಿ.ರಾಮಕೃಷ್ಣರಾವ್
ಪ್ರಸಾರಾಂಗ ಮೈಸೂರು ವಿ.ವಿ.ಮೈಸೂರು.1971

76.	**ಸೌಂದರ್ಯ ಮೀಮಾಂಸೆ** ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.1973	ಡಾ। ವ್ಹಿ.ಕೃ.ಗೋಕಾಕ
77.	**ಸೌಂದರ್ಯ ಮೀಮಾಂಸೆ** ಡಿ.ವ್ಹಿ.ಕೆ. ಮೂರ್ತಿ, ಮೈಸೂರು.1973	ಡಾ।ಜಿ. ಶ್ರೀನಿವಾಸ್
78.	**ಸಾಹಿತ್ಯ ಭಾರತಿ** ಪ್ರಸಾರಾಂಗ ಬೆಂಗಳೂರು, ವಿ.ವಿ.ಬೆಂಗಳೂರು.1975	ಎನ್.ಅನಂತ ರಂಗಾಚಾರ್
79.	**ಸಾಹಿತ್ಯ ಮತ್ತು ಚಿತ್ರಕಲೆ** ಕನ್ನಡ ಸಾಹಿತ್ಯ ಅಕಾಡೆಮಿ, ಬೆಂಗಳೂರು.1993	ಚಂದ್ರಕಾಂತ ಕುಸನೂರ
80.	**ಸಾಹಿತ್ಯದಲ್ಲಿ ಚಿತ್ರಕಲೆ** ಸಿ.ಎಂ.ಎನ್.ಪ್ರಕಾಶನ, 33,1ನೇ ಕ್ರಾಸ್ ಸಂಪಂಗಿ, ರಾಮನಗರ, ಬೆಂಗಳೂರು, 1989	ಎನ್.ಮರಿಶಾಮಾಚಾರ
81.	**ಶ್ರೀ ಸಿದ್ದೇಶ್ವರ ಮಹಾ ಪುರಾಣ** ಮನ್ಮಹಾರಾಜ ನಿರಂಜನ ಜಗದ್ಗುರು ತೋಂಟದಾರ್ಯ ಸಂಸ್ಥಾನಮಠ ಗದಗ.1951	ವಿರಕ್ತತೋಂಟದಾರ್ಯ
82.	**ಸ್ಮೃತಿ ಪಟಲದಿಂದ -2** ರಾಜಲಕ್ಷ್ಮೀ ಪ್ರಕಾಶನ, ಬೆಂಗಳೂರು.1977	ಡಾ।ಕೆ.ಶಿವರಾಮ ಕಾರಂತ
83.	**ಸಾಹಿತ್ಯ, ಕಲೆಗಳಲ್ಲಿ ಪರಿವರ್ತನೆ ಪ್ರಗತಿ** ಸಂಯುಕ್ತವೇದಿಕೆ ಕರ್ನಾಟಕ ರಾಜ್ಯ ಅಕಾಡೆಮಿ, ಬೆಂಗಳೂರು. 1991	ಎಂ.ಎಚ್.ಕೃಷ್ಣಯ್ಯ.
84.	**ಹಸಿರು ಹೊನ್ನ** ಕಾವ್ಯಾಲಯ ಪ್ರ.ಮೈಸೂರು. 1976	ಬಿ.ಜಿ.ಎಲ್.ಸ್ವಾಮಿ
85.	**ಹಸ್ತಪ್ರತಿ ಶಾಸ್ತ್ರವಿವೇಚನೆ** ಬಿ.ಎಂ.ಶ್ರೀ ಪ್ರತಿಷ್ಠಾನ ಬೆಂಗಳೂರು.1990	ಡಾ। ನಾ.ಗೀತಾಚಾರ್ಯ
86.	**ಹಸ್ತಪ್ರತಿ ಕ್ಷೇತ್ರ ಕಾರ್ಯ** ಕನ್ನಡ ವಿಶ್ವವಿದ್ಯಾಲಯ, ಹಂಪಿ.2000	ಡಾ। ಎಫ್.ಟಿ.ಹಳ್ಳಿಕೇರಿ
87.	**ಹಸ್ತಪ್ರತಿ ವ್ಯಾಸಂಗ-2** ಕನ್ನಡ ವಿಶ್ವವಿದ್ಯಾಲಯ, ಹಂಪಿ.2002	ಡಾ। ಎಫ್.ಟಿ.ಹಳ್ಳಿಕೇರಿ, ಡಾ।ಕೆ. ರವಿಂದ್ರನಾಥ
88.	**ಹಸ್ತಪ್ರತಿ ವ್ಯಾಸಂಗ -3** ಕನ್ನಡ ವಿಶ್ವವಿದ್ಯಾಲಯ, ಹಂಪಿ.2002	ಡಾ। ವಿರೇಶ ಬಡಿಗೇರ, ಎಸ್.ಆರ್.ಚನ್ನವೀರಪ್ಪ
89.	**ಶಾಂತಿ ಪುರಾಣ** ವಿಶ್ವಕನ್ನಡ ಸಾಹಿತ್ಯ ಸಮ್ಮೇಳನ, ಬೆಂಗಳೂರು.1993	ಪೊನ್ನಕವಿ

90. ಸಾಹಿತ್ಯ, ಕಲೆಗಳಲ್ಲಿ ಪರಿವರ್ತನೆ ಪ್ರಗತಿ ಸಂಯುಕ್ತ ವೇದಿಕೆ ಕರ್ನಾಟಕ ರಾಜ್ಯ ಅಕಾಡೆಮಿ, ಬೆಂಗಳೂರು. 1991 — ಎಂ.ಎಚ್.ಕೃಷ್ಣಯ್ಯ.

91. ಶಾಂತಿ ಪುರಾಣ ವಿಶ್ವಕನ್ನಡ ಸಾಹಿತ್ಯ ಸಮ್ಮೇಳನ, ಬೆಂಗಳೂರು.1993 — ಪೊನ್ನಕವಿ

92. ಹಸ್ತಪ್ರತಿ ಶಾಸ್ತ್ರವಿವೇಚನೆ ಬಿ.ಎಂ.ಶ್ರೀ ಪ್ರತಿಷ್ಠಾನ ಬೆಂಗಳೂರು. 1990 — ಡಾ। ನಾ.ಗೀತಾಚಾರ್ಯ

93. ಹಸ್ತಪ್ರತಿ ಕ್ಷೇತ್ರ ಕಾರ್ಯ ಕನ್ನಡ ವಿಶ್ವವಿದ್ಯಾಲಯ, ಹಂಪಿ.2000 — ಡಾ। ಎಫ್.ಟಿ.ಹಳ್ಳಿಕೇರಿ

94. ಹಸ್ತಪ್ರತಿ ವ್ಯಾಸಂಗ-2 ಕನ್ನಡ ವಿಶ್ವವಿದ್ಯಾಲಯ, ಹಂಪಿ.2002 — ಡಾ। ಎಫ್.ಟಿ.ಹಳ್ಳಿಕೇರಿ, ಡಾ।ಕೆ. ರವಿಂದ್ರನಾಥ

95. ಹಸ್ತಪ್ರತಿ ವ್ಯಾಸಂಗ -3 ಕನ್ನಡ ವಿಶ್ವವಿದ್ಯಾಲಯ, ಹಂಪಿ.2002 — ಡಾ। ವಿರೇಶ ಬಡಿಗೇರ, ಎಸ್.ಆರ್.ಚನ್ನವೀರಪ್ಪ

96. ಮೈಸೂರು ರಾಜ್ಯ ಕರ್ನಾಟಕ ಸರಕಾರ ಮೈಸೂರು. 1956 — ಸಂ. ಅ.ನ.ಸುಬ್ಬರಾವ್

ಆಂಗ್ಲ ಗ್ರಂಥಗಳು

1. A Text book of aesthetics. : Yuri Borev
2. A Dictionary of Symbols : Cirlot.J.C.
3. A Kannada English Dictionary. : Rev.Ferdinand Kittel
4. A Catalogue of Painting & books of : N.R. Banerjee
5. A forgotten Empire. : Robert Sewell
6. Abhilasha, Lalitakal Academy : Sisu Shankar
7. Astrology and Religion in Indian Art. : Swami Sivapriyanand
8. A Catalogue of Painting & books of Anand & Coomarswamy : N.R. Banerjee
9. Dorland's illustrated medical dictionary : John.P.Friel (Editor)
10. Extension Urban Entomologist, College of Trophical Agriculture and Human Resources University of Hawali, at Manoa. : Julian. R. Yates
11. Fundamentals of Indian Art. : Dasgupta.S.N.

12.	Indian Miniatures.	:	Basil Gray
13.	Indian Painting	:	Sivaramamurti. C.
14.	Indian Paintings through the Ages.	:	Percy Brown
15.	Indian Sculpture and Painting.	:	Havell. E.B.
16.	Inspiration from the mountains,	:	Rangarajan. S.
17.	Introduction to Manscriptology	:	Shivaganesh Murthy. R.S.
18.	Indian Paintings through the Ages.	:	Sushella Mishra
19.	Libraries an Librarianship in Ancient and Medival India.	:	Bimal Kumar Datta
20.	Lalit Kala Academy ; Marg, Vol-V	:	Shivapriyanand
21.	Marg, Vol-V, Book-II & Book-I	:	Khandalwala
22.	Modi's Text book of Medical Jurisprudence	:	Modi. N.J.
23.	Moving Focus.	:	Subramanyam. K.G.
24.	Palmleaf Manuscripts in Oriya.	:	Bisoi.K.K.

ಅರ್ಥಕೋಶ, ವಿಶ್ವಕೋಶ, ಶಾಸನ ಸಂಪುಟಗಳು

ಜ್ಞಾನ ಗಂಗೋತ್ರಿ ಸಂಪುಟಗಳು

ಕರ್ನಾಟಕದ ಕನ್ನಡ ವಿಷಯ ವಿಶ್ವಕೋಶಗಳು

ಕನ್ನಡ ಜಾನಪದ ವಿಶ್ವಕೋಶಗಳು

ಕನ್ನಡ ನಿಘಂಟುಗಳು

ಕನ್ನಡ ಕಸ್ತೂರಿ ಕೋಶ

Dravidian Etymological Dictionary

Kittel's Kannada English Dictionary

Chamber's Encyclopaedia (New Edition, Vol. XIII)

J.C. Cirlot, a dictionary Dictionary.

Websters New 20th Centurv Dictionary.

Encyclopaedia of Religion and Ethics Vol. 2

Encyclopaedia Britanica Micropaedia, (Vol. IX)


The Standard Dictionary of folklore.

Indian Antiquary volumes, Epigraphia carnatica volums.








अर्जुन
भीम
जरासंध

